|| ಶ್ರೀಃ ಹರಿಃ ಓಂ ||

ಶ್ರೀ ಹರಿದಾಸ ಸಾಹಿತ್ಯ ಪ್ರಚಾರಮಾಲೆ



ಶ್ರೀ ಜಗನ್ನಾಥದಾಸವರ್ಯಕೃತ

# ಶ್ರೀಮದ್ಧರಿಕಥಾಮೃತಸಾರ

## ಸರ್ವವ್ಯಾಖ್ಯಾನಸಾರಸಂಗ್ರಹ

## ವಿಭೂತಿಸಂಧಿ

(ಸಂಪುಟ ೫)

ಪ್ರಕಾಶಕರು :

ಹೆಚ್. ಎಸ್. ಶ್ರೀನಿವಾಸಮೂರ್ತಿ

ನಂ. ೬೧, ೫ ನೆಯ ಅಡ್ಡರಸ್ತೆ, ನರಸಿಂಹರಾಜಾ ಕಾಲೋನಿ
ಬೆಂಗಳೂರು-೫೬೦ ೦೧೯

# ಶ್ರೀಮದ್ಧರಿಕಥಾಮೃತಸಾರ
# ಸರ್ವವ್ಯಾಖ್ಯಾನಸಾರಸಂಗ್ರಹ
# ವಿಭೂತಿಸಂಧಿ
# ಸಂಪುಟ (೫)

ಪ್ರಥಮ ಮುದ್ರಣ : ಕ್ರಿ. ಶ. ೧೯೮೮
ಪ್ರತಿಗಳ ಸಂಖ್ಯೆ : ೧೦೦೦

ಬೆಲೆ : ಹದಿನೈದು ರೂಪಾಯಿಗಳು

ಪ್ರತಿಗಳು ದೊರೆಯುವ ಸ್ಥಳ :

(೧) ಹೆಚ್. ಎಸ್. ಶ್ರೀನಿವಾಸಮೂರ್ತಿ
ನಂ. ೬೧, ೫ ನೆಯ ಅಡ್ಡರಸ್ತೆ
ನರಸಿಂಹರಾಜಾ ಕಾಲೋನಿ
ಬೆಂಗಳೂರು-೫೬೦ ೦೧೯

(೨) ವೇದಾಂತ ಬುಕ್‌ಹೌಸ್
ಉಮಾ ಚಿತ್ರಮಂದಿರದ ಬಳಿ
ಚಾಮರಾಜಪೇಟೆ
ಬೆಂಗಳೂರು-೫೬೦ ೦೧೮

ಮುದ್ರಕರು :
ಪರಿಮಳ ಎಂಟರ್‌ಪ್ರೈಸಸ್
ಲಾಲ್‌ಬಾಗ್ ಫೋರ್ಟ್ ರಸ್ತೆ
ಬೆಂಗಳೂರು-೫೬೦ ೦೦೪

# ಪ್ರಕಾಶಕರ ನುಡಿ

"ಸರ್ವವ್ಯಾಖ್ಯಾನಸಾರ ಸಂಗ್ರಹ" ವೆಂಬ ಮಾಲಿಕೆಯಲ್ಲಿ ಪ್ರಕಟವಾಗುತ್ತಿರುವ ಅಪರೋಕ್ಷೀಕೃತ ಶ್ರೀಶರಾದ ಶ್ರೀ ಜಗನ್ನಾಥದಾಸವರ್ಯರ ಅಮರಕೃತಿ ಶ್ರೀ ಮದ್ಧರಿಕಥಾಮೃತಸಾರದ ಪಂಚಮಸಂಧಿ "ವಿಭೂತಿ ಸಂಧಿ" ಯ ಪಂಚಮ ಸಂಪುಟವನ್ನು ಸನ್ಮಾನ್ಯವಾಚಕವೃಂದದವರ ಕೈಯಲ್ಲಿಡಲು ತುಂಬಾ ಸಂತೋಷದ ಸಂಗತಿ.

(೧) **ಮಂಗಳಾಚರಣ ಸಂಧಿಯನ್ನು ಪ್ರಥಮ ಸಂಪುಟ ರೂಪದಲ್ಲಿ** ದಿನಾಂಕ ೭-೪-೧೯೮೫ ರಂದು ಶ್ರೀಮನ್ಮಧ್ವಶಾಸ್ತ್ರ **ಸಂಪನ್ನರಾದ ಪೂಜ್ಯ ಶ್ರೀ ಬಾಳಗಾರು** ಶ್ರೀನಿವಾಸಾಚಾರ್ಯರು ತಮ್ಮ ಅಮೃತಹಸ್ತದಿಂದ ಬಿಡುಗಡೆಮಾಡಿದರು.

(೨) **ಕರುಣಾಸಂಧಿ :—**

ಹರಿಕಥಾವಿದ್ವಾನ್ **ಶ್ರೀ ಟಿ.ಕೆ. ವೇಣುಗೋಪಾಲದಾಸರು** ದಿನಾಂಕ ೨-೨-೧೬೮೬ ರಂದು, ಈ ದ್ವಿತೀಯ ಸಂಪುಟವನ್ನು ತಮ್ಮ ಅಮೃತಹಸ್ತದಿಂದ ಬಿಡುಗಡೆಮಾಡಿದರು.

(೩) **ವ್ಯಾಪ್ತಿಸಂಧಿ : —**

ತೃತೀಯ ಸಂಪುಟವು ದಿನಾಂಕ ೨-೧೦-೧೯೮೬ ರಂದು, ಪರಮಪೂಜ್ಯ ಶ್ರೀ ಪೇಜಾವರ ಮಠಾಧೀಶರಾದ **ಶ್ರೀ ೧೦೮ ಶ್ರೀ ಶ್ರೀ ವಿಶ್ವೇಶತೀರ್ಥ ಶ್ರೀ ಪಾದಂಗಳವರ** ಅಮೃತಹಸ್ತದಿಂದ ಬಿಡುಗಡೆಯಾಯಿತು. ಅಂದು, ಶ್ರೀಮನ್ಮಧ್ವಶಾಸ್ತ್ರ ಕೋವಿದರಾದ **ಶ್ರೀವ್ಯಾಸನಕರೆ ಪ್ರಭಂಜನಾಚಾರ್ಯ** ರು **ವಾಪ್ತಿಸಂಧಿ** ಯ ವಿಷಯವಾಗಿ ವಿದ್ವತ್ಪೂರ್ಣವಾದ ಪ್ರವಚನವನ್ನು ನಡೆಯಿಸಿದರು.

## (೪) ಭೋಜನರಸ ವಿಭಾಗಸಂಧಿ :—

ದಿನಾಂಕ ೨೪-೧-೧೬೮೮ ರಂದು, ಶ್ರೀ ಶ್ರೀ ಪಾದರಾಜ ಮಠಾಧೀಶರಾದ ಶ್ರೀ ೧೦೮ ಶ್ರೀ ಶ್ರೀ ವಿಜ್ಞಾನನಿಧಿತೀರ್ಥ ಶ್ರೀ ಪಾದಂಗಳವರು ತಮ್ಮ ಅಮೃತಹಸ್ತದಿರದ ಚತುರ್ಥ ಸಂಪುಟವನ್ನು ಬಿಡುಗಡೆಮಾಡಿದರು. ಆ ಶುಭ ಸಮಾರಂಭದಂದು, ಶ್ರೀ ವಿ. ಬಾದರಾಯಣಮೂರ್ತಿಗಳು ಸಂಧಿಗತ ಪ್ರಮೇಯ ರಹಸ್ಯಗಳನ್ನು ಹೃದಯಂಗಮವಾಗಿ ವಿವರಿಸಿದರು.

ಚತುರ್ಥ ಸಂಪುಟವು ಬಿಡುಗಡೆಯಾದ ನಂತರ ಕೇವಲ ೭ ತಿಂಗಳಿನ ಒಳಗಾಗಿ ವಿಭೂತಿ ಸಂಧಿಯು ಪಂಚಮ ಸಂಪುಟದ ರೂಪದಲ್ಲಿ ಹರಿದಾಸ ಸಾಹಿತ್ಯಾಭಿಮಾನಿಗಳ ಕರಗತವಾಗುತ್ತಿರುವುದು ಸಂತೋಷಪ್ರದ ಸಂಗತಿ. ಶ್ರೀ ಹರಿವಾಯುಗಳ ಕಾರುಣ್ಯ ವಿಶೇಷವೇ ಇದಕ್ಕೆ ಕಾರಣ.

## ಮುಂದಿನ ಸಂಪುಟ :—

ಆರನೆಯ ಸಂಪುಟವಾಗಿ "ಪಂಚಮಹಾಯಜ್ಞ ಸಂಧಿ"ಯ ಮುದ್ರಣ ಕಾರ್ಯವು ದಿನಾಂಕ ೧-೨-೧೯೮೮ ರಿಂದಲೇ ಪ್ರಾರಂಭವಾಗಿ, ಮುಕ್ತಾಯ ಘಟ್ಟದಲ್ಲಿದೆ ಎಂದು ತಿಳಿಸಲು ಹರ್ಷವಾಗಿದೆ.

## ಕೃತಜ್ಞತೆಯ ಸ್ಮರಣೆ :—

(೧) ಚತುರ್ಥಸಂಪುಟವು ಜಾಗ್ರತೆಯಾಗಿ ಪ್ರಕಟವಾಗಲು ಪರಮಪೂಜ್ಯ ಶ್ರೀ ಪೇಜಾವರ ಮಠಾಧೀಶರಾದ ಶ್ರೀ ೧೦೮ ಶ್ರೀ ಶ್ರೀ ವಿಶ್ವೇಶತೀರ್ಥ ಶ್ರೀ ಪಾದಂಗಳವರು ೧೦೦೦ ರೂಗಳ ಉದಾರ ಧನಸಹಾಯವನ್ನು ನೀಡಿ, ಪರಮಾನುಗ್ರಮಾಡಿರುತ್ತಾರೆ. ಆ ಶ್ರೀಮಚ್ಚರಣರ ಪಾದಪದ್ಮಂಗಳಲ್ಲಿ ನಮ್ಮ ಸಾಷ್ಟಾಂಗಪೂರ್ವಕ ನಮಸ್ಕಾರಗಳನ್ನು ಅರ್ಪಿಸುತ್ತೇವೆ.

(೨) ಶ್ರೀ ಪೇಜಾವರ ಮಠಾಧೀಶರು ತಾವು ಧನಸಹಾಯ ನೀಡಿದ್ದಲ್ಲದೆ, "ಕಡೂರಿನ ಶ್ರೀ ರಾಘವೇಂದ್ರ ಬೃಂದಾವನ ಟ್ರಸ್ಟ್" ಸಂಸ್ಥೆಯವ

ರಲ್ಲಿ ಒಬ್ಬರಾದ ಸನ್ಮಾನ್ಯ ಶ್ರೀ ಹೆಚ್. ಪಿ. ನಾಗರಾಜರಾಯರನ್ನು ಪರಿಚಯ ಮಾಡಿಸಿಕೊಟ್ಟು. ಅವರ ಮೂಲಕ ಆ ಟ್ರಸ್ಟಿನ ಇತರ ಸದಸ್ಯರುಗಳ ಉದಾರ ನೆರವಿನಿಂದ ೫,೫೦೦ ರೂ.ಗಳ ಧನಸಹಾಯದ ಕೊಡುಗೆಯನ್ನು ಲಭ್ಯವಾಗುವಂತೆ ಮಾಡಿ, ಪರಮೋಪಕಾರ ಮಾಡಿರುತ್ತಾರೆ. ಚತುರ್ಥ ಸಂಪುಟವನ್ನು **"ಶ್ರೀ ರಾಘವೇಂದ್ರ ಬೃಂದಾವನ ಟ್ರಸ್ಟ್– ಕಡೂರು"** ಈ ಸಂಸ್ಥೆಯ ವತಿಯಿಂದ ದತ್ತವಾದ ಧನಸಹಾಯದಿಂದ ಪ್ರಕಟಿಸಲಾಯಿತು. ಈ ಮಂಗಳ ಸನ್ನಿವೇಶದಲ್ಲಿ ಶ್ರೀ ಪಾದಂಗಳವರಿಗೂ ಮತ್ತು ಟ್ರಸ್ಟಿನ ಆಡಳಿತ ಸಮಿತಿಯ ಸಮಸ್ತ ಸದಸ್ಯರೆಲ್ಲರಿಗೂ ಮತ್ತು ಅದಕ್ಕೆ ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ನೆರವಾದ ಭಗವದ್ಭಕ್ತರೆಲ್ಲರಿಗೆಲ್ಲಾ ನಮ್ಮ ಕೃತಜ್ಞತಾ ಪೂರ್ವಕ ಪ್ರಣಾಮಗಳು.

(೩) ಈಗ ಪ್ರಕಟವಾಗಿರುವ ಪಂಚಮ ಸಂಪುಟ ಮತ್ತು ಮುಂದಿನ ೬ ನೆಯ ಸಂಪುಟ (ಪಂಚಮಹಾಯಜ್ಞ ಸಂಧಿ) ಗಳು ಈ ಅಲ್ಪಾವಧಿಯಲ್ಲಿ ಮುದ್ರಿತವಾಗಿ ಪ್ರಕಟವಾಗಲು, ೧೦೮ ರೂ.ಗಳ ಮುಂಗಡ ಹಣವನ್ನು ನೀಡಿದ ಆ ಯೋಜನೆಯಲ್ಲಿ ನೋಂದಾಯಿತರಾದ ಮಹನೀಯರೆಲ್ಲರಿಗೂ ಪ್ರಕಾಶಕರು ಚಿರಋಣಿಗಳಾಗಿದ್ದಾರೆ. ಅವರ ಸಹಾಯ ರೂಪವಾದ ಈ ಸೇವೆಯು ಅತ್ಯಂತ ಶ್ಲಾಘನೀಯ.

(೪) ನನ್ನ ವಿನಂತಿ ಪತ್ರಗಳಿಗೆ ಮನ್ನಣೆಕೊಟ್ಟು 108ರೂ ಮುಂಗಡ ಕೊಡುವ ಮಹನೀಯರ ವಿಳಾಸಗಳನ್ನು ನನಗೆ ಒದಗಿಸಿ, ತನ್ಮೂಲಕ ಅವರನ್ನು ನೋಂದಾಯಿಸಿಕೊಟ್ಟ ನನ್ನ ಆತ್ಮೀಯ ವರ್ಗಕ್ಕೆ ಸೇರಿದ ಆ ಸನ್ಮಾನ್ಯರಿಗೆಲ್ಲಾ ನಾನು ಆಭಾರಿಯಾಗಿದ್ದೇನೆ.

**ಸವಿನಯ ವಿನಂತಿ :—**

(೧) ಶ್ರೀ ಮನ್ಮಾಧ್ವ ಪೀಠಾಧಿಪತಿಗಳು ಪರಮಾನುಗ್ರಹ ಮಾಡಿ, ಜ್ಞಾನಪ್ರಚಾರ ರೂಪವಾದ ಈ ಪುಣ್ಯಕಾರ್ಯದಲ್ಲಿ ಉದಾರ ದ್ರವ್ಯಸಹಾಯ ನೀಡಿ, ಮುಂದಿನ ಸಂಪುಟಗಳನ್ನು ಬೇಗ ಬೇಗನೆ ಪ್ರಕಟವಾಗಲು, ಕೃಪೆತೋರ

ಬೇಕೆಂದು ಅವರ ಚರಣಾರವಿಂದಗಳಲ್ಲಿ ವಿನಯಪೂರ್ವಕವಾಗಿ ಪ್ರಾರ್ಥಿಸುತ್ತೇವೆ. **ಆ ಮಠದ ಹೆಸರಿನಿಂದಲೇ** ಆಯಾಯಾ ಸಂಪುಟಗಳನ್ನು ಪ್ರಕಟಿಸಲಾಗುವುದು.

(೨) ಅಂತೆಯೇ ಶ್ರೀಮನ್ಮಾಧ್ವ ಸಂಘಗಳೂ, ಶ್ರೀ ರಾಘವೇಂದ್ರ ಸ್ವಾಮಿಗಳ ಮಠ ಮುಂತಾದ ಧಾರ್ಮಿಕ ಸಂಘ ಸಂಸ್ಥೆಗಳು ಮುಂದೆ ಬಂದು ಉದಾರ ನೆರವನ್ನು ನೀಡಬೇಕೆಂದು ಕೋರಲಾಗಿದೆ. ಆಗ ಆಯಾಯಾ ಸಂಘ ಸಂಸ್ಥೆಗಳ ಹೆಸರಿನಿಂದಲೇ ಸಂಪುಟಗಳನ್ನು ಪ್ರಕಟಿಸಲಾಗುವುದು.

(೩) ೧೦೮ ರೂ. ಅಥವಾ ಅದಕ್ಕಿಂತ ಹೆಚ್ಚಾದ ಮುಂಗಡ ಹಣವನ್ನು ಕೊಡುವ ಮಹನೀಯರನ್ನು ನೋಂದಾಯಿಸಿಕೊಟ್ಟು, ತನ್ಮೂಲಕ ಒದಗಬಹುದಾದ ಧನಸಂಗ್ರಹದಿಂದ ಮುಂದಿನ ಸಂಪುಟಗಳಿಗೆ ಬೇಕಾಗುವಷ್ಟು ಮುದ್ರಣ ಕಾಗದವನ್ನು ಕೊಳ್ಳಲು ಸಹಕಾರಿಯಾಗುವುದಲ್ಲದೆ, ಮುಂದಿನ ಸಂಪುಟಗಳನ್ನು ಬೇರೆ ಬೇರೆ ಮುದ್ರಣಾಲಯಗಳಿಗೆ ಕೊಟ್ಟು, ಶೀಘ್ರಾವಧಿಯಲ್ಲಿ ಪ್ರಕಟಿಸಲು ಅನುಕೂಲವಾಗುವುದು. ಈ ಅತ್ಯುತ್ತಮ ಯೋಜನೆಯಲ್ಲಿ ಸಕಲ ಹರಿದಾಸ ಸಾಹಿತ್ಯಾಭಿಮಾನಿಗಳು, ತತ್ರಾಪಿ ಶ್ರೀ ಮದ್ಧರಿಕಥಾಮೃತ ಸಾರ ಗ್ರಂಥದ ಅಧ್ಯಯನದಲ್ಲಿ ಆಸಕ್ತಿಯುಳ್ಳ ಸಕಲ ಮಹನೀಯರು ತಮ್ಮ ಹೆಸರುಗಳನ್ನು ನೋಂದಾಯಿಸಿಕೊಂಡು, ಈ ಪುಣ್ಯಕಾರ್ಯದಲ್ಲಿ ನೆರವಾಗಬೇಕೆಂದು ಸವಿನಯ ಪ್ರಾರ್ಥನೆ. ಅವರು ಈ ಪ್ರಕಟಣಾ ಕಾರ್ಯದ ವಿವರಗಳನ್ನು ತಮ್ಮ ಪರಿಚಯಸ್ಥರೆಲ್ಲರಿಗೂ ತಿಳಿಸಿ, ಅವರ ವಿಳಾಸಗಳನ್ನು ಪ್ರಕಾಶಕರಿಗೆ ಪತ್ರದ್ವಾರಾ ತಿಳಿಸಬೇಕೆಂದು ಕೋರಲಾಗಿದೆ. ಆಗ ಅವರಿಗೆಲ್ಲಾ ಪ್ರತ್ಯೇಕವಾಗಿ "ವಿನಂತಿಪತ್ರ" ಗಳನ್ನು ಕಳುಹಿಸಲಾಗುವುದು.

ಈ ವರ್ಷದ ಸಾಲಿನಲ್ಲಿ ಈ ಯೋಜನೆಗೆ ಒಪ್ಪಿ ನೋಂದಾಯಿತರಾಗುವ ಮಹನೀಯರಿಗೆ ಮೊದಲಿನಿಂದ ೭ ಸಂಪುಟಗಳನ್ನು ಒದಗಿಸಲಾಗುವುದು. (ಅಂಚೆ ವೆಚ್ಚವನ್ನು ಪ್ರಕಾಶನವೇ ವಹಿಸಿಕೊಳ್ಳುವುದು.) ಆದರೆ ಈಗಾಗಲೇ ಮೊದಲಿನ ನಾಲ್ಕು ಸಂಪುಟಗಳನ್ನು ಕೊಂಡು, ಪಡೆದಿರುವವರಿಗೆ ೫ ನೆಯ ಸಂಪುಟದಿಂದ ೧೧ ನೆಯ ಸಂಪುಟದವರೆಗೆ, ಅವು ಬಿಡುಗಡೆಯಾದಂತೆಲ್ಲಾ

ರೆಕಾರ್ಡೆಡ್ ಡೆಲಿವರಿ ಮೂಲಕ ರವಾನಿಸಲಾಗುವುದು. ಆಯಾಯಾ ಸಂಪುಟ ಗಳ ಬಿಡುಗಡೆಯ ಸಮಾರಂಭದ ಆಮಂತ್ರಣ ಪತ್ರಿಕೆಗಳನ್ನು ಸಕಾಲದಲ್ಲಿ ಕಳು ಹಿಸಲಾಗುವುದು.

**ಕೃತಜ್ಞತೆಯ ವಂದನೆಗಳು :—**

"ಸರ್ವವ್ಯಾಖ್ಯಾನಸಾರ ಸಂಗ್ರಹ" ವೆಂಬ ಮಾಲಿಕೆಯಲ್ಲಿ ಇದುವರೆಗೆ ಪ್ರಕಟವಾಗಿರುವ ನಾಲ್ಕು ಸಂಪುಟಗಳ ಪ್ರಕಟಣಾ ಕಾರ್ಯಕ್ಕೆ ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಅನೇಕ ಮಹನೀಯರು ನಾನಾ ರೀತಿಗಳಲ್ಲಿ ನೆರವು ನೀಡಿ ಸಹಕರಿಸಿರುತ್ತಾರೆ. ಅವರಿಗೆಲ್ಲಾ ನಮ್ಮ ಕೃತಜ್ಞತೆಯ ವಂದನೆಗಳು.

ಶ್ರೀ ಜಗನ್ನಾಥದಾಸವರ್ಯರ ಸಾಕ್ಷಾತ್ ಶಿಷ್ಯರಾಗಿದ್ದ ಶ್ರೀಕಮಲಾ ಪತಿ ದಾಸರಿಂದ ವಿರಚಿತ **"ಭಾವದರ್ಪಣ ಟೀಕಾ"**-ಎಂಬ ವ್ಯಾಖ್ಯಾನ ಗ್ರಂಥವನ್ನು ನಮಗೆ ಒದಗಿಸಿ, ಆ ವ್ಯಾಖ್ಯಾನವನ್ನು ಈ ಮಾಲೆಯಲ್ಲಿ ಸೇರಿಸು ವುದರಲ್ಲಿ ಸಹಕಾರ ನೀಡಿರುವ ಶ್ರೀ ಸೀತಾರಾಮವಿಠ್ಠಲಾಂಕಿತ ಶ್ರೀ ವಿ. ಶ್ರೀನಿ ವಾಸಮೂರ್ತಿಗಳವರಿಗೆ ನಮ್ಮ ಪ್ರಣಾಮಗಳು.

ಈ ಪ್ರಕಟಣಾ ಕಾರ್ಯದಲ್ಲಿ ನಾನಾ ರೀತಿಗಳಲ್ಲಿ ಸಹಕರಿಸುತ್ತಾ, ಆಗಾಗ್ಗೆ ಅಮೂಲ್ಯ ಸಲಹೆಗಳನ್ನು ನೀಡುತ್ತಿರುವ ನನ್ನ ಸಹಧರ್ಮಿಣಿ ಶ್ರೀಮತಿ ಹೆಚ್. ಎಸ್. ಪದ್ಮಾಮೂರ್ತಿಯವರ ಸಹಕಾರ ಚಿರಸ್ಮರಣೀಯ.

ಹಿಂದೆ ಪ್ರಕಟವಾಗಿರುವ ನಾಲ್ಕು ಸಂಪುಟಗಳ ಬಿಡುಗಡೆಯ ಸಮಾರಂಭ ಗಳಲ್ಲಿ ಸಭಾಂಗಣವನ್ನು ಸಜ್ಜುಗೊಳಿಸುವುದು, ಸಮಾರಂಭದ ಪೂರ್ವಸಿದ್ಧತೆ, ರಸೀದಿಗಳನ್ನು ಬರೆಯುವುದು, ಮಾರಾಟವಾದ ಪ್ರತಿಗಳ ಮೌಲ್ಯದ ಸಂಗ್ರ ಹಣೆ, ಇತ್ಯಾದಿ ಹಲವಾರು ಕಾರ್ಯ ನಿರ್ವಹಣೆಯಲ್ಲಿ ಸಹಕಾರ ನೀಡಿರುವ ಶ್ರೀಯುತ ಹೆಚ್. ಜಿ. ರಾಘವೇಂದ್ರಮೂರ್ತಿಗಳು, ಹೆಚ್. ಆರ್. ರಾಮ ಪ್ರಸಾದ್, ಹೆಚ್. ಎಸ್. ರಘುನಾಥ್, ಹೆಚ್. ಎಸ್. ಮೋಹನ್, ಕುಮಾರಿ ಹೆಚ್. ಎಸ್. ಛಾಯಾ, ಶ್ರೀ ಹೆಚ್. ಹನುಮಂತರಾಯರು ಮತ್ತು ಇವರಿ

ಗೆಲ್ಲಾ ಸಹಾಯ ನೀಡಿದ ಇತರರು ಇವರಿಗೆಲ್ಲಾ ಪ್ರಕಾಶನದ ಪರವಾಗಿ ಹೃತ್ಪೂರ್ವಕ ವಂದನೆಗಳು.

ಬಿಡುಗಡೆಯ ಸಮಾರಂಭಕ್ಕೆ ಸ್ಥಳಾವಕಾಶವನ್ನು ಒದಗಿಸಿಕೊಟ್ಟ, ಹಲವಾರು ಸಂಘ ಸಂಸ್ಥೆಗಳ ಕಾರ್ಯಕರ್ತರು, ಧ್ವನಿವರ್ಧಕ ವ್ಯವಸ್ಥಾಪಕರು, ಪಂಡಿತ ಶ್ರೇಷ್ಠರಾದ ಪ್ರವಚನಕಾರರು, ದೇವತಾ ಪ್ರಾರ್ಥನೆ ಸಲ್ಲಿಸಿದವರು ಮತ್ತು ಆಯಾಯಾ ಸಂಧಿಗತ ಪದ್ಯವಾಚನಗಳನ್ನು ಸುಶ್ರಾವ್ಯವಾಗಿ ಹಾಡಿದ ಗಮಕ ಕಲಾವಿದರು ಇತ್ಯಾದಿ ಸಮಸ್ತರಿಗೂ ಪ್ರಕಾಶನವು ಅಭಾರಿಯಾಗಿದೆ.

**ಮುಂದಿನ ಪ್ರಕಟಣೆ :—**

"ಸರ್ವವ್ಯಾಖ್ಯಾನಸಾರ ಸಂಗ್ರಹ" ಮಾಲಿಕೆಯಲ್ಲಿ ಮುಂದಿನ ಆರನೆಯ ಸಂಪುಟದ (**ಪಂಚಮಹಾಯಜ್ಞ ಸಂಧಿ**) ಮುದ್ರಣಾಕಾರ್ಯವು ದಿನಾಂಕ ೧-೨-೧೯೮೮ ರಿಂದ ಪ್ರಾರಂಭವಾಗಿ, ಕೆಲಸವು ಅತ್ಯಂತ ತ್ವರಿತಗತಿಯಲ್ಲಿ ಸಾಗುತ್ತಿದೆ. ಅತಿ ಶೀಘ್ರದಲ್ಲಿಯೇ ಆ ಸಂಪುಟವನ್ನು ಸನ್ಮಾನ್ಯ ವಾಚಕರ ಕೈಯಲ್ಲಿಡಲು ಅತ್ಯಾಸಕ್ತಿಯುಳ್ಳವರಾಗಿದ್ದೇವೆ. ಶ್ರೀಹರಿವಾಯುಗಳು ನೆರವೇರಿಸಲಿ-ಎಂದು ಭಕ್ತಿಪೂರ್ವಕ ಪ್ರಾರ್ಥನೆ.

ಈ ಸಂಪುಟವು ೩೫ ಪದ್ಯಗಳಿಂದ ಕೂಡಿದ್ದು ಪ್ರತಿ ಪದ್ಯಕ್ಕೂ ವ್ಯಾಖ್ಯಾನಗಳು ವಿಸ್ತಾರವಾಗಿರುವುದರಿಂದಲೂ, ಮುಖ್ಯ ತತ್ತ್ವವಿಷಯಗಳಿಗೆ ಸಂಬಂಧಿಸಿದಂತೆ ವಾಚಕರಿಗೆ ಸುಲಭವಾಗಿ ಅರ್ಥವಾಗುವ ರೀತಿಯಲ್ಲಿ ಶೀಘ್ರ ಅವಗಾಹನೆಗೆ ಅನುಕೂಲವಾಗುವಂತೆ **ಪಟ್ಟಿಯ ರೂಪದಲ್ಲಿ** ಕೊಟ್ಟಿರುವುದರಿಂದಲೂ, ಪುಟಗಳ ವ್ಯಾಪ್ತಿ ಹಿಂದಿನ ಸಂಪುಟಗಳಿಗಿಂತಲೂ ಮೀರಿದೆ. ಈ ಸಂಪುಟಕ್ಕೆ **೧೫ ರೂ. ಮುಂಗಡ ಹಣವನ್ನು** ಪಾವತಿ ಮಾಡುವವರಿಗೆ **೫ ರೂ. ಉಳಿತಾಯವಾಗುವುದು.** ಈ ಸೌಲಭ್ಯವು ಕೇವಲ ೨೫೦ ಮಂದಿಗೆ ಮಾತ್ರ ಸೀಮಿತವಾಗಿರುವುದರಿಂದ, (ಮುದ್ರಿಸುವ ಪ್ರತಿಗಳ ಸಂಖ್ಯೆಯ ಕಾಲು ಭಾಗದಷ್ಟು), ಹರಿದಾಸ ಸಾಹಿತ್ಯಾಭಿಮಾನಿಗಳು ಈ ರಿಯಾಯಿತಿಯ ಸೌಲಭ್ಯವನ್ನು ಆದಷ್ಟು ಜಾಗ್ರತೆಯಾಗಿ ಪಡೆಯಬೇಕೆಂದು ವಿನಂತಿ. ಹೊರಗಿನವರು

ಈ ಮುಂಗಡ ಹಣವನ್ನು ಪ್ರಕಾಶಕರ ವಿಳಾಸಕ್ಕೆ ಎಂ. ಓ. ಮೂಲಕ ಕಳುಹಿಸಬಹುದು. ೧೫ ರೂ.ಗಳ ಜೊತೆಗೆ ೬ ರೂ. (ಅಂಚೆವೆಚ್ಚ). ಅಂದರೆ, ೨೧ ರೂ. ಕಳುಹಿಸಬೇಕಾಗಿ ವಿನಂತಿ.

**ವಿಶೇಷ ವಿನಂತಿ :–**

ಈ ಸಂಧಿಗೆ ಸಂಬಂಧಿಸಿದಂತೆ **ಶ್ರೀ ತಾರ್ಪಪರ್ಣೀ ಆಚಾರ್ಯರ ಸಂಸ್ಕೃತ ವ್ಯಾಖ್ಯಾನ** ನಮಗೆ ದೊರೆಯಲಿಲ್ಲ. ಹಿಂದಿನ ಸಂಪುಟಗಳು ಪ್ರಕಟವಾದಾಗ ಸಕಲ ಹರಿದಾಸ ಸಾಹಿತ್ಯಾಭಿಮಾನಿಗಳಲ್ಲಿಯೂ, ಪಂಡಿತ ವೃಂದದವರಿಗೂ, "ಅವರಲ್ಲಿ ಮೇಲ್ಕಂಡ ತಾಮ್ರಪರ್ಣೀ ವ್ಯಾಖ್ಯಾನವು ಇದ್ದರೆ, ಅದರ ವಹಿಗಳನ್ನು ನಮಗೆ ಕಳುಹಿಸಿಕೊಡಬೇಕೆಂದೂ, ಅವುಗಳ ನಕಲುಗಳನ್ನು ತಯಾರಿಸಿಕೊಂಡ ನಂತರ; ಆ ವಹಿಗಳನ್ನು ಅತಿ ಜೋಪಾನವಾಗಿ ರಿಜಿಸ್ಟರ್ಡ್ ಪೋಸ್ಟ್ ದ್ವಾರಾ, ಅವರ ವಿಳಾಸಕ್ಕೆ ಕಳುಹಿಸಲಾಗುವುದೆಂತಲೂ", ವಿನಯ ಪೂರ್ವಕವಾದ ಬಿನ್ನಹವನ್ನು ಮಾಡಿಕೊಳ್ಳಲಾಗಿತ್ತು. ಆದರೆ ಯಾರಿಂದಲೂ ನಮಗೆ ಉಪಲಬ್ಧವಾಗಲಿಲ್ಲ. ಈಗಲೂ ಸಹ ಆ ವಹಿಗಳನ್ನು ಕಳುಹಿಸಿದರೆ, ಸಂಪುಟ (೨) ರಿಂದ ಸಂಪುಟ (೫) ರವರೆಗೆ ಆ ವ್ಯಾಖ್ಯಾನವನ್ನೇ ಪ್ರತ್ಯೇಕ ಹೊತ್ತಿಗೆಯ ರೂಪದಲ್ಲಿ ಪ್ರಕಟಿಸಲಾಗುವುದು. ಜ್ಞಾನಪ್ರಚಾರ ರೂಪವಾದ ಈ ಪುಣ್ಯಕಾರ್ಯದಲ್ಲಿ ಭಾಗಿಗಳಾಗಬೇಕೆಂದು ಸವಿನಯ ಪ್ರಾರ್ಥನೆ.

ಈ ಪಂಚಮ ಸಂಪುಟದ ಪ್ರಕಟಣೆಗೆ ೧೦೮ ರೂ. ಮತ್ತು ಅದಕ್ಕಿಂತ ಹೆಚ್ಚಾದ ಮೊಬಲಗನ್ನು ಉದಾರವಾಗಿ ಕೊಟ್ಟು, "**೧೦೮ ರೂ. ಮುಂಗಡ ಯೋಜನೆಗೆ**" ನೋಂದಾಯಿತರಾಗಿರುವ ಮಹನೀಯರ ಹೆಸರುಗಳನ್ನು ಈ ಕೆಳಗಿನ ಪಟ್ಟಿಯಲ್ಲಿ ಕೊಟ್ಟಿದೆ. ಈ ಸಂಖ್ಯೆಯು ಹಿಂದಿನ ಸಂಪುಟದಿಂದ ಮುಂದುವರಿದಿದೆ. ಆ ಮಹನೀಯರಿಗೆಲ್ಲಾ ಪ್ರಕಾಶಕರ ಹೃತ್ಪೂರ್ವಕ ವಂದನೆಗಳು. ಇದೇ ರೀತಿಯಲ್ಲಿ ಮಹನೀಯರ ಮೇಲ್ಪಂಕ್ತಿಯನ್ನನುಸರಿಸಿ ಹರಿದಾಸಸಾಹಿತ್ಯಾಭಿಮಾನಿಗಳು ಅಧಿಕ ಸಂಖ್ಯೆಯಲ್ಲಿ ಮುಂದೆ ಬಂದು, ಈ ಯೋಜನೆಯಲ್ಲಿ ತೊಡಗಿ, ಸಹಕಾರ ನೀಡಬೇಕೆಂದು ಸವಿನಯ ಕೋರಿಕೆ.

ಆಗ ಮುಂದಿನ ಸಂಪುಟಗಳು ಬೇಗಬೇಗನೆ ಪ್ರಕಟವಾಗಲು ಸಹಾಯಕವಾಗುವುದು.

## ಹಿಂದಿನ ಸಂಪುಟದಿಂದ ಮುಂದುವರಿದಿದೆ.

| | | | |
|---|---|---|---|
| 96 | ಜಿ. ವೆಂಕಟೇಶ್ | ನಾವಲ್ಟಿ ಪ್ರೆಸಸ್, ಬೆಂಗಳೂರು | 1000ರೂ. |
| 97 | ಎಂ. ಎಸ್. ರಂಗನಾಥ್, ಶಿವಮೊಗ್ಗ | ಬೆಂಗಳೂರು | 108ರೂ. |
| 98 | ಬಿ. ಎಸ್. ಗುರುರಾಜರಾವ್ | ಬೆಂಗಳೂರು | ” |
| 99 | ಹೆಚ್. ನಾರಾಯಣರಾವ್ | ಹೈದರಾಬಾದ್ | ” |
| 100 | ಎಂ. ಹೆಚ್. ನಾಮಾವಳಿ | ಧಾರವಾಡ | ” |
| 101 | ಅಡವೀರಾವ್ ಕುಲಕರ್ಣಿ | ಚಿಕ್ಕಜಂತಕಲ್ಲು | 100ರೂ. |
| 102 | ಶ್ರೀಮತಿ ಸಿ. ಡಿ. ವಸಂತ | ಹೈದರಾಬಾದ್ | 108ರೂ. |
| 103 | ಎಮ್.ವಿ. ವಾಸುದೇವಮೂರ್ತಿ | ಹೈದರಾಬಾದ್ | ” |
| 104 | ಎಸ್. ಟಿ. ಕೇಸನೂರು | ದಾವಣಗೆರೆ | ” |
| 105 | ಡಾ.ವೆಂಕಟೇಶ್ ನಾರಾಯಣರಾವ್ | ಬಿಜಾಪುರ | 100ರೂ. |
| 106 | ಡಾ. ಹೆಚ್. ಎಸ್. ಕುಲಕರ್ಣಿ | ಬಿಜಾಪುರ | 100ರೂ. |
| 107 | ಡಾ. ಆರ್. ಬಿ. ಹರಪನಹಳ್ಳಿ | ಆಗಡಿ ಪೋಸ್ಟ್ | 108ರೂ. |
| 108 | ಎಮ್. ಮುರಳಿ | ಬೆಂಗಳೂರು | ” |
| 109 | ಎಮ್. ವಿಜಯಸಿಂಹ | ಬೆಂಗಳೂರು | ” |
| 110 | ಹೆಚ್. ಎನ್. ಭಾಸ್ಕರ್ | ಬೆಂಗಳೂರು | ” |
| 111 | ಎಸ್. ಕೆ. ಜಕಾತಿ | ಬಿಜಾಪುರ | ” |
| 112 | ಜಿ. ಎಸ್. ಕಟಗೇರಿ | ಹೈದರಾಬಾದ್ | ” |
| 113 | ಎಸ್. ಬಿ. ರಾಜಾರಾವ್ | ” | ” |

| | | | |
|---|---|---|---|
| 14 | ಜಯಪ್ರಕಾಶ್ ಜಿ. ರಾವ್ | ” | ” |
| 15 | ಟಿ. ಎಸ್. ನರಸಿಂಹರಾವ್ | ” | 100 ರೂ. |
| 16 | ಎಸ್. ಗೋಪಾಲರಾವ್ | ” | 110 ರೂ. |
| 17 | ಟಿ. ಆರ್. ಪಿ. ರಾವ್ | ಬೆಂಗಳೂರು | 108 ರೂ. |
| 18 | ಡಾ. ಆರ್. ಆರ್. ಕಟ್ಟಿ | ಬೆಂಗಳೂರು | 108 ರೂ. |
| 19 | ಶ್ರೀಮತಿ ರುಕ್ಮಿಣಿಬಾಯಿ | ” | ” |
| 20 | ರಾಘವೇಂದ್ರರಾವ್ | ಭದ್ರಾವತಿ | ” |
| 21 | ಬಿ. ಶ್ರೀನಿವಾಸರಾವ್ | ಬೆಂಗಳೂರು | ” |
| 22 | ಹೆಚ್. ಕೆ. ರಮೇಶ್ | ಬೆಂಗಳೂರು | ” |
| 23 | ಬಿ.ಎಸ್. ಮುರಳಿ | ಚನ್ನರಾಯಪಟ್ಟಣ | ” |
| 24 | ಎಂ.ಎಸ್.ಶಂಕರನಾರಾಯಣ ಗೌಡ | ಬೆಂಗಳೂರು | 150 ರೂ. |
| 25 | ಎಸ್.ಆರ್. ನಾರಾಯಣಮೂರ್ತಿ | ಬೆಂಗಳೂರು | 108 ರೂ. |
| 26 | ಎಸ್. ಶ್ರೀನಿವಾಸರಾವ್ | ಹೊಸಕೋಟೆ | ” |
| 27 | ಬಿ. ಎಸ್. ದಯಾನಂದ | ಬೆಂಗಳೂರು | ” |
| 28 | ಕೆ. ನಾಗರಾಜರಾವ್ | ಹೈದರಾಬಾದ್ | ” |
| 29 | ಟಿ. ಜಿ. ಪಡಕಿ | ಬೆಂಗಳೂರು | 110 ರೂ. |
| 30 | ಪ್ರಭಂಜನ ಕುಲಕರ್ಣಿ | ಥಾಣ(ಮುಂಬಯಿ) | 108ರೂ, |
| 31 | ಡಿ. ವಿ. ಕೃಷ್ಣಮೂರ್ತಿ | ಬೆಂಗಳೂರು | ” |
| 32 | ಶ್ರೀಮತಿ ಪ್ರಮೀಳಾ ವೆಂಕೋಬರಾವ್ | ” | ” |
| 33 | ಶ್ರೀನಿವಾಸ ಎಸ್. ಮಥಡ್ | ತೆಕ್ಕಲಕೋಟೆ | ” |
| 34 | ಶ್ರೀಮತಿ ಪದ್ಮಜಾ | ಹೈದರಾಬಾದ್ | ” |
| 35 | ಟಿ. ಎಸ್. ರಾಘವೇಂದ್ರರಾವ್ | ಹೈದರಾಬಾದ್ | ” |

| | | | |
|---|---|---|---|
| 136 | ಎ. ವೆಂಕಣ್ಣ | ಬೆಂಗಳೂರು | 108 ರೂ. |
| 137 | ಟಿ. ವಿಷ್ಣುಮೂರ್ತಿ | ಬೆಂಗಳೂರು | ” |
| 138 | ಪಿ. ಗೋವಿಂದರಾವ್ | ರಾಯಚೂರು | ” |
| 139 | ಪಂಡಿತ ಶ್ರೀ ಹೆಚ್. ಕೆ. ರಂಗನಾಥಾಚಾರ್ಯ | ಬೆಂಗಳೂರು | ” |
| 140 | ಕೆ. ವಿ. ಸುಧೀಂದ್ರ | ಕಡೂರು | ” |
| 141 | ಕೆ. ರಾಘವೇಂದ್ರರಾವ್ | ಕಲ್ಕತ್ತ | ” |
| 142 | ಎನ್. ವಿಠ್ಠಲರಾವ್ | ಕಡೂರು | ” |
| 143 | ಹೆಚ್. ವಿ. ಅನಂತಯ್ಯ | ಸೂರತ್‌ಕಲ್ | ” |
| 144 | ಎನ್. ವೆಂಕಟರಾವ್ | ಬೊಂಬಾಯಿ | ” |
| 145 | ವೇದವ್ಯಾಸಾಚಾರ್ಯ | ಬೆಂಗಳೂರು | ” |
| 146 | ಡಿ. ಎ. ಜಾವಳಿ | ಬೆಂಗಳೂರು | ” |
| 147 | ಗೋಪಾಲಕೃಷ್ಣ ಗಾರ್ಗೇಶ್ | ಬೆಂಗಳೂರು | ” |

ಮೇಲಿನ ಪಟ್ಟಿಯಲ್ಲಿರುವ ಮಹನೀಯರೆಲ್ಲರ ನೆರವು, ಅಭಿಮಾನ, ಸಹಕಾರಗಳಿಂದಾಗಲೇ ಈಗ ಪ್ರಕಟವಾಗಿರುವ ಪಂಚಮ ಸಂಪುಟದ ಮುದ್ರಣ ಕಾರ್ಯದ ವೆಚ್ಚದ ಬಹುಭಾಗವನ್ನು ಭರಿಸಲು ಸಾಧ್ಯವಾಯಿತು. ಆ ಮಹನೀಯರೆಲ್ಲರಿಗೂ ನಮ್ಮ ಹೃತ್ಪೂರ್ವಕ ಪ್ರಣಾಮಗಳು.

ಇಂತೆಯೇ ಕನಿಷ್ಠಪಕ್ಷ ೫೦ ಮಂದಿಯಾದರೂ ಮುಂದೆ ಬಂದು, ಸ್ವಯಂ ಪ್ರೇರಿತರಾಗಿ “108 ರೂ. ಯೋಜನೆಗೆ” ನೋಂದಾಯಿತರಾಗಿ. ಈಗ ಮುದ್ರಣದಲ್ಲಿರುವ ಆರನೆಯ ಸಂಪುಟವು (ಪಂಚಮಹಾಯಜ್ಞ ಸಂಧಿ) ಆದಷ್ಟು ಜಾಗ್ರತೆಯಾಗಿ ಪ್ರಕಟವಾಗಲು ನೆರವು ನೀಡಬೇಕಾಗಿ ಸವಿನಯ ಪ್ರಾರ್ಥನೆ.

ಮೇಲಿನ ಪಟ್ಟಿಯಲ್ಲಿ ಯಾರ ಹೆಸರಾಗಲೀ ಬಿಟ್ಟು ಹೋಗಿದ್ದರೆ,

ಅಥವಾ ಹೆಸರು ವ್ಯತ್ಯಾಸವಾಗಿದ್ದರೆ. ಅಥವಾ ಸಂದಾಯವಾಗಿರುವ ಮೊಬಲಗಿನಲ್ಲಿ ಬದಲಾವಣೆ ಇದ್ದರೆ, ಅಂತಹ ಮಹನೀಯರು ಪ್ರಕಾಶಕರಿಗೆ ಪತ್ರ ಮುಖೇನ ತಿಳಿಸಬೇಕಾಗಿ ವಿನಂತಿ. ಆಗ ಮುಂದಿನ ಸಂಪುಟದಲ್ಲಿ ಕೊಡುವ ಪಟ್ಟಿಯಲ್ಲಿ ಅವರ ಹೆಸರುಗಳನ್ನು ಸೇರಿಸಲಾಗುವುದು.

**ವಿನಂತಿ :–**

**108 ರೂ. ಮುಂಗಡ ಯೋಜನೆ** ಯಲ್ಲಿ ನೋಂದಾಯಿತರಾಗಿ, ಭಾಗಶಃ ಮೊಬಲಗನ್ನು ಕೊಟ್ಟಿರುವ ಮಹನೀಯರು ಆದಷ್ಟು ಬೇಗನೆ ಉಳಿದ ಮೊಬಲಗನ್ನು ಪಾವತಿಮಾಡಿ, ಸಹಕರಿಸಬೇಕೆಂದು ವಿನಂತಿ.

ಈ ಯೋಜನೆ ಹಾಗೂ ಪ್ರಕಟಣಾಕಾರ್ಯಾದಿ ಸಮಗ್ರ ವಿವರಗಳನ್ನು ಒಳಗೊಂಡ ಕರಪತ್ರಗಳು ನಮ್ಮಲ್ಲಿವೆ. ಯಾರಿಗಾದರೂ ಬೇಕಾಗಿದ್ದರೆ, ತಿಳಿಸಿದಲ್ಲಿ, ಅವರ ವಿಳಾಸಕ್ಕೆ ಕಳುಹಿಸಲಾಗುವುದು. ಇದರಿಂದ ಕಾರ್ಯಕ್ಕೆ ತುಂಬಾ ಸಹಾಯಕವಾಗುವುದು.

**ರಿಯಾಯಿತಿ ಸೌಲಭ್ಯ :–**

ಈಗ ಪ್ರಕಟವಾಗಿರುವ ಐದು ಸಂಪುಟಗಳ ಒಟ್ಟು ಬೆಲೆ ೬೭ ರೂ. ಗಳು. ಆದರೆ ಆ ಐದು ಸಂಪುಟಗಳನ್ನು ಒಟ್ಟಿಗೆ ಕೊಳ್ಳುವವರಿಗೆ ೫೫ ರೂ. ಗಳಿಗೆ ದೊರೆಯುವುದು. ಇದರಿಂದ ಅವರಿಗೆ ೧೨ ರೂ. ಉಳಿತಾಯವಾಗುವುದು. ದ್ವಿತೀಯ ಸಂಪುಟದ (ಕರುಣಾ ಸಂಧಿ) ಪ್ರತಿಗಳು ನಮ್ಮಲ್ಲಿ ಕೆಲವು ಪ್ರತಿಗಳು ಮಾತ್ರ ಉಳಿದಿವೆ. ಅವು ವಿತರಣೆಯಾಗುವವರೆಗೂ ಈ ಮೇಲಿನ ರಿಯಾಯಿತಿಯ ಸೌಲಭ್ಯವು ಚಾಲ್ತಿಯಲ್ಲಿರುವುದು. ಈ ಸೌಲಭ್ಯವನ್ನು ಹರಿದಾಸ ಸಾಹಿತ್ಯಾಭಿಮಾನಿಗಳು ಉಪಯೋಗಿಸಿಕೊಳ್ಳಬೇಕೆಂದು ವಿನಂತಿ. ಅಭಿಮಾನವಿರಲಿ.

॥ ಶ್ರೀ ಮಧ್ವೇಶಾರ್ಪಣಮಸ್ತು ॥

॥ ಶ್ರೀ ಹರಿಃ ಓಂ ॥

॥ ಶ್ರೀ ಮೂಲಗೋಪಾಲಕೃಷ್ಣೋ ವಿಜಯತೇ ॥

॥ ಶ್ರೀ ವ್ಯಾಸರಾಜೋ ವಿಜಯತೇ ॥

## ಶ್ರೀ ವ್ಯಾಸರಾಜ ಮಹಾ ಸಂಸ್ಥಾನಾಧೀಶರಾದ ಶ್ರೀ ೧೦೮ ಶ್ರೀ ಶ್ರೀ ವಿದ್ಯಾಪಯೋನಿಧಿತೀರ್ಥ ಶ್ರೀಪಾದಂಗಳವರಿಂದ ಸಂದೇಶಪೂರ್ವಕ ಶ್ರೀಮುಖ.

ಶ್ರೀ ಹೆಚ್. ಎಸ್. ಶ್ರೀನಿವಾಸಮೂರ್ತಿಯವರಿಗೆ,

ನೀವು **"ಸರ್ವವ್ಯಾಖ್ಯಾನಸಾರಸಂಗ್ರಹ"** ಎಂಬ ಮಾಲಿಕೆಯಲ್ಲಿ ಅಪರೋಕ್ಷಜ್ಞಾನಿಗಳಾದ ಶ್ರೀ ಜಗನ್ನಾಥದಾಸವರೇಣ್ಯರ **ಶ್ರೀ ಮದ್ಧರಿಕಥಾಮೃತಸಾರದ** ಅನುವಾದವನ್ನು ಒಂದೊಂದು ಸಂಧಿಗೆ ಒಂದು ಸಂಪುಟದಂತೆ ಪುಸ್ತಕರೂಪದಲ್ಲಿ ಹೊರತರುತ್ತಿರುವುದು ಬಹಳ ಶ್ಲಾಘನೀಯವಾದ ಪ್ರಯತ್ನ. ಈಗಾಗಲೇ ನಾಲ್ಕು ಸಂಪುಟಗಳು ನಮ್ಮ ಆತ್ಮೀಯರುಗಳಾದ ಶ್ರೀ ಪೇಜಾವರ ಸಂಸ್ಥಾನದ ಅಧಿಪತಿಗಳಾದ ಶ್ರೀ ವಿಶ್ವೇಶತೀರ್ಥಶ್ರೀಪಾದಂಗಳವರು. ಶ್ರೀ ಪಾದರಾಜ ಸಂಸ್ಥಾನಾಧೀಶರಾದ ಶ್ರೀವಿಜ್ಞಾನನಿಧಿತೀರ್ಥ ಶ್ರೀ ಪಾದಂಗಳವರು, ಇತ್ಯಾದಿ ಪ್ರಮುಖರಿಂದ ಬಿಡುಗಡೆ ಹೊಂದಿ, ಈಗ ಪಂಚಮಸಂಧಿಯಾದ **"ವಿಭೂತಿಸಂಧಿ"** ಯು ಐದನೆಯ ಸಂಪುಟದಲ್ಲಿ ಮುದ್ರಿತವಾಗಿ, ಆ ಪುಸ್ತಕವು ಸಜ್ಜನ ವಾಚಕವೃಂದದ ಕೈಸೇರುವ ಹಂತದಲ್ಲಿರುವುದನ್ನೂ, ಮತ್ತು **"ಪಂಚಮಹಾಯಜ್ಞಸಂಧಿ"**ಯನ್ನು ಕುರಿತಾದ ಆರನೆಯ ಸಂಪುಟದ ಮುದ್ರಣ ಕಾರ್ಯವೂ ಸಹ ಪೂರ್ಣಗೊಳ್ಳುವ ಹಂತದಲ್ಲಿರುವ ವಿಷಯವನ್ನು ತಿಳಿದು ಸಂತುಷ್ಟರಾಗಿದ್ದೇವೆ. ಇದು ನಿಮ್ಮ ಕ್ರಿಯಾಶೀಲತೆ, ಚೈತನ್ಯಗಳನ್ನು ಪ್ರತಿಫಲಿಸುವ ಕೈಗನ್ನಡಿಯೇ ಸರಿ.

"ವಿಭೂತಿಸಂಧಿ" ಯು ತತ್ವಗಳ ಸಾರದ ಮತ್ತೊಂದು ಪ್ರತಿರೂಪ

ವೆಂದರೆ ಅತಿಶಯೋಕ್ತಿಯಾಗಲಾರದು. ಯಾವ ಯಾವ ಅಧಿಷ್ಠಾನಗಳಲ್ಲಿ ಭಗವಂತನ ವಿಭೂತಿರೂಪವು ಎಷ್ಟೆಷ್ಟು ಇರುತ್ತದೆ. ಭಗವಂತನ ಒಲವಿಗೆ ಸಾಧಕನು ಯಾವ ಅನುಸಂಧಾನದಿಂದ, ಯಾವ ಪರಿಯಲ್ಲಿ ಸಾಧನೆಮಾಡಬೇಕು –ಇತ್ಯಾದಿ ತತ್ವಗಳಿಗೆ ದಾರಿದೀಪವಾಗಿದೆ ಈ "ವಿಭೂತಿಸಂಧಿ". ಭಗವಂತನ ಈ ವಿಭೂತಿ ಜ್ಞಾನದ ಅರಿವಾದರಲ್ಲವೇ ಅವನ ಮಹಾತ್ಮ್ಯಜ್ಞಾನ ಪೂರ್ವಕ ಸುದೃಢ ಸ್ನೇಹವು ಅವನಲ್ಲಿ ಉಂಟಾಗುವುದು? ಯಶೋದೆ, ಪಾರ್ಥ ಇವರಿಗೆ ತನ್ನ ವಿಭೂತಿರೂಪವನ್ನು ತೋರಿ, ಅನುಗ್ರಹಿಸಿದ ಶ್ರೀಕೃಷ್ಣನ ಆರಾಧಕರಾದ ನಾವು ಈ ಸಂಧಿಯನ್ನು ಕುರಿತ ಸಂಪುಟವನ್ನು ಬಿಡುಗಡೆ ಮಾಡುವಂತೆ ನೀವು ನಮ್ಮನ್ನು ಕೋರಿರುವುದು ಪರಮಸೂಕ್ತ. ಇದು ನಿಮಗೆ ಭಗವಂತನು ನಿಯೋಜಿಸಿ ನೀಡಿರುವ ಪ್ರೇರಣೆಯೇ ಸರಿ.

ನೀವು ಭಾರಿ ಪ್ರಮಾಣದ ಜ್ಞಾನ ಯಜ್ಞವನ್ನು ಕೈಕೊಂಡು, ಯಶಸ್ಸಿನ ಹಾದಿಯಲ್ಲಿರುವಿರಿ. ಕೊನೆಯುವರೆವಿಗೂ ಅದು ನಿಮ್ಮನ್ನು ಹಿಂಬಾಲಿಸುವುದೆಂಬ ವಿಶ್ವಾಸ ನಮಗಿದೆ. ನಿಮ್ಮ ಈ ಪ್ರಯತ್ನದಲ್ಲಿ ನಮ್ಮ ಸಹಾನುಭೂತಿ ಹಾಗೂ ಯಥಾಶಕ್ತಿ ಸಹಕಾರಗಳ ಆಶ್ವಾಸನೆ ನೀಡುತ್ತೇವೆ.

ಉಳಿದಿರುವ ೨೮ ಸಂಧಿಗಳ ಮುದ್ರಣಕಾರ್ಯವು ತ್ವರಿತಗತಿಯಲ್ಲಿ ಪೂರ್ಣವಾಗಿ ನಿಮ್ಮ ಪುಸ್ತಕಗಳಿಗೆ ಹೆಚ್ಚು ಹೆಚ್ಚು ಬೇಡಿಕೆ ಬರಲಿ ಎಂದು ಈ ಮೂಲಕ ಆಶೀರ್ವದಿಸುತ್ತೇವೆ.

ಇತಿ ನಾರಾಯಣ ಸ್ಮರಣೆಗಳು

**ಶ್ರೀ ವಿದ್ಯಾಪಯೋನಿಧಿ ತೀರ್ಥ ಶ್ರೀಪಾದಂಗಳವರು**

ಸೋಸಲೆ ಶ್ರೀ ವ್ಯಾಸರಾಜ ಮಹಾಸಂಸ್ಥಾನಾಧೀಶರು

ದಿನಾಂಕ ೨-೭-೧೯೮೮

# ಅರ್ಪಣೆ

**"ಸರ್ವವ್ಯಾಖ್ಯಾನಸಾರಸಂಗ್ರಹ"ವೆಂಬ ಮಾಲಿಕೆಯಲ್ಲಿ ಪ್ರಕಟವಾಗುತ್ತಿರುವ ಶ್ರೀಮದ್ಹರಿಕಥಾಮೃತಸಾರ ಗ್ರಂಥರತ್ನದ "ವಿಭೂತಿಸಂಧಿ" ಎಂಬ ಈ ಪಂಚಮ ಸಂಪುಟವನ್ನು ಶ್ರೀ ಶ್ರೀ ವ್ಯಾಸರಾಜ ಮಹಾಸಂಸ್ಥಾನಾಧೀಶರಾದ ಪರಮಪೂಜ್ಯ ಶ್ರೀ ೧೦೮ ಶ್ರೀ ಶ್ರೀ ವಿದ್ಯಾಪಯೋನಿಧಿತೀರ್ಥ ಶ್ರೀಪಾದಂಗಳವರ ಪಾದಪದ್ಮಂಗಳಲ್ಲಿ ಸಾಷ್ಟಾಂಗ ನಮಸ್ಕಾರ ಪೂರ್ವಕವಾಗಿ ಅರ್ಪಿಸಲಾಗಿದೆ.**

## ಕೃತಜ್ಞತೆಯ ವಂದನೆಗಳು

ನಮ್ಮ ಪ್ರಾರ್ಥನೆಯನ್ನು ಮನ್ನಿಸಿ, ಪರಮಾನುಗ್ರಹಮಾಡಿ, ಈ ಪಂಚಮ ಸಂಪುಟವನ್ನು ಬಿಡುಗಡೆಮಾಡಲು ಕೃಪೆಯಿಂದ ಸಮ್ಮತಿಸಿ. ಆಶೀರ್ವಚನಗಳನ್ನು ನೀಡಿರುವ **ಶ್ರೀ ಶ್ರೀ ವ್ಯಾಸರಾಜಮಹಾಸಂಸ್ಥಾನಾಧೀಶರಾದ ಪರಮಪೂಜ್ಯ ಶ್ರೀ ೧೦೮ ಶ್ರೀ ಶ್ರೀ ವಿದ್ಯಾಪಯೋನಿಧಿತೀರ್ಥ ಶ್ರೀ ಪಾದಂಗಳವರ** ಚರಣಾರವಿಂದಗಳಲ್ಲಿ ಭಕ್ತಿ ಪುರಸ್ಸರವಾದ ಸಾಷ್ಟಾಂಗ ಪೂರ್ವಕ ನಮಸ್ಕಾರಗಳನ್ನು ಅರ್ಪಿಸುತ್ತೇವೆ. ಶ್ರೀ ಪಾದಂಗಳವರ ಅನುಗ್ರಹಪೂರ್ವಕವಾದ ಸಹಕಾರವು ಮುಂದೆ ಪ್ರಕಟವಾಗಲಿರುವ ಸಂಪುಟಗಳಿಗೂ ಸಹ ದೊರೆಯಲೆಂದು ಶ್ರೀ ಮೂಲಗೋಪಾಲಕೃಷ್ಣ ದೇವರಲ್ಲಿ ಪ್ರಾರ್ಥಿಸಿಕೊಳ್ಳುತ್ತೇವೆ.

ಇಂತೀ ಸಾಷ್ಟಾಂಗ ಪ್ರಣಾಮಗಳು
ಹೆಚ್.ಎಸ್.ಶ್ರೀನಿವಾಸಮೂರ್ತಿ
ಪ್ರಕಾಶಕರು

|| ಶ್ರೀಃ ||

# ಸಂಧಿ (೫)

## "ವಿಭೂತಿ ಸಂಧಿ"

**ಸಂಧಿಯ ಸಾರ :—**

ಅಪರೋಕ್ಷೀಕೃತ ಶ್ರೀಶರಾದ ಶ್ರೀ ಜಗನ್ನಾಥದಾಸವರ್ಯರು ಲೌಕಿಕ ವಿವಕ್ಷಯಾ ಅತಿಶಯವಾಗಿ ತೋರುವ ವಿಶೇಷಾಧಿಷ್ಠಾನಗಳಲ್ಲಿ ಶ್ರೀ ಪರಮಾತ್ಮನು ತಾನು ಇಟ್ಟಿರುವ ಭಗವದ್ವಿಭೂತಿರೂಪ ವಿಶೇಷಗಳನ್ನು ಈ ಸಂಧಿಯಲ್ಲಿ ವಿವರಿಸುತ್ತಾರೆ.

ಶ್ರೀ ಲಕ್ಷ್ಮೀಪತಿಯ ವಿಭೂತಿ ಸಾಂಕೇತವಾದ ಭಗವದ್ರೂಪಗಳನು ಭಗವದ್ಸನ್ನಿಧಾನವಿಶೇಷವಾದ ವಿವಿಧ ಠಾವುಗಳಲ್ಲಿ ಸ್ಮರಿಸುತ್ತಾ. ಆನಂದ್ನ ಪಡುತ್ತಿರಬೇಕು. ನೀತ ಸಾಧಾರಣ, ವಿಶೇಷ, ಸಜಾತಿ, ನೈಜ, ಅಹಿತ, ಸಹಜ, ವಿಜಾತಿ, ಖಂಡ, ಅಖಂಡಗಳೆಂಬ ವಿಶೇಷಾಧಿಷ್ಠಾನಗಳಲ್ಲಿ ಭಗವದ್ವಿಭೂತಿರೂಪಗಳನ್ನು ಜ್ಞಾನಿಗಳಿಂದ ಉಪದೇಶದ್ವಾರಾ ಅರಿತು, ಅನುಷ್ಠಾನಮಾಡಬೇಕು.

ನೀರು, ಭೂಮಿ, ಆಕಾಶ, ಈ ಸ್ಥಾನಗಳಲ್ಲಿ ಸಂಚರಿಸುವ ಜಲಚರ, ಭೂಚರ ಮತ್ತು ಖೇಚರ ಪ್ರಾಣಿಗಳ ಸಮೂಹದಲ್ಲಿ ಸಜಾತಿ, ವಿಜಾತಿ, ಸಾಧಾರಣ ಮತ್ತು ವಿಶೇಷಗಳೆಂಬ ಭಗವದ್ವಿಭೂತಿಸಂಪನ್ನಗಳಾದ ವಿಶೇಷಾಧಿಷ್ಠಾನಗಳನ್ನು ತತ್ತಸ್ಥಾನಗಳಲ್ಲಿ ಜ್ಞಾನಪೂರ್ವಕ ಅರಿತು. ತದ್ಗತ ಶ್ರೀ ಪರಮಾತ್ಮನ ವ್ಯಾಪ್ತರೂಪಗಳನ್ನು ನೋಡುತ್ತಾ, ಸರ್ವತ್ರ ವ್ಯಾಪ್ತಿದರ್ಶಿಯಾಗಿ ಹಿಗ್ಗುತ್ತಿರಬೇಕೆಂದು ತಿಳಿಸುತ್ತಾರೆ.

ಪ್ರತಿಮಾದಿಗಳು, ಸಾಲಿಗ್ರಾಮ, ಗೋವು, ಅತಿಥಿ, ಅಭ್ಯಾಗತರು, ಶ್ರೀತುಲಸಿ, ಅಶ್ವತ್ಥವೃಕ್ಷ, ಯತಿ, ವಾನಪ್ರಸ್ಥನಾದವ, ಗೃಹಸ್ಥ, ಬ್ರಹ್ಮಚಾರಿ, ಧರ್ಮಾಧರ್ಮಗಳನ್ನು ಶಾಸನಮಾಡುವ ಪ್ರಭು, ಸ್ವಕೀಯ ಹಾಗೂ ಪರಕೀಯ ಬಂಧು ಹಾಗೂ ಮಿತ್ರವರ್ಗ, ಭೂಮಿ, ನೀರು, ಅಗ್ನಿ, ವಾಯು ನಕ್ಷತ್ರಮಾರ್ಗ ನವಗ್ರಹಗಳು, ಯೋಗ, ಕರಣ, ನಕ್ಷತ್ರಗಳು, ತಿಥಿ, ಶುಕ್ಲ ಮತ್ತು ಕೃಷ್ಣಪಕ್ಷಗಳು, ಅಯನಗಳು ಇವೆಲ್ಲವೂ ಶ್ರೀ ಪರಮಾತ್ಮನ ವಿಭೂತಿ ರೂಪಗಳಿಗೆ ವಿಶೇಷಾಧಿಷ್ಠಾನಗಳು.

ಚೆನ್ನಾಗಿ ಕಾಯಿಸಲ್ಪಟ್ಟ ಭಂಗಾರವು ಅತ್ಯಂತ ಶೋಭಾಯಮಾನವಾಗಿ ಪ್ರಕಾಶಿಸುವುದು. ತಪ್ತಕಾಂಚನದಲ್ಲಿ ಅಂತರ್ಗತವಾಗಿರುವ ತೇಜೋಮಯವಾದ ಅಗ್ನಿಯೋಪಾದಿಯಲ್ಲಿ ಲಕ್ಷ್ಮೀಪತಿಯು ಸಾಲಿಗ್ರಾಮದಲ್ಲಿ ನಿರಂತರದಲ್ಲಿ ವಿಶೇಷ ವಿಭೂತಿರೂಪದಿಂದ ಸ್ವಯಂವ್ಯಕ್ತನಾಗಿ ೫೫೩೫ ರೂಪವಿಶಿಷ್ಟನಾಗಿದ್ದಾನೆ. ಪರ್ವತಾಭಿಮಾನಿಗಳಾದ ದೇವತೆಗಳಲ್ಲಿ ಸಹಜಾಚಲನಾಮಕನಾಗಿ ವಿಭೂತಿರೂಪದಿಂದ್ದಾನೆ.

ಆಹಿತಾಚಲವೆಂದು ಹೆಸರುಳ್ಳ ಪ್ರತಿಮೆಗಳಲ್ಲಿ ೫೧೩ ವಿಭೂತಿರೂಪ ವಿಶಿಷ್ಟನಾಗಿರುವನು. ಅರಣಿ ಎಂಬ ಕಾಷ್ಠವನ್ನು ಮಥನಮಾಡಿದಾಗ, ಆದರಲ್ಲಿ ಅಂತರ್ಭೂತವಾದ ಅಗ್ನಿಯೂ ಹೇಗೆ ವ್ಯಕ್ತವಾಗುವುದೋ, ಅಂತೆಯೇ ಪ್ರತಿಮಾಭಿಮಾನಿಗಳಾದ ದೇವತೆಗಳಲ್ಲಿ ತತ್ತದಾಕಾರನಾಗಿ ಪರಿಶೋಭಿಸುತ್ತಿರುವನು. ಅಂತೆಯೇ, ಪ್ರತೀಕಾಂತರ್ಗತ ತನ್ನ ದರ್ಶನ ಭಾಗ್ಯವನ್ನು ಕರುಣಿಸುವನು.

ಮನವೇ ಮೊದಲಾದ ಏಕಾದಶೇಂದ್ರಿಯಗಳಿಗೆ ನಿಯಾಮಕನಾದ ಶ್ರೀ ಪರಮಾತ್ಮನು ಪೂಜಾಸಾಧನ ಪದಾರ್ಥಗಳಾದ ಉಪಕರಣಗಳಲ್ಲಿ ೫೨೧೧೪ ರೂಪಗಳಿಂದ ವಿಶಿಷ್ಟನಾಗಿದ್ದು, ಆಯಾಯಾ ವಸ್ತುಗಳಂತೆಯೇ ತದ್ರೂಪನಾಗಿ ತನ್ನಾಮಕನಾಗಿದ್ದಾನೆಂದು ಜ್ಞಾನಾನುಸಂಧಾನದಿಂದ ತಿಳಿದ್ದು ಅರ್ಚನೆಮಾಡುವವರ ಪೂಜಾರೂಪವಾದ ಸೇವಾದಿಗಳನ್ನು, ಅತಿಯಾದ

ದಾಹದಿಂದ ಬಳಲಿದವನು ಹೇಗೆ ನೀರನ್ನು ಅತ್ಯಾಸಕ್ತಿಯಿಂದ ತ್ರೀವ್ರವಾಗಿ ಪಾನಮಾಡುತ್ತಾನೆಯೋ ಅಂತೆಯೇ ಸ್ವೀಕರಿಸುವನು.

ಸರ್ವಚೇತನರಲ್ಲಿ ಅಂತರ್ಯಾಮಿಯಾಗಿ ವಿರಾಜಮಾನನಾಗಿರುವ ಬಿಂಬ ರೂಪೀ ಶ್ರೀ ಪರಮಾತ್ಮನು ಜಡಪ್ರತಿಮಾದಿಗಳಲ್ಲಿಯೂ, ಚೇತನವರ್ಗದಲ್ಲಿ ಬ್ರಹ್ಮದೇವರೇ ಮೊದಲಾಗಿ ಸಕಲ ದೇವತೆಗಳಲ್ಲಿಯೂ ಆವಾಸವಾಗಿದ್ದಾನೆ. ಅಂದರೆ, ಚಲಾಚಲ ಅಧಿಷ್ಠಾನಗಳಲ್ಲಿ ದೇವತಾಗೋಳಕಾಂತರ್ಗತನಾಗಿ ಇದ್ದಾನೆ ಎಂತ ತಾತ್ಪರ್ಯ. ಈ ರೀತಿಯಲ್ಲಿ ಜ್ಞಾನಾನುಸಂಧಾನದಿಂದ ಅರಿತು, ಧರ್ಮಾರ್ಥಕಾಮಗಳನ್ನು ಬಯಸದೆ. ವಿಶ್ವಕುಟುಂಬಿಯಾದ ಶ್ರೀಹರಿಯು ಕೊಟ್ಟಿರುವ ಕದನ್ನ, ಹರಕು ಕಂಬಳಿಗಳನ್ನೇ ಅಂದರೆ ದ್ರಾರಿದ್ರ್ಯಪ್ರಾಪ್ತಿಯಾದ ಕಾಲಕ್ಕೂ, ಅದನ್ನೇ ಪರಮಾನುಗ್ರಹವೆಂದು ಭಾವಿಸಿ, ಸಮಸ್ತಕ್ಕೂ ಶ್ರೀ ಪರಮಾತ್ಮನೇ ಕಾರಣನೆಂದು ತಿಳಿಯುತ್ತಾ, ಅವನ ಪಾದಪದ್ಮಗಳನ್ನು ಅನವರತವೂ ಧ್ಯಾನಮಾಡುತ್ತಿರು.

ದೇವರಿಗೆ ಅಭಿಷೇಕ ಮಾಡತಕ್ಕ ಹಾಗೂ ಪಾನಯೋಗ್ಯವಾದ ನೀರಿನಲ್ಲಿ ೨೪ ವಿಭೂತಿರೂಪಗಳಿಂದಲೂ ರಮಾಸನ್ನಿಧಾನಯುಕ್ತವಾದ ಶ್ರೀತುಳಸಿಯ ಪ್ರತಿದಳದಲ್ಲಿಯೂ ೫೩೧೭ ರೂಪಗಳಿಂದಲೂ. ಭಗವತ್ಪೂಜಾರ್ಹವಾದ ಸುಗಂಧಯುಕ್ತ ಪುಷ್ಪದಲ್ಲಿ ೧೬೧ ರೂಪಗಳಿಂದಲೂ, ದೇವರಿಗೆ ಹಚ್ಚುವ ದೀಪದಲ್ಲಿ ೧೩ ರೂಪಗಳಿಂದಲೂ, ಶ್ರೀಪರಮಾತ್ಮನಿಗೆ ಅರ್ಪಿಸುವ ಪರಿಮಳ ಯುಕ್ತವಾದ ಗಂಧದಲ್ಲಿ ೪೦೩ ವಿಭೂತಿರೂಪಗಳಿಂದಲೂ ಶ್ರೀಪರಮಾತ್ಮನು ಆಯಾಯಾ ಅಧಿಷ್ಠಾನಗತನಾಗಿದ್ದಾನೆ.

ಅಷ್ಟದಳ ಯುಕ್ತವಾದ ಹೃದಯಕಮಲದಲ್ಲಿ ಸರ್ವೋತ್ಕೃಷ್ಟನಾದ ಮೂಲೇಶನಾಮಕ ಶ್ರೀ ಪರಮಾತ್ಮನು, ದಳಗಳಲ್ಲಿ ತಾನು ಸಂಚರಿಸುತ್ತಾ ದುಷ್ಟರಿಗೆ ದುರ್ಬುದ್ಧಿ ತತ್ಸಂಬಂಧವಾದ ಕ್ರಿಯಾವಿಶೇಷಗಳನ್ನೂ, ಸಜ್ಜನರಿಗೆ ಸಮೀಚೀನವಾದ ಜ್ಞಾನ ಮತ್ತು ಯೋಗ್ಯ ಧರ್ಮಗಳನ್ನೂ ವರ್ಧಿಸುತ್ತಾ ಜ್ಞಾನಾನಂದಮಯನಾಗಿದ್ದುಕೊಂಡು, ಸಚ್ಚೇತನರನ್ನು ಧರ್ಮಮಾರ್ಗದಲ್ಲಿ ಪ್ರವರ್ತಿಸುವನು.

ಧನ, ಶರೀರ, ಪತ್ನಿ, ಮಕ್ಕಳು. ಸ್ನೇಹಿತರು ಇವರೇ ಮುಂತಾದವರಲ್ಲಿಯೂ ಸತ್ವ ರಜಸ್ತಮಗಳೆಂಬ ತ್ರಿಗುಣಗಳಲ್ಲಿಯೂ, ಪೂರ್ವಸ್ಮರಣೆ ಮಾಡುವ ಮನಸ್ಸಿನ ಭಾಗವಾದ ಚಿತ್ತದಲ್ಲಿಯೂ, ನಿಶ್ಚಯ ಜ್ಞಾನವನ್ನುಂಟು ಮಾಡುವ ಬುದ್ಧಿಯಲ್ಲಿಯೂ ಮನಸ್ಸು ಮತ್ತು ಚೇತನಾದಿ ಇಂದ್ರಿಯಗಳಲ್ಲಿಯೂ, ಪಂಚ ಜ್ಞಾನೇಂದ್ರಿಯ ಹಾಗೂ ಕರ್ಮೇಂದ್ರಿಯಗಳಲ್ಲಿಯೂ ಆಯಾಯ ಅಧಿಷ್ಠಾನಗಳ ಹೆಸರುಗಳಿಂದಲೇ ಕರೆಯಿಸಿಕೊಳ್ಳುತ್ತಾ, ಸತ್ಯಸಂಕಲ್ಪನಾದ ಶ್ರೀ ಪರಮಾತ್ಮನು ತನ್ನ ಇಚ್ಛಾನುಸಾರ ನಿರಂತರದಲ್ಲಿಯೂ ಕ್ರಿಯಾವ್ಯಕ್ತಿ ಮಾಡಿ, ಮಾಡಿಸುತ್ತಿರುವನೆಂದು ಯಾವಾಗಲೂ ಸ್ಮರಿಸುತ್ತಲಿರು.

ಭಾವಾದ್ವೈತ, ದ್ರವ್ಯಾದ್ವೈತ ಮತ್ತು ಕ್ರಿಯಾದ್ವೈತಗಳೆಂಬ ಅದ್ವೈತತ್ರಯಂಗಳನ್ನು ಮನಸ್ಸಿನಲ್ಲಿಯೇ ಧ್ಯಾನಿಸುತ್ತಾ, ದೃಢವಾದ ಭಕ್ತಿಭಾವದಿಂದ ಸಕಲ ಕ್ರಿಯಾ ವಿಶೇಷಗಳೂ ಬಿಂಬರೂಪನಾದ ಶ್ರೀ ಪರಮಾತ್ಮನಿಂದಲೇ ಅಭಿವ್ಯಕ್ತವಾಗುತ್ತಿರುವುವು ಎಂದು ಮರೆಯದಲೆ, ದಿನನಿತ್ಯದಲ್ಲಿಯೂ ತನ್ನನ್ನು ಸೇವಿಸುತ್ತಿರುವ ಭಕ್ತ ಸಂದೋಹಕ್ಕೆ ವಶನಾಗಿ, ಅವರನ್ನು ನಿರಂತರವೂ ಗಜರಾಜನನ್ನು ವಿಪತ್ತಿನಿಂದ ರಕ್ಷಿಸಿ, ಅವನಿಗೆ ಒಲಿದಂತೆ ಸಂರಕ್ಷಿಸುತ್ತಿರುವನು.

ಆಕಾಶವೇ ಮೊದಲಾದ ಪಂಚ ಭೂತಗಳಲ್ಲಿ ಒಂದೊಂದರಲ್ಲಿಯೂ, ಪೂಜಾಕ್ರಿಯೆಗೆ ಸಹಕಾರಿಯಾದ ಸಾಧನಗಳಲ್ಲಿಯೂ ಹೊಸ ಹೊಸ ಪರಿಯಾಗಿ ವ್ಯಾಪ್ತ ರೂಪದಿಂದ ತುಂಬಿಕೊಂಡಿದ್ದಾನೆ. ಅಂತಹ ಅಧಿಷ್ಠಾನ ವಿಶೇಷಗಳಲ್ಲಿ ವಿಭೂತಿ ರೂಪಗಳಿಂದ ಇರುತಿಪ್ಪ ಶ್ರೀ ಪರಮಾತ್ಮನನ್ನು ಸದಾ ಚಿಂತಿಸುತ್ತಾ, ವೇದಗಮ್ಯನಾದ ಗೋವಿಂದನ ಪಾದಾರವಿಂದಗಳಿಗೆ ಅರ್ಚಿಸುತ್ತಾ, ಆವನ ದರ್ಶನ ಭಾಗ್ಯವನ್ನು ಪಡೆದು, ನಲಿನಲಿದು ಸ್ತೋತ್ರ ಮಾಡುತ್ತಿರು.

ಪದ್ಮನಾಭನಾಮಕ ಶ್ರೀ ಪರಮಾತ್ಮನನ್ನು ಮನೋಮಂದಿರದಲ್ಲಿ ಸ್ಥಿರವಾಗಿ ನಿಲ್ಲಿಸಿಕೊಂಡು, ದೃಢವಾದ ಭಕ್ತಿಭಾವದಿಂದ ಬಿಸಿಲು, ಮಳೆ, ಚಳಿ, ಗಾಳಿ ಮೊದಲಾದ ಋತು ಸಂಬಂಧವಾದ ತಾಪಗಳನ್ನು ನಿಂದಿಸದೆ, ನಿರಂತರದಲ್ಲಿಯೂ ಏಕಾಗ್ರ ಚಿತ್ತದಿಂದ ಭೂಮಿಯಿಂದ ಜನ್ಯವಾದ ಗಂಧ

ವಿಶೇಷವೇ ಸುಗಂಧವೆಂದೂ, ಉದರದಲ್ಲಿರುವ ರಸವೆಂಬ ಗುಣವೇ ಷಡ್ರಸೋಪೇತ ನೈವೇದ್ಯವೆಂದೂ, ತೇಜಸ್ಸಿನ ಮಾತ್ರಾಗುಣವಾದ ರೂಪವೇ ಸುದೀಪವೆಂದೂ, ಬೀಸುವ ಗಾಳಿಯೇ ಭಗವಂತನಿಗೆ ಚಾಮರವೆಂದೂ, ಆಕಾಶಜನ್ಯವಾದ ಶಬ್ದಗುಣವೇ ಸರ್ವಶಬ್ದವಾಚ್ಯನಾದವನಿಗೆ ವಾದ್ಯವಿಶೇಷಗಳೆಂದೂ, ಅನುಸಂಧಾನಪೂರ್ವಕ ತಿಳಿದು, ಶ್ರೀ ಪರಮಾತ್ಮನಿಗ ಸಮರ್ಪಿಸಲು, ನಮಗೆ ಒಲಿದು ಅನುಗ್ರಹಿಸುವನು.

ಇಂದ್ರಿಯ ಸ್ಥಾನಗಳೆಂದೆನಿಸುವ ಗೋಳಕಗಳು ರಮಾರಮಣನಿಗೆ ಆವಾಸಸ್ಥಾನವಾದ ದೇವಮಂದಿರವೆಂದೂ, ಶರೀರವನ್ನು ತೊಳೆಯುವ ಕ್ರಿಯಾವಿಶೇಷವೇ ಸಮ್ಮಾರ್ಜನೆ ಎಂದೂ, ಇಂದ್ರಿಯಗಳೇ ದೀಪದ ಸಾಲುಗಳೆಂದೂ, ಇಂದ್ರಿಯಗಳಿಗೆ ಸಂಬಂಧಿಸಿದ ರೂಪ ರಸಾದಿ ವಿಷಯಗಳೇ ದೇವರಿಗೆ ಮಂಚವೆಂದೂ, ಆ ವಿಷಯ ಭೋಗಗಳಿಂದಾಗುವ ಆನಂದವೇ ಅವನಿಗೆ ಸುಪ್ಪತ್ತಿಗೆ ಎಂದೂ, ಸರ್ವಸಮರ್ಪಣಾರೂಪವಾದ ಕರ್ಮವಿಶೇಷಗಳೇ ಶ್ರೀ ಪರಮಾತ್ಮನಿಗೆ ವಸ್ತ್ರವೆಂದೂ ಭಾವಿಸು.

ದುಷ್ಕರ್ಮಜನ್ಯವಾದ ಪಾಪಫಲಗಳೇ ಆತನಿಗೆ ಪಾದುಕೆಗಳೆಂದೂ, ಪುಣ್ಯಕರ್ಮಗಳೇ ಸುಗಂಧವೆಂತಲೂ, ಶಾಸ್ತ್ರಕಲಾರೂಪಗಳೇ ಶ್ರೀತುಲಸಿ ಸಮರ್ಪಣೆ ಎಂತಲೂ, ಪುಣ್ಯರೂಪವಾದ ಮನಸ್ಸಿನ ನಾನಾ ವೃತ್ತಿಗಳು ಪುಷ್ಪ ಸಮರ್ಪಣೆ ಎಂತಲೂ, ಕ್ರೋಧವೇ ಧೂಪವೆಂತಲೂ, ಸುದೃಢ ಸ್ನೇಹರೂಪವಾದ ಸದ್ಭಕ್ತಿಯೇ ಭಗವಂತನಿಗೆ ಆಭರಣಗಳೆಂತಲೂ, ಮನಸ್ಸಿನಲ್ಲಿ ಹುಟ್ಟುವ ಸದ್ಬುದ್ಧಿಯೇ ಶ್ವೇತಛತ್ರವೆಂತಲೂ, ಸಮೀಚೀನವಾದ ಜ್ಞಾನವೇ ದೀಪವೆಂತಲೂ, ಭಗವದ್ಗುಣಕಥನವೇ ಆತನಿಗೆ ಮಾಡುವ ಮಂಗಳಾರ್ತಿ ಎಂತಲೂ ಚಿಂತಿಸು.

ತ್ರಿಕರಣಗಳಿಂದಾಗುವ ಕಾಯಕ, ವಾಚನಿಕ ಮತ್ತು ಮಾನಸಿಕವಿಶೇಷಗಳೆಲ್ಲವೂ ಶ್ರೀ ಪರಮಾತ್ಮನಿಗೆ ಪ್ರದಕ್ಷಿಣೆ ಎಂದು ತಿಳಿದು, ಸರ್ವತ್ರವ್ಯಾಪ್ತನಾದ ಆ ಕಮಲದಳಾಯತಾಕ್ಷನಿಗೆ ಅನುದಿನ ಅರ್ಪಿಸುತ್ತಾ ಸಂತೋಷ

ದಿಂದಿರು. ಇಂತಹ ಮಾನಸಿಕರೂಪವಾದ ಪೂಜಾಕ್ರಮವನ್ನು ನಿತ್ಯಾನುಭವಕ್ಕೆ ತಂದುಕೊಂಡು ಮಂದಬುದ್ಧಿಯುಳ್ಳ ಪಾಮರರಿಗೆ ಹೇಳದೆ, ಪೂರ್ವೋಕ್ತ ತ್ರಿಕರಣವ್ಯಾಪಾರಗಳೆಲ್ಲವನ್ನೂ ಶ್ರೀಹರಿಯ ಪೂಜೆ ಎಂದು ಭಾವಿಸು. ಜ್ಞಾನಿಗಳಿಗಲ್ಲದೆ. ಇಂತಹ ಅನುಭವವೇದ್ಯವಾದ ವಿಷಯವು ಅಲ್ಪರಾದ ಪಾಮರರಿಗೆ ತಿಳಿಯುವುದಿಲ್ಲ.

ಧರ್ಮ, ಅರ್ಥ, ಕಾಮ, ಮೋಕ್ಷಗಳೆಂಬ ಚತುರ್ವಿಧ ಪುರುಷಾರ್ಥ ಗಳ ಪ್ರಾಪ್ತಿಯಾಗಬೇಕಾದರೆ, ಚತುರ್ದಶಭುವನಾತ್ಮಕವಾದ ಈ ಜಗತ್ತಿನಲ್ಲಿ ಪೂರ್ವೋಕ್ತ ಉತ್ತಮಾನುಸಂಧಾನರೂವಾದ ಜ್ಞಾನವಾರ್ಗವಲ್ಲದೇ ಇತರ ಉಪಾಯಗಳಿಲ್ಲ. ಮನವೆ ಮೊದಲಾದ ಸಕಲೇಂದ್ರಿಯಗಳಲ್ಲಿ ವ್ಯಾಪ್ತರೂಪ ದಿಂದ ವಿರಾಜಮಾನನಾಗಿರುವ ರಮಾಧವನಿಗೆ ಸರ್ವಕರ್ಮ ಸಮರ್ಪಣೆ ಯೊಂದೇ ಮಹಪೂಜೆ ಹಾಗೂ ಉತ್ತಮವಾದ ಮಾರ್ಗ.

ಅಧ್ಯಾತ್ಮಯಜ್ಞರೂಪವಾದ ಪೂಜಾವಿಧಾನವನ್ನು ಹೇಳುತ್ತಾರೆ. ಇಂದ್ರಿಯ ಸ್ಥಾನಗಳಾದ ಗೋಳಕಗಳೇ ಅಗ್ನಿಕುಂಡಗಳು. ಇಂದ್ರಿಯಗಳೇ ಅಗ್ನಿಯು. ವಿಷಯಗಳೆಂಬ ಭೋಗದ್ರವ್ಯಗಳೇ ಸಮಿತ್ತೆಂಬ ಕಾಷ್ಠ. ಅಂತಹ ವಿಷಯ ಭೋಗಗಳ ಪ್ರಾಪ್ತಿಗೆ ಮಾಡುವ ಪ್ರಯತ್ನವೆಂಬ ಕ್ರಿಯೆಯೇ ಅಗ್ನಿಪ್ರಜ್ವಲಿಸಲು ಅವಶ್ಯಕವಾದ ಗಾಳಿಯು. ವಿಷಯಾಪೇಕ್ಷೆಯೇ ಹೊಗೆ. ವಿಷಯಸನ್ನಿಕರ್ಷವೇ ಅಗ್ನಿಜ್ವಾಲೆ. ಆಯಾಯಾ ವಿಷಯಸಂಬಂಧಗಳಿಂದ ಉಕ್ಕುವ ಆನಂದವೇ ಕಿಡಿಗಳು. ಆಯಾಯಾ ಕಾಲೋಪಯುಕ್ತ ಮಾತುಗಳೇ ಮಂತ್ರಗಳು. ಇಂತು ವಿಷಯಗಳನ್ನು ಸರ್ವಾಶ್ರಯದಾತನಾದ ಶ್ರೀ ಹರಿಗೆ ಅರ್ಪಿಸುವುದೇ ಅಧ್ಯಾತ್ಮಯಜ್ಞವೆಂದೆನಿಸುವುದು.

ದೇವಮಂದಿರವೆಂದೆನಿಸುತ್ತಿರುವ ಈ ಶರೀರಗತ ಭಗವದ್ವಿಭೂತ್ಯಾತ್ಮಕ ಪೂಜಾಕ್ರಮವನ್ನು ತಿಳಿಸುತ್ತಾರೆ. ಮಧುನಾಮಕ ದೈತ್ಯನ ಸಂಹಾರಿಯಾದ ಮಧುಸೂದನನಾಮಕ ಪರಮಾತ್ಮನಿಗೆ ಮಂದಿರವೆನಿಸುವ ಈ ದೇಹವೆಂಬ ಪಟ್ಟಣಕ್ಕೆ ಎರಡು ಕಣ್ಣುಗಳು ಮತ್ತು ಮೂಗಿನ ಹೊಳ್ಳೆಗಳು ಪೂರ್ವದಿಕ್ಕಿನ

ಬಾಗಿಲುಗಳು. ಬಾಯಿ ಮತ್ತು ಕಿವಿಗಳು ಉತ್ತರ ಮತ್ತು ದಕ್ಷಿಣದ್ವಾರಗಳು. ಗುದ ಮತ್ತು ಉಪಸ್ಥಗಳೆಂಬ ಕರ್ಮೇಂದ್ರಿಯಗಳು ಪಶ್ಚಿಮ ದ್ವಾರಗಳು. ನಾಭೀಗತ ಷಡ್ದಳಾತ್ಮಕಕಮಲವೇ ಶ್ರೀಹರಿಗೆ ಮನೆಯು. ಹೃದಯಗತ ಅಷ್ಟದಳಕಮಲವೇ ಮಂಟಪವು. ಸತ್ವರಜಸ್ತಮೋಗುಣಗಳೆಂಬ ಗುಣತ್ರಯ ಗಳೇ ಆ ಮಂಟಪಕ್ಕೆ ಮೂರು ಕಳಶಗಳು.

ಸಪ್ತ ಧಾತುಗಳೇ ಆವರಣರೂಪವಾದ ಕೋಟೆಗಳು. ನಾಡಿಗಳು ನಡೆಯುವ ಮಾರ್ಗಗಳು. ಅಷ್ಟಮದಗಳೇ ಅಷ್ಟದಿಗ್ಗಜಗಳು. ಸುಷುಮ್ನಾ ನಾಡಿಯೇ ರಾಜಬೀದಿ. ಶರೀರಗತ ಎಂಟು ಕೋಟಿ ರೋಮಗಳು ವೃಕ್ಷ ಭರಿತವಾದ ನಂದನವನ. ಪ್ರಾಣಾದಿ ಪಂಚರೂಪಾತ್ಮಕನಾದ ಶ್ರೀ ಮುಖ್ಯ ಪ್ರಾಣದೇವರೇ ಪಾಪಗಳೆಂಬ ಶತ್ರುಗಳನ್ನು ಸಂಹರಿಸುವ ತಳವಾರನು.

ನೇತ್ರಾಭಿಮಾನಿಗಳಾದ ಸೂರ್ಯ ಮತ್ತು ಚಂದ್ರರು ಲಕ್ಷ್ಮೀರಮಣನ ಅರಮನೆ ಎಂದೆನಿಸುವ ಈ ಶರೀರದ ದ್ವಾರಪಾಲಕರು. ಮನಸ್ಸಿನಕೋರಿಕೆ ಗಳೇ ಕಾಲಾಳುಗಳು. ಚೇತನರು ಅನುಭವಿಸುವ ವಿಷಯಭೋಗಂಗಳೇ ವಸ್ತುಗಳನ್ನು ವಿಕ್ರಯಿಸುವ ಅಂಗಡಿಗಳು. ದೇಹಗತ ಜೀವನೇ ವರ್ತಕನು. ಕಪ್ಪವೆಂಬ ಸ್ವರಸಾದಿಗಳನ್ನು ಸ್ವೀಕರಿಸುವ ಹರಿಯೇ ಅರಸನು.

ಬಿಂಬರೂಪೀ ಶ್ರೀ ಪರಮಾತ್ಮನಿಗೆ ಅರಮನೆ ಎಂದೆನಿಪ ಈ ದೇಹಗತ ಪಂಚ ಜ್ಞಾನೇಂದ್ರಿಯ ಮತ್ತು ಪಂಚ ಕರ್ಮೇಂದ್ರಿಯಗಳೆಂಬ ದಶೇಂದ್ರಿಯ ಗಳೇ ಕನ್ನಡಿಯ ಸಾಲುಗಳು. ಸರ್ವದೋಷವಿದೂರನಾದ ಕಲ್ಯಾಣಗುಣ ಸಂಪನ್ನನಿಗೆ ಚಿತ್ತವೆಂಬುದೇ ವಿಹಾರಸ್ಥಾನವಾದ ಮಂಟಪವು (ಕ್ರೀಡಾ ರಂಗವು). ಶ್ವಾಸೋಚ್ಛ್ವಾಸಗಳೇ ಬೀಸುತ್ತಿರುವ ಚಾಮರಗಳು. ಬುದ್ಧಿ ಎಂಬುದೇ ನಾಟ್ಯವಿಶಾರದೆಯಾದ ವಿಲಾಸಿನಿಯು. ಮಲಗುವ ಕ್ರಿಯೆಯೇ ದಾಮೋದರನಾಮಕ ಶ್ರೀಹರಿಗೆ ಸಾಷ್ಟಾಂಗ ನಮಸ್ಕಾರವು.

ರಮಾಪತಿಯಾದ ಶ್ರೀ ಪರಮಾತ್ಮನಿಗೆ ಪಟ್ಟಣವೆಂದೆನಿಸುತಿಹ ಈ ಶರೀರಕ್ಕೆ ಮಹಾ ದ್ವಾರವೇ ವದನವು. ಮುಖಕ್ಕೆ ಅಲಂಕಾರಪ್ರಾಯವಾ

ಗಿರುವ ಮೀಸೆಯೇ ತೋರಣವೆಂದೆನಿಸುವುದು. ತಲೆಯಮೇಲಿರುವ ಕೂದಲುಗಳೇ ಪತಾಕೆಗಳೆಂಬ ಧ್ವಜಪಟಗಳು. ನಡೆಯುವ ಪಾದಗಳು, ಮೊಳಕಾಲು, ತೊಡೆಗಳು, ಮಧ್ಯದಲ್ಲಿರುವ ಹೊಟ್ಟೆ–ಇವುಗಳೇ ಮನೆಯ ಉಪ್ಪರಿಗೆಗಳು. ಅನ್ನಮಯಾದಿ ಪಂಚಕೋಶಗಳೇ ಆಲಯಗತ ಕೋಣೆಗಳು.

ಇನ್ನು ಈ ಶರೀರವನ್ನು ಭಗವಂತನ ರಥವೆಂದು ವಿವರಿಸುತ್ತಾರೆ. ಈ ಮನುಷ್ಯನ ದೇಹವೇ ರಥವು. ಉಡುವ ಹಾಗೂ ಹೊದೆಯುವ ವಸ್ತ್ರಗಳೇ ಧ್ವಜಪಟವು. ದ್ವಾದಶನಾಮಗಳೇ ರಥದ್ವಜಗಳು. ಚಿತ್ತವೇ ಶ್ರೀಹರಿಗೆ ಸಿಂಹಾಸನವು. ನಿಶ್ಚಯಾತ್ಮಕ ಬುದ್ಧಿಯೇ ರಥದ ಕಳಸವು. ಒಳ್ಳೆಯ ಮನಸ್ಸೇ ಹಗ್ಗಗಳು. ಸತ್ವಾದಿ ಗುಣತ್ರಯಗಳೇ ಮುಂದೆ ಸಾರಥಿಯು ಕೂಡುವ ದಂಡತ್ರಯವು. ಪುಣ್ಯಪಾಪಗಳೆಂಬ ಕರ್ಮದ್ವಯಗಳೇ ರಥದ ಎರಡು ಚಕ್ರಗಳು. ಪಂಚಜ್ಞಾನೇಂದ್ರಿಯ ಮತ್ತು ಪಂಚ ಕರ್ಮೇಂದ್ರಿಯಗಳೆಂಬ ಹತ್ತು ಇಂದ್ರಿಯಗಳೇ ಸಮರ್ಥವಾದ ಕುದುರೆಗಳು.

ಶ್ರೀಮುಖ್ಯಪ್ರಾಣದೇವರೇ ದೇಹಾಖ್ಯ ರಥಕ್ಕೆ ಸಾರಥಿಗಳು. ಎಲ್ಲಾ ಕಾಲಗಳಲ್ಲಿಯೂ ಶ್ರೀಶನಾದ ಶ್ರೀ ಪರಮಾತ್ಮನೇ ರಥಿಕನೆಂದು, ಅನುಸಂಧಾನ ಪೂರ್ವಕ ತಿಳಿದು, ಈ ದೇಹವನ್ನು ಸಾಧನದೇಹವೆಂದರಿತು, ಗಾಳಿ, ಬಿಸಿಲು, ಮಳೆ, ಚಳಿ ಮುಂತಾದುವುಗಳ ಬಾಧೆ ಇಲ್ಲದಂತೆ ಸಂತೋಷದಿಂದ ಕಾಪಾಡುತ್ತಾ, ಈ ಶರೀರ ನನ್ನದೆಂಬ ಮಮತೆ ಬಿಟ್ಟವನೇ ಮಹಾ ಯೋಗಿ ಎಂದೆನಿಸುವನು.

ಈ ಶರೀರವನ್ನು ಶ್ರೀ ಪರಮಾತ್ಮನಿಗೆ ತೆಪ್ಪೋತ್ಸವವೆಂದು ಭಾವಿಸಿ, ಪೂಜಿಸುವ ಕ್ರಮವನ್ನು ತಿಳಿಸುತ್ತಾರೆ. ಜನನ ಮರಣಾಖ್ಯವಾದ ಈ ಸಂಸಾರವೆಂಬುದೇ ಮಹಾ ಸಮುದ್ರ. ಇಂತಹ ಭವಾಖ್ಯಸಾಗರದಲ್ಲಿ ಪುಣ್ಯ ಮತ್ತು ಪಾಪಗಳೆಂಬ ದ್ವಂದ್ವ ಕರ್ಮಪ್ರವಾಹದಲ್ಲಿ ಸಂಚರಿಸುವ ತೆಪ್ಪವನ್ನಾಗಿ ಈ ಶರೀರವನ್ನು ರಚಿಸಿ, ತತ್ವಾಭಿಮಾನಿಗಳೆಂಬ ಸ್ವಜನರಿಂದೊಡಗೂಡಿ, ಲಕ್ಷ್ಮೀಪತಿಯು ನಿರಂತರದಲ್ಲಿಯೂ ಕ್ರೀಡಿಸುತ್ತಿರುವನು ಎಂದು ತಿಳಿದು,

ಉಪಾಸನೆ ಮಾಡುತ್ತಿದ್ದರೆ, ಪ್ರಾಣನಾಥನಾದ ಶ್ರೀಹರಿಯು ಈ ಸಂಸಾರ ವೆಂಬ ಸಮುದ್ರವನ್ನು ದಾಟಿಸಿ, ಉತ್ತಮವಾದ ವೈಕುಂಠಾದಿ ಮೋಕ್ಷ ಸ್ಥಾನ ಗಳಲ್ಲಿಟ್ಟು, ಪರಮ ಪುರುಷಾರ್ಥರೂಪವಾದ ಮೋಕ್ಷಾನಂದವನ್ನು ಕರುಣಿ ಸುವನು.

ಅಂಗಡಿಯಲ್ಲಿಯೂ ಮತ್ತು ಮನೆಯಲ್ಲಿಯೂ ಇರುವ ಅಕ್ಕಿ ಮುಂತಾದ ಸಾಮಗ್ರಿಗಳನ್ನೂ, ಸ್ತ್ರೀ-ಪುರುಷರ ಇಂದ್ರಿಯಗಳ ತನ್ಮಾತ್ರಾ ಗುಣಗಳಾದ ಗಂಧ, ರಸಾದಿಗಳನ್ನೂ, ದೀಪದಲ್ಲಿ ಹಾಕುವ ಎಣ್ಣೆ, ಅಗ್ನಿಯಲ್ಲಿಡುವ ಕಾಷ್ಠಾದಿ ವಸ್ತುಗಳನ್ನೂ ಶ್ರೀ ಪರಮಾತ್ಮನಿಗೆ ಶ್ರೇಷ್ಠರೂಪವಾದ ಆಹುತಿ ಎಂದು ನಿತ್ಯವೂ ಮರೆಯದೆ ಸ್ಮರಣೆಗೆ ತಂದುಕೊಳ್ಳುತ್ತಾ, ಎಲ್ಲೆಲ್ಲಿಯೂ ನಿರ್ಭಯನಾಗಿ ಶೂರನಾದ ರಾಜನಂತೆ ಸಂಚರಿಸುತ್ತಿರು.

ಇನ್ನು ಬ್ರಹ್ಮಾಂಡಾಂತರ್ಗತ ಸಕಲ ವಸ್ತುಗಳನ್ನೆಲ್ಲಾ ಭಗವಂತನ ಪೂಜಾ ಸಾಧನ ಪದಾರ್ಥಗಳಾಗಿ ಚಿಂತಿಸಿ, ಬ್ರಹ್ಮಾಂಡಂತರ್ಗತನಾದ ಪುರುಷನಾಮಕ ಪರಮಾತ್ಮನ ಪೂಜಾವಿಧಾನವನ್ನು ತಿಳಿಸುತ್ತಾರೆ. ವಾರಿಜಭವ ಬ್ರಹ್ಮಾಂಡವೇ ಶ್ರೀ ಪರಮಾತ್ಮನಿಗೆ ಮಂಟಪವು. ಮೇರುಪರ್ವತವೇ ಸಿಂಹಾ ಸನವು. ಆ ಮೇರು ಪರ್ವತದ ಮೇಲೆ ಧುಮುಕಿ ಹರಿಯುತ್ತಿರುವ ಗಂಗಾ ನದಿಯೇ ಭಗವಂತನಿಗೆ ಅಭಿಷೇಕವು. ಪೂರ್ವಾದಿ ದಿಕ್ಕುಗಳೇ ದೇವರಿಗೆ ಉಡುವ ವಸ್ತ್ರಗಳು. ಆಡುವ ಮಾತುಗಳೆಲ್ಲ ಅವನ ಪರವಾದ ಮಂತ್ರಗಳು. ಮರಗಳಲ್ಲಿ ಬಿಡುವ ಫಲಪುಷ್ಪಗಳೇ ಶ್ರೀಪರಮಾತ್ಮನಿಗೆ ಪುಷ್ಪ ಫಲ ಸಮರ್ಪಣೆಯು. ಬೀಸುವ ಗಾಳಿಯೇ ಗಂಧವಾಹನರೂಪವಾದ ಸುಗಂಧವು. ಸೂರ್ಯಚಂದ್ರಮಂಡಲಗಳೆರಡೂ ಆತನಿಗೆ ದೀಪದ್ವಯಗಳು. ಆಕಾಶಪಥದಲ್ಲಿ ಹರಡಿರುವ ನಕ್ಷತ್ರಮಾಲೆಗಳೇ ಭಗವಂತನಿಗೆ ಆಭರಣವು. ಇಂತು ಅನು ಸಂಧಾನಪೂರ್ವಕ ಮನಸ್ಸಿನಲ್ಲಿ ಚಿಂತಿಸುತ್ತಾ, ಶ್ರೀಹರಿಗೆ ಅರ್ಪಿಸಲು, ಆ ಸೇವಾರೂಪವಾದ ಸಮರ್ಪಣೆಯನ್ನು ಸ್ವೀಕರಿಸಿ, ಸಲಹುವನು.

ವಿಪ್ರವರ್ಣಕ್ಕೆ ಅಭಿಮಾನಿಗಳಾದ ಬ್ರಹ್ಮದೇವರಲ್ಲಿ ವಾಸುದೇವನಾಮಕ ಪರಮಾತ್ಮನಿದ್ದಾನೆ. ಕ್ಷತ್ರಿಯವರ್ಣಕ್ಕೆ ಅಭಿಮಾನಿಗಳಾದ ಶ್ರೀವಾಯು

ದೇವರು, ಗರುಡ, ರುದ್ರದೇವರು, ಶೇಷ, ಇಂದ್ರ, ವಿವಸ್ವಾನ್ ಎಂಬ ಸೂರ್ಯ, ಭೇಶನೆಂಬ ನಕ್ಷತ್ರಾಧಿಪತಿ ಚಂದ್ರ, ಮನ್ಮಥ, ಅಮರಾಸ್ಯನೆಂಬ ಅಗ್ನಿ, ಈ ದೇವತೆಗಳು ಶ್ರೀ ವಾಯುದೇವರ ಸಹಿತರಾಗಿ ಕ್ಷತ್ರಿಯರೊಳಗಿದ್ದು ತದಂತರ್ಗತ ಸಂಕರ್ಷಣರೂಪವನ್ನು ನೋಡುತ್ತಾ, ಸಂತೋಷಿಸುವರು.

ಇನ್ನು ಮುಂದೆ ವೈಶ್ಯವರ್ಣಕ್ಕೆ ನಿಯಾಮಕ ರೂಪವಾದ ಪ್ರದ್ಯುಮ್ನ ರೂಪೀ ಪರಮಾತ್ಮನು ಮೀನಕೇತನನೆಂಬ ಕಾಮನ ಪುತ್ರ ಅನಿರುದ್ಧ, ಪ್ರಾಣಾದಿ ನಲವತ್ತೊಂಬತ್ತು ಮರುದ್ಗಣ, ರುದ್ರಗಣ, ಅಷ್ಟವಸುಗಣ, ಮೇನಕಾತ್ಮಜೆ ಕುವರನೆಂಬ ವಿಘ್ನೇಶ, ವಿಷ್ವಕ್ಸೇನ, ಕುಬೇರ ಮುಂತಾದ ದೇವತೆಗಳಲ್ಲಿದ್ದು ವೈಶ್ಯವರ್ಣಕ್ಕೆ ನಿಯಾಮಕನಾಗಿರುವನು – ಎಂದು ತಿಳಿಯ ಬೇಕು.

ಇನ್ನು ನಾಲ್ಕನೆಯದಾದ ಶೂದ್ರವರ್ಣದವರ ವಿಚಾರವನ್ನು ತಿಳಿಸುತ್ತಾರೆ. ನಾಸತ್ಯದಸ್ರರೆಂಬ ಅಶ್ವಿನೀದೇವತೆಗಳು (ಯಮಳರು), ನೈರುತ್ಯ ದಿಕ್ಕಿನ ಪಾಲಕ ನಿರುಋುತಿಯು, ಯಮಧರ್ಮನು, ಯಮ ದೂತರು, ಭೂದೇವಿ, ಕಾಲಮೃತ್ಯುದೇವತೆ, ಶನೈಶ್ಚರಾದಿಗಳು ಮುಂತಾದ ದೇವತೆಗಳು ಶೂದ್ರವರ್ಣದವರಲ್ಲಿದ್ದು, ಆ ವರ್ಣಕ್ಕೆ ನಿಯಾ ಮಕನಾದ ದೋಷವಿದೂರನಾದ ಅನಿರುದ್ಧನನ್ನು ಸೇವಿಸುತ್ತಿರುವರು ಎಂದರಿತು ಭಗವದನುಗ್ರಹಕ್ಕೆ ಪಾತ್ರನಾಗು.

ಹೀಗೆ ಭಯಾದಿ ದೋಷವಿದೂರನಾದ ಶ್ರೀಮನ್ನಾರಾಯಣನು ಚತುಷ್ಪಾದ ನಾಮಕನಾಗಿ ಚಾತುರ್ವರ್ಣನಿಷ್ಠರಾದ ಜೀವರಲ್ಲಿ ಇದ್ದು, ಆಯಾಯಾ ವರ್ಣಾತ್ಮಕ ಧರ್ಮಗಳಾದ ಅಧ್ಯಯನ, ಜ್ಞಾನಪ್ರಸಾರ, ರಾಜ್ಯಪಾಲನ, ವ್ಯಾಪಾರ, ಸೇವಕಾವೃತ್ತಿಗಳನ್ನು ತಾನೇ ಬಿಂಬಕ್ರಿಯಾ ದ್ವಾರಾ ಮಾಡಿ. ಆಯಾಯಾ ವರ್ಣಕ್ಕೆ ಅಭಿಮಾನಿಗಳಾಗಿರುವ ದೇವತೆಗಳ ದ್ವಾರಾ ಮಾಡಿಸುತ್ತಿರುವನು. ಸಕಲ ಜೀವರ ಒಳ ಹೊರಗೆ ಓತಪ್ರೋತ ನಾಗಿ ವ್ಯಾಪಿಸಿಕೊಂಡಿದ್ದು, ಆ ಜೀವರಿಗೆಲ್ಲಾ ಅತ್ಯಂತ ವಾತ್ಸಲ್ಯದಿಂದ ಧರ್ಮಾದಿ ಪುರುಷಾರ್ಥಗಳನ್ನು ಕೊಡುತ್ತಿರುವನು.

ತನ್ನಿಂದ ಸೃಷ್ಟವಾದ ಸಮಗ್ರ ಬ್ರಹ್ಮಾಂಡವನ್ನು ಮಹಾಪ್ರಳಯ ಕಾಲದಲ್ಲಿ, ಲಯಗೊಳಿಸಿ, ತನ್ನ ಉದರದಲ್ಲಿ ಆಶ್ರಯ ಕೊಡುವನಾದ್ದರಿಂದ **ನಿಧನ**ನಾಮಕ ಶ್ರೀಪರಮಾತ್ಮನು, ಜೀವರಿಗೆ ಜ್ಞಾನ, ಧನಾದಿರೂಪವಾದ ಸಂಪತ್ತನ್ನು ಕೊಡುವ **ಧನದ**ನಾಮಕನು, ಸರ್ವಾಧಾರಕ ಹಾಗೂ ಸರ್ವ ಪೋಷಕನಾಗಿರುವುದರಿಂದ **ವಿಧಾತ** ನಾಮಕನು, ಸರ್ವೋತ್ತಮನಾದ್ದರಿಂದ **ವಿಗತಾಭ್ಯಾಧಿಕ**ನೆಂಬ ಹೆಸರುಳ್ಳ, ರಮಾಸಹಿತನಾದ್ದರಿಂದ **ಸಮ** ನಾಮಕನು, ಜೀವರ ಯೋಗ್ಯತೆ ಮತ್ತು ಕರ್ಮಗಳಿಗನುಸಾರವಾಗಿ ಚೇತನಾಂರ್ಗತನಾಗಿ ವ್ಯಾಪಾರಮಾಡುವುದರಿಂದ **ಸಮವರ್ತಿ** ಎಂದೆನಿಸುವ, ಸಾಮಗಾನಪ್ರಿಯ ನಾದ, ಸಮಸ್ತ ದೇವತಾವರ್ಗದಿಂದ ಸಂಸೇವ್ಯಮಾನನಾದ, ವೈಕುಂಠ, ಅನಂತಾಸನ ಮತ್ತು ಶ್ವೇತದ್ವೀಪಗಳೆಂಬ ಮೋಕ್ಷಧಾಮತ್ರಯಗಳಲ್ಲಿ ವಿರಾಜಮಾನನಾದ, ಮಧು ಎಂಬ ದೈತ್ಯನನ್ನು ಸಂಹರಿಸಿದ, ಪರಶುರಾಮ ಹಯಗ್ರೀವ, ಮಧುಸೂದನ ಇತ್ಯಾದಿ ಶುಭನಾಮಕನಾದ ಶ್ರೀಪರಮಾತ್ಮನು ಬಿಂಬರೂಪದಿಂದ ಸರ್ವತ್ರ ವ್ಯಾಪಿಸಿಹನೆಂದು ಧ್ಯಾನಿಸುವುದು.

ಕನ್ನಡಿಯಲ್ಲಿ ನೋಡಿಕೊಂಡಾಗ, ಅದರಲ್ಲಿ ಮೂಡುವ ನಮ್ಮ ಪ್ರತಿ ಬಿಂಬವು ಸವ್ಯಾಪಸವ್ಯರೂಪವಾಗಿ, ಅಂದರೆ ಬಲಭಾಗ ಎಡಭಾಗವಾಗಿಯೂ ಎಡಭಾಗವು ಬಲಭಾಗವಾಗಿಯೂ ಪಾರ್ಶ್ವಪಲ್ಲಟದ ಪರಿಣಾಮವಾಗಿ ಕಾಣಿಸುವುದು. ಅಂತೆಯೇ ಜಗನ್ನಿರ್ಮಾಪಕನಾದ (ಸೂಕ್ಷ್ಮಸೃಷ್ಟಿನಿರ್ಮಾಪಕ) ಶ್ರೀ ಅನಿರುದ್ಧನಿಗೆ ಜೀವಜಡಾತ್ಮಕವಾದ ಈ ಸಮಗ್ರ ಜಗತ್ತು ಪ್ರತ್ಯೇಕ ರೂಪದಲ್ಲಿರುವುದರಿಂದ ಅಸ್ವಾತಂತ್ರ್ಯಾದಿ ಮತ್ತು ಅಪೂರ್ಣಗುಣತ್ವಾದಿ ಗಳಿಂದ ಭಗವಂತನಿಂದ ಅತ್ಯಂತ ಭಿನ್ನವಾಗಿ ತೋರುವುದು. ಈ ಕಾರಣದಿಂದ ಅನ್ನಮಯನೆಂದೆನಿಪ ಅನಿರುದ್ಧರೂಪೀ ಪರಮಾತ್ಮನಿಗೆ ಜೀವನು ಪ್ರತಿಬಿಂಬ ತಾನೆಂದರಿತು, ಪೂಜಿಸಲು ಅಂತಹ ಪೂಜೆಯನ್ನು ಸ್ವೀಕರಿಸಿ, ಅನುಗ್ರಹಿಸುವನು.

ತಾರತಮ್ಯಕ್ರಮದಲ್ಲಿ ಜೀವರು ನೀಚೋಚ್ಚಭಾವದಿಂದಿರುತ್ತಾರೆ. ತನಗಿಂತ ಉತ್ತಮ ಕಕ್ಷಾಪನ್ನರಾದ ಜೀವರು. ಅವರಿಗಿಂತ ಕೆಳಗಿನ ಕಕ್ಷೆಯಲ್ಲಿರುವವರಿಗೆ **ಬಿಂಬ** (ಅಮುಖ್ಯತಃ)ರೆನಿಸುತ್ತಾರೆ. ಅವರ ಕಕ್ಷಾಪನ್ನರಾದ ಜೀವರು

ಸ್ವೋತ್ತಮರಿಗೆ ಪ್ರತಿಬಿಂಬರೆಂದು ಕರೆಸುತ್ತಾರೆ. ಹೀಗೆ ಸ್ವೋತ್ತಮಕಕ್ಷಾಪನ್ನರಾದ ಚೇತನರ ಬಿಂಬಗಳಲ್ಲಿ ಮುಖ್ಯಬಿಂಬ ಶ್ರೀಹರಿ ಎಂದು. ಆನಂದೋದ್ರೇಕದಿಂದ ಸ್ತುತಿಸುತ್ತಾ ಉಂಬುವ ಭೋಜನಕ್ರಿಯೆ. ಉಡುವ ವಸ್ತ್ರವಿಶೇಷಗಳು ಇತ್ಯಾದಿ ಸಮಸ್ತ ಲೌಕೀಕ ಕಾರ್ಯಕಲಾಪಗಳೆಲ್ಲವೂ ಆ ಪುಂಡರೀಕದಳಾಯತಾಕ್ಷನಾದ ಮುಖ್ಯ ಬಿಂಬರೂಪೀ ಪರಮಾತ್ಮನ ಪಾದಸೇವೆ ಎಂಬ ಅನುಸಂಧಾನದಿಂದ ಅರ್ಪಿಸುತ್ತಾ ನಲಿದಾಡುತ್ತಿರು.

ಅರ್ಘ್ಯಾದಿಗಳನ್ನು ಕೊಡುವ ಸಮಯದಲ್ಲಿ ನದಿಜಲವನ್ನೇ ಬೊಗಸೆಯಲ್ಲಿ ತೆಗೆದುಕೊಂಡು ಅರ್ಘ್ಯರೂಪದಲ್ಲಿ ನೀರಿಗೇ ಬಿಡುವಂತೆ, ಭಗವಧೀನವಾದ ಸಮಸ್ತಕರ್ಮಗಳನ್ನೂ ಬಿಂಬರೂಪಿಯಾದ ಅಂತರ್ನಿಯಾಮಕನೇ ಮಾಡಿ, ಮಾಡಿಸುತ್ತಿರುವನೆಂದು ತಿಳಿದು, ಸಮುದ್ರಶಯನನಾದ ಶ್ರೀ ಪರಮಾತ್ಮನಿಗರ್ಪಿಸಿ ನಿರ್ಲೇಪನಾಗಿರು. ಜೀವನು ಕರ್ತನಾದಾಗ್ಯೂ, ದರ್ವಿ ಎಂಬ ಸೌಟಿನಹಾಗೆ ಅ ಮುಖ್ಯಕರ್ತನಾಗಿದ್ದು, ಪರಾಧೀನ ಕರ್ತೃತ್ವವನ್ನು ಹೊಂದಿರುವನು. ಸ್ವಾಭಿಮಾನ ಕರ್ತೃತ್ವವನ್ನು ತೊರೆದು, ಪದ್ಮನಾಭನೇ ಸರ್ವತಂತ್ರ ಸ್ವತಂತ್ರನೆಂದು ತಿಳಿದು, ವಿಧಿ ನಿಷೇಧಕರ್ಮಗಳಿಗೆ ಒಳಗಾಗದಿರು ಎಂದು ಜೀವರ ಪರಾಧೀನ ಕರ್ತೃತ್ವವನ್ನೂ ಶ್ರೀ ಪರಮಾತ್ಮನ ಸ್ವತಂತ್ರ ಕರ್ತೃತ್ವವನ್ನೂ ತಿಳಿಸುತ್ತಾರೆ.

ಶರತ್ಕಾಲದಲ್ಲಿ ನದಿಗಳಲ್ಲಿ ಸ್ನಾನಪಾನಾದಿಗಳನ್ನು ಮಾಡುವವರಿಗೆ, ಸುಖಪ್ರದವಾಗಿರುವುದು. ಅಂತೆಯೇ "ಶ್ರೀಹರಿಯು ಸ್ವತಂತ್ರ ಕರ್ತೃ. ಸರ್ವವೂ ಭಗವಧೀನವಾದದ್ದು" —ಎಂಬ ಸುಜ್ಞಾನದಿಂದ ಸರ್ವತಂತ್ರ ಸ್ವತಂತ್ರನಾದ ಶ್ರೀ ಪರಮಾತ್ಮನಿಗೆ ಅರ್ಪಿಸಬೇಕು. ಆಗ ಶ್ರೀಹರಿಯು ಅತ್ಯರ್ಥ ಪ್ರಸಾದರೂಪವಾದ ಜ್ಞಾನಾನಂದಾದಿ ಸ್ವರೂಪವ್ಯಕ್ತಿಯನ್ನು ಅನುಗ್ರಹಿಸುವನು. ನದೀಪ್ರವಾಹವು ಕಂಡರೂ ಸರಿ, ಕಾಣದಿದ್ದರೂ ಸರಿ, ಹೇಗೆ ಪ್ರವಾಹತೋ ನಿತ್ಯವಾಗಿ ಹರಿಯುತ್ತಿರುವುದೋ, ಅಂತೆಯೇ ಸರ್ವತ್ರ ಸಮರ್ಪಣಾಪೂರ್ವಕ ಕರ್ಮಗಳನ್ನು ಮಾಡದವನಿಗೆ ಮುಕ್ತಿಸುಖವಿಲ್ಲವೆಂದು ತಾತ್ಪರ್ಯ.

ಸರ್ವಪ್ರೇರಕನಾದ ಶ್ರೀ ಪರಮಾತ್ಮನಿಗೆ ಯಾವ ಕರ್ಮಫಲಾನುಭವವೂ ಇಲ್ಲ. ಅವನು ಜಗತ್ತು ಮತ್ತು ಚೇತನವರ್ಗದಿಂದ ಅತ್ಯಂತ ಭಿನ್ನನು. ಅಹಂಕರ್ತೃತ್ವಾಭಿಮಾನಿಗಳಾದ ಚೇತನರು ಮಾಡುವ ಸಕಲಕ್ರಿಯೆಗಳೂ ಅವರಿಗೆ ಬಂಧಕವಾಗುವುವು. ಹಾಗೆ ಮಾಡುವ ಸಮಸ್ತ ವಿಧವಾದ ಕರ್ಮಗಳನ್ನೂ ಸ್ವತಂತ್ರ ಪ್ರವರ್ತಕನಾದ ಶ್ರೀನಿವಾಸನೇ ಮಾಡಿಸುತ್ತಾನೆಂದು ಜ್ಞಾನಪೂರ್ವಕ ತಿಳಿದು, ನಿರಂತರದಲ್ಲಿಯೂ ಯಾವ ಸಂದೇಹವನ್ನೂ ಪಡದೆ, ನಿಸ್ಸಂಶಯ ಭಾವದಿಂದ ಅವನ ಪಾದಪದ್ಮಗಳಿಗೆ ಅರ್ಪಿಸು. ಆಗ ಜ್ಞಾನಾನಂದ ಸ್ವರೂಪ ಶ್ರೀಹರಿಯು ಆ ಕರ್ಮಗಳನ್ನು ಅಂಗೀಕರಿಸುವನು. ಇದಕ್ಕೆ ಒಂದು ಉತ್ತಮ ದೃಷ್ಟಾಂತವನ್ನು ಕೊಡುತ್ತಾರೆ ದಾಸರಾಯರು. ತನಗೆ ಕೊಟ್ಟ ಹುಲ್ಲು ಮತ್ತು ನೀರನ್ನು ಗೋವು ಸ್ವೀಕರಿಸಿ, ಅಮೃತಸದೃಶವಾದ ಹಾಲನ್ನು ಕೊಡುವಂತೆ ಮಾನನಿಧಿಯಾದ ಶ್ರೀ ಪರಮಾತ್ಮನು ಜೀವರ ಅಧಿಷ್ಠಾನದಲ್ಲಿ ನಡೆಯುವ ಯಾವ ಕರ್ಮಗಳೇ ಆಗಲಿ (ಅಲ್ಪವಾಗಿರಲಿ-ಮಹತ್ತಾಗಿರಲಿ), ನೈಚ್ಯಾನುಸಂಧಾನದಿಂದ ಅರ್ಪಿಸಿದಾಗ, ಅವುಗಳನ್ನು ತಾನು ಕೈಗೊಂಡು, ಅಮೃತ ಸದೃಶವಾದ ಮೋಕ್ಷಾನಂದವನ್ನು ಕರುಣಿಸುವನು ಎಂದು ತಾತ್ಪರ್ಯ.

ಇನ್ನು ಹೃದಯಕಮಲಗತ ಅಷ್ಟದಳಗಳಲ್ಲಿರುವ ದಿಕ್ಪಾಲಕರಾದ ದೇವತೆಗಳು ಮತ್ತು ಅವರ ಉಪಾಸ್ಯಮೂರ್ತಿಗನನ್ನು ತಿಳಿಸುತ್ತಾರೆ. ಪೂರ್ವ, ಆಗ್ನೇಯ, ದಕ್ಷಿಣ, ನೈರುತ್ಯ, ಪಶ್ಚಿಮ, ವಾಯುವ್ಯ, ಉತ್ತರ ಮತ್ತು ಈಶಾನ್ಯ ಎಂಬ ಅಷ್ಟದಿಕ್ಕುಗಳಲ್ಲರುವ ದಳಗಳಲ್ಲಿ ಕ್ರಮವಾಗಿ ಇಂದ್ರ, ಅಗ್ನಿ, ಯಮ, ನಿರಋತಿ, ವರುಣ, ಪ್ರವಹವಾಯು, ಕುಬೇರ, ರುದ್ರ-ಚಂದ್ರ ಈ ದೇವತೆಗಳಿದ್ದಾರೆ, ಹಂಸರೂಪೀ ಪರಮಾತ್ಮನು ಈ ಅಷ್ಟದಳಗಳಲ್ಲಿ ವ್ಯಾಪ್ತನಾಗಿದ್ದು, ಅಷ್ಟದಿಕ್ಪಾಲಕರಿಂದ ಉಪಾಸ್ಯನಾಗಿ, ಅಷ್ಟದಿಕ್ಕುಗಳಲ್ಲಿ ಸಂಚರಿಸುತ್ತಾ, ತನ್ನ ಸಂಕಲ್ಪಾನುಸಾರ ಮತ್ತ್ಯೋರ್ವರಿಗೆ ಗೋಚರನಾಗದೇ ಕ್ರೀಡಾವಿಶಿಷ್ಟನಾಗಿದ್ದಾನೆ.

ಈ ರೀತಿಯಲ್ಲಿ ಕಾಲಾಂತರ್ಗತ ಶ್ರೀ ಪರಮಾತ್ಮನು ಪರಿವತ್ಸರ, ಇಡಾ

ವತ್ಸರ, ವತ್ಸರ, ಅನುವತ್ಸರ ಮತ್ತು ಸಂವತ್ಸರಗಳೆಂಬ ಐದು ವಿಧ ವತ್ಸರಗಳಲ್ಲಿ ಅನಿರುದ್ಧಾದಿ ಪಂಚರೂಪಾತ್ಮಕನಾಗಿದ್ದು, ಆಯಾಯಾ ಸಂವತ್ಸರನಾಮಕನೆನಿಸಿ. ತನ್ನನ್ನು ಸದಾ ಸ್ಮರಣೆ ಮಾಡತಕ್ಕ ಭಕ್ತವರ್ಗವನ್ನು ಅವರವರ ಯೋಗ್ಯತಾನುಸಾರ ಸಂರಕ್ಷಿಸುತ್ತಾನೆ -ಎಂದು ಜ್ಞಾನಿಶ್ರೇಷ್ಠರಾದ ಶ್ರೀ ಜಗನ್ನಾಥದಾಸರಾಯರು ೪೦ನೆಯ ಪದ್ಯದಿಂದ ತಮ್ಮ ಬಿಂಬಮೂರ್ತಿ ಜಗನ್ನಾಥವಿಠಲನಿಗೆ ಅರ್ಪಿಸುತ್ತಾ, ಪ್ರಸಕ್ತ **ವಿಭೂತಿಸಂಧಿಯನ್ನು** ಉಪಸಂಹಾರಮಾಡಿರುತ್ತಾರೆ.

**ಇಂತು ವಿಭೂತಿಸಂಧಿಯ ಸಾರವು ಪರಿಸಮಾಪ್ತಿಯಾಯಿತು.**

❋

॥ ಶ್ರೀಃ ॥

॥ ಶ್ರೀ ಲಕ್ಷ್ಮೀನರಸಿಂಹಾಯ ನಮಃ ॥

॥ ಶ್ರೀ ಜಗನ್ನಾಥವಿಠ್ಠಲಾಯನಮಃ ॥

# ವಿಭೂತಿ ಸಂಧಿ

## ( ಸಂಧಿ ೫ )

**ಮಂಗಳಾಚರಣೆ**

**ಹರಿಕಥಾಮೃತಸಾರ ಗುರುಗಳ ।**
**ಕರುಣದಿಂದಾಪನಿತು ಪೇಳುವೆ ।**
**ಪರಮ ಭಗವದ್ಭಕ್ತರಿದನಾದರದಿ ಕೇಳುವುದು ॥ ॥ಪ॥**

## ಪದ್ಯ (೧)

**ಮೂಲ :—**

**ಶ್ರೀ ತರುಣಿವಲ್ಲಭನ ಪರಮ ವಿ ।**
**ಭೂತಿರೂಪ ಕಂಡ ಕಂಡ ।**
**ಲ್ಲೀ ತೆರದಿ ಚಿಂತಿಸುತ ಮನದಲಿ ನೋಡು ಸಂಭ್ರಮದಿ ॥**
**ನೀತ ಸಾಧಾರಣ ವಿಶೇಷ ಸ ।**
**ಜಾತಿ ನೈಜಾಹಿತವು ಸಹಜ ವಿ ।**
**ಜಾತಿ ಖಂಡಾ ಖಂಡ ಬಗೆಗಳನರಿತು ಬುಧರಿಂದ ॥ ॥೧॥**

**ಅವತರಿಣಿಕೆ :—**

ಲಕ್ಷ್ಮೀಪತಿಯು ಅತಿಶಯವಾದ ಪ್ರವಿಷ್ಟರೂಪದಿಂದ ಸನ್ನಿಧಾನ ವಿಶೇಷವಾದ ವಿಭೂತಿರೂಪಗಳನ್ನು ಅವು ಎಲ್ಲೆಲ್ಲಿ ಸನ್ನಿಧಾನಾಧಿಷ್ಠಿತವಾಗಿ ಇವೆಯೋ, ಅಲ್ಲೆಲ್ಲಾ ಮನಸ್ಸಿನಲ್ಲಿ ಧ್ಯಾನಿಸುತ್ತಾ ಸಂತೋಷಪಡುತ್ತಿರು. ನೀತ, ಸಾಧಾರಣ, ವಿಶೇಷ, ಸಜಾತಿ, ನೈಜ, ಅಹಿತ, ಸಹಜ, ವಿಜಾತಿ, ಖಂಡ ಮತ್ತು ಅಖಂಡಗಳೆಂಬ ಅಧಿಷ್ಠಾನಗತ ವಿಭೂತಿ ರೂಪಗಳನ್ನು ಜ್ಞಾನಿಗಳಿಂದ ತಿಳಿಯತಕ್ಕದ್ದೆಂದು **ಹೇಳುತ್ತಾರೆ. "ಶ್ರೀ ತರುಣಿವಲ್ಲಭನ"** —ಎಂಬ ಪ್ರಸಕ್ತ ಸಂಧಿಗತ ಈ ಮೊದಲನೆಯ ಪದ್ಯದಿಂದ ॥೧॥

**ಪ್ರತಿಪದಾರ್ಥ :—**

**ಶ್ರೀ ತರುಣಿವಲ್ಲಭನ** = ಕಾಂತಿಸಂಪನ್ನಳಾದ ನಿತ್ಯ ಯೌವನವುಳ್ಳ ಶ್ರೀ ಲಕ್ಷ್ಮೀದೇವಿಯರ ಪತಿಯಾದ ನಾರಾಯಣದೇವರ **ಪರಮ** = ಅತ್ಯಂತ ಶ್ರೇಷ್ಠವಾದ **ವಿಭೂತಿರೂಪ** = ಪ್ರವಿಷ್ಟರೂಪದಿಂದ ಸನ್ನಿಧಾನವಿಶೇಷವಾದ ವಿಭೂತಿ ಸಾಂಕೇತವಾದ ಭಗವದ್ರೂಪಗಳನ್ನು **ಕಂಡಕಂಡಲ್ಲಿ** = ಎಲ್ಲಾದರೂ ಲೋಕವಿಲಕ್ಷಣ ವ್ಯಾಪಾರ ಕಂಡರೆ, ಅಂತಹ ಅಧಿಷ್ಠಾನಗಳಲ್ಲಿ **ಈ ತೆರದಿ** = ಈ ಕೆಳಗೆ ಹೇಳಿರುವ ಕ್ರಮದಲ್ಲಿ **ಚಿಂತಿಸುತ** = ಮನಸ್ಸಿನಲ್ಲಿ ಧ್ಯಾನ ಮಾಡುತ್ತಾ **ಸಂಭ್ರಮದಿ** = ಅತ್ಯಂತ ಮನೋತ್ಸಾಹದಿಂದ **ನೋಡು** = ನೋಡುವವನಾಗು **ನೀತ** = ಎಂದೆಂದಿಗೂ ಕೆಡದ ವಿಭೂತಿ **ಸಾಧಾರಣ** = ತರುವಿಹಗಾದಿಗಳಲ್ಲಿ ವ್ಯಾಪ್ತರೂಪಗಳು **ವಿಶೇಷ** = ಪೃಥು, ಅರ್ಜುನ, ಬಲರಾಮಾದಿಗಳಲ್ಲಿ ಆವಿಷ್ಟವಾದ ಅತಿಶಯ ವಿಭೂತಿ **ಸಜಾತಿ** = ಮನುಷ್ಯ ಗಂಧರ್ವರಾದಿ ಕೃಣಾಂತ ಮುಕ್ತಿ ಯೋಗ್ಯರಲ್ಲಿರುವ ಸಮಾನ ವಿಭೂತಿ **ನೈಜ** = ನೈಜಸ್ಥಿತಿಯಲ್ಲಿ ಅಪರೋಕ್ಷ ಹೊಂದಿದ ದೇವ, ಋಷಿ ವರ್ಗದವರಲ್ಲಿ ಇರುವ ವ್ಯಾಪ್ತರೂಪಗಳು **ಅಹಿತ** = ಜಡಪ್ರತಿಮಾದಿಗಳು, ತೀರ್ಥಕ್ಷೇತ್ರದಲ್ಲಿರುವ ವಿಭೂತಿ ರೂಪಗಳು **ಸಹಜ** = ಸ್ವಯಂವ್ಯಕ್ತರೂಪಗಳು **ವಿಜಾತಿ** = ಬೇರೆ ಬೇರೆ ಜಾತಿಗಳಲ್ಲಿರುವ ಪ್ರವಿಷ್ಟ ರೂಪಗಳು **ಖಂಡ** = ಅಂಶಗತ

ವಿಭೂತಿ **ಅಖಂಡ**=ಸಮಗ್ರರೂಪದಲ್ಲಿರುವ ವಿಭೂತಿ **ಬಗೆಗಳನರಿತು**= ಈ ವಿಧವಾದ ಹತ್ತು ಪ್ರಕಾರವಾದ ವಿಭೂತಿರೂಪಗಳನ್ನು **ಬುಧರಿಂದ**= ಜ್ಞಾನಿಗಳಿಂದ ತಿಳಿದು ಸಂತೋಷಿಸು ॥೧॥

# ವ್ಯಾಖ್ಯಾನಗಳು

## (೧) ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ :—

ಸರ್ವ ಪ್ರಾಣಿಗಳಲ್ಲಿ, ಹಾಂಗೆ ಜಡಗಳಲ್ಲಿ ವಿಭೂತಿರೂಪ ತಿಳಿಯ ಬೇಕೆಂದು ಹೇಳತಾರೆ. ಆ ವಿಭೂತಿ ರೂಪಗಳು ಎಷ್ಟು ಪ್ರಕಾರ ಎಂದರೆ, ದಶಪ್ರಕಾರ, ಹತ್ತು ವಿಧ. ವಿಭೂತಿ ಎಂದರೆ ಐಶ್ವರ್ಯ ಎಂದರ್ಥ. ಬಲ, ಜ್ಞಾನ, ಐಶ್ವರ್ಯ, ಸಾಹಸ, ದಾತೃತ್ವ, ಸೌಂದರ್ಯ ಇವೇ ಮೊದಲಾದದ್ದು. ಲೌಕಿಕ ವಿಲಕ್ಷಣಯಾ ಅತಿಶಯವಾಗಿ ದಾರಲ್ಲಿ ಇರುತ್ತದೆಯೋ ಅದಕ್ಕೆಲ್ಲಾ ವಿಭೂತಿ ಅಂತ ಹೆಸರು. ನೈಜಯೋಗ್ಯತಾ ವಿವಕ್ಷಯಾ ಅತಿಶಯವಾಗಿ ಇರೋಣ. ಇದು ಯಾವತ್ತು ಅಣಿಮಾದಿ ಐಶ್ವರ್ಯಗಳು ಉಳ್ಳ ಶ್ರೀ ಪರಮಾತ್ಮನು ಪಿಶಾಚ ಆವಿಷ್ಟವತ್ ರೂಪಾಂತರದಿಂದ **"ಬ್ರಹ್ಮಣಿ ಬ್ರಹ್ಮರೂಪೋಸೌ ಶಿವರೂಪೋ ಶಿವೇ ಸ್ಥಿತಃ"** —ಎಂಬ ವಚನಾನುಸಾರ ಪ್ರವಿಷ್ಟರೂಪಗಳಿಂದ ಅತಿಶಯ ಸಮಾನ ವಿಭೂತಿಕಾರ್ಯ ಗಳನ್ನು ತಿಳಿಯಬೇಕು ಎಂತ ಹೇಳತಾರೆ.

ಕಾಂತಿಸಂಪನ್ನಳಾದ ನಿತ್ಯಯೌವನಳಾದ ಶ್ರೀಲಕ್ಷ್ಮಿದೇವರಿಗೆ ಪತಿಯಾದ ನಾರಾಯಣ ದೇವರ (ಶ್ರೀ ತರುಣಿವಲ್ಲಭನ), ಅತಿಶಯವಾದ ಪ್ರವಿಷ್ಟ ರೂಪದಿಂದ ಸನ್ನಿಧಾನವಿಶೇಷವಾದ ವಿಭೂತಿ ಸಾಂಕೇತವಾದ ಭಗವದ್ರೂಪ ಗಳನ್ನು ಎಲ್ಲಾದರೂ ಲೋಕವಿಲಕ್ಷಣ ವ್ಯಾಪಾರ ಕಂಡರೆ, ಆ ಕಂಡಂಥಾ

ಅಧಿಷ್ಠಾನಗಳಲ್ಲಿ (ಕಂಡ ಕಂಡಲ್ಲಿ) ಈ ಕೆಳಗೆ ಹೇಳಲ್ಪಡುವ ತೆರದಲ್ಲಿ ವಿಭೂತಿರೂಪಗಳ ತನ್ನಾಮ ತಲ್ಲಕ್ಷಣಗಳ ಮನಸಾ ಅನುಸಂಧಾನದಿಂದ ಚಿಂತಿಸೋವನಾಗು. ಈ ಪ್ರಕಾರ ಸ್ಮರಿಸುತಲಿ ಸಂತೋಷದಿಂದ ಆಯಾ ವಿಭೂತಿರೂಪಗಳ ನಿನ್ನ ಮನಗತ ಬಿಂಬನಲ್ಲಿ ಐಕ್ಯಚಿಂತನೆಮಾಡುತ್ತಾ ಸರ್ವಥಾ ಮನಸ್ಸಿನಿಂದ ನಿನ್ನ ಬಿಂಬನ ಧ್ಯಾನರೂಪದಿಂದ ನೋಡುತಾ ಇರೋವನಾಗು. ಆ ವಿಭೂತಿಗಳು ಎಷ್ಟು ಅಧಿಷ್ಠಾನಗಳು ದಾವವೆಂದರೆ ವಿವರ :—

ಎಂದೆಂದಿಗೂ ಕೆಡದ ವಿಭೂತಿ (ನಿತ–ಇದಕ್ಕೆ ಅಧಿಷ್ಠಾನರು. ರಮಾದೇವೇರು) ನಿತ ವಿಭೂತಿ. ಇದಕ್ಕೆ ನಿತ್ಯ ಸಂಸಾರಿಗಳು ಅಧಿಷ್ಠಾನರು. ಇವರಲ್ಲಿ (೧) ಸ್ವರ್ಗಪ್ರಚುರರು (೨) ಭೂಪ್ರಚುರರು ಮತ್ತು (೩) ನಿರಯ ಪ್ರಚುರರು ಎಂತ ಮೂರು ವಿಧ.

ಅತಿಶಯ ವಿಭೂತಿ (ವಿಶೇಷ). ಇದಕ್ಕೆ ಬ್ರಹ್ಮಾದಿ ಋಜುಗಳು ವ್ಯತಿರಿಕ್ತ ರುದ್ರಾದಿ ದೇವತೆಗಳು, ದೇವಗಂಧರ್ವಾಂತ ಅಧಿಷ್ಠಾನರು.

ಸಮಾನ ವಿಭೂತಿ (ಸಜಾತಿ). ಇದಕ್ಕೆ ಅಧಿಷ್ಠಾನರು–ಮನುಷ್ಯ ಗಂಧರ್ವಾರಭ್ಯ ತೃಣಾಂತ ಮುಕ್ತಿಯೋಗ್ಯರು. ಸಮೀಚೀನ ಜ್ಞಾನ ಜಾತೀಯರು.

ಕೆಡದೆ ನೈಜವಾಗಿ ಇರತಕ್ಕ ವಿಭೂತಿ (ನೈಜ). ಇದಕ್ಕೆ ಅಧಿಷ್ಠಾನರು ಅನಾದಿ ನೈಜಸ್ವರೂಪಗಳು.

ಹಿತರಹಿತ ವಿಭೂತಿ (ಅಹಿತ). ಇದಕ್ಕೆ ಅಧಿಷ್ಠಾನಗಳು ಜಡಪ್ರತಿಮಾಗಳು, ತೀರ್ಥಕ್ಷೇತ್ರಗಳು. ಸಂಗಾತಕೇ ಜನಿಸಿದ್ದು.

ಅನ್ಯಜಾತಿ ವಿಭೂತಿ (ವಿಜಾತಿ). ಇದಕ್ಕೆ ಅಧಿಷ್ಠಾನರು ತಮೋಯೋಗ್ಯಜೀವರು.

ಭಿನ್ನ ಭಿನ್ನ ವಿಭೂತಿ (ಖಂಡ). ಕೆಲವು ಕಾಲ ಇದ್ದು. ಕೆಲವು ಕಾಲ ಇರದೆ ಇರತಕ್ಕದ್ದು. ಇದಕ್ಕೆ ಅಧಿಷ್ಠಾನಗಳು ಅರ್ಜುನಾದಿಗಳು.

ಏಕಾಕಾರ ವಿಭೂತಿ (ಅಖಂಡ). ಇದಕ್ಕೆ ಅಧಿಷ್ಠಾನರು ಬ್ರಹ್ಮಾದಿ ಋಜುಗಳು. ಜ್ಞಾನಿಗಳಿಂದ (ಬುಧರಿಂದ) ಇದರ ವಿವರಗಳನ್ನು ತಿಳಿದುಕೊಂಡು ಅನುಷ್ಠಾನಮಾಡಬೇಕು ಎಂತ ತಾತ್ಪರ್ಯ. ॥೧॥

(೨) "ಭಾವಪ್ರಕಾಶಿಕೆ"-ವ್ಯಾಖ್ಯಾನ :—

ಹಿಂದಿನ ಸಂಧಿಗಳಲ್ಲಿ ಭೋಕ್ತೃ ಭೋಜ್ಯಾದಿಗಳಲ್ಲಿ ಚಿಂತಿಸಬೇಕಾದ ಭಗವದ್ರೂಪಗಳನ್ನು ಹೇಳಿ, ಈ ಸಂಧಿಯಲ್ಲಿ ಪರಮಾತ್ಮನನ್ನು ಧ್ಯಾನಮಾಡಬೇಕಾದರೆ ವಿಶೇಷವಾದ ಭಗವದ್ವಿಭೂತಿರೂಪಗಳನ್ನು ತಿಳಿಯುವುದು ಆವಶ್ಯಕವೆಂದು ವಿಭೂತಿರೂಪಗಳನ್ನು ಹೇಳುತ್ತಾ. ಪ್ರಥಮ ಪದ್ಯದಿಂದ ಈ ಸಂಧಿಯಲ್ಲಿ ಹೇಳುವ ವಿಭೂತಿರೂಪಗಳ ಸಾರಾಂಶವನ್ನು ತಿಳಿಸುವರು. ಸಂಸಾರ ಬಂಧನದಿಂದ ಮುಕ್ತಿಯಾಗಬೇಕಾದರೆ ವಿಭೂತಿರೂಪಗಳನ್ನೇ ತಿಳಿದೇ ಆಗಬೇಕು. ಈ ವಿಷಯದಲ್ಲಿ ಭಗವದ್ಗೀತೆಯ ಹತ್ತನೆಯ ಅಧ್ಯಾಯದ ಕಡೆಯಭಾಗದಲ್ಲಿ ಶ್ರೀ ರಾಘವೇಂದ್ರತೀರ್ಥಕೃತ **ಗೀತಾ ವಿವೃತಿ** ಎಂಬ ವ್ಯಾಖ್ಯಾನದಲ್ಲಿ.

**"ಅಜ್ಞಾತ್ವೈನಂ ಸರ್ವವಿಶೇಷಯುಕ್ತಂ ದೇವಂ ಪರಂ ಕೋವಿಮುಚ್ಯೇತ ಬಂಧನಾತ್"**-ಎಂದು ಹೇಳಿರುವರು. ಹೀಗೆ ಒಂದೊಂದು ವಸ್ತುವಿನಲ್ಲಿಯೂ ವಿಶೇಷಯುಕ್ತವಾದುದು **ಭಗದ್ವಿಭೂತಿರೂಪವೆಂದು** ತಿಳಿಯದೆ ಯಾವ ಪುರುಷನು ತಾನೆ ಬಂಧ ಮುಕ್ತನಾದಾನು? ಎಂಬ ಶ್ರುತಿವಾಕ್ಯಾನುಸಾರವಾಗಿ ವಿಭೂತಿರೂಪಜ್ಞಾನವು ಆವಶ್ಯಕವು ಎಂದು ಮೇಲಿನ ವಾಕ್ಯದ ಅರ್ಥ. ಆದುದರಿಂದ ದಾಸರಾಯರು ವಿಭೂತಿರೂಪಗಳನ್ನು ಈ ಸಂಧಿಯಿಂದ ತಿಳಿಸುತ್ತಾರೆ. ಪ್ರಥಮಪದ್ಯದಿಂದ ವಿಭೂತಿರೂಪಗಳನ್ನು, ತಿಳಿದುಕೊಳ್ಳಬೇಕಾದ ವಿವರಗಳನ್ನೂ, ಅವು ಎಷ್ಟು ಪ್ರಕಾರ ಇವೆ ಎಂಬುದನ್ನು, ವಿಭೂತಿ ಶಬ್ದಾರ್ಥವನ್ನೂ ಸಹ ಸೂಚಿಸುತ್ತಾರೆ.

**ವಿಭೂತಿ ಶಬ್ದಾರ್ಥವೇನು ?** ಗೀತಾ ಹತ್ತನೆಯ ಅಧ್ಯಾಯದ ೧೬ನೆಯ ಶ್ಲೋಕದ **ಗೀತಾವಿವೃತಿ** ಎಂಬ ವ್ಯಾಖ್ಯಾನದಲ್ಲಿ—

**"ವಿಭೂತಯೋನಾಮ ವಿವಿಧತಯಾ ನಾನಾರೂಪತಯಾ, ರಾಮಕೃಷ್ಣಾದಿತಯಾ, ಭೂತಾ ನಿರೂಪಾಣಿ || ಯದ್ವಾಯೇಷಾಂ ವಿಷ್ಣುಸ್ವರೂಪಾಣಾಂ ಸನ್ನಿಧೇರನ್ಯವಸ್ತುಷು ವಿಶಿಷ್ಟತ್ವಂ ಸ್ವಜಾತೇಃ ಸ್ಯಾದ್ವಿಭೂತ್ಯಾಖ್ಯಾನಿತಾನಿತು ||"**

ಅಂದರೆ, ವಿಭೂತಿ, ವಿವಿಧತಯಾ, ವಿಭೂತಯಃ, ನಾನಾವಿಧ ವಾಗಿ ರಾಮಕೃಷ್ಣಾದಿರೂಪಗಳನ್ನು ಸ್ವೀಕರಿಸುವುದಕ್ಕೆ "ವಿಭೂತಿ" ಎಂದು ಹೆಸರು. ಸ್ವಜಾತೀಯವಸ್ತುಗಳಲ್ಲಿ ಒಂದು ವಸ್ತುವಿಗೆ ಮಾತ್ರ ಆಧಿಕ್ಯ ಬಂದಿದ್ದರೆ ಅದು ವಿಷ್ಣುವಿನ ವಿಭೂತಿ ಎಂದು ತಿಳಿಯಬೇಕು. **"ಮನು ಷ್ಯಾಂಚ ಭೂಪತಿಃ"** ಮನುಷ್ಯರೆಲ್ಲರೂ ಸಮರಾಗಿರಲು, ರಾಜರ ಕೈ ಕೆಳಗೆ ಮಿಗಲಾದವರು ಇವರು ಇರಲು **ಕಾರಣ**ವೇನು ? **"ನಾ ವಿಷ್ಣುಃ ಪೃಥಿವೀ ಪತಿಃ"** ಎಂಬ ಪ್ರಮಾಣದಿಂದ ವಿಷ್ಣುವಿನ ಅಂಶ ಇದ್ದ **ಹೊರ**ತು, ಅವನು ಪೃಥಿವೀಪತಿಯಾಗಲಿಲ್ಲವೆಂದು ತಿಳಿಯಬೇಕು. ಹೀಗೆ ಒಂದೇ ಜಾತಿ ವಸ್ತುಗಳಲ್ಲಿ ವಿಶೇಷಸಾಮರ್ಥ್ಯ **ಕಾ**ಣುವುದನ್ನು ವಿಭೂತಿ ಎಂದು ತಿಳಿಯಬೇಕೆಂದು ಹೇಳಿರುವರು. ಇಂತಹ ವಿಭೂತಿಗಳಲ್ಲಿ ೧೦ ವಿಧಗಳುಂಟು. ಸಾಮಾನ್ಯವಾಗಿ ಸ್ವಭಾವದಿಂದಲೂ, ಸ್ವಯಂವ್ಯಕ್ತವಾಗಿ ಭಗವದ್ರೂಪಗಳೆಂದು ಪ್ರಸಿದ್ಧಿಪಡೆದ ಸಾಲಿಗ್ರಾಮಗಳು **ನೀತವಿಭೂತಿ** ಎಂದು ಹೇಳಬೇಕು. **ಸಾಧಾರಣ ವಿಭೂತಿಗಳು** ಎಂದರೆ, ಬ್ರಾಹ್ಮಣಾದಿ ಗಳಲ್ಲಿರುವ ಭಗವದ್ರೂಪಗಳನ್ನು **ವಿಶೇಷ ವಿಭೂತಿ** ಎಂದು ಭಾವಿಸಬೇಕು. **"ದೇವಾನಾಮಸ್ಮಿವಾಸವಃ ರುದ್ರಾಣಾಂ ಶಂಕರಶ್ಚಾಸ್ಮಿ"** —ಎಂಬ ಗೀತಾವಾಕ್ಯಗಳಿಂದ ದೇವತೆಗಳಲ್ಲಿ ದೇವೇಂದ್ರನನ್ನೂ, ಏಕಾದಶರುದ್ರಗಣ ದಲ್ಲಿ ಶಂಕರನನ್ನೂ ನನ್ನ ವಿಭೂತಿಯನ್ನಾಗಿ ತಿಳಿ –ಎಂದು ಹೇಳಿರುವ ವಿಭೂತಿಗಳು **ಸಜಾತೀಯ**ವೆಂದು ತಿಳಿಯಬೇಕು. ಅಂದರೆ, ದೇವತೆ ಗಳೆಲ್ಲರೂ ಒಂದೇ ಜಾತಿಯವರಾದರೂ, ಅವರಲ್ಲಿ ಇಂದ್ರನನ್ನೂ, ರುದ್ರರೆಲ್ಲರು ಸಜಾತೀಯರಾದರೂ ಅವರಲ್ಲಿ ಶಂಕರನನ್ನೂ ವಿಭೂತಿ ಯನ್ನಾಗಿ ಹೇಳಿದುದರಿಂದ, ಇದಕ್ಕೆ **ಸಜಾತಿವಿಭೂತಿ** ಎಂದು ಹೆಸರಾ

ಯಿತು. **ನೈಜವೆಂಬುದು** ಪರಮಾತ್ಮನ ಸ್ವಾಂಶವಾದ ರಾಮಕೃಷ್ಣಾದಿ ರೂಪ ಗಳು. **"ಮೇರುಃ ಶಿಖರಿಣಾಮಹಂ ಸ್ಥಾವಿರಾಣಾಂ ಹಿಮಾಲಯಃ"** —ಎಂಬಂತೆ ಶಿಖರವುಳ್ಳ ಪರ್ವತಗಳಲ್ಲಿ ಮೇರುಪರ್ವತವನ್ನೂ, ಸ್ಥಾವಿರ ಪದಾರ್ಥಗಳಲ್ಲಿ ಹಿಮಾಲಯವನ್ನೂ ವಿಭೂತಿಯನ್ನಾಗಿ ತಿಳಿಯಬೇಕೆಂದು ಹೇಳಿರುವರು. ಇಂತಹ ಸ್ಥಾವಿರದಲ್ಲಿ ವಿಭೂತಿಯನ್ನು ಚಿಂತಿಸುವುದಕ್ಕೆ **ಅಹಿತ ವಿಭೂತಿ** ಎಂದು ಹೆಸರು. ಚಲಾಚಲಪ್ರತಿಮಾದಿಗಳಲ್ಲಿ **ಚಿಂತಿಸುವ** ವಿಭೂತಿರೂಪಗಳಿಗೆ **ವಿಜಾತಿ ವಿಭೂತಿ** ಅಂದರೆ, **"ನಕ್ಷತ್ರಾಣಾಮಹಂ ಶಶೀ" "ಅಶ್ವತ್ಥಃ ಸರ್ವವೃಕ್ಷಾಣಾಂ. ಮೃಗಾಣಾಂ ಮೃಗೇಂದ್ರೋಽಹಂ"** —ಇತ್ಯಾದಿ ವಾಕ್ಯಗಳಲ್ಲಿ ನಕ್ಷತ್ರಗಳಿಗೂ ಚಂದ್ರನಿಗೂ ಪರಸ್ಪರ ವಿಜಾತಿಯೇ ಹೊರತು ಸಜಾತಿ ಇಲ್ಲ. ಹಾಗೆ ವೃಕ್ಷಗಳಲ್ಲಿ ಅಶ್ವತ್ಥವೆಂತಲೂ, ಮೃಗಾದಿ ಗಳಲ್ಲಿ ಸಿಂಹವೆಂತಲೂ ವಿಭೂತಿಯನ್ನು ಹೇಳಿರುವರು. ವೃಕ್ಷಗಳಲ್ಲಿ ಬೇವು, ಮಾವು ಮೊದಲಾದ ಅನೇಕ ಜಾತಿಗಳ ಪೈಕಿ ಅಶ್ವತ್ಥವೃಕ್ಷದಲ್ಲಿ ವಿಭೂತಿ ಯನ್ನು ಹೇಳಿರುವರು. ಅನೇಕಜಾತಿ ಮೃಗಗಳಲ್ಲಿ ಸಿಂಹವನ್ನು ವಿಭೂತಿ ಎಂದು ಹೇಳಿರುವರು, ಹೀಗೆ ಹೇಳಿರುವ ವಿಭೂತಿಗಳಿಗೆ **ವಿಜಾತಿ ವಿಭೂತಿ** ಎಂದು ಹೆಸರು. ಈ ಪ್ರಕಾರ ಒಂದೊಂದು ಜಾತಿಯಲ್ಲಿಯೂ ಹೆಚ್ಚು ಮಹಿಮೆ ಉಳ್ಳ ವಸ್ತುವಿನಲ್ಲಿ ಪ್ರತ್ಯೇಕ ಪ್ರತ್ಯೇಕ ಭಗವದ್ರೂಪಗಳನ್ನು ತಿಳಿಯುವುದೇ **ಖಂಡವಿಭೂತಿ** ಎನಿಸುವುದು.

**"ಯದ್ಯದ್ವಿಭೂತಿಮತ್ಸತ್ವಂ ಶ್ರೀಮದೂರ್ಜಿತಮೇವವಾ ।**
**ತತ್ತದೇವಾಗಚ್ಛತ್ವಂ ಮಮತೇಜೋಂಶ ಸಂಭವಮ್" ॥**

ಎಂದು **ಗೀತಾವಾಕ್ಯದಂತೆ** (ಅಧ್ಯಾಯ-೧೦, ಶ್ಲೋಕ-೪೧)

"ಎಲೈ ಅರ್ಜುನ ! ಯಾವ ಯಾವ ಪಧಾರ್ಥಗಳು ಸಜಾತಿ ವಿಜಾತಿ ಗಳಲ್ಲಿ, ಐಶ್ವರ್ಯಾದಿಗಳಿಂದಲೂ, ಕಾಂತಿಬಲಗಳಿಂದಲೂ ಹೆಚ್ಚಾಗಿ ಕಂಡು ಬರುವುವೋ, ಅವುಗಳೆಲ್ಲಾ ನನ್ನ ತೇಜೋಂಶವೆಂದು ತಿಳಿ" ಎಂದು ಹೇಳಿರುವರು. ಹೀಗೆ ಪ್ರತ್ಯೇಕ ಪ್ರತ್ಯೇಕ ತಿಳಿಯುವದೇ ಖಂಡ ವಿಭೂತಿ ಗಳು.

**ಅಖಂಡವಿಭೂತಿ** ಎಂದರೆ—

**"ಅಥವಾ ಬಹು ನೈತೇನ ಕಿಂ ಜ್ಞಾನೇನ ತವಾರ್ಜುನ ।**
**ವಿಷ್ಟ ಬ್ಯಾಹ್ಯಮಿದಂ ಕೃತ್ಸ್ನಮೇಕಾಂಶೇನ ಸ್ಥಿತೋ ಜಗತ್ "॥**

ಎಂಬ **ಗೀತಾವಚನದಂತೆ** (ಅಧ್ಯಾಯ-೧೦, ಶ್ಲೋಕ ೪೨)

"ಎಲೈ ಅರ್ಜುನ! ಮೇಲೆ ಹೇಳಿದಂತೆ ಖಂಡರೂಪಗಳನ್ನು ತಿಳಿದು ನಿನಗೆ ಆಗುವುದೇನು ? ಮುಖ್ಯವಾದಂಶವನ್ನು ತಿಳಿ. ನನಗಿರುವ ರೂಪಗಳ ಅನಂತಾಂಶಗಳಪ್ಪೈಕಿ ಒಂದಂಶದಿಂದ ಈ ಜಗತ್ತಿನ ಎಲ್ಲಾ ಸ್ಥಳಗಳಲ್ಲಿಯೂ ವ್ಯಾಪ್ತನಾಗಿರುವೆನೆಂದು ತಿಳಿ". ಒಂದೇ ಅಂಶದಿಂದ ಸರ್ವತ್ರ ವ್ಯಾಪ್ತರೂಪವನ್ನೂ ಚಿಂತಿಸುವುದು. **ಅಖಂಡವಿಭೂತಿ** ಎಂದು ತಿಳಿಯಬೇಕು. ಹೀಗೆ ೧೦ ಪ್ರಕಾರ ವಿಭೂತಿಗಳನ್ನು ಕಂಡಕಂಡಲ್ಲಿ ಸಂಭ್ರಮದಿಂದ ಮನಸ್ಸಿನಲ್ಲಿ ತಿಳಿದು ಚಿಂತಿಸು ಎಂದು ದಾಸರಾಯರು ಒಂದೇ ಪದ್ಯದಿಂದ ವಿಭೂತಿಯ ಸಾರವನ್ನೆಲ್ಲಾ ಹೇಳಿರುವರು. ಗೀತೆಯಲ್ಲಾದರೋ, ಅರ್ಜುನನಿಗೆ ಕಡೆಯ ಶ್ಲೋಕದಿಂದ- "ಖಂಡರೂಪಗಳುಳ್ಳ ವಿಭೂತಿಯನ್ನು ತಿಳಿದು ನಿನಗಾಗವುದೇನು?" ಎಂದು ಅಖಂಡರೂಪೋಪಾಸನೆಯನ್ನು ಹೇಳಿದುದನ್ನು ನೋಡಿದರೆ, ಗೀತೆಯಲ್ಲಿ ಹೇಳಿದ ವಿಭೂತಿ ಅಧ್ಯಾಯವೂ ದಾಸರಾಯರು ಹೇಳಿದ ವಿಭೂತಿಸಂಧಿಯೂ ಕೂಡ ವ್ಯರ್ಥವೆಂದು ತೋರುತ್ತದೆ.

ಆದರೆ, ಇದಕ್ಕೆ ಪರಿಹಾರ :— **ಗೀತಾವಿವೃತಿಯಲ್ಲಿ**

**"ನತ್ವೈತ ಜ್ಞಾನಾದೇವ ಮೋಕ್ಷಸಿದ್ಧಾ ಪ್ರಾಗುಕ್ತ ಪರಿಚ್ಛಿನ್ನ ವಿಭೂತಿರೂಪಾಣಾಂ ಜ್ಞಾನಂ ವ್ಯರ್ಥೇಮಿತಿ ತದುಕ್ತಿ ವ್ಯರ್ಥೇತಿಶಕ್ಯಾಮ್ ।**
**ಅಜ್ಞಾತ್ವೈನಂ.ಇತಿ ಶ್ರುತ್ಯಾಪ್ರಾಗುಕ್ತಜ್ಞಾನಸ್ಯಾವಶ್ಯಕತ್ವಾತ್ ।**
**ಮಹಾಫಲಾಧಿಕಾರಿತ್ವಾತ್ತವೋ ಭಯಜ್ಞಾನಮವಶ್ಯಕಂ ।**
**ನ ವಿಶೇಷಜ್ಞಾನಮಾತ್ರೇಣ ಅಲಮಿತಿ ತನ್ವೈತೇನ ಜ್ಞಾತೇನ ಕಿಮಿತಿಭಾವೇನ ತವೇದ್ಯುಕ್ತಮ್"** ॥

ಅಂದರೆ, ಈಗ ಹೇಳಿದ ಅಖಂಡರೂಪೋಪಾಸನೆಯಿಂದಲೇ ಮೋಕ್ಷ ಪ್ರಾಪ್ತಿಯು ಸಿದ್ಧವಾದರೆ, ಮೇಲೆ ಹೇಳಿದ ಖಂಡರೂಪೋಪಾಸನೆಯಿಂದೇನು? ಈ ವರೆವಿಗೂ ಹೇಳಿದ ವಿಭೂತಿ ಅಧ್ಯಾಯವು ವ್ಯರ್ಥವಾತೆಂದು ಶಂಕಾ ಮಾಡಹಾರದು. "ಅಜ್ಞಾತ್ವೈನಂ"- ಎಂಬ ಶ್ರುತಿಯಲ್ಲಿ ಖಂಡರೂಪೋಪಾಸನೆ ಮಾಡದ ಹೊರತು ಮುಕ್ತಿಯಾಗುವುದಿಲ್ಲವೆಂದು ಹೇಳಿರುವರು. ಆದಾದರಿಂದ ಖಂಡರೂಪಾಸನೆಯೂ ಅವಶ್ಯಕವೇ. ನೀನು ಮಹಾ ಫಲಾಧಿಕಾರಿಯಾದುದರಿಂದ ನಿನಗೆ ಖಂಡಾಖಂಡರೂಪಗಳೆರಡರ ಜ್ಞಾನವೂ ಆವಶ್ಯಕವೆಂದು ಹೇಳಿದುದೇ ಹೊರತು, ಆ ಜ್ಞಾನ ಅನಾವಶ್ಯಕವೆಂಬ ಅರ್ಥದಿಂದ ಹೇಳಲಿಲ್ಲಿ—ಎಂಬುದು ಕೃಷ್ಣನ ಅಭಿಪ್ರಾಯವೆಂದು ಮೇಲಿನ ವಾಕ್ಯದ ಅರ್ಥ. ಆದ್ದರಿಂದ ಉತ್ತಮಾಧಿಕಾರಿಗಳಿಗೆ ಖಂಡಾಖಂಡರೂಗಗಳೆರಡರ ಜ್ಞಾನವು ಆವಶ್ಯವೆಂದು ಹೇಳಿದುದೇ ಹೊರತು, ಆ ಜ್ಞಾನ ಅನಾವಶ್ಯವೆಂಬ ಅರ್ಥದಿಂದ ಹೇಳಲಿಲ್ಲ—ಎಂಬುದು ಕೃಷ್ಣನ ಅಭಿಪ್ರಾಯವೆಂದು ಮೇಲಿನ ವಾಕ್ಯದ ಅರ್ಥ. ಆದ್ದರಿಂದ ಉತ್ತಮಾಧಿಕಾರಿಗಳಿಗೆ ಖಂಡಾಖಂಡರೂಪಗಳೆರಡರ ಜ್ಞಾನವು ಅವಶ್ಯಕವೆಂತಲೂ, ಸಾಮಾನ್ಯಾಧಿಕಾರಿಗಳಿಗೆ ಖಂಡರೂಪೋಪಾಸನೆ ಒಂದಾದರೂ ಅತ್ಯಾವಶ್ಯಕವೆಂತಲೂ ಭಾವಿಸಿ, ಹತ್ತು ವಿಧ ಸ್ಥಾನಗಳಲ್ಲಿ ತುಂಬಿರುವ ಭಗವದ್ವಿಭೂತಿಯನ್ನು ಚಿಂತಿಸೆಂದು ಮೊದಲಿನ ಪದ್ಯದಿಂದ ಹೇಳಿ, ಮುಂದಿನ ಪದ್ಯಗಳಿಂದ ಖಂಡರೂಪಗಳನ್ನು ತೋರಿಸುತ್ತಾರೆ ॥೧॥

(೩) "ಭಾವದರ್ಪಣಟೀಕಾ" ವ್ಯಾಖ್ಯಾನ :

**"ಮಮ ಯೋ ವೇತ್ತಿ ತತ್ವತಃ ಸೋsವಿಕಂಪೇನ ಯೋಗೇನ ಯುಜ್ಯತೇ ನಾತ್ರಸಂಶಯಃ"**

—ಎಂಬುದಾಗಿ ಶ್ರೀಕೃಷ್ಣೋಕ್ತಿ ಇರೋಣವರಿಂದ, ದಶವಿಧ ವಿಭೂತಿರೂಪ ವಿವರ ಮಾಡುತ್ತಾರೆ— **"ಶ್ರೀತರುಣೀ"** —ಎಂಬ ಪದ್ಯದಿಂದ.

(೧) ನೀತಾ (೨) ಸಾಧಾರಣ (೩) ವಿಶೇಷ (೪) ಸಜಾತೀಯ

(೫) ನೈಜ (೬) ಆಹಿತ (೭) ಸಹಜ (೮) ವಿಜಾತೀಯ (೯) ಖಂಡ ಮತ್ತು (೧೦) ಅಖಂಡ ಎಂದು ದಶವಿಧ ವಿಭೂತಿಗಳು.

(೧) "ನೀತ" —ಎಂದರೆ, ಸಹೃದಯದ ದೇಶೆಯಿಂದಲೇ ಆಗಲೀ ಅಥವಾ ಸೂರ್ಯ, ಚಂದ್ರ, ಅಗ್ನಿಮಂಡಲ ದೇಶೆಯಿಂದಲೇ ಆಗಲಿ ಪ್ರತಿಮೆಯಲ್ಲಿ ಆವಾಹನ ಮಾಡೋಣವೇ "ನೀತ" -ಎಂದು ಹೇಳಿಕೊಳ್ಳಲ್ಪಡುತ್ತದೆ.

**"ನೀಞ್ ಪ್ರಾಪಣೇ"** ಎಂಬ ಧಾತು ಪರ್ಯಾಲೋಚನೆಯಿಂದ ತಪ್ರತ್ಯಯ ಸೇರಿ "ನೀತ" ಎನಿಸಿಕೊಂಡಿತು.

(೨) "ಸಾಧಾರಣ" ವೆಂದರೆ- ದೇಶಕಾಲಾದ್ಯನಪೇಕ್ಷಯಾ ಸಮಸ್ತ ಜಡ ಚೇತನಗಳಲ್ಲಿ ಇರೋ ರೂಪ ಎಂಬರ್ಥ.

**"ಸಮಸ್ಸರ್ವೇಷು ಭೂತೇಷು"** —ಎಂಬ ಶ್ರೀ ಭಗವದೋಕ್ತಿ ಇರುತ್ತದೆ.

(೩) "ವಿಶೇಷ"-ಎಂದರೆ, ಪೃಥು, ಲಕ್ಷ್ಮಣ, ಹಲಧರಾರ್ಜುನಾದಿಗಳಲ್ಲಿ ಕೆಲವುಕಾಲ ಹೆಚ್ಚಾದ ಆವೇಶ ಇರೋಣ ಯಾವುದೋ ಅದೇ "ವಿಶೇಷ" ಎಂಬರ್ಥ.

**ಉಕ್ತಂಚ ಶ್ರೀಮನ್ಮಹಾಭಾರತ ತಾತ್ಪರ್ಯ ನಿರ್ಣಯೇ :—**
**"ನರಃ ಫಲ್ಗುಣ ಇತ್ಯಾದ್ಯಾ ವಿಶೇಷಾವೇಶಿತೋ ಹರೇರಿತಿ"**

(೪) "ಸಜಾತೀಯ" ಎಂದರೆ **"ಪೂರ್ಣಮದಃ ಪೂರ್ಣಮಿದಂ ಪೂರ್ಣಾತ್ಪೂರ್ಣಮುದಚ್ಯತೇ"**- ಎಂಬ ಶ್ರುತಿ ರೀತ್ಯಾ ಮತ್ತು **"ವಿಷ್ಣೋಸ್ಸರ್ವೈರ್ಗುಣೈಃ ಪೂರ್ತಿರಪಿ ಮತ್ಸ್ಯಾದಿರೂಪಿಣಃ"** ಎಂಬ ಬೃಹದ್ಭಾಷ್ಯ ದಿಂದಲೂ ಮತ್ಸ್ಯಾದಿರೂಪಗಳೆಂದು ತಿಳಿಯತಕ್ಕದ್ದು.

(೫) "ನೈಜ" -ಎಂದರೆ, ಜ್ಞಾನಾನಂದಾದಿ ಗುಣಗಳೆಂದರ್ಥ.

**"ನಿಜೈಶ್ವರ್ಯಯುತಾಸ್ಸರ್ವೇ ಇತಿ"**

(೫) "ಆಹಿತ"–ಎಂದರೆ, ಜ್ಞಾನಿಗತಭಗವದ್ರೂಪ ಎಂದರ್ಥ.

**"ಜ್ಞಾನ್ಯಾಹಿತಾನಿ ಜಾನೀಹಿ ಸರ್ವತ್ರ ಚತುರಾನನೇತಿ ವ್ಯಾಪ್ತ ರಹಸ್ಯೋಕ್ತೇಃ"**

(೬) "ಸಹಜ" ಎಂದರೆ, ಕಾರಣದೆಶೆಯಿಂದ ಕಾರ್ಯ. ತದುಕ್ತಂ– **"ಕಾರ್ಯಾಣ್ಯನುಪ್ರವಿಷ್ಟ ಸನ್ ಪ್ರಥಮಂ ತತ್ರ ದೃಶ್ಯತೇ ಪ್ರವೃತ್ತ ತಾತ್ಪರ್ಯೇ"**

(೭) "ಸಹಜಾತೀಯ"–ಎಂದರೆ ಒಂದೇ ಜಾತಿಗೆ ಸೇರಿದ್ದು.

(೮) "ವಿಜಾತೀಯ" –ಎಂದರೆ, ಭಿನ್ನರಾದ ಬ್ರಹ್ಮರುದ್ರಾದಿಗಳಲ್ಲಿ ತತ್ತನ್ನಾಮದಿಂದ ಅಂತರ್ಯಾಮಿಯಾಗಿರೋ ರೂಪಗಳು ಎಂದರ್ಥ.

**"ತದುಕ್ತೇ– ಬ್ರಹ್ಮಾಣಿ ಬ್ರಹ್ಮರೂಪೋಸೌ ಶಿವರೂಪೀ ಶಿವೇ"**

**ಇತಿ ದಶಮತಾತ್ಪರ್ಯೇ**

(೯) "ಖಂಡ"– ಎಂದರೆ ಒಂದೊಂದಗಳಿನೊಳು ಅನಂತಾಂಶದಿಂದ ಖಂಡನೆಂದೆನಿಸಿ-ಎಂತ ಭೋಜನ ಸಂಧಿಯಲ್ಲಿ ಉಕ್ತವಾದ ಪ್ರಯುಕ್ತ ಅದೇವೇ ಎಂಬರ್ಥ.

(೧೦) "ಅಖಂಡ"-ಎಂದರೆ, ಶಾಲಗ್ರಾಮಗಳಲ್ಲಿ ನಿತ್ಯವಿಭೂತಿರೂಪ ಸನ್ನಿಧಾನ ಇದ್ದ ಪ್ರಯುಕ್ತ ಅದಕ್ಕೆ ಅಖಂಡವೆಂದರ್ಥ.

**"ವಿಷ್ಣೋರ್ವಿಭೂತಿರೂಪಸ್ಯ ಜ್ಞೇಯಂ ಸಾಸಿಧ್ಯಮತ್ರಹಿ"**

**-ಎಂತ ವಿಷ್ಣುಪುರಾಣಸಿದ್ಧ.**

ಇದಲ್ಲದೇ ಸುಳಾದಿಮಾತು :—

**ನಿರುತ ಅಖಂಡರೂಪಸ್ಥಪೇಳುವೆ ಕೇಳು ನಿತ್ಯಾ ।**
**ಸಿರಿ ಶಾಲಗ್ರಾಮದಲ್ಲಿ ಪ್ರಕಟಿಸಿ ಪೂಜಿಸಾಗೆ ।**
**ಪೂರೆವಾನು ಪ್ರತಿದಿನ ನಸುನಗುತ ॥**

—ಎಂದು ವಿಜಯದಾಸರಾಜರ ಉಕ್ತಿ ಇರೋದರಿಂದ ಸಿದ್ಧ.

ಏತಾದೃಶ ದಶವಿಭೂತಿರೂಪಗಳನ್ನು ತಿಳಿದು, ಉಪಾಸನೆ ಮಾಡತಕ್ಕ ಪುರುಷರಿಗೆ ಶ್ರೀಹರಿಯು ಪರಮಪ್ರೇಮದಿಂದ ಅನುಗ್ರಹಮಾಡುವನೆಂಬ ಭಾವ ॥೧॥

## (೪) ಜಮುಖಂಡಿ ವಾದಿರಾಜಾಚಾರ್ಯರ ವ್ಯಾಖ್ಯಾನ— (ಸಂಸ್ಕೃತಮೂಲ):—

ಉಕ್ತಂಚ ದಶಮಗೀತಾಯಾಂ:– "ಯಾಭಿರ್ವಿಭೂತಿಭಿರ್ಲೋಕಾನ್ಸ್ತ್ವಂ ವ್ಯಾಪ್ಯತಿಷ್ಠಸಿ– "ಇತಿ ಉಕ್ತಂಚ ಸೂತ್ರಕಾರೈಃ ॥ "ಓಂ ಅಂತರ್ಯಾಮ್ಯಧಿ ದೈವಾದಿಷು ತದ್ಧರ್ಮೋಪದೇಶಾದಿತಿ ॥ ನಿಷ್ಪಂಕಜ್ಞಾನಯೋಗಸಾಧನ ಪ್ರಯುಕ್ತಾ ವಿಭೂತಿ ಜ್ಞಾನವಮ್ ॥

ತದ್ವ್ಯಾವೇಶಾನ್ ತಥಾ ಸಮ್ಯಜ್ಞಾತ್ವಾ ಮುಕ್ತಿಃ ನಚಾನ್ಯಥಾ । ಇತಿ ಆಚಾರ್ಯವಾಚಂ ಅನುಚಿಂತಯಂತಃ ಗುರುವಃ ಅವಿಸ್ಮೃತ ಗುರವಃ ವಿಭೂತಿಸಂಧಿಂ ಉಪಕ್ರಮಂತಿ ॥ ವಿಹಿಕಾದಿ ವಿಭೂತಿಂ ಇಚ್ಛದ್ಭಿಃ ತದ್ರೂಪಮೇವ ಉಪಾಸ್ಯಮ್ ॥ ಕಾಮ್ಯಾಃ ॥ ಯಸ್ಯ ಯಸ್ಯಹಿ ಯು ಕಾಮಃ ॥ ತಾದೃಶಾನಾಂ ಗುಣಾನಾಂ ಚ ಇತ್ಯಪಿ ಸತ್ಪಾಚ್ಛ ತದರ್ಥಾಂ ವಿಭೂತಿ ಸಂಧ್ಯಾರಂಭಃ ॥ ಆತ್ಮೋಗುರೂನ್ ಸ್ಮರಂತಿ ॥ "ಸ್ವೇಷ್ಟಂ ತುಷ್ಟಾತ್ ಸಾಧನೀಯಂ" ॥ ದುಷ್ಟಾತ್ ನ ॥ ಅತಏವ ಆಹ– "ಅಹ ದೇವೋರವೋತ್ಸಂಗ ವಿಲಸತ್ಪಾದ ಪಲ್ಲವಃ" ಇತಿ ॥ಅತ ಏವ ರಮಣ್ಯಾ ವಿಹರದ್ರಾಜಾವೇಃ ಅರ್ಥಸಾಧನಕಾಃ ಏವ ಪ್ರಾಯಃ ದರೀ ದೃಶ್ಯಂತೇ ॥ ಇತಿ ಆಹ - **"ಶ್ರೀ ತರುಣವಲ್ಲಭೇತಿ"**

ವಕ್ಷ್ಯಮಾಣ ಕ್ರಮೇಣ ॥ **ನೀತೇತಿ** ॥ ನೀತಂ ಸಾಧಾರಣಂ ವಿಶೇಷಂ ಸಜಾತೀಯಮ್ ನೈಜಮ್ ಆಹಿತಮ್ ಸಹಜಮ್ ವಿಜಾತೀಯಮ್ ಖಂಡಮ್ ಅಖಂಡಮ್ ॥ **ಬುಧೈಃ ಇತಿ** । ಗೀತಾ ತಾತ್ಪರ್ಯಾದಿ ನಿಪುಣೈಃ ॥

ನನು ಯತ್ರ "ನಾಸ್ತಿ" ಇತಿ ಕ್ರಮೇಣ ವಿಭೂತಿ ಪದಾರ್ಥಾದೀ ವಿರಹೇ ತದ್ವಿಶೇಷದೀ ಬೋಧನಂ ನ ಚೇತಸಿ ಚಕಾಸ್ತಿ ಪ್ರತಿಪತ್ತೃಣಾಂ । ಅತಃ ತತ್ ನಿರ್ವಕ್ತವ್ಯಂ ಚೇತ್ ॥ ಉಚ್ಯತೇ ॥ ವಿಶಿಷ್ಟ ಭವನಂ ವಿಭೂತಿಃ ॥ ಮಹತ್ವಂ ವಿವಿಧ ಭವನಂ ವಾ । ಏವಂಚ ಉಭಯಂ ॥ "ಕೇಷು ಕೇಷು ಚ ಭಾವೇಷು" । ಇತ್ಯುಕ್ತತ್ವಾತ್ ಬ್ರಹ್ಮಾದಿ ಜೀವೇಭ್ಯಃ ಅನ್ಯದೇವ ವಿಭೂತಿ ರೂಪಮ್ । ಮಹತ್ವ ದಾತೃ ಅನ್ಯಗಮ್ । ಸ್ವಸ್ಯೈವ ವಿವಿಧ ಭವನಂ ರಾಮಾದಿ । ಪಾಠಕ್ರಮಾದಿತಿ ನ್ಯಾಯೇನಾಹುಃ "ದ್ವಿವಿಧಮಿತಿ ॥ ದ್ವಿವಿಧಂ ವೈಭವಂ ರೂಪಂ ಪ್ರತ್ಯಕ್ಷಂ ಚ ತಿರೋಹಿತಮ್ ॥ ಕಪಿಲ ವ್ಯಾಸ ಕೃಷ್ಣಾದ್ಯಂ ಪ್ರತ್ಯಕ್ಷಂ ವೈಭವಂ ಸ್ಮೃತಮ್ ॥ ಭಿನ್ನಂ ಬ್ರಹ್ಮಾದಿ ಜೀವೇಭ್ಯಃ ಜಡೇಭ್ಯಶ್ಚಾಪಿ ತದ್ಗತಮ್॥ ಸ್ವಜಾತ್ಯಾಧಿಕ್ಯಗಂ ತೇಷಾಂ ತತ್ ತಿರೋಹಿತ ವೈಭವಮ್ ॥ ಇತ್ಯಾದಿ ಚೇತಿ॥ ಸ್ವಾಭಿನ್ನತ್ವೇಪಿ ಮೂಲಾತ್ ಪ್ರಥಙ್ ನಯನಾತ್ ನೀತಃ ಮತ್ಸ್ಯಾದಿಃ ॥ ಸಾಧಾರಣಂ ಸರ್ವಜೀವ ಜಡ ಸಾಧಾರಣಂ ನಮ್ ॥೨॥ ವಿಶೇಷಂ ಬ್ರಹ್ಮಾದಿದಂ ॥೩॥ ಸಜಾತಿಯಂ ಶಕ್ರ— ಉಶನಾ—ಅರ್ಜುನಾದ್ಯಂತರ್ವರ್ತಿ ॥೪॥ ನೈಜಂ ಶಾಲಗ್ರಾಮಗಂ ॥೫॥ ಆಹಿತಂಸ್ವಯಂವ್ಯಕ್ತಂ ॥೬॥ ಸಹಜಂ ಲಕ್ಷಣಾಖಿಲಾದಿಗಮ್ ॥೭॥ ವಿಜಾತಿ ರೂಪಂ ಶಶಿಗಮ್ ॥೮॥ ಖಂಡ ಬಾಲಚಂದ್ರಗಮ್ ॥೯॥ ಅಖಂಡಂ ಸೇನಾವನಾದಿಗಮ್ ॥೧೦॥ ತತ್ರಮಾನಮ್ ॥

ನಾನಾ ಪ್ರಾಣ್ಯಾದಿ ಸಂಸ್ಥಶ್ಚ ವಿಭೂತಿರಿತಿ ಶಬ್ದಿತಃ॥ ಶಶ್ಯಾದಿಷು ವಿಜಾತೀಯ ಸ್ವಾಮ್ಯಾದಃ ಸಾರದಃ ಕ್ವಚಿತ್ ॥ ಶರ್ವಾದಿಷು ಸಜಾತೀಯ ಶ್ರೈಷ್ಠ್ಯದತ್ವೇನ ಸಂಸ್ಥಿತಃ ॥ ಶಕ್ರೋಶನಾರ್ಜುನಾ ದ್ಯೈಷು ಸಜಾತೀಯೈಕ ದೇಶತಃ ॥ ಇತಿ ವಿಷ್ಣುರಹಸ್ಯೇ ॥ "ಶಾಲಿಗ್ರಾಮ ಶಿಲಾಯಾಂತು ಪೂಜನಂ ಮಮ ಸಮ್ಮತಮ್ ॥ ಸಾನ್ನಿಧ್ಯಂ ಮಮ ನಾವ್ಯೇತಿ ಸರ್ವದಾ ಮಮ

ಸನ್ನಿಧಿಃ" ॥ ಇತಿ ॥ ತಸ್ಯಾಃ ಸಹಜ ಮೂರ್ತಿತ್ವಾತ್ ಶ್ವಪಾಕ ಸ್ಪರ್ಶನಾದಿನಾ ಇತಿ ಚ ॥ ಆವಾಹನಂ ತಥಾ ತತ್ವಮಾತ್ರಕಾದ್ಯನಪೇಕ್ಷಿತವಮ್ ॥ ವಿನಾ ಸನ್ನಿಧಿಯುಕ್ತಃ ಸನ್ ಸಸ್ವಯಂ ವ್ಯಕ್ತ ಇಷ್ಯತೇ ॥ ಇತಿ ಶ್ರೀಮುಷ್ಣ ಮಹಾತ್ಮ್ಯೇ ॥ ಬಲೇನ ತತ್ಪ್ರವಿಷ್ಠ ಫಣಿನಾ ಸಹಜಸ್ವಾತ್ ತದ್ಬಲ ಲಕ್ಷಣಗಂ ಸಹಜವಮ್ ॥ ಲಕ್ಷ್ಮಣಾದ್ಯಃ ತ್ರಯಃ ರೋಹಿಣೀ ನಂದನಃ ॥ ನರಃ ಫಲ್ಗುನ ಇತ್ಯಾದ್ಯಾಃ ವಿಶೇಷಾವೇಶಿನೋ ಹರೇಃ ॥ ಇತ್ಯುಕ್ತೇಃ ॥ ಬಲದೇವಃ ತತಃ ಪಶ್ಚಾತ್ ನರಾವೇಶಾತ್ ॥ ಆದ್ಯ ತಾತ್ಪರ್ಯೇ ಚ ॥ ಆವೇಶೋ ಬಲಭದ್ರೇ ॥ ಶಂಖಚಕ್ರ ಭೃದೀಶೇಷಃ ಶ್ವೇತವರ್ಣೋ ಮಹಾಭುಜಃ ॥ ಆವಿಷ್ಟಃ ಶ್ವೇತಕೇಶಾತ್ಮಾ ಶೇಷಾಂಶಂ ರೋಹಿಣೀಸುತಂ ॥ ಇತಿ ಮಹಾವಾರಾಹೇ ॥ ನಮೋ ನಾರಾಯಣ ಶ್ಚೈವ ಹರಿಃ ಕೃಷ್ಣಃ ತಥೈವ ಚ ॥ ಚತ್ವಾರೋ ಧರ್ಮತನಯಾಃ ಹರಿ ರೇವ ತ್ರಯೋಮತಾಃ ॥ ಅನಂತೋ ನರ ನಾಮಾತ್ರ ತಸ್ಮಿಸ್ತು ನರನಾಮ ವಾನ್ ॥ ವಿಶೇಷೇಣ ಸ್ವಯಂ ವಿಷ್ಣುಃ ನಿವಸ್ಯಂಬು ಜೇಕ್ಷಣ॥ ಇತಿ ಷಾಡ್ಗುಣ್ಯೇದ್ವಿತಾ ॥ ಖಂಡೋ ಬಾಲೇಂದು ಗೋಽಖಂಡೋ ವನಸೇನಾಗತೋ ಹರಿಃ ॥೧॥

**ಕನ್ನಡಾರ್ಥ :—**

ಮೋಕ್ಷಪ್ರಾಪ್ತಿಗೆ ಶ್ರೀ ಪರಮಾತ್ಮನ ಮೂಲರೂಪ, ಅವತಾರರೂಪ ಹಾಗೂ ಆವೇಶಗಳ ಸ್ಪಷ್ಟವಾದ ಜ್ಞಾನ ಅತ್ಯಗತ್ಯ. ಇದು ಶ್ರೀಗುರು ಮಧ್ವರ ವಚನ. ಭಗವಂತನ ವಿಭೂತಿರೂಪಗಳ ಜ್ಞಾನದಿಂದ ಕಾಮಿತಾರ್ಥಗಳು ಸಿದ್ಧಿಸುವುವು. ನಮಗೆ ಈಪ್ಸಿತಫಲ ಸಿಗಬೇಗಾದರೆ ಅಪೇಕ್ಷಿತ ಪ್ರದನಾದ ಪ್ರಸಾದಮಯರೂಪವನ್ನು ಧ್ಯಾನಿಸಬೇಕು. ಅದೇ ಅನುಗ್ರಹರೂಪವು. ಈ ಕಾರಣದಿಂದಲೇ ಶ್ರೀ ಪೂರ್ಣಪ್ರಜ್ಞರು **"ಆಹದೇವೋ ರಮೋತ್ಸಂಗ ವಿಲಸತ್ಪಾದಪಲ್ಲವಃ"** –ಎಂದು ಶ್ರೀಹರಿಯನ್ನು ಸ್ತುತಿಸುತ್ತಾರೆ. ಅಂದರೆ, ಶ್ರೀ ರಮಾದೇವಿಯರ ತೊಡೆಗಳಲ್ಲಿ ಪರಿಶೋಭಿತವಾದ ಪಾದಪಲ್ಲವವುಳ್ಳವನು ಎಂರ್ಥ. ಇಂತಹ ಪ್ರಸನ್ನರೂಪವನ್ನು ಮನಸಾ ಚಿಂತಿಸುತ್ತಾ "ಶ್ರೀ

ತರುಣಿವಲ್ಲಭನ" ಎಂಬ ಪ್ರಥಮ ಪದ್ಯದಿಂದ ಪ್ರಸಕ್ತ ಸಂಧಿಯನ್ನು ದಾಸರಾಯರು ಆರಂಭಿಸುತ್ತಾರೆ.

ನೀತ (ನಿಯತ), ಸಾಧಾರಣ, ವಿಶೇಷ, ಸಜಾತೀಯ, ನೈಜ, ಅಹಿತ, ಸಹಜ, ವಿಜಾತೀಯ, ಖಂಡ ಮತ್ತು ಅಖಂಡಗಳೆಂಬ ದಶವಿಧ ವಿಭೂತಿ ರೂಪಗಳನ್ನು ಬುಧರಿಂದ ತಿಳಿದು ಉಪಾಸಿಸಬೇಕು.

ಏಕಜಾತೀಯ ವಸ್ತುಗಳಲ್ಲಿ ಎಲ್ಲಕ್ಕೂ ಶ್ರೇಷ್ಠವೆನಿಸಿರುವ ವಸ್ತುವಿನಲ್ಲಿರುವ ಭಗವಂತನ ವಿಶಿಷ್ಟರೂಪಕ್ಕೆ "ವಿಭೂತಿ" ಎಂತ ಹೆಸರು. ಆ ವಸ್ತುವಿನ ವೈಶಿಷ್ಟ್ಯಕ್ಕೆ ಆ ವಸ್ತುವಿನಲ್ಲಿ ಭಗವಂತನು ಇಟ್ಟಿರುವ ವಿಶಿಷ್ಟ ರೂಪವೇ ಕಾರಣ. ಇದರಿಂದಲೇ ವಸ್ತುವಿನ ಮಹತ್ವ ಅದು ಇತರ ವಸ್ತುಗಳಿಂದ ವೈಲಕ್ಷಣ್ಯ ಹೊಂದಿರಲು ಕಾರಣ. ವಿಭೂತಿರೂಪಗಳು ವಸ್ತುಗಳಿಗೆ ಆಧಿಕ್ಯ ಮತ್ತ ಅತಿಶಯುವನ್ನುಂಟುಮಾಡುವುವು,

ಇಂತಹ ವಿಭೂತಿರೂಪಗಳು ಎರಡು ಪ್ರಕಾರ :– (೧) ಪ್ರತ್ಯಕ್ಷ ಗೋಚರವಾಗಿರುವುದು ಮತ್ತು (೨) ಗುಪ್ತರೂಪದಲ್ಲಿರುವುದು, ಕಪಿಲ, ವ್ಯಾಸ, ರಾಮಕೃಷ್ಣಾದ್ಯವತಾರಗಳು ಪ್ರತ್ಯಕ್ಷ ವಿಭೂತಿರೂಪಗಳು, ಸಮಸ್ತ ಜೀವ ಮತ್ತು ಜಡವರ್ಗಗಳಿಂದ ಭಿನ್ನವಾಗಿದ್ದು, ಅವುಗಳಿಗೆ ತನ್ನ ಸಾನ್ನಿಧ್ಯ ವಿಶೇಷದಿಂದ ಉತ್ಕರ್ಷವನ್ನು ತಂದುಕೊಡುವುದು ಗುಪ್ತ ವಿಭೂತಿ ರೂಪಗಳು.

(೧) ತನ್ನಿಂದ ಅಭೇಧವಾದ, ಮೂಲರೂಪದಿಂದ ತರಲ್ಪಟ್ಟ ಮತ್ಸ್ಯಾದಿ ರೂಪಗಳಿಗೆ "ನೀತ" ಎಂದು ಹೆಸರು.

(೨) ಸರ್ವ ಜೀವ ಜಡಗಳಲ್ಲಿರುವ ಸಾಮಾನ್ಯವಾಗಿ ಇರುವ ವಿಭೂತಿಗೆ "ಸಾಧಾರಣ" ಎಂದು ಕರೆಯುವರು.

(೩) ಬ್ರಹ್ಮಾದಿಗಳಲ್ಲಿರುವ ವಿಭೂತಿಯು "ವಿಶೇಷ"

(೪) ಇಂದ್ರ, ಶುಕ್ರ, ಅರ್ಜುನಾದಿಗಳಲ್ಲಿರುವುದು "ಸಜಾತೀಯವು"

(೫) ಶಾಲಿಗ್ರಾಮಗತ ಸ್ವಯಂವ್ಯಕ್ತರೂಪವು "ನೈಜ" ವೆಂದೆನಿಸುವುದು.

(೬) ಸ್ವಯಂವ್ಯಕ್ತ ಪ್ರತಿಮೆಗಳಲ್ಲಿರುವುದು "ಆಹಿತ" ವಿಭೂತಿಯು.

(೭) ಚಂದ್ರನಲ್ಲಿರುವುದು "ವಿಜಾತೀಯ" ವಿಭೂತಿಯು.

(೮) ಲಕ್ಷ್ಮಣ, ಬಲರಾಮರಲ್ಲಿರುವ ವಿಭೂತಿಯು "ಸಹಜ" ವೆಂದೆನಿಸುವುದು.

(೯) ಬಾಲಚಂದ್ರನಲ್ಲಿ "ಖಂಡ" ವಿಭೂತಿಯು.

(೧೦) ಸೇನೆ, ವನ ಮುಂತಾದವುಗಳಲ್ಲಿ "ಅಖಂಡ" ವಿಭೂತಿಯು.

ಹೀಗೆ ದಶವಿಧ ವಿಭೂತಿಗಳನ್ನು ಜ್ಞಾನಿಗಳಿಂದ ತಿಳಿದು, ಆಯಾಯಾ ಅಧಿಷ್ಠಾನಗಳಲ್ಲಿ ಉಪಾಸಿಸಬೇಕು. ಶಾಲಿಗ್ರಾಮ ಶಿಲೆಯಲ್ಲಿ ಶ್ರೀಹರಿಯು ಸ್ವಯಂ ವ್ಯಕ್ತರೂಪದಿಂದಿರುವನು. ನೈಜ ಮೂರುತಿಯು ನಿತ್ಯಸಾನ್ನಿಧ್ಯವಿರುವುದರಿಂದ ಚಂಡಾಲಸ್ಪರ್ಶವಾದರೂ ದೋಷವಿಲ್ಲ. ಆವಾಹನಕ್ರಮ ಬೇಕಿಲ್ಲ, ಬಲರಾಮ ಮತ್ತು ಲಕ್ಷ್ಮಣರಲ್ಲಿ ಶೇಷನೊಡನೆಯೇ ಶ್ರೀಪರಮಾತ್ಮನು ಪ್ರಾದುರ್ಭೂತನಾಗಿರುವನು. ಆದ್ದರಿಂದಲೇ ಅದು "ಸಹಜ" ಎನಿಸವುದು. ಬಲರಾಮನು ಶ್ರೀಹರಿಯ ಶುಕ್ಲಕೇಶದಿಂದಲೂ, ಅರ್ಜುನನು ನರಾವೇಶದಿಂದಲೂ ಯುಕ್ತರಾಗಿರುತ್ತಾರ. ಈ ವಿವರಗಳು ವರಾಹಪುರಾಣದಲ್ಲಿ ಉಕ್ತವಾಗಿವೆ ॥೧॥

**(ಆ) "ಗುರುಹೃದಯ ಪ್ರಕಾಶಿಕೆ"–ವ್ಯಾಖ್ಯಾನ :–**

ವಿಭೂತಿ ಎಂಬ ಆಯಾಯಾ ಜಾತಿಯಲ್ಲಿ ಉತ್ತಮತ್ವವನ್ನು ಕೊಡುವ, ದೇವರ ರೂಪ ಮಹಿಮೆ ಹೇಳುವ ಹರಿಕಥೆ ಎಂಬ ಅಮೃತ

ರಸವನ್ನು, ಗುರುಕಟಾಕ್ಷದಿಂದ ಯಥಾಶಕ್ತಿ ಹೇಳುವೆನು. ಉತ್ತಮಭಕ್ತರು ವಿಶ್ವಾಸದಿಂದ ಈ ಐದನೆಯ ಸಂಧಿಯನ್ನು ಕೇಳುವುದು. ಶ್ರಿಯಃಪತಿ ಎಂಬ ಲಕ್ಷ್ಮೀದೇವಿಯರ ಪತಿಯ ಪರಮೈಶ್ವರ್ಯರೂಪವನ್ನು ಕಂಡ ಕಂಡಲ್ಲಿ ಎಂದರೆ, ಉತ್ತಮಾಧಿಷ್ಠಾನ ನೋಡಿದ ಪ್ರತಿ ಸ್ಥಳದಲ್ಲಿ **ನೀತ** ವೆಂಬ ಶಾಲಿ ಗ್ರಾಮ ರೂಪವನ್ನೂ, **ಸಾಧಾರಣ** ಯೆಂಬ ಗೃಹಸ್ಥಾದಿಗಳಲ್ಲಿರುವ ರೂಪ ವನ್ನೂ, **ವಿಶೇಷ** ವೆಂಬ ಯತಿ ಮೊದಲಾದವರಲ್ಲಿರುವ ರೂಪವನ್ನೂ, **ಸಜಾತಿ** ಎಂಬ ದೇವತೆಗಳಲ್ಲಿ ಇಂದ್ರ ಮುಂತಾದವರಲ್ಲಿರುವ ರೂಪವನ್ನೂ, **ನೈಜ** ವೆಂದರೆ ವೃಷ್ಣಿಗಳೆಂದು ಹೆಸರುಳ್ಳ ಯಾದವರಲ್ಲಿ ನಾನು ವಾಸುದೇವ ಎಂದು ಹೇಳುವ ಜೀವಾಧಿಷ್ಠಾನರಹಿತ ನಿಜರೂಪವನ್ನೂ, **ಅಹಿತಾಚಲ** ವೆಂದು ಕರೆಸುವ ಪ್ರತಿಮಾದಿ ಸನ್ನಿಹಿತರೂಪವನ್ನೂ, **ಸಹಜಾಚಲ** ವೆಂದು ಕರೆಯುವ ಪರ್ವತಾದಿಗತರೂಪವನ್ನೂ, **ವಿಜಾತಿ** ಎಂದರೆ, ನಕ್ಷತ್ರಗಳಲ್ಲಿ ನಾನು ಚಂದ್ರನೆಂದು ಹೇಳುವ ಅನ್ಯಜಾತಿಯಲ್ಲಿ ಉತ್ತಮತ್ವ ಕೊಡುವ ರೂಪವನ್ನೂ, **ಖಂಡ** ವೆಂದು ಕ್ವಚಿತ್ಕಾಲ ಐಶ್ವರ್ಯ ಇರುವವರಲ್ಲಿ ಇರುವ ರೂಪವನ್ನೂ, **ಅಖಂಡ** ವೆಂದರೆ, ಯಾವಜ್ಜೀವ ಶ್ರೀಮಂತ ರಾದವರಲ್ಲಿರುವ ರೂಪವನ್ನೂ ಬಲ್ಲವರಿಂದ ಈ ರೀತಿ ದಶವಿಧ ತಿಳಿದು, ಮನಸ್ಸಿನಲ್ಲಿ ನೋಡುತ್ತಾ, ಸಂತೋಷಪಡುವುದು. ॥೧॥

# ಸರ್ವವ್ಯಾಖ್ಯಾನಸಾರಸಂಗ್ರಹ

ಅಪರೋಕ್ಷೀಕೃತಶ್ರೀಶರಾದ ಶ್ರೀಜಗನ್ನಾಥದಾಸವರೇಣ್ಯರುಪೂರ್ವೋಕ್ತ ಸಂಧಿಗಳಲ್ಲಿ ಕ್ರಮವಾಗಿ ಸರ್ವದುರಿತಪರಿಹಾರಾರ್ಥ ಹಾಗೂ ಇಷ್ಟ ಪ್ರಾಪ್ತಿಗಾಗಿ ಮಂಗಳಾಚರಣೆಯನ್ನು ಮಾಡಿ, ತಮ್ಮ ಕುಲದೈವನೂ, ಉಪಾಸ್ಯಮೂರ್ತಿಯೂ ಆದ ಶ್ರೀ ಲಕ್ಷ್ಮೀನರಸಿಂಹದೇವರ ಪಾದಪಂಕಜ ಗಳಲ್ಲಿ ಅರ್ಪಿಸುತ್ತಾ, ರಮಾದೇವಿಯರಿಂದ ಆರಂಭಿಸಿ ಸಕಲದೇವತಾವರ್ಗ ವನ್ನು ತಾರತಮ್ಯಾನುಸಾರ ಸ್ತುತಿಸಿ, ಸಕಲಯತಿವೃಂದ, ದಾಸಕೂಟ

ಧುರೀಣರಿಗೆ ವಂದನೆ ಗೈದು, ನಂತರ ಕರುಣಾಸಂಧಿಯಲ್ಲಿ ಶ್ರೀಹರಿಯು ಪರಮ ಕಾರುಣ್ಯಾತಿಶಯುವನ್ನು ಅನೇಕ ದೃಷ್ಟಾಂತಗಳಿಂದ ನಿರೂಪಿಸಿ, ಅಣುರೇಣುತೃಣಕಾಷ್ಠಪರಿಪೂರ್ಣನಾಗಿ ಸರ್ವತ್ರ ವ್ಯಾಪಿಸಿರುವ ವಿಶ್ವ ವ್ಯಾಪೀ ಭಗವಂತನನ್ನು ವ್ಯಾಪ್ತಿಸಂಧಿಯಲ್ಲಿ ಕೊಂಡಾಡಿ, ಮುಂದಿನ ಭೋಜನ ರಸವಿಭಾಗಸಂಧಿಯಲ್ಲಿ ಸರ್ವತ್ರ ವ್ಯಾಪ್ತನಾದ ಅನುಪಮಚರಿತ್ರನಾದ ಶ್ರೀ ಹರಿಯು ಅನ್ನಾದಿ ಸಕಲ ಭೋಜನ ಯೋಗ್ಯವಸ್ತುಗಳಲ್ಲಿಯೂ, ಭೋಕ್ತೃ ಗಳಲ್ಲಿಯೂ ಅಂತರ್ಯಾಮಿತ್ವೇನ ಇರುವ ಅನಿರುದ್ಧಾದಿ ಪಂಚರೂಪ ಗಳನ್ನು ಆಯಾಯಾ ಠಾವಿನಲ್ಲಿ ಚಿಂತಿಸುತ್ತಾ, ಅನ್ನಮಯಾದಿ ಪಂಚ ಕೋಶಗಳ ಕಾರ್ಯ. ತದ್ಗತ ಭಗವದ್ರೂಪಗಳ ಚಿಂತನೆ, ಕೋಶಗತ ತತ್ತ್ವ ಗಳು, ತತ್ತ್ವಪತಿಗಳು ಮತ್ತು ಅವರಿಗೆ ನಿಯಾಮಕರಾಗಿ ಭಗವದಾಜ್ಞಾ ನುಸಾರ ಜಗದ್ವ್ಯಾಪಾರಗಳನ್ನು ನಡೆಯಿಸುತ್ತಿರವ ಮುಖ್ಯಪ್ರಾಣ ದೇವರ ರೂಪಗಳು ಇತ್ಯಾದಿ ವಿವರಗಳನ್ನು ತಿಳಿಸಿ, ಪ್ರಸಕ್ತ **ವಿಭೂತಿಸಂಧಿ ಎಂಬ** ಈ ಸಂಧಿಯನ್ನು ಪ್ರಾರಂಭಿಸುತ್ತಾ, ಸರ್ವತ್ರವ್ಯಾಪ್ತನಾಗಿರುವ ಶ್ರೀಹರಿಯ ಪರಮ ಐಶ್ವರ್ಯರೂಪಗಳು ಯಾವ ಯಾವ ಉತ್ತಮ ಅಧಿಷ್ಠಾನಗಳಲ್ಲಿ ಕಂಡುಬರುತ್ತದೆಯೋ, ಅಂತಹ ಅಧಿಷ್ಠಾನಗತ **ವಿಭೂತಿರೂಪಗಳನ್ನು ತಿಳಿಸುತ್ತಾರೆ.**

ಪ್ರಪ್ರಥಮವಾಗಿ "ವಿಭೂತಿ" ಶಬ್ದಾರ್ಥದ ವಿವರಣೆಯನ್ನು ತಿಳಿಯ ಬೇಕು.

ಶ್ರೀಪರಮಾತ್ಮನಿಂದ ಸೃಷ್ಟವಾದ ಈ ಜಗತ್ತು ಒಂದು ಚಿತ್ರವಿಚಿತ್ರ ವಾದ ಪ್ರಪಂಚ, ನಾನಾಬಗೆಯ ವೈವಿಧ್ಯಗಳಿಂದ ಯುಕ್ತವಾದದ್ದು, ಇಂತಹ ಜಗತ್ತಿನಲ್ಲಿ ವಸ್ತುಗಳ ವಿಂಗಡಣೆ ಎರಡು ಪ್ರಕಾರ :— (೧) ಜಡ ವಸ್ತುಗಳು ಮತ್ತು (೨) ಚೇತನವಸ್ತುಗಳು. ಜಡವಸ್ತುಗಳಿಗೆ ಸ್ವತ ಏವ ಪ್ರವೃತ್ತಿಶಕ್ತಿ ಇಲ್ಲ, ಚೇತನವರ್ಗದಲ್ಲಿ ಉತ್ತಮರಾದ ಮಾನವವರ್ಗಕ್ಕೆ ಜ್ಞಾನ, ಇಚ್ಛಾ ಮತ್ತು ಕ್ರಿಯಾಶಕ್ತಿಗಳಿವೆ. ವಿವೇಕ, ವಿವೇಚನಾಶಕ್ತಿ, ಮನಸ್ಸಿನಲ್ಲಿ ಆಲೋಚಿಸುವುದು ಚಿತ್ತ ಪ್ರವೃತ್ತಿರೂಪವಾದ ಸಂಕಲ್ಪಶಕ್ತಿ,

ಬುದ್ಧಿ ಪ್ರವೃತ್ತಿರೂಪವಾದ ವಿಷಯನಿಶ್ಚಯಶಕ್ತಿ ಇತ್ಯಾದಿ ಮಾನವರಲ್ಲಿವೆ. ಆದರೆ ಇವೆಲ್ಲವೂ ಭಗವದಧೀನವಾಗಿ, ಆತನ ಪ್ರೇರಣಾನುಸಾರ ಕಾರ್ಯನಿರ್ವಹಿಸುವುವು.

ಜಡವರ್ಗದಲ್ಲಿ, ಶಾಲಿಗ್ರಾಮ, ಹಿಮಾಲಯಪರ್ವತ, ಗಂಗಾನದಿ ಇತ್ಯಾದಿ ಅಧಿಷ್ಠಾನಗಳಲ್ಲಿ ಶ್ರೀಹರಿಯು ತನ್ನ ವಿಶೇಷರೂಪವನ್ನಿಟ್ಟಿರುವನು. ಇದರಿಂದ ಅವು ಉತ್ತಮಾಧಿಷ್ಠಾನಗಳೆಂದೆನಿಸಿವೆ.

ಹಾಗೆಯೇ ಚಾತುರ್ವರ್ಣಗಳಲ್ಲಿ ವಿಪ್ರವರ್ಣವೂ, ಆಶ್ರಮಗಳಲ್ಲಿ ಯತ್ಯಾಶ್ರಮವೂ ಶ್ರೇಷ್ಠವೆಂದು ಶಾಸ್ತ್ರಸಿದ್ಧ. ಸ್ಥಾವರಾದಿಗಳಲ್ಲಿ ತುಳಸಿ ಅಶ್ವತ್ಥವೃಕ್ಷ ಮುಂತಾದ ಅಧಿಷ್ಠಾನಗಳಲ್ಲಿ ಉತ್ತಮತ್ವ ಕಂಡುಬರುವುದು. ಪ್ರಾಣಿವರ್ಗದಲ್ಲಿ ಗೋವು, ದೇವತಾವರ್ಗದಲ್ಲಿ ಬ್ರಹ್ಮವಾಯುಗಳು ಇತ್ಯಾದಿಗಳಲ್ಲಿ ಉತ್ತಮಾಧಿಷ್ಠಾನಗಳಿವೆ. ಅಂತಹ ಅಧಿಷ್ಠಾನಗಳಲ್ಲಿ ಶ್ರೀಪರಮಾತ್ಮನ ವಿಶೇಷರೂಪವನ್ನು ಚಿಂತಿಸಬೇಕು. ಹೀಗೆ ಸನ್ನಿಧಾನಮಹಿಮಾ ವಿಶಿಷ್ಟವಾದ ಶ್ರೀಹರಿಯ ಪ್ರವಿಷ್ಟಭಗವದ್ರೂಪಗಳಿಗೆ "ವಿಭೂತಿ" ಎಂದು ಹೆಸರು.

(೧) ವಿಭೂತಿ ಎಂದರೆ ಪರಮೈಶ್ವರ್ಯ ಎಂದರ್ಥ. ಅಂದರೆ ಆ ಅಧಿಷ್ಠಾನದಲ್ಲಿರುವ ಉತ್ಕೃಷ್ಟ ಮಹಿಮೋಪೇತರೂಪವು.

(೨) "ವಿ- ಎಂದರೆ ವಿಶೇಷವಾಗಿ ಭೂತಿ- ಇರುವಿಕೆ ಎಂದರ್ಥ, ಅಂದರೆ ಅಧಿಷ್ಠಾನಗತ ವಿಶೇಷರೂಪಗಳು.

(೩) ಇಂತಹ ವಿಭೂತಿರೂಪವನ್ನು ಶ್ರೀಪರಮಾತ್ಮನು ಇಟ್ಟಿರುವುದರಿಂದಲೇ ಆ ವಸ್ತುಗಳು ಉತ್ಕೃಷ್ಟತೆಯನ್ನೂ ಮತ್ತು ಅತಿಶಯವಾಗಿರುವ ಗುಣವನ್ನೂ ಹೊಂದಿರುವುದಕ್ಕೆ ಮುಖ್ಯ ಕಾರಣವು.

ಇಂತಹ ಭಗವದ್ವಿಭೂತಿರೂಪಗಳು ಹತ್ತು ಪ್ರಕಾರ ಇವೆ ಎಂದು ತಿಳಿಸುತ್ತಾರೆ. ಈ ದಶವಿಧ ವಿಭೂತಿಗಳ ವಿವರಗಳು ಇಂತಿವೆ :—

**(೧) ನಿತ್ಯ ವಿಭೂತಿ :—**

(೧) ಎಂದೆಂದಿಗೂ ಕೆಡದ ವಿಭೂತಿರೂಪ ಇದಕ್ಕೆ ಅಧಿಷ್ಠಾನ ಶ್ರೀ ಲಕ್ಷ್ಮೀದೇವಿಯರು.

(೨) ಶಾಲಿಗ್ರಾಮ ಶಿಲೆ, ಇದಲ್ಲಿ ಶ್ರೀಹರಿಯು ನಿತ್ಯ ಸನ್ನಿಹಿತನಾಗಿರುತ್ತಾನೆ. ಸ್ವಯಂವ್ಯಕ್ತರೂಪದಿಂದಿದ್ದಾನೆ. ಇದರಲ್ಲಿ ತತ್ತ್ವನ್ಯಾಸ ಮಾತೃಕಾನ್ಯಾಸ ಪೂರ್ವಕ ಆವಾಹನಾವಿಧಿ ಬೇಕಿಲ್ಲ. ಚಂಡಾಲಸ್ಪರ್ಶದಿಂದಲೂ ದೋಷ ಲೇಪವಿಲ್ಲ.

(೩) ತನ್ನಿಂದ ಅಭೇದವಾದ ಮೂಲರೂಪದಿಂದ ತರಲ್ಪಟ್ಟ ಮತ್ಸ್ಯಾದಿ ಅವತಾರರೂಪಗಳು.

**(೨) ಸಾಧಾರಣ ವಿಭೂತಿ :—**

(೧) ಬ್ರಾಹ್ಮಣ ಮತ್ತು ಗೃಹಸ್ಥಾಶ್ರಮಗಳಲ್ಲಿರುವ ಭಗವದ್ರೂಪಗಳು.

(೨) ದೇಶಕಾಲಾದ್ಯನಪೇಕ್ಷಯಾ ಸರ್ವಭೂತಗಳಲ್ಲಿರುವ ಭಗವದ್ರೂಪಗಳು. (ಸಾಮಾನ್ಯ ವಿಭೂತಿರೂಪ)

**(೩) ವಿಶೇಷ ವಿಭೂತಿ :—**

(೧) ಬ್ರಹ್ಮಾದಿ ಋಜುಗಳು ವ್ಯತಿರಿಕ್ತ ರುದ್ರಾದಿದೇವತೆಗಳು, ದೇವಗಂಧರ್ವಾಂತ ಅಧಿಷ್ಠಾನರು (ಸಂ. ಒ. ವ್ಯಾಖ್ಯಾನ)

(೨) ಯತಿಗಳಲ್ಲಿರುವ ಭಗವದ್ರೂಪಗಳು.

(೩) ಪೃಥು, ಲಕ್ಷ್ಮಣ, ಬಲರಾಮ, ಅರ್ಜುನಾದಿಗಳಲ್ಲಿ ಕೆಲವು ಕಾಲ ಹೆಚ್ಚಾದ ಆವೇಶ ಇರೋಣ. (ಭಾವದರ್ಪಣಟೀಕಾ)

(೪) ಬ್ರಹ್ಮಾದಿಗಳಲ್ಲಿರುವ ವಿಭೂತಿರೂಪ (ಜ. ವಾದಿರಾಜಾಚಾರ್ಯರು)

**(೪) ಸಜಾತಿ ವಿಭೂತಿ :—**

(೧) ಇದಕ್ಕೆ **ಸಮಾನ ವಿಭೂತಿ** ಎಂತಲೂ ಇನ್ನೊಂದು ಹೆಸರು.

(೨) ಮನುಷ್ಯ ಗಂಧರ್ವಾದ್ಯಾಭ್ಯ ತೃಣಾಂತಮುಕ್ತಿಯೋಗ್ಯರು. ಸಮೀಚೀನ ಜ್ಞಾನಜಾತೀಯರು (ಸಂ. ಒ. ವ್ಯಾಖ್ಯಾನ)

(೩) ದೇವತೆಗಳಲ್ಲಿ ದೇವೇಂದ್ರನನ್ನೂ, ಏಕಾದಶರುದ್ರಗಣದಲ್ಲಿ ಶಂಕರನನ್ನೂ ನನ್ನ ವಿಭೂತಿಯನ್ನಾಗಿ ತಿಳಿ–ಎಂದು **ಗೀತಾವಚನ.**

**"ದೇವಾನಾಮಸ್ಮಿವಾಸವಃ ರುದ್ರಾಣಾಂಶಂಕರಶ್ಚಾಸ್ಮಿ"** ಅಂದರೆ, ಒಂದೇ ಜಾತಿ ಅಥವಾ ವರ್ಗದಲ್ಲಿ ಯಾವುದು ಉತ್ಕೃಷ್ಟರೂಪದಲ್ಲಿ ಅತಿಶಯವಾಗಿ ತೋರುವುದೋ, ತದಂತರ್ಗತ ಭಗವದ್ರೂಪ.

**(೫) ನೈಜ ವಿಭೂತಿ :—**

(೧) ಸಹಜರೂಪದಲ್ಲಿ ಏಕಪ್ರಕಾರವಾಗಿರುವ ಅನಾದಿನೈಜ ಸ್ವರೂಪಗಳು.

(೨) ಶ್ರೀ ಪರಮಾತ್ಮನ ಸ್ವಾಂಶವಾದ ರಾಮಕೃಷ್ಣಾದಿ ರೂಪಗಳು (ಭಾವಪ್ರಕಾಶಿಕೆ)

(೩) ಜ್ಞಾನಾನಂದಾದಿಗುಣಗಳು (ಭಾವದರ್ಪಣಟೀಕಾ)

(೪) ವೃಷ್ಣಿಗಳೆಂದು ಹೆಸರುಳ್ಳ ಯಾದವರಲ್ಲಿ ನಾನು "ವಾಸುದೇವ" ಎಂದು ಕರೆಸುವ ಜೀವಾಧಿಷ್ಠಾನರಹಿತ ನಿಜರೂಪಗಳು (ಗುರುಹೃದಯ ಪ್ರಕಾಶಿಕೆ)

**(೬) ಆಹಿತ ವಿಭೂತಿ :—**

(೧) ಜಡಪ್ರತಿಮಾಗಳು, ತೀರ್ಥಕ್ಷೇತ್ರಗಳು. (ಸಂ.ಒ. ವ್ಯಾಖ್ಯಾನ)

(೨) ಶಿಖರವುಳ್ಳ ಪರ್ವತಗಳಲ್ಲಿ ಮೇರುಪರ್ವತ. ಸ್ಥಾವರ ಪದಾರ್ಥಗಳಲ್ಲಿ ಹಿಮಾಲಯ ಇತ್ಯಾದಿ. ಅಂದರೆ, ಸ್ಥಾವಿರ ವಸ್ತುಗತ ವಿಭೂತಿ.

**"ಮೇರುಃ ಶಿಖರಿಣಾಮಹಂ ಸ್ಥಾವರಾಣಾಂ ಹಿಮಾಲಯಃ ||" — ಗೀತಾ ವಾಕ್ಯ.**

(೩) ಜ್ಞಾನಿಗತ ಭಗವದ್ರೂಪ (ಭಾವದರ್ಪಣ ಟೀಕಾ)

**(೭) ಸಹಜ ವಿಭೂತಿ :—**

(೧) ಸ್ವಯಂ ವ್ಯಕ್ತರೂಪಗಳು.

**(೮) ವಿಜಾತೀಯ ವಿಭೂತಿ :—**

(೧) ಬೇರೆ ಬೇರೆ ಜಾತಿಗಳಲ್ಲಿ ಕಂಡುಬರುವ ಪ್ರವಿಷ್ಟರೂಪಗಳು.

(೨) ಇದಕ್ಕೆ ಅಧಿಷ್ಠಾನರು ತಮೋಯೋಗ್ಯರು (ಸಂ. ಒ. ವ್ಯಾಖ್ಯಾನ)

(೩) ನಕ್ಷತ್ರಮಂಡಲದಲ್ಲಿ ಚಂದ್ರನೂ, ವೃಕ್ಷಗಳಲ್ಲಿ ಅಶ್ವತ್ಥವೂ, ಪ್ರಾಣಿಗಳಲ್ಲಿ ಸಿಂಹ ಇತ್ಯಾದಿ.

**"ನಕ್ಷತ್ರಾಣಾಮಹಂ ಶಶೀ............ಇತ್ಯಾದಿ"—ಗೀತಾವಚನ.**

(೪) ಭಿನ್ನರಾದ ಬ್ರಹ್ಮರುದ್ರಾದಿಗಳಲ್ಲಿ ತತ್ತನ್ನಾಮದಿಂದ ಅಂತರ್ಯಾಮಿ ರೂಪಗಳು,

**"ಬ್ರಹ್ಮಾಣಿ ಬ್ರಹ್ಮರೂಪೋಽಸೌ ಶಿವರೂಪೀ ಶಿವೇ"** ಅನ್ಯ ಜಾತಿಗಳಲ್ಲಿ ಉತ್ತಮತ್ವವನ್ನು ಕೊಡುವ ರೂಪವೇ "ವಿಜಾತೀಯ ವಿಭೂತಿ"ಯು.

**(೯) ಖಂಡ ವಿಭೂತಿ :—**

(೧) ಸಮಗ್ರ ವಸ್ತುವಿನಲ್ಲಿ ಪ್ರತ್ಯೇಕವಾಗಿ ಕಂಡುಬರುವ ಅಂಶ ರೂಪಗಳು.

(೨) ಅನ್ನದ ಒಂದೊಂದು ಅಗಳಿನಲ್ಲಿ ಅನಂತಾಂಶದಿಂದಲಿ ಖಂಡನೆಂದಿಸಿ (ಭೋಜನ ರಸವಿಭಾಗಸಂಧಿ)

**(೧೦) ಅಖಂಡ ವಿಭೂತಿ :—**

(೧) ಅಖಂಡವಾಗಿ, ಅಂದರೆ, ಏಕಾಕಾರವಾಗಿರುವ ಸಮಗ್ರರೂಪವು.

(೨) ಅನ್ನದ ರಾಶಿಯಲ್ಲಿ ಅಖಂಡರೂಪ. ಒಂದೊಂದು ಅಗಳಿನಲ್ಲಿ ಖಂಡರೂಪ. ಎರಡು ಭಗವದ್ರೂಪಗಳೂ ಪೂರ್ಣವೇ. ದೂರದಿಂದ ನೋಡಿದಾಗ ಪರ್ವತವು ಅಖಂಡರೂಪವಾಗಿ ಕಾಣಿಸುವುದು. ಸಮೀಪದಿಂದ ಕಲ್ಲು, ಮಣ್ಣು, ಇತ್ಯಾದಿ ಭಾಗಶಃ ಗೋಚರಿಸುವುದು.

(೩) ಸೇನೆ, ವನ ಮುಂತಾದವುಗಳಲ್ಲಿ ಅಖಂಡ ವಿಭೂತಿಯು (ಶ್ರೀ ವ್ಯಾಸದಾಸ ಸಿದ್ಧಾಂತ ಕೌಮುದೀ)

ಇಂತು, ದಶವಿಧವಾದ ವಿಭೂತಿರೂಪಗಳನ್ನು ಜ್ಞಾನಿಗಳ ದ್ವಾರಾ ತಿಳಿದು, ಆಯಾಯಾ ಅಧಿಷ್ಠಾನಗತ ವಿಭೂತಿರೂಪಗಳನ್ನು ಚಿಂತಿಸಿ, ಪರಮಾತ್ಮನ ಅಪಾರ ಮಹಿಮೆಯನ್ನು ಕೊಂಡಾಡುತ್ತಿರಬೇಕೆಂದು ಪ್ರಸಕ್ತ ಪದ್ಯದ ದಾತ್ಪರ್ಯ ॥೧॥

## ಪದ್ಯ (೨)

**ಮೂಲ :—**

ಜಲಧರಾಗಸದೊಳಗೆ ಚರಿಸುವ ।
ಹಲವು ಜೀವರ ನಿರ್ಮಿಸಿಹನದ ।
ರೊಳು ಸಜಾತಿ ವಿಜಾತಿ ಸಾಧಾರಣ ವಿಶೇಷಗಳ ॥
ತಿಳಿದು ತತ್ತತ್ಸ್ಥಾನದಲಿ ವೆ ।
ಗ್ಗಳಿಸಿ ಹಬ್ಬಿದ ಮನದಿ ಪೂಜಿಸು ।
ತಲವವ್ಯಾಪ್ತರೂಪಗಳ ನೋಡುತಲಿ ಹಿಗ್ಗುತಿರು ॥೨॥

**ಅವತರಣಿಕೆ :—**

ಭೂಮಿ, ನೀರು, ಮತ್ತು ಆಕಾಶ ಎಂಬ ಈ ಮೂರು ಪ್ರದೇಶಗಳಲ್ಲಿ ಸಂಚರಿಸುವ ಭೂಚರ, ಜಲಚರ ಮತ್ತು ಖೇಚರ ಎಂಬ ನಾನಾ ಬಗೆಯ

ಜೀವ ರಾಶಿಗಳನ್ನು ಪರಮಾತ್ಮನು ಸೃಷ್ಟಿಸಿರುವನು. ಆ ಚೇತನ ಸಮೂಹದಲ್ಲಿ (೧) ಸಜಾತಿ (೨) ವಿಜಾತಿ (೩) ಸಾಧಾರಣ ಮತ್ತು (೪) ವಿಶೇಷಗಳೆಂಬ ಈ ನಾಲ್ಕು ಪ್ರಕಾರವಾದ ವಿಭೂತಿರೂಪಗಳನ್ನು ಆಯಾಯಾ ಅಧಿಷ್ಠಾನ ವಿಶೇಷಗಳಲ್ಲಿ ತಿಳಿದು. ಅದರಿಂದ ಹೃದಯ ಮತ್ತು ಮನಸ್ಸುಗಳೆರಡೂ ತುಂಬಿ, ಆನಂದೋದ್ರೇಕದಿಂದ ಉಬ್ಬಿ ನಲಿದಾಡುತ್ತಾ, ಆ ಭಗವದ್ವಿಭೂತಿಗಳನ್ನು ಮನೋಮಂದಿರದಲ್ಲಿ ಧ್ಯಾನೋಪಾಸನೆ ಮಾಡುತ್ತಾ ಹಿಗ್ಗುತ್ತಿರುವವನಾಗು ಎಂದು **"ಜಲಧರಾಗಸ"** —ಎಂಬ ಪ್ರಸಕ್ತ ಸಂಧಿಗತ ೨ ನೆಯ ಈ ಪದ್ಯದಿಂದ ವಿವರಿಸುತ್ತಾರೆ. ॥೨॥

**ಪ್ರತಿಪದಾರ್ಥ :—**

**ಜಲ** = ನೀರಿನೊಳಗೆ **ಧರೆ** = ಭೂಮಿಯ ಮೇಲೆ **ಆಗಸ** = ಆಕಾಶ ಮಾರ್ಗದಲ್ಲಿ **ಒಳಗೆ** = ಇವುಗಳೊಳಗೆ **ಚಲಿಸುವ** = ಸಂಚಾರಮಾಡುವ **ಹಲವು** = ನಾನಾಪ್ರಕಾರಗಳಾದ **ಜೀವರ** = ಜೀವರಾಶಿಗಳನ್ನು (ಅಂದರೆ ಭೂ, ಜಲ, ಮತ್ತು ಖೇಚರ ಚೇತನವರ್ಗಗಳು) **ನಿರ್ಮಿಸಿಹನು** = ಸೃಷ್ಟಿಮಾಡಿರುವನು. **ಅದರೊಳು** = ಹಾಗೆ ಸೃಷ್ಟರಾದ ಜೀವರಾಶಿಗಳಲ್ಲಿ **ಸಜಾತಿ** = ಸಜಾತಿ ವಿಭೂತಿರೂಪಗಳನ್ನು (ಮಾನವ ವರ್ಗದಲ್ಲಿ ರಾಜನನ್ನು) **ವಿಜಾತಿ** = ವಿಜಾತಿ ವಿಭೂತಿ ರೂಪಗಳನ್ನು (ವಿಜಾತೀಯವಾದ ಮೃಗಗಳಲ್ಲಿ ಸಿಂಹದಲ್ಲಿಯೂ) **ಸಾಧಾರಣ** = ಸಾಧಾರಣ ವಿಭೂತಿ ರೂಪಗಳನ್ನು (ಅತಿಥಿ ಅಭ್ಯಾಗತ ಮೊದಲಾದ ಸಾಧಾರಣ ಜನರಲ್ಲಿ) **ವಿಶೇಷಗಳ** = ವಿಶೇಷವೆಂಬ ವಿಭೂತಿ ರೂಪಗಳನ್ನು (ಯತಿಯಲ್ಲಿ ವಿಶೇಷ ಭಗವದ್ವಿಭೂತಿ) **ತತ್ತತ್ಸ್ಥಾನದಲಿ** = ಆಯಾಯಾ ಅಧಿಷ್ಠಾನಗತ ಸ್ಥಾನಗಳಲ್ಲಿ **ತಿಳಿದು** = ಜ್ಞಾನಪೂರ್ವಕ ತಿಳಿದುಕೊಂಡು **ನೆಗ್ಗಳಿಸಿ** = ಹೆಚ್ಚಾದ (ಅತಿಶಯವಾಗಿ ವರ್ಧಿಸಿದ) **ಹಬ್ಬಿದ** = ವ್ಯಾಪಿಸಿಕೊಂಡಿರುವ ಶ್ರೀಪರಮಾತ್ಮನ **ಅಲವವ್ಯಾಪ್ತದ** = ಪೂರ್ಣವಾಗಿ ವ್ಯಾಪ್ತವಾಗಿರುವ **ರೂಪಗಳ** = ಭಗವದ್ವಿಭೂತಿರೂಪಗಳನ್ನು **ಮನದಿ** = ಮನಸ್ಸಿನಲ್ಲಿ **ಪೂಜಿಸು** = ಅರ್ಚನೆಮಾಡು **ನೋಡುತಲಿ** = ಹಾಗೂ ಆ ವಿಭೂತಿರೂಪಗಳನ್ನು ಕಾಣುತ್ತಾ **ಹಿಗ್ಗುವದು** = ಸಂತೋಷ

ದಿಂದ ಉಬ್ಬುವವನಾಗು. (ಅಥವಾ ಆ ಭಗವದ್ವಿಭೂತಿರೂಪಗಳನ್ನು ತತ್ತತ್ಸ್ಥಾನಗಳಲ್ಲಿ ಮನಸ್ಸಿನ ದ್ವಾರಾ ಪೂಜಿಸು. ಆ ವ್ಯಾಪ್ತರೂಪಗಳನ್ನು ನೋಡಿ ಹಿಗ್ಗುತ್ತಿರು) ॥೨॥

# ವ್ಯಾಖ್ಯಾನಗಳು

## (೧) ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ :—

ಸಜಾತಿ ವಿಜಾತಿ ವಿಭೂತಿರೂಪಗಳಿಗೆ ಅಧಿಷ್ಠಾನಗಳ ಹೇಳಿ, ಆ ಅಧಿಷ್ಠಾನ ಸಾಂಕೇತದಿಂದಲೇ ಪರಮಾತ್ಮನಿಗೆ ಆಯಾನಾಮಗಳೆಂತಲೂ ಹೇಳ ತಾರೆ.

ಸಮಸ್ತವಾದ ಉದಕಗಳಲ್ಲಿ ಭೂಮಿಯಲ್ಲಿ (ಭೂಲೋಕ ಎಂತ ತಾತ್ಪರ್ಯ) ಉಪಲಕ್ಷಣಯಾ ಅತಳಾದಿ ಲೋಕಗಳು ಗ್ರಾಹ್ಯ, ಆಕಾಶ ಸಾಂಕೇತದಿಂದ ಊರ್ಧ್ವಲೋಕಗಳು ಆರು ಗ್ರಾಹ್ಯ. ಇವುಗಳಲ್ಲಿ ಹೀಗೆ ಈ ಸ್ಥಾನಗಳಲ್ಲಿ ಸಂಚಾರಮಾಡುವ ಅನೇಕ ಯೋನಿ ಪ್ರಭೇದ ಉಳ್ಳ ಪ್ರಾಣಿ ಸಮೂಹಗಳ ಸ್ಥೂಲದೇಹದಿಂದ ಸೃಷ್ಟಿಮಾಡಿ, ಆಯಾ ಸ್ಥೂಲದೇಹಗಳಲ್ಲಿ ವಿಭೂತಿ ಸಾಂಕೇತವಾದ ಪ್ರವಿಷ್ಟರೂಪಗಳಿಂದ ಇದ್ದಾನೆ. ಸ್ಥೂಲದೇಹ ಗಳಿಂದ ಸೃಷ್ಟಿಮಾಡಿದ ಜೀವರ ಸಮೂಹದಲ್ಲಿ ಸ್ವರೂಪ ವಿವಕ್ಷಯಾ ತಾರತಮ್ಯ ಪಂಚಭೇದ ಜ್ಞಾನದಿಂದ ಸಹಿತರಾದ ಮುಕ್ತಿಯೋಗ್ಯಜಾತಿ (ಸಜಾತಿ), ಹೋಗಲ್ಪಟ್ಟ ತಾರತಮ್ಯ ಪಂಚಭೇದಜ್ಞಾನರಹಿತರಾಗಿ ಇರುವ ತಮೋಯೋಗ್ಯಜಾತಿ (ವಿಜಾತಿ), ಈ ಉಭಯಜ್ಞಾನಗಳಿಗೂ ಸಂಬಂಧ ಪಡದೇ ಸಾಧಾರಣ ಉಭಯಜ್ಞಾನಮಿಶ್ರರಾಗಿ ಇರುವ ನಿತ್ಯಸಂಸಾರಿಗಳು (ಸಾಧಾರಣ), ಈ ತ್ರಿವಿಧಜೀವರೊಳಗೆ ಅಂತರಾಂತರ ಇರತಕ್ಕ ಸಜಾತಿ

ವಿಜಾತಿಗಳ ವಿಶೇಷಗಳ (ವಿಶೇಷ) ತಿಳಿದವನಾಗಿ, ಎಂದರೆ, ದೃಷ್ಟಾಂತ :- (೧) ವೃಕ್ಷಸಮೂಹ ವಿಜಾತಿ (೨) ಮನುಷ್ಯ ಸಮೂಹ ಸಜಾತಿ (೩) ಚೂತ ವೃಕ್ಷಕ್ಕೂ ಪನಸ ವೃಕ್ಷಕ್ಕೂ ವಿಜಾತಿ, ಬ್ರಾಹ್ಮಣಗೂ ಶೂದ್ರಗೂ ಪರಸ್ಪರ ವಿಜಾತಿ, ಇತ್ಯಾದಿ ಸಜಾತಿ ವಿಜಾತಿಗಳ ತಿಳಿದಂಥಾವನಾಗಿ, ಆಯಾಯಾ ದೇಹಸ್ಥಾನಗಳಲ್ಲಿ (ತತ್ತಸ್ಥಾನದೊಳು) ತನ್ನ ಸನ್ನಿಧಾನದ ಮಹಾತ್ಮ್ಯ ವೆಗ್ಗಳಮಾಡಿ (ಹೆಚ್ಚು ಮಾಡಿ), ವಿಭೂತಿ ಅಧಿಕ ಮಾಡೋ ನಿಮಿತ್ತ ವ್ಯಾಪ್ತನಾದ ಶ್ರೀಪರಮಾತ್ಮನ (ಹಬ್ಬಿದ) ಸ್ಥೂಲಹೃದಯಾಕಾಶದಲ್ಲಿ ವಿದ್ಯಾ ಮಾನವಾದ ಬಿಂಬನಲ್ಲಿ ಐಕ್ಯ ಚಿಂತನಮಾಡಿ ಮಾನಸ ನಿರ್ಮಿತ ಪೂಜಾದ್ರವ್ಯ ಗಳಿಂದ ಐಕ್ಯಚಿಂತನ ರೂಪವಾದ ಜೀವಾಂತರ್ಗತದಲ್ಲಿ ಬಿಂಬರೂಪದಿಂದ ವ್ಯಾಪ್ತನಾದ ಜೀವಾಕಾರನಾದ ಶ್ರೀಪರಮಾತ್ಮನ್ನ ಸ್ಥೂಲಹೃದಯಗತಬಿಂಬ ನಲ್ಲಿ ಐಕ್ಯ ಚಿಂತಿಸುತ, ಈ ಪ್ರಕಾರರೂಪಗಳ ಐಕ್ಯಚಿಂತನೆ ಮಾಡುತಾ, ಇಂಥಾ ಬಿಂಬರೂಪವನ್ನ ಸರ್ವೇಂದ್ರಿಯಗಳಲ್ಲಿ ವಿದ್ಯಮಾನವಾದ ಭಗವ ದ್ರೂಪಗಳಲ್ಲಿ ಐಕ್ಯ ಚಿಂತನಿಮಾಡಿ (ನೋಡುತಲಿ) ಸರ್ವವೂ ಭಗವಕ್ರಿಯೆ ಗಳೆಂದು ಜ್ಞಾನನೇತ್ರಗಳಿಂದ ನೋಡುತಲಿ, ದೀನನಾಗಿ ಆನಂದದಿಂದ ಸಂತೋಷಪಡು ಎಂತ ಅರ್ಥ (ಹಿಗ್ಗುವುದು). ॥೨॥

### (೨) "ಭಾವಪ್ರಕಾಶಿಕಾ" ವ್ಯಾಖ್ಯಾನ :—

ನೀರಿನೊಳಗೂ, ಭೂಮಿ ಮತ್ತು ಅದರ ಕೆಳಗಿನ ಲೋಕಗಳಲ್ಲಿಯೂ, ಆಕಾಶ ಮತ್ತು ಅದರ ಮೇಲಿನ ಸ್ವರ್ಗಾದಿಲೋಕಗಳಲ್ಲಿಯೂ ಸಂಚರಿಸುವ ಸಕಲಪ್ರಾಣಿಗಳನ್ನು ಶ್ರೀ ಪರಮಾತ್ಮನು ಸೃಷ್ಟಿಸಿರುವನು. ಇವುಗಳಲ್ಲಿ ಸಜಾತಿ ಮತ್ತು ವಿಜಾತಿ ವಿಭೂತಿಗಳನ್ನು ತಿಳಿಯಬೇಕು. ಈ ಪ್ರಕಾರ ಆಯಾ ವಸ್ತುಗಳಲ್ಲಿ ಉತ್ತಮವಾದುದು ಯಾವುದೋ, ಅದರಲ್ಲಿ ಭಗವಂತನ ವಿಭೂತಿ ಇದೆ ಎಂದು ತಿಳಿದು, ಮನಸ್ಸಿನಲ್ಲಿ ಪೂಜಿಸಬೇಕು. ವಿಭೂತಿ ಎಂದರೆ ಗೀತೆಯಲ್ಲಿ ಹೇಳಿದ ಸ್ಥಳದಲ್ಲಿ ಮಾತ್ರವೆ ಎಂದು ಭಾವಿಸಬಾರದು- ಎಂಬ ಅಭಿಪ್ರಾಯದಿಂದಲೇ ದಾಸರಾಯರು– "ವೆಗ್ಗಳಿಸಿ ಹಬ್ಬಿದ" –ಎಂದಿದ್ದಾರೆ. ನಮ್ಮ ಮನಸ್ಸಿನಲ್ಲಿ ನಾವೇ ಯೋಚಿಸಿ ಅಲ್ಲಲ್ಲಿನ ವಿಭೂತಿ

ಯನ್ನು ಚಿಂತಿಸಬೇಕು. ಗೀತೆಯಲ್ಲಿ ಹೇಳಿದಷ್ಟು ಅಲ್ಲದೆ ಸಾಧಾರಣ ವಿಭೂತಿಗಳನ್ನು ನಾವಾಗಿಯೇ ಚಿಂತಿಸಬಹುದು, ಸಾಧಾರಣ ಒಂದು ವರ್ಷ ಎರಡು ವರ್ಷದ ಮಕ್ಕಳು ಆಟವಾಡುತ್ತಿದ್ದರೆ ನೋಡುವವರಿಗೆ ಮುದ್ದಾಗಿ ಕಾಣುವುದು. ಶ್ರೀಪರಮಾತ್ಮನು ಅಲ್ಲಿ ಆ ಮಕ್ಕಳರೂಪದಿಂದ ಆಟವಾಡುತ್ತಾನೆಂದು ಭಾವಿಸಿ, ಸಜಾತಿ ವಿಜಾತಿ ವಿಭೂತಿಗಳನ್ನು ತಿಳಿಯಬೇಕು. ಆ ಮಕ್ಕಳ ಪೈಕಿ ಯಾವ ಮಗುವು ಎಲ್ಲವುಗಳಿಗಿಂತಲೂ ಹೆಚ್ಚಿನ ಆಟಪಾಟಗಳನ್ನಾಡುವುದು ಮತ್ತು ಮನುಷ್ಯಾದಿಗಳಲ್ಲಿ ಸಾಮಾನ್ಯ ಮನುಷ್ಯರಿಂದ ಆಗದ ಅಸಾಧ್ಯಕಾರ್ಯವನ್ನು ಒಬ್ಬನು ಮಾಡಿದರೆ, ಅಲ್ಲಿ ಸಜಾತೀಯ ವಿಶೇಷ ವಿಭೂತಿರೂಪವನ್ನು ತಿಳಿಯಬೇಕು. ಅಲಪವ್ಯಾಪ್ತಿ ಎಂದರೆ, ಸ್ವಲ್ಪವಲ್ಲದೆ ಬಹು ಸ್ಥಳಗಳಲ್ಲಿ ವ್ಯಾಪಿಸಿಕೊಂಡಿರುವವ ಎಂದರ್ಥ. ಇಂತಹ ಭಗವದ್ರೂಪಗಳನ್ನು ನೋಡಿ ಸಂತೋಷಿಸಬೇಕು ॥೨॥

### (೩) "ಭಾವದರ್ಪಣ ಟೀಕಾ"-ವ್ಯಾಖ್ಯಾನ :—

ಈಗ ಇನ್ನೂ ಕೆಲವು ಸ್ಥಳಗಳಲ್ಲಿ ಇರತಕ್ಕ ವಿಭೂತಿರೂಪ ಮಂದಾಧಿಕಾರಿಗಳಿಗೆ ತಿಳಿಸುತ್ತಾರೆ- **"ಜಲಧರೇತಿ".**

ನೀರು, ಭೂಮಿ, ಆಕಾಶ ಇವುಗಳಲ್ಲಿ ಸಂಚಾರಮಾಡತಕ್ಕ ಚೇತನಗಳಲ್ಲಿ ಮತ್ತು ಜಡಗಳಲ್ಲಿ ಇರುವಂಥ ರೂಪ ಯಾವುದೆಂದರೆ-ಮನುಷ್ಯರಲ್ಲಿ ವಿಜಾತಿ. ಪಕ್ಷಿ ಮೊದಲಾದವುಗಳಲ್ಲಿ ಮತ್ತು ಜಡದಂತೆ ತೋರತಕ್ಕ ವೃಕ್ಷಗಳಲ್ಲಿ ಇರೋ ರೂಪ ಸಾಧಾರಣ ರೂಪವೆಂತಲೂ, ದೇವತಾಂತರ್ಯಾಮಿ ರೂಪ ವಿಶೇಷವೆಂತಲೂ ತಿಳಿಯಬೇಕು. ಈ ವಿಷಯದಲ್ಲಿ **ಪ್ರಮಾಣ :— ಉಕ್ತಂಚ ವಿಜಯದಾಸರಾಜ್ಯೈ:—**

**"ಸುರರಂತರ್ಯಾಮಿಯು ವಿಶೇಷ ವಿಭೂತಿಯು ।**
**ತರು ವಿಹಗಾದಿಗತ ಸಾಧಾರಣ ನರಗತ ಸಜಾತಿಯು ।**
**ನಕ್ಷತ್ರ ಚಂದ್ರರಲ್ಲಿ ಕರೆಸುತಿಹದೇ ಸದಾ ವಿಜಾತಿಯು ॥"**

–ಎಂದು ಸುಳಾದಿಯಲ್ಲಿ ಉಕ್ತವಾಗಿದೆ. ಅಪರೋಕ್ಷಜ್ಞಾನಿಗಳಿಂದ ಉಕ್ತವಾದ ಪ್ರಯುಕ್ತ ಈ ರೀತಿಯಿಂದಲೂ ತಿಳಿದು, ಉಪಾಸನಾಮಾಡ ತಕ್ಕದ್ದು ॥೩॥

### (೪) "ಗುರುಹೃದಯ ಪ್ರಕಾಶಿಕಾ" ವ್ಯಾಖ್ಯಾನ :—

ಈ ವಿಭೂತಿ ರೂಪವಿರುವ ಸ್ಥಳಗಳನ್ನು ಸ್ಪಷ್ಟವಿವರಿಸುತ್ತಾರೆ. ಜಲವೆಂಬ ನೀರಿನಲ್ಲಿಯೂ, ಧರ ಎಂಬ ಭೂಮಿಯಲ್ಲಿಯೂ, ಆಗಸ ವೆಂಬ ಆಕಾಶದಲ್ಲಿಯೂ ಸಂಚರಿಸುತ್ತಿರುವ ಅನಂತ ಜೀವರನ್ನು ದೇವರು ನಿರ್ಮಿಸಿದ್ದಾನೆ. ಅವರಲ್ಲಿ ಸಜಾತಿ, ವಿಜಾತಿ, ಸಾಧಾರಣ, ವಿಶೇಷ ಮೊದಲಾದ ಮೇಲೆ ಹೇಳಿದ ಹತ್ತು ಬಗೆವಿಭೂತಿರೂಪಗಳನ್ನೇ ತಿಳಿದು, ಆಯಾಯಾ ಸ್ಥಾನಗಳಲ್ಲಿ, ವೆಗ್ಗಳಿಸಿ ಹಬ್ಬಿದ ಅಂದರೆ, ಹೆಚ್ಚಾಗಿ ವ್ಯಾಪಿಸಿ ಆಸಕ್ತನಾದ ಮನಸ್ಸಿನಲ್ಲಿ ಪೂಜಿಸುತ್ತ, ಅಲವ ವ್ಯಾಪ್ತನ–ಎಂದರೆ, ಸಂಪೂರ್ಣವ್ಯಾಪ್ತನ ಒಂದೊಂದು ರೂಪಗಳನ್ನು ಮನಸ್ಸಿನಿಂದ ನೋಡುತ್ತ ವಿಶೇಷವಾಗಿ ಹರ್ಷಪಡುತ್ತಿರು ॥೨॥

## ಸರ್ವವ್ಯಾಖ್ಯಾನಸಾರಸಂಗ್ರಹ

ಚೇತನವರ್ಗದಲ್ಲಿ (೧) ಭೂಚರರು (೨) ಜಲಚರರು ಮತ್ತು (೩) ಖೇಚ ರರು ಎಂದು ಮೂರುಪ್ರಕಾರ. ಇಂತಹ ಜೀವರಾಶಿಗಳಲ್ಲಿ ಸಜಾತಿ, ವಿಜಾತಿ, ಸಾಧಾರಣ, ವಿಶೇಷ ಇತ್ಯಾದಿ ದಶವಿಧ ವಿಭೂತಿರೂಪಗಳನ್ನು ಆಯಾಯಾ ಸ್ಥಾನಗಳಲ್ಲಿ ಬಲ್ಲವರಿಂದ ಅರಿತು, ತತ್ತದಧಿಷ್ಠಾನಗತ ಭಗವದ್ವಿ ಭೂತಿ ರೂಪಗಳನ್ನು ಮನಸಾ ಚಿಂತಿಸಿ, ಸಂತೋಷದಿಂದ ಉಬ್ಬುತ್ತಿರ ಬೇಕೆಂದು ದಾಸವರ್ಯರು ಸೂಚಿಸುತ್ತಾರೆ.

ಭೂಲೋಕದಲ್ಲಿ; ಅದರಂತೆಯೇ ಉಪಲಕ್ಷಣಯಾ ಅತಳ, ವಿತಳ, ಇತ್ಯಾದಿ ಅಧೋಗತ ಸಪ್ತಲೋಕಗಳಲ್ಲಿ ನಾನಾಪ್ರಕಾರವಾಗಿ ಜೀವರಾಶಿ

ಗಳನ್ನು ಭಗವಂತನು ಸೃಷ್ಟಿಸಿದ್ದಾನೆ. ಆಕಾಶಸಾಂಕೇತದಿಂದ, ಭೂಲೋಕದ ಮೇಲಿರುವ ಭುವರ್ಲೋಕ ಇತ್ಯಾದಿ ಆರು ಊರ್ಧ್ವಲೋಕಗಳೂ ಸಹ ಗ್ರಾಹ್ಯ. ಇಂತು ಚತುರ್ದಶ ಭುವನಾತ್ಮಕವಾದ ಈ ಬ್ರಹ್ಮಾಂಡದಲ್ಲಿ ನಾನಾಯೋನಿ ಪ್ರಭೇದಗಳುಳ್ಳ ಜೀವ ಸಮೂಹಗಳನ್ನು ಸೃಷ್ಟಿಗೆ ತಂದು, ಅವುಗಳ ಸ್ಥೂಲ ದೇಹಗಳಲ್ಲಿ ವಿಭೂತಿ ಸಾಂಕೇತವಾದ ಪ್ರವಿಷ್ಟರೂಪಗಳಿಂದ ಶ್ರೀಪರಮಾತ್ಮನು ವಿರಾಜಮಾನನಾಗಿದ್ದಾನೆ. ಇಂತಹ ಪ್ರಾಣಿಗಳ ಸಮೂಹದಲ್ಲಿ ಆಯಾಯಾ ವರ್ಗಗಳ ಪೈಕಿ ಅತ್ಯುತ್ತಮವೆಂದು ಯಾವುದು ಎದ್ದು ಕಾಣುವುದೋ, ಆ ಅಧಿಷ್ಠಾನಗಳಲ್ಲಿ ಭಗವಂತನ ವಿಭೂತಿ ಇದೆ ಎಂದು ತಿಳಿಯತಕ್ಕದ್ದು. ಅಂತಹ ಜೀವಸಮುದಾಯದಲ್ಲಿ (೧) ತಾರತಮ್ಯ ಪಂಚಭೇದಜ್ಞಾನದಿಂದ ಯುಕ್ತರಾದ ಮುಕ್ತಿಯೋಗ್ಯ ಚೇತನರಲ್ಲಿ ಸಜಾತಿ ವಿಭೂತಿ ರೂಪ. (೨) ಮಾನವ ವರ್ಗದಲ್ಲಿ ಮನುಷ್ಯೋತ್ತಮರು. (೩) ಪಂಚಭೇದಜ್ಞಾನ ರಹಿತರಾದ ತಮೋಯೋಗ್ಯ ಚೇತನರಲ್ಲಿ ವಿಜಾತಿ ವಿಭೂತಿರೂಪ (೪) ಆಕಾಶಸ್ಥಾನದಲ್ಲಿ ನಕ್ಷತ್ರಮಂಡಲದಲ್ಲಿ ಚಂದ್ರನಲ್ಲಿರುವ ಪ್ರವಿಷ್ಟರೂಪ "ವಿಜಾತಿ" (೫) ನಿತ್ಯಸಂಸಾರಿಗಳಲ್ಲಿ ಸಾಧಾರಣ ವಿಭೂತಿರೂಪ (೬) ಆಕಾಶದಲ್ಲಿ ಸಂಚರಿಸುವ ಪಕ್ಷಿವರ್ಗ, ಭೂಮಿಯ ಮೇಲೆ ಸ್ಥಾವರ ರೂಪ ದಲ್ಲಿರುವ ವೃಕ್ಷಸಮೂಹ ಇತ್ಯಾದಿಗಳಲ್ಲಿ "ಸಾಧಾರಣ" ವಿಭೂತಿರೂಪ ವನ್ನೇ ಚಿಂತಿಸತಕ್ಕದ್ದು, (೭) ಸ್ವರ್ಗಲೋಕಗತ ದೇವತಾವರ್ಗಗಳ ಪೈಕಿ ಬ್ರಹ್ಮಾದಿ ದೇವತೆಗಳ ಅಂತರ್ಯಾಮಿ ರೂಪವು ವಿಶೇಷವೆನಿಸುವುದು. ಇಂತು, ವಿಭೂತಿರೂಪಗಳನ್ನು ಆಯಾಯಾ ಅಧಿಷ್ಠಾನಗಳಲ್ಲಿ ಚಿಂತಿಸುತ್ತಾ, ತತ್ತತ್ಸ್ಥಾನಗತ ಭಗವದ್ವಿಭೂತಿಗಳನ್ನು ಹೆಚ್ಚಿನ ಸಂತೋಷದಿಂದ ಹಿಗ್ಗುತ್ತಾ ಧ್ಯಾನೋಪಾಸನೆಗೆ ತಂದುಕೊಂಡು, ಅಂತಹ ಪರಿಪೂರ್ಣನ ವ್ಯಾಪ್ತರೂಪ ಗಳನ್ನು (ಅಲವವ್ಯಾಪ್ತರೂಪಗಳ) ಮನೋಮಂದಿರದಲ್ಲಿ ಈಕ್ಷಿಸುತ್ತಾ ಮೈ ಮರೆತು ಪರವಶನಾಗಬೇಕೆಂದು ದಾಸರಾಯರ ತಾತ್ಪರ್ಯ ಭಾವ ॥೨॥

## ಪದ್ಯ (೩)

**ಮೂಲ :—**

> **ಪ್ರತಿಮ ಶಾಲಿಗ್ರಾಮ ಗೋ ಅಭ್ಯಾ ।**
> **ಗತನತಿಥಿ ಶ್ರೀತುಲಸಿ ಪಿಪ್ಪಲ ।**
> **ಯತಿ ವನಸ್ಥ ಗೃಹಸ್ಥ ವಟು ಯಜಮಾನ ಸ್ವ ಪರಜನ ॥**
> **ಪೃಥಿವಿ ಜಲ ಶಿಖಿ ಪವನ ತಾರಾ ।**
> **ಪಥ ನವಗ್ರಹ ಯೋಗ ಕರಣ ಭ ।**
> **ತಿಥಿ ಸಿತಾಸಿತಪಕ್ಷ ಸಂಕ್ರಮಣವನಧಿಷ್ಠಾನ ॥ ॥೩॥**

**ಅವತರಿಣಿಕೆ :—**

ಪ್ರತಿಮಾದಿಗಳು, ಸ್ವಯಂವ್ಯಕ್ತರೂಪ ಶಾಲಿಗ್ರಾಮ, ಗೋವು, ಅತಿಥಿ, ಅಭ್ಯಾಗತ, ಶ್ರೀತುಲಸಿ, ಅಶ್ವತ್ಥವೃಕ್ಷ, ಯತಿ, ವಾನಪ್ರಸ್ಥಾಶ್ರಮಿ, ಗೃಹಸ್ಥಾಶ್ರಮಿ, ಬ್ರಹ್ಮಚಾರಿ, ಯಜಮಾನ, ಸ್ವಜನರು, ಪರಜನರು, ಭೂಮಿ, ನೀರು, ಅಗ್ನಿ, ವಾಯು, ನಕ್ಷತ್ರಮಂಡಲ, ನವಗ್ರಹಗಳು, ಯೋಗ, ಕರಣಗಳು, ತಿಥಿ, ಶುಕ್ಲ ಮತ್ತು ಕೃಷ್ಣ ಎಂಬ ಪಕ್ಷದ್ವಯಗಳು, ಸಂಕ್ರಮಣ, ಇತ್ಯಾದಿ ಸ್ಥಾನಗಳಲ್ಲಿ ಭಗವದ್ವಿಭೂತಿ ರೂಪಗಳನ್ನು ಚಿಂತಿಸಬೇಕೆಂದು ತಿಳಿಸುತ್ತಾರೆ- **"ಪ್ರತಿಮೆ"** ಎಂಬ ಪ್ರಸಕ್ತ ಸಂಧಿಗತ ೩ ನೆಯ ಈ ಪದ್ಯದಿಂದ ॥೩॥

**ಪ್ರತಿಪದಾರ್ಥ :—**

**ಪ್ರತಿಮೆ** = ಚಲಾಚಲಪ್ರತಿಮೆಗಳು (ಪ್ರತಿಷ್ಠಿತವಾದ ದಶವಿಧಪ್ರತಿಮೆಗಳು) **ಶಾಲಿಗ್ರಾಮ** = **ಶ್ರೀ**ಪರಮಾತ್ಮನು ಸ್ವಯಂವ್ಯಕ್ತನಾಗಿರುವ ಸಾಲಿ

ಗ್ರಾಮ ಶಿಲೆ **ಗೋ**=ಪ್ರಸವವಾದ ಹಸು (ಕಾಮಧೇನು ತದ್ವತ್ ವೇದಗಳು) **ಅಭ್ಯಾಗತ**=ಆಹ್ವಾನಿತನಾದ ಭಗವದ್ಭಕ್ತ **ಅತಿಥಿ**=ಆಮಂತ್ರಿತನಾಗದೇ ವೈಶ್ವದೇವಸಮಯದಲ್ಲಿ ಅಶನಾರ್ಥನಾಗಿ ಮನೆಗೆ ಬರುವ ಭಗವದ್ಭಕ್ತ **ಶ್ರೀತುಲಸಿ**=ಶ್ರೀಲಕ್ಷ್ಮೀಸನ್ನಿಧಾನೋಪೇತಳಾದ ಶ್ರೀತುಲಸಿ **ಪಿಪ್ಪಲ**=ಭಗವದ್ಭಕ್ತರಿಂದ ಪ್ರತಿಷ್ಠಿತವಾದ ಉಪನಯನ ವಿವಾಹಾದಿ ಸಂಸಾರಗಳುಳ್ಳ ಅಶ್ವತ್ಥವೃಕ್ಷ **ಯತಿ**=ನಿಷ್ಕಾಮಿಯಾಗಿ ವೈರಾಗ್ಯ ಸಂಪನ್ನನಾದ ಸಂನ್ಯಾಸಿ **ವನಸ್ಥ**=ವಾನಪ್ರಸ್ಥಾಶ್ರಮಿ **ಗೃಹಸ್ಥ**=ಧರ್ಮಕರ್ಮಾಸಕ್ತನಾಗಿ ಸದಾಚಾರ ಸಂಪನ್ನನಾದ ಗೃಹಸ್ಥಾಶ್ರಮಿ **ವಟು**=ಬ್ರಹ್ಮಚರ್ಯವ್ರತನಿಷ್ಠನಾಗಿರುವ ಬ್ರಹ್ಮಚಾರಿ **ಯಜಮಾನ**=ಧರ್ಮಾಧರ್ಮಗಳನ್ನು ಶಾಸನ ಮಾಡುವ ರಾಜ **ಸ್ವಜನ**=ಸ್ವಕೀಯರಾದ ಪತ್ನೀ ಪುತ್ರಾದಿಗಳು ಹಾಗೂ ಬಂಧುವರ್ಗ **ಪರಜನ**=ಮಿತ್ರಾದಿಗಳೇ ಮುಂತಾದ ಇತರರು **ಪೃಥಿವಿ**=ಭೂಮಿ (ಪುರಾಣಪ್ರಸಿದ್ಧವಾದ ಪುಣ್ಯಕ್ಷೇತ್ರಗಳು) **ಜಲ**=ನೀರು (ಪುಣ್ಯತೀರ್ಥರೂಪವಾದ ನದಿ, ತಟಾಕ ಇತ್ಯಾದಿ) **ಶಿಖಿ**=ಅಗ್ನಿ (ಯಜ್ಞಸಂಬಧವಾದ ಆಹವನೀಯಾದಿ ಅಗ್ನಿಗಳು) **ಪವನ**=ಶ್ವಾಸರೂಪವಾದ ವಾಯು **ತಾರಾಪಥ**=ನಕ್ಷತ್ರ ಮಾರ್ಗ (ಆಕಾಶ) **ನವಗ್ರಹ**=ಸೂರ್ಯ ಚಂದ್ರಾದಿ ನವಗ್ರಹಗಳು **ಯೋಗ**=ವಿಷ್ಕಂಭಾದಿ ಯೋಗಗಳು **ಕರಣ**=ಬವ ಬಾಲದಾದಿ ಕರಣಗಳು **ಭ**=ಅಶ್ವಿನ್ಯಾದಿ ೨೭ನಕ್ಷತ್ರಗಳು. **ತಿಥಿ**=ಪ್ರತಿಪದಾದಿ ೧೫ ತಿಥಿಗಳು **ಸಿತಪಕ್ಷ**=ಶುಕ್ಲಪಕ್ಷ **ಅಸಿತಪಕ್ಷ**=ಕೃಷ್ಣಪಕ್ಷ **ಸಂಕ್ರಮಣ**=ಮೇಷಾದಿ ೧೨ ಸಂಕ್ರಮಣಗಳು (ಉತ್ತರಾಯಣ ಮತ್ತು ದಕ್ಷಿಣಾಯನ ಸಂಕ್ರಮಣಗಳು) **ಅವನ**=ಸರ್ವತ್ರ ವ್ಯಾಪ್ತನಾದ ಶ್ರೀಪರಮಾತ್ಮನ **ಅಧಿಷ್ಠಾನ**=ಸನ್ನಿಧಾನ ವಿಶೇಷವಾದ ಸ್ಥಾನಗಳು. ॥೩॥

## ವ್ಯಾಖ್ಯಾನಗಳು

### (೧) ಶ್ರೀ ಸಂಕರ್ಷಣಒಡೆಯರ ವ್ಯಾಖ್ಯಾನ :—

ವಿಭೂತಿರೂಪಗಳ ಅಧಿಷ್ಠಾನಗಳನ್ನು ಹೇಳುತ್ತಾರೆ. ತಾರತಮ್ಯ

ಪಂಚಭೇದಜ್ಞಾನದಿಂದ ಯುಕ್ತರಾದ ಭಗವದ್ಭಕ್ತರಾದ ದೇವ ಮನುಷ್ಯರಿಂದ ನಿರ್ಮಿತವಾದ. ಪ್ರತಿಷ್ಠವಾದ ದಶವಿಧಪ್ರತಿಮೆಗಳು (ಪ್ರತಿಮೆ), ಗಂಡ ಕೀನದಿಯಲ್ಲಿ ಉತ್ಪನ್ನವಾದ ಶಾಲಿಗ್ರಾಮಗಳು, ಪ್ರಸವವಾದ ಆಕಳು ಕಾಮಧೇನು ಹಾಂಗೆ ವೇದಗಳು (ಗೋ), ಮರ್ಯಾದಾಪೂರ್ವಕವಾಗಿ ಕರೆಸಿಕೊಂಡು, ಆಗತನಾದ ಭಗವದ್ಭಕ್ತ (ಅಭ್ಯಾಗತ), ಅವ ಬಂದಕಾಲದಲ್ಲಿ ಅವನಲ್ಲಿ ಭಗವದ್ವಿಭೂತಿ ಅಧಿಕ. ತಿಥಿಗೆ ನಿಯಮವಾಗದೇ ಕರೆಸಿಕೊಳ್ಳದೇ ವೈಶ್ವದೇವ ಸಮಯದಲ್ಲಿ ಅಶನಾರ್ಥನಾಗಿ ಬಂದ ಭಗವದ್ಭಕ್ತನಾದವ. ದೇವರಿಗೆ ಪೂಜೋಪಯೋಗ್ಯವಾದ ಶ್ರೀಲಕ್ಷ್ಮೀಸನ್ನಿಧಾನವಿಶೇಷವಾದ ಶ್ರೀತುಲಸಿ, ಭಗವದ್ಭಕ್ತರಿಂದ ಪ್ರತಿಷ್ಠಿತವಾದ ಉಪನಯನ ವಿವಾಹಾದಿಗಳಾದ ಅಶ್ವತ್ಥವೃಕ್ಷ (ಪಿಪ್ಪಲ), ಕಾಮ್ಯಕರ್ಮತ್ಯಾಗಮಾಡಿ, ಚಾತುರ್ಮಾಸ್ಯಾದಿ ವ್ರತಾನುಷ್ಠಾನಗಳಿಂದ ಗುರೂಪದಿಷ್ಟನಾಗಿ, ಸನ್ಯಾಸಾಶ್ರಮಸ್ವೀಕರಿಸಿದವ (ಯತಿ), ತಾರತಮ್ಯ ಪಂಚಭೇದಜ್ಞಾನಪೂರ್ವಕ ಭಗವದ್ಭಕ್ತನಾದವ, ವನದಲ್ಲಿ ಸಂಚಾರ ಮಾಡಿ ಫಲಾದಿಗಳನ್ನು ಆಹಾರಮಾಡಿ, ತಾರತಮ್ಯ ಪಂಚಭೇದಜ್ಞಾನ ದಿಂದ ಯುಕ್ತನಾಗಿ ಭಗವದ್ಭಕ್ತನಾದವ (ವನಸ್ಥ), ಅಹಂಕಾರ ಮಮಕಾರ ರಹಿತನಾಗಿ, ದಾರಾ ಪುತ್ರಾದಿಗಳಿಂದಲೂ ಯುಕ್ತನಾಗಿ ತಾರತಮ್ಯ ಪಂಚ ಭೇದಜ್ಞಾನದಿಂದಲೂ ಭಗವದ್ಭಕ್ತದಾಗಿಯೂ, ಸರ್ವವ್ಯಾಪಾರಗಳಲ್ಲಿ ಪರ ಮಾತ್ಮನ ಚಿಂತನದಿಂದ ಇರತಕ್ಕವ (ಗೃಹಸ್ಥ), ಬ್ರಹ್ಮಚರ್ಯನಿಷ್ಠನಾಗಿ ಭೇದಜ್ಞಾನ, ತಾರತಮ್ಯಜ್ಞಾನ, ಜಿತೇಂದ್ರಿಯತ್ವ, ಭಿಕ್ಷಾಟನಾದಿ ಸದ್ವ್ಯಾ ಪಾರದಿಂದ ಇರುವ ಬ್ರಹ್ಮಚಾರಿ (ವಟು), ಧರ್ಮಾಧರ್ಮಗಳ ಶಾಸನ ಮಾಡತಕ್ಕ ಅಧಿಪತಿ (ಯಜಮಾನ), ತಾನು ಮಾಡತಕ್ಕ ಸತ್ಕಾರ್ಯಗಳಿಗೆ ಪರಲೋಕಸಾಧನೆಗೆ ಸಹಾಯಭೂತರಾದ ಭೇದಜ್ಞಾನಯುಕ್ತರಾದ ಬಂಧು ಜನರುಗಳು (ಸ್ವಜನ), ತನ್ನ ಸತ್ಕಾರ್ಯಗಳಿಗೆ ಅನುಕೂಲರಾಗಿ, ಅದಕ್ಕೆ ಉಪೋದ್ಬಲ ಮಾಡತಕ್ಕ ಪರಕೀಯ ಜನರು (ಪರಜನ), ಪುರಾಣಪ್ರಸಿದ್ಧ ವಾದ ಕ್ಷೇತ್ರಭೂಮಿಗಳು (ಪೃಥಿವಿ), ಪುರಾಣಪ್ರಸಿದ್ಧವಾದ ತೀರ್ಥರೂಪ ಜಲಗಳು (ಜಲ), ಯಜ್ಞಯಾಗಾದಿಗಳಿಂದ ಸಜ್ಜನರಿಂದ ಪ್ರತಿಷ್ಠಿತವಾದ ಯಜ್ಞ ಸಂಬಂಧವಾದ ಆವಹನೀಯಾದಿ ಅಗ್ನಿಗಳು (ಶಿಖಿ), ಶ್ವಾಸರೂಪ

ವಾದ ವಾಯು (ಪವನ), ಚಂಡವಾಯು, ನಕ್ಷತ್ರಗಳಮಾರ್ಗವು (ತಾರಾ ಪಥ), ಸೂರ್ಯಚಂದ್ರಾದಿ ನವಗ್ರಹಗಳು. ವಿಷ್ಕಂಭಾದಿಯೋಗಗಳು, ಬಲ ಬಾಲವಾದಿ ಕರಣಗಳು, ಅಶ್ವಿನ್ಯಾದಿನಕ್ಷತ್ರಗಳು (೨೭), (ಭ), ಶುಕ್ಲಪಕ್ಷ ಕೃಷ್ಣಪಕ್ಷ, ಏಕಾದಶೀತೀಥಿ, ಪೌರ್ಣಿಮಾ (ಸಿತಾ), ಅಮಾವಾಸ್ಯಾ (ಅಸಿತಾ), ಉಭಯಏಕಾದಶಿಗೆ ಪೂರ್ವಾಪರದಿನಗಳಾದ ದಶಮೀ-ದ್ವಾದಶೀ, ಉತ್ತರಾಯಣ, ದಕ್ಷಿಣಾಯಣ ಸಂಕ್ರಮಣಗಳು,–ಇವು ಲಕ್ಷ್ಮೀಪತಿಯಾದ ಶ್ರೀಪರಮಾತ್ಮನ ವಿಭೂತಿರೂಪಗಳಿಗೆ ಅಧಿಷ್ಠಾನಗಳು. ಈ ೨೮ ವಿಭೂತಿ ಗಳಿಗೆ ವಿಭಾಗದ ವಿವರ ಹ್ಯಾಂಗೆಂದರೆ :—

| ಸಂಖ್ಯೆ | ವಿಭೂತಿಗಳು | ಅಧಿಷ್ಠಾನಗಳು |
|---|---|---|
| ೧ | ನೀತ ವಿಭೂತಿ | ನಿತ್ಯಮುಕ್ತಳಾದ ರಮಾದೇವೇರಲ್ಲಿ |
| ೨ | ಸಾಧಾರಣ | ಮಿಶ್ರಜ್ಞಾನರಾದ ನಿತ್ಯಸಂಸಾರಿಗಳಲ್ಲಿ |
| ೩ | ವಿಶೇಷ ವಿಭೂತಿ | ನವಗ್ರಹಗಳಲ್ಲಿ. ಅಶ್ವಿನ್ಯಾದಿ ನಕ್ಷತ್ರಗಳಲ್ಲಿ ಬ್ರಹ್ಮಾದಿ ಋಜುಗಳು ವ್ಯತಿರಿಕ್ತ ರುದ್ರಾದಿ ದೇವ–ಗಂಧರ್ವಪರ್ಯಂತ ದೇವತೆಗಳು-ಮಾನುಷ ವಿವಕ್ಷಾದಿಂದ ತಾರತಮ್ಯಾನುಸಾರ ವಿಶೇಷ ವಿಭೂತಿ ಉಳ್ಳವರು. |
| ೪ | ಸಜಾತಿ ವಿಭೂತಿಗಳು | ಸಮೀಚೀನ ಜ್ಞಾನದಿಂದ ಸಹಿತರಾದ ಜಾತೀಯವರಾದ ದೇವ-ಗಂಧರ್ವರು ಆರಂಭ ಮಾಡಿ ತೃಣಾಂತ ಮುಕ್ತಿ ಯೋಗ್ಯರ ಪರ್ಯಂತ, ಅಭ್ಯಾಗತ, ಅತಿಥಿ, ಯತಿ, ವನಸ್ಥ, ಗೃಹಸ್ಥ, ವಟು, ಪ್ರಭು, ಸ್ವಜನ, ಪರಿಜನರು. |

| | | |
|---|---|---|
| ೫ | ನೈಜ ವಿಭೂತಿ | ಆಯಾ ಜೀವರ ಸ್ವರೂಪದಲ್ಲಿ |
| ೬ | ಆಹಿತ ವಿಭೂತಿ | ಪ್ರತಿಮಾ, ಗೋ, ಶ್ರೀತುಲಸಿ, ಅಶ್ವತ್ಥಗಳಲ್ಲಿ |
| ೭ | ಸಜಾತಿ ವಿಭೂತಿ | ಶಾಲಿಗ್ರಾಮ, ಪೃಥ್ವೀ, ಜಲ, ಅಗ್ನಿ, ವಾಯು, ತಾರಾಪಥ, ಯೋಗ, ತಿಥಿ, ಕರಣ, ಪೌರ್ಣಮಾ, ಅಮಾವಾಸ್ಯಾ, ದಶಮೀ, ದ್ವಾದಶೀ, ಸಂಕ್ರಮಣ ಇವುಗಳಲ್ಲಿ |
| ೮ | ವಿಜಾತಿ ವಿಭೂತಿ | ತಮೋ ಯೋಗ್ಯರಲ್ಲಿ |
| ೯ | ಖಂಡವಿಭೂತಿ | ಅರ್ಜುನಾದಿಗಳಲ್ಲಿ |
| ೧೦ | ಅಖಂಡ ವಿಭೂತಿ | ಬ್ರಹ್ಮಾದಿ ಋಜುಗಳಲ್ಲಿ |

ಈ ಪ್ರಕಾರ ದಶವಿಭೂತಿಗಳಲ್ಲಿ ಸಮೂಹತ್ವೇನ ಯಾವತ್ತು ಬಂದಂತಾಯಿತು ಎಂತ ತಾತ್ಪರ್ಯ ॥೩॥

### ೨) "ಭಾವಪ್ರಕಾಶಿಕೆ" ವ್ಯಾಖ್ಯಾನ :—

ಪರಮಾತ್ಮನ ವಿಭೂತಿಯನ್ನು ತಿಳಿಯುವುದಕ್ಕಾಗಿ, ಅವನ ಅಧಿಷ್ಠಾನಗಳಲ್ಲಿ ನೀತ, ಸಾಧಾರಣ, ಸಜಾತಿ ಮೊದಲಾದ ರೂಪಗಳನ್ನು ಹೇಳುತ್ತಾರೆ.

ಸ್ವಯಂವ್ಯಕ್ತಪ್ರತಿಮೆಗಳು, ಸಾಲಿಗ್ರಾಮಗಳು ಇವುಗಳಲ್ಲಿ **ನೀತ** ವಾದ ವಿಭೂತಿಯನ್ನು ಚಿಂತಿಸಬೇಕು. ಗೋವುಗಳು, ಮೊದಲೇ ಮನೆಗೆ ಬಂದಿರುವವರು ಅಭ್ಯಾಗತರು. ವೈಶ್ವದೇವಕಾಲಕ್ಕೆ ಸರಿಯಾಗಿ ಮನೆಗೆ ಬರುವ ಅತಿಥಿ, ಶ್ರೀತುಳಸಿ, ಅಶ್ವತ್ಥ, ಯತಿ, ವಾನಪ್ರಸ್ಥ ಇವರಲ್ಲಿ **ವಿಶೇಷ** ವಿಭೂತಿಯನ್ನು ತಿಳಿಯಬೇಕು. ಗೃಹಸ್ಥ, ಬ್ರಹ್ಮಚಾರಿ, ಪ್ರಭು, ಸ್ವಪರ ಜನ ಆದರೆ, ತಮ್ಮವರು, ಪರಕೀಯರು, ಇವರೆಲ್ಲರೂ ಭಗವದ್ಭಕ್ತರಾಗಿದ್ದಾರೆ. ಅವರಲ್ಲಿ **ಸಾಧಾರಣ** ವಿಭೂತಿಯನ್ನು ತಿಳಿಯಬೇಕು. ಅಥವಾ ಮೇಲೆ ಹೇಳಿದ ವನಸ್ಥ, ಗೃಹಸ್ಥ, ಬ್ರಹ್ಮಚಾರಿ, ಯಜಮಾನ ಇವರೆಲ್ಲರೂ ಸ್ವಪರರಾಗಿರಬೇಕೆಂದು ಒಂದರ್ಥ.

**"ಸ್ವತಂತ್ರಾತ್ಯ್ಸ್ವಃ ಪರಮಾತ್ಮಾತಸ್ಮಿನ್ಪರಾಃ ಆಸಕ್ತಾಃ ಸ್ವಪರಾಃ"**

"ಸ್ವ" ಅಂದರೆ ಸ್ವತಂತ್ರನಾದ ಪರಮಾತ್ಮನಿಗೆ ಹೆಸರು. ಅವನಲ್ಲಿ ಆಸಕ್ತರಾಗಿರುವವರು "ಸ್ವಪರರು" ಮೇಲೆ ಹೇಳಿದವರೆಲ್ಲರೂ ಭಗವತ್ಪರರಾಗಿದ್ದರೆ ಅವರನ್ನು ಪೂಜಿಸಬೇಕೆಂದರ್ಥ. ಪೃಥ್ವಿ, ಜಲ, ಅಗ್ನಿ, ವಾಯು, ಆಕಾಶ ಇವುಗಳಲ್ಲಿ ಪರಮಾತ್ಮನ **ಅಖಂಡ** ವಿಭೂತಿಯನ್ನು ಚಿಂತಿಸಬೇಕು.

**"ಪೃಥ್ವೀ ವಾಯುರಾಕಾಶ ಆಪೋಜ್ಯೋತಿರಹಂ ಮಹಾನ್"**
**[ ಭಾಗವತ ಏಕಾದಶಸ್ಕಂದ— ಅಧ್ಯಾಯ (೧೬)- ಶ್ಲೋಕ (೩೭)]**
ಎಂಬ ವಾಕ್ಯದಿಂದ ಪೃಥಿವ್ಯಾದಿ ಪಂಚಭೂತಗಳಲ್ಲಿ ಅಖಂಡವಾಗಿ ತನ್ನನ್ನು ತಿಳಿ-ಎಂದು ಉದ್ಧವನಿಗೆ ಶ್ರೀ ಕೃಷ್ಣನು ಹೇಳಿರುವನು. ಇವುಗಳಲ್ಲಿಯೇ ಖಂಡರೂಪಗಳನ್ನೂ ತಿಳಿಯಬೇಕು.

**"ಗಂಧಮಾತ್ರ ಮಹಂ ಭುವಃ । ಅಪಾಂ ರಸಶ್ಚ ಪರಮಃ ಶಬ್ದೋಹಂ ನಭಸಃ ಪರಃ ॥"**

—ಇತ್ಯಾದಿ ವಾಕ್ಯಗಳಿಂದ ಭೂಮಿಯಲ್ಲಿ ಗಂಧಗುಣ, ಉದಕದಲ್ಲಿ ರಸ, ತೇಜಸ್ಸಿನಲ್ಲಿ ರೂಪ, ವಾಯುವಿನಲ್ಲಿ ಸ್ಪರ್ಶ, ಆಕಾಶದಲ್ಲಿ ಶಬ್ದ ಇಂತಹ

ವಸ್ತುಗಳಲ್ಲಿ ಖಂಡರೂಪಗಳನ್ನು ಚಿಂತಿಸಬೇಕು. ನವಗ್ರಹಗಳಲ್ಲಿ ವಿಜಾತೀಯ ಖಂಡರೂಪಗಳನ್ನು ಚಿಂತಿಸುವುದಲ್ಲದೆ, ನವಗ್ರಹ ವಿಜಾತೀಯರಲ್ಲಿ ಸೂರ್ಯ ನಲ್ಲಿ ಅಖಂಡರೂಪವನ್ನು ಚಿಂತಿಸಬೇಕು. ಯೋಗಗಳಲ್ಲಿ ಸಜಾತೀಯ ಖಂಡ ರೂಪಗಳನ್ನೂ, ವ್ಯತೀಪಾತದಲ್ಲಿ ಅಖಂಡರೂಪವನ್ನೂ ಚಿಂತಿಸಬೇಕು. ಹೀಗೆ ಕರಣಗಳಲ್ಲಿ ಖಂಡರೂಪ, ಅಭಿಜಿತ್ ಎಂಬ ನಕ್ಷತ್ರದಲ್ಲಿ ಅಖಂಡರೂಪ ವನ್ನು ಚಿಂತಿಸಬೇಕು.

**"ನಕ್ಷತ್ರಾಣಾಂ ತಥಾಭಿಜಿತ್"-ಎಂಬ ಭಾಗವತ ವಾಕ್ಯವು** ಇದಕ್ಕೆ ಪ್ರಮಾಣವು. ತಿಥಿಗಳಲ್ಲಿ ಖಂಡರೂಪವನ್ನೂ, ದ್ವಾದಶಿಯಲ್ಲಿ ಅಖಂಡ ರೂಪವನ್ನು ಚಿಂತಿಸಬೇಕು. ಶುಕ್ಲಪಕ್ಷ ಮತ್ತು ಕೃಷ್ಣಪಕ್ಷಗಳಲ್ಲಿ ಖಂಡರೂಪ ಗಳನ್ನು, ಪೌರ್ಣಮಿ ಮತ್ತು ಅಮಾವಾಸ್ಯೆಗಳಲ್ಲಿ ಅಖಂಡರೂಪಗಳನ್ನೂ ಚಿಂತಿಸಬೇಕು. ಮೇಷಾದಿ ೧೨ ಸಂಕ್ರಮಣಗಳಲ್ಲಿ ಖಂಡರೂಪಗಳನ್ನೂ, ಮಕರ ಮತ್ತು ಕಟಕ ಸಂಕ್ರಾಂತಿಗಳಲ್ಲಿ ಅಖಂಡರೂಪವನ್ನೂ ಚಿಂತಿಸ ಬೇಕು. ॥೩॥

**(೩) "ಭಾವದರ್ಪಣಟೀಕಾ" ವ್ಯಾಖ್ಯಾನ :—**

**ಉಕ್ತಂಚ ಭಾಗವತೇ :—**

**"ಶೈಲೀ ದಾರುಮಯೀ ಲೌಹೀ ಲೇಪ್ಯಾ ಲೇಖ್ಯಾಚ ಸೈಕತೀ ।**
**ಮನೋಮಯೀ ಮಣಿಮಯೀ ಪ್ರತಿಮಾಷ್ಟವಿಧಾಃ ಸ್ಮೃತಾಃ ॥"**

ಎಂದು ಎಂಟುವಿಧ ಪ್ರತಿಮೆಗಳನ್ನು ಹೇಳಿದ್ದಾರೆ. ಅಂದರೆ—

(೧) ಕಲ್ಲಿಂದು (೨) ಕಟ್ಟಿಗೀದು (೩) ಪಂಚಲೋಹದ್ದು (೪) ಔಷಧೀ ರಸದಿಂದ ಮಾಡಿದಂಥ ಲೇಪ್ಯಎಂಬೋ ಪ್ರತಿಮಾ. (೫) ಬರೆಯಲ್ಪಟ್ಟ ಪ್ರತಿಮಾ (೬) ಉಸಬುಯಿಂದ (೭) ಮನಸ್ಸಿನಿಂದ ನಿರ್ಮಿತವಾದದ್ದು ಮತ್ತು (೮) ನವರತ್ನಗಳಿಂದ ರಚಿಸಲ್ಪಟ್ಟದ್ದು.

"ವಿಯುತ್ಪರ್ಜನ್ಯಗೋ ನೀತಃ ಪ್ರಭಿನ್ನೇಷು ಜನೇಷು ಚ।
ಸಹಜಾಹಿತ ನೈಜಾತಿ ರಿಕ್ತ ಸಪ್ತಸು ನೈಹರಿರಿತಿ ||"

(೧)-ವಿಷ್ಣುರಹಸ್ಯೇ ||

(೨) ಉಕ್ತಮೇಕಾದಶಸ್ಕಂಧೇ—

"ಸೂರ್ಯೋಽಗ್ನಿ ಬ್ರಾಹ್ಮಣೋ ಗಾವೋ ವೈಷ್ಣವಃ ಖಂ ಮರುಜ್ಜಲಮಿತಿ ||"

(೩) ಗೀತಾಯಾಂಚ—

"ಅಶ್ವತ್ಥಃ ಸರ್ವವೃಕ್ಷಾಣಾಮಿತಿ । ಅಹಂ ಕ್ರತುರಹಂ ಯಜ್ಞಃ ಸ್ವಧಾಮಹಮೌಷಧಮ್ ||

ಮಂತ್ರೋಽಮಹಮೇವಾಜ್ಯ ಮಹಮಗ್ನಿರಹಂ ಹುತಮಿತಿ ||"

(೪) ಭಾಗವತೇ ಚ—

"ಆಶ್ರಮಾಣಾಮಹಂ ತುರ್ಯೋ ಇತಿ " ||

(೫) ಸ್ಕಾಂಧೇ ಚ :—

"ಕಲಾಕಾಷ್ಠ ಮುಹೂರ್ತಶ್ಚೇತಿ ||"

(೬) ವಿಷ್ಣುರಹಸ್ಯೇ ಚ :—

"ಅಹಂ ಸೋಮೋ ಬೃಹಸ್ಪತಿಃ ||"

"ಬ್ರಹ್ಮಾ ವಾಯುಸ್ತಥೋ ರುದ್ರೋ ವರುಣೋ ಮಿತ್ರ ಏವ ಚ।
ಯಜಮಾನೋ ಹವಿಶ್ಚಾಹಂ ಸರ್ವೇ ಸರ್ವಸ್ಥಿತತ್ವತಃ ||"

-ಎಂತೆಂದು ಬಹು ಪ್ರಮಾಣಗಳು ಉಕ್ತವಾಗಿ ಇರೋದರಿಂದ ಮೇಲ್ಕಂಡ ಪ್ರತಿಮಾದಿ ಸಂಕ್ರಮಣ ಪರ್ಯಂತ ೨೮ ಅಧಿಷ್ಠಾನಗಳಲ್ಲಿ ವಿಭೂತಿರೂಪ ದಿಂದ ಶ್ರೀ ಹರಿಯು ವ್ಯಾಪ್ತನಾಗಿದ್ದಾನೆಂಬುವುದೇ ಸಿದ್ಧ. ಪಿಪ್ಪಲ-ಅಶ್ವತ್ಥ ವನಸ್ಥ-ವಾನಪ್ರಸ್ಥ, ಶಿಖಿ-ಅಗ್ನಿ, ತಾರಾಪಥ-ಅಂತರಿಕ್ಷ, ಭ-ನಕ್ಷತ್ರ, ಸಿತ-ಶುಕ್ಲಪಕ್ಷ, ಅಸಿತ-ಕೃಷ್ಣಪಕ್ಷ, ಅಧಿಷ್ಠಾನ-ಆವಾಸಸ್ಥಾನ. ॥೩॥

## (೪) ಜಮಖಂಡಿ ವಾದಿರಾಜಾಚಾರ್ಯರ ವ್ಯಾಖ್ಯಾನ:— (ಸಂಸ್ಕೃತಮೂಲ)

ವಿಭೂತಿಃ ಆಹ **"ಪ್ರತಿಮೇತಿ"**॥ ವಕ್ಷ್ಯಮಾಣರೀತ್ಯಾ ಅಸ್ಯ ವಿಭೂತಿತ್ವಾ ಅವಸೇಯಾ ॥ **ಪಿಪ್ಪಲ**- "ತಥಾಶ್ವತ್ಥಸ್ಥಿತೋಃ ಹರಿಃ ॥ ಉತ್ಕರ್ಷಹೇತುಃ ವೃಕ್ಷೇಭ್ಯೋ ಯ ಏವಾಶ್ವತ್ಥನಾಮಕಃ ॥" ಇತ್ಯಾದಿ ವಿಭೂತಿ ತತ್ವೇ ॥ ಯತಿ- "ಆಶ್ರಮಾಣಾಂ ತುರಿಯೋ ಆಹಮ್" -ಇತಿ ಚ॥ ಪೃಥುತ್ವಾತ್ ಪೃಥಿವೀ ॥ "ಜಲಮ್ ವರುಣೋ ವರುಣಾದಿತಿ"॥ **ಶಿಖಿಃ** ಪಾವಕಃ ಶೋಧನಾದಿತಿ॥ ಪವನ-ಪಾಲಕ್ಯೈಃ ವನನೀಯತ್ವಾತ್ ॥ಇತಿ॥ ರವಜ್ಞೇಯೋ ಯತೋ ರವಿಃ॥ ಸುಖಾತ್ ಸುಖತ್ವಾಸ್ತು ಶಶೀ॥ಇತಿ॥ ಕಲಾ ಕಾಷ್ಠಾ ಮುಹೂರ್ತಾಶ್ಚ ॥ ಇತ್ಯಾದೇಃ ॥೩॥

**ಕನ್ನಡಾರ್ಥ :**

"ಪಿಪ್ಪಲ"-ಎಂದರೆ, ಅಶ್ವತ್ಥವೃಕ್ಷ ಎಂದರ್ಥ. ಅಶ್ವ (ಕುದುರೆಯಂತೆ) ಸ್ಥ (ನಿಲ್ಲುವುದರಿಂದ)-ಅಶ್ವತ್ಥವೆಂದು ರೂಢಿ. ಇಂತಹ ಅಶ್ವತ್ಥವೃಕ್ಷದಲ್ಲಿ ಶ್ರೀ ಪರಮಾತ್ಮನು ವಿಭೂತಿರೂಪದಿಂದಿರುತ್ತಾನೆ. ಇದರಿಂದಲೇ ಅದಕ್ಕೆ ಆಧಿಕ್ಯ (ಅತಿಶಯ) ಉಂಟಾಗಿರುವುದು. ಆಶ್ರಮ ಚತುಷ್ಟಯಗಳಲ್ಲಿ ಯತ್ಯಾಶ್ರಮ ಶ್ರೇಷ್ಠ. ವಿಸ್ತಾರರೂಪದಲ್ಲಿರುವುದರಿಂದ (ಪೃಥು) ಭೂಮಿಗೆ "ಪೃಥ್ವೀ" -ಎಂದು ನಾಮ. ಪದಾರ್ಥಗಳನ್ನು ನಿರ್ಮಲೀಕರಣ ಮಾಡುವುದರಿಂದ ಶಿಖಿಗೆ "ಪಾವಕ"-ಎಂದೂ ಹೆಸರು. ವರುಣನು ಜಲಾಭಿಮಾನಿ ದೇವತೆ. ವರನ್ನೀಯುವುದರಿಂದ "ವರುಣ"ನು. ಸೂರ್ಯನು ಸೂರಿ (ಜ್ಞಾನಿ)ಗಳಿಂದ

ಜ್ಞೇಯನಾದುದರಿಂದ "ರವಿ" ಎನಿಸುವನು. ಚಂದ್ರನು ಆಹ್ಲಾದ (ಸುಖ) ಪ್ರದನಾದುದರಿಂದ "ಶಶಿ" ಎಂತ ನಾಮ. ಮೇಲ್ಕಂಡ ವಸ್ತುಗಳಲ್ಲೆಲ್ಲಾ ಅತಿಶಯ ತೋರುವುದರಿಂದ, ಅವು ಭಗವದ್ವಿಭೂತಿಸನ್ನಿಧಾನ ವಿಶೇಷವಾದ ಅಧಿಷ್ಠಾನಗಳು. ಅವುಗಳಲ್ಲಿ ಭಗವದ್ವಿಭೂತಿರೂಪಗಳ ಚಿಂತನೆ ಅತ್ಯ ವಶ್ಯಕ ॥೩॥

## (೫) "ಗುರು ಹೃದಯ ಪ್ರಕಾಶಿಕಾ" ವ್ಯಾಖ್ಯಾನ :—

ಸಲಕ್ಷಣಲೋಹಾದಿ ಪ್ರತಿಮೆಗಳು. ಸಾಲಿಗ್ರಾಮ ಎಂದರೆ ಕೀಟವೆಂಬ ಹುಳುವಿನಿಂದ ಸಹಿತ ಗಂಡಕೀನದಿಯ ಶಿಲೆ ಅಥವಾ ಚಕ್ರಸಹಿತ ಶಿಲೆ, ಗೋವು, ಅಭ್ಯಾಗತ ಎಂದರೆ, ಪರಿಚಯ ಇದ್ದು ಮನೆಗೆ ಊಟಕ್ಕೆ ಬಾದವನು, ಅತಿಥಿ ಎಂದರೆ, ಗುರುತಿಲ್ಲದೆ ಬಂದವನು, ಶ್ರೀ ತುಳಸಿಗಿಡ, ಪಿಪ್ಪಲವೆಂಬ ಅಶ್ವತ್ಥ ವೃಕ್ಷ, ಯತಿ ಎಂಬ ಸನ್ಯಾಸಿ, ವನವಾಸಿ, ಗೃಹಸ್ಥ ಎಂದರೆ ಮದುವೆಯಾದವ, ವಟುವೆಂಬ ಬ್ರಹ್ಮಚಾರಿ, ಯಜಮಾನನೆಂಬ ಮನೆಗೆ ಅಧಿಪತಿ, ಅಥವಾ ಯಜ್ಞಕರ್ತ, ಸ್ವಜನ, ಪರಜನ, ಭೂ, ಜಲ, ಅಗ್ನಿ, ವಾಯು, ತಾರಾಪಥವೆಂಬ ಆಕಾಶ, ಸೂರ್ಯ, ಚಂದ್ರ, ಅಂಗಾರಕ, ಬುಧ, ಗುರು, ಶುಕ್ರ, ಶನಿ, ರಾಹು, ಕೇತು, ಒಂಭತ್ತು ಗ್ರಹಗಳು, ಯೋಗವೆಂಬ ವಿಷ್ಕಂಭ ಮೊದಲಾದ ಇಪ್ಪತ್ತೇಳು. ಕರಣವೆಂಬ ಬಾಲವ ಮೊದಲಾದ್ದು ಹನ್ನೊಂದು. ಭ-ಎಂದರೆ ಅಶ್ವಿನ್ಯಾದಿ ೨೭ ನಕ್ಷತ್ರಗಳು, ಪಾಡ್ಯ ಮೊದಲಾದ ೧೫ ತಿಥಿಗಳು, ಶುಕ್ಲ ಕೃಷ್ಣ ಪಕ್ಷಗಳೆಂಬ ಪಕ್ಷದ್ವಯಗಳು, ಮೇಷಾದಿ ೧೨ ಸಂಕ್ರಮಣಗಳು, —ಇವೆಲ್ಲವೂ ಸಹ ದೇವರ ಅಧಿಷ್ಠಾನಗಳು. ವಿಭೂತಿ ರೂಪಗಳು ಇವುಗಳಲ್ಲೇ ಸಾಧಾರಣ, ವಿಶೇಷಾದಿ ದಶವಿಧ ತಿಳಿವು ದೆದಂರ್ಥ ॥೩॥

# ಸರ್ವವ್ಯಾಖ್ಯಾನಸಾರಸಂಗ್ರಹ

ಭಗದ್ವಿಭೂತಿಗಳ ಅಧಿಷ್ಠಾನ ವಿಶೇಷಗಳನ್ನು ತಿಳಿಸುತ್ತಾರೆ ಪ್ರಸಕ್ತ ಸಂಧಿಗತ ಈ 3ನೆಯ ಪದ್ಯದಿಂದ.

(೧) **ಪ್ರತಿಮಾದಿಗಳು :—**

ತಾರತಮ್ಯ ಪಂಚಭೇದಜ್ಞಾನಯುಕ್ತರಾದ ಭಗವದ್ಭಕ್ತರಾದ ದೇವ ಮನುಷರಿಂದ ನಿರ್ಮಿತವಾದ ಪ್ರತಿಮಾದಿಗಳು. ಇವುಗಳಲ್ಲಿ ಎಂಟು ಪ್ರಕಾರ ಇವೆ :

(೧) ಶಿಲಾಪ್ರತಿಮೆಗಳು (೨) ಮರದಿಂದ ಮಾಡಿದ್ದು (ದಾರುಪ್ರತಿಮಾ) (೩) ಪಂಚಲೋಹ ಪ್ರತಿಮಾ (೪) ಔಷಧೀ ರಸವಿಶೇಷಗಳಿಂದ ಮಾಡಿದ್ದು (ಲೇಪ್ಯ ಪ್ರತಿಮಾ) (೫) ಬರೆಯಲ್ಪಟ್ಟ ಚಿತ್ರ (ಲಿಖಿತ ಪ್ರತಿಮಾ) (೬) ಮರಳಿನಿಂದ ನಿರ್ಮಿತ (ಸೈಕತಾ ಪ್ರತಿಮಾ) (೭) ಮನಸ್ಸಿನಿಂದ ನಿರ್ಮಿತ (ಮಾನಸಿಕ ಪ್ರತಿಮಾ) ಮತ್ತು (೮) ನವರತ್ನಗಳಿಂದ ರಚಿತ ವಾದದ್ದು (ಮಣೀಮಯೀ)

ಇಂತಹ ಸಲ್ಲಕ್ಷಣೋಪೇತವಾದ ಪ್ರತಿಮಾದಿ ಅಧಿಷ್ಠಾನದಲ್ಲಿ ನೀತ ವಿಭೂತಿಯನ್ನು ಚಿಂತಿಸಬೇಕು.

(೨) **ಶಾಲಿಗ್ರಾಮ :—**

ಗಂಡಕೀನದಿಯಲ್ಲಿ ಉತ್ಪನ್ನವಾದ ಶಿಲಾವಿಶೇಷ. ಚಕ್ರಾಂಕಿತ ಕಪ್ಪು ಶಿಲೆ. ಇದರಲ್ಲಿ ಶ್ರೀಪರಮಾತ್ಮನು ಸ್ವಯಂವ್ಯಕ್ತನಾಗಿದ್ದಾನೆ. ತತ್ವನ್ಯಾಸ, ಮಾತೃಕಾನ್ಯಾಸ ವಿಧಿಗಳಿಂದ ಆವಾಹನೆ ಬೇಕಿಲ್ಲ, ಇದರಲ್ಲಿ ನೀತ ವಿಭೂತಿ.

(೩) ಗೋವು :—

ಉತ್ತಮ ಲಕ್ಷಣಗಳಿಂದ ಯುಕ್ತವಾದ ಆಕಳು. ಕರು ಇರುವ ಗೋವು. "ಗೋ" ಶಬ್ದಕ್ಕೆ "ವೇದಗಳು" ಎಂದು ಇನ್ನೊಂದು ಅರ್ಥ. ಕಾಮಧೇನು ಸದೃಶ ವೇದಗಳೂ ಸಹ ಭಗವದ್ವಿಭೂತಿಗತ ಅಧಿಷ್ಠಾನಗಳೇ. ಇದರಲ್ಲಿ ವಿಶೇಷ ವಿಭೂತಿಯನ್ನು ಚಿಂತಿಸಬೇಕು.

(೪) ಅಭ್ಯಾಗತ :—

ಆಮಂತ್ರಿತನಾಗಿ ಭೋಜನಕ್ಕೆ ಬಂದಿರುವ ಭಗವದ್ಭಕ್ತ. (ವಿಶೇಷ)

(೫) ಅತಿಥಿ :—

ಆಹ್ವಾನಿತನಾಗದೇ, ವೈಶ್ವದೇವ ಸಮಯಕ್ಕೆ ಅಶನಾರ್ಥಿಯಾಗಿ ಬಂದೊದಗುವ ಭಗವದ್ಭಕ್ತನಾದವ. (ವಿಶೇಷ)

(೬) ಶ್ರೀತುಲಸಿ :—

ನಿತ್ಯ ಲಕ್ಷ್ಮೀಸನ್ನಿಧಾನ ಯುಕ್ತವಾದ ವಿಶೇಷಾಧಿಷ್ಠಾನ. ದೇವ ಪೂಜೋಪಯೋಗ್ಯವಾದ ವಸ್ತು. ತುಲಸಿವಿರಹಿತವಾದ ಪೂಜೆಯನ್ನು ಶ್ರೀ ಪರಮಾತ್ಮನು ಸ್ವೀಕರಿಸುವುದಿಲ್ಲ. ಅಂತೆಯೇ ತುಲಸಿ ಅತ್ಯಂತ ಪ್ರಧಾನಳು (ವಿಶೇಷ)

(೭) ಪಿಪ್ಪಲ :—

ಅಶ್ವತ್ಥವೃಕ್ಷ, ಭಗವದ್ಭಕ್ತರಿಂದ ಪ್ರತಿಷ್ಠಿತವಾಗಿರಬೇಕು, ಉಪನಯನ ವಿವಾಹಾದಿ ಸಂಸ್ಕಾರಗಳಾಗಿರಬೇಕು.

"ಅಶ್ವತ್ಥಃ ಸರ್ವವೃಕ್ಷಾಣಾಂ" –ಗೀತಾವಾಕ್ಯ

ಅಶ್ವ (ಕುದುರೆಯಂತೆ) ಸ್ಥ (ನಿಲ್ಲುವುದರಿಂದ) ಪಿಪ್ಪಲವೃಕ್ಷಕ್ಕೆ "ಅಶ್ವತ್ಥ" –ಎಂದು ಹೆಸರು,

(೮) **ಯತಿ :—**

ಸರ್ವಸಂಗಪರಿತ್ಯಾಗಿಯಾಗಿ, ಕಾಮ್ಯಕರ್ಮ ತ್ಯಾಗಮಾಡಿ, ಚಾತುರ್ಮಾಸಾದಿ ವ್ರತಾನುಷ್ಠಾನನಿರತನಾಗಿ ಗುರೂಪದಿಷ್ಟನಾಗಿ ಸನ್ಯಾಸಾಶ್ರಮವನ್ನು ಸ್ವೀಕರಿಸಿರುವ ಯತಿಯಲ್ಲಿ ಭಗವದ್ವಿಭೂತಿರೂಪದ ಚಿಂತನೆ.

**"ಆಶ್ರಮಾಣಾಮಹಂ ತುರ್ಯೋ ಇತಿ" —ಭಾಗವತ ಪ್ರಮಾಣ.** ಆಶ್ರಮ ಚತುಷ್ಟಯಗಳಲ್ಲಿ ತುರ್ಯಾಶ್ರಮವೇ ಉತ್ತಮವು.

(೯) **ವನಸ್ಥ :—**

ಸಂಸಾರದ ಜವಾಬ್ದಾರಿಯಿಂದ ಮುಕ್ತನಾಗಿ, ಪುಣ್ಯತೀರ್ಥಕ್ಷೇತ್ರ ಯಾತ್ರಾದಿಗಳನ್ನು ಕೈಕೊಂಡ ಭಗವದ್ಭಕ್ತನಾದ ವಾನಪ್ರಸ್ಥಾಶ್ರಮಿಯಲ್ಲಿ **ವಿಶೇಷ** ಭಗವದ್ವಿಭೂತಿ ಚಿಂತನ ಮಾಡತಕ್ಕದ್ದು.

ಅಥವಾ ವನಸಂಚಾರಿಯಾಗಿದ್ದು, ಕಂದಮೂಲ ಫಲಾದಿಗಳನ್ನೂ ಭಕ್ಷಿಸುತ್ತಾ, ತಾರತಮ್ಯ ಪಂಚಭೇದಜ್ಞಾನಯುಕ್ತನಾದ ಭಗವದ್ಭಕ್ತರೂ ಸಹ ಈ ವರ್ಗಕ್ಕೆ ಸೇರಿದವರು.

(೧೦) **ಗೃಹಸ್ಥ :—**

ಅಹಂಕಾರ ಮಮಕಾರಾದಿ ರಹಿತನಾಗಿ, ಪತ್ನೀಪುತ್ರ ಬಂಧುವರ್ಗದವರಿಂದ ಕೂಡಿಕೊಂಡು, ಸದಾಚಾರ ಸಂಪನ್ನನಾಗಿ, ಅತಿಥಿ ಅಭ್ಯಾಗತರ ಸೇವೆ ಮಾಡುತ್ತಾ, ಗೃಹಸ್ಥಾಶ್ರಮ ಧರ್ಮಗಳನ್ನು ಪರಿಪಾಲಿಸುತ್ತಿರುವ, ಸರ್ವವ್ಯಾಪಾರಗಳಲ್ಲಿಯೂ ಪರಮಾತ್ಮನ ಚಿಂತನೆ ಮಾಡುತ್ತಿರುವ ಭಗವದ್ಭಕ್ತ ಭಾಗ್ಯ ಸಂಪನ್ನನಾದ ಗೃಹಸ್ಥನಲ್ಲಿ **ಸಾಧಾರಣ** ವಿಭೂತಿರೂಪವನ್ನು ಚಿಂತಿಸಬೇಕು.

(೧೧) **ವಟು :—**

ಬ್ರಹ್ಮಚರ್ಯವ್ರತನಿಷ್ಠನಾಗಿ, ಭೇದಜ್ಞಾನ ಮತ್ತು ತಾರತಮ್ಯ ಜ್ಞಾನ

ದಿಂದ ಯುಕ್ತನಾಗಿ, ಜಿತೇಂದಿಯನಾಗಿ, ಭಿಕ್ಷ ಅಟನಾದಿ ಸತ್ಕಾರ್ಯಾಚರಣೆ ಯುಳ್ಳವನಾದ, ಅಗ್ನಿ ಕಾರ್ಯಾದಿಗಳನ್ನು ವಿಧ್ಯುಕ್ತವಾಗಿ ಮಾಡುತ್ತಿರುವ ಬ್ರಹ್ಮಚಾರಿಯಲ್ಲಿ **ಸಾಧಾರಣ** ಭಗವದ್ವಿಭೂತಿ ಚಿಂತನೆ.

**(೧೨) ಯಜಮಾನ :—**

ಧರ್ಮಾಧರ್ಮಗಳನ್ನು ಶಾಸನಮಾಡತಕ್ಕ ಪ್ರಭು ಅಥವಾ ಅಧಿಪತಿ, ಅಥವಾ ಮನೆಯ ಯಜಮಾನನಾದವ –ಇವನಲ್ಲಿ **ಸಾಧಾರಣ** ವಿಭೂತಿರೂಪ.

**(೧೩) ಸ್ವಜನ :—**

ತಾನು ಮಾಡುತ್ತಿರುವ ಸತ್ಕಾರ್ಯಗಳಿಗೆ ನೆರವಾಗಿರುವ ಪತ್ನೀ, ಪುತ್ರರು, ದೇಹಸಂಬಂಧಿಗಳಾದ ಬಂಧುವರ್ಗ ಇತ್ಯಾದಿ "ಸ್ವಜನ" ರೆಂದು ನಾವು ಇವರೆಲ್ಲಿಯೂ ಭಗವಂತನ **ಸಾಧಾರಣ** ವಿಭೂತಿರೂಪಗಳನ್ನು ಅನುಸಂಧಿಸಬೇಕು.

**(೧೪) ಪರಜನ :—**

ತನ್ನ ದೇಹಸಂಬಂಧವಲ್ಲದ, ಆದರೂ ತನ್ನ ಸತ್ಕರ್ಮಗಳಲ್ಲಿ ಪಾಲ್ಗೊಳುತ್ತಿರುವ ಮಿತ್ರವರ್ಗ ಇತ್ಯಾದಿ ಇತರ ಹಿತೈಷಿಗಳು ಇವರೆಲ್ಲರೂ ಭಗವಧಾರಾಧನೆಗೆ ಅನುಕೂಲರು.

ಅಥವಾ "ಪರ" ಅಂದರೆ ಸರ್ವೋತ್ತಮನಾದ ಶ್ರೀಪರಮಾತ್ಮನಲ್ಲಿ ಆಸಕ್ತರಾದ ಜನರು "ಪರಜನರು" ಎಂದೆನಿಸಿಕೊಳ್ಳುವರು.

**(೧೫) ಪೃಥಿವಿ :—**

ಭೂಲೋಕದ ಸಮಸ್ತ ಚೇತನರಿಗೂ ಆಶ್ರಯಭೂತವೂ ಮತ್ತು ಅನ್ನಾದಿ ಆಹಾರಗಳನ್ನು ಒದಗಿಸುತ್ತಿರುವ ಭೂಮಿ (ಪಂಚಭೂತ)

ಅಥವಾ ಪುರಾಣಪ್ರಸಿದ್ಧವಾದ ಪುಣ್ಯಕ್ಷೇತ್ರಗಳು, ಇದರಲ್ಲಿ ಸಹಜ ವಿಭೂತಿಯ ಚಿಂತನೆ.

**(೧೬) ಜಲ :—**

ಪುರಾಣಪ್ರಸಿದ್ಧವಾದ ಗಂಗಾನದಿ, ತಟಾಕ, ಸರೋವರ, ಭಾವಿ ಇತ್ಯಾದಿ ತೀರ್ಥರೂಪಜಲಗಳಲ್ಲಿ ಸಹಜ ವಿಭೂತಿಯಿಂದ ಶ್ರೀಪರಮಾತ್ಮನು ವಿರಾಜಮಾನನಾಗಿದ್ದಾನೆ.

**(೧೭) ಶಿಖಿ :—**

ಯಜ್ಞಯಾಗಾದಿಗಳಲ್ಲಿ ಮಂತ್ರಸಿದ್ಧರಾದ ಸಜ್ಜನರಿಂದ ಪ್ರತಿಷ್ಠಿತವಾದ ಯಜ್ಞರೂಪವಾದ ಆವಹನೀಯಾದಿ ಅಗ್ನಿ. ವೈಶ್ವದೇವಹೋಮದಲ್ಲಿ ದೇವತೆಗಳಿಗೆ ಆಹುತಿಕೊಡುವ "ಹುತವಹ" ಎಂದು ಪ್ರಸಿದ್ಧವಾದ ಅಗ್ನಿ ಪುರುಷದೇವರು (ವೈಶ್ವಾನರರೂಪ)

**(೧೮) ಪವನ :—**

ಸರ್ವ ಚೇತನರ ಪ್ರಾಣಾಧಾರರೂಪವಾದ ವಾಯು. ಶ್ವಾಸರೂಪವಾದ ವಾಯು, ತಂಗಾಳಿ, ಚಂಡಮಾರುತ ಇತ್ಯಾದಿ ಅಧಿಷ್ಠಾನಗಳು ವಿಭೂತಿ ರೂಪಗಳಿಗೆ ಸನ್ನಿಧಾನವಿಶೇಷಗಳು.

**(೧೯) ತಾರಾಪಥ :—**

ನಕ್ಷತ್ರಮಂಡಲಗಳು ಸಂಚರಿಸುವ ಆಕಾಶಮಾರ್ಗ.

**"ಪೃಥ್ವೀ ವಾಯುರಾಕಾಶ ಆಪೋಜ್ಯೋತಿರಹಂ ಮಹಾನ್" –ಭಾಗವತ ಏಕಾದಶಸ್ಕಂಧ ವಚನ.**

(೨೦) **ನವಗ್ರಹ :—**

ಸೂರ್ಯ, ಚಂದ್ರ, ಅಂಗಾರಕ, ಬುಧ, ಗುರು, ಶುಕ್ರ, ಶನಿ, ರಾಹು ಮತ್ತು ಕೇತುಗಳೆಂಬ "ನವಗ್ರಹಗಳು"

(1) ಇವುಗಳಲ್ಲಿ **ವಿಶೇಷ** ವಿಭೂತಿ ಚಿಂತನೆ

(2) ನವಗ್ರಹಗಳಲ್ಲಿ "ಸೂರ್ಯ" **ಶ್ರೇಷ್ಠ** ಗ್ರಹ ಹಾಗೂ **ಅಧಿಪತಿ.** ಸೂರ್ಯನಲ್ಲಿ **ಅಖಂಡ** ವಿಭೂತಿ ರೂಪ.

(3) ಉಳಿದ ಎಂಟು ಗ್ರಹಗಳಲ್ಲಿ **ಖಂಡ** ವಿಭೂತಿ

(೨೧) **ಯೋಗ :—**

ವಿಷ್ಕಂಭಾದಿ ೨೭ ಯೋಗಗಳು, ಇಂತಹ ಯೋಗಗಳಲ್ಲಿ ಶ್ರೀಪರಮಾತ್ಮನು ಕಾಲಾಂತರ್ಗತನಾಗಿ ಕಾಲಪ್ರವರ್ತಕನಾಗಿರುತ್ತಾನೆ. ಯೋಗಗಳಲ್ಲಿ **ಸಜಾತೀಯ** ಖಂಡರೂಪಗಳ ಚಿಂತನೆ

(೨೨) **ಕರಣ :—**

ಬಲ, ಬಾಲವಾದಿ ೧೧ ಕರಣಗಳು, ಇವುಗಳ ಅಧಿಷ್ಠಾನದಲ್ಲಿ ಕಾಲ ನಿಯಾಮಕನಾದ ಭಗವಂತನ ವಿಭೂತಿರೂಪಚಿಂತನೆ (**ಖಂಡರೂಪ**)

(೨೩) **ಭ :—**

ಅಶ್ವಿನ್ಯಾದಿ ೨೭ ನಕ್ಷತ್ರಗಳಿಗೆ "ಭ" ಎಂದು ಹೆಸರು. ನಕ್ಷತ್ರಗಳಲ್ಲಿ **ಖಂಡರೂಪ** ಅಭಿಜಿತ್ ಎಂಬ ಮುಹೂರ್ತದಲ್ಲಿರುವ ನಕ್ಷತ್ರದಲ್ಲಿ **ಅಖಂಡ** ರೂಪ ಚಿಂತನೆ.

**"ನಕ್ಷತ್ರಾಣಾಂ ತಥಾಭಿಜಿತ್"–ಭಾಗವತ ವಚನ :—**

ನಕ್ಷತ್ರ ಸಮೂಹದಲ್ಲಿ "ಚಂದ್ರ" ನಲ್ಲಿ **ವಿಜಾತೀಯ** ರೂಪ ಚಿಂತನೆ.

## "ನಕ್ಷತ್ರಾಣಾಮಹಂ ಶಶೀ"-ಗೀತಾವಾಕ್ಯ

**(೨೪) ತಿಥಿ :—**

ಪ್ರತಿಪದದಿಂದ ಪೌರ್ಣಮಾ ಅಥವಾ ಅಮಾವಾಸ್ಯಾ ವರೆಗೆ ಇರುವ ೧೫ ದಿನಮಾನಗಳು.

(1) ಈ ತಿಥಿಗಳ ಪೈಕಿ ದಶಮೀ-ಏಕಾದಶೀ-ದ್ವಾದಶೀ ಈ ತಿಥಿತ್ರಯ ಗಳು. ಇವು ಭಗವಂತನ ವಿಶೇಷ ಅಧಿಷ್ಠಾನಗಳು **ಅಖಂಡ** ರೂಪ ಚಿಂತನ.

(2) ಪೌರ್ಣಮೆ ಮತ್ತು ಅಮಾವಾಸ್ಯೆ-ಪಕ್ಷಾಂತ ತಿಥಿಗಳಲ್ಲಿ **ಅಖಂಡ** ರೂಪ.

**(೨೫) ಸಿತ ಪಕ್ಷ :—**

ಪ್ರತಿಪದದಿಂದ ಪೌರ್ಣಮೆವರಗೆ ಇರುವ ೧೫ ದಿನಗಳ ಅವಧಿಯ "ಶುಕ್ಲ ಪಕ್ಷ" ಈ ಅವಧಿಯಲ್ಲಿ ಚಂದ್ರನ ಕಳೆಗಳು ವೃದ್ಧಿಯಾಗುವುವು.

**(೨೬) ಅಸಿತಪಕ್ಷ :—**

ಪುನಃ ಪ್ರತಿಪದದಿಂದ ಅಮಾವಾಸ್ಯೆವರೆಗೆ ಇರುವ ಮಾಸದ ಉತ್ತರಾರ್ಧ ಭಾಗವಾದ "ಕೃಷ್ಣಪಕ್ಷ". ಈ ಅವಧಿಯಲ್ಲಿ ಚಂದ್ರನ ಕಳೆಗಳು ಕ್ರಮೇಣ ಕ್ಷೀಣ ಹೊಂದಿ, ಅಮಾವಾಸ್ಯೆದಿನ ಪೂರ್ಣ ಕತ್ತಲು ಉಂಟಾಗುವುದು.

**(೧೭) ಸಂಕ್ರಮಣ :—**

ಮೇಷಾದಿ ೧೨ ರಾಶಿಗಳು. ದ್ವಾದಶರಾಶಿಗಳಲ್ಲಿ ಸೂರ್ಯನ ಸಂಚಾರ. ಸೂರ್ಯನಲ್ಲಿ ಸವಿತೃಮಂಡಲ ಮಧ್ಯವರ್ತಿಯಾದ "ಘೃಣೀ" ಎಂಬ ಸೂರ್ಯ ನಾಮಕ ಪರಮಾತ್ಮನ ವಿಭೂತಿರೂಪ ಚಿಂತನೆ.

ಅಲ್ಲದೆ ಉತ್ತರಾಯಣ ಮತ್ತು ದಕ್ಷಿಣಾಯಣಗಳೆಂಬ ಆಯನ ದ್ವಯ ಗಳು ಈ ವರ್ಗಕ್ಕೆ ಸೇರಿವೆ.

ಮೇಷಾದಿ ೧೨ ಸಂಕ್ರಮಣಗಳಲ್ಲಿ **ಖಂಡ** ರೂಪ ಮತ್ತು ಉತ್ತರ ಮತ್ತು ದಕ್ಷಿಣಾಯನಗಳಲ್ಲಿ **ಅಖಂಡ** ರೂಪ ಚಿಂತನೆ.

ಇಂತು ಮೇಲ್ಕಂಡ ಅತಿಷ್ಠಾನಗಳೆಲ್ಲವೂ ಭಗವದ್ವಿಭೂತಿ ಸನ್ನಿಧಾನಯುಕ್ತ ವಾದುವು ॥೩॥

## ಪದ್ಯ (೪)

**ಮೂಲ :—**

ಕಾದ ಕಾಂಚನದೊಳಗೆ ಶೋಭಿಪ ।
ಆದಿತೇಯಾಸ್ಯನ ತೆರದಿ ಲಕು ।
ಮೀಧವಸು ಪ್ರತಿದಿನದಿ ಶಾಲಿಗ್ರಾಮದೊಳಿಪ್ಪ ॥
ಐದು ಸಾವಿರದ ಮೇಲೆ ಮೂವ ।
ತ್ತ್ರೈದಧಿಕ ಐನೂರು ರೂಪದಿ ।
ಭೂಧರಗಳಭಿಮಾನಿ ದಿವಿಜರೊಳಿಪ್ಪನನವರತ ॥ ॥೪॥

**ಅವತರಣಿಕೆ :—**

ಚೆನ್ನಾಗಿ ಕಾಯಿಸಲ್ಪಟ್ಟ ಭಂಗಾರದಲ್ಲಿ ಅಗ್ನಿಯು ತೇಜೋರೂಪದಿಂದ ಶೋಭಾಯಮಾನವಾಗಿರುವಂತೆ, ಲಕ್ಷ್ಮೀಪತಿಯಾದ ಶ್ರೀ ಪರಮಾತ್ಮನು ಶಾಲಿಗ್ರಾಮದಲ್ಲಿ ನೀತವಿಭೂತರೂಪದಿಂದ ಸ್ವಯಂವ್ಯಕ್ತನಾಗಿ, ೫೫೩೫ ಅಕ್ಷರ ಸಾಂಕೇತವಾದ ಭಗವದ್ರೂಪಗಳಿಂದ ವಿರಾಜಮಾನನಾಗಿದ್ದಾನೆ. ಅಂತೆಯೇ, ಪರ್ವತಾಭಿಮಾನಿಗಳಾದ ದೇವತೆಗಳಲ್ಲಿ ನಿತ್ಯಸನ್ನಿಹಿತನಾಗಿರುವನೆಂದು ಹೇಳುತ್ತಾರೆ.– **"ಕಾದ ಕಾಂಚನ"** -ಎಂಬ ಪ್ರಸಕ್ತ ಸಂಧಿಗತ ಈ ೪ನೆಯಪದ್ಯದಿಂದ ॥೪॥

**ಪ್ರತಿಪದಾರ್ಥ :—**

**ಕಾದ**=ಅಗ್ನಿಯಲ್ಲಿ ಹಾಕಿ ಚೆನ್ನಾಗಿ ಕಾಯಿಸಿದಂಥ **ಕಾಂಚನ ದೊಳಗೆ**=ಭಂಗಾರದ ಒಳಗೆ **ಶೋಭಿಪ**=ಪ್ರಕಾಶಿಸುತ್ತಿರುವ **ಆದಿತೇಯಾಸ್ಯನ**=ಅಗ್ನಿಯ(ಆದಿತೇಯ=ಅದಿತಿಯ ಪುತ್ರರಾದ ದೇವತೆಗಳಿಗೆ ಆಸ್ಯನ=ಮುಖಸ್ಥಾನೀಯನಾದವನು, ಅಂದರೆ ಅಗ್ನಿ) **ತೆರದಿ**=ಆ ರೀತಿಯಲ್ಲಿ **ಲಕುಮೀಧವನು**=ಲಕ್ಷ್ಮೀಪತಿಯಾದ ಶ್ರೀಮನ್ನಾರಾಯಣನು **ಪ್ರತಿದಿನದಿ**=ಸರ್ವಕಾಲದಲ್ಲಿಯೂ, (ತನ್ನ ಸನ್ನಿಧಾನ ಯಾವಾಗಲೂ ಕಡಿಮೆಯಾಗದಂತೆ ಅವಿಚ್ಛಿನ್ನವಾಗಿ) **ಶಾಲಿಗ್ರಾಮದೊಳಗೆ**=ಶಾಲಿಗ್ರಾಮಶಿಲೆಯಲ್ಲಿ **ಐದು ಸಾವಿರದಮೇಲೆ**=೫೦೦೦ಕ್ಕೆ ಹೆಚ್ಚಾದ **ಮೂವತ್ತೈದಧಿಕ**=ಮೂವತ್ತೈದು ಹೆಚ್ಚಾದ **ಐನೂರು**=ಐನೂರು. ಅಂದರೆ ೫೦೦೦+೫೦೦+೩೫=೫೫೩೫ (ಐದುಸಾವಿರದ ಐನೂರ ಮೂವತ್ತೈದು) ಸಂಖ್ಯಾಕವಾದ ಭಗವದ್ರೂಪಗಳಿಂದ **ಇಪ್ಪ**=ಇರುವನು. ಇದರ ವಿವರವೇನೆಂದರೆ- **ಶಾ**=೫, **ಲಿ**=೩, **ಗ್ರಾ** (ಗ+ರ)=೩+೨=೫, **ಮ**=೫ ಬಲದಿಂದ ಎಡಕ್ಕೆ ಲೆಕ್ಕಮಾಡಿದರೆ ೫೫೩೫ ರೂಪಗಳಾಯಿತು. **ಅನವರತ**=ನಿರಂತರವೂ **ಭೂಧರ**=ಭೂಮಿಯನ್ನು ಧರಿಸಿರುವ ಮೇರು ಇತ್ಯಾದಿ ಪರ್ವತಗಳು **ಗಳಭಿಮಾನಿ**=ಪರ್ವತಾಭಿಮಾನಿಗಳಾದ **ದಿವಿಜರೊಳಗೆ**=ದೇವತೆಗಳಲ್ಲಿ **ಇಪ್ಪ**=ನಿರಂತರ ವಿಭೂತಿರೂಪದಿಂದ ಸನ್ನಿಧಾನ ಯುಕ್ತನಾಗಿ ಇದ್ದಾನೆ ॥೪॥

## ವ್ಯಾಖ್ಯಾನಗಳು

### (೧) ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ :—

ಶಾಲಿಗ್ರಾಮಗತ ವಿಭೂತಿ ಸನ್ನಿಧಾನ ತದ್ಗತ ಅಕ್ಷರಸಾಂಕೇತ ಭಗವದ್ರೂಪಗಳ ಆ ವಿಭೂತಿಗೆ ಸೇರಿದ ಸನ್ನಿಧಾನ ವಿಶೇಷಗಳ **ಹೇಳುತಾರೆ.**

ಅಗ್ನಿಯಿಂದ ಕಾದಂಥಾ ಭಂಗಾರದ ಒಳಗೆ (ಸ್ವಭಾವತಃ ಪರಿಶುದ್ಧ

ವಾದದ್ದು) ಪ್ರವೇಶಮಾಡಿ ಪ್ರಕಾಶಮಾನನಾಗಿರುವ ದೇವತೆಗಳಿಗೆ ಮುಖ್ಯ ಸ್ಥಾನಾಪನ್ನನಾದ ಅಗ್ನಿಯೋಪಾದಿಯಲ್ಲಿ, ಎಂದರೆ, ಭಂಗಾರ ಸ್ವತಃ ಪರಿಶುದ್ಧವಾದ ವಸ್ತುವು. ಅದರಲ್ಲಿ ಅಗ್ನಿಪ್ರವೇಶದಿಂದ ಅಧಿಕ ತೇಜಸ್ಸಿನಿಂದ ಭಂಗಾರ ಹ್ಯಾಂಗೆ ಯುಕ್ತವಾಗಿರತದೋ, ಅದರೋಪಾದಿಯಲಿ, ಲಕ್ಷ್ಮೀಪತಿಯಾದ ಶ್ರೀಮನ್ನಾರಾಯಣನು ಸದಾ, -ಪ್ರತಿದಿನ ಎಂಬ ಶಬ್ದದಿಂದ ಅವಿಚ್ಛಿನ್ನವಾಗಿ ತನ್ನ ಸನ್ನಿಧಾನ ಕಡಿಮೆ ಆಗದೆ, ಗಂಡಕೀನದಿಯಲ್ಲಿ. ಉದ್ಭವವಾಗುವ ಸಾಲಿಗ್ರಾಮದೊಳಗೆ ವಿಭೂತಿರೂಪದಿಂದ ಇರತಾನೆ. ಎಷ್ಟುರೂಪದಿಂದ ಎಂದರೆ- ಐದುಸಾವಿರದ ಮೇಲೆ ಐನೂರು ಅದರ ಮೇಲೆ ಮೂವತ್ತೈದು ಅಂದರೆ ೫೫೩೫ ರೂಪಗಳು. ಶಾ-೫, ಲಿ-೩, ಗ್ರಾ (ಗ+ರ=೩+೨)-೫, ಮ-೫ ಅಂದರೆ ಬಲದಿಂದ ಎಡಕ್ಕೆ ಲೆಕ್ಕ ೫೫೩೫ ಈ ಕೆಳಗೆ ಹೇಳಿರುವ ದೇವತೆಗಳಲ್ಲಿ, ಭೂಮಿಯನ್ನು ಧರಿಸಿ ಪರ್ವತಗಳು (ಭೂಧದರ), ಮೇರು ಮಂದರಾದಿ ಪರ್ವತಗಳು ಇವುಗಳಿಗೆ ಅಭಿಮಾನಿಯಾದ ವಾಸುದೇವ, ಶಾಲಿಗ್ರಾಮದೋಪಾದಿಯಲ್ಲಿ ನಿರಂತರ ವಿಭೂತಿ ರೂಪದಿಂದ ಸನ್ನಿಧಾನಯುಕ್ತನಾಗಿ (ಅನವರತ) ಇರೋವವನಾಗಿದ್ದಾನೆ. ಅಂತು, ಶಾಲಿಗ್ರಾಮದೊಳಗೆ, ದೇವತೆಗಳ ಒಳಗೆ ಸದಾ ಪರಮಾತ್ಮನ ವಿಭೂತಿ ಇರುತ್ತದೆ, ಆ ಚಂಡಾಲಾಂತ ದೇಹಗಳಲ್ಲಿ ದೇವತೆಗಳು ವ್ಯಾಪ್ತರಾಗಿದ್ದಾರೆ. ಅವರುಗಳ ಸ್ಪರ್ಶದಿಂದ ದೇವತೆಗಳಲ್ಲಿ ವಿಭೂತಿ ಕಡಿಮೆ ಆಗೋದಿಲ್ಲ. ತದ್ವತ್ ಚಂಡಾಲಾಂತ ಸ್ಪರ್ಶದಿಂದ ಶಾಲಿಗ್ರಾಮದಲ್ಲಿ ವಿಭೂತಿ ಕಡಿಮೆ ಆಗೋದಿಲ್ಲ.

3ನೇ ವಿಭೂತಿ-ವಿಶೇಷ ವಿಭೂತಿ. ಇದಕ್ಕೆ ಸಂಬಂಧಿಸಿದವರು ಋಜುಗಳು ವ್ಯತಿರಿಕ್ತ ರುದ್ರಾದಿದೇವತೆಗಳು. ಅಖಂಡ ವಿಭೂತಿ ಶಬ್ದದಿಂದ ಬ್ರಹ್ಮಾದಿ ಋಜುಗಳು ಗ್ರಾಹ್ಯ. ಇವರು ಅಖಂಡ ವಿಭೂತಿಗೆ ಸಂಬಂಧಿಸಿದವರು. ಈ ಎರಡರಿಂದ ದೇವತಾಸಮೂಹ ಯಾವತ್ತೂ ಬಂದಂತಾಯಿತು. ಏಳನೆಯ ಸಹಜ ವಿಭೂತಿ. ಶಾಲಿಗ್ರಾಮದಲ್ಲಿ ಸಹಜವಿಭೂತಿ. ಇದರಿಂದ (೧) ಶಾಲಿಗ್ರಾಮ (೨) ಕ್ಷೇತ್ರಭೂಮಿ (೩) ತೀರ್ಥಗಳು (೪) ಅಗ್ನಿ

(೫) ವಾಯು (೬) ತಾರಾಪಥ (೭) ಯೋಗ (೮) ಕರಣ (೯) ಏಕಾದಶೀ ತಿಥಿ (೧೦) ಪೌರ್ಣಿಮಾ (೧೧) ಅಮಾವಾಸ್ಯಾ (೧೨) ದ್ವಾದಶೀ (೧೩) ಸಂಕ್ರಮಣ-ಇವು ಯಾವತ್ತೂ ಬಂದಂತಾಯಿತು. ಅಂತು, ಈ ಪದ್ಯದಿಂದ ಮೂರು ವಿಧ ವಿಭೂತಿಗಳು, ಅದರ ಅಧಿಷ್ಠಾನಗಳು, ಅಲ್ಲಿ ಅವಿಚ್ಛಿನ್ನವಾಗಿ ಸದಾ ಶ್ರೀಪರಮಾತ್ಮನ ವಿಭೂತಿರೂಪ ಇರುತ್ತದೆ ಎಂತ ತಾತ್ಪರ್ಯ ॥೪॥

## (೨) "ಭಾವಪ್ರಕಾಶಿಕೆ" ವ್ಯಾಖ್ಯಾನ :—

ಮೇಲಿನ ಪದ್ಯದಲ್ಲಿ ಹೇಳಿದ ಪ್ರತಿಮಾ, ಸಾಲಿಗ್ರಾಮ ಮೊದಲಾದವುಗಳಲ್ಲಿರುವ ಭಗವದ್ವಿಭೂತಿಗಳನ್ನೂ ವಿಸ್ತಾರಮಾಡುತ್ತಾರೆ. ಈ ಪದ್ಯದಲ್ಲಿ ಸಾಲಿಗ್ರಾಮದಲ್ಲಿನ ಭಗವದ್ರೂಪಗಳನ್ನು ಹೇಳುತ್ತಾರೆ.

ಸಾಮಾನ್ಯವಾಗಿ ಬಂಗಾರವು ಬಹು ಶೋಭಿತವಾದುದು. ಅಗ್ನಿಯಿಂದ ಚೆನ್ನಾಗಿ ಕಾಯಿಸಿದಾಗ, ಆ ಚಿನ್ನದಲ್ಲಿ ಶೋಭಿಸುವ ಅಗ್ನಿಯಂತೆ ಸಾಲಿಗ್ರಾಮದಲ್ಲಿ ಪರಮಾತ್ಮನ ವಿಭೂತಿಯನ್ನು ತಿಳಿಯಬೇಕು. "ಆದಿತೇಯಾಸ್ಯ" ಎಂದು ಅಗ್ನಿಗೆ ಹೆಸರು. ಹೇಗೆಂದರೆ-ಇಂದ್ರಾದಿಗಳಿಗೆ ಕೊಡಬೇಕಾದ ಆಹುತಿಯನ್ನು ಅಗ್ನಿಯಲ್ಲಿ ಕೊಡುವರು. ದೇವತೆಗಳು ಅಗ್ನಿಯ ದ್ವಾರ ಆಹುತಿಯನ್ನು ಸ್ವೀಕರಿಸುವರು. ಆದ್ದರಿಂದ ಅಗ್ನಿಗೆ "ದೇವಮುಖ"—ನೆಂದು ಹೆಸರಾಯಿತು. "ಶಾಲಿಗ್ರಾಮ" –ಎಂಬ ಅಕ್ಷರಸಂಖ್ಯೆಯು- ಶಾ = ೫, ಲಿ = ೩, ಗ್ + ರಾ = ೩ + ೨ = ೫, ಮ = ೫-ಇವು ಬಲದಿಂದ ಎಣಿಸಿದರೆ, ೫೫೩೫ ಆಗುವುದು. ಇಷ್ಟು ರೂಪಗಳಿಂದ ಶಾಲಿಗ್ರಾಮದಲ್ಲಿ ಅವಿಚಿನ್ನನಾಗಿರುವನು. ಇದರಂತೆ ಪರ್ವತಾಭಿಮಾನಿಗಳಾದ ಗರುಡ, ಶೇಷ, ರುದ್ರರಲ್ಲಿಯೂ ಕೂಡ ಇರುವನು. ಪರ್ವತಾಭಿಮಾನಿಗಳು ಗರುಡಾದಿಗಳೆಂಬ ವಿಷಯದಲ್ಲಿ ಪ್ರಮಾಣ :—

**"ಶಿವಂ ಶೇಷಂ ಗರುಡಂ ಚಾಹಸಾಪಿ ಪರಾವನಾತ್ಪರ್ವತ ನಾಮ ಧೇಯಾನ್ ||"**

**–ಎಂತ ಭಾರತ ತಾತ್ಪರ್ಯನಿರ್ಣಯ-ಅಧ್ಯಾಯ (೨೦), ಶ್ಲೋಕ (೬೮)** -ಎಂಬ ವಾಕ್ಯವೇ ಪ್ರಮಾಣವಾಗಿರುವುದು. ಹೀಗೆ ನೀತ ವಿಭೂತಿಭಗಳನ್ನು ಶಾಲಿಗ್ರಾಮಗಳಲ್ಲಿಯೂ, ವಿಶೇಷ ವಿಭೂತಿಗಳನ್ನು ಗರುಡಾದಿಗಳಲ್ಲಿಯೂ ಚಿಂತಿಸಬೇಕು. ||೩||

**(೩) "ಭಾವದರ್ಪಣಟೀಕಾ" ವ್ಯಾಖ್ಯಾನ :—**

ತಪ್ತಸುವರ್ಣಗತ ಅಗ್ನಿಯೋಪಾದಿಯಲ್ಲಿ ಪರ್ವತಾಭಿಮಾನಿಗಳಾದ ದೇವತೆಗಳಂತರ್ಯಾಮಿಯೇ ಶಾಲಿಗ್ರಾಮದಲ್ಲಿ ೫೫೩೫ ರೂಪದಿಂದ ಇದ್ದಾನೆಂದು ಹೇಳುತ್ತಾರೆ- **"ಕಾದಕಾಂಚನ"** –ಎಂಬ ಪದ್ಯದಿಂದ

**ಉಕ್ತಂಚ ಪ್ರಮೇಯ ರತ್ನಾಕರೇ :—**

**"ಪಂಚತ್ರಿಂಶಾಧಿಕ್ಯೈಃ ಪಂಚಶತ್ಯೈಃ ಪಂಚಸಹಸ್ರಕೈಃ |**
**ಶಾಲಿಗ್ರಾಮ ಸ್ಥಿತೋ ನಿತ್ಯಮ್ ||"**

–ಎಂತ **ಹೇಳಿರೋದರಿಂದ** ಸಿದ್ಧ. ಆದಿತೇಯಾಸ್ಯ = ಅಗ್ನಿ. ತೆರದಿ = ಅವನೋಪಾದಿಯಲ್ಲಿ ||೪||

**(೪) ಜಮಖಂಡಿ ವಾದಿರಾಜಾಚಾರ್ಯರ ವ್ಯಾಖ್ಯಾನ:—**

**(ಸಂಸ್ಕೃತಮೂಲ):—**

ಉತ್ತಾನಾಂ ವಿಭೂತಿತಾಂ ಆಹ–"ಕಾದ" -ಇತಿ | ಆದಿತೇಯಾಸ್ಯಃ = ಅಗ್ನಿಃ || ಸಹಸ್ರ ಪಂಚತಂ ಪಂಚತ್ರಿಂಶತ್‌ಯುತ ಶತ ಪಂಚತಮ್ || ಇತಿ || ಪ್ರ. ಭಾ. ತಾ|| ಪಂಚರಾತ್ರೇಚ || ರೂಪಾಣಾಂ ಪಂಚ ಸಾಹಸ್ರಂ

ಹರೇಃ ಪಂಚ ಶತೋತ್ತರಮ್ ॥ ತಥೈವ ಪಂಚ ತ್ರಿಂಶಚ್ಚ ಶಾಲಿಗ್ರಾಮೇತು ಷ್ವೈ ಹರೇಃ ॥ ಇತಿ ॥ ॥೪॥

**ಕನ್ನಡಾರ್ಥ :—**

ಪೂರ್ವೋಕ್ತ ವಿಷಯಗಳನ್ನು ಹೇಳುತ್ತಾರೆ. ಶಾಲಿಗ್ರಾಮದಲ್ಲಿ ೫೫೩೫ ಭಗವದ್ರೂಪಗಳಿಂದ ಶ್ರೀ ಪರಮಾತ್ಮನು ವಿರಾಜಮಾನನಾಗಿದ್ದಾನೆ, ಎಂದು ಪ್ರಥಮಸ್ಕಂಧ ಭಾಗವತ ತಾತ್ಪರ್ಯದಲ್ಲಿಯೂ ಮತ್ತು ಪಂಚರಾತ್ರಾಗಮ ದಲ್ಲಿಯೂ ಉಕ್ತವಾಗಿದೆ ॥೪॥

**(೫) "ಗುರುಹೃದಯ ಪ್ರಕಾಶಿಕೆ" ವ್ಯಾಖ್ಯಾನ :—**

ಕಾದಕಾಂಚನವೆಂಬ ಕಾಯಿಸಿದ ಭಂಗಾರದಲ್ಲಿ ಒಪ್ಪುವ ಆದಿತೇಯಾಸ್ಯನ ತೆರದಿ, ಎಂದರೆ, ಶೋಭಿಸುವ ಅಗ್ನಿಯ ತೇಜೋರೂಪ ಸ್ವರ್ಣದಲ್ಲಿ ಅಗ್ನಿ ವ್ಯಾಪ್ತಿ ಇದ್ದಂತೆ, ನಿಯತ ಸನ್ನಿಧಿಯಿಂದ ಎಂತರ್ಥ. ಲಕ್ಷ್ಮೀಪತಿಯು ನಿತ್ಯದಲ್ಲೂ ಶಾಲಿಗ್ರಾಮದಲ್ಲಿ ೫೫೩೫ ರೂಪದಿಂದ- ಮ–೫, ಗ್ರಾ–೫, ಲಿ-೩, ಶಾ–೫, ಈ ರೀತಿ ಭೂಧರಾಭಿಮಾನಿಗಳೆಂಬ ಪರ್ವತಾಭಿಮಾನಿ ದೇವತೆಗಳಯೂ ಸಹ ಸಹಜಾಚಲ ನಾಮದಿಂದಿರುವನು ॥೪॥

## ಸರ್ವವ್ಯಾಖ್ಯಾನಸಾರಸಂಗ್ರಹ

ಭಂಗಾರವು ಸ್ವಭಾವತಃ ಪರಿಶುದ್ಧವಾದ ವಸ್ತುವು. ಅದನ್ನು ಅಗ್ನಿ ಯಲ್ಲಿ ಹಾಕಿ ಕಾಯಿಸಿದಾಗ, ಅತ್ಯಂತ ಪ್ರಕಾಶಮಾನವಾಗಿ ಹೊಳೆಯುವುದು. ಇದಕ್ಕೆ ಸ್ವರ್ಣಗತ ಅಗ್ನಿಯ ವ್ಯಾಪ್ತಿಯಿಂದ, ಭಂಗಾರದಲ್ಲಿ ಆ ಅಗ್ನಿಯು ತೇಜೋರೂಪದಿಂದ ಪ್ರಕಾಶಮಾನವಾಗಿ ಬೆಳಗುತ್ತಾನೆ. ದೇವತೆಗಳು. ಅಗ್ನಿಯ ದ್ವಾರಾ ಆಹುತಿಗಳನ್ನು ಯಜ್ಞಯಾಗಾದಿ ಕರ್ಮಗಳಲ್ಲಿ, ವೈಶ್ವ ದೇವ ಮುಂತಾದ ನಿತ್ಯವಿಧಿಗಳಲ್ಲಿ ಸ್ವೀಕರಿಸುವರು. ಈ ಕಾರಣದಿಂದಲೇ

ಅಗ್ನಿಗೆ "ಆದಿತೇಯಾಸ್ಯ" ಅಂದರೆ "ದೇವಮುಖ"ನೆಂದು ಹೆಸರು. ಅದಿತಿಯ ಪುತ್ರರು ದೇವತೆಗಳು (ಆದಿತೇಯರು) ಅವರ ಮುಖಸ್ಥಾನಾಪನ್ನನಾಗಿರುವುದರಿಂದ (ಆಸ್ಯ) ಅಗ್ನಿಗೆ "ಆದಿತೇಯಾಸ್ಯ" ಎಂದು ದಾಸರಾಯರು ಪ್ರಸಕ್ತ ಪದ್ಯದಲ್ಲಿ ಹೇಳಿರುವರು. ಭಂಗಾರದಲ್ಲಿ ಹೊಳೆಯುತ್ತಿರುವ ಅಗ್ನಿಯಂತೆ ಲಕ್ಷ್ಮೀಪತಿಯಾದ ಶ್ರೀ ಪರಮಾತ್ಮನು ಶಾಲಿಗ್ರಾಮ ಶಿಲೆಯಲ್ಲಿ ಸ್ವಯಂವ್ಯಕ್ತರೂಪದಿಂದ ನಿತ್ಯ ಸನ್ನಿಹಿತನಾಗಿದ್ದಾನೆ.

"ಶಾಲಿಗ್ರಾಮ" ಎಂಬ ಪದದಲ್ಲಿ ನಾಲ್ಕು ಅಕ್ಷರಗಳಿವೆ. :—

(೧) ಶಾ—ಅವರ್ಗೀಯ ವ್ಯಂಜನಾಕ್ಷರ = ೫

(೨) ಲಿ—ಅವರ್ಗೀಯ ವ್ಯಂಜನಾಕ್ಷರ = ೫

(೩) ಗ್ರಾ—(ಗ + ರ = ೩ + ೨) = ೫ (ಸಂಯುಕ್ತಾಕ್ಷರ)

(೪) ಮ—ಪವರ್ಗ ಪಂಚಕ = ೫

ಅಲ್ಲಿಗೆ ಸಂಖ್ಯಾಜೋಡಣೆಯಿಂದ 5355 ಎಂದಾಗುವುದು.

**"ಅಂಕನಾಂ ವಾಮತೋ ಗತಿಃ"** –ಎಂಬ ನಿಯಮದಂತೆ, ಬಲದಿಂದ ಎಡಕ್ಕೆ ಗಣಸೆಮಾಡಿದರೆ 5535 ರೂಪಗಳಿಂದ ಶಾಲಿಗ್ರಾಮದಲ್ಲಿ ಭಗವದ್ವಿಭೂತಿ ರೂಪನಾಗಿದ್ದಾನೆ.

ಇದನ್ನು ದಾಸರಾಯರು ಐದುಸಾವಿರದ ಮೇಲೆ (5000), ಮೂವತ್ತೈದಧಿಕ (35), ಐನೂರು ರೂಪದಿ (500), ಅಂದರೆ 5000+500+35=5535 ರೂಪಗಳಿಂದ ಎಂದು ನಿರೂಪಿಸಿರುತ್ತಾರೆ.

ಅಂತೆಯೇ ಪರ್ವತಾಭಿಮಾನಿಗಳಾದ ಗರುಡಾದಿ ದೇವತೆಗಳಲ್ಲಿ ನಿತ್ಯ ಸಾನ್ನಿಧ್ಯಯುಕ್ತನಾಗಿ ಶ್ರೀ ಪರಮಾತ್ಮನು ಇದ್ದಾನೆ. ಭೂಮಿಯನ್ನು ಧಾರಣ ಮಾಡಿರುವುದರಿಂದ ಪರ್ವತಗಳಿಗೆ "ಭೂಧರ" ಎಂದು ಹೆಸರು. ಗರುಡಶೇಷರುದ್ರಾದಿದೇವತೆಗಳು ಮೇರು, ಮಂದರಾದಿ ಪರ್ವತಗಳಿಗೆ ಅಭಿಮಾನಿಗಳು.

**"ಶಿವಂ ಶೇಷಂ ಗರುಡಂಚಾಹಸಾಪಿ ಪರಾವನಾತ್ಪರ್ವತ ನಾಮ ಧೇಯಾನ್ ||"–ಎಂದು ನಿರ್ಣಯ ಪ್ರಮಾಣವಿದೆ.**

**ಮುಖ್ಯಾಂಶಗಳು :—**

(೧) ಶಾಲಿಗ್ರಾಮದಲ್ಲಿ ಅಕ್ಷರಸಾಂಕೇತ ರೂಪಗಳು = 5535

(೨) ಶ್ರೀ ಪರಮಾತ್ಮನು ನಿತ್ಯಸನ್ನಿಹಿತನಾಗಿ ಸ್ವಯಂ ವ್ಯಕ್ತರೂಪದಿಂನಿದ್ದಾನೆ.

(೩) ನೀತ ಭಗವದ್ವಿಭೂತಿರೂಪ.

(೪) ಶಾಲಿಗ್ರಾಮದಲ್ಲಿ ಪ್ರತಿಮಾದಿಗಳಿಗಿರುವಂತೆ ಆವಾಹನಕ್ರಮ ಬೇಕಿಲ್ಲ.

(5) ಚಂಡಾಲಸ್ಪರ್ಶವಾದರೂ ಲವಲೇಶ ದೋಷವಿಲ್ಲ.

(೬) ಪರ್ವತಾಭಿಮಾನಿ ದೇವತೆಗಳಲ್ಲಿಯೂ ಸಹ ನಿತ್ಯಸಾನ್ನಿಧ್ಯಯುಕ್ತನಾಗಿ **ಸಹಜಾಚಲ** ನಾಮಧೇಯನಾಗಿರುವನು. ||೪||

## ಪದ್ಯ (೫)

**ಮೂಲ :—**

**ಶ್ರೀರಮಣ ಪ್ರತಿಮೆಗಳೊಳಗೆ ಹದಿ |**
**ಮೂರಧಿಕವಾಗಿಪ್ಪ ಮೇಲ್ಕೈ |**
**ನೂರು ರೂಪವ ಧರಿಸಿ ಇಪ್ಪನು ಅಹಿತಾಚಲದಿ ||**
**ದಾರುಮಥನವ ಗೈಯೆ ಪಾವಕ |**
**ತೋರುವಂತೆ ಪ್ರತೀಕ ಸುರರೊಳು |**
**ತೋರುತಿಪ್ಪನು ತತ್ತದಾಕಾರದಲಿ ನೋಳ್ಪರಿಗೆ || ||೫||**

**ಅವತರಣಿಕೆ :—**

ಸ್ವರ್ಣಾದಿ ದಶವಿಧ ಪ್ರತಿಮೆಗಳೊಳಗೆ ಇರುವ ಭಗವದ್ವಿಭೂತಿ ರೂಪಗಳ ವಿಚಾರವನ್ನು ಹೇಳುತ್ತಾರೆ. ಅಚಲಪ್ರತಿಮಾದಿಗಳಲ್ಲಿ ಶ್ರೀ ರಮಣನು 513 ಭಗವದ್ರೂಪಗಳಿಂದ ವಿರಾಜಮಾನನಾಗಿದ್ದಾನೆ. ಕಾಷ್ಠದಿಂದ ಉಜ್ಜಿದಾಗ ಮಾತ್ರ ಕಾಷ್ಠಾಂತರ್ಗತ ಅಗ್ನಿಯು ಅಭಿವ್ಯಕ್ತವಾಗುವಂತೆ, ಪ್ರತಿಮಾದಿಗಳಲ್ಲಿ ಅನಭಿವ್ಯಕ್ತನಾಗಿನಾದ್ದಾನೆ. ಶಾಸ್ತ್ರೋಕ್ತ ವಿಧಿಗಳಿಗನುಸಾರವಾಗಿ ಧ್ಯಾನ ಮಾಡಿದಾಗ, ತತ್ತದಾಕಾರದಲ್ಲಿ ಧ್ಯಾನಯೋಗಕ್ಕೆ ವಿಷಯನಾಗಿ ಗೋಚರಿಸುವನು ಎಂದು ಹೇಳುತ್ತಾರೆ. **"ಶ್ರೀರಮಣ"** -ಎಂಬ ಪ್ರಸಕ್ತ ಸಂಧಿಗತ 5ನೆಯ ಈ ಪದ್ಯದಿಂದ ॥೫॥

**ಪ್ರತಿಪದಾರ್ಥ :—**

**ಶ್ರೀರಮಣ**=ಶ್ರೀಲಕ್ಷ್ಮೀಪತಿಯಾದ ಶ್ರೀಮನ್ನಾರಾಯಣನು **ಪ್ರತಿಮೆಗಳೊಳಗೆ**=ಸ್ವರ್ಣಾದಿ ಲೋಹಗಳಿಂದ ನಿರ್ಮಿತವಾದ ದಶವಿಧ ಪ್ರತಿಮೆಗಳಲ್ಲಿ **ಹದಿಮೂರು ಅಧಿಕವಾಗಿಪ್ಪ**=ಹದಿಮೂರು ಹೆಚ್ಚಾದ **ಮೇಲೆ ಐನೂರು ರೂಪವ**=ಮೇಲೆ ರೂಪಗಳನ್ನು, ಅಂದರೆ 500+13=513 ಅಕ್ಷರ ಸಾಂಕೇತ ರೂಪಗಳನ್ನು, ಹೇಗೆಂದರೆ :- ಪ್ರ=ಪ+ರ=1+2=3, ತಿ=1, ಮ=5, ಅಂದರೆ 315. ವಾಮಾಂಕರೀತ್ಯಾ 513ರೂಪಗಳಾಗುವುವು. **ಧರಿಸಿ ಇಪ್ಪನು**=ಸ್ವೀಕರಿಸಿ ಇರುವವನಾಗಿದ್ದಾನೆ. **ಅಹಿತಾಚಲದಿ**=ದೇವಾಲಯಗಳಲ್ಲಿ ಅಷ್ಟಬಂಧನಪೂರ್ವಕ ಸ್ಥಾಪಿಸಿರುವ ಚಲಿಸದಿರುವ ಪ್ರತಿಮಾದಿಗಳಲ್ಲಿ (ಅಚಲದಿ) **ಅಹಿತವಿಭೂತಿರೂಪದಿಂದ** ಇದ್ದಾನೆ. **ದಾರು**=ಅರಣಿ ಎಂಬ ಕಾಷ್ಠವಿಶೇಷವನ್ನು **ಮಥನವಗೈಯೆ**=ಮಥನ (ಉಜ್ಜುವುದು) ಮಾಡಿಧಾಗ **ಪಾವಕ**= ಆ ಕಾಷ್ಠದಲ್ಲಿ ಅಂತರ್ಭೂತನಾಗಿರುವ ಅಗ್ನಿಯು **ತೋರುವಂತೆ**= ಅಭಿವ್ಯಕ್ತವಾಗುವಂತೆ (ಕಾಣಿಸುವಂತೆ) **ಪ್ರತೀಕ**= ಜಡಪ್ರತೀಕಗಳಿಗೆ ಅಭಿಮಾನಿಗಳಾದ **ಸುರರೊಳು**= ಚಲಪ್ರತೀಕರಾದ ದೇವತೆಗಳಲ್ಲಿ **ನೋಳ್ಪರಿಗೆ**=ಪ್ರತೀ

ಕಾಂತರ್ಗತ ರೂಪಗಳನ್ನು ಧ್ಯಾನಮಾಡತಕ್ಕವರಿಗೆ **ತತ್ತದಾಕಾರದಲಿ** = ಪ್ರತಿಮಾಕಾರ ರೂಪದಂತೆಯೇ **ತೋರುತಿಪ್ಪನು** = ಧ್ಯಾನಗೋಚರ ನಾಗಿ ತನ್ನ ದರ್ಶನ ಭಾಗ್ಯವನ್ನು ಕೊಡುವನು ॥೫॥

## ವ್ಯಾಖ್ಯಾನಗಳು

### (೧) ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ :—

ದಶವಿಧ ಪ್ರತಿಮೆಗಳೊಳಗೆ ಇರತಕ್ಕ ಭಗವದ್ರೂಪಗಳ, ಇನ್ನೂ ಕೆಲವು ವಿಭೂತಿಗಳ ಸಂಗತಿಯನ್ನು ಹೇಳುತಾರೆ.

ಶ್ರೀಲಕ್ಷ್ಮೀಪತಿಯಾದ ನಾರಾಯಣದೇವರ (ಶ್ರೀರಮಣ), ಸ್ವರ್ಣಾದಿ ದಶವಿಧ ಪ್ರತಿಮೆಗಳೊಳಗೆ (ಪ್ರತಿಮೆಗಳೊಳಗೆ), ಐನೂರು ಮ್ಯಾಲೆ ಅಧಿಕವಾದ ಹದಿಮೂರು, ಅಂತು 513. ಪ್ರ = 5, ತಿ = ೧, ಮ = 5, ಅಲ್ಲಿಗೆ 515 ರೂಪಗಳನ್ನು ಧರಿಸಿ ಪ್ರತಿಮೆಗಳೊಳಗೆ ಇರುವವ ನಾಗಿದ್ದಾನೆ. ದಾವ ಪ್ರತಿಮೆಗಳಲ್ಲಿ ಅಂದರೆ, ಚಲಿಸದೇ ಇರುವ ಪ್ರತಿಮೆಗಳಲ್ಲಿ (ಅಚಲದಿ) "ಅಹಿತ" ವಿಭೂತಿರೂಪದಿಂದ (ಅಹಿತ) ಇದ್ದಾನೆ. ಈ ಅಹಿತ ವಿಭೂತಿ ೬ನೇ ಸಂಖ್ಯಾವಿಭೂತಿ ಇದರ ಕೂಡಾ ಸೇರಿದ್ದು.

(1) ಗೋವು-ಪ್ರಸವಾನಂತರ (ವತ್ಸವುಳ್ಳ ಗೋವು)

(2) ಶ್ರೀ ತುಲಸಿ-ಉತ್ಪತ್ತಿನಂತರ ಮಾಸತ್ರಯದ ಮೇಲೆ ಇರ ತಕ್ಕದ್ದು.

(3) ಅಶ್ವತ್ಥ-ವಿವಾಹಾದಿಗಳು ಆದದ್ದು.

(4) ಪ್ರತಿಮಾ-ಪ್ರತಿಷ್ಠಾ ನಂತರ

ಕಾಷ್ಠವನ್ನು ಕಾಷ್ಠದಿಂದ ಮಥಿಸಿದರೆ (ಮಥನಮಾಡಿದರೆ), ಅಗ್ನಿ ಕಣ್ಣಿಗೆ ಕಾಣುವಂತೆ (ದಾರು ಮಥನವಗ್ನಿಯೆ ಪಾವಕ ತೋರುವಂತೆ) ಎಂದರೆ, ಕಾಷ್ಠದಾಗೆ ಅಗ್ನಿ ಅನಭಿವ್ಯಕ್ತನಾಗಿ ಇದ್ದಂತೆ, ಪ್ರತಿಮಾದಲ್ಲಿ ಶ್ರೀಪರಮಾತ್ಮ ಅನಭಿವ್ಯಕ್ತನಾಗಿದ್ದಾನೆ. ಕಾಷ್ಠವನ್ನು ನಿಮಿತ್ತಮಾಡಿ ತದ್ಗತ ಅಗ್ನಿಯಲ್ಲಿ ಲಕ್ಷ್ಯವಿಟ್ಟು ಮಥನಮಾಡೋಣದರಿಂದ ಹ್ಯಾಂಗೆ ಅಗ್ನಿಪ್ರತ್ಯಕ್ಷನಾಗತಾನೋ, ತದ್ವತ್ ಪ್ರತಿಮಾಂತರ್ಗತನಾದ ಶ್ರೀಪರಮಾತ್ಮನ ಕಾಣಬೇಕಾದರೆ, ಪ್ರತಿಮಾ ನಿಮಿತ್ತವು. ಇದರನ್ನ ನಿಮಿತ್ತಮಾಡಿಕೊಂಡು ವೇದಶಾಸ್ತ್ರಗಳಲ್ಲಿ ಇರುವ ಪರಮಾತ್ಮನ ಗುಣಾನುಸಂಧಾನವೆಂಬ ಮಥನ ದಿಂದ ಪ್ರತೀಕಾಂತರ್ಗತ ಶ್ರೀದೇವರು ಪ್ರತ್ಯಕ್ಷನಾಗಿ ದರ್ಶನ ಕೊಡತಾನೆ. ಅಸುರರಿಗೆ ಅಹಿತನು. ಭಕ್ತರಿಗೆ ಹಿತನು ಎಂತ ತಾತ್ಪರ್ಯ. ಜಡಪ್ರತೀಕ ದಲ್ಲಿ (ಪ್ರತೀಕ) ಚಲಪ್ರತೀಕರಾದ ದೇವತೆಗಳೊಳು (ಸುರರೊಳು) ಅಂತರ್ಗತ ನಾಗಿ ತೋರತಾ ಇರತಾನೆ. ಸುರಶಬ್ದ ಚೇತನಾ ಸಾಂಕೇತವಾಯಿತು. ಈ ಚೇತನ ಉಪಲಕ್ಷಣಯಾ (ಚಲಪ್ರತೀಕಗಳು) :— ೧ನೇ ಪ್ರಥಮವಿಭೂತಿ ಯಾದ "ನೀತ" ವಿಭೂತಿಗೆ ಅಧಿಷ್ಠಾನಗಳಾದ ರಮಾದೇವೇರು. ೨ನೇ ದ್ವಿತೀಯ ವಿಭೂತಿಯಾದ "ಸಾಧಾರಣ" ವಿಭೂತಿಗೆ ಅಧಿಷ್ಠಾನರಾದ ನಿತ್ಯ ಸಂಸಾರಿಗಳು, ೪ನೇ ವಿಭೂತಿಗೆ ಅಧಿಷ್ಠಾನರಾದವರು, ಅಭ್ಯಾಗತ, ಅಥಿತಿ, ಯತಿ, ವನಸ್ಥ, ಗೃಹಸ್ಥ, ವಟು, ಯಜಮಾನ, ಸ್ವಜನ ಮತ್ತು ಪರ ಜನ. ೫ನೇ ವಿಭೂತಿ "ನೈಜ" ವಿಭೂತಿ. ಇದಕ್ಕೆ ಅಧಿಷ್ಠಾನರು ಜೀವರ ಸ್ವರೂಪಗಳು. ೮ನೇ ವಿಭೂತಿ, "ವಿಜಾತಿ" ವಿಭೂತಿ. ಇದಕ್ಕೆ ಅಧಿಷ್ಠಾನರು ತಮೋಯೋಗ್ಯರು. ೯ನೇ "ಖಂಡ" ವಿಭೂತಿ, ಇದಕ್ಕೆ ಅಧಿಷ್ಠಾನರು ಅರ್ಜುನಾದಿಗಳು. ೧೦ನೇ ವಿಭೂತಿ "ಅಖಂಡ" ವಿಭೂತಿ. ಇದಕ್ಕೆ ಅಧಿಷ್ಠಾನರು ಬ್ರಹ್ಮಾದಿ ಋಜುಗಳು. ಈ ಮೂವತ್ತು ಮಂದಿ ಈ ಶ್ಲೋಕಗತ ಸುರ ಸಾಂಕೇತದಿಂದ ಸರ್ವಚೇತನರು ಗ್ರಾಹ್ಯ ಎಂತ ಅರ್ಥ.

ಸ್ಥಾವರ ಜಂಗಮ ಪ್ರತೀಕಗಳಲ್ಲಿ ತತ್ತದಾಕಾರದಿಂದ ಇದ್ದಾನೆ. (ತತ್ತ ದಾಕಾರದಲಿ). ಧ್ಯಾನೋಪಾಸನದಿಂದ ಆರಾಧಿಸುತ್ತಾ, ಜ್ಞಾನ ಚಕ್ಷುಸ್ಸಿನಿಂದ

ನೋಡತಕ್ಕವರಿಗೆ (ನೋಳ್ಪರಿಗೆ), ಪ್ರತಿಮಾಂತರ್ಗತನಾದ ಶ್ರೀಪರಮಾತ್ಮ ಪ್ರತಿಮಾಕಾರದಂತೆ ದರ್ಶನ ಕೊಡತಾ ಇರತಾನೆ ಎಂತ ತಾತ್ಪರ್ಯ (ತೋರುತಿಪ್ಪನು) ॥೫॥

## (೨) "ಭಾವಪ್ರಕಾಶಿಕೆ" ವ್ಯಾಖ್ಯಾನ :—

ಮನೆಗಳಲ್ಲಿ ಪೂಜಿಸಲರ್ಹವಾದ ಪಂಚಲೋಹ ಪ್ರತಿಮೆಗಳಲ್ಲಿ "ಪ್ರತಿಮಾ" -ಎಂಬ ಅಕ್ಷರ ಸಂಖ್ಯೆಯಿಂದ- ಪ್ + ರ = 1 + 2 = 3, ತಿ = 1, ಮ = 5. ಬಲದಿಂದ ಎಣಿಸಿದರೆ 513 ಆಗುವುದು. ಇಷ್ಟು ರೂಪಗಳಿಂದ "ಸಹಜವಿಭೂತಿ" ಎಂದೆನಿಸಿ, ಯಾವಾಗಲೂ ವಾಸವಾಗಿರುವನು. "ಆಹಿತವಿಭೂತಿ" ಎಂದು ಅಚಲವಾಗಿ ದೇವಾಲಯದಲ್ಲಿ ಸ್ಥಾಪಿತವಾದ ಶಿಲಾಪ್ರತಿಮಾದಿಗಳಲ್ಲಿಯೂ ಅಷ್ಟೇ ವಿಭೂತಿರೂಪದಿಂದ ವಾಸವಾಗಿರುವನು. ಯಾಗಶಾಲೆಯಲ್ಲಿ ಅಗ್ನಿ ಹುಟ್ಟುವುದಕ್ಕಾಗಿ ಇಟ್ಟಿರುವ "ಅರಣಿ"ಎಂಬ ಕಾಷ್ಠವನ್ನು ಮತ್ತೊಂದು ಕಾಷ್ಠದಿಂದ ಮಥನಮಾಡಿದರೆ, ಅಗ್ನಿಯು ಕಾಣುವಂತೆ ರಾಮಕೃಷ್ಣಾದಿ ಪ್ರತಿಮೆಗಳೊಳಗೆ ಅದೇ ಆಕಾರದಿಂದ ಜ್ಞಾನಿಗಳಿಗೆ ಗೋಚರನಾಗುವನು. ಕಾಷ್ಠದೊಳಗೆ ಅಗ್ನಿ ಇದ್ದರೂ, ಕಾಣುವುದಿಲ್ಲ. ಮಥನಮಾಡಿದಾಗ ಮಾತ್ರ ಹೇಗೆ ಕಂಡುಬರುವುದೋ, ಹಾಗೆಯೇ ಸಾಧಾರಣಜನರಿಗೆ ಸಾಧಾರಣ ಪಂಚಲೋಹಾದಿ ಪ್ರತಿಮೆಗಳಂತೆ ತೋರುವನು. ಭಕ್ತಿಯಿಂದ ಧ್ಯಾನಮಾಡುವ ಜ್ಞಾನಿಗಳಿಗೆ ತೇಜೋಮಯನಾಗಿ ಪ್ರತಿಮಾ ದೇವತಾರೂಪನಾಗಿ ಅಂದರೆ, ರಾಮಪ್ರತಿಮೆಯಲ್ಲಿ ರಾಮರೂಪನಾಗಿಯೂ, ಕೃಷ್ಣಾದಿ ಪ್ರತಿಮೆಗಳಲ್ಲಿ ತದ್ರೂಪಿಯಾಗಿಯೂ ಕಾಣುವನು ॥೫॥

## (೩) "ಭಾವದರ್ಪಣ ಟೀಕಾ"-ವ್ಯಾಖ್ಯಾನ :—

ಐನೂರಾಹದಿಮೂರು ರೂಪದಿಂದ ಪ್ರತಿಮೆಯಲ್ಲಿ ಶ್ರೀಹರಿ ಇದ್ದಾನೆಂದು ಹೇಳುತ್ತಾರೆ- "ಶ್ರೀರಮಣೇತಿ".

ದಾರುಮಥನವಗ್ನೈಯೆ = ಕಾಷ್ಠಮಥನಮಾಡುತ್ತಾ ಇರಲಾಗಿ ॥೫॥

## (೪) ವಾದಿರಾಜಾಚಾರ್ಯರ ವ್ಯಾಖ್ಯಾನ (ಸಂಸ್ಕೃತಮೂಲ) :—

"ಶ್ರೀ" ಇತಿ॥ ತ್ರಯೋದಶಾಧಿಕಂ ರೂಪಂ ಶತಪಂಚಕಮೂಹಿತೇ॥ ಪಂಚರಾತ್ರೇಚ॥ ಅರ್ಚಾಯಾಂ ಚಿಂತನೀಯಮ್ ಸ್ಯಾತ್ ರೂಪಾಣಾಂ ಪರಮಾತ್ಮನಃ॥ ತ್ರಯೋದಶೋತ್ತರಂ ಪಂಚಶತಂ ಶಸ್ತ್ರಾರ್ಥಕೋವಿದೈಃ॥ ॥೫॥

### ಕನ್ನಡಾನುವಾದ :—

ಪ್ರತಿಮೆಗಳಲ್ಲಿ ಶ್ರೀಪರಮಾತ್ಮನು 513ರೂಪಗಳಿಂದ ವಿರಾಜಮಾನನಾಗಿದ್ದಾನೆ. ಶಾಸ್ತ್ರಸಂಪನ್ನರಾದ ಪ್ರಾಜ್ಞರು ಪ್ರತಿಮಾಂತರ್ಗತ ಈ ರೂಪಗಳನ್ನು ಅರಿತು, ಪೂಜಿಸುತ್ತಾರೆ. ಕಾಷ್ಠವನ್ನು ಮಥನಮಾಡಿದರೆ ತದಂಗರ್ಗತ ಅಗ್ನಿಯು ಅಭಿವ್ಯಕ್ತವಾಗುವುದು, ತದ್ವತ್ ಭಗವಂತನು ತತ್ತದಾಕಾರ ತನ್ನಾಮಗಳಿಂದ ಪ್ರತಿಮಾದಿಗಳಲ್ಲಿ ವ್ಯಕ್ತಾವ್ಯಕ್ತನಾಗಿರುತ್ತಾನೆ ॥5॥

## (೫) "ಗುರುಹೃದಯ ಪ್ರಕಾಶಿಕಾ" ವ್ಯಾಖ್ಯಾನ :—

**ಅಹಿತಾಚಲ**ವೆಂದು ಹೆಸರುಳ್ಳ ಪ್ರತಿಮೆಗಳಲ್ಲಿ ಶ್ರೀರಮಣನು ಐದನೂರು ಹದಿಮೂರು ರೂಪದಿಂದ ಇರುವನು. ಮಾ = 5 ತಿ = 1 ಪ್ರ = ತಿ ಈ ರೀತಿ ಅರಣಿ ಎಂಬ ಅಗ್ನಿ ಹುಟ್ಟುವ ಮರದ ಪಾತ್ರೆಯನ್ನು ಕಡೆದರೆ ಬೆಂಕಿ ಕಾಣಿಸುವಂತೆ, ಪ್ರತೀಕ ಸುರರೆಂಬ ಪ್ರತಿಮಾಭಿಮಾನಿ ದೇವತೆಗಳೊಳ ತತ್ತದಾಕಾರದಿಂದ ನೋಡುವ ಜ್ಞಾನಿಗಳಿಗೆ ದೇವರು ದರ್ಶನ ಕೊಡುವನು ॥೫॥

# ಸರ್ವವ್ಯಾಖ್ಯಾನಸಾರಸಂಗ್ರಹ

ಪ್ರತಿಮಾಂತರ್ಗತ ಭಗವದ್ವಿಭೂತಿರೂಪಗಳ ವಿಚಾರವನ್ನು ತಿಳಿಸುತ್ತಾರೆ. **"ಶ್ರೀ ರಮಣ"**–ಎಂಬ ಪ್ರಸಕ್ತ ಸಂಧಿಪಿತ ೫ನೆಯ ಈ ಪದ್ಯ

ದಿಂದ, ಇದರಲ್ಲಿ ಪ್ರತಿಮಾರೂಪವಾದ ಗೋಳಕಗಳಲ್ಲಿ ಭಗವದ್ರೂಪಗಳ ಚಿಂತನೆಯ ವಿವರಗಳಿವೆ. ಪ್ರತಿಮೆ ಅಥವಾ ಪ್ರತೀಕಗಳಲ್ಲಿ ದಶವಿಧಗಳೆಂದು ಪ್ರಸಿದ್ಧಿ ಇವುಗಳ ಪೈಕಿ ಎಂಟು ವಿಧಗಳು ಮುಖ್ಯ :—

(1) ಪಂಚಲೋಹಾದಿಗಳಿಂದ ನಿರ್ಮಿತವಾದ ಪ್ರತಿಮೆಗಳು. (2) ಶಿಲಾಪ್ರತಿಮೆಗಳು. (3) ಮರದಿಂದ ಮಾಡಿದ ದಾರು ಪ್ರತಿಮೆಗಳು. (4) ಮಣ್ಣು ಅಥವಾ ಮರಳಿನಿಂದ ಮಾಡಿದ ಸೈಕತ ಪ್ರತಿಮೆಮೆಗಳು. (5) ಚಿತ್ರದಲ್ಲಿ ಬರೆದಿರುವ ರೇಖಾಪ್ರತಿಮೆಗಳು. (6) ಮನಸ್ಸಿನಲ್ಲಿ ಮೂಡುವ ಮಾನಸಿಕ ಪ್ರತಿಮೆಗಳು (7) ರಸವಿಶೇಷಗಳಿಂದ ನಿರ್ಮಿತ ಲೇಪ್ಯ ಪ್ರತಿಮೆಗಳು (8) ನವರತ್ನನಿರ್ಮಿತ ಮಣಿಮಯೀ ಪ್ರತಿಮೆಗಳು.

ಇವುಗಳಲ್ಲಿ ಮನೆಗಳಲ್ಲಿ ಮತ್ತು ಯತಿಗಳಲ್ಲಿ ತಮ್ಮ ಸಂಸ್ಥಾನ ಪರಂಪರೆ ಯಿಂದ ಪ್ರಾಪ್ತವಾದ ಪ್ರತಿಮೆಗಳನ್ನು ಪಂಚಲೋಹ, ಅಥವಾ ಭಂಗಾರ ದಿಂದ ಮಾಡಿರುವರು. ಇವು ಲೋಹಪ್ರತಿಮೆಗಳು. ಅಂತೆಯೇ ದೇವ ಸ್ಥಾನಗಳಲ್ಲಿ ಜ್ಞಾನಿಗಳಿಂದ ಪ್ರತಿಷ್ಠಿಸಲ್ಪಟ್ಟಿರುವುವು. ಜಗನ್ನಾಥ ಮುಂತಾದ ಮಹಾಕ್ಷೇತ್ರಗಳಲ್ಲಿ ಮರದಿಂದ ಮಾಡಿದ ದಾರು ಪ್ರತೀಕಗಳು ಸುಪ್ರಸಿದ್ಧ, ಇಂಥ ಪ್ರತಿಮೆಗಳಲ್ಲಿ ಆವಾಹನಾದಿಗಳನ್ನು ಶಾಸ್ತ್ರೀಯ ವಿಧಾನದಿಂದ ಮಾಡಿ, ಆ ಪ್ರತಿಮಾದಲ್ಲಿ ಸನ್ನಿಧಾನಯುಕ್ತನಾದ ಶ್ರೀಪರಮಾತ್ಮನನ್ನು ಪೂಜಿಸುವರು. ಇಂತಹ ಪ್ರತಿಮಾರೂಪವಾದ ಗೋಳಕಗಳಲ್ಲಿ ಶ್ರೀಹರಿಯು 513 ಅಕ್ಷರ ಸಾಂಕೇತರೂಪಗಳಿಂದ ಶೋಭಾಯಮಾನನಾಗಿದ್ದಾನೆ.

ಹೇಗೆಂದರೆ: (1) ಪ್ರ = ಪ + ರ = 1 + 2 = 3. (ಸಂಯುಕ್ತಾಕ್ಷರ)

(2) ತಿ = ತವರ್ಗ ಪಂಚಕ = 1 (ಸ್ಥಾನ 1)

(3) ಮಾ = ಪವರ್ಗ ಪಂಚಕ = 5 (ಅನುನಾಸಿಕಾಕ್ಷರ)

ಅಲ್ಲಿಗೆ ಸಂಖ್ಯಾಕ್ರಮದಿಂದ 315 ಆಯಿತು. ವಾಮಾಂಕರೀತ್ಯಾ 513 (ಐದನೂರ ಹದಿಮೂರು) ಅಕ್ಷರ ಸಾಂಕೇತ ರೂಪಗಳಾಗುವುವು. ಈ ಸಂಖ್ಯೆಯನ್ನು ದಾಸಾರಾಯರು "ಹದಿಮೂರು ಅಧಿಕವಾಗಿಪ್ಪ ಮೇಲೈ

ನೂರು" ಎಂದು ಹೇಳಿರುತ್ತಾರೆ. ಅಂದರೆ 13+500=513 ರೂಪಗಳು. ದೇವಾಸ್ಥಾನಗಳಲ್ಲಿ ಚಲಿಸದೇ ಇರುವ ಪ್ರತಿಮೆಗಳಾದುದರಿಂದ **"ಅಚಲ"** ಎಂದೂ, "ಆಹಿತವಿಭೂತಿ" ರೂಪದಿಂದ ಸನ್ನಿಧಾನಯುಕ್ತನಾಗಿರುವುದರಿಂದ **"ಅಹಿತಾಚಲದಿ"** ಎಂದೂ ಶಬ್ದ ಪ್ರಯೋಗ ಮಾಡಿರುವರು. ಯಜ್ಞಶಾಲೆಗಳಲ್ಲಿ ಅಗ್ನಿಯನ್ನು ಉತ್ಪತ್ತಿಮಾಡಲು "ಅರಣಿ" ಎಂಬ ಮರದಪಾತ್ರೆಯನ್ನು ಉಪಯೋಗಿಸುವರು. ಅದಲ್ಲಿ ಅಗ್ನಿ ಇದ್ದರೂ ಹೊರಗೆ ಕಾಣಿಸುವುದಿಲ್ಲ. ಆದರೆ ಆ ಅರಣಿಯನ್ನು ಇನ್ನೊಂದು ಕಾಷ್ಠದಿಂದ ಕಡೆದರೆ (ಮಥನ), ಅದರಲ್ಲಿದ್ದ ಅಗ್ನಿಯು ಅಭಿವ್ಯಕ್ತವಾವುದು. ಅಂತೆಯೇ, ಪ್ರತೀಕ ಸುರರೆಂದು ಪ್ರಸಿದ್ಧರಾದ ಪ್ರತಿಮಾಭಿಮಾನಿ ದೇವತೆಗಳಲ್ಲಿ ಶ್ರೀ ಪರಮಾತ್ಮನು ಅನಭಿವ್ಯಕ್ತನಾಗಿರುವನು. ಜ್ಞಾನಾನುಸಂಧಾನವೆಂಬ ಧ್ಯಾನಯೋಗ ರೂಪವಾದ ಕಾಷ್ಠದಿಂದ ಮನಸ್ಸಿನಲ್ಲಿ ಮಥಿಸಿದರೆ, ತತ್ತದಾಕಾರನಾಗಿ ತನ್ನಾಮಕನಾಗಿ ಆ ಪ್ರತಿಮೆಗಳಲ್ಲಿ ಆಯಾಯಾ ಆಕಾರ ರೂಪಗಳಂತೆಯೇ ಜ್ಞಾನಿಗಳಿಗೆ ಧ್ಯಾನ ಗೋಚರನಾಗಿ, ತನ್ನ ದರ್ಶನ ಭಾಗ್ಯವನ್ನು ಕೊಡುತ್ತಾನೆ ॥೫॥

## ಪದ್ಯ (೬)

ಮೂಲ :—

ಕರಣನಿಯಾಮಕನು ತಾನುಪ ।
ಕರಣದೊಳಗೈವತ್ತೆರಡು ಸಾ ।
ವಿರದ ಹದಿನಾಲ್ಕಾಧಿಕ ಶತರೂಪಂಗಳನೆ ಧರಿಸಿ ॥
ಇರುತಿಹನು ತದ್ರೂಪ ನಾಮಗ ।
ಳರಿತು ಪೂಜಿಸುತಿಹರ ಪೂಜೆಯ ।
ನಿರುತ ಕೈಗೊಂಬನು ತೃಷಾರ್ತನು ಜಲವ ಕೊಂಬಂತೆ ॥೬॥

**ಅವತರಣಿಕೆ :—**

ಇಂದ್ರಿಯಗಳಿಗೆ ನಿಯಾಮಕನಾದ ಹೃಷಿಕೇಶನಾಮಕ ಶ್ರೀಪರಮಾತ್ಮನು ಪಂಚ ಜ್ಞಾನೇಂದ್ರಿಯಗಳು ಪಂಚ ಕರ್ಮೇಂದ್ರಿಯಗಳು ಮತ್ತು ಮನಸ್ಸು ಎಂಬ ಈ ಏಕಾದಶೇಂದ್ರಿಯಗಳಲ್ಲಿ (ಸಾಧನ ದೇಹಕ್ಕೆ ಈ ಇಂದ್ರಿಯಗಳು ಸಹಕಾರಿಯಾಗಿರುವುದರಿಂದ, "ಉಪಕರಣ"ಗಳೆಂದು ನಾಮ) ಅಥವಾ ದೇವ ಪೂಜೋಪಯೋಗ್ಯವಾದ ಉಪಕರಣಗಳಲ್ಲಿ 52114 ರೂಪಗಳಿಂದ, ತದ್ರೂಪ, ತದಾಕಾರ ಮತ್ತು ತನ್ನಾಮಕನಾಗಿ ಭಗದ್ವಿಭೂತಿರೂಪವಿಶಿಷ್ಟನಾಗಿರುವನೆಂದು ತಿಳಿದು, ಪೂಜೆಮಾಡುತ್ತಿರುವ ಸಾಧನ ಜೀವಿಗಳ ಪೂಜೆಯನ್ನು ತಾನು ಅತಿ ಬಾಯಾರಿಕೆಯಿಂದ ಆರ್ತನಾದವನು ಹೇಗೆ ಜಲಪಾನ ಮಾಡುವನೋ, ಹಾಗೆ ತಾನು ಸ್ವೀಕರಿಸಿ, ಅವರನ್ನು ಅನುಗ್ರಹಿಸುವನು-ಎಂದು ತಿಳಿಸುತ್ತಾರೆ- "ಕರಣನಿಯಾಮಕನು"-ಎಂಬ ಪ್ರಸಕ್ತಸಂಧಿಗತ ೭ನೆಯ ಈ ಪದ್ಯದಿಂದ ॥೭॥

**ಪ್ರತಿಪದಾರ್ಥ :—**

**ಕರಣನಿಯಾಮಕನು**= ಇಂದ್ರಿಯ ಪ್ರೇರಕನಾದ ಶ್ರೀ ಪರಮಾತ್ಮನು **ತಾನು**=ಸ್ವಯಂ ಶ್ರೀಹರಿಯೇ **ಉಪಕರಣದೊಳು**= ಪೂಜಾ ಸಾಮಗ್ರಿಗಳ ಒಳಗೆ **ಐವತ್ತೆರಡು ಸಾವಿರದ**= 52000 ಸಂಖ್ಯಾಕವಾದ **ಹದಿನಾಲ್ಕಧಿಕ ಶತರೂಪಂಗಳನೆ**=ನೂರರ ಮೇಲೆ ಹದಿನಾಲ್ಕು ಹೆಚ್ಚಾದ ಅಂದರೆ. 52000+100+14=52114 ಅಕ್ಷರ ಸಾಕೇಂತ ರೂಪಗಳನ್ನು **ಧರಿಸಿ**= ಧಾರಣಮಾಡಿ (ಸ್ವೀಕರಿಸಿ) **ಇರುತಿಹನು**= ವಿರಾಜಮಾನನಾಗಿದ್ದಾನೆ. **ತದ್ರೂಪ**= ಕರಚರಣಾದ್ಯವಯುವಗಳಲ್ಲಿ, ಇಂದ್ರಿಯಗಳಲ್ಲಿ ಮತ್ತು ಉಪಕರಣಗಳಲ್ಲಿ ಆಯಾಯಾ ರೂಪಗಳಿಂದಲೂ **ನಾಮಗಳ**=ಅವುಗಳ ಹೆಸರಿನಿಂದಲೂ ಇರುವ ಶ್ರೀಪರಮಾತ್ಮನ ತದ್ರೂಪ ಮತ್ತು ತನ್ನಾಮಗಳನ್ನು **ಅರಿತು**= ಜ್ಞಾನ ಯೋಗದಿಂದ ತಿಳಿದು **ಪೂಜಿಸುತಿಹರ**=ಪೂಜೆಯನ್ನು ಮಾಡುತ್ತಿರುವ ಸಜ್ಜನರ **ಪೂಜೆಯ**=

ಪೂಜಾರೂಪವಾದ ಸೇವೆಯನ್ನು **ತೃಷಾರ್ತನು** = ನೀರಡಿಕೆಯುಳ್ಳವನು (ತುಂಬಾ ಬಾಯಾರಿದವನು) **ಜಲವ ಕೊಂಬಂತೆ** = ನೀರನ್ನು ಕುಡಿಯುವಂತೆ **ನಿರುತ** = ನಿತ್ಯದಲ್ಲಿಯೂ **ಕೈಗೊಂಬನು** = ಸ್ವೀಕರಿಸುತ್ತಾನೆ ॥೬॥

## ವ್ಯಾಖ್ಯಾನಗಳು

### (೧) ಶ್ರೀ ಸಂಕರ್ಷಣಒಡೆಯರ ವ್ಯಾಖ್ಯಾನ :—

ಪ್ರತಿಮಾಂತರ್ಗತ ಇಂದ್ರಿಯಸ್ವರೂಪಗಳ ಹೇಳತಾರೆ. ಜ್ಞಾನೇಂದ್ರಿಯಗಳು 5 ಮತ್ತು ಮನಸ್ಸು 1, ಸೇರಿ ಒಟ್ಟು ಆರು. (ಕರಣ) ಉಪಕರಣಗಳು ಐದು, ಪಾಣಿಪಾದಾದಿ ಪಂಚ ಕರ್ಮೇಂದ್ರಿಯಗಳು 5 ಅಂತು ಹನ್ನೊಂದು. ಜ್ಞಾನೇಂದ್ರಿಯಗಳಿಗೆ ಕರ್ಮೇಂದ್ರಿಯಗಳು ಸಹಕಾರಿ ಆದ್ದರಿಂದ "ಉಪಕರಣ" ಎಂತ ಕರ್ಮೇಂದ್ರಿಯಗಳು ಕರಿಸೋದಾಯಿತು ಆ ಸಹಕಾರಿತ್ವ ಹೇಗೆಂದರೆ :—

### ಜ್ಞಾನೇಂದ್ರಿಯ, ಕರ್ಮೇಂದ್ರಿಯಗಳ ಸಹಕಾರಿತ್ವ ವಿವರವನ್ನು ತೋರಿಸುವ ಪಟ್ಟಿ :—

| ಕ್ರಮ ಸಂಖ್ಯೆ | ಇಂದ್ರಿಯಗಳು | ವ್ಯಾಪಾರ | ಸಹಕಾರಿತ್ವ |
|---|---|---|---|
| (೧) | | | ಇಷ್ಟರಿಂದ ಸಹಿತವಾಗಿ ಅನಿರುದ್ಧ |
| ೧ | ಅಹಂಕಾರವೃತ್ತಿ | ಗಂಧಗ್ರಹಣ | ರೂಪೀ ಪರಮಾತ್ಮ ಕರ್ಮೇಂ |
| ೨ | ಪ್ರಾಣವಾಯು | ವಿಷಯ ಲಯ | ದ್ರಿಯವಾದ ಉಪಸ್ಥ ತತ್ವದಲ್ಲಿ |

| | | | |
|---|---|---|---|
| ೩ | ಅನಿರುದ್ಧರೂಪೀ ಪರಮಾತ್ಮ | ಯಾವತ್ತು | ಲಯ ಐದಿ, ಹಾಂಗೆ ಪೃಥ್ವೀ ಸಾಂಕೇತವಾದ ಅನ್ನಮಯಕೋಶದಲ್ಲಿ ಲಯ ಐದತದೆ. ಆಗ್ಗ ಗಂಧ ಜ್ಞಾನ ನಾಸಿಕೇಂದ್ರಿಯಕ್ಕೆ ಆಗುತದೆ ಈ ಕಾರಣದಿಂದ "ಕರಣ" "ಶಬ್ದ ಜ್ಞಾನೇಂದ್ರಿಯಗಳಿಗೂ, "ಉಪಕರಣ" ಶಬ್ದ ಕರ್ಮೇಂದ್ರಿಯಗಳಿಗೂ ಬರೋದಾಯಿತು. ಇದೇ ಪ್ರಕಾರ ಜ್ಞಾನೇಂದ್ರಿಯಗಳು ಯಾವತ್ತೂ ಗ್ರಾಹ್ಯ. |
| ೪ | ಘ್ರಾಣೇಂದ್ರಿಯ | ಅಭಿಮಾನಿಯ | |
| ೫ | ಗಂಧತನ್ಮಾತ್ರ | ಪರ | |
| (೨) | | | |
| ೧ | ರಸ | ರಸಗ್ರಹಣ | ಇಷ್ಟರಿಂದ ಸಹಿತನಾಗಿ ಗುಹ್ಯೇಂದ್ರಿಯದಲ್ಲಿ ಲಯ ಐದಿ, ಪ್ರಾಣಮಯ ಸಾಂಕೇತವಾದ ಅಪ್‌ಕೋಶದಲ್ಲಿ ಲಯಐದೋದಾಗತದೆ. ಆಗ್ಗ ರಸಜ್ಞಾನ ಜಿಹ್ವೇಂದ್ರಿಯಕ್ಕೆ ಆಗತದೆ. |
| ೨ | ಚಿತ್ತ | ವಿಷಯ ಯಾವತ್ತು. | |
| ೩ | ಅಪಾನವಾಯು | ಅಭಿಮಾನಿ ದೇವತಾಪರ | |
| ೪ | ಜಿಹ್ವೇಂದ್ರಿಯ | | |
| ೫ | ಪ್ರದ್ಯುಮ್ನ | | |
| (೩) | | | |
| ೧ | ರೂಪ | ರೂಪಗ್ರಹಣ | ಇಷ್ಟರಿಂದ ಸಹಿತನಾಗಿ ಪಾದೇಂದ್ರಿಯದಲ್ಲಿ ಲಯ ಐದಿ, ಮನೋಮಯಕೋಶವಾದತೇಜಃ=ಕೋಶದಲ್ಲಿ ಲಯಐದತದೆ. ಆಗ್ಗ ರೂಪ ವಿಷಯ ಚಕ್ಷುರಿಂದ್ರಿಯಕ್ಕೆ ಜ್ಞಾನವಾಗತದೆ. |
| ೨ | ಬುದ್ಧಿ | ವಿಷಯ ಯಾವತ್ತು | |
| ೩ | ವ್ಯಾನವಾಯು | ಅಭಿಮಾನಿ | |
| ೪ | ಸಂಕರ್ಷಣ | ದೇವತಾಪರ | |
| ೫ | ಚಕ್ಷುರಿಂದ್ರಿಯ | | |

| | | | |
|---|---|---|---|
| (೪) | | | |
| ೧ | ಸ್ಪರ್ಶ | ಸ್ಪರ್ಶಗ್ರಹಣ ವಿಷಯ | ಇಷ್ಟರಿಂದ ಸಹಿತನಾಗಿ ಪಾಣೇಂದ್ರಿಯದಲ್ಲಿ ವಿಜ್ಞಾನಮಯ ಕೋಶವಾದ ವಾಯುಕೋಶದಲ್ಲಿ ಲಯ ಐದೋದಾಗತದೆ. ಆಗ್ಗ ಶೀತ ಉಷ್ಣ ಮೃದು ಕಠಿಣತ್ವ ತ್ವಗಿಂದ್ರಿಯಕ್ಕೆ ಜ್ಞಾನವಾಗತದೆ. |
| ೨ | ಮನಸ್ಸು | ಯಾವತ್ತು ಅಭಿಮಾನಿ | |
| ೩ | ಉದಾನವಾಯು | ದೇವತಾಪರ | |
| ೪ | ವಾಸುದೇವ | | |
| ೫ | ತ್ವಗಿಂದ್ರಿಯ | | |
| (೫) | | | |
| ೧ | ಶಬ್ದ | ಶಬ್ದಗ್ರಹಣ | ಇಷ್ಟರಿಂದ ಸಹಿತನಾಗಿ ವಾಗೀಂದ್ರಿಯದಲ್ಲಿ ಲಯಐದಿ ಆನಂದಮಯ ಕೋಶ ಸಾಂಕೇತವಾದ ಆಕಾಶದಲ್ಲಿ ಲಯ ಐದತದೆ. ಆಗ್ಗ ಶಬ್ದ ವಿಷಯ ಶ್ರವಣೇಂದ್ರಿಯಕ್ಕೆ ಜ್ಞಾನವಾಗತದೆ. |
| ೨ | ಅಂತಃಕರಣ | ವಿಷಯ | |
| ೩ | ಸಮಾನವಾಯು | ಯಾವತ್ತು | |
| ೪ | ನಾರಾಯಣ | ಅಭಿಮಾನಿ | |
| ೫ | ಶ್ರೋತ್ರೇಂದಿಯ | ದೇವತಾಪರ | |

## ಪಟ್ಟೆ (೨)

| | | | | | | |
|---|---|---|---|---|---|---|
| ೧ | ಸಂಕರ್ಷಣ | ಅಹಂಕಾರ<br>ಪ್ರಾಣ ವಾಯು | ಚಿತ್ತ<br>ಅಪಾನ | ಬುದ್ಧಿ<br>ವ್ಯಾನ | ಮನಸ್ಸು<br>ಉದಾನ<br>ವಾಯು | ತಂತಃಕರಣ<br>ಆಕಾಶ<br>ಸಮಾನ |

| | | | | | | |
|---|---|---|---|---|---|---|
| ೨ | ಪ್ರದ್ಯುಮ | ಘ್ರಾಣೇಂದ್ರಿಯ<br>ಗಂಧ | ಜಿಹ್ವೆ<br>ಅಪ್ಪು<br>ರಸ | ತೇಜ<br>ಚಕ್ಷುರಿಂದ್ರಿಯ<br>ರೂಪ | ತ್ವಗಿಂದ್ರಿಯ<br>ಸ್ಪರ್ಶ | ಶ್ರೋತ್ರ<br>ಶಬ್ದ |
| ೩ | ಅನಿರುದ್ಧ | ಪೃಥ್ವೀ<br>ಉಪಸ್ಥ | ವಾಯು | ಪಾದ | ಪಾಣಿ | ವಾಕ್ಕು |

ಮನೋವೃತ್ತಿಗಳು–ಐದಕ್ಕೆ ಸಂಕರ್ಷಣ. ಜ್ಞಾನೇಂದ್ರಿಯಗಳು ಐದಕ್ಕೆ ಪ್ರದ್ಯುಮ್ನ. ಕರ್ಮೇಂದ್ರಿಯಗಳು ಐದಕ್ಕೆ ಅನಿರುದ್ಧ. ಜ್ಞಾನೇಂದ್ರಿಯಗಳ ವ್ಯಾಪಾರದಂತೆ ಕರ್ಮೇದ್ರಿಯಗಳ ವ್ಯಾಪಾರವೂ ಉಕ್ತಕ್ರಮದಿಂದ ತಿಳಿಯಬೇಕು. ಜ್ಞಾನೇಂದ್ರಿಯಗಳಿಗೆ ಕರ್ಮೇಂದ್ರಿಯಗಳು ಹೇಗೆ ಉಪಕರಣಗಳೋ ತದ್ವತ್ ಕರ್ಮೇಂದ್ರಿಯಗಳಿಗೆ ಜ್ಞಾನೇಂದ್ರಿಯಗಳು ಉಪಕರಣಗಳೆಂತಲೇ ಕರಸುತ್ತವೆ. ದೇಹವಿವಿಕ್ಷಯಾ ಏಕಾದಶೇಂದ್ರಿಯಗಳು ದೇಹಕ್ಕೆ ಉಪಕರಣಗಳೆಂತಲೇ ಕರಿಸುತ್ತವೆ. "ಉಪ" ಸಮೀಪ ಇತಿ ಅರ್ಥಃ ಒಳಗೆ= ಏಕಾದಶೇಂದ್ರಿಯಗಳ ಒಳಗೆ, ತಾ ನಿಯಾಮಕನು = ಬಿಂಬರೂಪಿಯಾದ ತಾನು ದೇಹಗತ ಇಂದ್ರಿಯ ನಿಯಾಮಕನು ಆಗಿ ಇರತಕ್ಕ ಶ್ರೀ ಪರಮಾತ್ಮನೇ ಪ್ರತಿಮಾಗತ ಇಂದ್ರಿಯಗಳಲ್ಲಿ ಇರೋವನಾಗಿದ್ದಾನೆ. ಉ=4, ಪ=1, ಕ=1, ರ=2 ಮತ್ತು ಣ=೫. ಅಕ್ಷರಸಂಖ್ಯಾದಿಂದ ಲೆಕ್ಕ ಬಲದಿಂದ ಎಡಕ್ಕೆ 52114 ಆಯಿತು. ಅಂದರೆ, ಐವತ್ತೆರಡುಸಾವಿರದ ಒಂದನೂರ

ಹದಿನಾಲ್ಕು. ರೂಪಪಳನ್ನು ಧರಿಸಿ. ಏಕಾದಶೇಂದ್ರಿಯಗಳಲ್ಲಿ ಪ್ರತಿಪ್ರತಿ ಇಂದ್ರಿಯಗಳಲ್ಲಿ ಪೂರ್ವೋಕ್ತ ಸಂಖ್ಯಾರೂಪದಿಂದ ಪ್ರತಿಮಾದಲ್ಲಿ ಇರೋವನಾಗಿದ್ದಾನೆ. ಆ ಪ್ರತಿಮಾದಲ್ಲಿ, "ಪ್ರತಿಮಾ" ಎಂಬ ಅಕ್ಷರ ಸಾಂಕೇತದಿಂದ ಆಗೋ ಭಗವದ್ರೂಪಗಳು- ಪ್ರ = ೩, ತಿ = ೧ ಮತ್ತು ಮಾ = ೫. ಅಂದರೆ ೫೧೩ ರೂಪಗಳು, ಪೂರ್ವೋಕ್ತಪ್ರಕಾರ ಆಗತಕ್ಕ ರೂಪಗಳು, 5,73,254, ಅಂದರೆ ಐದುಲಕ್ಷದ ಎಪ್ಪತ್ತು ಮೂರು ಸಾವಿರದ ಇನ್ನೂರ ಐವತ್ತನಾಲ್ಕು ರೂಪಗಳು. ಐದು ಹ್ಯಾಗೆಂದರೆ :— ಒಂದೊಂದು ಇಂದ್ರಿಯವಲ್ಲಿ ಇಂದ್ರಿಯಗಳು 11. ಈ ಹನ್ನೊಂದರಿಂದ ಉಪಕರಣ ಸಾಂಕೇತವಾದ ರೂಪಗಳಾದ ಮೇಲೆ ಹೇಳಿದ 52114 ರೂಪಗಳನ್ನು ಗುಣಿಸಿದರೆ, ಆಗ $52114 \times 11 = 5{,}73{,}254$ ಆಗತದೆ. ಇವಷ್ಟೂ ಪ್ರತಿಮಾಗತ ರೂಪಗಳು. ಪೂರ್ವೋಕ್ತ ರೂಪಗಳಿಗೆ ಅಕ್ಷರ ಸಾಂಕೇತದಿಂದ ಆಗತಕ್ಕ ಮಾತೃಕಾನ್ಯಾಸರೀತ್ಯಾ ಅಜಾದಿ ನಾಮಗಳನ್ನು ಅರಿತು, ಪ್ರತಿಮಾಂತರ್ಗತ ಪೂರ್ವೋಕ್ತರೂಪ ಸಹಿತ ಬಿಂಬನ್ನ ಆವಾಹನಮಾಡಿ, ಅನುಸಂಧಾನದಿಂದ ಪೂಜೆಮಾಡುವಂಥವರ (ಪೂಜಿಸುತಿಹರ) ಪೂಜಾವನ್ನು ನಿರಂತರ ಸ್ವೀಕಾರಮಾಡತಾನೆ. (ಪೂಜೆಯ ನಿರುತ ಕೈಕೊಂಬನು). ಹ್ಯಾಂಗೆಂದರೆ- ಅತಿದಾಹದಿಂದ ಆರ್ತನಾದವನು (ತೃಷಾರ್ತನು) ಜಲವನ್ನು ಆಸಕ್ತಿಯಿಂದ ಅತಿ ತೀವ್ರವಾಗಿ ಹ್ಯಾಂಗೆ ಪಾನ ಮಾಡುತ್ತಾನೋ (ಜಲವ ಕೊಂಬಂತೆ), ತದ್ವತ್ ಪೂರ್ವೋಕ್ತ ಪ್ರಕಾರ ಚಿಂತನಾಪೂರ್ವಕ ಮಾಡಿದಂಥಾ ಪೂಜೆಯನ್ನು ಸ್ವೀಕಾರ ಮಾಡತಾನೆ ಎಂತ ತಾತ್ಪರ್ಯ ॥೬॥

## (೨) "ಭಾವಪ್ರಕಾಶಿಕೆ" ವ್ಯಾಖ್ಯಾನ :—

ಜ್ಞಾನೇಂದ್ರಿಯ ಮತ್ತು ಕರ್ಮೇಂದ್ರಿಯ ಪ್ರೇರಕನಾದ ಶ್ರೀ ಪರಮಾತ್ಮನು "ಉಪಕರಣ" ವೆಂದರೆ, ಪೂಜಾಸಾಧನ ಪಧಾರ್ಥಗಳು, ಇವುಗಳಲ್ಲಿ ಅಕ್ಷರಸಂಖ್ಯೆಯಿಂದ ಉ=4, ಪ=1, ಕ=1, ರ=2 ಮತ್ತು ಣ=5. ಇವುಗಳನ್ನು ಬಲದಿಂದ ಎಣಿಸಿದರೆ, 52114 ರೂಗಳಾಗುವುವು. ಇಷ್ಟು ಭಗವದ್ವಿಭೂತಿ ರೂಪಗಳನ್ನು ಪೂಜಾಸಾಧನ ದ್ರವ್ಯಗಳಲ್ಲಿ ತಿಳಿದು,

ಪೂಜಿಸುವವರ ಪೂಜೆಯನ್ನು ನೀರಡಿಕೆವುಳ್ಳವನು ನೀರನ್ನು ತೆಗೆದುಕೊಳ್ಳುವಂತೆ ಶ್ರೀ ಪರಮಾತ್ಮನು ಸ್ವೀಕರಿಸುವನು ॥೬॥

## (೩) "ಭಾವದರ್ಪಣ ಟೀಕಾ" ವ್ಯಾಖ್ಯಾನ :—

ಇಂದ್ರಿಯಾಭಿಮಾನಿಯಾದ ಹೃಷೀಕೇಶನು 52114 ರೂಪಗಳಿಂದ ಉಪಕರಣಗಳಲ್ಲಿ ವ್ಯಾಪ್ತನಾಗಿದ್ದಾನೆಂದು ಹೇಳುತ್ತಾರೆ- "ಕರಣೇತಿ" –ಎಂಬ ಪದ್ಯದಿಂದ.

ಕೈಕೊಂಬ = ಸ್ವೀಕಾರಮಾಡುವ. ತೃಷಾರ್ತ = ನೀರಡಿಸಿದವ ॥೬॥

## (೪) ವಾದಿರಾಜಾರ್ಯರ ವ್ಯಾಖ್ಯಾನ: (ಸಂಸ್ಕೃತ ಮೂಲ)

"ಕರಣನಿಯಾಮಕನು" ಇತಿ ॥ ದ್ವಿಪಂಚಾಶತ್ ಸಹಸ್ರಂತು ಶತೋತ್ತರ ಚತುರ್ದಶ ॥ ರೂಪೈಃ ಚಿತ್ತಸ್ಥಃ ಪೂಜೇಚ್ಛುರುದ ಮಾರ್ತವತ್ ॥೬॥

**ಕನ್ನಡಾರ್ಥ :—**

52114 ಭಗವದ್ವಿಭೂತಿ ರೂಪಗಳಿಂದ ಶ್ರೀ ಪರಮಾತ್ಮನು ಉಪಕರಣಗಳಲ್ಲಿ ಇದ್ದಾನೆ. ಶ್ರೀಹರಿಯು ಇಂದ್ರಿಯಗಳಲ್ಲಿ ಮುಖ್ಯವಾದ ಮನಸ್ಸು ಮತ್ತು ಚಿತ್ತಗಳಲ್ಲಿ ಮುಖ್ಯ ಪ್ರೇರಕನಾಗಿದ್ದಾನೆ. ಬಾಯಾರಿಕೆಯಿಂದ ಆರ್ತನಾದವನು ನೀರನ್ನು ಸ್ವೀಕರಿಸುವಂತೆ, ಅತ್ಯಾತುರದಿಂದ ಭಕ್ತರು ಮಾಡುವ ಪೂಜಾರೂಪವಾದ ಸೇವೆಯನ್ನು ಸ್ವೀಕರಿಸುವನು. ಭಕ್ತರ ಪೂಜೆಯನ್ನು ಸ್ವೀಕರಿಸುವ ವಿಷಯದಲ್ಲಿ ಶ್ರೀ ಪರಮಾತ್ಮನಿಗೆ ಇರುವ ಆದರಾತಿಶಯವನ್ನು ಇಲ್ಲಿ ದೃಷ್ಟಾಂತವಾಗಿ ತೆಗೆದುಕೊಂಡಿರುತ್ತಾರೆಯೇ ಹೊರತು. ಭಗವಂತನಿಗೆ ಭಕ್ತರ ಪೂಜಾದಿಗಳಿಂದ ಯಾವ ಪ್ರಯೋಜನವೂ ಇಲ್ಲ. ಅವರನ್ನು ಕೇವಲ ಅನುಗ್ರಹಿಸುವುದಕ್ಕಾಗಿಯೇ ಪೂಜಾ ಸ್ವೀಕಾರ ಮಾಡುತಾನೆ ಎಂತ ತಾತ್ಪರ್ಯ ॥೬॥

## (ಆ) "ಗುರುಹೃದಯ ಪ್ರಕಾಶಿಕೆ" ವ್ಯಾಖ್ಯಾನ :—

ಕರಣವೆಂಬ ಕಣ್ಣು, ಕಿವಿ ಮೊದಲಾದ ದಶೇಂದ್ರಿಯಗಳಿಗೆ ನಿಯಾಮಕನಾದ ದೇವರು, ತಾನು ಐವತ್ತೆರಡುಸಾವಿರದ ನೂರ ಹದಿನಾಲ್ಕು ರೂಪದಿಂದ ಉಪಕರಣ ಎಂದರೆ. ಪೂಜಾಸಾಧನ ಪಧಾರ್ಥಗಳಲ್ಲಿರುವನು. ಣ=5, ರ=2, ಕ=1, ಪ=1 ಮತ್ತು ಉ=4. ಈ ರೀತಿ ತದಾಕಾರ ತನ್ನಾಮಕನಾಗಿರುವನೆಂದು ತಿಳಿದು, ಪೂಜಿಸುವ ಪೂಜೆಯನ್ನು, ಬಾಯಾರಿದವ ನೀರನ್ನು ಅಪೇಕ್ಷಿಸುವಂತೆ, ನಿರಪೇಕ್ಷನಾದರೂ, ಅಪೇಕ್ಷೆ ಇದ್ದಂತೆ ಅಂಗೀಕರಿಸುವನು ॥೬॥

# ಸರ್ವವ್ಯಾಖ್ಯಾನಸಾರಸಂಗ್ರಹ

ಮಾನವ ಜನ್ಮ ಅತ್ಯಂತ ದುರ್ಲಭವು. ಭಗವತ್ಪೂಜಾರೂಪವಾದ ಸಕಲ ಸಾಧನ ವಿಶೇಷಗಗಳೆಲ್ಲವೂ ನಡೆಯುವುದು ನಮ್ಮ ಶರೀರದ ದ್ವಾರವೇ. ಈ ಕಾರಣದಿಂದ ನಮ್ಮ ದೇಹವು **ಸಾಧನಶರೀರವೆಂದು** ಪ್ರಾಜ್ಞರ ಮತ. ಇಂತಹ ಸಾಧನಶರೀರದಲ್ಲಿ ವಿದ್ಯಮಾನವಾದ ಪಂಚಜ್ಞಾನೇಂದ್ರಿಯಗಳು, ಪಂಚ ಕರ್ಮೇಂದ್ರಿಯಗಳು ಮತ್ತು ಮನಸ್ಸು ಈ ಏಕಾದಶೇಂದ್ರಿಯಗಳೇ ಭಗವತ್ಪೂಜಾ ಸಾಧನಕ್ಕೆ ಸಹಕಾರಿಯಾಗಿರುವ **ಉಪಕರಣಗಳು.** ಕರಣಗಳೆಂದರೆ ಇಂದ್ರಿಯಗಳೆಂದರ್ಥ. ಜ್ಞಾನೇಂದ್ರಿಯಗಳ ನಿಯಂತ್ರಣಕ್ಕೆ ಒಳಪಟ್ಟು ಕರ್ಮೇಂದ್ರಿಯಗಳು ವ್ಯಾಪಾರಮಾಡುತ್ತವೆ. ಪಂಚಜ್ಞಾನೇಂದ್ರಿಯಗಳು, ಪಂಚಕರ್ಮೇಂದ್ರಿಯಗಳು. ಪಂಚಭೂತಗಳು, ತನ್ಮಾತ್ರಾಪಂಚಕಗಳು, ಅಂತಃಕರಣಾದಿ ಮನೋವೃತ್ತಿಪಂಚಕಗಳು, ಪಂಚಕೋಶಗಳು ಇವುಗಳಿಗಿರುವ ಪರಸ್ಪರ ಸಂಬಂಧವನ್ನು ಈ ರೀತಿ ತಿಳಿಯಹುದು.

ಜ್ಞಾನೇಂದ್ರಿಯ (ಜ್ಞಾನರೂಪ ವ್ಯಾಪಾರ)—ಭೂತಪಂಚಕ ತನ್ಮಾತ್ರಾಗುಣ (ವಿಷಯ)— ಕರ್ಮೇಂದ್ರಿಯ (ಕ್ರಿಯಾರೂಪವಾದ ವ್ಯಾಪಾರ). ಮನೋವೃತ್ತಿ ಪಂಚಕೋಶಗಳು— ಕೋಶಗತ ಪಂಚಪ್ರಾಣರೂಪಗಳು— ಕೋಶಾಭಿಮಾನಿ ಭಗವದ್ರೂಪ.

| ಕ್ರಮ ಸಂಖ್ಯೆ | ಜ್ಞಾನೇಂದ್ರಿಯಗಳು | ಭೂತ ಪಂಚಕಗಳು | ತನ್ಮಾತ್ರ ಗುಣ | ಕರ್ಮೇಂದ್ರಿಗಳು | ಮನೋವೃತ್ತಿ ಪಂಚಕಗಳು | ಪಂಚ ಕೋಶಗಳು | ವಾಯು ರೂಪ | ನಿಯಾಮಕ ಭಗವದ್ರೂಪ |
|---|---|---|---|---|---|---|---|---|
| ೧ | ಮೂಗು(ಘ್ರಾಣೇಂದ್ರಿಯ) | ಪೃಥ್ವೀ ತತ್ತ್ವ | ಗಂಧ ಗ್ರಹಣ | ಉಪಸ್ಥ | ಅಹಂಕಾರ ವೃತ್ತಿ | ಅನ್ನಮಯ ಕೋಶ | ಪ್ರಾಣ ವಾಯು | ಅನಿರುದ್ಧ |
| ೨ | ನಾಲಿಗೆ ರಸನೇಂದ್ರಿಯ | ಅಪ್ ತತ್ತ್ವ | ರಸ ಗ್ರಹಣ | ಪಾಯು | ಚಿತ್ತ | ಪ್ರಾಣಮಯ ಕೋಶ | ಅಪಾನ ವಾಯು | ಪ್ರದ್ಯುಮ್ನ |
| ೩ | ಕಣ್ಣು (ಚಕ್ಷುರಿಂದ್ರಿಯ) | ತೇಜೋ ತತ್ತ್ವ | ರೂಪ ಗ್ರಹಣ | ಪಾದ | ಬುದ್ಧಿ | ಮನೋಮಯ ಕೋಶ | ವ್ಯಾನ ವಾಯು | ಸಂಕರ್ಷಣ |
| ೪ | ಚರ್ಮ (ತ್ವಗಿಂದ್ರಿಯ) | ವಾಯು ತತ್ತ್ವ | ಸ್ಪರ್ಶ ಗ್ರಹಣ | ಪಾಣಿ | ಮನಸ್ಸು | ವಿಜ್ಞಾನ ಮಯಕೋಶ | ಉದಾನ ವಾಯು | ವಾಸುದೇವ |
| ೫ | ಕಿವಿ (ಶ್ರೋತ್ರೇಂದ್ರಿಯ) | ಆಕಾಶ ತತ್ತ್ವ | ಶಬ್ದ ಗ್ರಹಣ | ವಾಗಿಂದ್ರಿಯ | ಅಂತಃ ಕರಣ | ಆನಂದ ಮಯ ಕೋಶ | ಸಮಾನ ವಾಯು | ನಾರಾಯಣ |

ಇಂತು, ಪಂಚ ಜ್ಞಾನೇಂದ್ರಿಯಗಳಿಗೆ ಸಹಕಾರಿಯಾಗಿ ಪಂಚ ಕರ್ಮೇಂದ್ರಿಯಗಳಿದ್ದು, ಪಂಚಭೂತಗತ ತನ್ಮಾತ್ರಾ ಗುಣ ಗ್ರಹಣಮಾಡಿ, ಪಂಚ ಮನೋವೃತ್ತಿ ದ್ವಾರಾ, ಪಂಚ ಕೋಶಗಳ ವ್ಯಾಪಾರವು ಆಯಾಯಾ ಕೋಶಗತ ಪಂಚ ಪ್ರಾಣರೂಪಾಂತರ್ಗತನಾದ ಕೋಶಾಭಿಮಾನಿ ಅನಿರುದ್ಧಾದಿ ಪಂಚಭಗವದ್ರೂಪಗಳಿಂದ ಶ್ರೀ ಪರಮಾತ್ಮನು ಪರಮಮುಖ್ಯ ವೃತ್ತಿಯಿಂದ ನಿಯಾಮಕನಾಗಿದ್ದಾನೆ. ಇದರಿಂದ "ಉಪಕರಣಗಳು" ಎಂದು ಗ್ರಾಹ್ಯ.

ಅಲ್ಲದೆ ಭಗವತ್ಪೂಜಾಸಮಯದಲ್ಲಿ ಉಪಯೋಗಿಸುವ ಪೂಜಾ ಸಾಧನ ವಸ್ತುಗಳಾದ, ಪಂಚಪಾತ್ರೆ, ಉದ್ಧರಣೆ, ನೀಲಾಂಜನ, ಹಲಗಾರತಿ ಇತ್ಯಾದಿಗಳಿಗೆ "ಉಪಕರಣ"ಗಳೆಂದು ಹೆಸರು ಈ ಉಪಕರಣ ಸಾಂಕೇತ ವಾದ ವಸ್ತುಗಳಲ್ಲಿ ಶ್ರೀ ಹರಿಯು 52114 ರೂಪಗಳಿಂದ ವಿರಾಜಮಾನ ನಾಗಿದ್ದಾನೆ. ಆ ಅಕ್ಷರ ಸಾಂಕೇತವಿವರ ಇಂತಿದೆ :—

(೧) ಉ = ಸ್ವರಾಕ್ಷರ = ೪
(೨) ಪ = ಪವರ್ಗ ಪಂಚಕ = ೧
(೩) ಕ = ಕವರ್ಗ ಪಂಚಕ = ೧
(೪) ರ = ಅವರ್ಗೀಯ ವ್ಯಂಜನಾಕ್ಷರ = ೨
(೫) ಣ = ಟವರ್ಗ ಪಂಚಕ = ೫

ಅಲ್ಲಿಗೆ 41125 ಎಂದಾಗುವುದು. ವಾಮಾಂಕ ರೀತ್ಯಾ 52114 ರೂಪ ಗಳಾಗುವುವು. ಈ ಅಕ್ಷರ ಸಾಂಕೇತ ಸಂಖ್ಯೆಯನ್ನು ದಾಸರಾಯರು "ಐವತ್ತೆರಡು ಸಾವಿರದ ಹದಿನಾಲ್ಕಧಿಕ ಶತರೂಪಂಗಳನು" ಎಂದು ಹೇಳಿರು ತ್ತಾರೆ. ಅಂದರೆ, ಐವತ್ತೆರಡುಸಾವಿರ = 52,000

| | | |
|---|---|---|
| ಹದಿನಾಲ್ಕಧಿಕ | = | 14 |
| ಶತ | = | 100 |
| ಒಟ್ಟು | = | 52114 ರೂಪಗಳಾಯಿತು. |

ಇಂತು, ಇಂದ್ರಿಯಗಳಲ್ಲಿ, ಇಂದ್ರಿಯಾಭಿಮಾನಿ ದೇವತೆಗಳಲ್ಲಿ, ಪೂಜಾ ಸಾಧನವಸ್ತುಗಳಾದ ಉಪಕರಣಗಳಲ್ಲಿ 52114 ರೂಪಳಿಂದ ಆಯಾಯಾ ಉಪಕರಣಗಣ ರೂಪದಂತೆಯೇ. ಅವುಗಳ ಹೆಸರುಗಳಿಂದಲೇ ಕರೆಸುತ್ತಾ ತನ್ನಾಮಕನಾದ ಇದ್ದಾನೆಂದು ಜ್ಞಾನಪೂರ್ವಕ ತಿಳಿದು, ಅನುಸಂಧಾನ ಕ್ರಮ ದಿಂದ ಶ್ರೀ ಪರಮಾತ್ಮನನ್ನು ತದ್ರೂಪ ತನ್ನಾಮಕನೆಂದು ಪೂಜಿಸಬೇಕು. ಹೀಗೆ ಜ್ಞಾನಾನುಸಂಧಾನದಿಂದ ಅರಿತು. ಪೂಜಿಸುವವರ ಸೇವಾರೂಪವಾದ ಪೂಜೆ ಯನ್ನು ಶ್ರೀ ಹರಿಯು ಸ್ವೀಕರಿಸಿ, ಅನುಗ್ರಹಿಸುವನು. ಇದಕ್ಕೆ ಒಂದು ದೃಷ್ಟಾಂತವನ್ನು ದಾಸರಾಯರು ಕೊಡುತ್ತಾರೆ. ತುಂಬಾ ಬಾಯಾರಿಕೆ ಯಿಂದ ಬಳಲಿದವನು, ಅತ್ಯಂತ ಆತುರನಾಗಿ ನೀರನ್ನು ಪಾನಮಾಡುತ್ತಾನೆ. ಅದರಿಂದ ಅವನಿಗೆ ಬಾಯಾರಿಕೆಯು ಪರಿಹಾರವಾಗಿ, ಸಂತೋಷವುಂಟಾಗು ವುದು. ಅಂತೆಯೇ, ಶ್ರೀ ಪರಮಾತ್ಮನು ತೃಷಾರ್ಥನಾದವನು ಜಲ ಕೊಂಬಂತೆ, ನಿಜಭಕ್ತರ ಪೂಜೆಯನ್ನು ನಿರಂತರ ಕೈಗೊಂಬನು. ಆದರೆ ಶ್ರೀ ಪರಮಾತ್ಮನು ಸ್ವರಮಣನು. ಪರಾಪೇಕ್ಷರಹಿತನು. ಭಕ್ತವರ್ಗದವರ ಪೂಜೆ ಪುನಸ್ಕಾರಾದಿಗಳಿಂದ ಅವನಿಗೆ ಯಾವ ಪ್ರಯೋಜನವೂ ಇಲ್ಲ. ನಿರಪೇಕ್ಷನಾಗಿದ್ದರೂ, ಭಕ್ತರನ್ನು ಅನುಗ್ರಹಿಸಿ, ಉದ್ಧರಿಸುವುದಕ್ಕಾಗಿ, ಅವರಿಂದ ಪೂಜಾದಿಗಳನ್ನು ಸ್ವೀಕರಿಸುತ್ತಾನೆಯೇ ಹೊರತು. ಪ್ರಯೋಜನಾ ಪೇಕ್ಷೆ ಇಂದಲ್ಲ ಎಂದು ಈ ದೃಷ್ಟಾಂತದ ಮುಖ್ಯ ತಾತ್ಪರ್ಯ. ॥೬॥

# ಪದ್ಯ (೭)

**ಮೂಲ :—**

**ಬಿಂಬರೂಪನು ಈ ತೆರದಿ ಜಡ ।**
**ಪೊಂಬಸುರ ಮೊದಲಾದ ಸುರರೊಳ ।**
**ಗಿಂಬುಗೊಂಡಿಹನೆಂದರಿದು ಧರ್ಮಾರ್ಥ ಕಾಮಗಳ ॥**
**ಹಂಬಲಿಸದನುದಿನದಿ ವಿಶ್ವಕು ।**
**ಟುಂಬಿ ಕೊಟ್ಟ ಕಣಾನ್ನ ಕುತ್ಸಿತ ।**
**ಕಂಬಳಿಯೆ ಸೌಭಾಗ್ಯವೆಂದವನಂಘ್ರಿಗಳ ಭಜಿಸು ॥೭॥**

**ಅವತರಿಣಿಕೆ :—**

ಹೃದ್ಗುಹಾವಾಸಿಯಾದ ಬಿಂಬರೂಪೀ ಶ್ರೀ ಪರಮಾತ್ಮನು ಸಮಸ್ತ ಚೇತನಾಚೇತನ ಪ್ರತಿಮೆಗಳಲ್ಲಿಯೂ. ಬ್ರಹ್ಮಾದಿ ದೇವತೆಗಳಲ್ಲಿಯೂ, ತತ್ವಾಭಿಮಾನಿ ದೇವತಾವರ್ಗದವರಲ್ಲಿಯೂ ಗೋಳಕಾಂತರ್ಗತನಾಗಿ ಇದ್ದಾನೆ, ಎಂಬ ತತ್ತ್ವವನ್ನು ಜ್ಞಾನಮಾರ್ಗದಿಂದ ತಿಳಿದು, ಪ್ರಾಪಂಚಿಕವಾದ ಧರ್ಮ ಅರ್ಥ ಕಾಮಗಳನ್ನು ಅಪೇಕ್ಷಿಸದೇ, ನಿಷ್ಕಾಮ ಮನಸ್ಸಿನಿಂದ ಭಗವದ್ವಿಭೂತಿ ರೂಪಗಳನ್ನು ಚಿಂತಿಸುತ್ತಾ, ಸತ್ಯಸಂಕಲ್ಪನಾದ ಶ್ರೀಹರಿಯು ನಮಗೆ ಕೊಟ್ಟುದುದೇ ಪರಮ ಭಾಗ್ಯವೆಂಬ ಅನುಸಂಧಾನದಿಂದ, ಭಗವಂತನ ಪಾದಾರವಿಂದಗಳನ್ನು ಭಜಿಸುತ್ತಿರಬೇಕೆಂದು ದಿವ್ಯ ಸಂದೇಶಕೊಡುತ್ತಾರೆ. **“ಬಿಂಬರೂಪನು”** -ಎಂಬ ಪ್ರಸಕ್ತಸಂಧಿಗತ ೭ನೆಯ ಈ ಪದ್ಯದಿಂದ ॥೭॥

**ಪ್ರತಿಪದಾರ್ಥ :—**

**ಬಿಂಬರೂಪನು**=ಬಿಂಬರೂಪಿಯಾದ ಶ್ರೀ ಪರಮಾತ್ಮನು **ಈ ತೆರದಿ**=ಪೂರ್ವೋಕ್ತ ಪ್ರಕಾರ **ಜಡ**=ಜಡವಾದ ಅಚಲಪ್ರತಿಮಾಗಳಲ್ಲಿ

**ಪೊಂಬಸುರ** = ಬ್ರಹ್ಮದೇವರೇ (ಪೊನ್ನು = ಭಂಗಾರದ ಬಸುರ= ಗರ್ಭವುಳ್ಳ, ಅಂದರೆ "ಹಿರಣ್ಯಗರ್ಭ" ನಾಮಕರಾದ ಚತುರ್ಮುಖ ಬ್ರಹ್ಮದೇವರು) **ಮೊದಲಾದ** = ಮುಂತಾದ **ಸುರರೊಳಗೆ** = ತತ್ವಾಭಿಮಾನಿ ದೇವತೆಗಳಲ್ಲಿ **ಇಂಬುಗೊಂಡಿಹನೆಂದು** = ಸಹಜ ರೂಪಗಳಿಂದ ವ್ಯಾಪ್ತನಾಗಿರುವನೆಂತೆಂದು (ಇಂಬು = ಆಶ್ರಯ) **ಅರಿದು** = ಜ್ಞಾನಪೂರ್ವಕ ತಿಳಿದು **ಧರ್ಮ** = ಪ್ರಾಪಂಚಿಕ ಧರ್ಮಗಳನ್ನು **ಅರ್ಥ** = ಅಶಾಶ್ವತವಾದ ಸಂಪತ್ತನ್ನು **ಕಾಮಗಳ** = ಫಲಾಪೇಕ್ಷೆಯಿಂದ ಯುಕ್ತವಾದ ಇಷ್ಟಗಳನ್ನು **ಹಂಬಲಿಸದೆ** = ಅಪೇಕ್ಷಿಸದೆ **ಅನುದಿನದಿ** = ಪ್ರತಿದಿನದಲ್ಲಿಯೂ **ವಿಶ್ವಕುಟುಂಬಿ** = ಜಗತ್ಕುಟುಂಬಿಯಾದ (ಚರಾಚರ ಜಗತ್ತನ್ನೇ ತನ್ನ ಕುಟುಂಬವನ್ನಾಗಿ ಉಳ್ಳ) ಶ್ರೀ ಪರಮಾತ್ಮನು **ಕೊಟ್ಟ** = ಜೀವರ ಪೂರ್ವ ಕರ್ಮಾನುಸಾರವಾಗಿ ಅನುಗ್ರಹಿಸಿದ **ಕಣಾನ್ನ** = ಕದನ್ನ ವಸ್ತು (ನುಚ್ಚಿನ ಅನ್ನ) **ಕುತ್ಸಿತ ಕಂಬಳಿಯು** = ಅತ್ಯಲ್ಪವಾದ (ನಿಕೃಷ್ಟ) ಕಂಬಳಿಯನ್ನೇ (ದಾರಿದ್ರ್ಯ ಸೂಚಕ ವಸ್ತುಗಳು) **ಸೌಭಾಗ್ಯವೆಂದು** = ಮಹಾಭಾಗ್ಯವೆಂದು ತಿಳಿದು (ಮಹದೈಶ್ವರ್ಯವೆಂದು). **ಅವನ** = ಅಂತಹ ಬಿಂಬರೂಪೀ ಶ್ರೀರಮಾತ್ಮನ **ಅಂಘ್ರಿಗಳ** = ಪಾದದ್ವಯಗಳನ್ನು **ಭಜಿಸು** = ಸೇವಿಸುತ್ತ ಕೊಂಡಾಡುತ್ತಿರು ॥೭॥

## ವ್ಯಾಖ್ಯಾನಗಳು

### (೧) ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ :—

ಸ್ವದೇಹಾಂತರ್ಗತನಾದ ಶ್ರೀ ಬಿಂಬರೂಪೀ ಪರಮಾತ್ಮನು (ಬಿಂಬ ರೂಪನು) ಈ ಪೂರ್ವೋಕ್ತ ಪ್ರಕಾರ ರೂಪಗಳಿಂದ (ಈ ತೆರದಿ), ಜಡ ಪ್ರತಿಮಾದಲ್ಲಿ, (ಜಡ) ಚೇತನಾಪ್ರತಿಮಾದಲ್ಲಿ ಬ್ರಹ್ಮದೇವರೇ ಮೊದಲಾದ (ಪೊಂಬಸುರ ಮೊದಲಾದ) ತತ್ವಾಭಿಮಾನಿ ದೇವತೆಗಳಲ್ಲಿ (ಸುರರೊಳಗೆ) ಆಶ್ರಯಮಾಡಿಕೊಂಡಿದ್ದಾನೆ ಎಂದು, (ಚಲಾಚಲ ಅಧಿಷ್ಠಾನಗಳಲ್ಲಿ ದೇವತಾ

ಗೋಳಕಾಂತರ್ಗತನಾಗಿ ಇದ್ದಾನೆ ಎಂತ ತಾತ್ಪರ್ಯ) (ಇಂಬುಕೊಂಡಿಹನೆಂದು) ಅರಿತವನಾಗಿ, ಎಂದರೆ, ಅಧಿಭೂತ ಪರಿದೃಶ್ಯಮಾನ ಅಧಿಷ್ಠಾನ, ಅಧಿದೈವಾಂತರ್ಗತ ದೇವತೆಗಳು ಅಧ್ಯಾತ್ಮ ತದಂತರ್ಗತ ಶ್ರೀಪರಮಾತ್ಮನೆಂದು ತಿಳಿದು (ಅರಿದು), ಶ್ರೀಪರಮಾತ್ಮನ್ನ ಸ್ವದೇಹದಲ್ಲಿ ಪ್ರತಿಮಾದಲ್ಲಿ ಪೂಜಾ ಮಾಡತಾ, ಧರ್ಮಾರ್ಥಕಾಮಗಳ ಹಂಬಲಿಸದೆ, ಅಂದರೆ, ಧರ್ಮ ಲೋಕಸಂಬಂಧವಾದ, ಪ್ರಾಕೃತವಾದ ಸಕಾಮಧರ್ಮಗಳೂ, ಪ್ರಾಕೃತ ದ್ರವ್ಯಗಳ ಪ್ರಯೋಜನಗಳ (ಅರ್ಥ), ಫಲಾಪೇಕ್ಷೆ ಕಾಮಗಳ (ಕಾಮ) ಅಪೇಕ್ಷಿಸದೆ ಶ್ರೀಶಗೆ ಪ್ರೀತಿ ಪರವಾದ ಧರ್ಮಾರ್ಥ ಕಾಮಗಳೇನು, ಹಾಂಗೆ ಮೋಕ್ಷ ಎಂದರೆ, ಅಜ್ಞಾನ ಪರಿಹಾರಪೂರ್ವಕ ಶ್ರೀ ದೇವರ ಅಪರೋಕ್ಷಾಖ್ಯ ಮೋಕ್ಷವನ್ನು ಹಂಬಲಿಸುತ್ತ, ಪ್ರತಿದಿನದಲ್ಲಿ (ಅನುದಿನದಿ) ಚರಾಚರ ಜಗತ್ತನ್ನೇ ಸಂಸಾರವಾಗಿ ಉಳ್ಳ ಶ್ರೀ ಪರಮಾತ್ಮ (ವಿಶ್ವಕುಟುಂಬಿ) ಪೂರ್ವ ಕರ್ಮಾನುಸಾರ ಕೊಡಲ್ಪಟ್ಟ (ಕೊಟ್ಟ), ನುಚ್ಚಿನ ಅನ್ನವೇನು (ಕಣಾನ್ನ) ಹರಕು ಕಂಬಳಿಯು (ಕುತ್ಸಿತ ಕಂಬಳಿಯು) ಇಂಥಾದ್ದಾರಿದ್ರ್ಯವನ್ನು ಕೊಟ್ಟ ಕಾಲಕ್ಕೂ, ಇವುಗಳೇನೇ ಅತಿಶಯವಾದ ಐಶ್ವರ್ಯವೆಂದು ತಿಳಿದವನಾಗಿ. ಸಕಾಮುಕನಾಗದೆ. ನಿಷ್ಕಾಮುಕದಿಂದ (ಸೌಭಾಗ್ಯವೆಂದು), ಹೃದಯಾಕಾಶ ಗತ ಬಿಂಬರೂಪೀ ಪರಮಾತ್ಮನ ಅಪರೋಕ್ಷ ಕಾಮನಾ ಮಾಡಿ, ಅವನ ಪಾದ ದ್ವಯಗಳ (ಅವನಂಘ್ರಿಗಳ) ಏಕಾದಶೇಂದ್ರಿಯಗಳಿಂದ ಸೇವಾ ಮಾಡುವವ ನಾಗು ಎಂತ ತಾತ್ಪರ್ಯ (ಭಜಿಸು).

ಹೃದಯಾಂತರ್ಗತ ಬಿಂಬರೂಪೀ ಪರಮಾತ್ಮನು ಚೇತನಾಚೇತನ ಪ್ರತಿಮೆಗಳಲ್ಲಿಯೂ, ಬ್ರಹ್ಮಾದಿ ದೇವತೆಗಳಲ್ಲಿಯೂ, ತತ್ವಾಭಿಮಾನಿ ದೇವತೆಗಳಲ್ಲಿಯೂ ಚಲಾಚಲ ಅಧಿಷ್ಠಾನ ದೇವತಾಗೋಳಕಾಂತರ್ಗತನಾಗಿ, ಪೂರ್ವೋಕ್ತ ಪ್ರಕಾರ ಸಮಸ್ತ ಪ್ರಪಂಚದಲ್ಲಿ ಅನೇಕ ಸಂಖ್ಯಾಕವಾದ ಭಗ ವದ್ರೂಪಗಳನ್ನ ಧರಿಸಿ, ಆಶ್ರಯಮಾಡಿಕೊಂಡು ಇರುತಾನೆ ಎಂತ ಚಿಂತಿ ಸುತ್ತಾ, ಪ್ರಾಕೃತವಾದ ಧರ್ಮಾರ್ಥಕಾಮಗಳನ್ನು ಅಪೇಕ್ಷಿಸದೇ, ನಿಷ್ಕಾ ಮುಕನಾಗಿ, ಪ್ರಾಚೀನ ಕರ್ಮಾನುಸಾರ ಎಂಥಾ ದಾರಿದ್ರ್ಯವನ್ನು ಕೊಟ್ಟಾಗ್ಯೂ ಅದೇ ಸೌಭಾಗ್ಯವೆಂದು ತಿಳಿದು, ಹೃದಯಾಕಾಶಗತ ಶ್ರೀ ಬಿಂಬರೂಪೀ

ಪರಮಾತ್ಮನ ಅಪರೋಕ್ಷ ಕಾಮನಾಮಾಡಿ, ಏಕಾದಶೇಂದ್ರಿಯಗಳಿಂದ ಅವನ ಪಾದದ್ವಯಗಳ ಸೇವಾ ಮಾಡುವವನಾಗು.

**ವಿಶೇಷಾರ್ಥ :—**

ಅಮುಕ್ತದಶಾದಲ್ಲಿ ನುಚ್ಚನ್ನಸದೃಶವಾದ ಖಂಡಜ್ಞಾನವೂ, ಛಿದ್ರ ಕಂಬಳಿಗೆ ಸದೃಶವಾದ ಛಿದ್ರ ಭಕುತಿಯೂ ಕೊಡತಾನೆ. ಅಖಂಡಜ್ಞಾನ, ಅಖಂಡಭಕ್ತಿ ಕೊಡೋದಿಲ್ಲ. ಇಂಥಾ ಜ್ಞಾನ ಭಕುತಿಗಳೇ ಸೌಭಾಗ್ಯ ಸಾಂಕೇತ ವಾದ ಸ್ವರೂಪಾನಂದಭೋಗಕ್ಕೆ ಕಾರಣವಾದ ಅತಿಶಯ ಭಾಗ್ಯವೆಂದು ಶ್ರೀ ಪರಮಾತ್ಮನ್ನ ಭಜಿಸಬೇಕು ಎಂತ ತಾತ್ಪರ್ಯ ॥೭॥

**(೨) "ಭಾವಪ್ರಕಾಶಿಕೆ" ವ್ಯಾಖ್ಯಾನ : -**

ಬಿಂಬರೂಪಿಯಾದ ಶ್ರೀ ಪರಮಾತ್ಮನು ಮೇಲಿನ ಪದ್ಯದಲ್ಲಿ ಹೇಳಿದಂತೆ ಚಲಾಚಲ ಪ್ರತಿಮೆಗಳಲ್ಲಿ ಆಹಿತ ಸಹಜಾತಿ ವಿಭೂತಿಯಿಂದಲೂ, ಬ್ರಹ್ಮಾದಿ ಗಳಲ್ಲಿ ಸಹಜವಾದ ವಿಭೂತಿಯಿಂದಲೂ, ಇರುವನೆಂದು ಚಿಂತಿಸಿ. ಧರ್ಮಾರ್ಥ ಕಾಮಗಳನ್ನು ಬೇಡದೆ, ನಿಷ್ಕಾಮದಿಂದ ನಿತ್ಯದಲ್ಲಿಯೂ ಭಜಿಸುತ್ತ, ವಿಶ್ವಕುಟುಂಬಿಯಾದ ಪರಮಾತ್ಮನು ಕೊಟ್ಟ ಕದನ್ನವನ್ನಾದರೂ, ಬಹಳ ಕುತ್ಸಿತವಾದ ಕಂಬಳಿಯನ್ನಾದರೂ ತೆಗೆದುಕೊಂಡು, ಅಸಂತುಷ್ಟ ನಾಗದೇ, ಇವೇ ಮಹಾಭಾಗ್ಯವೆಂದೆಣಿಸಿ, ಎಡಬಿಡದೆ ಪರಮಾತ್ಮನ ಪಾದಾ ರವಿಂದಗಳನ್ನು ಸೇವಿಸು. ಇದೇ ನಿನಗೆ ಮುಕ್ತಿಗೆ ಸಾಧನವು ॥೭॥

**(೩) "ಭಾವದರ್ಪಣಟೀಕಾ" ವ್ಯಾಖ್ಯಾನ :—**

ಎಂಥಾ ತಾಪತ್ರಯಃ ಬಂದು ಪೀಡಿಸಿದ್ದಾಗ್ಯೂ, ಗಾಬರಿಯಾಗಿ ಏನೂ ಅಪೇಕ್ಷಿಸದೆ, ನಿಷ್ಕಾಮೋಪಸನೆ ಮಾಡೆಂದು ಹೇಳುತ್ತಾರೆ- **"ಬಿಂಬೇತಿ"**

ಇಂಬು = ಸ್ಥಳ ಪೊಂಬಸರು = ಹಿರಣ್ಯಗರ್ಭ ವಿಶ್ವಕುಟುಂಬಿ = ಜಗತ್ತೇ ಕುಟುಂಬವಾಗಿ ಉಳ್ಳವ ಕಣಾನ್ನ = ನುಚ್ಚಿನ ಅನ್ನ.

**"ತೇನ ತ್ಯಕ್ತೇನ ಭುಂಜೀಥಾಃ ಮಾಗೃಧಃ ಕಸ್ಯಾಚಿದ್ಧನಮಿತಿ" ಶ್ರುತೇಃ ॥ ॥೭॥**

## (೪) ಜಮುಖಂಡಿ ವಾದಿರಾಜಾಚಾರ್ಯರ ವ್ಯಾಖ್ಯಾನ :— (ಸಂಸ್ಕೃತಮೂಲ)

"ಬಿಂಬ" ಇತಿ ॥ ತೆರ = ರೀತಿಃ ॥ ಪೊಂಬಸರು = ಹಿರಣ್ಯಗರ್ಭಃ ॥ ಇಂಬು = ಸ್ಥಲ ॥ ಹಂಬಲಿಸದೆ = ಇಚ್ಛಿಸದೆ ॥ ಕಣಾನ್ನೇತಿ-ದೇವ್ರೋಪ ಸಾದಿತಂ ಯಾವತೇ ಇತಿ ಉಕ್ತ್ವಾ ಪರಿತುಷ್ಯೇತ್ತತಸ್ತಾತ ತಾವನ್ಮಾತ್ರೇಣ ಪೂರುಷಃ ॥ ಇತಿ ಧ್ರುವಂಪ್ರತಿ ನಾರದೋಕ್ತೇಃ ॥೭॥

**ಕನ್ನಡಾರ್ಥ :—**

ತೆರ = ಪ್ರಕಾರವಾಗಿ ಪೊಂಬಸರ = ಹಿರಣ್ಯಗರ್ಭನಾಮಕರಾದ ಚತುರ್ಮುಖ ಬ್ರಹ್ಮದೇವರು. ಇಂಬು = ಜಾಗ ಹಂಬಲಿಸದೆ = ಅಪೇಕ್ಷಿಸದೆ "ಕಣಾನ್ನ" ಎಂದರೆ-ಭಾಗವತ ಚತುರ್ಥಸ್ಕಂಧದಲ್ಲಿ ನಾರದರಿಂದ ಧ್ರುವನಿಗೆ ಉಪದೇಶವಾಕ್ಯ, "ಭಗವದ್ವ್ಯಾಪಾರಗಳನ್ನು ಅರಿತು, ಅವನ ಸಂಕಲ್ಪಾನು ಸಾರ ಏನು ಒದಗುವುದೋ ಅವನ್ನೇ ಮಹಾಭಾಗ್ಯವೆಂದೆಣಿಸಿ, ಪ್ರಾಜ್ಞರು ಆನಂದಿಸಬೇಕು". ಜೀವನದಲ್ಲಿ ಎಂಥಾ ದುಃಸ್ಥಿತಿಯೋ ಒದಗಲೀ, ಅದು ತನ್ನ ಕರ್ಮಾನುಸಾರವಾಗಿ ಬಂದುದೆಂದು ತಿಳಿದು, ಅದು ಭಗವದಿಚ್ಛೆ ಎಂಬ ಅನುಸಂಧಾನದಿಂದ, ಅನುಭೋಗಿಸಿ, ಸಂತುಷ್ಟನಾಗಿರಬೇಕು-" ಎಂದು ತಾತ್ಪರ್ಯ ॥೭॥

## (೫) "ಗುರು ಹೃದಯ ಪ್ರಕಾಶಿಕಾ" ವ್ಯಾಖ್ಯಾನ :—

ಬಿಂಬರೂಪಿ ಶ್ರೀಹರಿ, ಈ ತರದಿ, ಎಂದರೆ, ಹಿಂದೆ ಮೇಲೆ ಹೇಳಿದಂತೆ ಜಡಪದಾರ್ಥದಲ್ಲೂ, ಪೊಂಬಸುರ-ಎಂದರೆ, ಹಿರಣ್ಯ ಗರ್ಭನೆಂಬ ಬ್ರಹ್ಮ ಮೊದಲಾದ ದೇವತೆಗಳಲ್ಲೂ, ಇಂಬುಗೊಂಡಿಹ, ಎಂದರೆ,

ವಿಸ್ತಾರ ವ್ಯಾಪಿಸಿರುವನು ಎಂದು ತಿಳಿದು, ಧರ್ಮವೆಂಬ ಪುಣ್ಯವನ್ನು, ಅರ್ಥವೆಂಬ ಧನಾದಿಗಳನ್ನು, ಕಾಮವೆಂಬ ಭೋಗ್ಯ ವಿಷಯಗಳನ್ನೂ ಹಂಬಲಿಸದೆ, ಎಂದರೆ ಬಯಸದೆ, ಜಗತ್ಪೋಷಕ ದೇವರು ಕೊಟ್ಟ ಕುತ್ಸಿತ, (ನಿಕೃಷ್ಟ) ನುಚ್ಚನ್ನವನ್ನು ಮತ್ತು ಕಂಬಳಿಯನ್ನು ವಿಭವವೆಂದು ತಿಳಿದು, ಆ ಸ್ವಾಮಿಯ ಚರಣವನ್ನು ಸೇವಿಸು ॥೭॥

# ಸರ್ವವ್ಯಾಖ್ಯಾನಸಾರಸಂಗ್ರಹ

ಸಕಲ ಚೇತನರ ಹೃದ್ಗುಹಾನಿವಾಸಿಯಾಗಿ ಶ್ರೀ ಪರಮಾತ್ಮನು ಬಿಂಬ ರೂಪದಿಂದ್ದಾನೆ. ಬಿಂಬರೂಪನಾದ ಶ್ರೀ ಹರಿಗೆ ಸಕಲ ಜೀವರೂ ಪ್ರತಿಬಿಂಬ ಸದೃಶರು. ಪ್ರತಿಬಿಂಬವು ಬಿಂಬಾಧೀನವಾದದ್ದು. ಅಂತೆಯೇ, ಸಮಸ್ತ ಚೇತನರ ಅಧಿಷ್ಠಾನಗಳಲ್ಲಿ ನಡೆಯುತ್ತಿರುವ ದೈಹಿಕ, ವಾಚನಿಕ, ಮಾನಸಿಕ ಇತ್ಯಾದಿ ಸಮಸ್ತ ವ್ಯಾಪಾರ ವಿಶೇಷಗಳೂ ಬಿಂಬರೂಪೀ ಪರಮಾತ್ಮನಿಂದ ಪ್ರೇರಿತವಾಗಿ ನಡೆಯುತ್ತಿರುವುವು. ಬಿಂಬನು ಮುಖ್ಯಪ್ರೇರಕನು. ಪ್ರತಿಬಿಂಬ ಭೂತರಾದ ಚೇತನರು ಪರಾಧೀನ ಕರ್ತೃತ್ವವನ್ನು ಹೊಂದಿದ್ದು, ಪ್ರೇರ್ಯರಾಗಿದ್ದಾರೆ.

ಇಂತು, ಸಕಲ ಚೇಷ್ಟಾಪ್ರೇರಕನಾದ ಬಿಂಬರೂಪೀ ಶ್ರೀಪರಮಾತ್ಮನು ಜಡ, ಅಂದರೆ ಅಚಲ ಪ್ರತಿಮಾ ಗೋಳಕದಲ್ಲಿ ವ್ಯಾಪ್ತನಾಗಿ ಭಗವದ್ವಿಭೂತಿರೂಪಗಳಿಂದ ವಿದ್ಯಮಾನನಾಗಿದ್ದಾನೆ. ಭಗವಂತನ ವಿಭೂತಿರೂಪ ವಿಶೇಷದಿಂದಲೇ ಪ್ರತಿಮಾದಿಗಳಲ್ಲಿ ಭಗವತ್ಸಾನ್ನಿಧ್ಯವುಂಟಾಗುವುದು. ತತ್ತ್ವನ್ಯಾಸ– ಮಾತೃಕಾನ್ಯಾಸ ಪದ್ಧತಿಗಳಿಂದ ಪ್ರತಿಮಾಗಳಲ್ಲಿ ಬಿಂಬಾವಹನೆಗೈದು ಪೂಜೆ ಮಾಡುವರು.

ಅಂತೆಯೇ, ಬಿಂಬರೂಪೀ ಶ್ರೀಹರಿಯು ಚತುರ್ಮುಖ ಬ್ರಹ್ಮದೇವರೇ ಮೊದಲಾದ ತತ್ವಾಭಿಮಾನಿ ದೇವತೆಗಳಲ್ಲಿಯೂ,ಸಮಸ್ತದೇವತಾಗಣದಲ್ಲಿಯೂ

ಅಂತರ್ಯಾಮಿತ್ವೇನ ಇದ್ದು, ಅವರಿಂದ ಸಂಸೇವ್ಯಮಾನನಾಗಿದ್ದಾನೆ. ಆದಿಮೂಲನಾದ ಶ್ರೀಮನ್ನಾರಾಯಣನು ಕ್ಷೀರಸಮುದ್ರದಲ್ಲಿ ಪದ್ಮನಾಭನಾಗಿ ಪವಡಿಸಿದಾಗ, ಅವನ "ನಾಭಿ" ಪ್ರದೇಶದಿಂದ ಕಮಲವು ಉತ್ಪನ್ನವಾಯಿತು. ಆ ಪದ್ಮವು ಅಪ್ರಾಕೃತಗುಣ ವಿಶಿಷ್ಟವಾಗಿದ್ದು, ಹದಿನಾಲ್ಕು ದಳಗಳಿಂದ ಯುಕ್ತವಾದದ್ದು. ಇಂತಹ ಚತುರ್ದಶದಳಾತ್ಮಕವಾದ ಕಮಲವು ಸುವರ್ಣಮಯವಾಗಿ ತೇಜೋಯುಕ್ತವಾದದ್ದು. ಇಂತಹ ಸುವರ್ಣಮಯವಾದ ಪದ್ಮದಲ್ಲಿ ಚತುರ್ಮುಖ ಬ್ರಹ್ಮದೇವರು ಉತ್ಪನ್ನರಾದರು. ಕಾರಣದಿಂದಲೇ ಬ್ರಹ್ಮದೇವರನ್ನು "ಹಿರಣ್ಯಗರ್ಭ" ನೆಂದು ಕರೆಯುವರು ಇದನ್ನೇ ದಾಸರಾಯರು "ಪೊಂಬಸುರ" ಎಂದು ಹೇಳಿರುತ್ತಾರೆ ಅಂದರೆ ಪೊನ್ನು = ಹೊನ್ನು (ಭಂಗಾರ ಅಥವಾ ಸುವರ್ಣ), ಬಸುರ = ಗರ್ಭ ಎಂದರ್ಥ. ಬ್ರಹ್ಮಾಂಡವೇ ಬ್ರಹ್ಮದೇವರ ಶರೀರವು. ಕಮಲವು ಹದಿನಾಲ್ಕು ದಳಗಳಿಂದ ಯುಕ್ತವಾಗಿರುವುದರಿಂದ, ಚತುರ್ದಶ ಭುವನಾತ್ಮಕವಾದ ಬ್ರಹ್ಮಾಂಡವು ಅದರ ಸಾಂಕೇತವು.

ಇಂತು, ಬಿಂಬರೂಪಿಯಾದ ಶ್ರೀ ಪರಮಾತ್ಮನು ತನ್ನ ಪ್ರಥಮಾಂಗಭೂತರಾದ, ಜ್ಯೇಷ್ಠಪುತ್ರರಾದ ಬ್ರಹ್ಮದೇವರಲ್ಲಿ "ಅಜ" ನಾಮಕನಾಗಿದ್ದು ಸೃಷ್ಟ್ಯಾದಿ ವ್ಯಾಪಾರಗಳನ್ನು ಮಾಡುವನು. ಅಂತೆಯೇ, ಚತುರ್ವಿಂಶತಿ ತತ್ವಗಳಿಗೆ ಅಧಿಪತಿಗಳಾದ ತತ್ವೇಶರಾದ ದೇವತೆಗಳಲ್ಲಿ ಬಿಂಬರೂಪದಿಂದಿದ್ದು, ತತ್ವಕಾರ್ಯಗಳನ್ನು ಮಾಡಿ ಮಾಡಿಸುತ್ತಿರುವನು, ಸಕಲ ದೇವತೆಗಳಲ್ಲಿಯೂ ವ್ಯಾಪ್ತರೂಪದಿಂದಿದ್ದು, ನಿಯಾಮಕನಾಗಿರುವನು. "ಇಂಬು" ಎಂದರೆ "ಸ್ಥಳ" ಎಂದರ್ಥ. ಇದೇ ಆಶ್ರಯವು, ಸಕಲ ಚೇತನಾಚೇತನಾತ್ಮಕವಾದ ಜಗತ್ತಿಗೆ ಶ್ರೀ ಪರಮಾತ್ಮನೇ ಮುಖ್ಯ ಆಶ್ರಯನು. ಇಂತು, ಬಿಂಬರೂಪೀ ಭಗವಂತನು ಸ್ಥಾವರ ಜಂಗಮಾತ್ಮಕವಾದ ಈ ಬ್ರಹ್ಮಾಂಡದಲ್ಲಿ ಒಳಗೂ ಹೊರಗೂ ಸರ್ವತ್ರ ಓತಪ್ರೋತನಾಗಿ ವ್ಯಾಪಿಸಿಕೊಂಡಿದ್ದಾನೆಂದು, ಜ್ಞಾನಾನುಸಂಧಾನಪೂರ್ವಕ ತಿಳಿಯಬೇಕು. ಧರ್ಮ, ಅರ್ಥ ಕಾಮ ಮತ್ತು ಮೋಕ್ಷಗಳೆಂಬ ನಾಲ್ಕು ವಿಧವಾದ ಅಪೇಕ್ಷಿತ ವಸ್ತುಗಳೇ "ಚತುರ್ವಿಧ

ಪರಮ ಪುರುಷಾರ್ಥಗಳು". ಇವುಗಳು ನಮ್ಮ ಸಾಧನಮಾರ್ಗಕ್ಕೆ ಸಹಕಾರಿಯಾಗಿರಬೇಕೇ ಹೊರತು, ಬಂಧಕವಾಗಬಾರದು. ಧರ್ಮಾಚರಣೆಯಿಂದ ಪುಣ್ಯಫಲಪ್ರಾಪ್ತಿ, ಅರ್ಥ, ಅಂದರೆ ಐಶ್ವರ್ಯ (ಹಣ) ದಿಂದ ಪ್ರಾಪಂಚಿಕ ವಿಷಯಭೋಗಗಳು, ಕಾಮ, ಅಂದರೆ ನಮಗೆ ಬೇಕಾದ ಇಷ್ಟಾರ್ಥಗಳು. ಇವು ಭಗವತ್ಪರವಾಗಿರಬೇಕು. ಕೇವಲ ವೈಷಯಿಕ ಸುಖೋಪ ಭೋಗಗಳಿಗೆ ಸಹಕಾರಿಯಾಗಿರಬಾರದು. ಆಗ ನಮ್ಮ ಮನಸ್ಸೆಲ್ಲವೂ ಐಹಿಕ ಸುಖಗಳ ಕಡೆಗೆ ವಾಲಿ, ಶ್ರೀ ಪರಮಾತ್ಮನ ಅತ್ಯರ್ಥ ಪ್ರಸಾದರೂಪವಾದ ಭಗವದನುಗ್ರಹ ದಿಂದ ದೂರರಾಗುತ್ತೇವೆ. ಈ ಕಾರಣದಿಂದಲೇ ದಾಸರಾಯರು "ಧರ್ಮಾರ್ಥ ಕಾಮಗಳ ಹಂಬಲಿಸದೆ" ಎಂದು ಎಚ್ಚರಿಕೆಯ ಮಾತನ್ನಾಡಿದ್ದಾರೆ. ಸಮಗ್ರ ಜಗತ್ತಿಗೇ ಶ್ರೀಹರಿಯೇ ಈಶನು. ಅಂದರೆ ಪರಮ ಮುಖ್ಯ ವೃತ್ತಿಯಿಂದ ನಿಯಾಮಕನು. ಸಮಸ್ತ ಚೇತನವರ್ಗ ಹಾಗೂ ಜಡವರ್ಗ ಅವನ ಅಧೀನ ದಲ್ಲಿವೆ. ಇಂತು ಜಗತ್ಪ್ರಭುವಾದ ಜಗನ್ನಿಯಾಮಕನೇ "ವಿಶ್ವಕುಟುಬಿ"ಯು. ಸಕಲ ಚೇತನರ ಯೋಗಕ್ಷೇಮಚಿಂತನೆ ವವಡುತ್ತಿರುವ ಪರಮಾಪ್ತ ಬಂಧುವಾದ ಆ ವಿಶ್ವಕುಟುಂಬಿಯು ಏನಿತ್ತುದೇ ಅದೇ ಪರಮಪುರುಷಾರ್ಥ. ಚೇತನರ ಪೂರ್ವಕರ್ಮಫಲಾನುಸಾರವಾಗಿ ಕೊಟ್ಟ, ಕದನ್ನ, ಅಂದರೆ ನುಚ್ಚಿನ ಅನ್ನ (ಗಂಜಿ ಅಂಬಲಿಯಾಗಲೀ) ಅಥವಾ ಹೊದೆಯಲು ಕೊಟ್ಟ ಹರಕು ಕಂಬಳಿಯೋ ಆಗಲಿ (ಕುತ್ಸಿತ ಕಂಬಳಿ), ಅವುಗಳನ್ನೇ ನಮ್ಮ ಪಾಲಿಗೆ ಬಂದ ಪರಮ ಸೌಭಾಗ್ಯವೆಂದು ಭಾವಿಸುತ್ತಾ, "ನಿನ್ನ ಚಿತ್ತವೇ ಎನ್ನ ಭಾಗ್ಯ" ವೆಂಬ ಉತ್ತಮಾನುಸಂಧಾನದಿಂದ ಶ್ರೀಪರಮಾತ್ಮನ ಪಾದಯುಗ್ಮಗಳನ್ನು ಅನವರತವೂ ಭಕ್ತ್ಯುದ್ರೇಕದಿಂದ ಮನಸ್ಸಿನಲ್ಲಿ ಧ್ಯಾನಿಸುತ್ತಾ, ಸೇವಿಸುತ್ತಿರುವುದೇ ಸಾಧನಜೀವಿಯಾದವನಿಗೆ ಪರಮಶ್ರೇಯಸ್ಕರವೆಂದು ದಾಸವರ್ಯರ ಹೃದ್ಗತಾಭಿಪ್ರಾಯವು ॥೭॥

# ಪದ್ಯ (೮)

**ಮೂಲ :—**

**ವಾರಿಯೊಳಗಿಪ್ಪತ್ತನಾಲಕು ।**
**ಮೂರೆರಡು ಸಾವಿರದಮೇಲ್ಮು ।**
**ನ್ನೂರ ಹದಿನೇಳೆನಿಪ ರೂಪವು ಶ್ರೀ ತುಳಸಿ ದಳದಿ ॥**
**ನೂರ ಅರವತ್ತೊಂದು ಪುಷ್ಪದಿ ।**
**ಮೂರಧಿಕ ದಶ ದೀಪದೊಳು ನಾ ।**
**ನೂರು ಮೂರು ಸುಮೂರ್ತಿಗಳು ಗಂಧದೊಳಗಿರುತಿಹವು ॥೮॥**

**ಅವತರಣಿಕೆ :—**

ಶ್ರೀ ಪರಮಾತ್ಮನ ನಿತ್ಯಪೂಜೆಗೆ ಸಾಧನಸಾಮಗ್ರಿಗಳಾದ ಶುದ್ಧೋದಕ, ಶ್ರೀತುಳಸಿ. ಪರಿಮಳಯುಕ್ತ ಪುಷ್ಪಗಳು, ದೇವರಿಗೆ ಹಚ್ಚುವ ದೀಪ ಇವುಗಳಲ್ಲಿ ಭಗವದ್ರೂಪಗಳ ವಿವರ ತಿಳಿಸುತ್ತಾರೆ. ನೀರಿನಲ್ಲಿ ೨೪ ರೂಪಗಳಿಂದಲೂ, ಒಂದೊಂದು ಶ್ರೀ ತುಳಸೀದಳದಲ್ಲಿ ೫೩೧೭ ರೂಪಗಳಿಂದಲೂ, ಪುಷ್ಪದಲ್ಲಿ ೧೬೧ ರೂಪಗಳಿಂದಲೂ ಮತ್ತು ದೀಪದಲ್ಲಿ ೧೩ ರೂಪಗಳಿಂದಲೂ ಮತ್ತು ದಿವ್ಯ ಗಂಧದಲ್ಲಿ ೪೦೩ ರೂಪಗಳಿಂದಲೂ ಇರುತ್ತಾನೆಂದು ಚಿಂತಿಸಬೇಕೆಂದು ಹೇಳುತ್ತಾರೆ.-**"ವಾರಿಯೊಳು"**-ಎಂಬ ಪ್ರಸಕ್ತ ಸಂಧಿಗತ ೮ನೆಯ ಈ ಪದ್ಯದಿಂದ ॥೮॥

**ಪ್ರತಿಪದಾರ್ಥ :—**

**ವಾರಿಯೊಳಗೆ**=ಅಭಿಷೇಕಮಾತಕ್ಕ ನೀರಿನಲ್ಲಿ **ಇಪ್ಪತ್ತುನಾಲಕು**= "ವಾರಿ" ಎಂಬುವ ಪದಕ್ಕೆ ಆಗುವ ಅಕ್ಷರಸಾಂಕೇತವಾದ 24ರೂಪಗಳಂದ

(ವಾ–4, ರಿ=2 ಬಲದಿಂದ ಎಡಕ್ಕೆ 24ರೂಪಗಳು) **ಶ್ರೀ ತುಲಸಿದಳದಿ**= ರಮಾಸನ್ನಿಧಾನಯುಕ್ತವಾದ ಒಂದೊಂದು ತುಲಸೀ ದಳದಲ್ಲಿ **ನೂರೆರಡು ಸಾವಿರದ**= ಐದು ಸಾವಿರದ (ಮೂರು+ಎರಡು=ಐದು) **ಮೇಲೆ ಮುನ್ನೂರೆ ಹದಿನೇಳೆನಿಪ**= ಅದರ ಮೇಲೆ 317 ಸಂಖ್ಯಾಕವಾದ, ಅಂದರೆ, 5000+317=5317 **ರೂಪವು**= ಈ ಸಂಖ್ಯಾಕವಾದ ರೂಪಗಳಿಂದ, ಹೇಗೆಂದರೆ, ಶ್ರೀ=ಶ+ರ 5+2=7, ತು=1, ಲ=3, ಶೀ=5, ಅಲ್ಲಿಗೆ 7135 ಆಯಿತು. ವಾಮಾಂಕ ಗತಿಯಿಂದ 5317 ರೂಪಗಳಾಗುವುವು. **ಪುಷ್ಪದಿ**= ಭಗವತ್ಪೂಜಾರ್ಹವಾದ ಪರಿಮಳಯುಕ್ತ ಹೂವುಗಳಲ್ಲಿ **ನೂರ ಅರವತ್ತೊಂದು**= 161 ರೂಪಗಳಿಂದ (ಪು=1, ಷ್ಪ=ಷ—6, ಪ=1, ವಾಮಾಂಕರೀತ್ಯಾ 161 ರೂಪಗಳಾಯಿತು) **ದೀಪದೊಳು**= ದೇವರ ದೀಪದಲ್ಲಿ **ಮೂರಧಿಕದಶ**=3+10=13 ರೂಪಗಳಿಂದ (ದೀ=3 ಮತ್ತು ಪ=1, ವಾಮಾಂಕ ಗತಿಯಿಂದ 13 ರೂಪಗಳು) **ಗಂಧದೊಳಗೆ**= ದೇವರಿಗೆ ಅರ್ಪಿಸುವ ಗಂಧದ ಉಂಡೆಯಲ್ಲಿ **ನಾನೂರು ಮೂರು** =403 ಸಂಖ್ಯಾತವಾದ (ಗಂ=30, ಧ=೪, ವಾಮಾಂಕರೀತ್ಯಾ 403 ಆಗುವುದು) **ಸುಮೂರ್ತಿಗಳು**= ಸಮೀಚೀನವಾದ, ಪರಮ ಮಂಗಳಕರವಾದ ಭಗವದ್ವಿಭೂತಿರೂಪಗಳು **ಇರುತಿಹವು**= ವಿರಾಜಮಾನವಾಗಿವೆ. ॥೮॥

# ವ್ಯಾಖ್ಯಾನಗಳು

## (೧) ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ:—

ಬಾಹ್ಯ ಜಡಪ್ರತಿಮಾ, ಹೃದಯಾಕಾಶಗತ ಮಾನಸ ಪೂಜಾ ಪ್ರತಿಮಾ ಈ ಉಭಯ ಪ್ರತಿಮಾಗಳ ಪೂಜಾ ಮಾಡತಕ್ಕ ಪೂಜಾಸಾಧನ ದ್ರವ್ಯಗತ ಭಗವದ್ರೂಪಗಳ **ಹೇಳತಾರೆ.**

ಅಭಿಷೇಕ ಮಾಡತಕ್ಕ ಉದಕದೊಳಗೆ (ವಾರಿಯೊಳಗೆ), "ವಾರಿ" ಎನ ತಕ್ಕ ಅಕ್ಷರಕ್ಕೆ ಆಗತಕ್ಕ ಭಗವದ್ರೂಪಗಳು = 24, ವಾ = 4, ರಿ = 2. ಬಲದಿಂದ ಎಡಕ್ಕೆ 24 ರೂಪಗಳು = (ಲೆಕ್ಕಮಾಡತಕ್ಕ ಕ್ರಮು), ಮೂರು ಸಾವಿರದ, (3000) ಎರಡುಸಾವಿರದಮೇಲೆ (2000), ಅಂತು, ಐದು ಸಾವಿರದಮೇಲೆ (5000) ಮುನ್ನೂರಹದಿನೇಳು (317), ಅಂತು, 5317 ಎನತಕ್ಕ ಶ್ರೀ ಪರಮಾತ್ಮನ ರೂಪಗಳು ರಮಾಸನ್ನಿಧಾನಯುಕ್ತವಾದ ಒಂದೊಂದು ಶ್ರೀ ತುಳಸೀದಳದಲ್ಲಿ ಪೂರ್ವೋಕ್ತ 5317 ಭಗವದ್ರೂಪಗಳು ಆಗತವೆ. ನೂರ ಅರವತ್ತೊಂದು (161) ಭಗವದ್ರೂಪಗಳು, ಭಗ ವತ್ಪೂಜಾರ್ಹವಾದ ಹುವ್ವುಗಳೊಳಗೆ (ಪುಷ್ಪದಿ) (ಪು = 1, ಷ = 6, ಪ = 1 = 161 ರೂಪಗಳು) ದೇವರ ದೀಪದೊಳಗೆ (ದೀಪದೊಳು), ದಶ ಮೂರಧಿಕ ಅಂದರೆ ಹದಿಮೂರು ಎಂತರ್ಥ (13), ಪ್ರತಿಯೊಂದು ಗಂಧದ ಉಂಡೆಯಲ್ಲಿ (ಗಂಧದೊಳು) ನಾನೂರು ಮೂರು ರೂಪಗಳು (ಗಂ = 30, ಧ = 4. ಬಲದಿಂದ ಎಡಕ್ಕೆ 403 ರೂಪಗಳು) ಪೂರ್ವೋಕ್ತ ಭಗವನ್ಮೂರ್ತಿ ಗಳು (ಮೂರ್ತಿಗಳು) ಇರೋದಾಗಿ ಅದೆಯೆಂದು, (ಇರುತಿಹವು) ಸಮೀ ಚೀನವಾದ ಅನುಸಂಧಾನದಿಂದ ತಿಳಿದು ಅರ್ಚಿಸಬೇಕು ಎಂತ ತಾತ್ಪರ್ಯ.

ಇಷ್ಟುರೂಪಗಳು ತಿಳಿಯೋಣದರಿಂದ ಏನು ಪ್ರಯೋಜನವೆಂದರೆ:— ಪ್ರತಿಮಾಂತರ್ಗತ ಪರಮಾತ್ಮನಿಗೆ ಪೂಜಾದ್ರವ್ಯಾಂತರ್ಗತ ಪರಮಾತ್ಮನಿಗೆ ಪರಸ್ಪರ ಐಕ್ಯಚಿಂತನಾರೂಪದಿಂದ ಪೂಜಾ ಮಾಡಬೇಕು. ಇದೇವೇ ಸುಪೂಜಾ ಹೀಂಗೆ ಅನುಸಂಧಾನಪೂರ್ವಕ ಪೂಜಾಮಾಡಿದರೆ. ಸ್ವಾಮಿ ತನ್ನ ಸ್ವಾಖ್ಯ ವನ್ನು ಸ್ವೀಕಾರಮಾಡತಾನೆ. ತದನ್ಯವಾದದ್ದು ಸ್ವೀಕಾರ ಮಾಡೋಲ್ಲ. ಇದೇ ಪ್ರಕಾರ ನಿವೇದನ ದ್ರವ್ಯಗಳಲ್ಲಿಯೂ ತದಂತರ್ಗತ ಪರಮಾತ್ಮನ ರೂಪ ಗಳಿಗೂ ಪ್ರತಿಮಾಂತರ್ಗತ ಪರಮಾತ್ಮನಿಗೂ ಐಕ್ಯ ಚಿಂತನಮಾಡಿ, ಸಮರ್ಪಿಸಿ ದರೆ ಹೊರ್ತು, ಅನುಸಂಧಾನವಿಲ್ಲದೇ ನೈವೇದ್ಯತೋರಿಸುವುದು ಉಪಯೋಗ ವಿಲ್ಲ ಎಂತ ತಾತ್ಪರ್ಯ ॥೮॥

## (೨) "ಭಾವ ಪ್ರಕಾಶಿಕೆ" ವ್ಯಾಖ್ಯಾನ :—

ಪೂಜಾಸಾಮಗ್ರಿಗಳಲ್ಲಿರುವ ಅಖಂಡವಾದ ಭಗವದ್ರೂಪಗಳನ್ನು 6ನೆಯ ಪದ್ಯದಲ್ಲಿ ಹೇಳಿದರು. ಈ ಪದ್ಯದಿಂದ ಯಾವಯಾವ ದ್ರವ್ಯದಲ್ಲಿ ಎಷ್ಟೆಷ್ಟು ರೂಪದಿಂದಿದ್ದಾನೆಂದು ಹೇಳುತ್ತಾರೆ :—

ಉದಕದಲ್ಲಿ, "ವಾರಿ" ಶಬ್ದದ ಅಕ್ಷರ ಸಂಖ್ಯಾಕ್ರಮದಿಂದ, ವಾ=4, ರಿ=2, ಬಲದಿಂದ ಎಣಿಸಿದರೆ, 24 ಆದವು. ಇಷ್ಟು ರೂಪಗಳು ವಾರಿಯಲ್ಲಿರುವುವು. "ಶ್ರೀತುಳಸೀ" ಯ ಸಂಖ್ಯಾಕ್ಷರಕ್ರಮ ;— ಶ್ರೀ= ಶ=5+ರೀ=2=7, ತು=1, ಲ=3, ಶಿ=5. ಅಂತು 5317 ಆದವು. ಪುಷ್ಪದಲ್ಲಿ, ಪು=1, ಷ=6, ಪ=1. ಅಂತು 161. ದೀಪದೊಳಗೆ, ದೀ=3. ಪ=1, ಅಂತು 13, ಗಂಧದೊಳಗೆ, ಗ= 3, 0=0, ಧ=4, ಅಂತು, 403 ರೂಪಗಳು ಇರುವವೆಂದು ಚಿಂತಿಸಬೇಕು. ||೮||

## (೩) "ಭಾವದರ್ಪಣ ಟೀಕಾ"-ವ್ಯಾಖ್ಯಾನ :—

ಪದಾರ್ಥಗತ ಭಗವದ್ರೂಪಗಳ ಚಿಂತನಾಪೂರ್ವಕ ಉಪಾಸನಾ ಮಾಡೆಂದು ತಿಳಿಸಿಕೊಡುತ್ತಾರೆ- "ವಾರೀತಿ"

**ಉಕ್ತಂಚ ಗುರುವೃತ್ತೌ :—**

**"ಚತುರ್ವಿಂಶ ಸ್ವರೂಪಾಣಿ ಜಲಧ್ಯೆ ಸ್ಥಿತಾನಿ ಚ ।**
**ಶೃಣು ಪಂಚಸಹಸ್ರೈಶ್ಚ ತ್ರಿಶತೈಶ್ಚೈಕಷೋಡಶೈಃ ।**
**ತುಲಸೀಗತ ರೂಪಾಣಿ ಜ್ಞೇಯಾನಿ ವಿಬುಧೈಸ್ಸದಾ ।**
**ಸುಮನೋಗುಣ ಮಧ್ಯಸ್ಥೋ ಏಕಷಷ್ಠ್ಯಧಿಕೈಃ ಶತೈಃ ॥**
**ತ್ರಯೋದಶ ಸ್ವರೂಪೈಸ್ತು ಜ್ಯೋತಿರ್ದೀಪಗತೋಹ್ಯಭೂತ್ ।**
**ಗಂಧಭೋ ಗಂಧಗೋಪ್ಯಾಸೀತ್ರ್ಯಧಿ ಕೈಶ್ಚ ಚತುಶತೈರಿತಿ ॥" ||೮||**

## (೪) ವಾದಿರಾಜಾಚಾರ್ಯರ ವ್ಯಾಖ್ಯಾನ (ಸಂಸ್ಕೃತಮೂಲ) :—

"ವಾರಿ" ಇತಿ ॥ ಚತುರ್ವಿಂಶತ್ಯುದೇ ಪಂಚಸಹಸ್ರಂ ತ್ರಿಶತಂದಶ ॥ ತ್ಯುತ್ತರಂ ಬಾಷ್ಪಜಾತಾಯಾಂ ಪುಷ್ಪೇಷಷ್ಟ್ಯೇತಮೀಶತುಃ ॥ಇತಿ॥ ತ್ರಯೋ ದಶ ಸುದೀಪಸ್ಥಂ ಗಂಧೇವೈಹಿ ಚತುಃಶತಮ್ ॥ ಇತಿ ಚ ॥ ಪಂಚರಾತ್ರೇಚ ಚತುರ್ವಿಂಶತಿ ರೂಪಾಣಿ ಜಲೇ ಭಗವತೋ ಹರೇಃ ॥ ಕಂಸಾರೇಃ ॥ ಪಂಚಸಾಹಸ್ರಂ ತಥೈವ ತ್ರಿಶತೋತ್ತರಮ್ ॥ ರೂಪಾಣಾಂ ಸಪ್ತದಶಕಂ ಏಕಸ್ಮಿನ್ ತುಲಸೀದಲೇ ॥ ಏಕಷಷ್ಟ್ಯುತ್ತರ ಶತಂ ರೂಪಣಾಂ ಪರಮಾತ್ಮನಃ॥ ಪುಷ್ಪೇಷು ಚಿಂತನೀಯಂ ಸ್ಯಾತ್ ಮಹಾ ಶಾಸ್ತ್ರಾರ್ಥವಿತ್ತಮೈಃ ॥ ದೀಪೇ ತ್ರಯೋದಶ ಜ್ಞೇಯಂ ರಮಾನಾಥಸ್ಯವೈ ಹರೇಃ ॥ ಗಂಧೇ ಭಗವತೋ ರೂಪುತ್ರ್ಯುತ್ತರಂ ಚ ಚತುಃ ಶತಮ್ ॥ ಇತಿ **ಪ್ರಕಾಶಸಂಹಿತಾಯಾಮ್** ॥೮॥

**ಕನ್ನಡಾರ್ಥ :—**

ನೀರಿನಲ್ಲಿ ೨೪ ರೂಪಗಳು, ಒಂದೊಂದು ತುಲಸಿ ದಳದಲ್ಲಿ ೫೩೧೭ ರೂಪಗಳು, ಕುಸುಮದಲ್ಲಿ ೧೬೧ ರೂಪಗಳು, ದೀಪದಲ್ಲಿ ೧೩ ರೂಪಗಳು. ಗಂಧದಲ್ಲಿ ೪೦೩ ರೂಪಗಳು. ಈ ಭಗವದ್ರೂಪಗಳ ವಿವರಗಳು **ಪಂಚರಾತ್ರದಲ್ಲಿಯೂ ಮತ್ತು ಪ್ರಕಾಶಸಂಹಿತೆಯಲ್ಲಿಯೂ** ಉಕ್ತವಾಗಿವೆ. ॥೮॥

## (೫) "ಗುರುಹೃದಯ ಪ್ರಕಾಶಿಕೆ" ವ್ಯಾಖ್ಯಾನ :—

ಪೂಜಾಸಾಧನಗತ ರೂಪಗಳನ್ನು ವಿವರಿಸುತ್ತಾರೆ :—
ಅಕ್ಷರಾಂಕರೀತ್ಯಾ, **ವಾರಿ** ಎಂದು ಉದಕದಲ್ಲಿ ೨೪ ರೂಪಗಳು ರಿ–೨, ವಾ–೪) **ಶ್ರೀತುಲಸಿ** ಯಲ್ಲಿ 5317 ರೂಪಗಳು (ಶಿ—5, ಲ–3, ತು—1, ಶ್ರೀ–7) **ಪುಷ್ಪದಲ್ಲಿ** 161 ರೂಪಗಗು (ಪ-1, ಷ—6, ಪು—1) **ದೀಪದಲ್ಲಿ** 13 ರೂಪಗಳು (ಪ—1, ದೀ–3) **ಗಂಧದಲ್ಲಿ** 403 ರೂಪಗಳು (ಧ–4, ಗಂ–03) ಈ ರೀತಿ ಪರಿಗಣನೆ ॥೮॥

# ಸರ್ವವ್ಯಾಖ್ಯಾನಸಾರಸಂಗ್ರಹ

ಭಗವತ್ಪೂಜಾಕಾಲದಲ್ಲಿ ಉಪಯೋಗಿಸತಕ್ಕ ಉದಕ, ಶ್ರೀತುಳಸೀ, ಹೂವುಗಳು, ದೀಪ, ಗಂಧ ಇತ್ಯಾದಿ ಪೂಜಾಸಾಧನ ವಸ್ತುಗಳಲ್ಲಿ ಇರತಕ್ಕ ಭಗದ್ವಿಭೂತಿಗಳ ಸಂಖ್ಯೆಗಳನ್ನು ಆಯಾಯಾ ಪೂಜೋಪಕರಣಗಳ ಹೆಸರಿನಿಂದಲೇ ವಾಚ್ಯನಾಗಿರುವ ಶ್ರೀಹರಿಯು ಅಕ್ಷರಸಾಂಕೇತ ರೂಪಗಳಿಂದ ಚಿಂತಿಸಬೇಕು.

(೧) ದೇವರ ಅಭಿಷೇಕಕ್ಕೆ ಶುದ್ಧವಾದ ಹಾಗೂ ಶೋಧಿತವಾದ ಹರಿಯುತ್ತಿರುವ ನದಿಯ ನೀರು. ಬಾವಿಯ ನೀರು, ತಟಾಕಾದಿಗಳ ನೀರು ಇದನ್ನೇ ಉಪಯೋಗಿಸಬೇಕು. ಅಂತಹ ಉದಕದಲ್ಲಿ "ವಾರಿ" ಶಬ್ಧ ವಾಚ್ಯನಾಗಿ ಶ್ರೀ ಪರಮಾತ್ಮನನ್ನು 24 ಅಕ್ಷರ ಸಾಂಕೇತವಾದ ರೂಪಗಳಿಂದ ಚಿಂತಿಸಬೇಕು. ಅದರ ವಿವರ ಇಂತಿದೆ :—

(೧) ವಾ = ಅವರ್ಗೀಯ ವ್ಯಂಜನಾಕ್ಷರ ಸ್ಥಾನ = ೪

(೨) ರಿ = ಅವರ್ಗೀಯ ವ್ಯಂಜನಾಕ್ಷರ-ಸ್ಥಾನ = ೨

ವಾಮಾಂಕಗತಿಯಿಂದ ೨೪ ರೂಪಗಳಾಗುವುವು.

(೨) ಶ್ರೀ ತುಲಸಿಯು ಭಗವತ್ಪೂಜೆಗೆ ಅತ್ಯಗತ್ಯ. ತುಳಸಿ ಇಲ್ಲದ ಪೂಜೆಯನ್ನು ಶ್ರೀಹರಿಯು ಎಂದೆಂದಿಗೂ ಸ್ವೀಕರಿಸುವುದಿಲ್ಲ. ನಿತ್ಯ ರಮಾಸನ್ನಿಧಾನ ಯುಕ್ತವಾದ **ಶ್ರೀತುಲಸಿ** ಯಲ್ಲಿ ಅದೇ ಶಬ್ದವಾಚ್ಯನಾಗಿ ಶ್ರೀ ಪರಮಾತ್ಮನು 5817 ರೂಪಗಳಿಂದ ವಿರಾಜಮಾನನಾಗಿದ್ದಾನೆ. ಅದರ ಅಕ್ಷರಸಾಂಕೇತ ರೂಪಗಳ ವಿವರ ಹೀಗಿದೆ :—

(1) ಶ್ರೀ = ಶ + ರ (ಸಂಯುಕ್ತಾಕ್ಷರ) = 5 + 2 = 7 (ಎರಡೂ ಅವರ್ಗೀಯ ವ್ಯಂಜನಾಕ್ಷರಗಳು)

(2) ತು = ತವರ್ಗಪಂಚಕ-ಸ್ಥಾನ = 1

(3) ಲ = ಅವರ್ಗೀಯ ವ್ಯಂಜನಾಕ್ಷರ–ಸ್ಥಾನ = 3

(4) ಶಿ = ಅವರ್ಗೀಯ ವ್ಯಂಜನಾಕ್ಷರ–ಸ್ಥಾನ = 5

ಅಲ್ಲಿಗೆ ಅಕ್ಷರಸ್ಥಾನ ಸಂಖ್ಯಾಗತಿಯಿಂದ 7135 ಆಗುವುದು. ವಾಮಾಂಕಗತಿಯಿಂದ 5317ರೂಪಗಳಾಗುವುವು. ಈ ಸಂಖ್ಯೆಯನ್ನು ದಾಸರಾಯರು– "ಮೂರೆರಡುಸಾವಿರದ ಮೇಲೆ ಮುನ್ನೂರ ಹದಿನೇಳು" ಎಂದಿದ್ದಾರೆ.

| | |
|---|---|
| ಅಂದರೆ ಮೂರೆರಡು ಸಾವಿರ | = 3 + 2 = 5000 |
| ಮೇಲೆ ಮುನ್ನೂರ ಹದಿನೇಳು | = 0317 |
| ಒಟ್ಟು | = 5317 |

ಅಲ್ಲಿಗೆ ಶ್ರೀತುಲಸೀಗತ ಭಗವದ್ರೂಪಗಳ ಸಂಖ್ಯೆ = ಐದುಸಾವಿರದ ಮುನ್ನೂರ ಹದಿನೇಳು ಎಂದಾಗುವುದು.

(3) ಪೂಜಾರ್ಹವಾದ, ಪರಿಮಳಯುಕ್ತವಾದ ಹೂವುಗಳಲ್ಲಿ ಭಗವಂತನು "ಪುಷ್ಪ" ವಾಚ್ಯನಾಗಿ, 161 ರೂಪಗಳಿಂದ ಇದ್ದಾನೆ ಎಂದು ಉಪಾಸಿಸಬೇಕು.

ಆ ಅಕ್ಷರ ಸಂಖ್ಯಾವಿವರ ಇಂತಿದೆ :–

(1) ಪು = ಪ–ವರ್ಗಪಂಚಕ– ಸ್ಥಾನ = 1

(2) ಷ = ಅವರ್ಗೀಯ ವ್ಯಂಜನಾಕ್ಷರ–ಸ್ಥಾನ = 6

(3) ಪ = ಪ–ವರ್ಗ ಪಂಚಕ- ಸ್ಥಾನ = 1

(ಇಲ್ಲಿ ಪುಷ್ಪ = ಪು + ಷ + ಪ ಎಂದು ಪ್ರತ್ಯೇಕವಾಗಿ ಪರಿಗಣಿಸಬೇಕು.) ವಾಮಾಂಕಗಣನೆಯಿಂದ ಪುಷ್ಪಗತ ಭಗವದ್ರೂಪಗಳ ಸಂಖ್ಯೆ = 161 ಆಗುವುದು. ಇದನ್ನು "ನೂರಅರವತೊಂದು ಪುಷ್ಪದಿ" ಎಂದು ಹೇಳಿದ್ದಾರೆ.

(೪) ದೇವರಿಗೆ ಹಚ್ಚುವ ದೀಪ, ಆರತಿ ಮುಂತಾದ ಜ್ಯೋತಿಗಳಲ್ಲಿ ಶ್ರೀ ಪರಮಾತ್ಮನು **"ದೀಪ"** ಶಬ್ದವಾಚ್ಯನಾಗಿ, 13 ರೂಪಗಳಿಂದ ಇದ್ದಾನೆ ಎಂದು ಧ್ಯಾನಿಸಬೇಕು.

ಆ ಅಕ್ಷರಸಂಖ್ಯಾ ವಿವರ ಹೀಗಿದೆ :—

(1) ದೀ = ತ-ವರ್ಗಪಂಚಕ-ಸ್ಥಾನ = 3

(2) ಪ = ಪ-ವರ್ಗಪಂಚಕ-ಸ್ಥಾನ = 1

ವಾಮಾಂಕರೀತ್ಯಾ, 13 ರೂಪಗಳಿಂದ ದೀಪದಲ್ಲಿ ಇದ್ದಾನೆ. ಇದನ್ನು "ಮೂರಧಿಕ ದಶ ದೀಪದೊಳು" ಎಂದಿದ್ದಾರೆ. ಅಂದರೆ ಹತ್ತರ ಮೇಲೆ ಮೂರು, **ಹದಿಮೂರು** ಅಕ್ಷರ ಸಾಂಕೇತ ರೂಪಗಳು.

(5) ದಿವ್ಯಗಂಧವನ್ನು ದೇವರಿಗೆ ಅರ್ಪಿಸುತ್ತೇವೆ. ಆದರಲ್ಲಿ **"ಗಂಧ"** ಶಬ್ದವಾಚ್ಯನಾಗಿ ಶ್ರೀಪರಮಾತ್ಮನು 403 ಭಗವದ್ರೂಪಗಳಿಂದ ಸ್ಥಿತನಾಗಿದ್ದಾನೆ.

ಗಂಧಗತ ಅಕ್ಷರಸಾಂಕೇತ ಭಗವದ್ರೂಪಗಳ ಸಂಖ್ಯಾವಿವರ ಇಂತಿದೆ :-

(1) ಗ = ಕವರ್ಗ ಪಂಚಕ-ಸ್ಥಾನ = 3

(2) 0 = ಅನುಸ್ವಾರ = 0

(3) ಧ = ತವರ್ಗ ಪಂಚಕ-ಸ್ಥಾನ = 4

ವಾಮಾಂಕಗತಿಯಿಂದ ಗಂಧದಲ್ಲಿ 403 ಸಮೀಚೀನವಾದ ಭಗವನ್ಮೂರ್ತಿಗಳನ್ನು ಚಿಂತಿಸಿ, ಗಂಧವನ್ನು ಅರ್ಪಿಸಬೇಕು.

ಪೂರ್ವೋಕ್ತ ಪೂಜಾದ್ರವ್ಯಗತ ಭಗವದ್ರೂಪಗಳ ಪಕ್ಷಿನೋಟವು ಈ ಕೆಳಗಿನ ಪಟ್ಟಿಯಲ್ಲಿದೆ.

| ಕ್ರಮ ಸಂಖ್ಯೆ | ದ್ರವ್ಯಗಳು | ಅಕ್ಷರಕ್ರಮ | ಸ್ಥಾನ | ಸಂಖ್ಯಾ | ವಾಮಾಂಕ ಗತಿಯಿಂದ ಭಗವದ್ರೂಪ ಸಂಖ್ಯಾ |
|---|---|---|---|---|---|
| ೧ | ವಾರಿಯಲ್ಲಿ | ವಾ<br>ರಿ | ೪<br>೨ | ೪೨ | ೨೪ |
| ೨ | ಶ್ರೀತುಲಸಿಯಲ್ಲಿ | ಶ್ರೀ = ಶ + ರ<br>= ೫ + ೨<br>ತು<br>ಲ<br>ಸಿ | ೭<br>೧<br>೩<br>೫ | ೭೧೩೫ | ೫೩೧೭ |
| ೩ | ಪುಷ್ಪದಲ್ಲಿ | ಪು<br>ಷ<br>ಪ | ೧<br>೬<br>೧ | ೧೬೧ | ೧೬೧ |
| ೪ | ದೀಪದಲ್ಲಿ | ದೀ<br>ಪ | ೩<br>೧ | ೩೧ | ೧೩ |
| ೫ | ಗಂಧದಲ್ಲಿ | ಗ<br>ಂ<br>ಧ | ೩<br>೦<br>೪ | ೩೦೪ | ೪೦೩ |

**ವಿಶೇಷ ವಿಚಾರ :—**

"ಪುಷ್ಪ"–ಎಂಬ ಪದದಲ್ಲಿ "ಷ್ಪ" ಎಂಬುದು ಸಂಯುಕ್ತಾಕ್ಷರ. ಆದರೆ "ಷ" ವರ್ಣವು ಅವರ್ಗೀಯ ವ್ಯಂಜನಾಕ್ಷರವು. "ಪ" ವರ್ಣವು ಪವರ್ಗ

ಪಂಚಕದ ವರ್ಗೀಯ ವ್ಯಂಜನಾಕ್ಷರವು. ಇವು ಬೇರೆ ವರ್ಗಗಳಿಗೆ ಸೇರಿವೆ. ಇದರಿಂದ "ಷ್ಟ" ಎಂಬುದು ಸಂಯುಕ್ತಾಕ್ಷರವಾದರೂ, "ಷ" ಮತ್ತು "ಟ" ಎಂದು ಪ್ರತ್ಯೇಕವಾಗಿ ಪರಿಗಣಿಸಬೇಕು. ಇದು ಜ್ಯೋತಿಶ್ಯಾಸ್ತ್ರದ ನಿಯಮವು ॥೮॥

## ಪದ್ಯ (೯)

**ಮೂಲ :—**

ಅಷ್ಟದಳ ಸದ್ಹೃದಯ ಕಮಲಾ ।
ಧಿಷ್ಠಿತನು ತಾನಾಗಿ ಸರ್ವೋ ।
ತ್ಕೃಷ್ಟಮಹಿಮನು ದಳಗಳಲಿ ಸಂಚರಿಸುತೊಳಗಿದ್ದು ॥
ದುಷ್ಟರಿಗೆ ದುರ್ಬುದ್ಧಿ ಕರ್ಮ ವಿ ।
ಶಿಷ್ಟರಿಗೆ ಸುಜ್ಞಾನ ಧರ್ಮ ಸಂ ।
ಪುಷ್ಟಿಗೈಸುತ ಸಂತೈಪ ನಿರ್ದುಷ್ಟ ಸುಖಪೂರ್ಣ॥ ॥೯॥

**ಅವತರಣಿಕೆ :—**

ಹೃದಯಾಕಾಶಗತ ಅಷ್ಟದಳಯುಕ್ತನಾದ ಹೃತ್ಕಮಲದಲ್ಲಿ ಕರುಣಾ ಪೂರ್ಣನಾದ ಶ್ರೀ ಪರಮಾತ್ಮನು ಅಧಿಷ್ಠಿತನಾಗಿದ್ದು. ಪದ್ಮಗತ ಅಷ್ಟದಳ ಗಳಲ್ಲಿ ಸಂಚರಿಸುತ್ತಾ, ತಮೋಯೋಗ್ಯರಾದ ದುಷ್ಟ ಚೇತನರಿಗೆ ಪಾಪಕಾರ್ಯ ಗಳಲ್ಲಿ ನಿರತರಾಗುವಂತೆ ದುರ್ಬುದ್ಧಿಯನ್ನೂ,ಭಗವದರ್ಪಣ ಚಿತ್ತವೃತ್ತಿಯಿಂದ ಸತ್ಕರ್ಮಾನುಷ್ಟ ಜೀವರಿಗೆ ಸಮೀಚೀನವಾದ ಜ್ಞಾನವನ್ನೂ, ಧರ್ಮ ವೃದ್ಧಿಯನ್ನು ಉಂಟುಮಾಡಿ, ಅಂತಹ ಸುಜನರನ್ನು ಸದಾ ಸಂತೈಪ. ದೋಷ ದೂರನಾದ ಜ್ಞಾನನಂದ ಪರಿಪೂರ್ಣನಾದ ಆ ವಾತ್ಸಲ್ಯಮಯಿಯಾದ

ಪರಮಾತ್ಮನೆಂದು- "ಅಷ್ಟದಳ" -ಎಂಬ ಪ್ರಸಕ್ತಸಂಧಿಗತ ೯ನೆಯ ಈ ಪದ್ಯದಿಂದ ॥೯॥

**ಪ್ರತಿಪದಾರ್ಥ :—**

**ಸರ್ವೋತ್ಕೃಷ್ಟಮಹಿಮನು—** **ಸರ್ವ** = ರಮಾಬ್ರಹ್ಮಾದಿಗಳ ಮಹಿಮಾಕ್ಕಿಂತಲೂ **ಉತ್ಕೃಷ್ಟ** = ಅತಿಶಯವಾದ **ಮಹಿಮನು** = ಮಹಿಮೋಪೇತನಾದ ಮೂಲೇಶನಾಮಕ ಶ್ರೀ ಪರಮಾತ್ಮನು **ಸತ್** = ನಿರ್ದುಷ್ಟವಾದ (ಸಮೀಚೀನವಾದ) **ಹೃದಯ** = ಮನೋಇಂದ್ರಿಯಕ್ಕೆ ಗೋಳಕವಾದ ಹೃದಯಸ್ಥಾನದಲ್ಲಿ ಇರುವ **ಕಮಲ** = ಪದ್ಮದಲ್ಲಿ, ಅಂದರೆ ಹೃದ್ಪತ್ಮದಲ್ಲಿ **ಅಧಿಷ್ಠಿತನು** = ಮೂಲೇಶನಾಮಕ ಪರಮಾತ್ಮನು ಆವಾಸವಾಗಿದ್ದಾನೆ. **ತಾನಾಗಿ** = ಸ್ವಯಂ ಇರತಕ್ಕವನಾಗಿ **ದಳಗಳಲಿ** = ಪೂರ್ವೋಕ್ತ ಹೃತ್ಕಮಲಗತ ಅಷ್ಟದಳಗಲ್ಲಿ **ಸಂಚರಿಸುತ** = ಸಂಚಾರ ಮಾಡುತ್ತಾ (ಕ್ರಿಯಾವಿಶಿಷ್ಟನಾಗಿ) **ಒಳಗಿದ್ದು** = ತ್ರಿವಿಧ ಜೀವರ ಸ್ಥೂಲ ದೇಹಗತ ಹೃತ್ಪದ್ಮದಲ್ಲಿ ಇದ್ದವನಾಗಿ **ದುಷ್ಟರಿಗೆ** = ಮಿಥ್ಯಾಜ್ಞಾನ, ಮಿಶ್ರಜ್ಞಾನ ಸ್ವರೂಪಸ್ವಭಾವವುಳ್ಳ ಅಯೋಗ್ಯರಿಗೆ **ದುರ್ಬುದ್ಧಿ** = ಶ್ರೀ ಪರಮಾತ್ಮನಲ್ಲಿ ಹಾಗೂ ಅವನ ಭಕ್ತರಲ್ಲಿ ದ್ವೇಷಮಾಡುವ ಕೆಟ್ಟ ಬುದ್ಧಿಯನ್ನೂ **ಕರ್ಮ** = ಜಗತ್ತು ಸತ್ಯವೆಂದೂ, ಪಂಚಬೇಧ ತಾರತಮ್ಯ ಯುಕ್ತವಾಗಿದೆ ಎಂಬ ಮನೋ ವ್ಯಾಪಾರಗಳನ್ನುಳ್ಳ **ವಿಶಿಷ್ಟರಿಗೆ** = ಸತ್ಕರ್ಮಾನುಷ್ಠರಾದ ಮುಕ್ತಿ ಯೋಗ್ಯ ಸಚ್ಚೇತನರಿಗೆ **ಸುಜ್ಞಾನ** = ಸಮೀಚೀನವಾದ ಪಂಚಬೇಧ ತಾರತಮ್ಯ ಜ್ಞಾನವನ್ನು **ಧರ್ಮ** = ಅವರವರ ಸ್ವರೂಪ ಯೋಗ್ಯತಾನುಸಾರವಾದ ಧರ್ಮ ಬುದ್ಧಿಯನ್ನು **ಪುಷ್ಟಿಗೈಸುತ** = ಚೆನ್ನಾಗಿ ವೃದ್ಧಿಗೊಳಿಸಿ, ಪೂರ್ಣ ಮಾಡುತ್ತಾ **ಸಂತೈಪ** = ಮನಃಶಾಂತಿಪ್ರದನಾಗಿ ಸಂರಕ್ಷಣೆ ಮಾಡುತ್ತಾನೆ. **ನಿರ್ದುಷ್ಟ** = ನಿರ್ದೋಷಿಯಾದ **ಸುಖಪೂರ್ಣ** = ಪೂರ್ಣಾನಂದ ಜ್ಞಾನರೂಪಿಯಾದ ಶ್ರೀ ಪರಮಾತ್ಮನು ॥೬॥

# ವ್ಯಾಖ್ಯಾನಗಳು

## (೧) ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ :—

ನಿರ್ದುಷ್ಟನಾದ (ಸತ್), ರಮಾಬ್ರಹ್ಮಾದಿಗಳ ಮಹಿಮಾಕ್ಕಿಂತಲೂ ಅತಿಶಯವಾದ (ಸರ್ವೋತ್ಕೃಷ್ಟ), ಮಹಿಮೋಪೇತನಾದ ಮೂಲೇಶನಾಮಕ ಶ್ರೀ ಪರಮಾತ್ಮನು (ಮಹಿಮಃನು), ಮನೋಇಂದ್ರಿಯಕ್ಕೆ ಗೋಳಕವಾದ ಹೃದಯಃ ಅಂತಹ ಹೃದಯಗೋಳಕದಲ್ಲಿ ಇರುವ (ಹೃದಯ)ಎಂಟುದಳಗಳಿಂದ ಯುಕ್ತವಾದ (ಅಷ್ಟದಳ) ಪದ್ಮ (ಕಮಲ) ಇರೋದಾಗಿ ಅದೆ. ಈ ಕಮಲ ದಲ್ಲಿ ಮೂಲೇಶನಾಮಕ ಪರಮಾತ್ಮ ಆವಾಸನಾಗಿ ಇದ್ದಾನೆ (ಅಧಿಷ್ಠಿತನು). ಈ ಮೂಲೇಶ ಕಮಲ ಕರ್ಣಿಕಾಮೂಲಭಾಗದಲ್ಲಿ ಆವಾಸನಾಗಿ ಇರತಕ್ಕವ ನಾದ್ದರಿಂದ "ಮೂಲೇಶ" ಎಂತ ನಾಮ. ಅಂಗುಷ್ಠಾಗ್ರಪರಿಮಿತನಾದವ. ಅಷ್ಟಬಾಹುಯುಕ್ತನಾದವ. ಇವ "ನಾರಾಯಣ" ಎಂತ ಕರೆಸತಾನೆ. ಈ ಮೂಲೇಶನ ಪಾದಮೂಲದಲ್ಲಿ ಅನಿರುದ್ಧದೇಹದಿಂದ ಸಹಿತನಾದ ಜೀವ. ಈ ಪ್ರಕಾರ ಪರಸ್ಪರ ಪರಂಪರಾ ಸಂಬಂಧದಿಂದ ಅವಿಚ್ಛಿನ್ನರಾಗಿದ್ದಾರೆ. ಇಂಥಾ ಮೂಲೇಶ ವಿಮಾನಾರೂಢನಾಗಿ, ತಾನೇ ತ್ರಿವಿಧಜೀವರ ಸ್ಥೂಲ ದೇಹದ ಒಳಗೆ ಇದ್ದು (ತಾನಾಗಿ ಒಳಗಿದ್ದು), ಪೂರ್ವೋಕ್ತ ಕಮಲದಳಗಳಲ್ಲಿ ಪ್ರದಕ್ಷಿಣಾಕಾರದಿಂದ ಜೀವನಿಂದ ಸಹಿತನಾಗಿ ಸಂಚಾರ ಮಾಡತಾ (ದಳಗಳಲಿ ಸಂಚರಿಸುತ), ಮಿಥ್ಯಾಜ್ಞಾನ, ಮಿಶ್ರಜ್ಞಾನ ಸ್ವರೂಪ ಸ್ವಭಾವವುಳ್ಳ ಭಗವದ್ವೇಷಿಗಳಾದ ದುರ್ಮಾರ್ಗರಿಗೆ (ದುಷ್ಟರಿಗೆ), ಶ್ರೀ ಪರಮಾತ್ಮನಲ್ಲಿ ತದ್ಭಕ್ತರಲ್ಲಿ ದ್ವೇಷಾದಿಗಳು ಮಾಡತಕ್ಕ ದುರ್ಬುದ್ಧಿಗಳನ್ನು (ದುರ್ಬುದ್ಧಿ) ವ್ಯಾಪಾರವು (ಕರ್ಮ) ತಾರತಮ್ಯ ಪಂಚಭೇದಗಳು ಸತ್ಯವೆಂದು ಸ್ವರೂಪ ಸ್ವಭಾವದಲ್ಲಿ ಮನೋವ್ಯಾಪಾರವುಳ್ಳ, ವಿಶೇಷಾಕಾರವಾಗಿ ನಿಷ್ಠರಾದ ಮುಕ್ತಿಯೋಗ್ಯರಿಗೆ (ವಿಶಿಷ್ಟರಿಗೆ), ಸತ್ಯವಾದ ಸ್ವರೂಪವನ್ನ ಅನುಸರಿಸಿದ, ಯೋಗ್ಯವಾದ ತಾರತಮ್ಯ ಪಂಚಭೇದಜ್ಞಾನ ಇವುಗಳನ್ನು ಕೊಟ್ಟು (ಸುಜ್ಞಾನ) ಅವರವರ ಸ್ವರೂಪಾನುಸಾರ ಅವರವರಿಗೆ ಯೋಗ್ಯಗಳಾದ ಧರ್ಮಗಳನ್ನು

(ಧರ್ಮ), ಛಂದಾಗಿ ಬಲಮಾಡತಾ, ಅದರಿಂದ ಅವರವರ ಸಾಧನೆಗಳು ಪೂರ್ಣಮಾಡತಾ (ಸಂಪುಷ್ಟಿಗೈಸುತ), ಆಯಾ ಕರ್ಮಾನುಗುಣ್ಯದಿಂದ ಸಂರಕ್ಷಣೆಮಾಡತಾನೆ (ಸಂತೈಪ) ಸ್ಥಿತಿಕಾಲದಲ್ಲಿ ಲಿಂಗಭಂಗಾನಂತರ ಅವರವರ ಸ್ವರೂಪಕ್ಕೆ ಅನುಸರಿಸಿ, ತ್ರಿವಿಧಜೀವರಿಗೆ ತ್ರಿವಿಧಸ್ಥಾನದಲಿದ್ದು, ಸಂರಕ್ಷಣೆ ಮಾಡತಾನೆ ಸರ್ವರ ಹೃದಯಕಮಲದಲ್ಲಿ ಇದ್ದಕಾಲಕ್ಕೂ, ಅಸುರರಿಗೆ ಅವರವರ ಹೃದಯಾಕಾಶದಲ್ಲಿ ಪ್ರತ್ಯಕ್ಷನಾಗಿ ದರ್ಶನಕೊಡೋದಿಲ್ಲ. ಭಕ್ತರಿಗೆ ಮಾತ್ರ ದರ್ಶನ ಕೊಡತಾನೆ. (ನಿರ್ದುಷ್ಟ), ಲಿಂಗಭಂಗಾನಂತರ ಮುಕ್ತಿಯೋಗ್ಯರಿಗೆ ಸ್ವರೂಪಗತ ಪೂರ್ಣಸುಖ ಅಭಿವ್ಯಕ್ತಮಾಡತಕ್ಕವ (ಸುಖಪೂರ್ಣ). ತದ್ವತ್ ತಮೋಯೋಗ್ಯರಿಗೆ ಲಿಂಗಭಂಗಾನಂತರ ಸ್ವರೂಪ ಗತ ಪೂರ್ಣ ದುಃಖ ಅಭಿವ್ಯಕ್ತಿ ಮಾಡತಕ್ಕವ ಅಂತಹ ಈ ಮೂಲೇಶ ಅಸದೃಶವಾದ ಸುಖಪೂರ್ಣನಾದವನು. ಇವನು ದಳಸಂಚಾರದಿಂದ ನಾನಾ ವಿಧ ಕರ್ಮದ ಬುದ್ಧಿಗಳನ್ನು ಕೊಡತಾನೆ. ನಂತರ ಇಂದ್ರಿಯಗತ ಭಗವ ದ್ರೂಪಗಳು ತತ್ವೇಶರದ್ವಾರಾ ಕರ್ಮರೂಪಗಳಾದ ದ್ವಂದ್ವ ವ್ಯಾಪಾರಗಳ ಮಾಡಸತಾನೆ. ಸ್ಥಾವರರಾದ ವೃಕ್ಷಾದಿ ಜೀವರಿಗೆ ಬಾಹ್ಯಜ್ಞಾನವಿಲ್ಲ. ಅವರಿಗೇ ಜಾಗ್ರತಾವಸ್ಥಾ ಇಲ್ಲ. ಸ್ವಪ್ನಾವಸ್ಥಾ ಇಲ್ಲ. ಆದ್ದರಿಂದ ಅಷ್ಟದಳಗತ ಮೂಲೇಶನ ವ್ಯಾಪಾರ ಈ ಪ್ರಕಾರ ಎಂತ ತಿಳಿದು, ಪ್ರತಿಮಾ ದಲ್ಲಿ ಅನುಸಂಧಾನದಿಂದ ಅವಾಹನ ಮಾಡಿ ಪೂಜಿಸಬೇಕು-ಎಂತ ತಾತ್ಪರ್ಯ ॥೯॥

### (೨) "ಭಾವಪ್ರಕಾಶಿಕೆ" ವ್ಯಾಖ್ಯಾನ :—

ಮೇಲಿನ ಪದ್ಯದಲ್ಲಿ ಪೂಜೋಪಕರಣ ಪದಾರ್ಥಗಳಲ್ಲಿರುವ ವಿಭೂತಿ ಯನ್ನು ಹೇಳಿ ಪ್ರಸಕ್ತಿಯಿಂದ ಹೃದಯಕಮಲವಾಸಿಯಾದ ಭಗದ್ವಿಭೂತಿ ರೂಪವನ್ನು ಹೇಳುತ್ತಾರೆ. ಹೃದಯಕಮಲದ ಅಷ್ಟದಳಗಳಲ್ಲಿ ಎಂಟು ರೂಪ ಗಳಿಂದ ಸಂಚರಿಸುತ್ತಾ, ನಿರ್ದುಷ್ಟನಾದ, ಪೂರ್ಣಾನಂದಮಯನಾದ, ಸರ್ವೋ ತ್ಕೃಷ್ಟ ಮಹಿಮೆಯುಳ್ಳ ಶ್ರೀಹರಿಯು ಕಮಲದ ಒಳಗಿದ್ದು, ತಮೋಯೋಗ್ಯರಿಗೆ

ದುರ್ಬುದ್ಧಿಯನ್ನು: ಸತ್ಕರ್ಮನಿರತರಿಗೆ ಸುಜ್ಞಾನ ಧರ್ಮಗಳನ್ನು ವೃದ್ಧಿ ಮಾಡಿ ಜನರನ್ನು ಸಮಾಧಾನಗೊಳಿಸುವನು.॥೯॥

(೩) "ಭಾವದರ್ಪಣಟೀಕಾ" ವ್ಯಾಖ್ಯಾನ :—

ಈ ದೇಹದಲ್ಲಿ ಕಾರ್ಯ ನಡೆಸತಕ್ಕ ಭಗವದ್ರೂಪಗಳು ಬಹಳಿರುತ್ತವೆ, ಅವುಗಳಲ್ಲಿ ಬುದ್ಧಿಪ್ರೇರಕ ಭಗವದ್ರೂಪ ಮಹಾತ್ಮ್ಯ ಹೇಳುತ್ತಾರೆ-"ಅಷ್ಟೇ ದಳೇತಿ"

"ಹೃದಯಾಬ್ಜಾಷ್ಟಪತ್ರೇಷು ಚಕ್ರವದ್ಗಮತೇ ಹರಿಃ ।
ರಮಯಾ ಸಹಿತೋ ಹಂಸರೂಪೀ ನಾರಾಯಣೋ ಅನಿಶಮ್ ॥

ಪೂರ್ವದಲೇ ಪುಣ್ಯಬುದ್ಧಿರಾಗ್ನೇ ನಿದ್ರಾಲಸ್ಯಾದಿಕಂ ।
ಯಾಮ್ಯದಲೇ ಕ್ರೂರಬುದ್ಧಿಃ ನೈರುತ್ಯಾಂ ಪಾಪಬುದ್ಧಿಕೃತ್ ।
ವಾರುಣೇಚ ಪರೀಕ್ರೀಡಾ ವಾಯವ್ಯೇ ಗಮನಾಗಮನಃ ॥

ಕೌಬೇರ್ಯಾಂ ರತಿಬುದ್ಧಿಸ್ತು ಈಶಾನ್ಯೇ ದ್ರವ್ಯದಾನಕೃತ್ ।
ಮಧ್ಯೇ ವೈರಾಗ್ಯಬುದ್ಧಿಸ್ಯಾಜ್ಜಾಗ್ರಾವಸ್ಥಾ ಚ ಕೇಸರೇ ॥
ಸ್ವಪ್ನಾವಸ್ಥಾ ಕರ್ಣಿಕಾಯಾಂ ಲಿಂಗೇಚೈವ ಸುಷುಪ್ತಿಕೃತ್ ॥

ಎಂಬೋ ಮುಕ್ತಿತತ್ತ್ವ ರೀತ್ಯಾ ತಿಳಿಯೋದಲ್ಲದೆ. ಈ ಮೂರ್ತಿಗೆ ಅಷ್ಟ ಬಾಹು ಹಂಸವಾಹನ ಎಂತಲೂ ಹೃದಯ ಜ್ಯೋತಿ ಎಂತಲೂ ಎರಡುನಾಮ ದಿಂದ ಕರಸುತ್ತಾನೆಂದು ವಿಜಯರಾಯರ ಸುಳಾದಿಯು ಉಕ್ತವಾದ ಪ್ರಯುಕ್ತ ಈ ಮೂರ್ತಿಯನ್ನು ನೆಟ್ಟಗೆ ಚಿಂತನಕ್ಕೆ ತರತಕ್ಕದ್ದು. ಅಧಿಷ್ಟಿತ = ಅಧಿಷ್ಠಾನ ಮಾಡಿದವ ॥೯॥

೪) ಜಮಖಂಡಿ ವಾದಿರಾಜಾಚಾರ್ಯರ ವ್ಯಾಖ್ಯಾನ:—
(ಸಂಸ್ಕೃತಮೂಲ)

ಅಷ್ಟೇತಿ ॥ "ಅಷ್ಟಪತ್ರೇತು ಹೃತ್ಕಂಜಮ್" -ಇತ್ಯುಕ್ತೇಃ ॥ ಸದುರ್ಬುದ್ಧಿ ಪ್ರದಾನಾಯ ದಲೋಪರ್ಯಟೀತೇ ಪರಃ ॥ ಇತಿ ಚ ॥ ಗೈಸುತ=ಮಾಡುತ, ಸಂತೈಪ=ರಕ್ಷತಿ ॥೯॥

**ಕನ್ನಡಾರ್ಥ :—**

ಹೃತ್ಪದ್ಮವು ಅಷ್ಟದಳಯುಕ್ತವಾದದ್ದು. ಹೀಗೆಂದು ಪ್ರಮಾಣವಿದೆ. ಸುಜನರಿಗೆ ಸುಬುದ್ಧಿ ಪ್ರದನಾಗಿ, ಸದ್ಧರ್ಮ ಕರ್ಮಗಳನ್ನು ಮಾಡಿಸುವನು. ಅಂತೆಯೇ, ದುರ್ಜನರಿಗೆ ದುರ್ಬುದ್ಧಿ ಕೊಟ್ಟು, ತದ್ದ್ವಾರಾ ದುಷ್ಟ ಕರ್ಮ ಹಾಗೂ ಅಧರ್ಮಗಳನ್ನು ಮಾಡಿಸುವನು. ಇದಕ್ಕಾಗಿ ಹೃದಯ ಕಮಲದ ಅಷ್ಟದಳಗಳಲ್ಲಿ ಶ್ರೀ ಪರಮಾತ್ಮನು ಸುತ್ತುತ್ತಿರುವನು. ಇದು ಪ್ರಮಾಣ ಪ್ರಮಿತವು. ॥೯॥

(ಙ) **"ಗುರುಹೃದಯ ಪ್ರಕಾಶಿಕಾ" ವ್ಯಾಖ್ಯಾನ :—**

ಪೂಜಾಪ್ರಕರಣವಾದ್ದರಿಂದ ಅಷ್ಟದಳ ಹೃತ್ಕಮಲಗತ ರೂಪವನ್ನು ಮುಂದೆ ವಿವರಿಸಬೇಕಾಗಿ ಸಂಕ್ಷೇಪದಿಂದ ನಿರೂಪಿಸುತ್ತಾರೆ-"ಅಷ್ಟದಳ"ವೆಂದು ಎಂಟುದಳವುಳ್ಳ ಹೃದಯಕಮಲದಲ್ಲಿರುವವನು, ತಾನು ಸರ್ವೋತ್ಕೃಷ್ಟ ಮಹಿಮನಾದರೂ, ಆ ಎಂಟು ದಳಗಳಲ್ಲಿ ಸಂಚರಿಸುತ್ತಾ, ದುಷ್ಟರಿಗೆ ದುರ್ಬುದ್ಧಿಯನ್ನೂ, ಸತ್ಕರ್ಮನಿಷ್ಠರಿಗೆ ಸುಜ್ಞಾನವನ್ನೂ ವೃದ್ಧಿಮಾಡುತ್ತಾ ನಿರ್ದುಷ್ಟಸುಖಪೂರ್ಣನು ತಾನಾದಾಗ್ಯೂ, ಅವರನ್ನು ಸಂತೋಷದಿಂದ ರಕ್ಷಿಸುವ ॥೯॥

# ಸರ್ವವ್ಯಾಖ್ಯಾನಸಾರಸಂಗ್ರಹ

ಸರ್ವ ಚೇತನರ ಹೃದಯಾಕಾಶದಲ್ಲಿ ಕಮಲವಿದೆ. ಇದಕ್ಕೆ ಹೃತ್ಕಮಲ ಅಥವಾ ಹೃತ್ಪದ್ಮ ಎಂದು ಹೆಸರು. ಈ ಕಮಲವು ಅಷ್ಟದಳಗಳಿಂದ ಯುಕ್ತವಾಗಿದೆ. ಇಂತಹ ಅಷ್ಟದಳಾತ್ಮಕವಾದ ಹೃದಯ ಕಮಲವು ಬಿಂಬರೂಪಿಯಾದ ಶ್ರೀಹರಿಗೆ ಆವಾಸಸ್ಥಾನವು, ರಮಾಬ್ರಹ್ಮಾದಿಗಳ ಮಹಿಮಾಕ್ಕಿಂತಲೂ

ಮಹಿಮಾಸಂಪನ್ನನಾದ ಬಿಂಬರೂಪೀ ಶ್ರೀ ಪರಮಾತ್ಮನು "ಮೂಲೇಶ" ನೆಂಬ ಸುಮಂಗಳ ನಾಮಧೇಯನಾಗಿ, ಈ ಹೃತ್ಕಮಲದ ಎಂಟು ದಳಗಳಲ್ಲಿ ಸಂಚರಿಸಿ, ವಿಹರಿಸುತ್ತಿರುವನು. ಇಂತಹ ಮೂಲೇಶನಾಮಕನಾದ ಬಿಂಬನು ಹೃತ್ಕಮಲ ಕರ್ಣಿಕಾ ಮೂಲದಲ್ಲಿ ಆವಾಸವಾಗಿದ್ದಾನೆ. ಅಂಗುಷ್ಠಾಗ್ರ ಪರಿಮಿತನಾದ, ಅಷ್ಟಬಾಹು ಮತ್ತು ಅಷ್ಟ ಆಯುಧ ವಿಶೇಷಗಳಿಂದ ಯುಕ್ತನಾದ ಮೂಲೇಶನೇ ಹೃತ್ಕಮಲನಿವಾಸಿಯಾದ "ಶ್ರೀಮನ್ನಾರಾಯಣ"ನು. ಈ ಮೂಲೇಶನ ಪಾದಮೂಲದಲ್ಲಿ ವಾಯುದೇವರು ಇದ್ದು. ಅವರ ಪಾದಾಶ್ರಯನಾಗಿ ಅನಿರುದ್ಧ ದೇಹಸಹಿತನಾದ ಜೀವನಿದ್ದಾನೆ. ಈ ಉಪಾಸನಾ ಕ್ರಮದಿಂದ ಬಿಂಬ ಪ್ರತಿಬಿಂಬ ಭಾವ, ಅಂದರೆ ಈಶ-ದಾಸರ ಪರಸ್ಪರ ಸಂಬಂಧವನ್ನು ತಿಳಿಯಬೇಕು. ಅಪರಿಮಿತ ಮಹಿಮಾಸಂಪನ್ನನಾದ, ಸರ್ವದೋಷ ವಿದೂರನೂ, ಅನಂತ ಕಲ್ಯಾಣ ಗುಣಗಣಪರಿಪೂರ್ಣನೂ ಆದ ಬಿಂಬರೂಪೀ ಮೂಲೇಶನಾಮಕ ಪರಮಾತ್ಮನು ತ್ರಿವಿಧ ಜೀವರ ಹೃತ್ಕಮಲದ ಅಷ್ಟದಳಗಳಲ್ಲಿ ಪ್ರದಕ್ಷಿಣಾಕಾರದಿಂದ ವಿಹರಿಸುತ್ತಿರುವನು. ಆಗ ಲಕ್ಷ್ಮೀಸಹಿನಾದ ಮೂಲೇಶ ನಾರಾಯಣನು ಜೀವಿಯ ಕರ್ಮವನ್ನು ಅನುಸರಿಸಿದ ಬುದ್ಧಿಗೆ ಪ್ರಚೋದಕನಾಗಿ (ಬುದ್ಧಿ ಕರ್ಮಾನುಸಾರಿಣೀ-ಎಂಬಂತೆ), ದಳಗಳಲ್ಲಿ ಸಂಚರಿಸುತ್ತಿರುವಾಗ, ಆ ಗಮನವಿಶೇಷದಿಂದ ಫಲರೂಪವಾದ ಅನುಭವಗಳನ್ನು ಜೀವನಿಗೆ ಅಭಿವ್ಯಕ್ತಿಗೊಳಿಸುವನು, ಅದರ ವಿವರಗಳು ಹೀಗಿವೆ :—

| ದಳ ಸಂಖ್ಯೆ | ದಿಕ್ಕು-ವಿದಿಕ್ಕುಗಳು | ದಳಾಭಿಮಾನಿ | ಕರ್ಮಫಲಾನುಭವ |
|---|---|---|---|
| ೧ | ಪೂರ್ವ | ಇಂದ್ರ | ಪುಣ್ಯಕಾರ್ಯ |
| ೨ | ಆಗ್ನೇಯ | ಅಗ್ನಿ | ನಿದ್ರಾ, ಆಲಸ್ಯ |

| | | | |
|---|---|---|---|
| ೩ | ದಕ್ಷಿಣ | ಯಮ | ಅನ್ಯರನ್ನು ಹಿಂಸಿಸುವ ಬುದ್ಧಿ |
| ೪ | ನೈರುತ್ಯ | ನಿರುಋತಿ | ಪಾಪಕರ್ಮ |
| ೫ | ಪಶ್ಚಿಮ | ವರುಣ | ಕ್ರೀಡಾ ಬುದ್ಧಿ |
| ೬ | ವಾಯುವ್ಯ | ಪ್ರವಹವಾಯು | ಗಮನಾಗಮನ |
| ೭ | ಉತ್ತರ | ಕುಬೇರ | ರತಿ ಕ್ರೀಡಾಸಕ್ತಿ |
| ೮ | ಈಶಾನ್ಯ | ರುದ್ರದೇವರು | ಅನ್ನ, ವಸ್ತ್ರ, ದ್ರವ್ಯಗಳನ್ನು ದಾನಮಾಡುವ ಬುದ್ಧಿ |
| ೯ | ಕಮಲದಮಧ್ಯ | ವಾಯುದೇವರು | ವೈರಾಗ್ಯಬುದ್ಧಿ |
| ೧೦ | ಕೇಸರಗಳಲ್ಲಿ | ತಾನೇ ವಿಶ್ವನಾಗಿ | ಎಚ್ಚರ |
| ೧೧ | ಕರ್ಣಿಕೆಯಲ್ಲಿ | ತಾನೇತೈಜಸನಾಗಿ | ಸ್ವಪ್ನಾವಸ್ಥೆ |
| ೧೨ | ಮೂಲದಲ್ಲಿ | ತಾನೆಪ್ರಾಜ್ಞನಾಗಿ | ಸುಷುಪ್ತಿ |

ಇಂತು ಕ್ಷರ ಅಕ್ಷರ ಪುರುಷ ಪೂಜಿತನಾದ. ಸರ್ವೋತ್ಕೃಷ್ಟ ಮಹಮನಾದ ಬಿಂಬರೂಪೀ ಮೂಲೇಶನಾರಾಯಣನು ದಳಗಳಲ್ಲಿ ಸಂಚರಿಸುತ್ತಿರುವಾಗ, ಆಯಾಯಾ ದಳಗಳ ಸ್ಥಾನಗಳಿಗನುಗುಣವಾಗಿ ಬುದ್ಧಿ ಪ್ರೇರಕನಾಗಿ, ಕರ್ಮಗಳನ್ನು ಮಾಡಿ ಮಾಡಿ ಸುತ್ತಿರುವನು, ಶ್ರೀ ಹರಿಯಲ್ಲಿಯೂ ಹಾಗೂ ಶ್ರೀ ಹರಿಯ ಭಕ್ತವರ್ಗದವರಲ್ಲಿಯೂ ದ್ವೇಷ ಬುದ್ಧಿಯಿಂದ ಕೂಡಿದವರಾಗಿ, ಪಂಚಭೇದ ತಾರತಮ್ಯಜ್ಞಾನರಹಿತರಾಗಿ ಜಗತ್ತಿನ ಸತ್ಯತ್ವವನ್ನು ಅಲ್ಲಗಳೆಯುವುದೇ ಅಲ್ಲದೆ, ಮಿಥ್ಯಾವಾದವನ್ನೂ ಜೀವ ಮತ್ತು ಈಶರಿಗೂ ಐಕ್ಯವನ್ನೂ ಪ್ರತಿಪಾದಿಸಿ, ದುರ್ಭೋದನೆ ಪ್ರಚಾರಮಾಡುತ್ತಿರುವ

ಅಯೋಗ್ಯ ಚೇತನರೇ "ದುಷ್ಟರು". ಇಂತಹ ತಮೋಯೋಗ್ಯರಾದ ದುಷ್ಟ ಜನರಿಗೆ ದುರ್ಬುದ್ಧಿ, ಅದಕ್ಕನುಗುಣವಾದ ಪಾಪಕರ್ಮಾನುಚರಣೆ ಇತ್ಯಾದಿಗಳಿಗೆ ಪ್ರೇರಕನಾಗಿದ್ದಾನೆ. ಸತ್ಕರ್ಮಾನುಷ್ಟರಾಗಿ, ಪಂಚಭೇದ, ತಾರತಮ್ಯ ಜ್ಞಾನವನ್ನು ಗುರೂಪಸತ್ತಿ ದ್ವಾರಾ ತಿಳಿದು, ತಮ್ಮ ನಿತ್ಯಜೀವನದಲ್ಲಿ ಆ ಸದ್ಧರ್ಮಗಳನ್ನು ಆಚರಣೆಗೆ ತಂದಿರುವ ಕರ್ಮವಿಶಿಷ್ಟರಾದ ಸಚ್ಚೇತನರಿಗೆ (ಮುಕ್ತಿಯೋಗ್ಯ ಚೇತನರಿಗೆ), ಸಮೀಚೀನವಾದ, ಅಂದರೆ, ನಿಸ್ಸಂಶಯುವಾದ "ಇದಮಿತ್ಥಂ"ಎಂಬ ನಿರ್ಣಯಾತ್ಮಕ ಜ್ಞಾನವನ್ನು ಕೊಟ್ಟು. ತನ್ಮೂಲಕ ಅವರಲ್ಲಿ ಸದ್ಧರ್ಮ ಜಾಗ್ರತಿನ್ನುಂಟುಮಾಡಿ, ಪುಣ್ಯಕಾರ್ಯಗಳನ್ನು ಅವರ ದ್ವಾರಾ ಮಾಡಿಸಿ, ಸಂರಕ್ಷಿಸುತ್ತಾನೆ. ಇಂತಹ ಕರುಣಾಳುವಾದ ಪರಮಾತ್ಮನು ಸಮಸ್ತ ದೋಷಗಳಿಂದ ವಿದೂರನು. ಜ್ಞಾನಾನಂದಾದಿ ಮಂಗಳ ಗುಣಗಳಿಂದ ಪರಿಪೂರ್ಣನು ಎಂದು ಅರಿತು. ಧ್ಯಾನಯೋಗದಿಂದ ಉಪಾಸಿಸಬೇಕು ಎಂದು ದಾಸರಾಯರ ಹೃದ್ಗತಾಭಿಪ್ರಾಯವು. ॥೯॥

## ಪದ್ಯ (೧೦)

ಮೂಲ :—

ವಿತ್ತದೇಹಾಗಾರ ದಾರಾ ।
ಪತ್ಯಮಿತ್ರಾದಿಗಳೊಳಗೆ ಗುಣ ।
ಚಿತ್ತ ಬುದ್ಧ್ಯಾದಿಂದ್ರಿಯುಗಳೊಳು ಜ್ಞಾನ ಕರ್ಮದೊಳು ॥
ತತ್ತದಾಹ್ವಯನಾಗಿ ಕರೆಸುತ ।
ಸತ್ಯಸಂಕಲ್ಪಾನುಸಾರದಿ ।
ನಿತ್ಯಧಲಿ ತಾ ಮಾಡಿಪನೆಂದು ಸ್ಮರಿಸುತಿರು ॥ ॥೧೦॥

**ಅವತರಣಿಕೆ :—**

ಸಂಪತ್ತು, ದೇಹ, ಮನೆ, ಪತ್ನೀ, ಪುತ್ರರು, ಸ್ನೇಹಿತರು ಇತ್ಯಾದಿಗಳಲ್ಲಿ, ಜ್ಞಾನ ಮತ್ತು ಜ್ಞಾನೇಂದ್ರಿಯಗಳು. ಕರ್ಮ ಹಾಗೂ ಕರ್ಮಗಳನ್ನೆಸಗುವ ಕರ್ಮೇಂದ್ರಿಯಗಳಲ್ಲಿ, ಆಯಾಯಾ ಅಧಿಷ್ಠಾನ ಗಳ ಹೆಸರಿನಿಂದಲೇ ತತ್ತನ್ನಾಮಕನಾಗಿ ಕರೆಯಿಸಿಕೊಳ್ಳುತ್ತಾ, ಸತ್ಯಸಂಕಲ್ಪನಾದ ಶ್ರೀ ಪರಮಾತ್ಮನು ಸರ್ವಕಾಲ, ಸರ್ವಾವಸ್ಥೆ, ಸರ್ವ ದೇಶಗಳಲ್ಲಿಯೂ ತನ್ನ ಇಚ್ಛೆಯಂತೆಯೇ ಜಗದ್ವ್ಯಾಪಾರ ರೂಪವಾದ ಕ್ರಿಯಾದಿಗಳನ್ನು ಆಯಾ ಕ್ರಿಯಾದ್ವಾರಾ ತಾನು ಮಾಡಿ, ಚೇತನರ ಅನುಭವಕ್ಕೆ ತಂದೀಯುವನು ಎಂಬ ಉತ್ತಮ ಜ್ಞಾನಾನುಸಂಧಾನದಿಂದ ಆ ಸರ್ವಶಕ್ತನಾದ, ಸರ್ವನಿಯಾಮಕ ನಾದ ಶ್ರೀಹರಿಯನ್ನು ನಿತ್ಯದಲ್ಲಿಯೂ ನೆನೆಯುತ್ತಿರಬೇಕೆಂದು ಹೇಳುತ್ತಾರೆ- **"ವಿತ್ತದೇಹಾಗಾರ"** –ಎಂಬ ಪ್ರಸಕ್ತ ಸಂಧಿಗತ ೧೦ನೆಯ ಈ ಪದ್ಯದಿಂದ ॥೧೦॥

**ಪ್ರತಿಪದಾರ್ಥ :—**

**ವಿತ್ತ** = ದ್ರವ್ಯ **ದೇಹ** = ಪಾಂಚಭೌತಿಕವಾದ ಸ್ಥೂಲದೇಹ **ಆಗಾರ** = ವಾಸಿಸುವ ಮನೆ **ದಾರಾ** = ಹೆಂಡತಿ **ಅಪತ್ಯ** = ಪುತ್ರರು ಮತ್ತು ಪುತ್ರಿಯರು (ಮಕ್ಕಳು) **ಮಿತ್ರ** = ಸ್ನೇಹಿತ **ಆದಿಗಳೊಳಗೆ** = ಇವರೇ ಮೊದಲಾದವರಲ್ಲಿ **ಗುಣ** = ಸತ್ವಾದಿ ಗುಣತ್ರಯಗಳು **ಚಿತ್ತ** = ಮನೋವೃತ್ತಿಯಾದ ಚಿತ್ತ (ಸಂಕಲ್ಪಶಕ್ತಿ) **ಬುದ್ಧಿ** = ಮನೋವೃತ್ತಿಯಾದ ಬುದ್ಧಿ (ನಿಶ್ಚಯಿಸುವ ಶಕ್ತಿ) **ಆದಿ** = ಆದಿಶಬ್ದದಿಂದ ಮನಸ್ಸು, ಚಿತ್ತ, ಬುದ್ಧಿ, ಅಹಂಕಾರ, ಅಂತಃಕರಣ ಎಂಬ ಪಂಚ ಮನೋವೃತ್ತಿಗಳೂ ಗ್ರಾಹ್ಯ. **ಇಂದ್ರಿಯಗಳೊಳು** = ಗೋಳಕಾಂತರ್ಗತ ಇಂದ್ರಿಯಗಳಲ್ಲಿ **ಜ್ಞಾನ** = ಪಂಚ ಜ್ಞಾನೇಂದ್ರಿಯಗಳು ಮತ್ತು ತದ್ವಾರಾ ಪ್ರಾಪ್ತಿಯಾಗುವ ಜ್ಞಾನ **ಕರ್ಮದೊಳು** = ಪಂಚ ಕರ್ಮೇಂದ್ರಿಯ ಮತ್ತು ತದ್ವಾರಾ ನಡೆ ಯುತ್ತಿರುವ ಕ್ರಿಯಾವಿಶೇಷಗಳು ಇವುಗಳಲ್ಲಿ **ತತ್ತದಾಹ್ವಯನಾಗಿ** =

ಆಯಾಯಾ ಅಧಿಷ್ಠಾನಗಳ ಹೆಸರಿನಿಂದಲೇ **ಕರೆಸುತ**=ಕರೆಯಿಸಿಕೊಳ್ಳುತ್ತಾ **ಸತ್ಯಸಂಕಲ್ಪಾನುಸಾರದಿ**=ಆಯಾಯಾ ಚೇತನರುಗಳ ಅನಾದಿಕರ್ಮಾನು ಸಾರ, ತನ್ನ ಸರ್ವತಂತ್ರ ಸ್ವತಂತ್ರವಾದ ಇಚ್ಛೆ (ಚಿತ್ತ) ದಂತೆ **ನಿತ್ಯದಲಿ**= ಪ್ರತಿ ಕ್ಷಣದಲ್ಲಿಯೂ (ಯಾವಾಗಲೂ) **ತಾ ಮಾಡಿ**=ಆಯಾಯಾ ಕ್ರಿಯೆ ಗಳನ್ನು ಪ್ರಥಮತಃ ಬಿಂಬಕ್ರಿಯಾ ದ್ವಾರಾ ತಾನೇ ಮಾಡಿ **ಮಾಡಿಪನು**= ತತ್ವೇಶರ ದ್ವಾರಾ ಜೀವನಿಂದ ದೇಹದ್ವಾರಾ ಮಾಡಿಸುತ್ತಾನೆ **ಎಂದು**= ಬಿಂಬಕ್ರಿಯಾ ದ್ವಾರಾ ಪ್ರತಿಬಿಂಬ ಕ್ರಿಯಾ ನಡೆಯುತ್ತಿರುವುದು ಎಂಬ ಜ್ಞಾನಾನುಸಂಧಾನದಿಂದ **ಸ್ಮರಿಸುತ್ತಿರು**=ನೆನೆಯುತ್ತಿರುವವನಾಗು. ॥೧೦॥

## ವ್ಯಾಖ್ಯಾನಗಳು

### (೧) ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ :—

ಸ್ವರ್ಣ ರಜತಾದಿಗಳಿಂದ ನಿರ್ಮಿತವಾದ ದ್ರವ್ಯಗಳು (ವಿತ್ತ), ಪಂಚ ಭೂತಗಳಿಂದ ನಿರ್ಮಿತವಾದ ಸ್ಥೂಲದೇಹ (ದೇಹ), ಮನೆ (ಆಗಾರ), ಹೆಂಡತಿ (ದಾರಾ), ಪುತ್ರಪುತ್ರಿಯರು (ಅಪತ್ಯ), ಆಪತ್ಕಾಲದ ಸ್ನೇಹಿತ (ಮಿತ್ರ), ಇವರೇ ಮೊದಲಾದ ತ್ರಿವಿಧ ಚೇತನರೊಳಗೆ, ಹಾಂಗೆ ಆಯಾ ಚೇತನಸ್ಥೂಲಗತ ಸತ್ವಾದಿ ಗುಣತ್ರಯಗಳು (ಗುಣ), ಮನೋವೃತ್ತಿ ಗಳಾದ ಚಿತ್ತ, ಬುದ್ಧಿ, ಆದಿ ಶಬ್ದದಿಂದ ಮನಸ್ಸು, ಬುದ್ಧಿ, ಚಿತ್ತ, ಅಹಂಕಾರ, ಅಂತಃಕರಣಗಳೆಂಬ ಪಂಚಮನೋವೃತ್ತಿಗಳೂ ಗ್ರಾಹ್ಯ. ಗೋಳಕಾಂತರ್ಗತ ಇಂದ್ರಿಯಗಳಾದ ದಶೇಂದ್ರಿಯಗಳೊಳು, ಜ್ಞಾನೇಂ ದ್ರಿಯ ಗೋಳಕಗಳು ಐದು (ಜ್ಞಾನ), ಕರ್ಮೇಂದ್ರಿಯಗೋಳಕಗಳು ಐದು (ಕರ್ಮ), ಈ ಪೂರ್ವೋಕ್ತ ಯಾವತ್ತರೊಳು, ಆಯಾಯಾ ಅಧಿಷ್ಠಾನ ಗಳಿಗೆ ದಾವದಾವ ನಾಮಗಳೋ, ಆಯಾಯಾ ನಾಮಗಳಿಂದ ಅಂತರ್ಗತ ನಾಗಿ, (ತತ್ತದಾಹ್ವಯನಾಗಿ), ಸತ್ಯವಾದ ತನ್ನ ನಾಮದಿಂದ ಕರಿಸುತ, ಅನಾದಿ ಸಂಕಲ್ಪಾನುಸಾರದಿ ಎಂದರೆ, ಜೀವರ ಸೃಷ್ಟಿಸಿದನಂತರ ಪ್ರಳಯಾಂತ

ದವರೆಗೂ, ದಾವದಾವ ಜೀವಲಿಂದ ದಾವದಾವ ಲಕ್ಷಣದಲ್ಲಿ ದಾವದಾವ ದೇಶದಲ್ಲಿ, ಅನಾದಿಕರ್ಮವನನುಸರಿಸಿ, ಮಾಡಿಸತಕ್ಕ ಕರ್ಮ ಇಂಥಾದ್ದು ಎಂತ ಸಂಕಲ್ಪ ಮಾಡೋವನಾಗಿ ಇದ್ದಾನೆ. ಇಂಥಾ ಸತ್ಯಸಂಕಲ್ಪಾನುಸಾರ, ಪ್ರತಿಕ್ಷಣ, ಲವಾದಿಗಳಲ್ಲಿ ಸ್ಥಾವರಜಂಗಮಾದಿಗಳಿಂದ ದಾವದಾವ ಕಾರ್ಯಗಳು ಆಗಬೇಕೋ, ಆ ಕಾರ್ಯ ಪ್ರಥಮತಃ ತಾನು ಮಾಡಿಸತಾನೆ. (ಮಾಡಿಪನು). ಬಿಂಬಕ್ರಿಯಾದ್ವಾರಾ ಪ್ರತಿಬಿಂಬ ಕ್ರಿಯಾ ಎಂತ ಸ್ಮರಣೆ ಮಾಡುತಿರೋನಾಗು (ಸ್ಮರಿಸುತಿರು). ಅನಾದಿಕರ್ಮ ಎಂಬುದು ಈಶ್ವರ ರಚಿತವಲ್ಲ. ಲಿಂಗದೇಹದೋಪಾದಿಯಲ್ಲಿ ಕರ್ಮವೂ ಅನಾದಿ. ಲಿಂಗದೇಹ ಈಶ್ವರನಿಂದ ರಚಿತವಲ್ಲ. ಅಸೃಜ್ಯಜೀವರಾಶಿಗಳ ಲಿಂಗದೇಹದಲ್ಲಿ ಬೀಜ ಭೂತವಾಗಿ ಜಡಕರ್ಮ ಇದ್ದು, ಸೃಷ್ಟಿಕಾಲಕ್ಕೆ ಅಂಕುರವಾಗತದೆ, ಗುಣ ವೈಷಮ್ಯದಿಂದ ಎಂತ ತಾತ್ಪರ್ಯ ॥೧೦॥

## (೨) "ಭಾವಪ್ರಕಾಶಿಕೆ" ವ್ಯಾಖ್ಯಾನ :—

ಪ್ರಸಕ್ತಿಯಿಂದ ತನ್ನ ದೇಹ, ಹೆಂಡತಿ, ಮಕ್ಕಳು, ಮೊದಲಾದವರಲ್ಲಿಯೂ ಪೂಜಾ ಸಾಧನತ್ವೇನ ಭಗವದ್ವಿಭೂತಿಯನ್ನು ತಿಳಿಯಬೇಕೆಂದು ಹೇಳುತ್ತಾರೆ. ತನ್ನ ಮನೆಯಲ್ಲಿರುವ ದ್ರವ್ಯ, ತನ್ನ ದೇಹ, ಮನೆ, ಹೆಂಡರು, ಮಕ್ಕಳು, ಸ್ನೇಹಿತರು ಮೊದಲಾದ ಒಬ್ಬೊಬ್ಬರಲ್ಲಿಯೂ ಅಖಂಡರೂಪದಿಂದ ಪರಮಾತ್ಮನಿದ್ದು, ಪೂಜೋಪಕರಣನಾಗಿರುವನೆಂದು ಭಾವಿಸಬೇಕು. ಸಾತ್ವಿಕ, ರಾಜಸ ಮತ್ತು ತಾಮಸರಲ್ಲಿ ಸತ್ವರಜಸ್ತಮೋ ರೂಪನಾಗಿಯೂ, ತಾನು, ತನ್ನ ಹೆಂಡತಿ ಮೊದಲಾದ ಎಲ್ಲರ ಚಿತ್ತ, ಬುದ್ಧಿ, ಮನಸ್ಸು, ಅಹಂಕಾರಗಳಲ್ಲಿಯೂ, ಜ್ಞಾನೇಂದ್ರಿಯಗಳಲ್ಲಿಯೂ, ಕರ್ಮೇಂದ್ರಿಯಗಳೊಳಗೂ, ಆಯಾಯಾ ಹೆಸರಿನಿಂದ ಕರೆಸಿಕೊಳ್ಳುತ್ತಾ **"ಸತ್ಯಸಂಕಲ್ಪತೋ ವಿಷ್ಣುರ್ನಾನ್ಯಥಾತು ಕರಿಷ್ಯತಿ"** —ಎಂಬ ಪ್ರಮಾಣ ದಂತೆ, ನಿತ್ಯದಲ್ಲಿಯೂ ಮೇಲೆ ಹೇಳಿದ ಜನರೊಳಗೂ, ಇಂದ್ರಿಯಗಳೊಳು ಇದ್ದು, ಕರ್ಮಗಳನ್ನು ತಾನು ಮಾಡಿ, ಆ ಜನರಿಂದಲೂ ಮಾಡಿಸುವನೆಂದು ಚಿಂತಿಸಬೇಕು. ತನ್ನಲ್ಲಿಯೂ, ಹೆಂಡತಿ ಮೊದಲಾದವರಲ್ಲಿಯೂ

ಅಖಂಡ ರೂಪಗಳನ್ನು ಅವರುಗಳ ಕರಚರಣಾದಿ ಇಂದ್ರಿಯಗಳಲ್ಲಿಯೂ ಖಂಡರೂಪಗಳನ್ನು ಚಿಂತಿಸಬೇಕು ॥೧೦॥

### (೩) "ಭಾವದರ್ಪಣ ಟೀಕಾ"-ವ್ಯಾಖ್ಯಾನ :—

ದ್ರವ್ಯ, ಶರೀರ, ಮನೆ, ಹೆಂಡತಿ, ಮಕ್ಕಳು, ಸ್ನೇಹಿತರು ಇವರೇ ಮೊದಲಾಗಿ ಉಳ್ಳ ಗಾರ್ಹಸ್ಥ್ಯವೃಕ್ಷದ ಶಾಖೆ, ಉಪಶಾಖಾರೂಪದಲ್ಲಿ ಸತ್ವಾದಿ ಗುಣಗಳು, ಅಹಂಕಾರ, ಸ್ಮರಣ, ಅಂತಃಕರಣವೆಂಬ ಮನಸ್ಸಿನಲ್ಲಿ, ಜ್ಞಾನೇಂದ್ರಿಯ, ಕರ್ಮೇಂದ್ರಿಯಗಳಲ್ಲಿ, ಇವುಗಳಿಂದ ಸಹಕೃತವಾದ ಜ್ಞಾನ, ಕರ್ಮ ಇವುಗಳಲ್ಲಿ, ಆಯಾಯಾ ನಾಮ ಉಳ್ಳವನಾಗಿ, ಎಂದರೆ, ವಿತ್ತದಲ್ಲಿ ವಿತ್ತನಾಮಕನಾಗಿ, ಮಿತ್ರರಲ್ಲಿ ಮಿತ್ರ ನಾಮ ಆಯಾಯಾ ನಾಮಗಳಿಂದಲೇ ಕರೆಯಿಸಿಕೊಳ್ಳುತ್ತಾ, ಕಪಟ, ಅನೃತ ರಹಿತವಾದ ವೇದೋಕ್ತಗಳಾದ ವಿಧಿ, ನಿಷೇಧಗಳನ್ನು ಅನುಸರಿಸಿ (ಸತ್ಯ ಸಂಕಲ್ಪಾನುಸಾರದಿ), ಬಿಂಬರೂಪಿಯಾದ ಶ್ರೀಹರಿಯೇ ಕರ್ತೃತ್ವಾಂಶದಿಂದ ನಿಯಮನ ಮಾಡಿ, ಪ್ರೇರಕ ಕರ್ತೃತ್ವಾಂಶದಿಂದ ಮಾಡಿಸುವನು ಎಂತ ಚಿಂತಿಸಬೇಕು. ಪ್ರತಿಬಿಂಬನು ಅಲ್ಪ ಕರ್ತೃತ್ವಾಂಶದಿಂದ ತನ್ನ ಕರ್ಮವನ್ನು ಭೋಗಿಸಲಾರನು. ಆದ್ದರಿಂದ ನಿಯಾಮಕ ಕರ್ತೃತ್ವಾಂಶದಿಂದ ಭೋಗ ಮಾಡಿಸುತ್ತಾನೆ. ಎಂಬುದನ್ನು– "ಮಾಡಿ ಮಾಡಿಸಿ" –ಎಂಬ ಶಬ್ದಗಳಿಂದ ಸೂಚಿಸಿದ್ದಾರೆ. ಆದ್ದರಿಂದ ಬಿಂಬನ ಸ್ಮೃತಿಯು ಸುಖಕಾರಣವು ; ವಿಸ್ಮೃತಿಯು ದುಃಖಕಾರಣವು ॥೧೦॥

### (೪) ಶ್ರೀ ವಾದಿರಾಜಾಚಾರ್ಯರ ವ್ಯಾಖ್ಯಾನ :—
### (ಸಂಸ್ಕೃತಮೂಲ)

ವಿತ್ತೇತಿ ॥ ವೇದ್ಯತ್ವಾತ್ ವಿತ್ತಃ। "ಯಸ್ಯಾನುವಿತ್ತಃ" –ಇತಿಶ್ರುತೇಃ॥ ಉಪಚಿತತ್ವಾತ್ ವೃದ್ಧತ್ವಾತ್ ದೇಹಃ ॥ ದೇಹ ಉಪಚಯೇ ॥ ಜಗದತ್ತೃತ್ವಾತ್ ಆಗಾರಃ ॥ ಗೃನಿಗರಣೇ ॥ ಭೀಷಕತ್ವಾತ್ ಪಾಪದಾರಕತ್ವಾತ್ ದಾರಾಃ ॥ ದೃವಿದಾರಣೇ [illegible] ಭಯೇ ॥ ವ್ಯಾಪ್ತತ್ವಾತ್ ಆವರಣ

ರಾಹಿತ್ಯಾತ್ ಅಪತ್ಯಮ್ ॥ ತತೇರಿತ್ಯುಕ್ತೇಃ ॥ ಮಿನೋತಿ ತ್ರಾಯತೇ ಇತಿ ಚ ಮಿತ್ರಮ್ ಕಾರಣತ್ವಾತ್ ಆದಿಃ ॥ ಭರ್ತುಂ ಅರ್ಹಗತ್ವಾತ್ ಭಾರ್ಯಾ ॥ ಜೀವಮ್ ಅನುಜಾತತ್ವಾತ್ ॥ ಅನುಜಃ ॥ ಅಗ್ರಜತ್ವಾತ್ ಅಗ್ರಜಃ ॥ ಪೂಯಶೋಣಾದಿ ಭಾಜಃ ತಾರಯತೀತಿ ಪುತ್ರಃ ॥ ಸಾಧುತ್ವಾತ್ ಸತೀ ॥ ಸುಖ ದತ್ವಾತ್ ನಂದನಃ ॥ ವಿಸ್ತೃತತ್ವಾತ್ ತನಯಃ ॥ ಗತಿ ದೀಪ್ತಿಸುಖತ್ವಾತ್ ಅಭರ್ಕಃ ॥ ಪಾತಿ ಇತಿ ಪಿತಾ॥ ಮಾನಾತ್ ತ್ರಾತಾಯತ್ ಸಪಿತುರ್ಮಹಾನ್ ॥ ಪಿತಾಮಹ ಇತ್ಯಾದಿ ಪದ ನಿರುಕ್ತಿಂ ॥ ಏವಂ ನಾನಾಗುಣೋರ್ವಿಷ್ಣುಃ ನಾನಾ ನಾಮ ಭಿರೀರಿತಃ ॥ ಇತ್ಯುಕ್ತೇಃ ॥ ಮಾಡಿಪ = ಮಾಡಿಸುತ್ತಾನೆ ॥೧೦॥

**ಕನ್ನಡಾರ್ಥ :—**

"ಅನುವಿತ್ತಃ" -ಎಂದರೆ, ಸರಿಯಾದ ರೀತಿಯಲ್ಲಿ ತಿಳಿಯಲ್ಪಡುವವನು ಎಂದರ್ಥ. ಉತ್ತಮ ಉಪಾಸಕನಾದವನು ತನ್ನ ಹೃದ್ಗುಹಾನಿವಾಸಿಯಾದ ಶ್ರೀಹರಿಯನ್ನು ಯಥಾರ್ಥವಾಗಿ ತಿಳಿಯುತ್ತಾನೆ. ಶ್ರುತಿವಾಕ್ಯಾನುಸಾರ "ವಿತ್ತ" ಶಬ್ದವು "ಜ್ಞಾನಿಗಳಿಂದ ಸರಿಯಾಗಿ ತಿಳಿಯಲ್ಪಡುವವನು" ಎಂದು ವಿವರಿಸುತ್ತದೆ. "ದಿಹ" ಎಂಬ ಧಾತುವಿನಿಂದ ನಿಷ್ಪನ್ನವಾದದ್ದು "ದೇಹ ! ಅಂದರೆ ಬೆಳವಣಿಗೆ ಅಥವಾ ಉಪಚಯುವನ್ನು ಹೊಂದುವುದು ಎಂದರ್ಥ. "ಗೃ" ಧಾತುವಿಗೆ "ನಿಗರಣ" ಅಥವಾ "ನುಂಗುವುದು" ಎಂಬ ಅರ್ಥವಿದೆ. "ಆಗಾರ" ಎಂದರೆ "ಜಗತ್ತನ್ನು ನುಂಗುವನು" ಎಂದರ್ಥ. "ಧೃ" ಧಾತುವಿಗೆ "ಭಯಪಡಿಸು" ಮತ್ತು "ಸೀಳು" ಎಂಬರ್ಥಗಳಿವೆ. ಸಮಸ್ತರೂ ಅವನಿಗೆ ಭಯಪಡುವರು. ಶ್ರೀಹರಿಯು ಪಾಪ ಪ್ರಕ್ಷಾಳಕನು, ಅಂದರೆ ದುರಿತ ರಾಶಿಗಳನ್ನು ನಿಶ್ಶೇಷವಾಗಿ ಸೀಳುವನು. ಈ ಭಗವದ್ರೂಪಗಳಿಗೆ "ದಾರಾ" ಎಂತ ನಾಮ. ಶ್ರೀಹರಿಯು ಸರ್ವತ್ರ ವ್ಯಾಪ್ತನು ಹಾಗೂ ಆವರಣ ರಹಿತನು. ಈ ಕಾರಣದಿಂದ "ಅಪತ್ಯ" ನಾಮಕನು. ಜಗತ್ತನ್ನು ಸುಖಗೊಳಿಸುವನು ಹಾಗೂ ಸಂರಕ್ಷಿಸುವನು. ಇದು ಮಿತ್ರನ ಲಕ್ಷಣ. ಆದ್ದರಿಂದ "ಮಿತ್ರ" ನಾಮಕನು. ಜಗತ್ಕಾರಣನಾದ್ದರಿಂದ "ಆದಿ" ಶಬ್ದವಾಚ್ಯನು. ಪೋಷಕ

ವಸ್ತುಗಳಲ್ಲಿ ವಿದ್ಯಮಾನನಾಗಿರುವುದರಿಂದ "ಭಾರ್ಯಾ" ಎಂತ ಅರ್ಥ. ಜೀವರನ್ನು ಅನುಸರಿಸಿ ಪ್ರಕಟನಾಗುವನು. ಇದರಿಂದ "ಅನುಜ" ಎಂತ ಕರೆಸ ತಾನೆ. "ಪೂಯಶೋಣ" ಮುಂತಾದ ನರಕಾದ್ಯನರ್ಥಗಳಿಂದ ದೂರ ಮಾಡುವನು. ತತ್ಕಾರಣದಿಂದ "ಪುತ್ರ"ನೆನಿಸುವನು. ಸಾಧುತನವಿರುವುರಿಂದ "ಸತೀ" ನಾಮಕನು. ಸುಖಪ್ರದನಾದ್ದರಿಂದ "ನಂದನ" ಎಂಬ ಹೆಸರು. ವಿಸ್ತಾರವನ್ನು ಹೊಂದುವುದರಿಂದ "ತನಯ" ಎಂದು ನಾಮ. ಎಲ್ಲರಿಗೂ ಶ್ರೀಹರಿಯೇ ಗತಿದಾಯಕನು. ತೇಜೋರೂಪಿಯು. ಆನಂದಮಯನು. ಆದ್ದರಿಂದ "ಅರ್ಭಕ" ಎಂತ ನಾಮ. ಪಾಲಕನಾದ್ದರಿಂದ "ಪಿತ" ನಾಮವುಳ್ಳವನು. ಮಹಾಮಹಿಮನು, ಜಗತ್ತಿನಲ್ಲಿ ಓತಪ್ರೋತನಾಗಿ ವ್ಯಾಪಿಸಿದ್ದಾನೆ. ಈ ಕಾರಣದಿಂದ "ಪಿತಾಮಹ" ನೆಂಬ ನಾಮಧೇಯನು. ಇಂತು ಆಯಾಯಾ ಅಧಿಷ್ಠಾನಗಳ ಹೆಸರಿನಿಂದಲೇ ವಾಚ್ಯನಾಗಿದ್ದಾನೆ. ಇದರಿಂದ "ತತ್ತದಾಹ್ವಯನಾಗಿ ಕರೆಸುತ" ಎಂಬ ಪ್ರಯೋಗವು ಅತ್ಯಂತ ಸಂಗತ ಹಾಗೂ ಸಮಂಜಸ ॥೧೦॥

## (ಈ) "ಗುರು ಹೃದಯ ಪ್ರಕಾಶಿಕಾ" ವ್ಯಾಖ್ಯಾನ :—

ಸರ್ವತ್ರ ಚಿಂತನಾಪ್ರಕಾರ ನಿರೂಪಿಸುತ್ತಾರೆ— "ವಿತ್ತ"ವೆಂದು. ವಿತ್ತವೆಂಬ ಧನ, ದೇಹವೆಂಬ ಶರೀರ, ದಾರಾ ಎಂಬ ಹೆಂಡತಿ (ಹೆಣ್ಣು = ಕಾರ್ಯನಡಿಸುವರು. ಸ್ತ್ರೀರು ಹೀನಶಬ್ದದ ತದ್ಭವವು ಹೆಣ್ಣೆಂಬ ಶಬ್ದ ಹೆಂಡತಿಯಾಗುತ್ತೆ) ಅಪತ್ಯ ಎಂಬ ಮಕ್ಕಳು. ಮಿತ್ರರೆಂಬ ಸ್ನೇಹಿತರು, ಮೊದಲಾದವರಲ್ಲೂ. ಸತ್ವ ರಜಸ್ತಮ ಎಂಬ ತ್ರಿಗುಣಗಳಲ್ಲೂ. ಚಿತ್ತವೆಂಬ ಪೂರ್ವಸ್ಮರಣೆ ಮಾಡುವ ಮನಸ್ಸಿನ ಭಾಗ. ಬುದ್ಧಿ ಎಂದರೆ, ಹೀಗೆ ಸರಿ ಎಂದು ನಿಶ್ಚೈಸುವ ಭಾಗ. ಇದು ಹ್ಯಾಗೆಂದು ಯೋಚಿಸುವ ಮನೋಭಾಗ. ತಾನೇ 'ಇದಕ್ಕೆ ಕರ್ತನೆಂಬ ಅಹಂಕಾರಭಾವ, ತಿಳಿವಳಿಕೆ ಎಂಬ ಚೇತನಭಾಗ ಈ ಮನೋವೃತ್ತಿ ಐದರಲ್ಲೂ (ಇದು ಆದಿ ಪದದಿಂದ ಉಕ್ತವು). ಇಂದ್ರಿಯಗಳೆಂಬ ತ್ವಕ್ಕೆನಿಸುವ ತೊಗಟೆ ಚರ್ಮವೆಂಬ ತೊಗಲು, ಮಾಂಸವೆಂಬ ಖಂಡ, ಮುಂತಾದ ಸಪ್ತ ಧಾತು ಸಂಬಂಧವಾದ ಕಣ್ಣು, ಕಿವಿ, ಮೂಗು, ನಾಲಿಗೆ

ಮತ್ತು ಚರ್ಮವೆಂಬ ಪಂಚ ಜ್ಞಾನಕರಣಗಳಲ್ಲೂ, ಕೈ, ಕಾಲು, ಬಾಯಿ, ಅಪಾನಗಳೆಂಬ ಕರ್ಮೇಂದ್ರಿಯಗಳಲ್ಲೂ. ಆಯಾಯಾ ಹೆಸರಿನಿಂದ ಕರೆಸುತ್ತಾ, ಸತ್ಯಸಂಕಲ್ಪ ಪ್ರಕಾರ ನಿತ್ಯದಲ್ಲೂ, ಸರ್ವತ್ರ ಕ್ರಿಯಾ ವ್ಯಕ್ತಮಾಡಿ, ಇತರರಿಂದ ಮಾಡಿಸುವನೆಂದು ಸ್ಮರಿಸು ॥೧೦॥

# ಸರ್ವವ್ಯಾಖ್ಯಾನಸಾರಸಂಗ್ರಹ

ನಾವು ಶ್ರಮಪಟ್ಟು ಸಂಪಾದಿಸುವ ದ್ರವ್ಯವು "ವಿತ್ತ" ವೆನಿಸುವುದು. ಚಿನ್ನ, ಬೆಳ್ಳಿ ಮುಂತಾದ ಅಮೂಲ್ಯ ಲೋಹಗಳಿಂದ ನಿರ್ಮಿತವಾದ ಒಡವೆಗಳೂ ವಿತ್ತಗಳೇ, ನಾನಾ ವಿಧವಾದ ಭೋಗ ಸಾಮಗ್ರಿಗಳೂ ವಿತ್ತದ ಗುಂಪಿಗೇ ಸೇರಿವೆ. "ಜ್ಞಾನಿಗಳಿಂದ ತಿಳಿಯಲ್ಪಡತಕ್ಕ ಪರಮೋತ್ಕೃಷ್ಟನಾದ ಶ್ರೀ ಪರಮಾತ್ಮನಿಗೆ" ವಿತ್ತವೆಂದು ಶ್ರುತ್ಯರ್ಥವು ತಿಳಿಸುತ್ತದೆ. ಸಾಧನಕ್ಕೆ ಸಹಕಾರಿಯಾದ ನಮ್ಮ ಸ್ಥೂಲಶರೀರವು ಪಾಂಚಭೌತಿಕವಾದ್ದು. ಈ ಸಾಧನ ಶರೀರವು ಬಿಂಬರೂಪಿಯಾದ ಶ್ರೀಹರಿಯ ನಿವಾಸಸ್ಥಾನವು. ನಾವು ವಾಸಿಸುವ ಮನೆ ನಮಗೆ ಆಶ್ರಯಸ್ಥಾನವು. ಕೈ ಹಿಡಿದ ಹೆಂಡತಿ (ದ್ವಾರಾ) ಗೃಹಕೃತ್ಯದಲ್ಲಿ ಮುಖ್ಯಳಾಗಿದ್ದು, ಸತ್ಸಾಧನ ಮಾರ್ಗಕ್ಕೆ ಸಹಕಾರಿಯಾಗಿರುವಳು. ತನುಸಂಬಂಧಿಗಳಾದ ಪುತ್ರರು ಮತ್ತು ಪುತ್ರಿಯರು, (ಅಪತ್ಯ). ನಮ್ಮ ಆಪತ್ಕಾಲಕ್ಕೆ ಒದಗುವ ಸ್ನೇಹಿತರ ವರ್ಗ (ಮಿತ್ರ). ಆದಿ ಶಬ್ದದಿಂದ ನಮಗೆ ಸಂಬಧಿಸಿದ ಎಲ್ಲರೂ ಗ್ರಾಹ್ಯ. ಇವರೆಲ್ಲರೂ ಪರಿವಾರಭೂತರು. ಇದರಿಂದಲೇ ಶ್ರೀ ದಾಸರಾಯರು ತಮ್ಮ ಕೀರ್ತನೆಯೊಂದರಲ್ಲಿ– **"ಹೆಂಡರು ಮಕ್ಕಳು ನಿನ್ನ ತೊಂಡರೆಂಬೋರೋ"** ಎಂದಿದ್ದಾರೆ. ಇಂತು, ವಿತ್ತವು ದಾನ ಧರ್ಮಗಳಲ್ಲಿ, ಸತ್ಕರ್ಮಗಳನ್ನು ಮಾಡುವುದರಲ್ಲಿ ಸದ್ವಿನಿಯೋಗವಾಗಬೇಕು. ಭಗವಂತನಿಂದ ದತ್ತವಾದ ಈ ಶರೀರವು ಸತ್ಸಾಧನೆಗೆ ಸಹಕಾರಿಯಾಗಬೇಕು. ನಾವು ವಾಸಿಸುವ ಮನೆ. ಭಗವತ್ಪೂಜಾ, ಅತಿಥಿ ಅಭ್ಯಾಗತರ ಸೇವಾ, ಅನ್ನದಾನಾದಿ ಸತ್ಕರ್ಮಗಳಿಗೆ ಕೇಂದ್ರ ಸ್ಥಾನವಾಗಿರಬೇಕು.

ಅಂತೆಯೇ ಪರಿವಾರಭೂತರಾದ, ಹೆಂಡತಿ, ಮಕ್ಕಳು, ಸ್ನೇಹಿತರು. ತನುಸಂಬಂಧಿಗಳಾದ ನೆಂಟರು ಇತ್ಯಾದಿ ವರ್ಗ ಸತ್ಕಾರ್ಯಗಳಲ್ಲಿ ನಮಗೆ ಅನು ಕೂಲರಾಗಿರಬೇಕು. ಹೀಗೆಯೇ ಸತ್ವ. ರಜಸ್ತಮಗಳೆಂಬ ಗುಣತ್ರಯಗಳು, ಪಂಚಮನೋವೃತ್ತಿಗಳಾದ ಬುದ್ಧಿ (ನಿಶ್ಚಯಜ್ಞಾನ), ಚಿತ್ತ (ಸಂಕಲ್ಪಶಕ್ತಿ) ಮನಸ್ಸು (ವಿಷಯಗ್ರಹಣಶಕ್ತಿ), ಚೇತನ (ಮತಿ ಅಥವಾ ತಿಳಿವಳಿಕೆ) ಮತ್ತು ಇದಕ್ಕೆ ತಾನೇ ಕರ್ತನು, ಇದು ನನಗೆ ಸಂಬಂಧಿಸಿದ್ದು ಎನ್ನುವ ಅಹಂಕಾರ ಮಮ ಕಾರಗಳು, ಕಿವಿ, ಚರ್ಮ, ಕಣ್ಣು, ನಾಲಿಗೆ ಮತ್ತು ಮೂಗು ಎಂಬ ಪಂಚ ಜ್ಞಾನೇದ್ರಿಯಗಳು, ಅವುಗಳಿಗೆ ವಿಷಯಗಳಾದ ಶಬ್ದ, ಸ್ಪರ್ಶ, ರೂಪ, ರಸ ಮತ್ತು ಗಂಧಗಳೆಂಬ ತನ್ಮಾತ್ರಾರೂಪಗಳಿಂದ ಜನ್ಯವಾದ ಜ್ಞಾನ, ಹಸ್ತ, ಪಾದ, ವಾಕ್ಕು, ಗುದ ಮತ್ತು ಉಪಸ್ಥ ಎಂಬ ಪಂಚ ಕರ್ಮೇಂದ್ರಿಯ ಗಳು, ಅವುಗಳ ದ್ವಾರಾ ನಡೆಯುತ್ತಿರುವ ದಾನ-ಸ್ವೀಕಾರ, ಗಮನಾ ಗಮನ, ಸಂಭಾಷಣೆ, ಮಲಮೂತ್ರ ವಿಸರ್ಜನೆ ಮುಂತಾದ ಕ್ರಿಯಾವಿಶೇಷ ಗಳು, ಇತ್ಯಾದಿ ಮಾಧ್ಯಮಗಳೆಲ್ಲಾ ಶ್ರೀ ಪರಮಾತ್ಮನು ಆಯಾಯಾ ಅಧಿಷ್ಠಾನಗಳ ಹೆಸರಿನಿಂದಲೇ ಕರೆಯಿಸಿಕೊಳುತ್ತಾ, ತನ್ನಾಮಕನಾಗಿ, ತತ್ತತ್‌ಶಬ್ದವಾಚ್ಯನಾಗಿ ವ್ಯಾಪ್ತನಾಗಿದ್ದಾನೆ. ಸರ್ವನಿಯಾಮಕನಾದ ಭಗವಂತನು ಹೀಗೆ ಸಕಲಾಧಿಷ್ಠಾನಗಳಲ್ಲಿಯೂ ವ್ಯಾಪ್ತನಾಗಿರುವುದರಿಂದಲೇ, ಅವುಗಳ ಅಸ್ತಿತ್ವ ಹಾಗೂ ಅವುಗಳ ಸ್ವರೂಪಧರ್ಮಗಳಾದ ಕರ್ಮ ವಿಶೇಷ ಗಳು. ಅಭಿವ್ಯಕ್ತವಾಗುವುವು. ಶ್ರೀ ಪರಮಾತ್ಮನು ಸತ್ಯಸಂಕಲ್ಪನು. ಅವನ ಇಚ್ಛೆಯೇ ಅಂತಿಮ ನಿರ್ಣಯವು. ಶ್ರೀಹರಿಯ ಸತ್ಯಸಂಕಲ್ಪಾನು ಸಾರವಾಗಿಯೇ ಜಗದ್ವ್ಯಾಪಾರಗಳೆಲ್ಲವೂ ಯಥಾರೀತಿಯಲ್ಲಿ, ಸತ್ಯಭೂತ ವಾಗಿಯೇ ನಡೆಯುತ್ತಿರುವುವು. ವೈಷಮ್ಯ ನೈರ್ಘೃಣ್ಯ ಮುಂತಾದ ದೋಷ ಗಳಿಂದ ದೂರನಾದ ಬಿಂಬರೂಪೀ ಶ್ರೀ ಪರಮಾತ್ಮನ ಸತ್ಯಸಂಕಲ್ಪದಂತೆಯೇ ಚೇತನರ ಗುಣಧರ್ಮಗಳ ಅಭಿವ್ಯಕ್ತಿ ಮತ್ತು ಕ್ರಿಯಾದಿಗಳು. ನಡೆಯುತ್ತಿರು ವುವು. ಇದರಿಂದ ಸತ್ಯಸಂಕಲ್ಪನಾದ ಶ್ರೀಹರಿಯ ಆವಾಸಸ್ಥಾನವೆನಿಸಿದ ಈ ಜಗತ್ತೂ ಸತ್ಯಾತ್ಮಕವಾದದ್ದೇ ಹೊರತು ಮಿಥ್ಯ ಅಲ್ಲ, ಇಂತು, ವಿತ್ತ, ದೇಹ, ಮನೆ, ಹೆಂಡತಿ, ಮಕ್ಕಳು, ತನು ಸಂಬಧಿಗಳು, ಸ್ನೇಹಿತರು, ಗುಣ

ತ್ರಯಗಳು, ಚಿತ್ತಾದಿ ಮನೋವೃತ್ತಿಗಳು, ಜ್ಞಾನ ಹಾಗೂ ಕರ್ಮೇಂದ್ರಿಯಗಳು ಇತ್ಯಾದಿ ಸಮಸ್ತ ಅಧಿಷ್ಠಾನಗಳಲ್ಲಿ ಶ್ರೀ ಪರಮಾತ್ಮನು ನಿಯಾಮಕನಾಗಿದ್ದು, ತನ್ನಾಮಕನಾಗಿ, ತತ್ತಚ್ಛಬ್ದವಾಚ್ಯನಾಗಿ ಇದ್ದು, ಸತ್ಯಸಂಕಲ್ಪಾನುಸಾರ (ತನ್ನ ಇಚ್ಛೆಯಂತೆ) ನಿರಂತರದಲ್ಲಿಯೂ ವ್ಯಾಪಾರಗಳನ್ನು ಬಿಂಬರೂಪದಿಂದ ತಾನೇ ಮಾಡಿ (ಪ್ರೇರಕ ರೂಪದಿಂದ), ಆಯಾಯಾ ಅಧಿಷ್ಠಾನಗತ ತತ್ವೇಶರ ದ್ವಾರಾ ಮಾಡಿಸು (ಪ್ರೇರ್ಯರೂಪದಿಂದ)ತ್ತಿರುವನೆಂದು ಜ್ಞಾನಾನುಸಂಧಾನಪೂರ್ವಕ ಅರಿತು, ಅಚಿಂತ್ಯಾದ್ಭುತಶಕ್ತನಾದ ಶ್ರೀ ಪರಮಾತ್ಮನನ್ನು ಸ್ಮರಿಸುತ್ತಿರಬೇಕು-ಎಂದು ತಾತ್ಪರ್ಯವು ॥೧೦॥

## ಪದ್ಯ (೧೧)

**ಮೂಲ :—**

**ಭಾವ ದ್ರವ್ಯಕ್ರಿಯೆಗಳೆನಿಸುವ ।**
**ಈ ವಿಧಾದ್ವೈತ ತ್ರಯಂಗಳ ।**
**ಭಾವಿಸುತ ಸದ್ಭಕ್ತಿಯಲಿ ಸರ್ವತ್ರ ಮರೆಯದಲೆ ॥**
**ತಾವಕನು ತಾನೆಂದು ಪ್ರತಿದಿನ ।**
**ಸೇವಿಸುವ ಭಕ್ತರಿಗೆ ತನ್ನದು ।**
**ಈವ ಕಾವ ಕೃಪಾಳು ಕರಿವರಗೊಲಿದ ತೆರದಂತೆ॥ ॥೧೧॥**

**ಅವತರಣಿಕೆ :—**

ಭಾವಾದ್ವೈತ, ದ್ರವ್ಯಾದ್ವೈತ ಮತ್ತು ಕ್ರಿಯಾದ್ವೈತಗಳೆಂಬ ಅದ್ವೈತತ್ರಯಗಳಲ್ಲಿನಿಯಾಮಕನಾದ ಶ್ರೀಪರಮಾತ್ಮನನ್ನು ಸದ್ಭಕ್ತಿಪುರಸ್ಸರವಾಗಿ ಸರ್ವಕಾಲ, ದೇಶಾದಿಗಳಲ್ಲಿ ನಿತ್ಯವೂ ಧ್ಯಾನಿಸುತ್ತ, ಪ್ರತಿನಿತ್ಯದಲ್ಲಿಯೂ ತನ್ನನ್ನು ಸೇವಿ-

ಸುತ್ತಿರುವ ನಿಜಭಕ್ತವೃಂದಕ್ಕೆ ಸಂರಕ್ಷಕನಾಗಿದ್ದಾನೆಂದು ತಿಳಿದು, ಆವನ ಪಾದ ಪದ್ಮಾರಾಧಕರಾದವರಿಗೆ ತನ್ನನ್ನೇ ಅವರಿಗೆ ಒಪ್ಪಿಸುವನು. ಅಂದರೆ ಭಕ್ತ ಪರಾಧೀನನು ಎಂದರ್ಥ. ಗಜರಾಜನ ದುರಿತವನ್ನು ಪರಿಹರಿಸಿದ ರೀತಿಯಲ್ಲಿ ಆ ಕರಿನರದನು ಪರಮ ಕೃಪಾಳುವೆಂದು ಹೇಳುತ್ತಾರೆ–**"ಭಾವದ್ರವ್ಯ"** -ಎಂಬ ಪ್ರಸಕ್ತ ಸಂಧಿಗತ ೧೧ನೆಯ ಈ ಪದ್ಯದಿಂದ ॥೧೧॥

**ಪ್ರತಿಪದಾರ್ಥ :—**

**ಭಾವಾದ್ವೈತ** = ಸತ್ವಾದಿಗುಣಗಳ ಸಂಬಂಧದಿಂದ ಪ್ರಕೃತಿಯಲ್ಲಿ ಉಂಟಾಗುವ ವಿಕಾರದಿಂದ ಉತ್ಪನ್ನವಾದ ವಸ್ತುಗಳಲ್ಲಿಯೂ ಮತ್ತು ತತ್ಸಂಬಧ ಗುಣಾಖ್ಯ ಕಾರ್ಯಗಳಲ್ಲಿ ಇರುವ ಭಗವದ್ರೂಪಗಳಿಗೆ ಐಕ್ಯಚಿಂತನೆಮಾಡುವ ವಿಧಾನಕ್ಕೆ "ಭಾವಾದ್ವೈತ" ವೆಂದು ಹೆಸರು. **ದ್ರವ್ಯಾದ್ವೈತ** = ಆತ್ಮ ಜಾಯಾದಿಗಳಲ್ಲಿ, ಅರ್ಥಕಾಮಾದಿಗಳಲ್ಲಿ ವಿದ್ಯಮಾನಗಳಾದ ಭಗವದ್ರೂಪ ಗಳಿಗೆ ಐಕ್ಯಚಿಂತನೆ, ಇದು ಭಗವದಧೀನವೆಂಬ ಜ್ಞಾನವೇ ದ್ರವ್ಯಾದ್ವೈತ, **ಕ್ರಿಯಾದ್ವೈತ** = ಮನೋವಾಕ್ಕಾಯಗಳಿಂದ ಮಾಡಿದ ಸರ್ವಕರ್ಮಗಳಲ್ಲಿ ವಿದ್ಯಮಾನವಾದ ಭಗವದ್ರೂಪಗಳಿಗೆ ಪರಸ್ಪರ ಐಕ್ಯಚಿಂತನರೂಪವಾದ ಅರ್ಪಣ ಕ್ರಿಯೆಯೇ ಕ್ರಿಯಾದ್ವೈತವೆನಿಸುವುದು. **ಈ ವಿಧ** = ಈ ರೀತಿಯಲ್ಲಿರುವ **ಅದ್ವೈತತ್ರಯಂಗಳ** = ಮೂರುಪ್ರಕಾರವಾದ ಅದ್ವೈತ ಕ್ರಿಯಾವಿಶೇಷಗಳನ್ನು **ಸದ್ಭಕ್ತಿಯುಲಿ** = ಅವಿಚ್ಛಿನ್ನವಾದ ಸುದೃಢವಾದ ಭಕ್ತಿ ಭಾವದಿಂದ **ಭಾವಿಸುತ** = ಮನಸಾ ಚಿಂತಿಸುತ್ತಾ **ಸರ್ವತ್ರ** = ಸರ್ವದೇಶ ಮತ್ತು ಕಾಲಗಳಲ್ಲಿಯೂ **ಮರೆಯದಲೆ** = ಮರೆಯದೆ (ಸದಾ ಜ್ಞಾಪಕದಲ್ಲಿಟ್ಟುಕೊಂಡು) **ತಾವಕನು** = ಜೀವನು ಭಗವದಧೀನನೆಂದು (ನಾನು ನಿನ್ನವನೆಂಬ ಭಾವದಿಂದ) **ಪ್ರತಿದಿನ** = ಪ್ರತಿ ದಿವಸದಲ್ಲೂ. ಲವಾದಿ ಕಾಲದಲ್ಲೂ **ಸೇವಿಸುವ** = ಪೂರ್ವೋಕ್ತ ಅನುಸಂಧಾನದಿಂದ ಸೇವಾ ಮಾಡುವ **ಭಕ್ತರಿಗೆ** = ಭಗವದ್ಭಕ್ತರಿಗೆ **ತನ್ನನ್ನು ಈವ** = ತನ್ನ ನಿಜರೂಪವಾದ ಸಂದರ್ಶನ ಭಾಗ್ಯವನ್ನು ಅಪರೋಕ್ಷ ದ್ವಾರಾ ಕೊಟ್ಟು (ಅಪರೋಕ್ಷ ಜ್ಞಾನವನ್ನು ಅನುಗ್ರಹಿಸಿ) **ಕರಿವರ** = ಗಜೇಂದ್ರನಿಗೆ **ಒಲಿದ ತೆರದಂತೆ** = ಆಪತ್ಕಾಲದಲ್ಲಿ ಒದಗಿ, ವಿಪತ್ತನ್ನು ನಿವಾರಿಸಿ, ಉದ್ಧರಿಸಿ

ದೋಷಾದಿಯಲ್ಲಿ **ಕೃಪಾಳು**=ಕರುಣಾಸಮುದ್ರನಾದ ಶ್ರೀ ಪರಮಾತ್ಮನು **ಕಾವ**=ಸಂರಕ್ಷಿಸುವನು. ॥೧೧॥

## ವ್ಯಾಖ್ಯಾನಗಳು

### (೧) ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ :—

ಅದ್ವೈತತ್ರಯದ ಅನುಸಂಧಾನ ತಿಳಿಯಬೇಕೆಂದು ಹೇಳತಾರೆ:—

**"ಕಾರ್ಯಕಾರಣವಸ್ತ್ವೈಕ್ಯ ದರ್ಶನಂ ಪಟತಂತುವತ್ ||**
**ಅವಸ್ತುತ್ವಾದ್ವಿಕಲ್ಪಸ್ಯ ಭಾವಾದ್ವೈತಂ ತದುಚ್ಯತೇ|| ||೧||**

**ಆತ್ಮಜಾಯಾ ಸುತಾದೀನಾಮನ್ಯೇಷಾಂ ಸರ್ವದೇಹಿನಾಂ |**
**ಯಚ್ಛಾರ್ಥ ಕಾಮಯೋರೈಕ್ಯಂ ದ್ರವ್ಯಾದ್ವೈತಂ ತದುಚ್ಯತೇ ||೨||**

**ಯದ್ಬ್ರಹಣಿ ಪರೇ ಸಾಕ್ಷಾತ್ಸರ್ವಕರ್ಮ ಸಮರ್ಪಣಂ |**
**ಮನೋವಾಕ್ತನುಭಿಃ ಪಾರ್ಥ ಕ್ರಿಯಾದ್ವೈತಂ ತದುಚ್ಯತೇ ||೩||**

(೧) **ಭಾವಾದ್ವೈತ** ಯಾವದೆಂದರೆ :—

ಮಹದಾದಿಕಾರ್ಯಗಳಲ್ಲಿ ಪ್ರಕೃತಿ ತದ್ಗುಣಾಖ್ಯ ಕಾರ್ಯಗಳಲ್ಲಿ ಇದ್ದಂಥಾ ಭಗವದ್ರೂಪಗಳಿಗೆ ಐಕ್ಯಚಿಂತನಿ ಮಾಡೋದೇ **ಭಾವಾದ್ವೈತ** ಎಂತ ಹೆಸರು.

(೨) **ದ್ರವ್ಯಾದ್ವೈತ** ವೆಂದರೆ :—

ಆತ್ಮಜಾಯಾದಿಗಳಲ್ಲಿ ಅರ್ಥಕಾಮಾದಿಗಳಲ್ಲಿ ವಿದ್ಯಮಾನವಾದ ಭಗವದ್ರೂಪಗಳಿಗೆ ಪರಸ್ಪರ ಐಕ್ಯಚಿಂತನೆ. ಇದು ಭಗವಧೀನ ಎಂತ **ತಿಳಿಯೋಣವೇ ದ್ರವ್ಯಾದ್ವೈತ.**

(೩) **ಕ್ರಿಯಾದ್ವೈತ** ವೆಂದರೆ :—

ಮನೋವಾಕ್ಕಾಯಗಳಿಂದ ಮಾಡಿದ ಸರ್ವ ಕರ್ಮಗಳಲ್ಲಿ ವಿದ್ಯಮಾನ ವಾದ ಭಗವದ್ರೂಪಗಳಿಗೆ ಪರಸ್ಪರ ಐಕ್ಯ ಚಿಂತನ ಅರ್ಪಣವೇ **ಕ್ರಿಯಾದ್ವೈತ.** ಇವು **ಅದ್ವೈತತ್ರಯಗಳು.**

**ಭಾವ :—**

ಮಹದಾದಿ ತತ್ವಗಳು, ಇದಕ್ಕೆ ಉಪಾದಾನ ಕಾರಣಗಳಾದ ಗುಣ ತ್ರಯಗಳು, ಮೂಲಜಡಪ್ರಕೃತಿ-ಇವು ಯಾವತ್ತೂ **ಭಾವ**ಗಳು.

**ದ್ರವ್ಯ :—**

ಆತ್ಮಜಾಯಾದಿಗಳು. ಅರ್ಥಜಡಗಳು. ಇವು ಯಾವತ್ತೂ **ದ್ರವ್ಯ**ಗಳು.

**ಕ್ರಿಯೆ :—**

ಮನೋವಾಕ್ಕಾಯಗಳಿಂದ ಪರಬ್ರಹ್ಮನಲ್ಲಿ ಸರ್ವಕರ್ಮಸಮರ್ಪಣ. ಇದು-**ಕ್ರಿಯಾ.** ಅಂತು ಈ ಮೂರು ಪ್ರಕಾರ **ಭಾಗವತದಲ್ಲಿ** ಉಕ್ತ ವಾಗಿದೆ,

**ಪ್ರಕಾರಾಂತರ ವಿವರ :—**

**ಭಾವ**-ಲೋಕದಲ್ಲಿ ಇರತಕ್ಕದ್ದು ಎರಡು. ಅದು ದಾವದೆಂದರೆ :—

**ದ್ರವ್ಯ**-ಜಡಪ್ರಕೃತ್ಯಾತ್ಮಕ ದ್ರವ್ಯ ಒಂದು.

**ಕ್ರಿಯಾ**-ವ್ಯಾಪಾರಗಳು ಮಾಡತಕ್ಕ ಜೀವನ ಸಮುದಾಯ ಒಂದು. ಅಂತು ಎರಡು. ಇದರಿಂದ ಸ್ಥಾವರ ಜಂಗಮಗಳು ಯಾವತ್ತು ಬಂದಂತಾ ಯಿತು. **ಅವಶಿಷ್ಟ ಉಳಿಯಲಿಲ್ಲ.** ಇದರಲ್ಲಿ **ವಿಭಾಗ :—**

(೧) **ದ್ರವ್ಯ** ಶಬ್ದದಿಂದ ಮಹದಾದಿ ತತ್ತ್ವಗಳ ಕಾರ್ಯಗಳು ಇದಕ್ಕೆ ಉಪಾದಾನಕಾರಣವಾದ ಮೂಲಪ್ರಕೃತಿ ಬಂದಂತಾಯಿತು.

(೨) **ಕ್ರಿಯಾ** ಶಬ್ದದಿಂದ ವ್ಯಾಪಾರಮಾಡತಕ್ಕ ಸರ್ವಜೀವರು. ಆಯಾ ಜೀವರು ಮಾಡತಕ್ಕ ಕರ್ಮರೂಪವಾದ ವ್ಯಾಪಾರಗಳು ಎರಡು ಬಂದತಾಯಿತು. ಇಂತು ಮೂರು. ಇದರಿಂದ ಸರ್ವದ್ರವ್ಯವು ಸರ್ವಪ್ರಾಣಿಗಳಿಗೆ ಇರತಕ್ಕ ಪದಾರ್ಥಗಳು. ಸರ್ವಪ್ರಾಣಿಗಳೂ ಮಾಡತಕ್ಕ ವ್ಯಾಪಾರ ರೂಪವಾದ ಕರ್ಮಗಳು ಬರೋದಾಯಿತು. ಇದರಿಂದಲೇ

(೧) ಸಾತ್ವಿಕಾದಿ ಭೇದಗಳಿಂದ **ತ್ರಿವಿಧ ದ್ರವ್ಯಗಳು.**

(೨) ಸಾತ್ವಿಕಾದಿ ಭೇದಗಳಿಂದ ಆತ್ಮಜಾಯಾಸುತಾದಿ **ತ್ರಿವಿಧ ಜೀವರು.**

(೩) ಸಾತ್ವಿಕಾದಿ ಭೇದಗಳಿಂದ **ತ್ರಿವಿಧಕರ್ಮಗಳು** ಬರೋದಾಯಿತು ಇಂತು ಈ ಪ್ರಕಾರಗಳೆನಿಸುವ (ಈವಿಧ) (೧) ದ್ರವ್ಯಾದ್ವೈತವೆಂತಲೂ, (ಮಹದಾದಿ) (೨) ಪ್ರಾಣಿಗಳೂ ಎಂತಲೂ, (ದ್ರವ್ಯಾದಿ) (೩) ಕ್ರಿಯಾ ಎಂತಲೂ (ಕರ್ಮ) ಈ ಪ್ರಕಾರ ಎನಿಸುವ ಮೂರು ವಿಧ ಅಧಿಷ್ಠಾನಗಳ (ತ್ರಯಂಗಳ) ಪರಸ್ಪರ ಭೇಧಗಳ ತಿಳಿದು, ಈ ಮೂರರಲ್ಲಿ ವಿದ್ಯಮಾನನಾದಂಥಾ ಶ್ರೀಪರಮಾತ್ಮ ಒಬ್ಬನೇಹೊರತು ದ್ವೈತಸಲ್ಲ. ಇದೇ "ಅದ್ವೈತ" ಶಬ್ದಾರ್ಥವು. ಒಬ್ಬನೇ ಪರಮಾತ್ಮ ಸರ್ವತ್ರ ವ್ಯಾಪ್ತ. ಅಧಿಷ್ಠಾನಗಳು ಯಾವತ್ತೂ ಅಧೀನವೆಂದು ಪರಸ್ಪರ ಭಗವದ್ರೂಪಗಳಿಗೆ ಐಕ್ಯಚಿಂತನರೂಪದಿಂದ ಸರ್ವವೂ ಸಮರ್ಪಿಸುತ್ತಾ, ಇಂತಹ ಅನುಸಂಧಾನ ಸರ್ವದಾ ಮನಸ್ಸಿನಿಂದ ಭಾವಿಸುತ್ತಾ (ಭಾವಿಸುತಾ), ಅವಿಚ್ಛಿನ್ನ ಭಕ್ತಿಯಿಂದ (ಸದ್ಭಕ್ತಿಯಲಿ), ಸರ್ವ ಚರಾಚರ ಅಧಿಷ್ಠಾನಗತ ಶ್ರೀ ಪರಮಾತ್ಮನ (ಸರ್ವತ್ರ) ಮರೆಯದೆ ಪರಸ್ಪರ ಭಗವದ್ರೂಪಗಳಿಗೆ ಐಕ್ಯ ಚಿಂತನಿ ಮಾಡುತ್ತಾ, ಶ್ರೀ ಭಗವಧೀನನು (ತಾವಕನು) ಆ ಭಗವಧೀನತ್ವಿದಿಂದ ಮಾಡತಕ್ಕವನು (ಆವನೆನಿಪ) ತಾನು ಎಂದು ತಿಳಿದವನಾಗಿ (ನಾನೆಂದು), ಪ್ರತಿದಿನ ಲವಾದಿ ಕಾಲದಲ್ಲೂ (ಪ್ರತಿ

ದಿವಸ), ಇಂಥಾ ಅನುಸಂಧಾನದಿಂದ ಸೇವಾಮಾಡತಕ್ಕ ದಾವನೋ ಅವನೇ ಭಗವದ್ಭಕ್ತ. (ಸೇವಿಸುವ) ಇಂಥಾ ಭಕ್ತಜನರಿಗೆ (ಭಕ್ತರಿಗೆ) ದಯಾ ಸಮುದ್ರನಾದ ಪರಮಾತ್ಮ (ಕೃಪಾಳು) ತನ್ನ ರೂಪವನ್ನು ಅಪರೋಕ್ಷದಿಂದ ದರ್ಶನಕೊಟ್ಟು (ತನ್ನನ್ನು ಈವ), ಸಂರಕ್ಷಣೆಮಾಡುವ (ಕಾವ) ಗಜೇಂದ್ರ ನಿಗೆ ಬಲದೋಪಾದಿಯಲ್ಲಿ (ಕರಿವರಗೊಲಿದ ತೆರನಂತೆ) ಸಂರಕ್ಷಣೆ ಮಾಡತಾನೆ. ಗಜೇಂದ್ರ ದಾವ ಭಾವದಿಂದ ಶ್ರೀ ಪರಮಾತ್ಮನಲ್ಲಿ ಮನಸ್ಸು ಇಟ್ಟನೋ ಆ ಪ್ರಕಾರ ಶ್ರೀ ಪರಮಾತ್ಮನಲ್ಲಿ ಮನಸ್ಸು ಇಡಬೇಕು ಎಂತ ತಾತ್ಪರ್ಯ ॥೧೧॥

## (೨) "ಭಾವಪ್ರಕಾಶಿಕೆ" ವ್ಯಾಖ್ಯಾನ :—

ಭಾವಾದ್ವೈತ, ದ್ರವ್ಯಾದ್ವೈತ ಮತ್ತು ಕ್ರಿಯಾದ್ವೈತವೆಂಬ ಮೂರು ಅದ್ವೈತಗಳನ್ನು ಭಾವಿಸಬೇಕು. ದಾರಗಳನ್ನು ನೇಯಿದು ವಸ್ತ್ರಗಳನ್ನಾಗಿ ಹ್ಯಾಗೆ ಮಾಡುವರೋ, ಬೇರೆಯಾದರೆ ದಾರವೆನ್ನುವರು. ನೇಯಿದು ವಸ್ತ್ರ ವಾದ ಮೇಲೆ ದಾರಗಳೇ ಅಡ್ಡವಾಗಿಯೂ ಉದ್ದವಾಗಿಯೂ ಹೆಣದಿದ್ದರೂ, ಅದನ್ನು ವಸ್ತ್ರವೆನ್ನುವರೋ, ವಸ್ತ್ರಕ್ಕೂ ದಾರಗಳಿಗೂ ಹೇಗೆ ಭೇದವೋ, ಅದರಂತೆಯೇ ವಿಶ್ವರೂಪನಾದ ಶ್ರೀ ಪರಮಾತ್ಮನಿಗೆ ಜಗತ್ತಿನ್ನ ದಾರಗಳಂತೆ ಖಂಡರೂಪಿಯಾಗಿ ವ್ಯಾಪಿಸಿಕೊಂಡು, ಅಖಂಡರೂಪದಿಂದ ಪ್ರಪಂಚದಲ್ಲಿ ವ್ಯಾಪ್ತನಾಗಿದ್ದಾನೆ. ಆದುದರಿಂದಲೇ ಪರಮಾತ್ಮನಿಗೆ "ವಿಶ್ವ"ನೆಂದು ಹೆಸರು ಜೀವನಿಗೂ ಪರಮಾತ್ಮನಿಗೂ ದಾರಗಳಿಗೂ ಮತ್ತು ವಸ್ತ್ರಗಳಿಗೂ ಭೇದವಿದ್ದಂತೆ ಭೇದ ಉಂಟೆಂದು ಭಾವಿಸುವುದೇ ಭಾವಾದ್ವೈತ. ತಾನೂ, ತನ್ನ ಹೆಂಡತಿ ಮಕ್ಕಳೂ ಮೊದಲಾದವರು ಮಾಡುವುದೂ, ಮೊದಲಾದ ಎಲ್ಲಾ ಕಾರ್ಯ ಗಳೂ, ಒಬ್ಬರಿಂದೊಬ್ಬರಿಗೆ ಉಪಕಾರ ಪ್ರತ್ಯುಪಕಾರವಾದ ಕ್ರಿಯೆಗಳ ನ್ನೆಲ್ಲಾ ಶ್ರೀ ಪರಮಾತ್ಮನೇ ಮಾಡಿಸುವನು ಎಂದು ಎಲ್ಲಾಕಡೆಯಲ್ಲಿಯೂ ಇರುವ ಭಗವದ್ರೂಪಗಳನ್ನು ಒಂದಾಗಿ ಭಾವಿಸುವುದಕ್ಕೆ ದ್ರವ್ಯಾದ್ವೈತವೆಂದು ಹೆಸರು. ತಾನು ಮಾಡುವ ಸರ್ವಕರ್ಮಗಳನ್ನು ತನ್ನಳೊಳಗಿದ್ದ ಪರಮಾ ತ್ಮನೇ ಮಾಡಿಮಾಡಿಸಿದನೆಂದು ಭಾವಿಸಿ. ತನ್ನ ಸ್ವಾತಂತ್ರ್ಯಕರ್ತೃತ್ವವನ್ನು ಬಿಟ್ಟು ಸರ್ವಕರ್ಮಗಳನ್ನು ಪರಮಾತ್ಮನಿಗೆ ಅರ್ಪಿಸುವುದೇ ಕ್ರಿಯಾದ್ವೈತವು. ಈ

ಪ್ರಕಾರ ಮೂರು ವಿಧ ಅದ್ವೈತಗಳನ್ನು ಚಿಂತಿಸುತ್ತ, ನಿಷ್ಕಾಮವಾದ ಮತ್ತು ಅವಿಚ್ಛಿನ್ನವಾದ ಭಕ್ತಿಯಿಂದ ಸರ್ವಕಾಲದಲ್ಲಿಯೂ ಪರಮಾತ್ಮನನ್ನು ಮರೆಯದೆ- "ಸ್ವಾಮಿ ! ನಾನು ನಿನ್ನ ದಾಸರಲ್ಲೊಬ್ಬನು." -ಎಂದು ಪರಮಾತ್ಮನನ್ನು ಪ್ರತಿ ದಿವಸದಲ್ಲಿಯೂ ಸೇವಿಸುತ್ತಿ ಬಂದರೆ, ಪರಮಾತ್ಮನು ಅವರಿಗೆ ಅಪರೋಕ್ಷದಲ್ಲಿ ಗೋಚರನಾಗುತಾನೆ. ರೂಪಾಂತರದಿಂದ ಪ್ರತ್ಯಕ್ಷವಾಗಿ ಬಂದು ಜಗನ್ನಾಥ ದಾಸಾರಾಯರು ಮೊದಲಾದವರಿಗೆ ಗೋಚರನಾದಂತೆ ಗೋಚರವಾಗುವನು. ಮೊಸಳೆಯನ್ನು ಸೀಳಿ, ಗಜೇಂದ್ರನನ್ನು ರಕ್ಷಿಸಿದಂತೆ, ಆಪತ್ಕಾಲದಲ್ಲಿ ಅಂತಹ ಭಕ್ತರನ್ನು ಸಂರಕ್ಷಿಸುವನು. ಆದುದರಿಂದಲೇ ಕರುಣಾಳು ಅಂದರು ॥೧೧॥

(೩) "ಭಾವದರ್ಪಣ ಟೀಕಾ" ವ್ಯಾಖ್ಯಾನ :—

ಕಾರಣಗತ ಭಗವದ್ರೂಪಗಳಿಗೂ ಕಾರ್ಯಗತ ಭಗವದ್ರೂಪಗಳಿಗೂ ಅಭೇದಚಿಂತನ ಮಾಡತಕ್ಕದ್ದು ಯಾವುದೋ ಅದೇ ಭಾವಾದ್ವೈತ ಎಂಬರ್ಥ.

ಉಕ್ತಂಚ ಸಪ್ತಮ ಭಾಗವತೇ :—

"ಕಾರ್ಯಕಾರಣ ವಸ್ತ್ವೈಕ್ಯ ದರ್ಶನಂ ಪಟತಂತುವತ್ ॥
ಅವಸ್ತುತ್ವಾದ್ವಿಕಲ್ಪಸ್ಯ ಭಾವಾದ್ವೈತಂ ತದುಚ್ಯತೇ" ॥ ಇತಿ

ತನ್ನ ಜಾಯಾ ಪುತ್ರಾದಿಗಳನ್ನು ಭಗವಧೀನತ್ವೇನ ತಿಳಿಯೋಣ, ಅರ್ಥಕಾಮಗಳಿಗೆ ಭಗವದ್ವಿಷಯತ್ವ ತಿಳಿಯೋಣ, ಯಾವದೋ ಆದೇ ದ್ರವ್ಯಾದ್ವೈತ ಎಂಬರ್ಥ.

ಉಕ್ತಂಚ ಸಪ್ತಮ ಭಾಗವತೇ :—

"ಆತ್ಮಾಜಾಯಾ ಸುತಾದೀನಾಮನ್ಯೇಷಾಂ ಸರ್ವದೇಹಿನಾಂ ।
ಯತ್ಸ್ವಾರ್ಥಕಾಮಯೋರೈಕ್ಯಂ ದ್ರವ್ಯಾದ್ವೈತಂ ತದುಚ್ಯತೇ" ॥ ಇತಿ

ಎದುರಿಲ್ಲಿಟ್ಟ ಪ್ರತಿಮಾಗತ ಭಗವದ್ರೂಪಕ್ಕೆ ಕಾಯಾ ವಾಚಾ ಮನಸಾ ಮಾಡಲ್ಪಟ್ಟ ಕರ್ಮಗಳ ಸಮರ್ಪಣ ಯಾವದೋ ಅದೇ ಕ್ರಿಯಾದ್ವೈತವೆಂಬರ್ಥ.

**ಉಕ್ತಂಚ ಸಪ್ತಮ ಭಾಗವತೇ :—**

**ಯದ್ಬ್ರಹ್ಮಣಿ ಪರೇ ಸಾಕ್ಷಾತ್ಸರ್ವಕರ್ಮ ಸಮರ್ಪಣಂ ।**
**ಮನೋವಾಕ್ತನುಭಿಃ ಪಾರ್ಥ ಕ್ರಿಯಾದ್ವೈತಂ ತದುಚ್ಯತೇ ॥ಇತಿ॥**

**(೪) ವಾದಿರಾಜಾರ್ಯರ ವ್ಯಾಖ್ಯಾನ:— (ಸಂಸ್ಕೃತ ಮೂಲ)**

"ಅನ್ಯಾಸಾಧ್ಯೋಪಕಾರಕ ಸರ್ವಾತ್ಮ (ಚರಣ) ಸಮರ್ಪಣ ಸಮಯೇ ಭಾವನಾಪ್ರಕಾಶಂ ದರ್ಶಯತೇತಿ", ವಿಜಯಧ್ವಜ ಮಾಲೋಚ್ಯ ಆಹ "ಭಾವೇತಿ" ॥

ಭಾವಾದ್ವೈತಂ ಕ್ರಿಯಾದ್ವೈತಂ ದ್ರವ್ಯಾದ್ವೈತಂ ತಥಾತ್ಮನಃ ॥ ವರ್ತಯನ್ ಸ್ವಾನುಭೂತ್ಯೇಹ ತ್ರೀನ್ಸ್ವಪ್ನಾನ್ ಧುನುತೇಮುನಿಃ ॥ ಆತ್ಮನಃ ಪರಮಾತ್ಮನಃ ಸ್ವಾನುಭೂತ್ಯಾ ಆವಿರ್ಭೂತ ಸ್ವರೂಪಜ್ಞಾನೇನ । ಸ್ವಪ್ನಾನ್ ಜಾಗ್ರದಾದ್ಯವಸ್ಥಾನುಭವ ನಿಮಿತ್ತಾಜ್ಞಾನ ಶಬ್ದವಾಚ್ಯಾನ್ ಅನರ್ಥಾನ್ । ಧುನುತೇ ಮುನಿಃ ನಿರಸ್ಯತೀತಿ ॥ ತೇಷು ಅನಾಸಕ್ತ ಇತಿ ॥ ಅದ್ವೈತತ್ರಯಮಾಹ ॥ "ಕಾರ್ಯಕಾರಣ ವಸ್ತ್ವೈಕ್ಯದರ್ಶನಂ ಪಟತಂತುವತ್ ॥ ಅವಸ್ತುತ್ವಾತ್ ವಿಕಲ್ಪಸ್ಯ ಭಾವಾದ್ವೈತಂ ತದುಚ್ಯತೇ" ॥ ವಿಕಲ್ಪಸ್ಯ ಪ್ರಕೃತ್ಯಾಖ್ಯ ಪ್ರಪಂಚಸ್ಯ ॥ ಕಾರ್ಯಜನನ ಶಕ್ತ್ಯಭಾವಾತ್ ಮಹದಾದಿಕಾರ್ಯೋಃ ಪ್ರಕೃತಿ ತದ್ಗುಣಾಹ್ವ ಕಾರಣಗತ ಹರಿ ಮೂರ್ತ್ಯೋಃ ಐಕ್ಯಂ ಭಾವಾದ್ವೈತಂ ॥ "ಯದ್ ಬ್ರಹ್ಮಣಿ ಪರೇ ಸಾಕ್ಷಾತ್ ಸರ್ವಕರ್ಮ ಸಮರ್ಪಣಮ್ ॥ ಮನೋವಾಕ್ತನುಭಿಃ ಪಾರ್ಥ ಕ್ರಿಯಾದ್ವೈತಂ ತದುಚ್ಯತೇ ॥ "ನ ಋತೇ ತ್ವತ್ಕ್ರಿಯತೇ" ಇತಿ ಕ್ರಿಯಾದ್ವೈತಂ ॥ "ಆತ್ಮ ಜಾಯಾ ಸುತಾದೀನಾಂ ಅನ್ಯೇಷಾಂ ಸರ್ವ ದೇಹಿನಾಮ್ । ಯಚ್ಚಾರ್ಥ

ಕಾಮಯೋಃ ಐಕ್ಯಂ ದ್ರವ್ಯಾದ್ವೈತಂ ತದುಚ್ಯತೇ ॥ ಆತ್ಮಜಾಯಾಸುತ ತದನ್ಯ ದೇವದತ್ತಾದೀನಾಂ ಭಗವದಧೀನತ್ವಂ ॥ ಅರ್ಥಕಾಮಯೋಃ ಭಗವ ದ್ವಿಷಯುತ್ವಬುದ್ಧಿಃ ॥ "ಮನ್ಯೇ ತದರ್ಪಿತ ಮನೋವಚನಾತ್ಮದೇಹ ಪ್ರಾಣಃ" –ಇತ್ಯುಕ್ತ ದ್ರವ್ಯಾದ್ವೈತಮ್ ॥ ತಾವಕ ಹರಿಂ ಪ್ರತಿ, "ತವಾಹಂ" ಇತಿ ವಾದೀ ॥ ಕರಿ-ಇತಿ ಗಜೇಂದ್ರಃ ॥೧೧॥

**ಕನ್ನಡಾರ್ಥ :—**

ಶ್ರೀ ಪರಮಾತ್ಮನಿಂದ ಜೀವಕೋಟಿಗೆ ಆಗಿರುವ ಉಪಕಾರ, ಇತರರು ಯಾರೂ ಮಾಡಲಾರರು. ಅಂತಹ ಪರಮೋಪಕಾರಿಯಾದ ಭಗವಂತನು ಸರ್ವಾತ್ಮಕನು ಹಾಗೂ ಸರ್ವಜ್ಞ ನಿಯಾಮಕನು. ಇಂತಹ ಪರಮೇಶ್ವರ ನಾದ ಶ್ರೀಹರಿಯ ಚರಣಾರವಿಂದಗಳಲ್ಲಿ ಜೀವರು ಸರ್ವವನ್ನೂ ಅರ್ಪಿಸ ಬೇಕು. ಇಂತಹ ಸರ್ವಸಮರ್ಪಣೆಯ ಭಾವವನ್ನು ತಿಳಿಸುತ್ತಾರೆ. "ಭಾವ" ಎಂಬ ಈ ಪ್ರಸಕ್ತ ಪದ್ಯದಿಂದ, ಶ್ರೀ ವಿಜಯಧ್ವಜ ತೀರ್ಥರ ವಚನವಾದ "ಭಾವ" ಎಂಬ ಶಬ್ದಾರ್ಥವನ್ನೇ ಪರ್ಯಾಯವಾಗಿ ನಿರೂಪಿಸತ್ತಾರೆ. (೧) ಭಾವಾದ್ವೈತ, (೨) ದ್ರವ್ಯಾದ್ವೈತ ಮತ್ತು (೩) ಕ್ರಿಯಾದ್ವೈತ ಎಂದು ಅದ್ವೈತತ್ರಯಗಳು ಪ್ರಸಿದ್ಧಿ. ಇವುಗಳ ಸ್ವರೂಪಜ್ಞಾನದಿಂದ ಉತ್ಪನ್ನವಾದ, (೧) ಸ್ವಪ್ನ (೨) ಸುಷುಪ್ತಿ ಮತ್ತು (೩) ಜಾಗ್ರತ ಎಂಬ ಅವಸ್ಥಾತ್ರಯಗಳಿಂದ ಉಂಟಾಗುವ ಅವರ್ಥ ಪರಂಪರೆಯೇ ಅಜ್ಞಾನವು. ಇದನ್ನು ನಿವಾರಿಸಿಕೊಳ್ಳಲು ಪ್ರಾಜ್ಞನಾದವನು ಪ್ರಯತ್ನಿಸುತ್ತಾನೆ. ಆತ್ಮನಃ ಎಂದರೆ "ಪರಮಾತ್ಮನ" ಎಂದರ್ಥ. "ಸ್ವಾನುಭೂತ್ಯಾ" –ಭಗವಂತನ ಸ್ಮರಣೆಯಿಂದ ಅಭಿವ್ಯಕ್ತವಾಗುವ ಸ್ವರೂಪಜ್ಞಾನ. ಸ್ವಪ್ನ ಮತ್ತು ಜಾಗ್ರತ ಎಂಬ ಅವಸ್ಥಾವಿಶೇಷಗಳಿಂದ ಅಜ್ಞಾನುಭವ ಉಂಟಾಗುವುದು. ಇದೇ ಅನ ರ್ಥವು. ಮುನಿ := ತತ್ವಜ್ಞಾನಿಯು. ಧುನುತೇ = ಕಳೆದು ಕೊಳ್ಳುವನು. ಅಂದರೆ, ಭಗವತ್ಮರಣೆಯ ಪ್ರಭಾವದಿಂದ ಇಂತಹ ಅನರ್ಥಗಳಿಗೆ ಒಳಗಾಗುವು ದಿಲ್ಲ ಎಂತ ತಾತ್ಪರ್ಯ.

(೧) ಮಹತತ್ತ್ವ ಮುಂತಾದ ತತ್ತ್ವ ವಿಶೇಷಗಳು "ಕಾರ್ಯ"ಗಳು. ಮೂಲಪ್ರಕೃತಿ ಮತ್ತು ಅದರ ಸಹಜ ಗುಣಗಳಾದ ಸತ್ವಾದಿ ತ್ರಿಗುಣಗಳು "ಕಾರಣ"ಗಳು, ಹೀಗೆ ಕಾರ್ಯಗತವಾದ ಭಗವದ್ರೂಪಗಳಿಗೂ ಮತ್ತು ಕಾರಣಗತ ಭಗವದ್ರೂಪಗಳಿಗೂ ಪರಸ್ಪರ ಐಕ್ಯಚಿಂತನೆ ಮಾಡುವುದೇ "ಭಾವಾದ್ವೈತ" ವೆನಿಸುವುದು. ವಸ್ತ್ರಕ್ಕೂ ಅದರಲ್ಲಿರುವ ಎಳೆಗಳಿಗೂ ಅಭೇದವು, ಅಂತೆಯೇ ಕಾರ್ಯಕಾರಣಗತ ಭಗವದ್ರೂಪಗಳಿಗೆ ಐಕ್ಯಚಿಂತನೆ.

(೨) "ನ ಋತೇ ತ್ವತ್ ಕ್ರಿಯತೇ" -ಎಂಬ ಶ್ರುತಿಪ್ರಮಾಣದಂತೆ ಶರೀರ-ವಾಕ್ಕು-ಮನಸ್ಸು ಎಂಬ ತ್ರಿಕರಣಗಳ ದ್ವಾರಾ ಮಾಡುವ ಸಮಸ್ತ ಕರ್ಮಗಳೂ ಭಗವಧೀನವೆಂದು ತಿಳಿದು, ಸರ್ವಕರ್ಮಗಳನ್ನು ಭಗವದಧೀನತಾ ಬುದ್ಧಿಯಿಂದ ಅವನಿಗೆ ಅರ್ಪಿಸುವುದೇ – "ಕ್ರಿಯಾದ್ವೈತ"ವು.

(೩) ದೇಹ, ಪತ್ನಿ ಮತ್ತು ಪುತ್ರರು ಪರಿವಾರಭೂತರು, ಸಕಲ ವಸ್ತುಗಳೂ ಭಗವದಧೀನ ಎಂದು ಅರ್ಪಿಸುವುದೂ ಮತ್ತು ಸಕಲವಾದ ಅರ್ಥ ಕಾಮಗಳೆಲ್ಲವೂ ಭಗವತ್ಸಂಬಧಿಯಾಗಿವೆ ಎಂಬ ಚಿಂತನೆಯೇ "ದ್ರವ್ಯಾದ್ವೈತ" ವೆನಿಸುವುದು.

"ತಾವಕ"ನು ಎಂದರೆ, "ನಾನು ನಿನ್ನವನು"-ಎಂದು ತಾತ್ಪರ್ಯ. ಕರಿವರ = ಗಜೇಂದ್ರ ||೧೧||

## (ಆ) "ಗುರುಹೃದಯ ಪ್ರಕಾಶಿಕೆ" ವ್ಯಾಖ್ಯಾನ :—

ಈ ಸರ್ವತ್ರ ಕ್ರಿಯಾವ್ಯಕ್ತಿ ಮಹಿಮೆಯನ್ನು ವಿವರಿಸುತ್ತಾರೆ– "ಭಾವ ದ್ರವ್ಯ" ವೆಂಬ ಪದ್ಯದಿಂದ.

ದೇಹಾದಿಗಳಿಗೆ ಜನಕವಾದ ಪಂಚಭೂತ ಮೊದಲಾದ ತತ್ತ್ವಗಳು ಕಾರಣವೆನಿಸುವುವು. ಅದರಿಂದ ಹುಟ್ಟಿದ ದೇಹಾದಿಗಳು ಕಾರ್ಯವಸ್ತು. ಎನಿಸುವುದು. ನೂಲು ಬಟ್ಟೆಯಾದಂತೆ ಕಾರಣವಸ್ತುವೇ ಕಾರ್ಯವಾಗುವುದಲ್ಲದೇ, ಬೇರೆ ಕಾರ್ಯವಿಲ್ಲ. ಆದಾಗ್ಯೂ ಪಂಚಭೂತಾದಿಗಳು ಬೇರೆ ;

ದೇಹಾದಿ ಕಾರ್ಯವಸ್ತು ಬೇರೆ ಯೆನಿಸುವುದು. ದೇವರ ಅಚಿಂತ್ಯಶಕ್ತಿ ಅಧೀನವೆಂದು ಭಾವಿಸುವುದೇ "ಭಾವಾದ್ವೈತ"ವೆಂದು ತಿಳಿದು, ಮನೋ ವಾಕ್ಕಾಯಗಳಿಂದ ನಡೆಯುವ ಸರ್ವಕ್ರಿಯೆಗಳೂ ಬಿಂಬರೂಪನಾದ ದೇವ ರಿಂದಲೇ ವ್ಯಕ್ತಿಯಾಗುವುದರಿಂದ. ಸ್ವಾಮಿಯೇ ಸ್ವತಂತ್ರ, ಸರ್ವಕರ್ಮ ಪ್ರವರ್ತಕ, ಜೀವನು ತದಧೀನ ಕ್ರಿಯಾವುಳ್ಳವನಾದ್ದರಿಂದ ದೇವರಾಧೀನ ಸರ್ವಕರ್ಮವೆಂದು ಭಾವಿಸಿ, ಸಮರ್ಪಿಸುವುದೇ "ಕ್ರಿಯಾದ್ವೈತ" ವೆಂದು ತಿಳಿದು, ತಾನು ಎಂದರೆ. ಜೀವನು. ಆ ಜೀವನ ಸಂಬಂಧಿಗಳಾದ ಪತ್ನೀ ಪುತ್ರಾದಿಗಳಿಗೆ ಬಂದ ದ್ರವ್ಯಲಾಭ, ಭೋಗಸೌಖ್ಯಗಳನ್ನು ಹೇಗೆ ಇಷ್ಟವಾಗಿ ಭಾವಿಸುವನೋ ಹಾಗೆ, ತನ್ನ ಸಂಬಂಧಿಗಳಲ್ಲದವರಿಗೂ ದೊರಕಿದ ಲಾಭ. ಸೌಖ್ಯಗಳಲ್ಲಿ ಸಂತುಷ್ಟಚಿತ್ತನಾಗಿ, ಸರ್ವರಿಗೂ ಕಷ್ಟಸುಖಗಳು ಅದೃಷ್ಟಾನು ಗುಣವಾಗಿ ದೇವರಧೀನವೆಂದು ಸ್ಮರಿಸುತ್ತಾ, ತನಗಾದ ಸೌಖ್ಯ, ಲಾಭ, ಅನುಕೂಲ, ಪರರಿಗಾದದ್ದು ಅನಾನುಕೂಲವೆಂದೆಣಿಸದೆ. ಹರಿಸ್ಮೃತಿ, ಸಂತೋಷ, ಸಮಚಿತ್ತನಾಗಿರುವುದೇ- "ದ್ರವ್ಯಾದ್ವೈತ" -ವೆಂದು ತಿಳಿದು, ದೇವರನ್ನು ಸದ್ಭಕ್ತಿಯಿಂದ ಚಿಂತಿಸುತ್ತಾ, ಮರೆಯದೆ, -"ಹೇ ಸ್ವಾಮಿ, ನಿನ್ನ ಧೀನ ನಾನು"-ಎಂದು ನಿತ್ಯದಲ್ಲೂ ಸೇವಿಸುತ್ತಿರುವ ಭಕ್ತರಿಗೆ, ಶ್ರೀಹರಿಯು ಗಜೇಂದ್ರನಿಗೆ ತಾನಾಗಿ ಒಲಿದು ಬಂದಂತೆ, ತನ್ನ ರೂಪ ಸಂದರ್ಶನ ಕೊಟ್ಟು, ಅಧೀನನಾದಂತೆ ರಕ್ಷಿಸುತ್ತಾ ದಯಪಾಲಿಸುವನು.

"ಕಾರ್ಯಕಾರಣ ವಸ್ತ್ವೈಕ್ಯ ದರ್ಶನಂ ಪಟತಂತುವತ್ ।
ಅವಸ್ತುತ್ವಾದ್ವಿಕಲ್ಪಸ್ಯ ಭಾವಾದ್ವೈತಂ ತದುಚ್ಯತೇ" ॥೧॥

"ಯಂ ಬ್ರಹ್ಮಣಿ ಪರೇಸಾಕ್ಷಾತ್ಸರ್ವ ಕರ್ಮಸಮರ್ಪಣಂ ।
ಮನೋವಾಕ್ತಾನುಭಿಃ ಪಾರ್ಥ ಕ್ರಿಯಾದ್ವೈತಂ ತದುಚ್ಯತೇ" ॥೨॥

"ಆತ್ಮಜಾಯಾಸುತಾದೀನಾಮನ್ಯೇಷಾಮಪಿ ದೇಹಿನಾಂ ।
ಯಚಾರ್ಥಕರ್ಮ ಯೋರೈಕ್ಯಂ ದ್ರವ್ಯಾದ್ವೈತಂ ತದುಚ್ಯತೇ"॥೩॥

**"ಭಾವಾದ್ವೈತಂ ಕ್ರಿಯಾದ್ವೈತಂ ದ್ರವ್ಯಾದ್ವೈತಂ ತಥಾತ್ಮನಃ ।
ವರ್ತಯನ್ ಸ್ವಾನುಭೂತ್ಯೇಹತ್ರೀನ್ ಸ್ವಪ್ನಾನ್ ಧುನುತೇ ಮುನಿಃ ॥೪॥**

–ಎಂಬ **ಭಾಗವತಾರ್ಥ** ಇದರಿಂದ ವಿವರಿಸಿತು.

ವಸ್ತುಗಳಲ್ಲಿ ದೇವರಧೀನತ್ವ ಭಾವಿಸುವ ಬಗೆಯಾದ್ದರಿಂದ, ಭಾವಾದ್ವೈತಕ್ಕೂ ದ್ರವ್ಯಾದ್ವೈತಕ್ಕೂ ಸಂಬಂಧವುಂಟೆಂದು ಸೂಚಿಸುವುದಕ್ಕೆ ಶ್ಲೋಕದಲ್ಲಿ ಮಧ್ಯದಲ್ಲಿ ಹೇಳಿರುವ ಕ್ರಿಯಾದ್ವೈತವನ್ನು ಪದ್ಯದ ಕಡೆಯಲ್ಲಿ ನಿರೂಪಿಸಿರುವುದರ ಹೃದಯ. **"ಸ್ವಪ್ನಾನ್ ಧುನುತೇ ಮುನಿಃ"** –ಎಂದರೆ, ಜ್ಞಾನಿಯಾದವನು ಸ್ವಪ್ನದಂತೆ ಅನಿತ್ಯವಾದ ಆಧ್ಯಾತ್ಮಿಕ, ಆಧಿದೈವಿಕ, ಆದಿ ಭೌತಿಕವೆಂಬ ಮಾನಸಿಕ, ದೈವಿಕ ಮತ್ತು ಶಾರೀರಸಂಬಂಧವೆಂಬ ತಾಪತ್ರಯಗಳನ್ನು ಪರಿಹರಿಸುವನು ಎಂದರ್ಥ ॥೧೧॥

# ಸರ್ವವ್ಯಾಖ್ಯಾನಸಾರಸಂಗ್ರಹ

(೧) ಭಾವಾದ್ವೈತ, (೨) ದ್ರವ್ಯಾದ್ವೈತ ಮತ್ತು (೩) ಕ್ರಿಯಾದ್ವೈತ ಎಂಬ ಮೂರು ವಿಧವಾದ ಅದ್ವೈತ ತ್ರಯಗಳು ಪ್ರಸಿದ್ಧಿಯಾಗಿವೆ. ಇವುಗಳ ವಿವರ ಇಂತಿದೆ :—

## (೧) ಭಾವಾದ್ವೈತ :—

ಶ್ರೀ ಪರಮಾತ್ಮನು ಮೂಲಪ್ರಕೃತಿ ಮತ್ತು ತಜ್ಜನ್ಯವಾದ ಗುಣತ್ರಯಗಳನ್ನು ಉಪಾದಾನಕಾರಣವನ್ನಾಗಿ ಮಾಡಿಕೊಂಡು, ಗುಣವೈಷಮ್ಯದಿಂದ ಜಗತ್ತಿನ ಸೃಷ್ಟ್ಯಾದಿ ವ್ಯಾಪಾರಗಳನ್ನು ಮಾಡುವನು. ಇಲ್ಲಿ ಮೂಲಪ್ರಕೃತಿ ಮತ್ತು ಸತ್ವಾದಿ ಗುಣತ್ರಯಗಳಿಗೆ **ಕಾರಣ** ವಸ್ತು ಎಂದು ಹೆಸರು. ಸೃಷ್ಟ

ವಾದ ಜಗತ್ತಿಗೆ **ಕಾರ್ಯ** ವಸ್ತು ಎಂದು ಅಭಿಧಾನ. ಅಂತೆಯೇ ವಸ್ತ್ರವು ನೂಲಿನಿಂದ ಉಂಟಾಗಿದೆ. ನೂಲಿನ ಎಳೆಗಳು (ಪಂಟ ತಂತುಗಳು) ಓತಪ್ರೋತವಾಗಿ ನೇಯಲ್ಪಟ್ಟಾಗ ವಸ್ತುವುಂಟಾಗುವುದು. ಇಲ್ಲಿ ನೂಲಿನ ಎಳೆಗಳು ಕಾರಣ ವಸ್ತು. ವಸ್ತ್ರವು ಕಾರ್ಯವಸ್ತು. ಇವೆರಡೂ ಅಭೇದ ವೆಂದೇ ತೋರುವುದು. ಆದರೆ ನೂಲೇ ಬೇರೆ ಮತ್ತು ವಸ್ತ್ರವೇ ಬೇರೆ, ಹೀಗೆ ಕಾರ್ಯ ಕಾರಣ ವಸ್ತುಗಳು ಭೇದಾಭೇದಗಳಿಂದ ಕೂಡಿದ್ದು. ಇಂತಹ ಕಾರ್ಯಕಾರಣ ವಸ್ತುಗಳಲ್ಲಿ ಇರುವ ಭಗವದ್ರೂಪಗಳು ಒಂದೇ. ಅಧಿಷ್ಠಾನಗಳು ಮಾತ್ರ ಭಿನ್ನ. ಈ ರೀತಿ ಕಾರ್ಯಕಾರಣ ವಸ್ತುಗಳಲ್ಲಿ ಅಂತರ್ಗತವಾಗಿರುವ ಭಗವದ್ರೂಪಗಳಿಗೆ ಐಕ್ಯ ಚಿಂತನೆ ಮಾಡುವುದಕ್ಕೆ **ಭಾವಾದ್ವೈತ** ವೆಂದು ಹೆಸರು.

## (೨) ದ್ರವ್ಯಾದ್ವೈತ :—

ಜೀವನದಲ್ಲಿ, ಜೀವನಿಗೆ ತನು ಸಂಬಂಧಿಗಳಾದ ಪತ್ನೀ ಪುತ್ರಾದಿಗಳಲ್ಲಿ, ಬಂಧುಮಿತ್ರವರ್ಗದವರಲ್ಲಿ ಅಂತರ್ಯಾಮಿಯಾಗಿ, ಪರಿವಾರ ಭೂತರಾದ ಇತರ ಜೀವರನ್ನು ಈ ಜೀವನಿಗೆ ಋಣಾನುಸಂಬಂಧದಿಂದ ಪರಸ್ಪರ ಸಂಬಂಧ ವಿರುವಂತೆ ಸರ್ವಕಾರ್ಯಗಳನ್ನು ನಿರ್ವಹಿಸುತ್ತಿರುವ ಭಗವದ್ರೂಪಗಳು ಒಂದೇ (ಅದ್ವೈತ-ಎರಡನೆಯವರು ಯಾರೂ ಇಲ್ಲವು, ಏಕಮೇವ ಭಗವಂತ ನೊಬ್ಬನೇ) ಎಂದು ಭಗವದ್ರೂಪಗಳಿಗೆ ಪರಸ್ಪರ ಐಕ್ಯಚಿಂತನೆ ಮಾಡುವುದೇ **ದ್ರವ್ಯಾದ್ವೈತ** ಎನಿಸುವುದು.

ನಾವು ಸಂಪಾದಿಸುವ ಹಣ, ನಮಗೆ ಪರಿವಾರಭೂತರಾದ ಹೆಂಡತಿ, ಮಕ್ಕಳು, ಹಾಗೆಯೇ ತನು ಸಂಬಂಧಿಗಳಾದ ಇತರ ಬಂಧುವರ್ಗ, ಆಪ್ತ ರಾದ ಮಿತ್ರರು...ಇವರೆಲ್ಲರೂ "ದ್ರವ್ಯ"ನೆನಿಸುವರು. ಇಂತಹ ಅಧಿಷ್ಠಾನ ಗತ ಭಗವದ್ರೂಪಗಳಲ್ಲಿ ಅದ್ವೈತ (ಐಕ್ಯ) ಚಿಂತನೆಯು ದ್ರವ್ಯಾದ್ವೈತವು. ಈ ಅಧಿಷ್ಠಾನಗಳು ಭಗವಧೀನವೆಂದು ತಿಳಿಯುವುದೇ ದ್ರವ್ಯಾದ್ವೈತದ ಲಕ್ಷಣವು.

## (೩) ಕ್ರಿಯಾದ್ವೈತ :—

ಮನಸ್ಸು, ವಾಕ್ಕು ಮತ್ತು ಶರೀರ ಎಂಬ ಮೂರು ವಿಧವಾದ ಕ್ರಿಯಾಧಿಷ್ಠಾನಗಳಿಗೆ **ತ್ರಿಕರಣ**ಗಳೆಂದು ಹೆಸರು. ಮನಸ್ಸಿನ ದ್ವಾರಾ, ಚಿಂತನೆ, ಧ್ಯಾನ ಇತ್ಯಾದಿ ಮನೋವ್ಯಾಪಾರ ರೂಪವಾದ ಕ್ರಿಯಾವಿಶೇಷ ಗಳು. ವಾಕ್ಕಿನ ದ್ವಾರಾ ವಾಗ್ರೂಪವಾದ ಸಂಭಾಷಣೆ, ಉಪದೇಶ, ಪಾಠ ಪ್ರವಚನಗಳು ಇತ್ಯಾದಿ ವಾಗ್ರೂಪವಾದ ಕ್ರಿಯಾವಿಶೇಷಗಳು. ದೇಹದಿಂದ ಇಂದ್ರಿಯಗಳ ದ್ವಾರಾ ಪಂಚ ಜ್ಞಾನೇಂದ್ರಿಯಗಳು ಹಾಗೂ ಪಂಚ ಕರ್ಮೇಂದ್ರಿ ಯಗಳ ಜ್ಞಾನಗ್ರಹಣರೂಪವಾದ ಕ್ರಿಯಾವಿಶೇಷಗಳು, ಕ್ರಿಯಾರೂಪವಾದ ವ್ಯಾಪಾರ ವಿಶೇಷಗಳೂ ಪೂರ್ವೋಕ್ತ ತ್ರಿಕರಣಗಳ ದ್ವಾರಾ ನಿರಂತರವೂ ನಡೆ ಯುತ್ತಲೇ ಇರುವುವು. ಶ್ರೀ ಪರಮಾತ್ಮನೇ ನಮ್ಮಲ್ಲಿ ಬಿಂಬರೂಪನಾಗಿದ್ದು, ಬಿಂಬಕ್ರಿಯಾದ್ವಾರಾ ಸಮಸ್ತ ಕ್ರಿಯಾರೂಪವಾದ ವ್ಯಾಪಾರಗಳನ್ನೂ ತಾನೇ ಮಾಡಿ. ಆಯಾಯಾ ಅಧಿಷ್ಠಾನಗತ ದೇವತೆಗಳ ದ್ವಾರಾ ಶ್ರೀ ಮುಖ್ಯ ಪ್ರಾಣದೇವರ ನಿಯಂತ್ರಣದಲ್ಲಿ ಮಾಡಿಸಿ, ದೇಹದಲ್ಲಿ ಪ್ರಕಾಶತೋ ವ್ಯಾಪ್ತ ನಾಗಿರುವ ಜೀವನ ಅನುಭವಕ್ಕೆ ತಂದೀಯುವನು. ಇದರಿಂದ ಸರ್ವಕರ್ಮ ಪ್ರವರ್ತಕನಾದ ಬಿಂಬನಿಗೇ ಆ ಕ್ರಿಯಾವಿಶೇಷಗಳನ್ನು ಸಂಪೂರ್ಣವಾಗಿ ಸಮರ್ಪಿಸುವುದೇ **ಕ್ರಿಯಾದ್ವೈತವು**. ಕ್ರಿಯೆಗಳು ನಡೆಯುವ ಅಧಿಷ್ಠಾನ ಗಳು (ಮನೋವಾಕ್ಕಾಯ) ಭಿನ್ನ ಭಿನ್ನವಾಗಿವೆ. ಆದರೆ ಆ ಕರ್ಮಾಂತರ್ಗತ ಕರ್ಮಪ್ರಚೋದಕ ಹಾಗೂ ಕರ್ಮನಿಯಾಮಕನಾದ ಭಗವದ್ರೂಪಗಳೆಲ್ಲವೂ ಒಂದೇ (ಐಕ್ಯಚಿಂತನಾಭಾವ) ಎಂದು ತಿಳಿದು ಸರ್ವಕರ್ಮ ಸಮರ್ಪಣವೇ ಕ್ರಿಯಾದ್ವೈತದ ಮುಖ್ಯ ಲಕ್ಷಣವು, ಜೀವ, ಕರ್ಮ, ಜಡಗಳೆಲ್ಲವೂ ಭಗವದಧೀನವೆಂದು ಅರಿಯುವುದೇ ಕ್ರಿಯಾದ್ವೈತದ ಮುಖ್ಯ ಜ್ಞಾನಾನು ಸಂಧಾನಕ್ರಮವು.

ಇಂತು, ಭಾವಾದ್ವೈತ, ದ್ರವ್ಯಾದ್ವೈತ ಮತ್ತು ಕ್ರಿಯಾದ್ವೈತ ಗಳೆಂಬ ಅದ್ವೈತತ್ರಯಂಗಳಲ್ಲಿ ಸರ್ವನಿಯಾಮಕನಾದ ಶ್ರೀ ಪರಮಾತ್ಮನೇ ಸರ್ವಕಾರ್ಯ ನಿರ್ವಾಹಕನು, ಸರ್ವತಂತ್ರ ಸ್ವತಂತ್ರನು, ಚೇತನಾಚೇತನರು

ಭಗವದಧೀನರೆಂದು ಮಹಾತ್ಮ ಜ್ಞಾನಪೂರ್ವಕವಾಗಿ ತಿಳಿದು, ಸುದೃಢವಾದ ಸ್ನೇಹರೂಪವಾದ ಸದ್ಭಕ್ತಿಭಾವದಿಂದ ಶ್ರೀ ಪರಮಾತ್ಮನನ್ನು ಭಜಿಸಬೇಕು. ಸರ್ವದೇಶ, ಅವಸ್ಥೆ, ಕಾಲಗಳಲ್ಲಿ ವ್ಯಾಪ್ತನಾಗಿರುವ ಶ್ರೀ ಪರಮಾತ್ಮನ ವ್ಯಾಪ್ತ ರೂಪಗಳನ್ನು ನಿತ್ಯದಲ್ಲೂ ಮರೆಯದಲೆ ಧ್ಯಾನಿಸುತ್ತಿರಬೇಕು. ಜೀವರೆಲ್ಲರೂ ಭಗವಂತನ ಅಧೀನವೆಂದು ತಿಳಿದು (ತಾವಕನು ತಾನೆಂದರಿದು ಪ್ರತಿನಿತ್ಯದಲ್ಲೂ ಪರಮಾಪ್ತ ಬಂಧುವಾದ ಬಿಂಬರೂಪೀ ಶ್ರೀಹರಿಯನ್ನು) ಎಡಬಿಡದೆ ಸೇವೆ ಮಾಡುವ ಭಕ್ತವರ್ಗದವರಿಗೆ ತನ್ನನ್ನೇ ಈವ, ಎಂದರೆ, ತನ್ನ ಅಪರೋಕ್ಷ ಜ್ಞಾನರೂಪವಾದ ಸುದರ್ಶನ ಭಾಗ್ಯವನ್ನು ಇತ್ತು, ಅವರ ಹೃದಯಾಕಾಶದಲ್ಲಿ ಮಿಂಚಿನಂತೆ ಬೆಳಗಿ. ನಿಜಭಕ್ತರನ್ನು ಅನವರತ ಸಂರಕ್ಷಿಸು ತ್ತಿರುವನು. ವಿಪತ್ತಿನ ಸುಳಿಯಲ್ಲಿ ಸಿಲುಕಿ, ತನ್ನ ದೇಹಬಲದಿಂದಲಾಗಲೀ ಅಥವಾ ಬಂಧುವರ್ಗದವರಿಂದಲಾಗಲೀ ಏನೂ ಪ್ರಯೋಜನವಾಗದೇ, ಅನ್ಯಮಾರ್ಗವನ್ನರಿಯದೇ, ಆ ಸರೋವರದಲ್ಲಿ ಬೆಳೆದಿದ್ದ ಕಮಲ ಪುಷ್ಪ ವನ್ನೇ ಸೊಂಡಲಿನಿಂದ ಎತ್ತಿ, "ಅಖಿಲ ಕಾರಣನಾದ, ಆಪ್ತ ಬಂಧುವಾದ ಹೇ ಆದಿಮೂಲಸ್ವರೂಪಿಯೇ, ನೀನೆ ಗತಿಯೆನಗಿಂದು" ಎಂದು ಮೊರೆ ಇಡುತ್ತಿರುವ ಗಜೇಂದ್ರನ ಪ್ರಾರ್ಥನೆಗೆ ಓ ಗೊಟ್ಟು. ಅವಸರದಿಂದ ಧಾವಿಸಿ, ಚಕ್ರಾಯುಧದಿಂದ ಮೊಸಳೆಯನ್ನು ವಿದಾರಣ ಮಾಡಿ, ಗಜರಾಜನನ್ನು ಸಂರಕ್ಷಿಸಿದಂತೆ, ಆ ಕರುಣಾ ಸಮುದ್ರನಾದ ಶ್ರೀ ಹರಿಯು ಸ್ವಭಕ್ತರನ್ನು ಎಡ ಬಿಡದೆ ಸಂರಕ್ಷಿಸುತ್ತಿರುವನು ಎಂತ ತಾತ್ಪರ್ಯ. ॥೧೧॥

# ಪದ್ಯ (೧೨)

**ಮೂಲ :—**

**ಬಾಂದಳವೆ ಮೊದಲಾದುದೊಳೊಂ ।**
**ದೊಂದರಲಿ ಪೂಜಾ ಸುಸಾಧನ ।**
**ವೆಂದೆನಿಸುವ ಪದಾರ್ಥಗಳು ಬಗೆಬಗೆಯ ನೂತನದಿ ॥**
**ಸಂದಣಿಸಿಕೊಂಡಿಹವು ಧ್ಯಾನಕೆ ।**
**ತಂದಿನಿತು ಚಿಂತಿಸಿ ಸದಾ ಗೋ ।**
**ವಿಂದನರ್ಚಿಸಿ ನೋಡು ನಲಿನಲಿದಾಡು ಕೊಂಡಾಡು ॥೧೨॥**

**ಅವತರಣಿಕೆ :—**

ಆಕಾಶವೇ ಮೊದಲಾದ ಭೂತಪಂಚಕದಲ್ಲಿ ಒಂದೊಂದರಲ್ಲಿಯೂ, ಪೂಜೋಪಯೋಗ್ಯವಾದ ಒಂದೊಂದು ಸಾಧನ ವಸ್ತುಗಳಲ್ಲಿಯೂ ನಿತ್ಯ ನೂತನವಾಗಿ ಭಗವದ್ರೂಪಗಳು ಹಬ್ಬಿ ಹರಡಿಕೊಂಡಿರುವುವು. ಇಂತಹ ಸುಸಮೀಚೀನ ವಿಭೂತಿರೂಪಗಳನ್ನು ಮನಸಾ ಚಿಂತಿಸುತ್ತಾ, ಧ್ಯಾನಯೋಗ ದಿಂರ ಪ್ರತ್ಯಕ್ಷೀಕರಿಸಿಕೊಂಡು, ವೇದಗಮ್ಯನಾದ ಗೋವಿಂದನಾಮಕ ಶ್ರೀ ಪರಮಾತ್ಮನನ್ನು ಆನಂದೋದ್ರೇಕದಿಂದ ಸ್ತುತಿಸು ಎಂದು ಉಪಾಸನಾಕ್ರಮ ವನ್ನು ತಿಳಿಸುತ್ತಾರೆ- **"ಬಾಂದಳವೆ"** -ಎಂಬ ಪ್ರಸಕ್ತ ಸಂಧಿಗತ ೧೨ನೆಯ ಈ ಪದ್ಯದಿಂದ ॥೧೨॥

**ಪ್ರತಿಪದಾರ್ಥ :—**

**ಬಾಂದಳವೆ**= ಆಕಾಶವೇ **ಮೊದಲಾದುದರೊಳು**= ಮೊದಲಾದ ಪಂಚಭೂತಗಳಲ್ಲಿ [illegible]ದರೊಳು= ಅವುಗಳಲ್ಲಿ ಒಂದೊಂದು ತತ್ತ್ವ

ದಲ್ಲಿಯೂ, (ಅಂದರೆ, ವಾಯು, ತೇಜಸ್ಸು, ಅಪ್ ಮತ್ತು ಪೃಥ್ವೀ ಎಂಬ ಒಂದೊಂದರಲ್ಲಿಯೂ) **ಪೂಜಾ** = ದೇವರಪೂಜೆಗೆ ಯೋಗ್ಯವಾದ **ಸುಸಾಧನವೆಂದೆನಿಸುವ** = ಉತ್ತಮವಾದ ಸಾಧನ ರೂಪವಾದ **ಪದಾರ್ಥಗಳು** = ಪ್ರತಿವಸ್ತುವಿನಲ್ಲಿಯೂ (ಶ್ರೀ ತುಳಸಿ, ಪರಿಮಳಯುಕ್ತ ಪುಷ್ಪಗಳು, ದೀಪ, ಧೂಪ ಇತ್ಯಾದಿ ಸಾಧನೋಪಕರಣಗಳು) **ಬಗೆಬಗೆಯ** = ನಾನಾಪ್ರಕಾರವಾದ (ವಿಧವಿಧವಾದ) **ನೂತನದಿ** = ಹೊಸಹೊಸದಾಗಿ **ಸಂದಣಿಸಿಕೊಂಡಿಹವು** = ತುಂಬಿಕೊಂಡಿರುವು. (ನಿಬಿಡೀಕೃತವಾಗಿ ವ್ಯಾಪಿಸಿಕೊಂಡಿವೆ) **ಧ್ಯಾನಕೆ ತಂದು** = ಪೂರ್ವೋಕ್ತ ಅಧಿಷ್ಠಾನಗಳಲ್ಲಿ ಅಂತರ್ಭೂತವಾಗಿರುವ ಭಗವದ್ದಿವ್ಯರೂಪಗಳನ್ನು ಧ್ಯಾನಕ್ಕೆ ವಿಷಯವನ್ನಾಗಿ ಮಾಡಿ **ಇನಿತು** = ಈ ಪ್ರಕಾರವಾಗಿ ಆಯಾಯಾ ವಸ್ತುಗಳಲ್ಲಿ ತದಾಕಾರನಾಗಿ ತದಾಹ್ವಯನಾಗಿ ಶ್ರೀಪರಮಾತ್ಮನು ಸನ್ನಿಹಿತವಾಗಿರುವನೆಂದು **ಚಿಂತಿಸಿ** = ಮನಸಾ ಸ್ಮರಿಸುತ್ತಾ **ಸದಾ** = ಸರ್ವಕಾಲ, ಸರ್ವದೇಶ, ಸರ್ವಾವಸ್ಥೆಗಳಲ್ಲಿಯೂ **ಗೋವಿಂದನ** = ವೇದಪ್ರತಿಪಾದ್ಯನಾದ ಶ್ರೀ ಪರಮಾತ್ಮನನ್ನು **ಅರ್ಚಿಸಿ** = ಪೂಜಿಸಿ **ನೋಡು** = ಜ್ಞಾನದೃಷ್ಟಿಯಿಂದ ನೋಡುವವನಾಗು **ನಲಿನಲಿದಾಡು** = ಆನಂದೋದ್ರೇಕದಿಂದ ನರ್ತನ ಮಾಡು. **ಕೊಂಡಾಡು** = ಆತನ ಗುಣಾತಿಶಯುಗಗನ್ನು ಸ್ತೋತ್ರಮಾಡುತ್ತಾ ಹಿಗ್ಗುತ್ತಿರು ॥೧೨॥

## ವ್ಯಾಖ್ಯಾನಗಳು

### (೧) ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ :—

ಆಕಾಶವೇ (ಬಾಂದಳವೆ) ಮೊದಲಾದ ಪಂಚಭೂತಗಳು (೧. ಆಕಾಶ. ಇದರ ಗುಣಶಬ್ದ. ೨. ವಾಯು. ಇದರ ಗುಣಸ್ಪರ್ಶ. ೩. ತೇಜ. ಇದರ ಗುಣರೂಪ. ೪. ಅಪ್ಪು. ಇದರ ಗುಣರಸ. ೫. ಪೃಥ್ವೀ. ಇದರಗುಣ

ಗಂಧ) ಇಂತಹ ಪಂಚಭೂತಗಳಲ್ಲಿ ಒಂದೊಂದು ಭೂತದಲ್ಲೂ (ಒಂದೊಂದರಲಿ) ಹೃದಯುಗತವಾಸನಾಬಿಂಬ, ಬಾಹ್ಯದಲ್ಲಿ ಪೂಜಾಮಾಡತಕ್ಕ ಅಚಲ ಪ್ರತಿಮೆ, ಉಭಯಪ್ರತಿಮಾಂತರ್ಗತ ಭಗವತ್ಪೂಜಾ ಮಾಡೋದಕ್ಕೆ ಸುಸಮೀಚೀನವಾದ ಪೂಜಾಸಾಧನಗಳು ಎಂತ ಎನಿಸತಕ್ಕ ಆಯಾ ಪಂಚಭೂತಗಳಿಗೆ ಗುಣಗಳಾದ ಶಬ್ದ ಸ್ಪರ್ಶಾದಿ ಪದಾರ್ಥಗಳು, ಶಬ್ದಾದಿ ತನ್ಮಾತ್ರಗಳು, ಅನೇಕವಾಗಿ, ನಾನಾಪ್ರಕಾರವಾಗಿ, ನೂತನವಾಗಿ ಆದುದು, ಅವುಗಳಲ್ಲಿ ಗುಂಪು ಕೂಡಿಕೊಂಡು, ಅಚ್ಛಿದ್ರವಾಗಿ ನಿಬಿಡೀಕೃತವಾಗಿ (ಸಂದಣಿಸಿಕೊಂಡು) ಇರೋದಾಗಿ ಅದೆ. ಅದು ಹ್ಯಾಗೆಂದರೆ :—

(೧) ಶಬ್ದದಲ್ಲಿ ಯಾವತ್ತು ನಾದಗಳು, ಸ್ವರಗಳೂ ಇರೋದಾಗಿ ಅವೆ.

(೨) ಸ್ಪರ್ಶದಲ್ಲಿ ತ್ವಗಿಂದ್ರಿಯಕ್ಕೆ ಉಪಚರಿಸತಕ್ಕ ಯಾವತ್ತು ಸ್ಪರ್ಶೋಪಚಾರಗಳು ಇರೋದಾಗಿ ಅವೆ.

(೩) ರೂಪದಲಿ ಯಾವತ್ತು ತೇಜೋಪಚಾರಗಳು ಅವೆ.

(೪) ರಸದಲ್ಲಿ ಯಾವತ್ತು ಸುರಸೋಪೇತವಾದ ಉಪಚಾರಗಳು ಇರೋದಾಗಿ ಅವೆ.

(೫) ಗಂಧದಲ್ಲಿ ಯಾವತ್ತು ಸುಗಂಧೋಪೇತವಾದ ಉಪಚಾರಗಳು ಇರೋದಾಗಿ ಅವೆ.

ಈ ರೀತ್ಯಾ ಯಾವತ್ತೂ ಪೂಜಾಸಾಧನಗಳು ಇದರಲ್ಲೇ ಅಂತರ್ಭೂತಗಳಾಯಿತು.

ಈ ಪ್ರಕಾರ, ಅನುಸಂಧಾನದಿಂದ ಧ್ಯಾನಕ್ಕೆ ತಂದು, ಈ ಪೂಜಾಸಾಧನಗಳು ದಾವದದೇ, ಅದರೊಳಗೆ ಈ ಪೂಜಾಸಾಧನ ಗಳೋಪಾದಿಯಲಿ ತದಾಕಾರದಿಂದ ಶ್ರೀ ಪರಮಾತ್ಮ ಇದಾನೆ ಎಂತಲೂ, ಈ ಪ್ರಕಾರ ಸರ್ವ

ಕಾಲದಲ್ಲೂ ಅಚ್ಛಿದ್ರನಾಗಿ, ಮನಸಾ ಚಿಂತನಾರೂಪದಿಂದ ಅನುಸಂಧಾನ ಮಾಡಿ, ವೇದ ಪ್ರತಿಪಾದ್ಯನ (ಗೋವಿಂದನ) ಬಿಂಬಮೂರ್ತಿಯನ್ನು ಪ್ರತಿಮಾಂತರ್ಗತ ರೂಪಗಳಿಗೇನು, ಪೂಜಾಸಾಧನಾಂತರ್ಗತ ರೂಪಗಳಿಂದ ಐಕ್ಯ ಚಿಂತನರೂಪದಿಂದ ಅರ್ಚನೆಮಾಡಿ, ಮನಸ್ಸಿನಿಂದ ಅವನ ಗುಣಗಳಲ್ಲಿ ಸಂಚಾರಮಾಡು (ನಲಿನಲಿದಾಡು) ಅವನ ಮಹಿಮಾವಾಕ್ಯದಿಂದ ಕೊಂಡಾಡು. ಸರ್ವತ್ರ ಅಧಿಭೂತಗಳಾದ ಅಧಿಷ್ಠಾನಗಳ ಮರೆತು ಅಂತರ್ಗತನಾದ ಅಧ್ಯಾತ್ಮನಾದ ಶ್ರೀಪರಮಾತ್ಮನಲ್ಲಿ ಲಕ್ಷ್ಯವಿಟ್ಟು, ಜ್ಞಾನ ದೃಷ್ಟಿಯಿಂದ ನೋಡುವವನಾಗು. (ನೋಡು). ಇದರಿಂದ ಈ ಪ್ರಪಂಚ ಗತ ಯಾವತ್ತೂ ಪೂಜಾಸಾಧನ ದ್ರವ್ಯದಿಂದ ಪೂಜಾ ಮಾಡಿದವನಾಗತಾನೆ ಎಂತ ತಾತ್ಪರ್ಯ ||೧೨||

(೨) "ಭಾವ ಪ್ರಕಾಶಿಕೆ" ವ್ಯಾಖ್ಯಾನ :—

೧೦ನೆಯ ಪದ್ಯದಿಂದ ವಿತ್ತದೇಹಾಪತ್ಯ ಮೊದಲಾದವರಲ್ಲಿ ಅಖಂಡ ವಿಭೂತಿಯನ್ನು ಚಿಂತಿಸಬೇಕೆಂತಲೂ, ಚಿತ್ತ ಬುದ್ಧ್ಯಾದಿಗಳಲ್ಲಿಯೂ, ಜ್ಞಾನೇಂದ್ರಿಯ, ಕರ್ಮೇಂದ್ರಿಯಗಳಲ್ಲಿಯೂ ಸಹ ಭಗವದ್ವಿಭೂತಿಗಳನ್ನು ತಿಳಿದು, ಪೂಜಿಸಬೇಕೆಂದು ಹೇಳಿ, ೧೧ನೆಯ ಪದ್ಯದಿಂದ ಭಾವಾದ್ವೈತ, ಕ್ರಿಯಾದ್ವೈತ ಮತ್ತು ದ್ರವ್ಯಾದ್ವೈತಗಳ ವ್ಯಾಜದಿಂದ ೧೦ನೆಯ ಪದ್ಯವನ್ನು ವಿಸ್ತಾರ ಮಾಡಿದರು. ಈಗ ೧೦ನೆಯ ಪದ್ಯದಲ್ಲಿ ಬಿಟ್ಟಿದ್ದ ಪಂಚ ಮಹಾ ಭೂತಗಳಲ್ಲಿ ತಿಳಿಯಬೇಕಾದ ವಿಭೂತಿಯನ್ನು ಹೇಳುತ್ತಾರೆ.

ಬಾಂದಳವೆಂದರೆ ಆಕಾಶ, ಮೊದಲಾದ ಶಬ್ದದಿಂದ ಉಳಿದ ವಾಯು, ಅಗ್ನಿ, ಉದಕ, ಭೂಮಿ ಈ ಪಂಚಭೂತಗಳನ್ನು ಗ್ರಹಣಮಾಡಬೇಕು. ಇವುಗಳ ಒಂದೊಂದರಲ್ಲಿಯೂ ಅನೇಕ ವಿಧವಾದ ಹೊಸಹೊಸ ಪೂಜಾಸಾಧನ ದ್ರವ್ಯಗಳಿರುವುದೆಂದು ಧ್ಯಾನಕ್ಕೆ ತಂದುಕೊಳ್ಳಬೇಕು. ಪೂಜೆ ಎಂದರೆ, ಪ್ರತಿಮೆಯನ್ನು ಮುಂದಿಟ್ಟುಕೊಂಡು ಪುಷ್ಪಾದಿಗಳು ಕೈಯಿಂದ ಅರ್ಚಿಸುವುದು ಮಾತ್ರವೇ ಅಲ್ಲ. ಪೂಜಾಸಾಧನ ದ್ರವ್ಯವೆಂದರೆ, ಗಂಧ, ಪುಷ್ಪ, ನೈವೇದ್ಯಗಳೆಂದೇ ಅರ್ಥವಲ್ಲ, ಮನಸ್ಸಿನಲ್ಲಿ ಆಕಾಶಾದಿ ಪಂಚ ಮಹಾಭೂತ

ಗಳ ಸಹಾಯದಿಂದ ಕಲ್ಪಿಸುವ ಸಾಧನ ಪದಾರ್ಥಗಳು ಬಹಳ ಉಂಟು. ಅವು ಹೊಸಹೊಸದಾಗಿ ಕಲ್ಪನೆಗೆ ಬರುವುವು. ಅಂದೆಂತೆಂದರೆ :— ಆಕಾಶತತ್ತ್ವವು ನಮ್ಮ ಶ್ರೋತ್ರೇಂದ್ರಿಯವನ್ನು ಆಶ್ರಯಿಸಿರುವುದು. ಅದರ ಮಾತ್ರಾ ಗುಣ ಶಬ್ದವು. ಕಿವಿಯಿಂದ ನಾವು ಕೇಳುವಾಗ ಉತ್ತಮವಾದ ಕಥಾಶ್ರವಣ, ದೊಡ್ಡವರು ಮಾಡಿರುವ ಪ್ರಾಕೃತ ಕೀರ್ತನಾದಿಗಳೇ ಆಗಲಿ, ಇವೇ ಮೊದಲಾದ ಕರ್ಣಾನಂದ ಹೊಂದುವಾಗ, ಇವುಗಳೆಲ್ಲವೂ ಭಗವದ್ಪೂಜೆ ಎಂದು ಭಾವಿಸಬೇಕು. ವಾಯುಸ್ಥಾನವು ನಮ್ಮ ತ್ವಗಿಂದ್ರಿಯವು. ಅದರ ಗುಣವು ಸ್ಪರ್ಶ. ಇದರಲ್ಲಿ ವನಿತಾದಿ ವಿಷಯಸ್ಪರ್ಶದಿಂದ ಸುಖವೆಂದು ಭಾವಿಸುವರು. ಈಗ ಅಲ್ಪಸುಖವನ್ನನ್ನುಭವಿಸಿ, ಮುಂದೆ ಕಷ್ಟಪಡುವರು. ಇದನ್ನು ಅಪೇಕ್ಷಿಸದೆ ತ್ವಗಿಂದ್ರಿಯವು ಅವನ ಆಲಿಂಗನಕ್ಕೆ ಎಂದು ಭಾವಿಸುವುದು, ಅಥವಾ ಗೃಹಸ್ಥಾಶ್ರಮಿಯು ಋತುಕಾಲದಲ್ಲಿ ಸ್ವಸ್ತ್ರೀ ಅಂಗಸಂಗವನ್ನು ಸಹ ಇಂದ್ರಿಯ ಪ್ರೀತಿಗೆಂದು ಭಾವಿಸದೆ, ಭಗವತ್ಪ್ರೀತ್ಯರ್ಥವಾಗಿಯೂ, ಸಂತಾನ ಪ್ರಾಪ್ತಿದ್ವಾರಾ ಪಿತೃಋಣ ಪರಿಹಾರಕ್ಕೋಸ್ಕರವೆಂದೂ, ತಿಳಿದು, ಅದೂ ಒಂದು ಪೂಜಾ ಸಾಧನವೆಂದು ಭಾವಿಸಬೇಕು. ತೇಜಸ್ತತ್ವದ ಸ್ಥಾನವು ನೇತ್ರವು, ಅದರ ಗುಣವು ರೂಪ. ಭಗವಂತನ ಚಲಾಚಲ ಪ್ರತಿಮೆಗಳನ್ನು ನೋಡುವುದು. ಭಗವದ್ಭಕ್ತರನ್ನು ನೋಡುವುದು, ಇವುಗಳಿಗೆ ಉಪಯೋಗಿಸುವುದರಿಂದ ರೂಪಗುಣವಿಶಿಷ್ಟವಾದ (ಅಗ್ನಿ) ತೇಜಸ್ತತ್ವವು ಪೂಜಾ ಸಾಧನವಾಯಿತು. ಉದಕ (ಅಪ್ಪು) ತತ್ತ್ವದಸ್ಥಾನ ನಾಲಿಗೆ. ಇದರ ಗುಣವು. ರಸ. ಭಗನ್ನಿವೇದಿತ ಪದಾರ್ಥವನ್ನು ಭಕ್ಷಿಸುವುದೊಂದು ಪೂಜಾರೂಪವು. ಇದಕ್ಕೆ ಸಾಧನವು ರಸವಿಶಿಷ್ಟವಾದ ಉದಕತತ್ತ್ವವೆಂದು ತಿಳಿಯಬೇಕು. ಪೃಥ್ವೀತತ್ತ್ವ ಸ್ಥಾನವು ಮೂಗು, ಇದರ ಗುಣವು ಗಂಧ. ಭಗವಂತನಿಗೆ ಅರ್ಚಿಸಿದ ನಿರ್ಮಾಲ್ಯಾದಿಗಳನ್ನು ಆಘ್ರಾಣಿಸುವುದೊಂದು ಭಗವತ್ಪೂಜಾ. ಇದಕ್ಕೆ ಸಾಧನವು ಭೂತತತ್ತ್ವವು. ಇನ್ನು ಹೆಚ್ಚಿಗೆ ಬೆಳೆಸುವುದರಿಂದೇನು ? ಸ್ವಲ್ಪಮಟ್ಟಿಗೆ ಇಲ್ಲಿ ಸೂಚಿಸಲ್ಪಟ್ಟಿದೆ, ಇದರಂತೆ ಆಕಾಶಾದಿ ಒಂದೊಂದು ಭೂತಗಳೊಳಗೂ, ಅನೇಕ ವಿಧ ಪೂಜಾಸಾಧನಗಳನ್ನು ತಮ್ಮ ತಮ್ಮ ಯೋಗ್ಯತಾನುಸಾರ ಹೊಸಹೊಸದಾಗಿ ಕಲ್ಪಿಸಿಕೊಂಡು, ಧ್ಯಾನಕ್ಕೆ ಭಾಗವತ

ನವಮಸ್ಕಂಧದಲ್ಲಿ ಅಂಬರೀಷೋಪಾಖ್ಯಾನದಲ್ಲಿ ಇದೇ ಪ್ರಕಾರ ಅನುಷ್ಠಾನಕ್ಕೆ ತಂದಿರುವುದಾಗಿ ಹೇಳಿರುವರು.

**"ಸವೈಮನಃ ಕೃಷ್ಣಪಾದಾರವಿಂದಯೋರ್ವಚಾಂಸಿ ವೈಕುಂಠ ಗುಣಾನುವರ್ಣನೇ ।**

**ಕರೌ ಹರೇರ್ಮಂದಿರ ಮಾರ್ಜನಾದಿಷು ಶ್ರುತೀ ಚಕಾರಾಚ್ಯುತ ಸತ್ಕಥೋದಯೇ ॥**

**ಮುಕುಂದ ಲಿಂಗಾಲಯ ದರ್ಶನೇ ದೃಶೌತದ್ಭೃತ್ಯ ಗಾತ್ರ ಸ್ಪರ್ಶೇಂಗ ಸಂಗಂ ।**

**ಘ್ರಾಣಂ ಚ ತತ್ಪಾದಸರೋಜ ಸೌರಭ ಶ್ರೀ ಮತ್ತು ಲಸ್ಯಾಂ ರಸನಾಂತದರ್ಪಿತೇ ॥**

**ಪಾದೌ ಹರೇಃ ಕ್ಷೇತ್ರಪಥಾನುಸರ್ಪಣೆ ಶಿರೋಹೃಷೀಕೇಶ ಪದಾಭಿವಂದನೇ ।"**

**ಕಾಮಂತು ದಾಸ್ಯೇ ನತು ಕಾಮಕಾಮ್ಯಯಾ ತಥೋತ್ತಮ ಶ್ಲೋಕಜನಾಶ್ರಯಾಂ ರತಿಂ ।**

ಅಂಬರೀಷನು ತನ್ನ ಮನಸ್ಸನ್ನು ಶ್ರೀಪರಮಾತ್ಮನ ಪಾದಾರವಿಂದಗಳಲ್ಲಿಯೂ, ವಾಕ್ಕುಗಳನ್ನು ವೈಕುಂಠಪ್ರದನಾದ ಶ್ರೀಹರಿಯ ಗುಣಗಳನ್ನು ವರ್ಣಿಸುವುದಕ್ಕೂ, ಕರಗಳನ್ನು ಮನೆಯಲ್ಲಿ ಕಸತೆಗೆದು, ಸಾರಣೆ ಮೊದಲಾದ ಕಾರ್ಯಗಳು ಮಾಡವುದಕ್ಕೂ, ಕಿವಿಗಳನ್ನು ಭಗವತ್ಕಥೆಯನ್ನು ಕೇಳುವುದಕ್ಕೂ ನೇತ್ರಗಳನ್ನು ಪರಮಾತ್ಮನ ಪ್ರತಿಮಾದಿಗಳ ದರ್ಶನಕ್ಕೂ, ತ್ವಗಿಂದ್ರಿಯವನ್ನು ಭಕ್ತರ ಆಲಿಂಗನಕ್ಕೂ, ಮೂಗನ್ನು ಶ್ರೀಪರಮಾತ್ಮನ ಪಾದಕಮಲಕ್ಕರ್ಪಿಸಿದ ಸುಗಂಧವಾದ ಶ್ರೀತುಲಸಿ ಮೊದಲಾದವುಗಳನ್ನು ಆಘ್ರಾಣಿಸುವುದಕ್ಕೂ,

ನಾಲಿಗೆಯನ್ನು ಪರಮಾತ್ಮನ ನೈವೇದ್ಯಭಕ್ಷಣಕ್ಕೂ, ಪಾದಗಳನ್ನು ತೀರ್ಥ ಕ್ಷೇತ್ರ ಸಂಚಾರಕ್ಕೂ. ಶಿರಸ್ಸನ್ನು ಪರಮಾತ್ಮನ ನಮಸ್ಕಾರಕ್ಕೂ ಉಪಯೋಗ ಪಡಿಸಿದ್ದನು. ಕಾಮ ಅಂದರೆ ಇಚ್ಛೆ, ಇಂತಹ ಕಾಮವನ್ನು ಪರಮಾತ್ಮನಿಗೆ ತಾನು ದಾಸನಾಗಬೇಕೆಂಬ ವಿಷಯದಲ್ಲಿ ಮಾತ್ರ ಇಟ್ಟಿದ್ದನು. ರತಿ ಅಂದರೆ ಉತ್ತಮಶ್ಲೋಕನ ಭಕ್ತರ ಅಂಗಸಂಗವೇ ಸುಖವೆಂದು ಭಾವಿಸಿದ್ದನು. ಆದ್ದರಿಂದಲೇ ಶ್ರೀಹರಿಯು ಅಂಬರೀಷನ ರಕ್ಷಣೆಗೋಸುಗ ಯಾರಿಗೂ ಕೊಡದ ಚಕ್ರಾಯುಧವನ್ನೇ ಅವನಿಗೆ ಕೊಟ್ಟಿದ್ದನು.

ಪೂಜೆ ಎಂದರೆ, ಇದಕ್ಕಿಂತಲೂ ಪೂಜೆ ಮತ್ತಾವುದು ? ಪೂಜಾಸಾಧನ ವಾದರೂ ಇದಕ್ಕಿಂತಲೂ ಹೆಚ್ಚಿನದು ಮತ್ತಾವದುಂಟು ? ಆದ್ದರಿಂದಲೇ ದಾಸರಾಯರು ಹೊಸ ಹೊಸದಾದ ಪೂಜಾಸಾಧನಗಳು ಆಕಾಶಾದಿಗಳಲ್ಲಿ ಚಿಂತಿಸಬೇಕೆಂದು ಹೇಳಿರುವರು. ಹೀಗೆ ಸರ್ವಕಾಲಗಳಲ್ಲಿಯೂ ಚಿಂತಿಸುತ್ತಾ ಪರಮಾತ್ಮನನ್ನು ಪೂಜಿಸಿದರೆ ಆ ಆನಂದವು ಹೇಗಿರುತ್ತದೆಂಬುದನ್ನು ಅನುಭವಕ್ಕೆ ಬಂದಿರುವವರಿಗೆ ಗೊತ್ತೇ ಹೊರತು ವರ್ಣಿಸಲು ಸಾಧ್ಯವಿಲ್ಲ. ಆದ್ದರಿಂದ ದಾಸರಾಯರು ಅರ್ಚಿಸಿ ನೋಡೆಂದರು. ಆನಂದದಿಂದ ಕುಣಿದು ಸ್ತೋತ್ರಮಾಡು. ಇದಕ್ಕಿಂತಲೂ ದೊಡ್ಡ ಸಾಧನ ಮತ್ತಾವುದೂ ಇಲ್ಲ ॥೧೨॥

(೩) "ಭಾವದರ್ಪಣಟೀಕಾ" ವ್ಯಾಖ್ಯಾನ :—

ಆಕಾಶಗತ ಶಬ್ದವೇ ವಾದ್ಯ. ವಾಯುವೇ ಚಾಮರ, ಅಗ್ನಿಯೇ ದೀಪವು. ಜಲವೇ ರಸ. ಪೃಥ್ವೀ ಗಂಧ. ಏವಂ ರೀತ್ಯಾ ಚಿಂತನಿಗೆ ತಂದು ಶ್ರೀಹರಿಗೆ ಅರ್ಪಿಸೆಂದು ಎರಡು ಪದ್ಯದಿಂದ ಹೇಳುತ್ತಾರೆ- "ಬಾಂದಳ"- ಎಂಬುದರಿಂದ.

ಬಾಂದಳ = ಆಕಾಶ. ಸಂದಣಿಸಿ = ತುಂಬಿಕೊಂಡು. ॥೧೨॥

(೫) "ಗುರುಹೃದಯ ಪ್ರಕಾಶಿಕಾ" ವ್ಯಾಖ್ಯಾನ :—

ಬಾಂದಳವೆಂದರೆ, ಭಂ ಎಂಬ ನಕ್ಷತ್ರದ ಸ್ಥಳ, ಆಕಾಶ ಪ್ರದೇಶ ಮೊದ

ಲಾದ ಪಂಚಭೂತಗಳಲ್ಲಿ ದೇವರನ್ನು ಪೂಜಿಸುವುದಕ್ಕೆ ಸಾಧನವಸ್ತುಗಳು ಬಗೆ ಬಗೆ ಹೊಸಪರಿಯಾಗಿ ಸಂದಣಿಸಿಕೊಂಡಿಹವು, ಎಂದರೆ, ನಿಬಿಡವಾಗಿ ತುಂಬಿಹವು ಎಂದರ್ಥ. ಅನಿತ ಎಂದರೆ, ಅಷ್ಟು ವಸ್ತುಗಳನ್ನು ಧ್ಯಾನಕ್ಕೆ ತಂದು, ಗೋವಿಂದನೆಂಬ ವೇದಗವ್ಯ ದೇವರಿಗೆ ಸಮರ್ಪಿಸಿ, ದೇವರನ್ನು ಮನಸ್ಸಿನಲ್ಲಿ ನೋಡುತ್ತಾ, ನರ್ತನ ಮಾಡುತ್ತಾ ಸ್ತುತಿಸು.

ನದಿಯ ಜಲವನ್ನೇ ನದ್ಯಭಿಮಾನಿದೇವತೆಗೆ ಅರ್ಘ್ಯಕೊಡುವಂತೆ, ದೇವರಿಂದ ಸೃಷ್ಟಿಯಾಗಿ, ದೇವರಲ್ಲೇ ಇರುವ ಪದಾರ್ಥಗಳಿಂದಲೇ ದೇವರನ್ನು ಪೂಜಿಸಬೇಕಲ್ಲದೆ, ಬೇರೆ ತರುವುದಕ್ಕಿಲ್ಲವಾದ್ದರಿಂದ ಹೀಗೆ ಭಾವಿಸುವುದು **ಶ್ರೀಹರಿಪೂಜೆಯೆಂದರ್ಥ** ಇದರಿಂದ-

**"ಯಜ್ಞೇನ ಯಜ್ಞಮಯಜಂತ ದೇವಾಃ"**

ಎಂಬ ಶ್ರುತ್ಯರ್ಥ ವಿವರಿಸಿತು ॥೧೨॥

# ಸರ್ವವ್ಯಾಖ್ಯಾನಸಾರಸಂಗ್ರಹ

ಪಂಚಭೂತಗಳು ಐದುಪ್ರಕಾರ. (೧) ಆಕಾಶ. (೨) ವಾಯು (೩) ತೇಜಸ್ಸು (೪) ಅಪ್ಪು ಮತ್ತು (೫) ಪೃಥ್ವೀ. ಈ ಭೂತಪಂಚಕಗಳಲ್ಲಿ ಮೊದಲನೆಯದಾದ ಆಕಾಶ ತತ್ತ್ವವು ಅವಕಾಶಪ್ರದವು. ಅವಕಾಶ ಎಂದರೆ, ಇರುವುದಕ್ಕೆ ಪ್ರದೇಶ ಅಥವಾ ಸ್ಥಳವೆಂದರ್ಥ. ಇದಕ್ಕೆ ಬಾಂದಳವೆಂದು ಹೆಸರು. ಅಂದರೆ ಬಾನಿನ ತಳ = ಬಾಂದಳವೆಂದಾಗಿವೆ. "ಬಾನ್" ಎಂದರೆ. ಸರ್ವತ್ರ ವ್ಯಾಪ್ತವಾದ ಆಕಾಶವು. ಆದರ:ತಳವೇ ಸುತ್ತಲೂವ್ಯಾಪಿಸಿಕೊಂಡು ನಮಗೆ ಗೋಚರಿಸುತ್ತಿರುವ ಅವಕಾಶವು. ಇಂತಹ ಭೂತಪಂಚಕಗಳ ಗುಣ ಧರ್ಮಗಳಿಗೆ ತನ್ಮಾತ್ರಾ ಎಂದು ಹೆಸರು. ಅನುಕ್ರಮವಾಗಿ (೧)

ಶಬ್ದ, (೨) ಸ್ಪರ್ಶ (೩) ರೂಪ, (೪) ರಸ ಮತ್ತು (೫) ಗಂಧ ಗಳೆಂದು ಐದು ಪ್ರಕಾರ. ಭೂತ ಪಂಚಕಗಳು ಈ ತನ್ಮಾತ್ರಾಗುಣಗಳಿಗೆ. ಅಧಿಷ್ಠಾನಗಳು- ಆಯಾಯಾ ತನ್ಮಾತ್ರಾಗುಣವಿಶೇಷಗಳು ಅಧಿಷ್ಠೇಯಗಳು. ಆಕಾಶವೇ ಮೊದಲಾದ ಒಂದೊಂದು ಪಂಚಭೂತಗಳಲ್ಲಿಯೂ ಪೂಜಾಸಾಧನ ಪದಾರ್ಥಗಳನ್ನು ಚಿಂತಿಸಬೇಕೆಂದು ತಿಳಿಸುತ್ತಾರೆ. ಅವುಗಳ ವಿವರ ಇಂತಿದೆ :-

(೧) ಆಕಾಶತತ್ತ್ವದ ತನ್ಮಾತ್ರಾಗುಣವಿಶೇಷವು **ಶಬ್ದವು.** ಸರ್ವ ಶಬ್ದ ಸ್ವರ ವರ್ಣವಾಚ್ಯನಾದ ಶ್ರೀ ಪರಮಾತ್ಮಗೆ ಈ ಪೂಜಾಸಾಧನೋಪ ಕರಣವಾದ ಶಬ್ದವು ಅರ್ಪಿತವೆಂದು ಭಾವಿಸಬೇಕು.

(೨) ವಾಯುವಿನ ತನ್ಮಾತ್ರಗುಣವು **ಸ್ಪರ್ಶವು.** ಜ್ಞಾನಿಗಳಿಂದ ಕಲಾ ರ್ಚಿತವಾದ ಸನ್ನಿಧಾನವಿಶಿಷ್ಟವಾದ ಪ್ರತಿಮಾದಿಗಳನ್ನು ಕರದಿಂದ ಸ್ಪರ್ಶಿಸಿ, ಕಣ್ಣಿಗೊತ್ತಿಕೊಳ್ಳುವ ಕ್ರಿಯಾ ಕಲಾಪಗಳೆಲ್ಲವೂ ಸ್ಪರ್ಶವೆಂಬ ಪೂಜಾಸಾಧನ ಯೋಗ್ಯವಾದ ಮಾಧ್ಯಮಗಳೆಂದು ಚಿಂತಿಸಬೇಕು. ಅಂತೆಯೇ ಭಗವದ್ಭಕ್ತರ ಆಲಿಂಗನ ಸುಖ ಇತ್ಯಾದಿ.

(೩) ತೇಜಸ್ತತ್ತ್ವದ ತನ್ಮಾತ್ರಾಗುಣವು **ರೂಪವು.** ದೇವಮಂದಿರ ಗಳ ದರ್ಶನ, ಸ್ವಯಂವ್ಯಕ್ತ ಕ್ಷೇತ್ರಗಳು ಮತ್ತು ಕ್ಷೇತ್ರಮೂರ್ತಿಗಳ ಸಂದ ರ್ಶನ ಭಾಗ್ಯ, ಭಗವದ್ಭಕ್ತರಾದ ಜ್ಞಾನಿಗಳ ಸಂದರ್ಶನ. ಸಚ್ಛಾಸ್ತ್ರಗಳ ಅವಲೋಕನ ಇತ್ಯಾದಿ ಕಾರ್ಯವಿಶೇಷಗಳೆಲ್ಲವೂ-ತೇಜಸ್ಸು-ರೂಪ-ನೇತ್ರ ಇವು ಗಳಿಗೆ ಸಂಬಂಧಪಟ್ಟವು. ಇವೂ ಪೂಜಾಸಾಧನ ಸಾಮಗ್ರಿಗಳೇ.

(೪) ಅಪ್‌ತತ್ತ್ವದ ತನ್ಮಾತ್ರಗುಣವು **ರಸವು.** ಇದನ್ನು ಗ್ರಹಿಸುವ ಜ್ಞಾನೇಂದ್ರಿಯವು ನಾಲಿಗೆ (ರಸನೇಂದ್ರಿಯವು). ಭಗವದರ್ಪಿತವಾದ ನೈವೇದ್ಯ, ರಸಭರಿತವಾದ ಫಲಗಳು. ಸುರಸೋಪೇತವಾದ ಅನಿಷಿದ್ಧ ಭೋಜ್ಯವಸ್ತುಗಳು. ಇತ್ಯಾದಿ ದೇವಪೂಜಾರ್ಹವಾದ ಉಪಕರಣಗಳಾಗಿ ಅಪತತ್ತ್ವ-ರಸತನ್ಮಾತ್ರಾ-ರಸನೇಂದ್ರಿಯ ಇವುಗಳಿಗೆ ಸಂಬಂಧಪಟ್ಟವು.

(೫) ಪೃಥ್ವೀ ತತ್ತ್ವದ ತನ್ಮಾತ್ರಾಗುಣವು **ಗಂಧವು.** ಶ್ರೀಹರಿಯ ನಿರ್ಮಾಲ್ಯವಾದ ಶ್ರೀ ತುಲಸೀ, ಸುಗಂಧಯುಕ್ತ ಪುಷ್ಪಗಳು ಇವು ಗಂಧಕ್ಕೆ ಆಗರ ವಸ್ತುಗಳು. ಪೂಜೋಪಯೋಗ್ಯ ಸಾಧನ ಪರಿಕರಣಗಳು. ಪೃಥ್ವೀ— ಗಂಧ-ನಾಸಿಕ ಇವುಗಳಿಗೆ ಸಂಬಂಧಪಟ್ಟವು.

ಇಂತು ಪ್ರತಿಯೊಂದು ಭೂತಪಂಚಕದಲ್ಲಿ ವಿದ್ಯಮಾನವಾಗಿರುವ ತನ್ಮಾತ್ರಾಗುಣಗಳು ಭಗವದರ್ಪಿತವಾಗಲು. ಪೂಜಾಯೋಗ್ಯ ಪರಿಕರಗಳೆನಿಸುವುವು.

ಭೂತಪಂಚಕಗತ, ತನ್ಮಾತ್ರಾಗುಣಗತ ಅಧಿಷ್ಠಾನಗಳೆಲ್ಲವೂ ಶ್ರೀ ಪರಮಾತ್ಮನ ಪೂಜೆಗೆ ಅರ್ಹವೆಂದು ಜ್ಞಾನಾನುಸಂಧಾನದಿಂದ ಮನಸಾ ಚಿಂತಿಸಿದಾಗ, ಅಂತಹ ಪೂಜಾ ಮಾಧ್ಯಮ ರೂಪವಾದ ಪರಿಕರ ವಿಶೇಷಗಳೆಲ್ಲವೂ ಹೊಸಹೊಸದಾಗಿ ಗೋಚರಿಸುವುವು. ಒಂದಕ್ಕೊಂದು ನೂತನವಾಗಿ ಕಾಣಿಸುವುವು. ಇವು ಒಂದೊಂದರಲ್ಲೊಂದು ಓತಪ್ರೋತವಾಗಿ ವ್ಯಾಪಿಸಿಕೊಂಡು ದಟ್ಟೈಸಿ ಹರಡಿರುವುವು ಇಂತು ಸಂದರ್ಶಿಸಿಕೊಂಡಿಹ ವಿಧವಿಧವಾದ ಹೊಸ ಹೊಸ ಬಗೆಯ ವಸ್ತುಗಳನ್ನು ಧ್ಯಾನಕ್ಕೆ ವಿಷಯವನ್ನಾಗಿ ಮಾಡಿ, ಮನಸಾ ಚಿಂತಿಸಬೇಕು. ಹಾಗೆ ಮಾನಸ ಪೂಜಾವಿಧಾನದಿಂದ ವೇದ ಪ್ರತಿಪಾದ್ಯನಾದ ಗೋವಿಂದನಾಮಕ ಶ್ರೀ ಪರಮಾತ್ಮನನ್ನು ನಿರಂತರವೂ ಪೂಜಿಸುತ್ತಿರಬೇಕು. ಆಗ ದಯಾಳುವಾದ ಶ್ರೀ ಪರಮಾತ್ಮನು ತನ್ನ ಸಂದರ್ಶನ ಭಾಗ್ಯವನ್ನೀಯುವನು. ಆತನ ರೂಪ ವಿಶೇಷಗಳನ್ನು ಕಂಡಾಗ. ಆನಂದ ಉದ್ರೇಕವಾಗುವುದು. ಆನಂದೋದ್ರೇಕದಿಂದ ಜೀವನು ಮೈಮರೆತು, ಪರವಶನಾಗಿ ನರ್ತಿಸುತ್ತಾನೆ. ಹಾಗೆ ನಲಿನಲಿದಾಡುತ್ತಾ, ಆ ಅಗಮ್ಯಮಹಿಮಾಸಂಪನ್ನನಾದ ಶ್ರೀ ಪರಮಾತ್ಮನನ್ನು ಹಿಗ್ಗುತ್ತಾ ಸ್ತುತಿಸು–ಎಂದು ಭಕ್ತ್ಯುದ್ರೇಕದ ಪಾರಮ್ಯವನ್ನು ತಿಳಿಸುತ್ತಾರೆ ಈ ಪದ್ಯದಿಂದ ||೧೨||

# ಪದ್ಯ (೧೩)

**ಮೂಲ :—**

**ಜಲಜನಾಭನಮೂರ್ತಿ ಮನದಲಿ ।**
**ನೆಲೆಗೊಳಿಸಿ ನಿಶ್ಚಲಭಕುತಿಯಲಿ ।**
**ಚಳಿ ಬಿಸಿಲು ಮಳೆ ಗಾಳಿಗಳ ನಿಂದಿಸದೆ ನಿತ್ಯದಲಿ ॥**
**ನೆಲದಲಿಹ ಗಂಧವೆ ಸುಗಂಧವು ।**
**ಜಲವೆ ರಸ ರೂಪವೆ ಸುದೀಪವು ।**
**ಎಲರು ಚಾಮರ ಶಬ್ದವಾದ್ಯಗಳನರ್ಪಿಸಲು ಒಲಿವ ॥೧೩॥**

**ಅವತರಣಿಕೆ :—**

ಪದ್ಮನಾಭರೂಪೀ ಶ್ರೀ ಪರಮಾತ್ಮನ ಪ್ರತೀಕವನ್ನು ಮನಸ್ಸಿನಲ್ಲಿ ಸ್ಥಿರೀಕರಿಸಿ, ಸುದೃಢರೂಪವಾದ ಭಕ್ತಿಯಿಂದ, ಚಳಿ, ಬಿಸಿಲು. ಮಳೆ, ಗಾಳಿ ಮುಂತಾದ ಋತುಧರ್ಮ ಸಂಬಂಧವಾದ ವೈಪರೀತ್ಯಗಳನ್ನು ಬಾಧಕವೆಂದು ತಿಳಿದು, ನಿಂದಾಮಾಡದೆ, ಕಾಲಾಂತರ್ಗತನಾದ ಶ್ರೀ ಪರಮಾತ್ಮನಿಂದ ಋತುಧರ್ಮಗಳು ಪ್ರವರ್ತಿತವಾಗುತ್ತಿರುವುವು ಎಂದರಿತು, ಪೃಥ್ವೀಗತ ಗಂಧವೇ ಶ್ರೀ ಪರಮಾತ್ಮನಿಗೆ ಸುಗಂಧಾರ್ಪಣೆ ಎಂದೂ, ಉದಕವೇ ರಸವಾಚ್ಯನಾದ ಪರಮಾತ್ಮನಿಗೆ ಅರ್ಪಿತವೆಂದೂ, ತೇಜೋಗತ ರೂಪವೇ ಆತನಿಗೆ ಹಚ್ಚಿಡುವ ದೀಪವೆಂತಲೂ ಬೀಸುತ್ತಿರುವ ಗಾಳಿಯೇ ಅನಲಾಂತರ್ಗತನಾದ ಸ್ವಾಮಿಗೆ ಚಾಮರವೆಂದೂ, ಆಕಾಶದಿಂದ ಉತ್ಪನ್ನವಾದ ಸಕಲವಿಧ ಶಬ್ದ ವಿಶೇಷಗಳೆಲ್ಲವೂ ಭಗವಂತನಿಗೆ ವಾದ್ಯಗಳೆಂದೂ ಜ್ಞಾನಾನುಸಂಧಾನದಿಂದ ಶ್ರೀ ಪರಮಾತ್ಮನಿಗೆ ಅರ್ಪಿಸಿದರೆ, ಆತನು ಸುಪ್ರಸನ್ನನಾಗಿ ಜೀವರನ್ನು ಅನುಗ್ರಹಿಸುವನು–ಎಂದು ನಿರೂಪಿಸುತ್ತಾರೆ– **"ಜಲಜನಾಭನ"**– ಎಂಬ ಪ್ರಸಕ್ತಸಂಧಿಗತ ೧೩ ನೆಯ ಈ ಪದ್ಯದಿಂದ ॥೧೩॥

# ವ್ಯಾಖ್ಯಾನಗಳು

## (೧) ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ:—

ಶ್ರೀ ಪದ್ಮನಾಭದೇವರ ಆಕಾರವನ್ನು (ಜಲಜನಾಭನ ಮೂರ್ತಿ) ಹೃದಯಗೋಳಕದಲ್ಲಿ ವಿದ್ಯಮಾನವಾದ ಮಾನಸಾವಾಸನದಿಂದ (ಮನದಲಿ) ಸ್ಥಿರವಾಗಿ ನಿಲ್ಲಿಸಿ (ನೆಲೆಗೊಳಿಸಿ), ತದಂರ್ಗತ ತದಾಕಾರನಾಗಿ ಶ್ರೀ ಬಿಂಬಮೂರ್ತಿ ಪದ್ಮನಾಭದೇವರು ಇದ್ದಾನೆಂದು ಭಾರತೀರಮಣ ಮುಖ್ಯ ಪ್ರಾಣಾಂತರ್ಗತನಾಗಿ ಚಿಂತಿಸಿ, ಅವನಲ್ಲೇ ಮನಸ್ಸು ಅಚ್ಛಿದ್ರವಾಗಿ ಇಟ್ಟು, ಮಹಾತ್ಮ್ಯ ಜ್ಞಾನ ಸುದೃಢ ಸ್ನೇಹಪೂರ್ವಕವಾದ ಭಕ್ತಿಯುಕ್ತನಾಗಿ ಬಾಹ್ಯವಿಷಯಗಳ ಮರೆತು (ನಿಶ್ಚಲಭಕುತಿಯಲಿ), ದೇಹಕ್ಕೆ ಉಪದ್ರವ ಬಡಿಸತಕ್ಕ ಚಳಿ, ತೀವ್ರವಾದ ಬಿಸಿಲು, ಇದೇ ಪ್ರಕಾರವಾಗಿ ಮಳೆ. ಇದೇ ಪ್ರಕಾರವಾದ ಗಾಳಿ, ಇವೇ ಮೊದಲಾದ ಅಧಿಷ್ಠಾನಗಳ ನಿಂದಾ ಮಾಡದೆ (ಚಳಿ ಬಿಸಿಲು ಮಳೆ ಗಾಳಿಗಳ ನಿಂದಿಸದೆ), ಆಯಾಯಾ ಕಾಲಗಳಲ್ಲಿ ಅಂತರ್ಗತ ಶ್ರೀ ಪರಮಾತ್ಮ ಈ ಅಧಿಷ್ಠಾನಗಳಲ್ಲಿ ಇದ್ದಾನೆ ಎಂದು ತಿಳಿದು, ಯಾವತ್ತೂ ಶ್ರೀ ಪರಮಾತ್ಮನ ವ್ಯಾಪಾರವೆಂತ ಅನುಸಂಧಾನಮಾಡಿ ಅರ್ಚಿಸೋವನಾಗು. ಪ್ರತಿದಿನದಲ್ಲೂ ಈ ಪಂಚಭೂತಗಳ ಅರ್ಚಿಸೋ ಬಗೆ ಹ್ಯಾಗೆಂದರೆ-ಪೃಥ್ವಿಯಲ್ಲಿ ವಿದ್ಯಮಾನವಾದ (ನೆಲದಲಿಹ) ಪೃಥ್ವೀಗುಣವಾದ ಗಂಧವೇ ದಿವ್ಯವಾದ ಪರಿಮಳಯುಕ್ತವಾದ ಗಂಧಗಳು ಎಂತಲೂ, ದಿವ್ಯಪುಷ್ಪಗಳು ಎಂತಲೂ, ಪೃಥ್ವಿಯೇ ಯಾವತ್ತು ಮಂಟಪವು ಎಂತಲೂ, ಇನ್ನೂ ದಿವ ವಸ್ತ್ರಗಳು, ದಿವ್ಯನವರತ್ನಾಭರಣಗಳು, ಶ್ರೀ ತುಲಸೀ ಮೊದಲಾದದ್ದು ಯಾವತ್ತೂ ಅರ್ಚಿಸಿದಂತಾಯಿತು. ಜಲ ಅರ್ಪಿಸೋದರಿಂದ ಜಲ ಸಂಬಂಧವಾದ ಗಂಗಾದಿ ಯಾವತ್ತೂ ತೀರ್ಥಗಳಿಂದ ಅಭಿಷೇಕರೂಪವಾದ ಅರ್ಚನ ಮಾಡಿದಂತಾಯಿತು. ಈ ಜಲಗತರಸ ಅರ್ಪಿಸೋಣದರಿಂದ, ದಿವ್ಯವಾದ ಷಡ್ರಸೋಪೇತವಾದ ಪದಾರ್ಥಗಳೂನೂ. ಇನ್ನೂ ಅನೇಕ ವಿಧವಾದ ಫಲಾದಿಗಳು ಸಮರ್ಪಣಮಾಡಿ ಅರ್ಚಿಸಿದಂತಾಯಿತು. ತೇಜಸ್ಸು ಅಗ್ನಿ ಸಮರ್ಪಿ

ಸೋಣದರಿಂದ ಅನೇಕ ವಿಧವಾದ ಧೂಪಾರ್ತಿಗಳು, ಸುವಾಸನೆಗಳು ಅರ್ಪಿಸಿದಂತಾಯಿತು. ಅಗ್ನಿಗುಣವಾದ ರೂಪ ಅರ್ಪಿಸೋಣದರಿಂದ ಅನೇಕವಿಧ ಮಂಗಳಾರತಿಗಳು, ಅನೇಕ ದೀಪಗಳು ಅರ್ಪಿಸಿದಂತಾಯಿತು. ವಾಯು ಅರ್ಪಿಸೋಣದರಿಂದ ನಾನಾ ವಿಧವಾದ ಚಾಮರ ಛತ್ರಿಗಳು ಮೊದಲಾದವನ್ನು ಅರ್ಪಿಸಿದಂತಾಯಿತು. ಆಕಾಶ ಅರ್ಪಿಸೋಣದರಿಂದ ನಾನಾ ವಿಧವಾದ ಮಂಗಳ ವಾದ್ಯಗಳು, ಸ್ತೋತ್ರ ಪಾಠಗಳು, ಉಪಚಾರಗಳು ಮೊದಲಾದ್ದು ಅರ್ಪಿಸಿದಂತಾಯಿತು. ಇಂಥಾ ಅನುಸಂಧಾನ ಪೂಜಾವನ್ನು ಪೂಜಾದ್ರವ್ಯಾಂತರ್ಗತ ಶ್ರೀ ಪರಮಾತ್ಮನಿಗೂ, ಪ್ರತಿಮಾಂತರ್ಗತ ಶ್ರೀ ಬಿಂಬಾತ್ಮಕ ಶ್ರೀ ಪರಮಾತ್ಮನಿಗೂ ಐಕ್ಯ ಚಿಂತನಿಯಿಂದ ಕೊಟ್ಟರೆ, ಅದನ ಸ್ವೀಕಾರ ಮಾಡಿ. ಹೃದಯಗತ ಬಿಂಬನೂ, ಪ್ರತಿಮಾಗತ ಶ್ರೀ ಪರಮಾತ್ಮನೂ ಪ್ರತ್ಯಕ್ಷನಾಗಿ, ಇಹದಲ್ಲಿ ಮಹದೈಶ್ವರ್ಯ ಕೊಟ್ಟು, ಪಾರತ್ರಿಕದಲ್ಲಿ ಮಹಾ ಮೋಕ್ಷಾದಿಗಳು ಕೊಟ್ಟು ಸಂರಕ್ಷಣೆ ಮಾಡತಾನೆ. ಸ್ವದೇಹಗತ ಪಂಚಭೂತಗಳು. ಪಂಚ ತನ್ಮಾತ್ರಗಳು, ಬಾಹ್ಯಗತ ಪಂಚಭೂತಗಳು, ಪಂಚ ತನ್ಮಾತ್ರಗಳು, ಪೂಜತ್ವೇನ ಅರ್ಪಿಸಿದರೆ, ಸರ್ವ ಷೋಡಶೋಪಚಾರ ಪೂಜಾ ಮಾಡಿದವನಾಗತಾನೆ. ಆದ್ದರಿಂದ ಈ ಅನುಸಂಧಾನವಿರಬೇಕು ಎಂತ ತಾತ್ಪರ್ಯ ॥೧೩॥

## (೨) "ಭಾವಪ್ರಕಾಶಿಕೆ" ವ್ಯಾಖ್ಯಾನ :—

ಪ್ರಾಕಾರಾಂತವಾಗಿ ಪಂಚ ತನ್ಮಾತ್ರಾ ಗುಣಗಳಲ್ಲಿ ಭಗವತ್ಪೂಜಾ ಸಾಧನವನ್ನು ಹೇಳುತ್ತಾರೆ. ಕಮಲನಾಭನ, ರಾಮಕೃಷ್ಣಾದಿ ರೂಪಗಳನ್ನು ನಿಶ್ಚಲವಾದ ಭಕ್ತಿಯಿಂದ ಮನಸ್ಸಿನಲ್ಲಿ ಸ್ಥಿರವಾಗಿ ನಿಲ್ಲಿಸಿ, ಮಾತ್ರಾಸ್ಪರ್ಶಗಳಿಂದಾಗುವ ಛಳಿ, ಗಾಳಿ, ಬಿಸಲು, ಮಳೆ ಮೊದಲಾದವುಗಳ ದೋಷಗಳನ್ನು ದೂಷಿಸದೆ, ಆಯಾಯಾ ಕಾಲದಲ್ಲಿ ಈಶ್ವರ ಸಂಕಲ್ಪದಿಂದ ಪ್ರಾಪ್ತವಾದುದನ್ನು ಸಹನ ಮಾಡಿಕೊಂಡು, ಮನಸ್ಸಿನಲ್ಲಿಯೇ ಪರಮಾತ್ಮನನ್ನು ಪೂಜಿಸುತ್ತಾ, ಪೃಥ್ವೀ, ಅಪ್ಪು, ತೇಜಸ್ಸು, ವಾಯು, ಆಕಾಶವೆಂಬ ಪಂಚ ಭೂತಗಳ ಮಾತ್ರಾ ಗುಣಗಳಲ್ಲಿನ ಗಂಧವೇ ಸುಗಂಧವೆಂದೂ, ರಸವೇ

ಷಡ್ರಸಯುಕ್ತ ನೈವೇದ್ಯವೆಂತಲೂ, ರೂಪವೇ ದೀಪವೆಂತಲೂ. ಸ್ಪರ್ಶವೇ ಚಾಮರವೆಂತಲೂ. ಶಬ್ದವೇ ವಾದ್ಯಗಳೆಂದು ಭಾವಿಸಿ, ಪೂಜಿಸಿದರೆ, ಶ್ರೀ ಪರಮಾತ್ಮನು ಅನುಗ್ರಹ ಮಾಡುವನು. ಒಟ್ಟು ಅಭಿಪ್ರಾಯವೇನೆಂದರೆ, ಈ ಭೂಮಿಯಲ್ಲಿ ಯಾವ ಸ್ಥಳದಲ್ಲಿ ನಾವಿದ್ದರೂ, ಯಾವ ವಿಧವಾದ ಸುವಾಸನೆಯನ್ನೂ ನಮ್ಮ ಘ್ರಾಣೇಂದ್ರಿಯದಿಂದ ಆಘ್ರಾಣಿಸಿದರೂ, ಆಹಾ! ಎಂತಹ ಸುವಾಸನೆ! ಏನಾನಂದ! ಎಂದು ತನ್ನೊಳು ತಾನೇ ತೃಪ್ತನಾಗದೆ, ಆ ಸುವಾಸನೆಯನ್ನು ಘ್ರಾಣಾಂತರ್ಯಾಮಿ, ಗಂಧಗುಣವಿಶಿಷ್ಟ ಭೂತತ್ವ ರೂಪಿಯಾದ ಶ್ರೀ ಪರಮಾತ್ಮನಿಗೆ ಇದೇ ಸುಗಂಧವಾಗಿ ಅರ್ಪಿಸುವೆನು- ಎಂದು ಅರ್ಪಿಸಬೇಕು. ಷಡ್ರಸಗಳೊಳಗಿನ ರುಚಿಯನ್ನು ನಾವು ಜಿಹ್ವೇಂದ್ರಿಯ ದಿಂದ ಸ್ವೀಕರಿಸುವಾಗ ಆ ರುಚಿಯನ್ನು ರಸದಲ್ಲಿ ರಸರೂಪದಿಂದ ನಮ್ಮ ನಾಲಿಗೆಯಲ್ಲಿರುವ ಪರಮಾತ್ಮನಿಗೆ ಈ ಷಡ್ರಸಗಳ ರುಚಿಯನ್ನು ಸಮರ್ಪಿ ಸುವೆನು —ಎಂದು ಸಮರ್ಪಣೆ ಮಾಡಬೇಕು. ಇದರಂತೆ ಯಾವ ರೂಪ ಗಳನ್ನು ನೋಡಿದರೂ, ಆ ರೂಪ ಗುಣಗಳಲ್ಲಿ ತನ್ನಾಮಕನಾಗಿರುವ ಪರಮಾ ತ್ಮನಿಗೆ ನಮ್ಮ ರಕ್ಷಣೆಗೆ ಗೋಚರಿಸುವ ತೇಜೋಮಯ ರೂಪಗಳೆಲ್ಲವನ್ನೂ ದೀಪವನ್ನಾಗಿ ಸಮರ್ಪಿಸುವನು ಎಂದೆನ್ನಬೇಕು. ಬಿಸಿಲು ತಾಪದಿಂದ ನಾವು ತಪ್ತರಾದಾಗ ಸುಖವಾದ ತಂಗಾಳಿ ಬೀಸಿದರೆ, ಆ ಸ್ಪರ್ಶಸುಖವನ್ನು ಸ್ಪರ್ಶಗುಣದಲ್ಲಿರುವ ಪರಮಾತ್ಮನಿಗಿದು ಚಾಮರವೆಂದು ಸಮರ್ಪಿಸಬೇಕು. ಕಿವಿಯಲ್ಲಿ ಬೀಳುವ ಎಲ್ಲಾ ಶಬ್ದಗಳನ್ನೂ ಪರಮಾತ್ಮನಿಗೆ ವಾದ್ಯಗಳೆಂದ್ದು ಸಮರ್ಪಿಸಿ, ಪೂಜಿಸಿದರೆ, ಶೀತೋಷ್ಣಾದಿ ದ್ವಂದ್ವಗಳು ಜೀವರಿಗೆಲ್ಲಹುದು? ಅವನು ಶೀಘ್ರದಲ್ಲಿಯೇ ಭಗವದನುಗ್ರಹಕ್ಕೆ ಪಾತ್ರನಾಗುವನು ॥೧೩॥

(೩) "ಭಾವದರ್ಪಣಟೀಕಾ" ವ್ಯಾಖ್ಯಾನ :—

"ಜಲಜನಾಭೇತಿ"—

"ವೃಷ್ಟೌ ಪಂಚವಿಧಂ ಸಾಮೋಪಾಸೀತ ವೃಷ್ಟಿಂ ನ ನಿಂದ್ಯಾತ್" ಇತ್ಯಾದಿ ಪ್ರಾರಂಭ ಮಾಡಿ, ಕೆಲವು ಛಾಂದೋಗ್ಯದ ಖಂಡಗಳಲ್ಲಿ

ನಿರೂಪಣ ಮಾಡಿದ ಅರ್ಥವನ್ನೇ ಸಂಕ್ಷೇಪದಿಂದ 'ಇಲ್ಲಿ ನಿರೂಪಣಮಾಡಿದ್ದಾರೆ ಎಲರು = ಗಾಳಿ. ಪೂಜಾವಿವರ :—

"ಗರುಡಸೂಪಕಾರನಾದನು ಕೇಳಿ ಸರಸ್ವತೀ ಕ್ಷೀರ ।
ಮಂಡಿಗೆ ಬ್ರಹ್ಮ ಉರಗೇಂದ್ರ ಕುಂಡಲದ್ವಯನಾಗಿ ॥"

ಎಂದು ಧ್ಯಾನಪ್ರಕರಣಸುಳಾದಿ ರೀತ್ಯಾ, ಇಲ್ಲಿಯೂ ಆದರಂತೆ ಧೇನಿಸಿ, ತತ್ತದಭಿಮಾನಿ ಸುರರು ತದ್ರೂಪರಾಗಿದ್ದಾರೆಂದು ಅರ್ಚಿಸಿದರೆ, ಒಲಿವನೆಂದು ದಾಸಾರ್ಯರ ಹೃದಯ ॥೧೩॥

(೪) ವಾದಿರಾಜಾಚಾರ್ಯರ ವ್ಯಾಖ್ಯಾನ (ಸಂಸ್ಕೃತಮೂಲ) :—

ಜಲಜೇತಿ॥ ನೆಲೆಗೊಳಿಸಿ = ನಿಲಿಸಿ ಛಳಿ-ಛಾಂದೋಗ್ಯ ದ್ವಿತೀಯಖಂಡೇ ಉದ್ಯನ್ಹಿಂಕಾರ ಇತ್ಯುಕ್ತ್ವಾ ತದಂತಂ ನ ನಿಂದೇತ್ ತದ್ವ್ರತಮ್ ॥ ಅಭ್ರಾಣಿ ಇತ್ಯತ್ರ ವರ್ಷಂತಂ ನನಿಂದೇತ್ ತದ್ವ್ರತಮ್ ॥ ವಸಂತ ಇತ್ಯತ್ರ ಕೀರ್ತ ತರ್ಜೂನ್ ನನಿಂದೇತ್ ತದ್ವ್ರತಮ್ ॥ ರೂಪಮೇವ ದೀಪಃ ॥ ಎಲರು = ಗಾಳಿ। ಶಬ್ದಾಃ ವಾದ್ಯಾನಿ। ಅಕ್ಷಿ ವಿದ್ಯಯಾಯತ್ ಸ್ಥಾನತ್ವಾದಿ ವಾಚಾ ॥೧೩॥

ಕನ್ನಡಾನುವಾದ :—

ಚಳಿ, ಬಿಸಿಲು, ಗಾಳಿ, ಮಳೆ ಮುಂತಾದವು ಋತು ಧರ್ಮಕ್ಕೆ ಸಂಬಂಧಪಟ್ಟ ಪ್ರಬೇಧಗಳು, ಶ್ರೀ ಪರಮಾತ್ಮನ ನಿಯಂತ್ರಣದಂತೆ ಇವುಗಳ ವ್ಯಾಪಾರ ವಿಶೇಷಗಳು. ಈ ಕಾರಣದಿಂದ ಅವುಗಳನ್ನು ನಿಂದಿಸದೆ, ಸಹಿಸಿಕೊಂಡು, ನಿತ್ಯದಲ್ಲಿ ಸರ್ವಸಮರ್ಪಣ ಭಾವದಿಂದ ಶ್ರೀ ಪರಮಾತ್ಮನನ್ನು ಉಪಾಸಿಸಬೇಕು. ಛಾಂದೋಗ್ಯ ಉಪನಿಷತ್ತಿನಲ್ಲಿ ಉಕ್ತನಾಗಿರುವ ಬೃಹತ್ಸಾಮ್ಯವೇದ್ಯ ಭಗವದುಪಾಸನಾ ಪ್ರಕರಣದಲ್ಲಿ ಪಂಚವಿಧ ಸಾಮೋಪಾಸನೆಯೂ ಹೇಳಲ್ಪಟ್ಟಿದೆ. ಅವು ಯಾವುವೆಂದರೆ :—

(೧) ಉದಯಿಸುತ್ತಿರುವ ಭಾಸ್ಕರನಲ್ಲಿ ಹಿಂಕಾರ ನಾಮಕ ಪ್ರದ್ಯುಮ್ನ.

(೨) ಉದಿತರವಿಯಲ್ಲಿ ಪ್ರಸ್ತಾವ ನಾಮಕ ವಾಸುದೇವ.

(೩) ಮಧ್ಯಾಹ್ನಗತ ಸೂರ್ಯನಲ್ಲಿ ಉದ್ಗೀಥನಾಮಕ ನಾರಾಯಣ.

(೪) ಅಪರಾಹ್ಣಗತ ಆದಿತ್ಯನಲ್ಲಿ ಪ್ರತೀಹಾರನಾಮಕ ಅನಿರುದ್ಧ.

(೫) ಅಸ್ತಂಗತನಾಗುತ್ತಿರುವ ರವಿಯಲ್ಲಿ ನಿಧನನಾಮಕ ಸಂಕರ್ಷಣ.

ಇದಲ್ಲದೆ ಬೃಹತ್ಸಾಮವನ್ನು ಆದಿತ್ಯನಲ್ಲಿ ಐದು ಪ್ರಭೇಧಗಳಿಂದ ಉಪಾಸಿಸುವ ಕ್ರಮವು "ವ್ರತ" ವೆಂದೆನಿಸುವುದು. ಅಂತಹ ವ್ರತಾನುಷ್ಠಾನುತಪಿಸುತ್ತಿರುವ ಆದಿತ್ಯನನ್ನು ನಿಂದಿಸಕೂಡದು. ಇಂತೆಯೇ **ವೈರೂಪ** ವೆಂಬ ಸಾಮದಿಂದ ಪ್ರತಿಪಾದ್ಯನಾದ ಶ್ರೀಹರಿಯನ್ನು ಉಪಾಸಿಸುವನು **"ಅಭ್ರಾಣಿ ಸಂಪ್ಲವತೇ ಸ ಹಿಂಕಾರಃ"** ಆದರೆ, ವೃಷ್ಟಿಯನ್ನು ಸುರಿಸುವ ಮೇಘಗಳನ್ನು ನಿಂದಿಸ ಕೂಡದು ಎಂತ ವ್ರತ ನಿಯಮವು, **ವೈರಾಜ** ಸಾಮೋಸಕನು "ಋತುಗನ್ನು ನಿಂದಿಸಿರುವುದು ಅವನ ವ್ರತ" ವೆಂದು ಛಾಂದೋಗ್ಯ ಉಪನಿಷತ್ತಿನಲ್ಲಿ ಹೇಳಲಾಗಿದೆ. ಇದರಿಂದ ಮಳೆ, ಬಿಸಿಲು, ಚಳಿ ಮುಂತಾದ ಋತು ವೈಪರೀತ್ಯಗಳನ್ನು ನಿಂದಿಸರುವುದು ಉಪನಿಷದೋಕ್ತ ವ್ರತೋಪಾಸಕನ ಲಕ್ಷಣವೆಂದು ಹೇಳಲಾಗಿದೆ.

ಪಂಚಭೂತಗತ ಭಗವದುಪಾಸನೆಯನ್ನು ಮಾಡುವ ವಿವರ ಈ ರೀತಿ ಇದೆ :—

(೧) ಪೃಥ್ವೀಗತಗಂಧವೇ ದೇವರಿಗೆ ಸುಗಂಧವು

(೨) ಜಲಗತ ರಸಭಾಗವೇ ಶ್ರೀಹರಿಗೆ ರಸನಿವೇದನವು.

(೩) ತೇಜೋಗತ ರೂಪವೇ ಶ್ರೀ ಪರಮಾತ್ಮನಿಗೆ ರೂಪವು.

(೪) ವಾಯುಗತ ಸ್ಪರ್ಶವೇ ಶ್ರೀ ಹರಿಗೆ ಬೀಸುವ ಚಾಮರವು.

(೫) ಆಕಾಶಗುಣವಾದ ಶಬ್ದವು ಭಗವಂತನಿಗೆ ವಿವಿಧ ವಾದ್ಯ ವಿಶೇಷಗಳು. ಇಂತು ವ್ರತಬದ್ಧನಾಗಿ ಭಗವದುಪಾಸನೆ ಮಾಡಬೇಕು ಎಂತ ತಾತ್ಪರ್ಯ ॥೧೩॥

## (೫) "ಗುರು ಹೃದಯ ಪ್ರಕಾಶಿಕಾ" ವ್ಯಾಖ್ಯಾನ :—

ಹೇಗೆ ಪೂಜಿಸಬೇಕೆಂದರೆ, ನಿರೂಪಿಸುತ್ತಾರೆ— ಜಲನಾಭನೆಂದು, ಪದ್ಮನಾಭನ ರೂಪವನ್ನು ಮನಸ್ಸಿನಲ್ಲಿ ಸ್ಥಿರವಾಗಿ ನಿಲ್ಲಿಸಿಕೊಂಡು, ದೃಢ ಸುಭಕ್ತಿಯಿಂದ ಬಿಸಿಲು, ಮಳೆ, ಛಳಿ, ಗಾಳಿಗಳ ನಿಂದಿಸದೆ, ಎಂದರೆ ತಾಪ, ಶೀತ, ನಡಕ ಮೊದಲಾದ್ದರಿಂದ ದೇವರನ್ನು ಮರೆತು, ಶೀತ, ವಾತ, ಬಿಸಿಲು ಬಾಧೆಗಳನ್ನು ಹಚ್ಚಿಕೊಳ್ಳದೆ, ದೇವರನ್ನೇ ಸ್ಮರಿಸುತ್ತಾ ಎಂದರ್ಥ. ಭೂಮಿಯಲ್ಲಿರುವ ಸುಗಂಧವೇ ದೇವರಿಗೆ ಗಂಧಸಮರ್ಪಣೆ ಎಂದು, ಜಲವೇ ಷಡ್ರಸೋಪೇತ ನೈವೇದ್ಯವೆಂದು, ನಾನಾ ವಸ್ತುಗಳ ಆಕಾರವೇ ದೀಪವೆಂದೂ, ಎಲರ್ ಎಂಬ ಗಾಳಿಯೇ ಚಾಮರವೆಂದೂ, ಲೋಕದಲ್ಲಾಗುವ ಶಬ್ದಗಳೆಲ್ಲ ವಾದ್ಯಗಳೆಂದೂ, ದೇವರಿಗೆ ಸಮರ್ಪಿಸಲು ಒಲಿವನು ॥೧೩॥

# ಸರ್ವವ್ಯಾಖ್ಯಾನಸಾರಸಂಗ್ರಹ

ಪಂಚ ಭೂತಗತ ತನ್ಮಾತ್ರಾ ಗುಣವಿಶೇಷಗಳನ್ನು ಶ್ರೀ ಪರಮಾತ್ಮನಿಗೆ ಅರ್ಪಿಸುವ ಭಗವತ್ಪೂಜಾ ಕ್ರಮವನ್ನು ವಿವರಿಸುತ್ತಾರೆ. "ಜಲಜನಾಭನ" ಎಂಬ ಪ್ರಸಕ್ತ ಸಂಧಿಗತ ೧೩ನೆಯ ಪದ್ಯದಿಂದ:

ಜಲ–ಎಂದರೆ ನೀರು. ಜ-ಎಂದರೆ ನೀರಿನಲ್ಲಿ ಉತ್ಪನ್ನವಾದದ್ದು ಕಮಲ ಎಂದರ್ಥ. ನಾಭ ಎಂದರೆ ಅಂತಹ ಕಮಲವು ಯಾವಾತನ ಹೊಕ್ಕಳಿ

ನಿಂದ ಉತ್ಪನ್ನವಾಯಿತೋ, ಅಂತಹ **ಪದ್ಮನಾಭರೂಪೀ** ಶ್ರೀ ಪರಮಾತ್ಮ ನೆಂದರ್ಥ. ಸೂಕ್ಷ್ಮ ಸೃಷ್ಟಿಯ ನಂತರ. ಏಕಮೇವಾದ್ವಿತೀಯನಾದ ಶ್ರೀಮನ್ನಾರಾಯಣನು ಕ್ಷೀರಸಾಗರದಲ್ಲಿ ಪವಳಿಸಿದನು. ಆಗ ಆತನ ಸಂಕಲ್ಪ ದಂತೆ, ಅವನ ನಾಭಿ ಎಂಬ ದಿವ್ಯ ಸರಸ್ಸಿನಲ್ಲಿ ಕಮಲವು ಉತ್ಪನ್ನವಾಯಿತು. ಆ ಕಮಲವು ಸುವರ್ಣಾತ್ಮಕವಾದದ್ದು. ಹದಿನಾಲ್ಕು ದಳಗಳಿಂದ ಯುಕ್ತ ವಾದದ್ದು. ಅಂತಹ ಚತುರ್ದಶದಳಾತ್ಮಕವಾದ ಸುವರ್ಣಪದ್ಮದಲ್ಲಿ ಉತ್ಪನ್ನ ರಾದವರೇ ಚತುರ್ಮುಖ ಬ್ರಹ್ಮದೇವರು. ಕಮಲೋದ್ಭವರಾದ ವಿರಿಂಚಿಗೆ **ಹಿರಣ್ಯಗರ್ಭ**ನೆಂದು ಹೆಸರು, ಅಂತಹ ಜಗದಾಧರ ಮೂರ್ತಿಯೂ ಜಗತ್ತಿನ ಸೃಷ್ಟಿಗೆ ಮೂಲ ಕಾರಣನೂ ಆದ ಪದ್ಮನಾಭ ಮೂರ್ತಿಯನ್ನು ಮನಸ್ಸಿನಲ್ಲಿ ಧ್ಯಾನಿಸಬೇಕು. ಅಂತಹ ಜಲಜನಾಭನ ಪರಮ ದಿವ್ಯಮಂಗಳ ವಿಗ್ರಹವನ್ನು ಮನಸ್ಸಿನಲ್ಲಿ ಸ್ಥಿರೀಕರಿಸಿ, ಮಹಾತ್ಮ್ಯಜ್ಞಾನಪೂರ್ವಕವಾದ ನಿರಂತರ ಪ್ರೇಮ ಪ್ರವಾಹರೂಪವಾದ ಸಮೀಚೀನ ಭಕ್ತಿಯಿಂದ ಆ ಮೂರ್ತಿಯನ್ನು ಪೂಜಿಸ ಬೇಕು. ಮನಸ್ಸಿನಲ್ಲಿ ಪ್ರತಿಷ್ಟಿತವಾದ ಆ ಜಲಜನಾಭನ ಮೂರ್ತಿಯನ್ನು ಸುದೃಢವಾದ ನಿಶ್ಚಲ ಭಕ್ತಿಯಿಂದ ಪೂಜಿಸುವ ವಿಧಾನವನ್ನು ದಾಸವರೇಣ್ಯರು ವಿವರಿಸುತ್ತಾರೆ.

ಒಂದು ವರ್ಷದ ಅವಧಿಯಲ್ಲಿ ಬೇಸಿಗೆ, ಮಳೆಗಾಲ, ಗಾಳಿಯ ಕಾಲ, ಚಳಿಗಾಲಗಳೆಂಬ ಕಾಲಪ್ರಭೇಧಗಳಿವೆ. ಇವು ಆಯಾಯಾ ಋತುಧರ್ಮಗಳಿಗೆ ಸಂಬಂಧಪಟ್ಟವು. ಆದರೆ ಅಲ್ಪಶಕ್ತರಾದ ನಾವು ಬಿಸಿಲಿನ ತಾಪ, ಗಾಳಿಯ ಹೊಡೆತ, ಮಳೆಯ ಶೀತ, ಚಳಿಯ ಕೊರೆತ ಮೊದಲಾದ ಋತುಧರ್ಮ ಗಳ ಪ್ರಭಾವವನ್ನು ಸಹಿಸಿಕೊಳ್ಳುವುದು ಕಷ್ಟಸಾಧ್ಯ, ಆದರೆ ಮೂಲ ಪ್ರಕೃತಿ ಯನ್ನು ಉಪಾದಾನಕಾರಣವನ್ನಾಗಿ ಇಟ್ಟುಕೊಂಡು, ಗುಣವೈಷಮ್ಯದಿಂದ ಈ ಜಗತ್ತನ್ನು ಶ್ರೀ ಪರಮಾತ್ಮನು ಸೃಷ್ಟಿಸಿ, ಅದರಲ್ಲಿ ಸರ್ವತ್ರವ್ಯಾಪ್ತನಾಗಿ ಆ ಪ್ರಕೃತಿಯ ಧರ್ಮಗಳನ್ನು ಕಾಲಕ್ಕೆ ಅನುಗುಣವಾಗಿ ಅಭಿವ್ಯಕ್ತ ಗೊಳಿಸುವನು. ಇದು ಅವನ ಸಂಕಲ್ಪ ಹಾಗೂ ಆದೇಶ, ಅದರಂತೆ ಭಗವದಾ ಜ್ಞಾಧಾರಕರಾಗಿ, ಬಿಸಿಲು, ಗಾಳಿ, ಮಳೆ, ಚಳಿಗಳನ್ನು ಅವು ನಮಗೆ ಬಾಧಕಗಳೆಂದು ನಿಂದಿಸದೆ, ಸಹಿಸಿಕೊಂಡು, ಮನೋದಾರ್ಢ್ಯದಿಂದ ಅವು

ಗಳಿಗೆ ಪ್ರವರ್ತಕನೂ ಮತ್ತು ದೇಶಗಳಲ್ಲಿಯೂ ನಿಶ್ಚಲ ಭಕ್ತಿಭಾವದಿಂದ ಪೂಜಿಸಬೇಕೆಂದು ಶ್ರೀ ದಾಸರಾಯರ ಅಭಿಪ್ರಾಯವು. ಇದೇ ಭಾವವು **ಛಾಂದೋಗ್ಯ ಉಪನಿಷತ್ತಿನ** ಬೃಹತ್ಸಾಮ ಭಗವದುಪಾಸನಾ ಪ್ರಕರಣ ದಲ್ಲಿಯೂ. ವೈರೂಪಸಾಮ ಪ್ರಕರಣದಲ್ಲಿಯೂ ಉಕ್ತವಾಗಿದೆ, ಉರಿ ಯುತ್ತಿರುವ ಆದಿತ್ಯನಲ್ಲಿ ಹೀಂಕಾರನಾಮಕ ಪ್ರದ್ಯುಮ್ನ, ಪ್ರಸ್ತಾವನಾಮಕ ವಾಸುದೇವ, ಉದ್ಗೀಥನಾಮಕ ನಾರಾಯಣ, ಪ್ರತೀಹಾರನಾಮಕ ಅನಿರುದ್ಧ ಮತ್ತು ನಿಧನನಾಮಕ ಸಂಕರ್ಷಣ —ಎಂಬ ಪಂಚರೂಪ ಗಳಿವೆ. ಇದರಿಂದ ಸೂರ್ಯನ ಪ್ರಖರವಾದ ಬಿಸಲಿನ ತಾಪವನ್ನು ನಿಂದಿಸದೆ, ಆ ಅಧಿಷ್ಠಾನದಲ್ಲಿ ಭಗವಧಿಷ್ಠಾನಗಳನ್ನು ಚಿಂತಿಸಬೇಕು. ಇದು ಭಗವದು ಪಾಸನೆಗೆ ಒಂದು ನಿಯಮಬದ್ಧವಾದ ವ್ರತ-ವೆಂದು ಉಪನಿಷತ್ತಿನ ಆದೇಶ, ಅಂತೆಯೇ ಮಳೆಯನ್ನು ಸುರಿಸುತ್ತಿರುವ ಮೇಘಗಳನ್ನು ನಿಂದಿಸಬಾರದೆಂದು ನಿಯಮ. ಇಂತು, ಬಿಸಿಲು, ಗಾಳಿ, ಮಳೆ. ಚಳಿಗಳ ಋತುವೈಪ ರೀತ್ಯಗಳನ್ನು ನಿಂದಿಸದೆ, ಸುದೃಢಭಕ್ತಿಯಿಂದ ಜಗತ್ಸೃಷ್ಟಿಕಾರಣನಾದ ಪದ್ಮನಾಭ ಮೂರ್ತಿಯನ್ನು ಅರ್ಚಿಸುವ ಮಾನಸಿಕ ಪೂಜಾ ವಿಧಾನವನ್ನು ತಿಳಿ ಸುತ್ತಾರೆ :—

(೧) ಭೂಮಿಯು ಗಂಧಕ್ಕೆ ಆಶ್ರಯವು. ಭೂತತ್ತ್ವದಿಂದ ಉತ್ಪನ್ನ ವಾದ ಪರಿಮಳಯುಕ್ತ ಪುಷ್ಪಗತ ಸುಗಂಧ ಇತ್ಯಾದಿಗಳು ದೇವರಿಗೆ ಅರ್ಪಿ ಸುವ ಸುಗಂಧ ದ್ರವ್ಯಗಳೆಂದು ಉಪಾಸಿಸಬೇಕು.

(೨) ಅಪ್‌ತತ್ತ್ವದ ಗುಣವು ರಸವು. ರಸೋಪೇತವಾದ ಸುಫಲ ಗಳು, ಷಡ್ರಸೋಪೇತವಾದ ಭಕ್ಷ್ಯಗಳು, ಆ ಸರ್ವಸಾರಭೋಕ್ತನೂ ರಸಪದ ವಾಚ್ಯನೂ ಆದ ರಸರೂಪೀ ಶ್ರೀ ಪರಮಾತ್ಮನಿಗೆ ನೈವೇದ್ಯವೆಂದು ಅರ್ಪಿಸ ಬೇಕು.

(೩) ತೇಜಸ್ಸಿನ ಗುಣವು ರೂಪವು, ಇದರಿಂದಲೇ ಸಮಸ್ತವಸ್ತು ಗಳ ಆಕಾರ ವಿಶೇಷಗಳು ನಮ್ಮ ಕಣ್ಣಿಗೆ ಗೋಚರವಾಗುವುವು. ಇಂತಹ ತೇಜೋಗತ ರೂಪವಿಶೇಷವೇ ಸರ್ವರೂಪಾತ್ಮಕನಾದ ಶ್ರೀ ಹರಿಗೆ ನಾವು ಹಚ್ಚುವ ದೀಪಗಳೆಂದು ಭಾವಿಸಬೇಕು.

(೪) ವಾಯುತತ್ವ್ವದ ತನ್ಮಾತ್ರಾಗುಣವು ಸ್ಪರ್ಶವು. ಬೀಸುತ್ತಿರುವ ಗಾಳಿಯೇ (ಎಲರು). ಆ ದಿವ್ಯಮಂಗಳ ವಿಗ್ರಹನಿಗೆ ಚಾಮರವೆಂದು ಅನುಸಂಧನದಿಂದ ಪೂಜಿಸಬೇಕು.

(೫) ಶಬ್ದವು ಆಕಾಶತತ್ತ್ವದ ಗುಣವಿಶೇಷವು. ಆಕಾಶ ಜನ್ಯವಾದ ನಾನಾವಿಧ ಶಬ್ದಗಳು, ಅಂದರೆ, ಗುಡುಗು, ಸಿಡಿಲು, ಸಮುದ್ರದ ಮೊರೆತ, ಪಕ್ಷಿಗಳ ಕಲಕಲರವ, ಪ್ರಾಣಿಗಳ ಧ್ವನಿ, ನಮ್ಮ ವಾಗ್ರೂಪವಾದ ಶಬ್ದ ವಿಶೇಷಗಳೆಲ್ಲವೂ ಆ ದೇವದೇವನಿಗೆ ಮಂಗಳವಾದ್ಯಗಳೆಂದು ತಿಳಿಯಬೇಕು. ಈ ರೀತಿಯಲ್ಲಿ ಭೂತಪಂಚಕಗತ ಗಂಧ, ರಸ, ರೂಪ, ಸ್ಪರ್ಶ, ಶಬ್ದ ಇತ್ಯಾದಿ ಗುಣವಿಶೇಷಗಳನ್ನು ಪೂಜಾಸಾಧನ ಸಾಮಗ್ರಿಗಳೆಂದು ಉತ್ತಮ ಅನುಸಂಧಾನಪೂರ್ವಕ ತಿಳಿದು, ಅಖಿಳಾಂಡ ಕೋಟಿ ಬ್ರಹ್ಮಾಂಡನಾಯಕನಾದ ಸರ್ವತ್ರ ವ್ಯಾಪ್ತನಾದ ಶ್ರೀ ಪರಮಾತ್ಮನನ್ನು ಅರ್ಚಿಸಿ, ಅವನಡಿಗೆ ಅರ್ಪಿಸಲು, ಅವನು ಒಲಿದು ಅನುಗ್ರಹಿಸುವನು ಎಂದು ಭಗವದುಪಾಸನಾ ಕ್ರಮವನು ತಿಳಿಸುತ್ತಾರೆ ॥೧೩॥

## ಪದ್ಯ (೧೪)

ಮೂಲ :—

ಗೋಳಕಗಳು ರಮಾರಮಣನ ನಿ ।
ಜಾಲಯಗಳನುದಿನ ಸಂಪ್ರ ।
ಕ್ಷಾಲನೆಯೆ ಸಮ್ಮಾರ್ಜನವು ಕರಣಗಳೆ ದೀಪಗಳು ॥
ಸಾಲು ತತ್ತದ್ವಿಷಯಗಳ ಸ ।
ಮ್ಮೇಳನವೆ ಪರಿಯಂಕ ತತ್ಸುಖ ।
ದೇಳಿಗೆಯು ಸುಷುಪ್ತಿಗಾತ್ಮನಿವೇದನವೆ ವಸನ ॥೧೪॥

**ಅವತರಣಿಕೆ :—**

ಭೂತ ಪಂಚಕಗಳಲ್ಲಿ ಆಯಾಯಾ ಅಧಿಷ್ಠಾನಗತ ತನ್ಮಾತ್ರಾ ಗುಣ ವಿಶೇಷಗಳೆಂಬ ಪೂಜಾಪರಿಕರಗಳ ದ್ವಾರಾ ಭಗವದರ್ಚನಾ ಕ್ರಮವನ್ನು ವಿವರಿಸಿ, ಪಿಂಡಾಂಡ ರೂಪವಾದ ಈ ಸಾಧನ ಶರೀರದಲ್ಲಿ ವಿದ್ಯಮಾನವಾಗಿರತಕ್ಕ ಇಂದ್ರಿಯಗಳ ದ್ವಾರಾ, ದೇಹಾಂತರ್ಗತನಾದ ಬಿಂಬರೂಪೀ ಶ್ರೀ ಪರಮಾತ್ಮನನ್ನು ಉಪಾಸನೆ ಗೈಯುವ ಕ್ರಮವನ್ನು ತಿಳಿಸುತ್ತಾರೆ- **"ಗೋಳಕಗಳು"**- ಎಂಬ ಪ್ರಸಕ್ತ ಸಂಧಿಗತ ಈ ೧೪ನೆಯ ಪದ್ಯದಿಂದ ॥೧೪॥

**ಪ್ರತಿಪದಾರ್ಥ :—**

**ಗೋಳಕಗಳು** = ಇಂದ್ರಿಯಗಳಿಗೆ ಆಶ್ರಯವಾಗಿ ಇರತಕ್ಕ ಸ್ಥಾನವಿಶೇಷಗಳು (ಇವು ಸ್ಥೂಲದೇಹದಲ್ಲಿ ಪ್ರತ್ಯಕ್ಷವಾಗಿ ಕಾಣಿಸುವುವು) **ರಮಾರಮಣನ** = ಲಕ್ಷ್ಮೀಪತಿಯಾದ ಶ್ರೀ ಮನ್ನಾರಾಯಣನ **ನಿಜಾಲಯಗಳು** = ಆ ವಾಸಸ್ಥಾನವಾದ ಮನೆಗಳು. **ಅನುದಿನದಿ** = ಪ್ರತಿದಿನದಲ್ಲೂ **ಸಂಪ್ರಕ್ಷಾಲನೆಯೆ** = ದೇಹವನ್ನು ತೊಳೆಯುವ ಕ್ರಿಯೆಯು, ಅಂದರೆ ಸ್ನಾನಮಾಡುವುದೇ **ಸಮ್ಮಾರ್ಜನವು** = ದೇವಮಂದಿರವನ್ನು ಬಳಿದು ಸಾರಿರುವ ಕ್ರಿಯೆ ಎನಿಸುವುದು **ಕರಣಗಳೆ** = ಶ್ರೋತ್ರಾದಿ ಪಂಚಜ್ಞಾನೇಂದ್ರಿಯಗಳು, ಕರಚರಣಾದಿ ಪಂಚ ಕರ್ಮೇಂದ್ರಿಯಗಳು, ಅಂದರೆ, ಆಯಾಯಾ ಗೋಳಕಾಖ್ಯ ಸ್ಥಾನಗಳಲ್ಲಿ ವಿದ್ಯಮಾನಗಳಾದ ದಶೇಂದ್ರಿಯಗಳೇ **ದೀಪಗಳು** = ದೇವರಿಗೆ ಹಚ್ಚುವ ತೇಜೋರೂಪವಾದ ದೀಪಗಳು. **ಸಾಲು** = ಕ್ರಮಬದ್ಧವಾಗಿರುವ **ತತ್ತದ್ವಿಷಯಗಳ** = ಪಂಚಜ್ಞಾನೇಂದ್ರಿಯಗಳಿಗೆ ವಿಷಯಗಳಾದ ಗಂಧಾದಿ ತನ್ಮಾತ್ರಾ ಗುಣಗಳು ಮತ್ತು ಪಂಚಕರ್ಮೇಂದ್ರಿಯಗಳಿಗೆ ಕ್ರಿಯಾರೂಪವಾದ ದಾನ ಗಮನಾಗಮನನಾದಿ ವ್ಯಾಪಾರ ವಿಶೇಷಗಳ **ಸಮ್ಮೇಳನವೆ** = ಇಂದ್ರಿಯಗಳಿಗೂ ಮತ್ತು ತತ್ತದ್ವಿಷಯಗಳಿಗೂ ಉಂಟಾಗುವ ಸನ್ನಿಕರ್ಷವೇ (ಒಂದೊದಕ್ಕೊಂದು ಸೇರುವುದು) **ಪರಿಯಂಕ** = ಬಿಂಬರೂಪಿ ಶ್ರೀ ಪರಮಾತ್ಮನಿಗೆ ಮಂಚವು **ತತ್ಸುಖದ** = ಆ ವಿಷಯ ಸನ್ನಿಕರ್ಷದಿಂದ

ಉಂಟಾಗುವ ಆನಂದದ **ಏಳಿಗೆಯೇ** = ವೃದ್ಧಿಯೇ (ಆನಂದೋದ್ರೇಕವೇ) **ಸುಪ್ಪತ್ತಿಗೆ** = ಶ್ರೀ ಪರಮಾತ್ಮನಿಗೆ ಮೆತ್ತಗಿರುವ ಹಾಸಿಗೆಯು **ಆತ್ಮನಿವೇದನವೆ** = ಆತ್ಮಸಮರ್ಪಣೆಯೇ **ವಸನ** = ಶ್ರೀಹರಿಗೆ ದಿವ್ಯವಸ್ತ್ರವು ॥೧೪॥

## ವ್ಯಾಖ್ಯಾನಗಳು

### (೧) ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ :—

ಅಧಿಕಾರಿಯಾದವ ತನ್ನ ದೇಹಕ್ಕೆ ಮಾಡಿಕೋತಕ್ಕ ಉಪಚಾರಗಳು, ದೇಹಗತ ಇಂದ್ರಿಯಗಳು ಅರ್ಪಿಸೋಕ್ರಮ ಹೇಳತಾರೆ.

ನೇತ್ರಾದಿ ಇಂದ್ರಿಯಗಳು ಆವಾಸವಾಗಿ ಇರತಕ್ಕ ಅಧಿಷ್ಠಾನಗಳು ದಾವದವೆ ಅದಕ್ಕೆ "ಗೋಳಕ" ಎಂತ ನಾಮ, ಇದೇವೆ ದೇಹದಲ್ಲಿ ಪ್ರತ್ಯಕ್ಷವಾಗಿ ಕಾಣತಕ್ಕದ್ದು. ತದಂರ್ಗತವಾಗಿ ಆಯಾ ನಾಮಗಳಿಂದ ಇಂದ್ರಿಯಗಳು ಇರೋದಾಗಿ ಅವೆ. ಈ ಗೋಳಕಗಳಲ್ಲಿ ಶ್ರೀ ಲಕ್ಷ್ಮೀಪತಿಯಾದ ಶ್ರೀ ನಾರಾಯಣದೇವರ (ರಮಾರಮಣನ) ಸ್ವಕೀಯವಾದ (ನಿಜ) ಶ್ರೀ ಪರಮಾತ್ಮಗೆ ಅಭಿನ್ನಗಳಾದ ಗೋಳಕನಾಮ ಧೇಯಗಳಾದ ಮನಿಗಳೆಂದು ಕರಿಸೋದಾಯಿತು. ಇಂಥಾಮನಿಗಳು ಪ್ರತಿದಿನದಲ್ಲೂ ದಾವದಾವ ಕಾಲದಲ್ಲಾದರೆ (ಅನುದಿನ), ಛಂದಾಗಿ ಶಾಸ್ತ್ರೋಕ್ತಾನುಸಾರ ಉದಕದಿಂದ (ಸಂಪ್ರಕ್ಷಾಳನೆಯೇ). ನಿರ್ದೋಷನಾದ ಶ್ರೀ ಪರಮಾತ್ಮನ ಆವಾಸನಾಗಿ ಇರುವ ಅವನ ಮಂದಿರದಲ್ಲಿ ಕಸವಿಲ್ಲದೆ ಬಳಿಯೋಣ, ಸಾರಿಸಿ ಶುದ್ಧಮಾಡೋಣ ಎಂತ ಈ ಪ್ರಕಾರ ತಿಳಿದು, ಇಂದ್ರಿಯ ಗೋಳಕಗಳೇನು, ಪ್ರಕ್ಷಾಲನಾದಿ ವ್ಯಾಪಾರಗಳು ಅರ್ಪಿಸಬೇಕು. ಆಯಾ ಗೋಳಕಾಖ್ಯ ಗೃಹದಲ್ಲಿ ವಿದ್ಯಮಾನವಾದ ಪರಮಾತ್ಮಗೆ ಆಯಾಗೋಳಕಾಂತರ್ಗತ ಇಂದ್ರಿಯಗಳೇ (ಕರಣಗಳೇ) ದೀಪಗಳೆಂದು ಅನುಸಂಧಾನ ಮಾಡಬೇಕು. ಆಯಾಯಾ ಇಂದ್ರಿಯಗಳಿಗೆ ವಿಷಯಗಳಾದ ದೃಷ್ಟಿ ಶ್ರವಣ ಮೊದಲಾದ ಒಂದೊಂದು ಇಂದ್ರಿಯದಿಂದ

ಆಗತಕ್ಕ ವಿಚಿತ್ರವಾದ ಅನೇಕ ವಿಷಯಗಳ, ಒಂದೊಂದು ಇಂದ್ರಿಯದಲ್ಲಿ ಮೇಳನವಾಗೋದು ದಾವದದೆ ಇದು ಯಾವತ್ತು (ಸಮ್ಮೇಳನವೇ) ಆಯಾ ಇಂದ್ರಿಯ ಗೋಳಕಾಂತರ್ಗತ ಶ್ರೀ ಪರಮಾತ್ಮಗೆ ಮಂಚವು (ಪರಿಯಂಕ) ಆಯಾಯಾ ಇಂದ್ರಿಯಾದಿ ವಿಷಯಗಳಿಂದ (ತತ್) ಆಗತಕ್ಕ ಸುಖಿ ಸಮೂಹಗಳು ದಾವದದೆ ಇದೇವೆ (ಸುಖದೇಳಿಗೆಯ) ಅಂದರೆ ಮಂಚದ ಮೇಲೆ ಹಾಸತಕ್ಕ ಲೇಪು, ಹಾಸಿಗೆ ದಿಂಬು ಇದರ ಪರಿಕರಣವು. ಈ ಪ್ರಕಾರ ತತ್ತಂದ್ರಿಯ ಗೋಳಕಾಂತರ್ಗತನಾದ ಆತ್ಮಶಬ್ದವಾಚ್ಯನಾದ ಶ್ರೀ ಪರಮಾತ್ಮಗೆ, ಅನುಸಂಧಾನದಿಂದ ಅರ್ಪಿಸೋಣ ಎಂಬುದು, (ನಿವೇದನವೆ) ದೇವರು ಶಯನಾಂತರ ಹೊದ್ದುಕೊಂಬ ದಿವ್ಯಶಾಲು, ಪೀತಾಂಬರ ಎಂತ ತಾತ್ಪರ್ಯ

ಈ ಪ್ರಕಾರ ಅಧಿಕಾರಿಯಾದವ ರಾತ್ರಿ ತಾನು ಮಲಕೊಂಬೋ ಕಾಲದಲ್ಲಿ ಅನುಸಂಧಾನ ಮಾಡಬೇಕು. ಆಗ್ಗ ಇಂದ್ರಿಯಗೋಳಕಸ್ಥನಾದ ಪರಮಾತ್ಮ ಕಾಲದಲ್ಲಿ ಶಯನಮಾಡಿದಂತೆ, ಮನುಷ್ಯದಿನದಲ್ಲಿ ಪ್ರಳಯ ಸಾಂಕೇತವಾದ ರಾತ್ರಿಕಾಲದಲ್ಲಿ ಆಯಾ ಇಂದ್ರಿಯ ವ್ಯಾಪಾರದಿಂದ ಶೂನ್ಯನಾಗಿ, ಆಯಾ ಗೋಳಕದಲ್ಲಿ ಶಯನಮಾಡತಾನೆ. ಎಂತ ಅನುಸಂಧಾನ ಮಾಡಬೇಕು. ಇದರಿಂದ ಇಂದ್ರಿಯ ಗೋಳಕಗಳು, ಇಂದ್ರಿಯಗಳು, ತದ್ವಿಷಯಗಳು, ನಿದ್ರಾ ಇಷ್ಟು ಅರ್ಪಿಸಿದಂತಾಯಿತು. ಇಷ್ಟು ಸಾರ್ಥಕವಾಯಿತು. ಸರ್ವವೂ ಅಂತರ್ಗತ ಪರಮಾತ್ಮನ ಪರ ಅನುಸಂಧಾನವಿರಬೇಕು ಎಂತ ತಾತ್ಪರ್ಯ ॥೧೪॥

(೨) "ಭಾವಪ್ರಕಾಶಿಕೆ" ವ್ಯಾಖ್ಯಾನ :—

ತನ್ನ ದೇಹೇಂದ್ರಿಯಗಳಿಂದ ತಾನು ಮಾಡುವ ಕರ್ಮಗಳೆಲ್ಲವೂ ಪರಮಾತ್ಮನ ಪೂಜೆ ಎಂದು ಭಾವಿಸಬೇಕೆಂಬ ವಿಷಯವನ್ನು ವಿಸ್ತರಿಸುತ್ತಾರೆ. ಕೆಲವು ಪದಾರ್ಥಗಳಿಂದ ವಿಭೂತಿಸಂಧಿ ಎಂದು ಉಪಕ್ರಮಿಸಿ, ಇದಕ್ಕೆ ಸಂಬಂಧವಿಲ್ಲದ ವಿಷಯಗಳನ್ನು ದಾಸರಾಯರು ಇಲ್ಲಿ ಹೇಳಲು ಕಾರಣವೇನೆಂದು ಆಕ್ಷೇಪಿಸಬಾರದು. ಅದೇಕೆಂದರೆ, ಮೇಲಿನಪದ್ಯಗಳಲ್ಲಿ ಇಂದ್ರಿಯ

ಗಳಲ್ಲಿಯೂ, ಪಂಚಮಹಾಭೂತಗಳಲ್ಲಿಯೂ, ತನ್ಮಾತ್ರಾಗುಣಗಳಲ್ಲಿಯೂ ವಿಭೂತಿಯನ್ನು ಚಿಂತಿಸಿ, ಪೂಜಿಸುವ ಪ್ರಕಾರ ಹೇಳಿದರು.

"ಸಂಕೋಚ ವಿಸ್ತರಾಭ್ಯಾಂಚ ಕಥಯಂತಿ ಮುನೀಷಿಣಃ"— ಎಂಬ ಪ್ರಮಾಣಾನುಸಾರ, ಮೊದಲು ಸಂಕೋಚವಾಗಿ ದಿಕ್ಪದರ್ಶನ ಮಾಡಿದ ಮೇಲೆ ಅವುಗಳನ್ನೇ ವಿಸ್ತರಿಸುವುದು ಜ್ಞಾನಿಗಳ ಸಂಪ್ರದಾಯವು. ಅದರಂತೆ, ದಾಸರಾಯರು "ಬಾಂದಳವೆ ಮೊದಲಾದ" —ಎಂಬ ಪದ್ಯದಿಂದ ಆಕಾಶಾದಿ ಒಂದೊಂದರೊಳಗೂ ನೂತನವಾದ ಅನೇಕವಿಧ ಪೂಜಾ ಸಾಧನ ದ್ರವ್ಯಗಳನ್ನು ಚಿಂತಿಸಬೇಕು ಎಂದು ಹೇಳಿದ್ದರು. ಪೂಜಾ ಸಾಧನಗಳನ್ನೇ ಈ ಪದಗಳಿಂದ ಹೇಳುತ್ತಾ ಬರುತ್ತಿದ್ದಾರೆ. ಅದೇ ವಿಷಯವಾಗಿ ದೇಹೇಂದ್ರಿಯಾದಿಗಳಿಂದ ಮಾಡುವ ಎಲ್ಲಾ ವಿಷಯಗಳೂ ಪೂಜೆ ಎಂದೇ ಭಾವಿಸಬೇಕೆಂದು ಹೇಳಿದುದು ಅಸಂಬಂಧವಲ್ಲವೆಂದು ತಿಳಿಯಬೇಕು. ರಮಾಪತಿಯಾದ ಶ್ರೀ ಪರಮಾತ್ಮನಿಗೆ ನಮ್ಮ ಸ್ಥೂಲದೇಹ, ಅನಿರುದ್ಧ ದೇಹ, ಸೂಕ್ಷ್ಮಲಿಂಗಶರೀರ ಮೊದಲಾದವು ದೇವಾಲಯವೆಂದು ಭಾವಿಸಬೇಕು. ಸ್ನಾನಾದಿಗಳನ್ನು ಮಾಡಿ ನಾವು ದೇಹವನ್ನು ಶುದ್ಧಿಮಾಡಿಕೊಳ್ಳುವುದೇ, ಪರಮಾತ್ಮನ ಗುಡಿಯನ್ನು ಕಸ ಬಳಿದು ಸಾರಿಸುವುದೆಂದು ಭಾವಿಸಬೇಕು. ಕರ ಚರಣಾದಿಗಳೇ ದೀಪಗಳ ಸಾಲು. ನೋಡುವುದು, ಹೇಳುವುದು-ಮೊದಲಾದ ವಿಷಯಾನುಭವವೇ ಹಾಸಿಗೆ. ವಿಷಾಯಾನುಭವದಿಂದ ಅನುಭವಿಸುವ ಸುಖವೇ ಹೊದ್ದಿಕೆ. ತನ್ನ ಶರೀರ, ತನ್ನ ಹೆಂಡತಿ, ತನ್ನ ಮಕ್ಕಳು ಮೊದಲಾದ ಸಕಲವನ್ನೂ ಪರಮಾತ್ಮನಿಗೆ ಒಪ್ಪಿಸುವುದೇ ವಸ್ತ್ರವು ॥೧೪॥

(೩) "ಭಾವದರ್ಪಣ ಟೀಕಾ"-ವ್ಯಾಖ್ಯಾನ :—

"ಗೋಳಕೇತಿ" । ಪ್ರಾತರಾಸಭ್ಯ ಶಯನಪರ್ಯಂತ ಅನುಭವಿಸತಕ್ಕ ವಿಷಯಗಳೇ ಪರ್ಯಂಕ. ತಜ್ಜನ್ಯಸುಖದ ಏಳಿಗೆಯ ಸಮೂಹವೇ ಲೇಪು. ಆತ್ಮನಿವೇದನ-ಎಂದರೆ, ನಿಯಾಮಕಮತ್ತ್ವೇನ ತನ್ನಲ್ಲಿ ಭಗವಂತನಿದ್ದಾನೆಂದು ಅತ್ಯಂತ ಜ್ಞಾನ ಯಾವದೋ ಅದೇ ಆತ್ಮನಿವೇದನ ಎಂತ ಅನಿಸಿಕೊಳ್ಳುತ್ತದೆ.

**ಯಥೋಕ್ತಂ ಸಪ್ತಮ ಭಾಗವತ ತಾತ್ಪರ್ಯೇ :—**

**"ಮುಕ್ತಸ್ಯಾಪಿ ಮಮಾಂತಸ್ಥೋ ನಿಯಂತ್ರೈವ ಹರಿಸ್ಸದಾ ।**
**ಇತಿ ಜ್ಞಾನಂ ಸಮುದಿಷ್ಟಂ ಸಮ್ಯಗಾತ್ಮನಿವೇದನಮ್" ॥**

ಎಂಬೋದೇ ಶ್ರೀಹರಿಗೆ ವಸ್ತ್ರವೆಂದು ತಾತ್ಪರ್ಯ. "ಗೋಳಕ" —ಎಂದರೆ ನೇತ್ರಾದ್ಯಧಿಷ್ಠಾನವೇ ಎಂತರ್ಥ ॥೧೪॥

**೪) ಜಮಖಂಡಿ ವಾದಿರಾಜಾಚಾರ್ಯರ ವ್ಯಾಖ್ಯಾನ:—**
**(ಸಂಸ್ಕೃತಮೂಲ)**

ಅಕ್ಷಿ ವಿದ್ಯಯಾ ಯತ್ ಸ್ಥಾನತ್ವಾದಿ ವಾಚಾ ಶ್ರೀ ವಾಮನೋ ಪಾಸನಾಂ ಬ್ರೂತೇ— "ಗೋಲಕೇತಿ"

ನೇತ್ರ ಗೋಲಕಂ ವಾಮನಾಶ್ರಿತಂ ನೇತ್ರಂ ಚೋಚ್ಯತೇ ॥ ಏಳಿಗೆ= ವೃದ್ಧಿ ಸುಪ್ಪತ್ತಿಗೆ=ಶಯ್ಯಾ । ಅನಾದ್ಯನಂತ ಕಾಲೇ ಮುಕ್ತೌ ಸಂಸಾರೇ ಚ ಸದೈವ ವಿಷ್ಣುಃ ಮೂಲ ಕರ್ಮಸು ಪ್ರೇರಯತೀತಿ ತಂತ್ರಮಾಲೋಕ್ತಾ ತ್ಮಾರ್ಪಣಮ್ ॥೧೪॥

**ಕನ್ನಡಾರ್ಥ :—**

ನೇತ್ರಗೋಲಕವು ಶ್ರೀ ವಾಮದೇವರ ಸ್ಥಾನವಾಗಿದೆ. ಇದಕ್ಕೆ "ಯತ್ ಸ್ಥಾನತ್ವಾತ್" —ಎಂಬ ಶ್ರುತಿಯೇ ಆಧಾರ. ಇದೊಂದು ಭಗವ ದ್ವಿದ್ಯೆ. ಇದರಿಂದ ಅಕ್ಷಿಸ್ಥ ಗೋಲಕ ಸ್ಥಿತನಾದ ವಾಮಸ್ವರೂಪೀ ಶ್ರೀಹರಿ ಯನ್ನು ಉಪಾಸಿಸಬೇಕು ಎಂದು ತಾತ್ಪರ್ಯ. ಅನಾದ್ಯನಂತ ಕಾಲ ದಿಂದಲೂ, ಶ್ರೀಹರಿಯು ಜೀವರನ್ನು ಸಂಸಾರ ಮತ್ತು ಮುಕ್ತಿ ಎಂಬ ಅವಸ್ಥಾದ್ವಯಗಳಲ್ಲಿ ನಿತ್ಯವೂ ಕರ್ಮಚೋದಕನಾಗಿ ಪ್ರೇರಿಸುತ್ತಾನೆ. ಈ

ಭಾವವು ತಂತ್ರಮಾಲಾ ಎಂಬ ಗ್ರಂಥದಲ್ಲಿ ಉಕ್ತವಾಗಿದೆ. ಇದನ್ನೆ "ಆತ್ಮಾರ್ಪಣ" ವೆಂದು ತಿಳಿಯತಕ್ಕದ್ದು ॥೧೪॥

(೫) "ಗುರುಹೃದಯ ಪ್ರಕಾಶಿಕೆ" ವ್ಯಾಖ್ಯಾನ :—

ಶರೀರ. ವಾಕ್ಕು, ಮನಸ್ಸುಗಳ ವ್ಯಾಪಾರವನ್ನೆಲ್ಲ ದೇವರ ಪೂಜೆಯನ್ನಾಗಿ ಕೆಲವರು ಭಾವಿಸುವರೆಂದು ವಿವರಿಸುತ್ತಾರೆ.

ಗೋಳಕವೆಂದು ಮೊದಲು ಹದಿನಾರು ಪದ್ಯದವರೆಗೆ— "ಗೋಳಕ" ಗಳು ಎಂದರೆ, ಮುಖ ಮೊದಲಾದ ಅವಯುವಗಳೇ ರಮಾಪತಿಯ ಗುಡಿಗಳೆಂದು, ಮುಖ ತೊಳೆಯುವುದೇ ಮೊದಲಾದದ್ದು ಸಮ್ಮಾರ್ಜನೆ ಎಂಬ ದೇವರ ಗುಡಿಯನ್ನು ಸಾರಿಸಿ, ಅಲಂಕರಿಸುವುದೆಂದು. ಕಣ್ಣು ಮೊದಲಾದ ಕರಣಗಳೇ ದೀಪದ ಸಾಲುಗಳೆಂದು, ಕಣ್ಣಿಗೆ ಸುರೂಪ ದರ್ಶನ, ಕಿವಿಗೆ ಕೇಳುವ ಶಬ್ದ, ಮೊದಲಾದ ವಿಷಯ ಭೋಗಗಳೇ ದೇವರಿಗ ಮಂಚವೆಂದು, ಅದರಿಂದ ಮನಸ್ಸಿಗೆ ಆಗುವ ಸುಖವೇ ದೇವರಿಗೆ ಸುಪ್ಪತ್ತಿಗೆ ಎಂದು, ಸ್ವಾಮಿಯೇ, ನಾನು ಸದಾ ನಿನ್ನ ಸೇವಕನೆಂದು, ತನ್ನನ್ನೂ, ತನ್ನ ಸರ್ವಸ್ವವನ್ನೂ ಒಪ್ಪಿಸುವುದೇ, ದೇವರಿಗೆ ವಸ್ತ್ರವೆಂದೂ ಭಾವಿಸು ॥೧೪॥

# ಸರ್ವವ್ಯಾಖ್ಯಾನಸಾರಸಂಗ್ರಹ

ಸಾಧನ ಶರೀರವಾದ ಈ ಸ್ಥೂಲ ದೇಹಗತ ಇಂದ್ರಿಯಗಳು ಮತ್ತು ಇಂದ್ರಿಯ ಗೋಳಕಗಳು. ಇಂದ್ರಿಯಗಳಿಗೆ ಸಂಬಂಧಪಟ್ಟ ವಿಷಯಗಳು ಇತ್ಯಾದಿ ಅಧಿಷ್ಠಾನ ವಿಶೇಷಗಳಲ್ಲಿ ಭಗವದರ್ಪಣ ಕ್ರಮದಿಂದ ಭಗವತ್ಪೂಜಾ ಮಾಡುವ ವಿಧಾನವನ್ನು ವಿವರಿಸುತ್ತಾರೆ- "ಗೋಳಕಗಳು"—ಎಂಬ ಈ ೧೪ನೆಯ ಪದ್ಯದಿಂದ. ನಮ್ಮ ದೇಹದಲ್ಲಿ ಕಣ್ಣು ಮೊದಲಾದ ಜ್ಞಾನೇಂದ್ರಿಯಗಳು ಮತ್ತು ಕರಚರಣಾದಿ ಕರ್ಮೇಂದ್ರಿಯಗಳು ಅವುಗಳಿಗೆ ನಿಯತವಾದ

ಸ್ಥಾನಗಳಲ್ಲಿವೆ. ಇದೇ ಮಾನವ ದೇಹದ ವೈಶಿಷ್ಟ್ಯ. ಇಂತು, ಇಂದ್ರಿಯಗಳು ಇರತಕ್ಕ ಆಯಾಯಾ ಸ್ಥಾನಗಳಿಗೆ "ಇಂದ್ರಿಯ ಗೋಳಕ"ಗಳು ಎಂದು ಹೆಸರು, ಇಂತಹ ಗೋಳಕಗಳು ಶ್ರೀ ಲಕ್ಷ್ಮೀಪತಿಯು ವಾಸಿಸುವ ಮನೆಗಳಾಗಿವೆ ಎಂದು ಭಾವಿಸಬೇಕು. ಅಂದರೆ ಗೋಳಕಗಳು ರಮಾಪತಿಯ ನಿಜಾಲಯಗಳು. "ನಿಜ" —ಎಂದರೆ, ದೇವರಿಗೇ ಸೇರಿದ್ದು ಎಂತರ್ಥ. ಈ ಸಾಧನ ಶರೀರವು ದೈದದತ್ತವಾಗಿರುವುದು. ದೇಹಗತ ಸಮಸ್ತ ಅವಯವ ವಿಶೇಷಗಳೆಲ್ಲವೂ ಭಗವದಧೀನವೇ. ಇಂತಹ ದೇವಮಂದಿರವೆನಿಪ ಈ ಶರೀರವನ್ನು ಸ್ವಚ್ಛವಾಗಿ ಇಡುವುದು ಜೀವನ ಆದ್ಯ ಕರ್ತವ್ಯವಲ್ಲವೇ? ಮುಖ ಪ್ರಕ್ಷಾಳನೆ, ವಿದ್ಯುಕ್ತವಾಗಿ ಸ್ನಾನಮಾಡುವುದು ಇತ್ಯಾದಿ ಕ್ರಿಯಾವಿಶೇಷಗಳೆಲ್ಲವೂ ದೇವಮಂದಿರವಾದ ಈ ಶರೀರವನ್ನು ಸ್ವಚ್ಛವಾಗಿ ತೊಳೆದು ನಿರ್ಮಲೀಕರಣ ಮಾಡುವುದೆಂದು ಭಾವಿಸಬೇಕು. ಈ ಕ್ರಿಯೆಯೇ ಸಂಪ್ರಕ್ಷಾಲನೆ ಎನಿಸುವುದು, ದೇವರ ಮಂದಿರವನ್ನು ಗುಡಿಸಿ, ಸಾರಿಸಿ, ಅಲಂಕರಿಸುತ್ತೇವೆ. ಅಂತೆಯೇ ದೇಹವನ್ನು ಸ್ನಾನಾದಿ ವಿಧಿಗಳಿಂದ ತೊಳೆಯುವುದು, ವಸ್ತ್ರಾದಿಗಳಿಂದ ಅಲಂಕರಿಸುವುದು. ಇತ್ಯಾದಿ ಕ್ರಿಯಾಕಲಾಪಗಳೆಲ್ಲವೂ ಸಮ್ಮಾರ್ಜನೆ ಎಂದು ಭಾವಿಸಬೇಕು. ಈ ದೇಹದಲ್ಲಿ ಕ್ರಮಬದ್ಧವಾಗಿ ಜೋಡಿಸಲ್ಪಟ್ಟಿರುವ ಇಂದ್ರಿಯ ಸಮೂಹವೇ ಭಗವಂತನಿಗೆ ಅರ್ಪಿಸುವ ದೀಪದ ಸಾಲುಗಳೆಂದು ಅನುಸಂಧಾನವು. ಅಹಂಕಾರತತ್ತ್ವದ ತೇಜೋಭಾಗವಾದ ತೈಜಸ ತತ್ತ್ವದಿಂದ ಈ ದಶೇಂದ್ರಿಯಗಳು ಉತ್ಪನ್ನವಾಗಿವೆ. ಇದರಿಂದ ತೇಜೋಸಾಂಕೇತವಾದ ದೀಪಗಳೆಂದು ಭಾವ. ಗಂಧ, ರೂಪ. ರಸ, ಸ್ಪರ್ಶ, ಶಬ್ದಾದಿ ವಿಷಯಗಳ ಸಮೂಹಗಳೇ ದೇವರಿಗೆ ಮಂಚವೆಂದು ಭಾವಿಸಬೇಕು. ಮಂಚವು ಶಯನಕ್ಕೆ ಅನುಕೂಲವಾದ ಪರಿಕರವು. ಅಂತೆಯೇ ಇಂದ್ರಿಯಗಳು ಗ್ರಹಿಸತಕ್ಕ ವಿಷಯಗಳು ಭೋಗ್ಯ ವಸ್ತುಗಳಾದ್ದರಿಂದ ಪರ್ಯಂಕ ಎಂಬ ಅನುಸಂಧಾನವು. ಆ ವಿಷಯಗಳಿಂದ ಉತ್ಪನ್ನವಾಗುವ ಸುಖದ ವೃದ್ಧಿಯೇ ಶ್ರೀಪರಮಾತ್ಮನಿಗೆ ಸುಪ್ಪತ್ತಿಗೆಯು. ಸುಪ್ಪತ್ತಿಗೆಯು ಮೆತ್ತಗಿದ್ದು, ಮಲಗಿದ ಕೂಡಲೇ ಸುಖ ನಿದ್ರೆ ಬರುವುದು. ಇದರಿದಲೇ ವಿಷಯಜನ್ಯವಾದ ಆನಂದವೇ ಸುಪ್ಪತ್ತಿಗೆ ಎಂದು ಭಾವವು ತಾನು, ತನಗೆ ಸಂಬಂಧಪಟ್ಟ ದೇಹ,

ಪತ್ನೀ ಪುತ್ರರು ಬಂಧುವರ್ಗ, ಮನೆ, ಐಶ್ವರ್ಯ ಸಕಲಭೋಗ್ಯ ವಸ್ತುಗಳನ್ನು ಭಗವಂತನಿಗೆ ಅರ್ಪಿಸುವುದೇ ಆತ್ಮಾರ್ಪಣೆ ಎಂದೆನಿಸುವುದು. ನವ ವಿಧ ಭಕ್ತಿಗಳಲ್ಲಿ "ಆತ್ಮನಿವೇದನ"ವು ಅತ್ಯಂತ ಶ್ರೇಷ್ಠವಾದ ಭಕ್ತಿಮಾಧ್ಯಮವೆನಿಸುವುದು, ಇಂತು ಭಗವದರ್ಪಣಚಿತ್ತ ವೃತ್ತಿಯಿಂದ ಮಾಡುವ ಆತ್ಮನೀವೇದನವೇ ಭಗವಂತನಿಗೆ ಉಡುವ ವಸ್ತ್ರವೆಂದು ಭಾವಿಸಬೇಕು. ವಸ್ತ್ರವು ದೇಹಕ್ಕೆ ಅಲಂಕಾರ ಪ್ರಾಯವಾಗಿರುವುದು. ಇದರಿಂದ ಈ ರೀತಿಯ ಅನುಸಂಧಾನ ಕ್ರಮವೆಂದು ತಾತ್ಪರ್ಯ, ದಾಸರಾಯರು ವಿವರಿಸಿರುವ ಪೂಜಾವಿಧಾನವನ್ನು ಈ ರೀತಿ ಸಂಗ್ರಹಿಸಬಹುದು.

(೧) ಇಂದ್ರಿಯ ಸ್ಥಾನಗಳಾದ ಗೋಳಕಗಳೇ ರಮಾಪತಿಯ ಆವಾಸ ಸ್ಥಾನಗಳು.

(೨) ದೇಹವನ್ನು ಸ್ವಚ್ಛಗೊಳಿಸುವುದೇ ಸಮ್ಮಾರ್ಜನೆಯು.

(೩) ಇಂದ್ರಿಯ ಸಮೂಹಗಳೇ ದೀಪದ ಸಾಲುಗಳು.

(೪) ಇಂದ್ರಿಯ ಸಂಬಂಧ ವಿಷಯಗಳೇ ಮಂಚವು.

(೫) ವಿಷಯಜನ್ಯವಾದ ಭೋಗಸುಖವೇ ಸುಪ್ಪತ್ತಿಗೆಯು.

(೬) ಆತ್ಮನಿವೇದನವೇ ವಸ್ತ್ರವು. ॥೧೪॥

# ಪದ್ಯ (೧೫)

ಮೂಲ :—

ಪಾಪಕರ್ಮವು ಪಾದುಕೆಗಳನು ।
ಲೇಪನವು ಸತ್ಪುಣ್ಯ ಶಾಸ್ತ್ರ ।
ಲಾಪನವೆ ಶ್ರೀತುಲಸಿ ಸುಮನೋವೃತ್ತಿಗಳು ಸುಮನ ॥
ಕೋಪ ಧೂಪವು ಭಕ್ತಿ ಭೂಷಣ ।
ವ್ಯಾಪಿಸಿದ ಸದ್ಬುದ್ಧಿ ಛತ್ರವು ।
ದೀಪನೇ ಸುಜ್ಞಾನ ವಾರಾರ್ತಿಗಳೆ ಗುಣಕಥನ ॥ ॥೧೫॥

ಅವತರಣಿಕೆ :—

ಇನ್ನು ಮನೋವೃತ್ತಿ ವ್ಯಾಪಾರಗಳಿಂದ ಉಂಟಾಗುವ ಕ್ರಿಯಾಕಲಾಪಗಳನ್ನು ಭಗವದರ್ಪಣ ಮಾಡಿ, ತದ್ವಾರಾ ಪೂಜಾ ಮಾಡುವ ಅನುಸಂಧಾನ ಕ್ರಮವನ್ನು ತಿಳಿಸುತ್ತಾರೆ. "ಪಾಪಕರ್ಮವು" —ಎಂಬ ಪ್ರಸಕ್ತ ಸಂಧಿಗತ ೧೫ನೆಯ ಈ ಪದ್ಯದಿಂದ.

ಪಾಪಕರ್ಮವೇ ಪಾದರಕ್ಷೆಯು. ಸತ್ಪುಣ್ಯ ಕರ್ಮಗಳೇ ಭಗವಂತನಿಗೆ ಅನುಲೇಪಿಸುವ ಗಂಧವು. ಶಾಸ್ತ್ರಾರ್ಥ ವಿಚಾರವೇ ಶ್ರೀ ತುಲಸಿಯು. ಮನಸ್ಸಿನ ಪುಣ್ಯ ವೃತ್ತಿಗಳೇ ಪರಿಮಳಯುಕ್ತ ಪುಷ್ಪಗಳು. ಕೋಪವೇ ಧೂಪಾರತಿಯು. ಸುದೃಢ ಭಕ್ತಿಯೇ ಒಡವೆಗಳು. ಸದ್ಬುದ್ಧಿಯೇ ಛತ್ರವು, ಸುಜ್ಞಾನವೇ ದೀಪವು. ಪರಮಾತ್ಮನ ಗುಣಗಳನ್ನು ಕೊಂಡಾಡುವುದೇ ಮಂಗಳಾರತಿಗಳು. ಈ ರೀತಿ ಅನುಸಂಧಾನಪೂರ್ವಕ ಪೂಜಾ ಮಾಡಬೇಕೆಂದು ತಿಳಿಸುತ್ತಾರೆ ॥೧೫॥

**ಪ್ರತಿಪದಾರ್ಥ :—**

**ಪಾಪಕರ್ಮವು**=ಅಜ್ಞಾನಪೂರ್ವಕ, ಕರ್ಮಾನುಸಾರವಾಗಿ ಮಾಡಿದ ಪಾಪಕರ್ಮಗಳು. **ಸತ್ಪುಣ್ಯ**=ಪುಣ್ಯಕರವಾದ ಕ್ರಿಯಾ ವಿಶೇಷಗಳು **ಅನುಲೇಪನವು**=ಶ್ರೀ ಪರಮಾತ್ಮನಿಗೆ ಅರ್ಪಿಸುವ ಸುಗಂಧವು. **ಶಾಸ್ತ್ರಾಲಾಪನವೆ**=ಸಚ್ಛಾಸ್ತ್ರಗಳ ಅಧ್ಯಯನ, ಶ್ರವಣ, ವಿಚಾರ ವಿಮರ್ಶೆ, ಮನನ ಮುಂತಾದ ಕ್ರಿಯಾಕಲಾಪಗಳೇ **ಶ್ರೀತುಲಸಿ**=ದೇವರಿಗೆ ಅರ್ಪಿಸುವ ಶ್ರೀತುಲಸಿಯು. **ಸುಮನೋವೃತ್ತಿಗಳು**=ಮನಸ್ಸಿನ ಪಂಚ ವಿಧವಾದ ವೃತ್ತಿಗಳೇ (ಅಂತಃಕರಣಾದಿ ಮನೋವೃತ್ತಿಗಳು) **ಸುಮನ**=ಸುಗಂಧಯುಕ್ತವಾದ ಪುಷ್ಪಗಳು. **ಕೋಪ**=ಕ್ರೋಧವೇ **ಧೂಪವು** ಧೂಪಾರತಿಯು, **ಭಕ್ತಿ**=ಅವಿಚ್ಛಿನ್ನವಾದ ಸುದೃಢ ಭಕ್ತಿ ಭಾವವೇ **ಭೂಷಣ**=ದಿವ್ಯಾಭರಣಗಳು. **ವ್ಯಾಪಿಸಿದ**=ಸದ್ವಿಷಯಗಳಲ್ಲಿ ಸಮಗ್ರವಾಗಿ ವ್ಯಾಪಿಸಿಕೊಂಡಿರುವ **ಸದ್ಬುದ್ಧಿ**=ಉತ್ತಮ ಬುದ್ಧಿಯೇ **ಛತ್ರವು**=ಶ್ವೇತಛತ್ರಿಯು. **ಸುಜ್ಞಾನ**=ಸಮೀಚಿನವಾದ ಜ್ಞಾನವೇ **ದೀಪವು**=ದೀಪಗಳು. **ಆರ್ರಾತಿಗಳೇ**=ಆರು ವಿಧವಾದ ಆರತಿಗಳೇ **ಗುಣಕಥನ** ಶ್ರೀ ಪರಮಾತ್ಮನ ಮಂಗಳ ಗುಣಗಳನ್ನು ಕೊಂಡಾಡುವುದು. ॥೧೫॥

## ವ್ಯಾಖ್ಯಾನಗಳು

### (೧) ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ :—

ಸರ್ವೇಂದ್ರಿಯಗಳಿಂದ ಮಾಡಿದ ಶಾಸ್ತ್ರನಿಷಿದ್ಧವಾದ ಪಾಪಕರ್ಮಗಳು ದಾವದದೇ, ಇವುಗಳೇ (ಪಾಪಕರ್ಮವು) ಪಾದರಕ್ಷೆಗಳ (ಪಾದುಕೆಗಳ), ಈ ಪಾಪಗಳು ಅರ್ಪಿಸೋಣ ಎಂಬುದೇ ಶ್ರೀ ಪರಮಾತ್ಮನಿಗೆ ಪಾದರಕ್ಷೆ ತೊಡಿಸೋಣ ಎಂತ ಅರ್ಥ (ಅನುಲೇಪನವು). ಶ್ರೀ ಪರಮಾತ್ಮ ಸರ್ವೋತ್ತಮನೆಂದು ಶಾಸನ ಮಾಡತಕ್ಕ ಪುಣ್ಯಕರವಾದ ಶ್ರೀ ಮಧ್ವಶಾಸ್ತ್ರವೇನು,

ಭಾಗವತಾದಿ ಸಚ್ಛಾಸ್ತ್ರಗಳೇನು ಇವುಗಳನ್ನು (ಸತ್ಪುಣ್ಯ ಶಾಸ್ತ್ರ), ಸರ್ವದಾ ಉಚ್ಚಾರ ಮಾಡುತ್ತಿರುವುದೇ (ಆಲಾಪನವೆ) ಶ್ರೀ ಬಿಂಬಗೆ ಅರ್ಚಿಸಿ ಮಾಡ ತಕ್ಕ ಶ್ರೀ ತುಳಸಿ. ಇದೇ ರೀತ್ಯಾ ದಶೇಂದ್ರಿಯಗಳ ಪುಣ್ಯ ಕಾರ್ಯಗಳು ಗ್ರಾಹ್ಯ. ನಿರ್ದೋಷನಾದ ಪರಮಾತ್ಮನ ವಿಷಯಕವಾದ ತತ್ತ್ವ ವಿಚಾರ ದಿಂದ ಯುಕ್ತವಾದ ಮನೋವೃತ್ತಿಗಳು ಇವುಗಳೇವೇ, (ಸುಮನೋವೃತ್ತಿ ಗಳು) ದಿವ್ಯ ಪರಿಮಳ ಯುಕ್ತವಾದ ಪುಷ್ಪಗಳು (ಸುಮನ). ಮನೋವೃತ್ತಿ ಗಳು ಹ್ಯಾಂಗೆಂದರೆ, ನಿರ್ದೋಷ ಎಂತ ಉಚ್ಚರಿಸೋಣ ಒಂದು, ಗುಣ ಪೂರ್ಣ ಎಂದು ಉಚ್ಚರಿಸೋಣ ಒಂದು, ಇತ್ಯಾದಿ ಅನೇಕ ವಿಧ ಮನೋ ವೃತ್ತಿಗಳು ಅನೇಕ ವಿಧ ಪರಿಮಳೋಪೇತ ಪುಣ್ಯ ಪುಷ್ಪಗಳು. ಕೋಪ ಎಂಬುದೇ ಅಗ್ನಿ. ಕೋಪಕ್ಕೆ ಕಾರಣವಾದ ದಶಾಂಗ ಪರಿಮಳ ಕೋಪಾಭಿ ವ್ಯಕ್ತಿಯೇ ಧೂಮ ರೂಪವಾದ ಹೊಗೆ. ಇದೇ ಧೂಪವು. ಸದ್ವಿಷಯಕ ವಾದ ಕೋಪ ಎಂತ ಅರ್ಥ (ಕೋಪ ಧೂಪವು), ದುರ್ವಿಷಯದ ಕೋಪ ಪಾಪವಾಗತದೆ. ಅದು ಪಾದರಕ್ಷಾದಲ್ಲಿ ಸೇರಿಸಬೇಕು. ಭಕ್ತಿ ಎಂಬುದೇ ಅನೇಕ ವಿಧ ಆಭರಣಗಳು (ಭಕ್ತಿ ಭೂಷಣ) ನವವಿಧ ಭಕ್ತಿ. ಆವರಲ್ಲಿ ಅಂತರಾಂತರ ಅನೇಕ ವಿಧ ಭಕ್ತಿಗಳು ಅವೆ. ಅದು ಯಾವತ್ತು ಅನೇಕ ವಿಧ ವಾದ ರತ್ನಾತ್ಮಕ ಆಭರಣಗಳು. ಬಿಂಬನಾದ ಶ್ರೀ ಪರಮಾತ್ಮನಲ್ಲಿ ಉಂಗುಷ್ಟ ದಾರಭ್ಯ ಶಿರಃ ಪರಿಯಂತ ವ್ಯಾಪಿಸಿದ (ವ್ಯಾಪಿಸಿದ) ನಿರ್ದುಷ್ಟಗಳಾದ ಅವ ಯವಗಳ ಧ್ಯಾನದಲ್ಲಿ ನಿಷ್ಠಿತವಾದ (ಸತ್) ಬುದ್ಧಿ ಎನತಕ್ಕ ಮನೋವೃತ್ತಿ (ಬುದ್ಧಿ) ಬಿಂಬರೂಪೀ ಪರಮಾತ್ಮನಿಗೆ ಛತ್ರಿಯು. (ಛತ್ರವು) ಛತ್ರಿಕಾರ್ಯ ಉಂಗುಷ್ಟರಾರಭ್ಯ ಶಿರಃ ಪರಿಯಂತ ನೆರೆದು ವ್ಯಾಪಿಸಿ ಇತರಕ್ಕದ್ದು. ತದ್ವತ್ ಬುದ್ಧಿ ವ್ಯಾಪಿಸಿ ಇರೋಣದರಿಂದ ಛತ್ರಿ ಸಾಮ್ಯವಾಯಿತು. ಇಂಥಾ ಪೂಜಾಕ್ಕೆ ದೀಪ ಎನೆತಕದ್ದು (ದೀಪವೇ) ಸಮೀಚೀನವಾದ ತಾರತಮ್ಯ ಪಂಚ ಭೇದ ಜ್ಞಾನ. ಈ ಜ್ಞಾನ ಯಾವತ್ತು ತೇಜೋರೂಪವಾದ್ದರಿಂದ ದಿವ್ಯ ದೀಪಗಳು. ಆರು ವಿಧ ಆರತಿಗಳೆಂಬೋದೇ (ಆರಾರ್ತಿಗಳು) ಶ್ರೀ ದೇವರ ಕಲ್ಯಾಣಗುಣಗಳ ಕಥನ ಮಾಡೋಣವೇ ಮಂಗಳಾರತಿಗಳು ಎಂತ ತಾತ್ಪರ್ಯ (ಆರಾರ್ತಿಗಳೇ) ||೧೫||

## (೨) "ಭಾವ ಪ್ರಕಾಶಿಕೆ" ವ್ಯಾಖ್ಯಾನ :—

ನಮ್ಮ ಮನಃಪೂರ್ವಕವಾಗಿ ಪಾಪಗಳನ್ನು ಮಾಡದೆ, ದೈವಸಂಕಲ್ಪ ದಿಂದ ಅಜ್ಞಾನ ವಶಾತ್ ಪಾಪಗಳು ನಡೆದರೆ. ಅವುಗಳನ್ನು ಪರಮಾತ್ಮನಿಗೆ ಪಾದುಕೆಗಳೆಂದು ಸಮರ್ಪಿಸಬೇಕು, ಉತ್ತಮ ಪುಣ್ಯಪ್ರದವಾದ ಸಚ್ಛಾಸ್ತ್ರ ಪಾಠ ಪ್ರವಚನಾದಿಗಳೇ ಸುಗಂಧವು ಎಂದು ಭಾವಿಸಬೇಕು. ಪರಮಾತ್ಮನ ಪಾದಾರವಿಂದದಲ್ಲಿರುವ ಮನಸ್ಸೇ ಶ್ರೀ ತುಳಸಿ. ಇಂದ್ರಿಯ ವೃತ್ತಿಗಳೇ ಪುಷ್ಪಗಳು. ಭಗವದ್ವೇಷಿಗಳಲ್ಲಿ ನಾವು ಮಾಡುವ ಕೋಪವು ಪರಮಾತ್ಮನಿಗೆ ಧೂಪವೆಂದು ಭಾವಿಸಬೇಕು. ಸದ್ಭಕ್ತಿಯೇ ಆಭರಣಗಳು, ಸರ್ವತ್ರ ವ್ಯಾಪ್ತ ನಾದ ಪರಮಾತ್ಮನಲ್ಲಿ ವಿಸ್ತಾರವಾಗಿ ವ್ಯಾಪಿಸಿದ ಬುದ್ಧಿಯೇ ಛತ್ರಿಯು. ಸುಜ್ಞಾನವೇ ದೀಪವು. ಪರಮಾತ್ಮನ ಗುಣಗಳನ್ನು ವರ್ಣಿಸುವುದೇ ಮಂಗಳಾರತಿಗಳೆಂದು ಭಾವಿಸಬೇಕು ॥೧೫॥

## (೩) "ಭಾವದರ್ಪಣ ಟೀಕಾ" ವ್ಯಾಖ್ಯಾನ :—

ಇನ್ನೊಂದು ವಿಧ ಪೂಜಾ ಕ್ರಮ ಹೇಳುತ್ತಾರೆ। ಪಾಪೇತಿ। ಪಾದುಕಾ = ಹಾವುಗೆ, ಆಲಾಪನ = ಅನುವಾದ. ಸುಮನ = ಪುಷ್ಪ ಆರಾರ್ತಿ = ಮಂಗಳಾರರ್ತಿ ॥೧೫॥

## (೪) ಜಮಖಂಡಿ ವಾದಿರಾಜಾಚಾರ್ಯರ ವ್ಯಾಖ್ಯಾನ :— (ಸಂಸ್ಕೃತಮೂಲ)

ಪಾಪೇತಿ ॥ ಮರ್ದನಾಭಿ ಪ್ರಾಯೇಣ ವೃತ್ತಯಃ ವಿಕಾರಃ ॥೧೫॥

ಪಾಪಕರ್ಮಗಳು ಪಾದುಕೆಗಳು ಎಂಬ ವಾಕ್ಯದಲ್ಲಿ ಪಾದುಕೆಗಳನ್ನು ಮೆಟ್ಟಿದಾಗ ಮರ್ದನ ಕಾರ್ಯ ನಡೆಯುವುದು. ಅಂತೆಯೇ ಪಾಪಕರ್ಮ ಗಳು ಮರ್ದನ ಹೊಂದಲಿ ಎಂತ ಅಭಿಪ್ರಾಪಾಯವು. ಮನೋವೃತ್ತಿ

ಗಳೆಂದರೆ, ಮನಸ್ಸಿನ ನಾನಾ ವಿಧವಾದ ವಿಕಾರಗಳು, ಅವೇ ಕುಸುಮ ಗಳೆಂಬ ಅರ್ಪಣ ಭಾವ. ॥೧೫॥

(೫) "ಗುರುಹೃದಯ ಪ್ರಕಾಶಿಕೆ" ವ್ಯಾಖ್ಯಾನ :—

ಯತ್ನವಿಲ್ಲದೆ ನಡೆದ ವಿಧಿ ವಿರುದ್ಧ ದುಷ್ಕರ್ಮಗಳು ದೇವರು ಮೆಟ್ಟಿ ಸವೆಸುವ, ಎಂದರೆ, ಕ್ಷೀಣಗೈಸುವ ಪಾದರಕ್ಷೆಗಳೆಂದೂ, ವಿಧಿವಿಹಿತ ಸತ್ಕರ್ಮಗಳು ನಡೆದದ್ದು ದೇವರಿಗೆ ಸುಗಂಧವೆಂದೂ, ಸಚ್ಛಾಸ್ತ್ರ ಶ್ರವಣ ಮಾಡುವುದೇ ದೇವರಿಗೆ ಶ್ರೀ ತುಲಸೀ ಸಮರ್ಪಣೆ ಎಂದೂ, ಪುಣ್ಯ ಕಾರ್ಯ ಯೋಚಿಸುವ ಮನಸ್ಸಿನ ವೃತ್ತಿಗಳು, ಎಂದರೆ, ಆಲೋಚನೆಯ ಭಾವಗಳೇ ದೇವರಿಗೆ ಪುಷ್ಪ ಸಮರ್ಪಣೆ ಎಂದೂ, ಮನಸ್ಸಿನಲ್ಲಿ ಹುಟ್ಟಿದ ಕೋಪವೇ ಧೂಪ ಸಮರ್ಪಣೆ ಎಂದೂ, ದೇವರು ನಮಗೆ ಪರಮಾಪ್ತ ಪ್ರಿಯನೆಂದೂ, ಮನೋವೃತ್ತಿ ಸ್ನೇಹರೂಪ ಭಕ್ತಿಯೇ ಸ್ವಾಮಿಗೆ ಆಭರಣ ಸಮರ್ಪಣೆ ಎಂದೂ, ಸರ್ವತ್ರ ವ್ಯಾಪ್ತನಾದ ದೇವರಲ್ಲಿ ಸರ್ವೋತ್ತಮನೆಂಬ ಸುಬುದ್ಧಿ ರೂಪ ವೃತ್ತಿ ನಿಶ್ಚಯುವೇ, ಸ್ವಾಮಿಗೆ ಶ್ವೇತ ಛತ್ರವೆಂದೂ, ಹೀಗೆ ದೇವರನ್ನು ಧ್ಯಾನಿಸುವ ಮನೋವೃತ್ತಿಯ ತಿಳಿವಳಿಕೆಯೇ ದೇವರಿಗೆ ದೀಪ ವೆಂದೂ, ದೇವರ ಗುಣವರ್ಣನೆಯೇ ದೇವರಿಗೆ ಮಂಗಳಾರ್ತಿ ಎಂದೂ ಚಿಂತಿಸು ॥೧೫॥

# ಸರ್ವವ್ಯಾಖ್ಯಾನಸಾರಸಂಗ್ರಹ

ಹಿಂದಿನ ಪದ್ಯದಲ್ಲಿ ದೇಹಗತ ಇಂದ್ರಿಯಗಳು, ಇಂದ್ರಿಯ ಗೋಳಕ ಗಳು. ತದ್ವಿಷಯಗಳನ್ನು ಭಗವದರ್ಪಣ ಪೂರ್ವಕವಾಗಿ ಅನುಸಂಧಾನ ಮಾಡುವ ಭಗವದ್ಪೂಜಾ ವಿಧಾನವನ್ನು ತಿಳಿಸಿ, ಪ್ರಕೃತ ೧೫ನೆಯ ಪದ್ಯ ದಿಂದ, ಕರ್ಮಗಳು, ಸೂಕ್ಷ್ಮ ತತ್ತ್ವಗಳಾದ ಮನಸ್ಸು, ಬುದ್ಧಿ ಮುಂತಾದ

ಪ್ರವೃತ್ತಿ ವಿಶೇಷಗಳಿಂದ ಮಾಡುವ ದೇವಪೂಜಾ ಕ್ರಮವನ್ನು ವಿವರಿಸುತ್ತಾರೆ :—

(೧) ಸಜ್ಜನರಲ್ಲಿ ಅನೇಕ ಪ್ರಸಂಗ ವಿಶೇಷಗಳಲ್ಲಿ ಪಾಪಕರ್ಮಗಳು ಮಾಡಲ್ಪಡುವವು. ಇವು ಉದ್ದೇಶಪೂರಿತವಾಗಿ ಮಾಡಿದ ದುಷ್ಕರ್ಮಗಳಲ್ಲ, ಅಜ್ಞಾನ ದೆಸೆಯಿಂದಾಗಲೀ, ಅಸುರಾವೇಶಯುಕ್ತತೆಯಿಂದಲಾಗಲೀ, ಶಾಪ ನಿಮಿತ್ತದಿಂದಲಾಗಲೀ. ಪೂರ್ವಾರ್ಜಿತ ಕರ್ಮಪಾಕದಿಂದಲಾಗಲೀ, ಪ್ರಾಸಂಗಿಕವಾಗಿ ಉಂಟಾದ ಪಾಪಕರ್ಮಗಳು. ಇವುಗಳನ್ನು ಸರ್ವಶಕ್ತನೂ ಪರಮ ಕರುಣಾಳುವೂ ಆದ ಭಗವಂತನ ಪಾದಾರವಿಂದಗಳಿಗೆ **ಪಾದುಕೆ** ಎಂಬ ಅನುಸಂಧಾನದಿಂದ ಅರ್ಪಿಸಬೇಕು. ಪಾದರಕ್ಷೆಯ ಕಾರ್ಯ ಮೆಟ್ಟಿ ತುಳಿದು ಮರ್ದಿಸುವುದು. ಆಗ ಸರ್ವ ಪಾಪ ಪರಿಹಾರಕನಾದ ಶ್ರೀ ಪರಮಾತ್ಮನು ಆ ಪಾಪಕರ್ಮಗಳನ್ನು ಮೆಟ್ಟಿ, ಮರ್ದಿಸಿ, ಪಾಪಕ್ಷಾಳನೆ ಗೈದು, ಆ ಸಚ್ಚೇತನರನ್ನು ಅನುಗ್ರಹಿಸಿ, ಸಂರಕ್ಷಿಸುವನು. ಅಂದರೆ, ಪಾಪ ಕರ್ಮಗಳು ಪಾದುಕೆಗಳು.

(೨) ಸತ್ಸಂಗ, ದಾನ ಧರ್ಮಾದಿಗಳು, ಕ್ಷೇತ್ರಯಾತ್ರಾದಿ ಕಾರ್ಯಗಳು ಸಚ್ಛಾಸ್ತ್ರಶ್ರವಣ ಅಧ್ಯಯನ, ಪ್ರವಚನಾದಿ ಕ್ರಿಯಾ ವಿಶೇಷಗಳು ಇತ್ಯಾದಿ ಸತ್ಕರ್ಮಗಳಿಂದ ಪುಣ್ಯ ಫಲವು ಪ್ರಾಪ್ತಿಯಾಗುವುದು. ಇಂತಹ ಸಮೀಚೀನ ವಾದ **ಪುಣ್ಯಕರ್ಮಗಳು** ಆ ದೇವದೇವನಿಗೆ ಲೇಪಿಸುವುದಕ್ಕೆ ಸಮರ್ಪಿಸುವ ಸುಗಂಧವೆಂದು ಭಾವಿಸಬೇಕು. ಪರಿಮಳಯುಕ್ತವಾದ ಗಂಧವನ್ನು ಶರೀರಕ್ಕೆ ಲೇಪಿಸಿಕೊಂಡಾಗ, ತಂಪಾಗಿ, ಮನಸ್ಸಿಗೆ ಆಹ್ಲಾದವುಂಟಾಗುವುದು, ಅಂತೆಯೇ– "ಹೇ ಸ್ವಾಮಿ, ನೀನೇ ನನಲ್ಲಿ ಅಧಿಷ್ಠಿತನಾಗಿದ್ದು. ಈ ಸತ್ಪುಣ್ಯಕಾರ್ಯಗಳನ್ನು ಮಾಡಿ ಮಾಡಿಸಿರುತ್ತೀಯ. ಇದು ನಿನಗೆ ಅರ್ಪಿತವು" ಎಂಬ ಜ್ಞಾನಾನುಸಂಧಾನದಿಂದ ಅರ್ಪಿಸಿದಾಗ, ಶ್ರೀ ಪರಮಾತ್ಮನಿಗೆ ನಿಜಭಕ್ತನಲ್ಲಿ ವಾತ್ಸಲ್ಯವುಂಟಾಗಿ ಆ ಪುಣ್ಯಫಲಗಳನ್ನು ಅನಂತ ಮಡಿಮಾಡಿ, ಅವನಿಗೇ ಕೊಡುವನು, ಇದರಿಂದ ಆರೋಗ್ಯ, ಆಯುಸ್ಸು, ಐಶ್ವರ್ಯಾದಿ ಗಳ ಪ್ರಾಪ್ತಿ. ಇಂತು ಸತ್ಪುಣ್ಯಗಳ ಅರ್ಪಣೆಯೇ ಶ್ರೀಹರಿಗೆ ಅನುಲೇಪನಕ್ಕೆ ಕೊಡುವ ಸುಗಂಧವೆಂದು ತಾತ್ಪರ್ಯ.

(೩) ಪರಮಮುಂಗಳ ಕರವಾದ ಶ್ರೀಮನ್ಮಧ್ವಶಾಸ್ತ್ರ, ಭವಮೋಚಕವಾದ ಭಾಗವತಾದಿ ಪುರಾಣಗಳು. ವೇದಾರ್ಥನಿರ್ಣಾಯಕವಾದ ಬ್ರಹ್ಮಸೂತ್ರಗಳು ಪಂಚರಾತ್ರಾಗಮ ಭಾರತಾದಿ ಇತಿಹಾಸಗಳು ಇತ್ಯಾದಿ ಸಚ್ಛಾಸ್ತ್ರಗಳ ಆಲಾಪನ ಅಂದರೆ, ಅವುಗಳ ವಿಷಯ ಚರ್ಚೆ ಶ್ರವಣ, ಮನನ, ನಿಧಿಧ್ಯಾಸನಾದಿಗಳೇ ಶಾಸ್ತ್ರಾಲಾಪನಗಳು. ಇವುಗಳನ್ನು ಶ್ರೀ ಪರಮಾತ್ಮನ ಪಾದಾರವಿಂದಗಳನ್ನು ಅರ್ಚಿಸುವ ಶ್ರೀತುಲಸಿ ಎಂಬ ಅನುಸಂಧಾನವಿರಬೇಕು ಶ್ರೀತುಲಸಿಯಲ್ಲಿ ನಿತ್ಯರಮಾಧಿಷ್ಠಾನವಿರುವುದು. ಶ್ರೀರಮಾದೇವಿಯರ ದ್ವಾರವೇ ಶ್ರೀಹರಿಯು ಸೇವಾದಿರೂಪವಾದ ಪೂಜೆಗಳನ್ನು ಸ್ವೀಕರಿಸುವನು. ಶ್ರೀತುಲಸಿರಹಿತವಾದ ಪೂಜೆ ರಮಾವಲ್ಲಭನು ಒಲ್ಲನು. ಶ್ರೀರಮಾದೇವಿಯರು ಸಕಲವೇದಾಭಿಮಾನಿಗಳು. ವೇದಶಾಸ್ತ್ರಗಳಿಂದಲೇ ಜ್ಞಾನೋತ್ಪತ್ತಿ. ಈ ಕಾರಣದಿಂದ ಸಚ್ಛಾಸ್ತ್ರಗಳ ಆಲಾಪನೆಯೇ ಶ್ರೀಹರಿಗೆ ಶ್ರೀತುಲಸಿಯು.

(೪) ಮನಸ್ಸು ವಿಷಯುಗಳನ್ನು ಗ್ರಹಿಸುವ ಸೂಕ್ಷ್ಮತತ್ತ್ವವು. ಮನಸ್ಸನ್ನು ಸದ್ವಿಷಯುಗಳ ಕಡೆಗೆ ಆಸಕ್ತವಾಗುವಂತೆ ಮಾಡಿದಾಗ, ಮನಸ್ಸಿನ ವ್ಯಾಪಾರವು ಸಮನೋವೃತ್ತಿಗಳೆನಿಸುವುದು. ಹೀಗೆ ಮನಸ್ಸಿನ ವೃತ್ತಿರೂಪವಾದ ವ್ಯಾಪಾರವನ್ನು ಸಮೀಚೀನವಾದ ವಿಷಯುಗಳಲ್ಲಿ ಅನುಗೊಳಿಸಿದಾಗ, ಆ ಮನಸ್ಸು ಯಾವಾಗಲೂ ಭಗವಂತನ ಚಿಂತನ, ಧ್ಯಾನೋಪಾಸನೆ ಇತ್ಯಾದಿ ಸದ್ವೃತ್ತಿಗಳಲ್ಲಿ ನಿರತವಾಗುವುದು. ಇಂತಹ ಸುಮನೋವೃತ್ತಿಗಳೇ ಶ್ರೀಪರಮಾತ್ಮನಿಗೆ ಅರ್ಚಿಸುವ ಪರಿಮಳಯುಕ್ತವಾದಪುಷ್ಪಗಳು. ಅಂದರೆ ಸುಮನೋವೃತ್ತಿಗಳ ಅರ್ಪಣವೇ ಸುಮನವು,

(೫) ಕೋಪವೆಂಬುದು ಅನರ್ಥ ಸಾಧನೆ. ಅರಿಷಡ್ವರ್ಗಗಳಲ್ಲಿ ಒಂದು. ಇದರಿಂದ ಮನಸ್ಸು ಕೆಟ್ಟು ಕಲುಷಿತವಾಗುವುದು. ಆದರೆ ಸಜ್ಜನರಿಗೆ ಕೆಲವು ವಿಷಯುಗಳಲ್ಲಿ ಕೋಪವಿರಬೇಕು. ಅಯೋಗ್ಯರು, ನಾಸ್ತಿಕರು, ಭಗವದ್ವೇಷಿಗಳು, ಭಗವದ್ಭಕ್ತರ ನಿಂದಕರು ಇಂತಹವರಲ್ಲಿ ಕ್ರೋಧ ಸಹಜವಾದುದು. ಇದು ಲಕ್ಷಣವೇ ಹೊರತು ದೋಷವಲ್ಲ. ಇಂತಹ ಕೋಪವು ಅಗ್ನಿಸದೃಶವಾದದು. ಅಗ್ನಿಗೆ ದಶಾಂಗವನ್ನು ಹಾಕಿದಾಗ, ಅದು ಭಸ್ಮ

ವಾಗಿ ಹೊಗೆ ಏಳುವುದು. ಈ ಸುವಾಸನೆಯೇ ಭಗವಂತನಿಗೆ ಧೂಪವು. ಇಂತು ದುರ್ವಿಷಯಗಳಲ್ಲಿ ದುರ್ಜನರಲ್ಲಿ ಇರುವ ಸಹಜ ಕೋಪವು ಶ್ರೀ ಪರಮಾತ್ಮಗೆ ಧೂಪವೆನಿಸುವುದು.

(೬) ನಮ್ಮ ಸತಿ ಸುತಾದಿಗಳಲ್ಲಿ ಮಮತಾಪೂರ್ವಕವಾಗಿ ಇಟ್ಟಿರುವ ಸ್ನೇಹಕ್ಕಿಂತಲೂ ನಿರತಿಶಯವಾಗಿ, ಭಗವಂತನ ಪಾದಾರವಿಂದಗಳ ಅವಿಚ್ಛಿನ್ನ ವಾಗಿ, ಸುದೃಢ ರೂಪವಾದ ಪ್ರೇಮ ಪ್ರವಾಹರೂಪವಾದ ಸ್ನೇಹಭಾವಕ್ಕೆ "ಭಕ್ತಿ" ಎಂದು ಪರಿಷ್ಕಾರ. ಇದು ನೈಜವಾಗಿರಬೇಕು. ಇಂತಹ ಸದ್ಭಕ್ತಿಯೇ ಶ್ರೀಹರಿಗೆ ತೊಡಿಸುವ ರತ್ನಾಭರಣರೂಪವಾದ ಆಭರಣ ವಿಶೇಷಗಳು.

(೭) ಬುದ್ಧಿಯು ಮನಸ್ಸಿನ ದ್ವಾರಾ ಗ್ರಹಿಸಲ್ಪಟ್ಟ ಸದ್ವಿಷಯ ಗಳನ್ನು "ಇದಮಿತ್ಥಂ" —ಎಂಬ ನಿಶ್ಚಯ ಜ್ಞಾನದಿಂದ ನಿರ್ಣಯಿಸುವ ಅಹಂಕಾರ ತತ್ತ್ವಗಳಲ್ಲಿ ವಿಭಕ್ತವಾದ ಪಂಚ ವೃತ್ತಿಗಳಲ್ಲಿ ಮುಖ್ಯವಾದುದು. ಇಂತಹ ಸದ್ಬುದ್ಧಿಯು ಸದ್ವಿಷಯದಲ್ಲಿ ವ್ಯಾಪಕವಾಗಿರಬೇಕು. ಅದೇ ಶ್ರೀಹರಿಗೆ ನಾವು ಅರ್ಪಿಸುವ ಶ್ವೇತಛತ್ರವು. ಛತ್ರಿಯು ತಲೆಗೆ ನೆರಳನ್ನು ಕೊಟ್ಟು, ಇಡೀ ಶರೀರವನ್ನು ಬಿಸಿಲು, ಮಳೆಗಳಿಂದ ಸಂರಕ್ಷಿಸುವುದು. ಅಂತೆಯೇ ಸದ್ಬುದ್ಧಿಯಿಂದ ಸಮೀಚೀನವಾದ ಜ್ಞಾನಾಕಾರವನ್ನು ಹೊಂದಿ ದೇಹಾದ್ಯಂತ ವ್ಯಾಪ್ತನಾದ ಶ್ರೀ ಪರಮಾತ್ಮನನ್ನು ಸದಾ ಚಿಂತಿಸಲು ಸಹಾ ಯಕವಾಗುವುದು. ಇಂತು ಸದ್ಬುದ್ಧಿಯೇ ಶ್ರೀಹರಿಗೆ ಅರ್ಪಿಸುವ ಛತ್ರಿಯು.

(೮) ಸಮೀಚೀನವಾದ ಜ್ಞಾನವು ತೇಜಃ ಸಾಂಕೇತವಾಗಿದೆ. ಭಗವ ದ್ವಿಷಯದಲಿ ಸಂಶಯರಹಿತವಾದ ನಿರ್ದುಷ್ಟವಾದ ಜ್ಞಾನವು ಸುಜ್ಞಾನವೆಂದೆ ನಿಸುವುದು. ಇಂತಹ ಸುಜ್ಞಾನವೇ ದೇವರಿಗೆ ಹಚ್ಚುವ ದೀಪದ ಸಾಲುಗಳು.

(೯) ಭಗವತ್ಪೂಜಾ ಕಾಲದಲ್ಲಿ ಆಗಾಗ್ಗೆ ಮಾಡುವ ಮಂಗಳಾರತಿ ಗಳೇ ಪರಮಾತ್ಮನ ಗುಣಕಥನವು. ಅಪಾರ ಮಹಿಮಾಸಂಪನ್ನನಾದ ಶ್ರೀ

ಪರಮಾತ್ಮನ ಪರಮ ಮಂಗಳಕರವಾದ ಗುಣಸಮೂಹಗಳನ್ನು ಆನಂದಪರವಶ ನಾಗಿ ಹಿಗ್ಗುತ್ತಾ ಕೊಂಡಾಡುವುದೇ ಶ್ರೀಹರಿಯ ಗುಣಕಥನವು. ಇಂತಹ ಗುಣಕಥನವೇ ಶ್ರೀ ಪರಮಾತ್ಮನಿಗೆ ಬೆಳಗುವ ಮಂಗಳಾರ್ತಿಗಳೆಂದು ಭಾವಿಸಿ, ಪೂಜಿಸಬೇಕೆಂದು ತಾತ್ಪರ್ಯ ||೧೫||

## ಪದ್ಯ (೧೬)

**ಮೂಲ :—**

ಮನ ವಚನ ಕಾಯಕ ಪ್ರದಕ್ಷಿಣೆ |
ಯನುದಿನದಿ ಸರ್ವತ್ರ ವ್ಯಾಪಕ |
ವನರುಹೇಕ್ಷಣಗರ್ಪಿಸುತ ನೋಡಿಸುತಲಿರು ಸತತ ||
ಅನುಭವಕೆ ತಂದುಕೊ ಸಕಲ ಸಾ |
ಧನಗಳೊಳಗಿದೆ ಮುಖ್ಯ ಪಾಮರ |
ಮನುಜರಿಗೆ ಪೇಳಿದರೆ ತಿಳಿಯದು ಬುಧರಿಗಲ್ಲದೆಲೆ || ||೧೬||

**ಅವತರಣಿಕೆ :—**

ಹಿಂದಿನ ಎರಡು ಪದ್ಯಗಳಲ್ಲಿ ಇಂದ್ರಿಯಗಳು, ಇಂದ್ರಿಯಗತ ಗೋಳಕ ಗಳು, ತದ್ವಿಷಯಗಳು,ಮನಸ್ಸಿನಿಂದ ಉತ್ಪನ್ನವಾಗುವ ಮನೋವಿಕಾರ ವಿಶೇಷ ಗಳು, ಅಂತಃಕರಣಾದಿ ಪಂಚಮನೋವೃತ್ತಿಗಳು ಇತ್ಯಾದಿ ವಿಷಯಗಳನ್ನು ಭಗವದರ್ಪಣ ಬುದ್ಧಿಯಿಂದ ಪೂಜಾಮಾಡುವ ವಿಧಾನವನ್ನು ತಿಳಿಸಿ, ಪ್ರಸಕ್ತ ಪದ್ಯದಿಂದ ಮನಸ್ಸು, ವಾಕ್ಕು, ಶರೀರ ಎಂಬ ತ್ರಿಕರಣ ಪೂರ್ವಕ ಭಗವ ದರ್ಚನಾ ಕ್ರಮವನ್ನು ತಿಳಿಸುತ್ತಾ, ತಜ್ಜನ್ಯವಾದ ಆನಂದವನ್ನು ಅನುಭವಕ್ಕೆ ತಂದುಕೊಳ್ಳುತ್ತಾ, ಗುಪ್ತಸಾಧಕನಾಗಿರಬೇಕೆಂದು ತಿಳಿಸುತ್ತಾರೆ. "ಮನ ವಚನ"-ಎಂಬ ಪ್ರಸಕ್ತ ಸಂಧಿಗತ ೧೬ನೆಯ ಈ ಪದ್ಯದಿಂದ ||೧೬||

**ಮನ** = ವಿಷಯಗಳಲ್ಲಿ ಸಂಚಾರಮಾಡತಕ್ಕ ಮನಸ್ಸು **ವಚನ** = ವಾಗಿಂದ್ರಿಯ (ವಾಗ್ರೂಪವಾದ ಕ್ರಿಯಾ ವಿಶೇಷಗಳು) **ಕಾಯಕ** = ದೇಹಕ್ಕೆ ಸಂಬಂಧಿಸಿದ ವ್ಯಾಪಾರಗಳು **ಪ್ರದಕ್ಷಿಣೆ** = ಪೂರ್ವೋಕ್ತ ತ್ರಿಕರಣಗಳಿಂದ ನಡೆಯತಕ್ಕ ಕ್ರಿಯಾ ವಿಶೇಷಗಳೆಲ್ಲವೂ ಭಗವಂತನಿಗೆ ಪ್ರದಕ್ಷಿಣೆ ಎಂಬ ಉತ್ತಮಾನುಸಂಧಾನದಿಂದ **ಅನುದಿನದಿ** = ಪ್ರತಿದಿನ ಕ್ಷಣದಲ್ಲಿಯೂ **ಸರ್ವತ್ರ ವ್ಯಾಪಕ** = ಎಲ್ಲಾ ದೇಶ, ಕಾಲ, ಅವಸ್ಥಾ ವಿಶೇಷಗಳು. ಇತ್ಯಾದಿ ಸಮಸ್ತದಲ್ಲಿಯೂ ಪರಿಪೂರ್ಣನಾಗಿ ವ್ಯಾಪಿಸಿಕೊಂಡಿರುವ **ವನರುಹೇಕ್ಷಣಗೆ** = ಕಮಲದಳಾಯತಾಕ್ಷನಾದ ಶ್ರೀ ಪರಮಾತ್ಮನಿಗೆ (ವನರುಹ = ಕಮಲ; ಈಕ್ಷಣ = ನೇತ್ರ) **ಅರ್ಪಿಸುತ** = ಸಮರ್ಪಣೆ ಮಾಡುತ್ತ **ಸತತ** = ನಿರಂತರದಲ್ಲಿಯೂ **ನೋದಿಸುತಲಿರು** = ಸಂತೋಷಪಡುತ್ತಿರು, **ಅನುಭವಕೆ** = ಈರೀತಿ ಸರ್ವ ವಿಷಯಗಳನ್ನು ಭಗವದರ್ಪಣ ಬುದ್ಧಿಯಿಂದ ಅನುಸಂಧಾನ ಪೂರ್ವಕಮಾಡುವ ಪೂಜಾವಿಧಿಗಳನ್ನು ನಿನ್ನ ಅನುಭವಕ್ಕೆ **ತಂದುಕೊ** = ತಂದುಕೊಳ್ಳುವವನಾಗು ಅಂದರೆ ಕೇವಲ ಬಾಯಿಮಾತಿನಿಂದ ಪ್ರಯೋಜನವಿಲ್ಲ. ನಿತ್ಯಾನುಸಂಧಾನದಲ್ಲಿ ತಂದು, ಕಾರ್ಯಗತಗೊಳಿಸಿ, ಸ್ವಂತವಾಗಿ ಅನುಭವಿಸಿ ಆನಂದಪಡುತ್ತಿರಬೇಕೆಂದು ಅಭಿಪ್ರಾಯ **ಸಕಲ** = ಸಮಸ್ತವಾದ **ಸಾಧನಗಳೊಳು** = ಭಗವದನುಗ್ರಹ ಪ್ರಾಪ್ತಿಗಾಗಿ ಮಾಡುವ ಸತ್ಕಾರ್ಯವಿಧಾನಗಳಲ್ಲಿ **ಇದೆ ಮುಖ್ಯ** = ಇದೇಮುಖ್ಯ ಸಾಧನಮಾರ್ಗವೆಂದು ತಿಳಿಯಬೇಕು **ಪಾಮರ ಮನುಜರಿಗೆ** = ಕೇವಲ ವಿಷಯಾಸಕ್ತರಾದ ಅಜ್ಞಾನಿ ಜನರಿಗೆ **ಪೇಳಿದರೆ** = ಇಂತಹ ಗಹನ ವಿಷಯಗಳನ್ನು ತಿಳಿಸಿದರೆ **ತಿಳಿಯದು** = ಅವರ ಮನಸ್ಸಿಗೆ ಹಿಡಿಯುವುದಿಲ್ಲ **ಬುಧರಿಗಲ್ಲದೆಲೆ** = ಭಗವದನುಗ್ರಹಾಕಾಂಕ್ಷಿಗಳಾದ ಜ್ಞಾನಿಗಳಿಗಲ್ಲದೆ ಪಾಮರರಿಗೆ ತಿಳಿಯುವುದಿಲ್ಲ ॥೧೬॥

# ವ್ಯಾಖ್ಯಾನಗಳು

## (೧) ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ:—

ಪೂರ್ವೋಕ್ತ ಸಂಗತಿಗಳ ಹೇಳಿ ಇನ್ನು ಆದರ ವಿವರವೇ ಮುಖ್ಯ ಸಾಧನೆ ಎಂತಲೂ, ಇನ್ನೂ ಕೆಲವು ಸಂಗತಿಗಳ ಹೇಳತಾರೆ.

ದೇಹಕ್ಕೆ ಸಂಬಂಧಿಸಿದ (ಕಾಯಕ), ವಚನೇಂದ್ರಿಯವಾದ ವಾಗೀಂದ್ರಿಯವೂ, ಉಪಲಕ್ಷಣಯಾ ದಶೇಂದ್ರಿಯಗಳೂ ಗ್ರಾಹ್ಯ (ವಚನ) ಈ ದಶೇಂದ್ರಿಯಗಳು ಹೃದಯಾಕಾಶಗತ ಬಿಂಬಮೂರ್ತಿಗೆ ವಲಯಾಕಾರದಿಂದ ದೇಹದಲ್ಲಿ ಆಯಾ ಸ್ಥಾನಗಳಲ್ಲಿ ಇರೋದಾಗಿ ಅದೆ. ಈ ಇಂದ್ರಿಯಗಳಲ್ಲಿ ಮನಸ್ಸು ಸಂಚಾರ ಮಾಡೋತದಾಗತದೆ. (ಮನ) ಇಂಥಾ 'ಸಂಚಾರವೇ ಪ್ರತಿದಿನ, ಪ್ರತಿಕ್ಷಣದಲ್ಲೂ ಮಾಡತಕ್ಕ (ಅನುದಿನದಿ) ಪ್ರದಕ್ಷಿಣೆಯು ಅಂದರೆ, ದೀನನಾಗಿ ಪರಮಾತ್ಮನ ಪ್ರಾರ್ಥನ ಮಾಡೋಣವೇ ನಮಸ್ಕಾರ ಎಂದರ್ಥ. ದಶೇಂದ್ರಿಯಾದಿ ಸರ್ವತ್ರ ವ್ಯಾಪಕವಾದ (ಸರ್ವತ್ರ ವ್ಯಾಪಕ), ಕಮಲಾಕ್ಷನಾದ ಶ್ರೀ ಬಿಂಬರೂಪೀ ಹರಿಗೆ (ವನರುಹೇಕ್ಷಣಗೆ), ಈ ಪ್ರಕಾರ ಸಮರ್ಪಣೆ ಮಾಡುತ್ತಾ (ಅರ್ಪಿಸುತ) ನಿರಂತರದಲ್ಲೂ (ಸತತ), ವಿರಕ್ತನಾಗಿ ಭಗವ ದ್ವಿಷಯಕವಾದ ಆನಂದದೀದ ಇರೋವವನಾಗು. ಈ ಪ್ರಕಾರ ಉಚ್ಚಾರಮಾತ್ರ ದಿಂದ ಉಪಯೋಗವಿಲ್ಲ. ಛಂದಾಗಿ ಅನುಭವಕ್ಕೆ ತಂದುಕೊಂಡು, ಅನುಷ್ಠಾನ ಮಾಡೋವವನಾಗು (ಅನುಭವಕೆ ತಂದುಕೊ). ಸಮಸ್ತ ಸತ್ಕಾರ್ಯದೊಳಗೆ (ಸಕಲ ಸಾಧನಗಳೊಳಗೆ) ಇದು ಅತ್ಯಂತ ಮುಖ್ಯವಾದ ವಿಷಯವಾದ್ದರಿಂದ ಅನುಸಂಧಾನಯುಕ್ತನಾಗಿ, ಪೂರ್ವೋಕ್ತ ವಿಷಯಗ ಳನ್ನು ವಿವರವಾಗಿ ಮನಸ್ಸಿನಿಂದ ಬಿಂಬಮೂರ್ತಿಯಾದ ಶ್ರೀಪರಮಾತ್ಮನ್ನ ಪೂಜಾಮಾಡಬೇಕು. ಈ ಮಾರ್ಗಗಳು ವಿಷಯಾಸಕ್ತರಾಗಿ ಭಗವದ್ಧ್ಯಾನ ಶೂನ್ಯರಾಗಿ ಇರುವಂಥ ಮೂಢ ಜನರಿಗೆ (ಪಾಮರ ಜನರಿಗೆ) ಇಂಥಾ ಅನು ಸಂಧಾನಮಾರ್ಗಗಳು ಹೇಳಿದರೆ ಅವರ ಮನಸ್ಸಿಗೆ ಹಿಡಿಯೋದಿಲ್ಲ. ಆದರೆ ದಾರಿಗೆ ಹೇಳಿದರೆ ಅನುಷ್ಠಾನ ಮಾಡತಾರೆ-ಎಂದರೆ ಭಗವದನುಗ್ರಹಕ್ಕೆ

ಪಾತ್ರರಾಗಿ ಸದ್ಗತಿ ಐದಬೇಕೆಂಬ ಜ್ಞಾನಿಗಳಿಗೆ ಆದರ ವಿಚಾರ ಹೇಳಬೇಕು ಎಂತ ತಾತ್ಪರ್ಯವೇ ಹೊರತು, ಅನ್ಯರಿಗೆ ಈ ಮಾರ್ಗ ತಿಳಿಸಬಾರದು ಎಂತ ತಾತ್ಪರ್ಯ (ಎಬುಧರಿಗಲ್ಲದೆಲೆ) ॥೧೬॥

## (೨) "ಭಾವಪ್ರಕಾಶಿಕೆ" ವ್ಯಾಖ್ಯಾನ :—

ಮನಸ್ಸಿನಿಂದಲೂ, ವಾಕ್ಯದಿಂದಲೂ, ಶರೀರದಿಂದಲೂ. ಮಾಡುವ ಸಕಲ ಕಾರ್ಯಗಳನ್ನೂ ಶ್ರೀ ಪರಮಾತ್ಮನಿಗೆ ಪ್ರದಕ್ಷಿಣೆ ಎಂದು ಭಾವಿಸಿ, ಅವುಗಳನ್ನು ಶ್ರೀ ಪರಮಾತ್ಮನಿಗೆ ಅರ್ಪಿಸುತ್ತಾ, ಆನಂದಪಡುತ್ತಲಿರು. ಈ ವಿಷಯಗಳು ಹೇಳೋಣದರಿಂದಲೇ ತಿಳಿಯಲು ಸಾಧ್ಯವಿಲ್ಲ. ಅನುಭವ ಮಾಡಿ ಮನಸ್ಸಿಗೆ ತಂದುಕೋ. ಇದಕ್ಕಿಂತಲೂ ದೊಡ್ಡ ಸಾಧನವು ಮುಕ್ತಿಗೆ ಬೇರೆ ಇಲ್ಲವೆಂದು ನಿಶ್ಚಯವಾಗಿ ತಿಳಿ ! ಆದರೆ, ಇದು ಸಾಮಾನ್ಯ ಜನರ ಮನಸ್ಸಿಗೆ ಬರುವುದು ಕಷ್ಟ ಸಾಧ್ಯ. ಜ್ಞಾನ ಗೋಚರವಾದುದು. ಅಜ್ಞರಿಗೆ ಇದರ ಉಪದೇಶದಿಂದೇನು? ಎಂದು ಉದಾಸೀನ ಮಾಡಬೇಡಿ. ಪ್ರಯತ್ನ ಮಾಡಿ, ತಿಳಿಯದ ಭಾಗವನ್ನು ಗುರು ಮುಖದಿಂದ ತಿಳಿದು, ಅನುಭವಕ್ಕೆ ತಂದುಕೊಳ್ಳಬೇಕೆಂಬುದೇ ದಾಸರಾಯರ ತಾತ್ಪರ್ಯವು (೧೬)

## (೩) "ಭಾವದರ್ಪಣ ಟೀಕಾ"-ವ್ಯಾಖ್ಯಾನ :—

ಮನೋವಾಕ್ಕಾಯಗಳಿಂದ ವಿಷಯ ವಸ್ತುಗಳ ಪುನಃ ಪುನಃ ಸ್ಮರಣೆಯನ್ನು ಪದ್ಮಸದೃಶವಾದ ಕಾರುಣ್ಯವೆಂಬ ಕೋಮಲತೆಯು ಕಣ್ಣುಳ್ಳ ಶ್ರೀ ಬಿಂಬನಿಗೆ, ಆತನೇ ಎಲ್ಲಾ ವಿಷಯಗಳ ಚಿಂತನೆಗೂ, ಭೋಗ ಬುದ್ಧಿಗೂ ಕಾರಣನಾಗಿದ್ದಾನೆ, ನಾನು ಆತನು ಕೊಟ್ಟಿದ್ದನ್ನು ತಿನ್ನಬೇಕು. ಇಟ್ಟಹಾಗೆ ಇರಬೇಕು—ಎಂಬ ವಿವೇಕವೇ ಅರ್ಪಣೆ. ಹೀಗೆ ಅರ್ಪಿಸುತ್ತ, ಯಾವಾಗಲೂ ಸ್ವವಿಹಿತಾಚರಣೆಯಲ್ಲಿ ಆನಂದವನ್ನು ಹೊಂದು. ನಾನು ಸ್ವತಂತ್ರನಲ್ಲ. ಶ್ರೀ ಬಿಂಬನು ಸ್ವತಂತ್ರ. ಪರತಂತ್ರನಾದ ನನ್ನ ಎಲ್ಲಾ ಕರ್ಮಗಳೂ ಆತನ ಆಶ್ರಯದಲ್ಲಿ ಆಗುತ್ತಲಿವೆ ಎಂದು ನಿನ್ನ ಸುಖ ದುಃಖಾನುಭವದಲ್ಲಿ ನಿರ್ಧರಿಸೋ. ಈ ಬಿಂಬಕ್ರಿಯಾನುಸಂಧಾನವು, ಯಾತ್ರೆ. ತೀರ್ಥ, ಅಧ್ಯಯನ. ಉಪ

ದೇಶಾದಿ ಸಾಧನ ಕರ್ಮಗಳಿಗೆ ಈ ಬಿಂಬನ ಕರ್ಮಾನುಚಿಂತನಕ್ಕಾಗಿಯೇ ಅವುಗಳೆಲ್ಲವೂ ಪ್ರವೃತ್ತವಾಗಿವೆ, ಆದ್ದರಿಂದ ಪರಮ ಮುಖ್ಯ. ಈ ವಿವೇಕವು ಸ್ವರೂಪಾನಂದ ಭೋಗಕ್ಕೆ ಕಾರಣರಾದ ಸಾತ್ವಿಕರಿಗೇ ಹೊರತು, ಆನಂದಾನುಭವಕ್ಕೆ ಯೋಗ್ಯರಲ್ಲದ ರಾಜಸ, ತಾಮಸರಿಗೆ ಹೇಳಿದರೆ ತಿಳಿಯುವುದಿಲ್ಲ ನೀನು ಪಾಮರನಾಗಬೇಡ. "ಪಾಮರರು ಬಳಲುವರು ಭವದೊಳಗೆ" —ಎಂದು ಹಿಂದೆಯೇ ಎಚ್ಚರಿಕೆಯ ಮಾತುಗಳನ್ನು ಹೇಳಿದ್ದಾರೆ ॥೧೬॥

## (೪) ಶ್ರೀ ವಾದಿರಾಜಾಚಾರ್ಯರ ವ್ಯಾಖ್ಯಾನ:— (ಸಂಸ್ಕೃತ ಮೂಲ)

ಮನವೇತಿ॥ ತ್ರಯಾಣಾಂ ಸದಾ ಸರ್ವತ್ರ ಆವರ್ತನಾತ್ ತತ್ತದ್ಗಸ್ಯ ಪ್ರದಕ್ಷಿಣತಾ ॥ ಬುಧರಿಗೆ ಅಧ್ಯಾತ್ಮ ರಸರಂಜನೀ ಸರ್ವಸಮರ್ಪಣಾಭಿ ಜ್ಞಾನಾಮ್ ॥೧೬॥

## ಕನ್ನಡಾನುವಾದ :—

ಕಾಯಕ, ವಾಚಕ ಮತ್ತು ಮಾನಸಿಕ ವ್ಯಾಪಾರಗಳು ನಿರಂತರ ದೇಹ ದ್ವಾರಾ ನಡೆಯುತ್ತಿರುವುವು. ಇವೇ ಆಯಾ ಕ್ರಿಯಾಪ್ರವರ್ತಕ ಶ್ರೀಹರಿಗೆ ಪ್ರದಕ್ಷಿಣೆಗಳು. ಈ ಉಪಾಸನಾಕ್ರಮವು "ಅಧ್ಯಾತ್ಮ ರಸರಂಜಿನಿ"ಯಲ್ಲಿ ಉಕ್ತವಾಗಿದೆ. "ಸರ್ವಸಮರ್ಪಣ" ವಿಧಾನವು ಜ್ಞಾನಿಗಳಿಗೆ ಮಾತ್ರ ವೇದ್ಯವು. ಅಂತಹವರೇ ಬುಧರು ॥೧೬॥

## (೫) "ಗುರು ಹೃದಯ ಪ್ರಕಾಶಿಕಾ" ವ್ಯಾಖ್ಯಾನ :—

ಮನವಚನ ಕಾಯಕ ಪ್ರದಕ್ಷಿಣೆ ಎಂದರೆ, ಹೀಗೆ ಶರೀರ, ವಚನ, ಮನಸ್ಸಿನ ಕ್ರಿಯೆಗಳೆಲ್ಲವೂ, ದೇವರಿಗೆ ಪ್ರದಕ್ಷಿಣೆ ಎಂದು ತಿಳಿದು, ಸರ್ವ ವ್ಯಾಪ್ತನಾದ ಕಮಲದಳನೇತ್ರ ಶ್ರೀಹರಿಗೆ, ನಿತ್ಯದಲ್ಲೂ ಸಮರ್ಪಿಸಿ,

ಸದಾ ಸಂತೋಷಿಸು. ಧ್ಯಾನಶೀಲರಾಗಿ, ಮಾನಸಪೂಜೆ ಮಾಡುವ ಜ್ಞಾನಿಗಳಿಗೆ, ಇದನ್ನು ಹೇಳಿದರೆ ತಿಳಿಯುವುದಲ್ಲದೆ, ಪಾಮರ ಮನುಜರಿಗೆ ಎಂದರೆ, ಬಾಹ್ಯಪ್ರತಿಮೆಗಳಲ್ಲಿ ಅಗ್ರ್ಯೋದಕಾದಿಗಳಿಂದ ಪೂಜೆಯೇ ದೇವರ ಪೂಜೆ ಎಂದು ತಿಳಿದ ಅಲ್ಪ ಜನರಿಗೆ, ಈ ರಹಸ್ಯ ತಿಳಿಯದಾದ್ದರಿಂದ ಅನುಭವಕ್ಕೆ ತಂದುಕೋ, ಎಂದರೆ, ಮೇಲೆ ಹೇಳಿದ ತ್ರಿಕರಣ ವ್ಯಾಪಾರವೆಲ್ಲ ದೇವರ ಪೂಜೆಯನ್ನಾಗಿ ಭಾವಿಸು. ಸಕಲ ಸಾಧನಗಳಲ್ಲಿ ಇದು ಮುಖ್ಯವೆಂದು ಅನುಭವಕೆ ತಂದುಕೋ. ಎಂದರೆ ಮನಸ್ಸಿಗೆ ತಂದುಕೋ ಎಂದರ್ಥ ಇದರಿಂದ.

**"ಧರ್ಮಾರ್ಥಕಾಮ ಮೋಕ್ಷಾಣಾಂ ನಾನ್ಯೋಽಪಾಯಸ್ತುವಿದ್ಯತೇ।**
**ಸತ್ಯಂ ಬ್ರವೀಮಿ ದೇವೇಶ ಹೃಷಿಕೇಶಾರ್ಚನಾದೃತೇ ॥"**

—ಎಂಬುದು ವಿವರಿಸಿತು ॥೧೬॥

# ಸರ್ವವ್ಯಾಖ್ಯಾನಸಾರಸಂಗ್ರಹ

(೧) ಮನಸ್ಸು (೨) ವಾಕ್ಕು ಮತ್ತು (೩) ದೇಹ ಎಂಬ ಈ ಮೂರು ಅಧಿಷ್ಠಾನಗಳಿಗೆ ತ್ರಿಕರಣಗಳೆಂದು ಹೆಸರು. ದೇಹಗತ ಇಂದ್ರಿಯ ಗಳ ದ್ವಾರಾ ನಡೆಯುವ ವ್ಯಾಪಾರ ವಿಶೇಷಗಳಿಗೆ ಕಾಯಕ ಕ್ರಿಯೆಗಳು ಎಂದು ಹೆಸರು. ವಾಗ್ರೂಪ ವ್ಯಾಪಾರಗಳಾದ ಸಂಭಾಷಣೆ, ಉಪದೇಶ ಸಚ್ಛಾಸ್ತ್ರಗಳ ಪ್ರವಚನಾದಿಗಳು ಇವುಗಳಿಗೆ ವಾಚನಿಕ ವ್ಯಾಪಾರಗಳೆಂದು ಹೆಸರು, ವಿಷಯಗಳನ್ನು ಗ್ರಹಿಸುವ ಇಂದ್ರಿಯವು ಮನಸ್ಸು. ದಶೇಂದ್ರಿಯ ಗಳನ್ನು ನಿಯಂತ್ರಿಸುವ ತತ್ತ್ವವು. ವಿಷಯಾದಿಗಳಲ್ಲಿಯೇ ಮನಸ್ಸು ಸಂಚಾರ ಮಾಡುತ್ತಿರುವುದು. ಚಾಂಚಲ್ಯವೇ ಅದರ ಮುಖ್ಯ ಲಕ್ಷಣವು. ಮನಸ್ಸಿನ ದ್ವಾರಾ ನಡೆಯುವ ಕ್ರಿಯಾ ವಿಶೇಷಗಳೆಲ್ಲವೂ ಮಾನಸಿಕ ವ್ಯಾಪಾರ ಗಳು. ಇಂತು ತ್ರಿಕರಣಗಳ ದ್ವಾರಾ ನಡೆಯುವ ಮಾನಸಿಕ, ವಾಚನಿಕ

ಹಾಗೂ ಕಾಯಕವಾದ ಸಮಸ್ತ ವ್ಯಾಪಾರ ವಿಶೇಷಗಳೂ ದೇಹದಲ್ಲಿ ಹೃದಯಾಕಾಶದಲ್ಲಿ ವಿರಾಜಮಾನನಾಗಿರುವ ಬಿಂಬರೂಪೀ ಶ್ರೀ ಪರಮಾತ್ಮನಿಗೆ ಪ್ರದಕ್ಷಿಣೆ ಎಂದು ಅನುಸಂಧಾನಪೂರ್ವಕ ಭಾವಿಸಬೇಕೆಂದು ದಾಸರಾಯರ ಅಭಿಪ್ರಾಯವು. ಈ ಇಂದ್ರಿಯಗಳು ದೇಹದಲ್ಲಿ ವಲಯಾಕಾರವಾಗಿ ವಿದ್ಯಮಾನಗಳಾಗಿವೆ, ಇದರಿಂದ ಪ್ರದಕ್ಷಿಣಾರೂಪವಾದ ದೇವಮಂದಿರದ ಪ್ರಾಕಾರದ ಸುತ್ತಲೂ ಸುತ್ತುವ ಕ್ರಿಯೆ ಎಂದು ಭಾವಿಸಬೇಕು. ಮನಸ್ಸು ಯಾವಾಗಲೂ ವಿಷಯಾದಿಗಳಲ್ಲಿ ಸಂಚಾರಮಾಡುತ್ತಿರುವುದು. ಆಯಾಯಾ ಇಂದ್ರಿಯಗಳಿಗೆ ಸಂಬಂಧಪಟ್ಟ ವಿಷಯಾದಿಗಳನ್ನು ಭಗವದರ್ಪಣಮಾಡಿ, ತದ್ದ್ವಾರಾ ಭಗವದರ್ಚನಮಾಡುವ ಅನುಸಂಧಾನ ಮಾರ್ಗವನ್ನು ದಾಸರಾಯರು ಹಿಂದಿನ ಪದ್ಯದಲ್ಲಿ ವಿವರಿಸಿರುತ್ತಾರೆ. ಮಾನಸಿಕ ವ್ಯಾಪಾರವು ಸಂಚಾರ ರೂಪವಾಗಿರುವುದುದರಿಂದ ಈ ವಿವಕ್ಷಾ, "ಪ್ರದಕ್ಷಿಣೆ" ಎನಿಸಿಕೊಳ್ಳುವುದು. ಅಣುರೇಣುತೃಣಕಾಷ್ಠಾದಿಗಳಲ್ಲಿ ಪರಿಪೂರ್ಣನಾಗಿ ಸರ್ವಕಾಲ, ಸರ್ವದೇಶ, ಸರ್ವಾವಸ್ಥೆಗಳಲ್ಲಿಯೂ ವ್ಯಾಪಕನಾಗಿರುವ ಶ್ರೀಹರಿಯು ಕಮಲದಳಾಯತಾಕ್ಷನು. ವನ-ಎಂದರೆ "ನೀರು". ವನರುಹ-ಎಂದರೆ ನೀರಿನಿಂದ ಮೇಲಕ್ಕೆ ಭೇದಿಸಿಕೊಂಡು ಬರುವ "ಕಮಲವು" ಅಂತಹ ಕಮಲವು ವರ್ಣವಿಶಿಷ್ಟವಾಗಿದ್ದು ಕೋಮಲವಾಗಿರುವುದು. ಇಂತು ಕಮಲ ದಳದಂತೆ ವಿಶಾಲವಾದ ಕಣ್ಣುಳ್ಳ ಶ್ರೀಪರಮಾತ್ಮನು ವನರುಹೇಕ್ಷಣನು. ಅವನ ಅಪಾಂಗದೃಷ್ಟಿ ಕರುಣಾರಸಪೂರಿತವಾದುದು. ಈ ರೀತಿಯಲ್ಲಿ ಸರ್ವತ್ರ ವ್ಯಾಪಕನಾದ ಆ ವನರುಹೇಕ್ಷಣನ ಪಾದಾರವಿಂದಗಳಿಗೆ ಕಾಯಕ, ವಾಚನಿಕ ಹಾಗೂ ಮಾನಸಿಕ ಕಾರ್ಯಗಳೆಲ್ಲವನ್ನೂ ಅರ್ಪಿಸುತ್ತಾ, ಆ ವ್ಯಾಪಾರವಿಶೇಷಗಳೆಲ್ಲವೂ ಆ ಪುಂಡರೀಕದಳಾಯತಾಕ್ಷನಿಗೆ "ಪ್ರದಕ್ಷಿಣೆ" ಎಂದು ಭಾವಿಸಬೇಕು. ಈ ಭಗವದರ್ಪಣರೂಪವಾದ ಅನುಸಂಧಾನ ಭಾವದಿಂದ ನಿರಂತರವೂ ಸಂತೋಷಪಡುತ್ತಿರು-ಎಂದು ದಾಸರ ಹಿತವಚನ. ಪೂರ್ವೋಕ್ತ ಕ್ರಿಯಾಕಲಾಪಗಳನ್ನು ಸರ್ವಪ್ರೇರಕನಾದ ಶ್ರೀಪರಮಾತ್ಮನಿಗೆ ಅರ್ಪಿಸುವುದರಿಂದ, ಅವನು ಸಂತುಷ್ಟನಾಗುವನು. ಇದರಿಂದ ಪ್ರತಿಬಿಂಬಭೂತರಾದ ಜೀವರಿಗೆ ಆನಂದಪ್ರದನಾಗುವನು. ಈ ಅನುಸಂಧಾನಮಾರ್ಗವನ್ನು ಕೇವಲ ಮಾತಿನ ರೂಪಿನಲ್ಲಿ

ಉಪದೇಶಿಸದೆ, ತಾನೇ ಸ್ವತಃ ಅನುಷ್ಠಾನಕ್ಕೆ ತರಬೇಕು. ಆಗ ಆ ವಿಷಯಗಳೆಲ್ಲವೂ ಅನುಭವಸಿದ್ಧವಾಗುವುವು. ಸಚ್ಛಾಸ್ತ್ರ ಶ್ರವಣ, ಅಧ್ಯಯನ, ಪಾಠ ಪ್ರವಚನಾದಿಗಳು, ಮುಂತಾದ ಸತ್ಸಾಧನೆಗಳೆಲ್ಲೆಲ್ಲಾ, ಅನುಭವಕ್ಕೆ ತಂದು ಕೊಳ್ಳುವ ಅನುಷ್ಠಾನ ಮಾರ್ಗವೇ ಅತ್ಯಂತ ಮುಖ್ಯ, ಇತರ ಸಾಧನಗಳ್ಳ ಕೇವಲ ಔಪಚಾರಿಕ. ಅನುಭವಸಿದ್ಧವಾದ ಜ್ಞಾನವೇ ಪ್ರಾಪಂಚಿಕ ಸುಖಗಳಲ್ಲಿ ಲೋಲರಾಗಿರುವ ಅಜ್ಞರಾದ ಸಾಮಾನ್ಯ ಜನರು "ಪಾಮರರು" ಇಂತಹ ಪಾಮರರಿಗೆ ಅನುಭಕ್ಕೆ ಸಾಧನವಾಗುವ ಈ ಅನುಷ್ಠಾನ ಮಾರ್ಗವನ್ನು ತಿಳಿಸಿದರೆ ಅವರು ಗ್ರಹಿಸಲಾರದು. ಜ್ಞಾನಿಗಳು "ವಿಬುಧ"ರೆನಿಸುವುರು. ಅಂತಹ ವಿಬುಧರಿಗೆ ಮಾತ್ರ ಈ ಅನುಷ್ಠಾನ ಕ್ರಮವು ಚೆನ್ನಾಗಿ ಅರ್ಥವಾಗುವುದು. ಇದರಿಂದ ಜ್ಞಾನಿಗಳಾದವರ ಸಜ್ಜನರ ಸಂಗ ಮುಖ್ಯ ಎಂದು ತಾತ್ಪರ್ಯ. ॥೧೬॥

## ಪದ್ಯ (೧೭)

**ಮೂಲ :—**

ಚತುರವಿಧ ಪುರುಷಾರ್ಥ ಪಡೆವರೆ ।
ಚತುರದಶ ಲೋಕಗಳ ಮಧ್ಯದೊ ।
ಳಿತರುಪಾಯುಗಳಿಲ್ಲ ನೋಡಲು ಸಕಲ ಶಾಸ್ತ್ರದಲಿ ।
ಸತತ ವಿಷಯೇಂದ್ರಿಯುಗಳಲಿ ಪ್ರವಿ ।
ತತನೆನಿಸಿ ರಾಜಿಸುವ ಲಕುಮೀ ।
ಪತಿಗೆ ಸರ್ವ ಸಮರ್ಪಣೆಯು ಮಹಪೂಜೆ ಸದುಪಾಯು ॥೧೭॥

**ಅವತರಣಿಕೆ :—**

ಹಿಂದಿನ ಪದ್ಯಗಳಲ್ಲಿ ಸರ್ವ ಇಂದ್ರಿಯಗಳ ದ್ವಾರಾ, ತದ್ವಿಷಗಳ ದ್ವಾರಾ, ತ್ರಿಕರಣಗತ ವ್ಯಾಪಾರಗಳ ದ್ವಾರಾ ಕರ್ಮಸಮರ್ಪಣೆಯ

ನಿಧಾನವನ್ನು ತಿಳಿಸಿ, ಪ್ರಸಕ್ತ ಪದ್ಯದಿಂದ ಪರಮ ಪುರುಷಾರ್ಥ ರೂಪವಾದ **ಮೋಕ್ಷವನ್ನು** ಪಡೆಯಬೇಕಾದರೆ, ಸಮಸ್ತ ವಿಷಯಗಳು ಮತ್ತು ಅವುಗಳಿಗೆ ಸಂಬಂಧಪಟ್ಟ ಇಂದ್ರಿಯಗಳಲ್ಲಿ ವ್ಯಾಪಕನಾಗಿ ಸಕಲ ಕ್ರಿಯಾದಿಗಳನ್ನೂ ಮಾಡಿ ಮಾಡಿಸುತ್ತಿರುವ ರಮಾರಮಣನಿಗೆ ಸರ್ವ ಸಮರ್ಪಣೆಯ ಹೊರತು, ಅನ್ಯಥಾ ಮಾರ್ಗವಿಲ್ಲ ಎಂದು ತಿಳಿಸುತ್ತಾರೆ- **"ಚತುರವಿಧ"** ಎಂಬ ಪ್ರಸಕ್ತ ಸಂಧಿಗತ ೧೭ನೆಯ ಈ ಪದ್ಯದಿಂದ. ಇದೇ ಮಹಾಪೂಜೆ ಮತ್ತು ಸದುಪಾಯವೆಂದು ಮಾರ್ಗದರ್ಶನ ಮಾಡಿರುತ್ತಾರೆ ಜ್ಞಾನಿವರೇಣ್ಯರಾದ ರಾದ ದಾಸರಾಯರು ॥೧೭॥

**ಪ್ರತಿಪದಾರ್ಥ :—**

**ಚತುರವಿಧ** = ನಾಲ್ಕು ಪ್ರಕಾರವಾದ **ಪುರುಷಾರ್ಥ** = ಧರ್ಮ, ಅರ್ಥ, ಕಾಮ ಮತ್ತು ಮೋಕ್ಷಗಳೆಂಬ ಪುರುಷಾರ್ಥಗಳನ್ನು, (ಅಂದರೆ ಪುರುಷಾರ್ಥ ಚತುಷ್ಟಯಗಳು) **ಪಡೆವರೆ** = ಹೊಂದಬೇಕಾದರೆ **ಚತುರದಶಲೋಕಗಳ** = ಸತ್ಯಲೋಕ ಪ್ರಾರಂಭಿಸಿ ಪಾತಾಳಲೋಕ ಪರ್ಯಂತ ಹದಿನಾಲ್ಕು ಲೋಕಗಳ **ಮಧ್ಯದೊಳು** = ಇವುಗಳಲ್ಲಿ ಇರತಕ್ಕ **ಸಕಲ ಶಾಸ್ತ್ರದಲಿ** = ಎಲ್ಲಾ ವಿಧವಾದ ಶಾಸ್ತ್ರಗಳಲ್ಲಿಯೂ **ನೋಡಲು** = ಎಲ್ಲಿ ನೋಡಿದರೂ **ಇತರ ಉಪಾಯಗಳಿಲ್ಲ** = ಬೇರೆ ಸಾಧನ ಮಾರ್ಗ ರೂಪ ವಾದ ಉಪಾಯಗಳೇ ಇಲ್ಲವು. **ಸತತ** = ನಿರಂತರದಲ್ಲಿಯೂ **ವಿಷ ಯೇಂದ್ರಿಯಗಳಲಿ** = ವಿಷಯಾನುಭವಕ್ಕೆ ಕಾರಣಗಳಾದ ಜ್ಞಾನೇಂದ್ರಿಯ ಕರ್ಮೇಂದ್ರಿಯಗಳಲ್ಲಿ **ಪ್ರವಿತತನೆನಿಸಿ** = ವ್ಯಾಪ್ತನಾಗಿದ್ದಾನೆ ಎಂದೆನಿಸಿ ಕೊಂಡು **ರಾಜಿಸುವ** = ಪ್ರಕಾಶಮಾನನಾಗಿ ಇರುವ **ಲಕುಮೀಪತಿಗೆ** = ಲಕ್ಷ್ಮೀರಮಣನಾದ ಶ್ರೀಮನ್ನಾರಾಯಣನಿಗೆ **ಸರ್ವ ಸಮರ್ಪಣೆಯು** = ಸರ್ವೇಂದ್ರಿಯ ಹಾಗೂ ತತ್ತದ್ವಿಷಯಗತ ವ್ಯಾಪಾರಗಳನ್ನು ಪೂರ್ಣವಾಗಿ ಸಮರ್ಪಣ ಮಾಡುವ ಕ್ರಿಯೆಯೇ **ಮಹಾಪೂಜೆ** = ಅತ್ಯಂತ ಶ್ರೇಷ್ಠವಾದ ಪೂಜೆಯು **ಸದುಪಾಯ** = ಉತ್ತಮ ಮಾರ್ಗವು ॥೧೭॥

# ವ್ಯಾಖ್ಯಾನಗಳು

(೧) ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ :—

"ಧರ್ಮಾರ್ಥಕಾಮ ಮೋಕ್ಷಾಣಾಂ ನಾನ್ಯೋಪಾಯಸ್ತು ವಿದ್ಯತೇ ।
ಸತ್ಯಂ ಬ್ರವೀಮಿ ದೇವೇಶ ಹೃಷೀಕೇಶಾರ್ಚನಾದೃತೇ ॥

—ಎಂಬ ಪ್ರಮಾಣವನ್ನನುಸರಿಸಿ ಹೇಳುತ್ತಾರೆ.

ಬ್ರಹ್ಮಾದಿ ತೃಣಾಂತ ಮುಕ್ತಿಯೋಗ್ಯರಾದ ಜೀವರು ಆವರವರ ಯೋಗ್ಯತಾನುಸಾರವಾಗಿ (೧) ಸಾಯುಜ್ಯ (೨) ಸಾಮೀಪ್ಯ (೩) ಸಾರೂಪ್ಯ ಮತ್ತು (೪) ಸಾಲೋಕ್ಯ —ಎಂಬ ನಾಲ್ಕು ವಿಧ ಮುಕ್ತಿ ಲಿಂಗಭಂಗಾನಂತರ ಐದೋವರಾಗತಾರೆ. ಇಂಥಾ ಮುಕ್ತಿ ಐದೋದಕ್ಕೆ ಅಧಿಕಾರಿಗಳಾದ ಪುರುಷರಿಗೆ (ಪುರುಷ) ಪ್ರಯೋಜನಕರವಾದ (ಅರ್ಥ) ಸಾಧನಿ ಪೂರ್ವೋಕ್ತ ಸಾಧನಿಯು, ಇಂಥಾ ಸಾಧನಿ ವ್ಯತಿರಿಕ್ತ, ಚತುರ್ವಿಧ ಮೋಕ್ಷ ಪಡೆಯಲಾರರು ಎಂತ ತಾತ್ಪರ್ಯ (ಪಡೆವರೆ)- ಸತ್ಯಲೋಕ ಪ್ರಾರಂಭಮಾಡಿ ಪಾತಾಳಲೋಕದವರೆಗೂ (ಚತುರದಶ) ಹದಿನಾಲ್ಕು ಲೋಕಗಳ ಮಧ್ಯದಲ್ಲಿ ಇರತಕ್ಕ ಮುಕ್ತಿಯೋಗ್ಯ ಜೀವರುಗಳಿಗೆ ಲಿಂಗಭಂಗ ವಾಗೋದಕ್ಕೆ (ಲಿಂಗಭಂಗವಾಗಿ ಮೋಕ್ಷ ವಿರೋದಕ್ಕೆ) ಬ್ಯಾರೆ ಇತರ ವಿಧವಾದ ಉಪಾಯರೂಪವಾದ ಸಾಧನಿ ಮಾರ್ಗಗಳಲ್ಲಿ (ಇತರುಪಾಯಗಳಿಲ್ಲ) ಸಮಸ್ತ ಶಾಸ್ತ್ರಗಳಲ್ಲಿ ಹೇಳಿರುವ ಸಾಧನಿ ವಿಚಾರ ಪರಿಶೀಲನ ಮಾಡಿ ನೋಡಲು (ಸಕಲ ಶಾಸ್ತ್ರದಲಿ ನೋಡಲು) ತದ್ವ್ಯತಿರಿಕ್ತ ಸಾಧನೋಪಾಯುಗ ಳಿಲ್ಲ. ನಿರಂತರದಲ್ಲಿಯೂ (ಸತತ) ಏಕಾದಶೇಂದ್ರಿಯುಗಳಲ್ಲಿ (ಇಂದ್ರಿಯುಗಳಲಿ), ಆಯಾ ಇಂದ್ರಿಯುಗತ ವಿಷಯುಗಳಲ್ಲಿ (ವಿಷಯು), ಛಂದಾಗಿ ವ್ಯಾಪ್ತನಾಗಿ ತನ್ನಾಮವುಳ್ಳವನೆನಿಸಿ (ಪ್ರವಿತತನೆನಿಸಿ), ಆಯಾ ಇಂದ್ರಿಯುಗಳ ವ್ಯಾಪಾರಗಳ ಪ್ರಕಾಶ ಮಾಡುತ ತದಂತರ್ಗತನಾಗಿ ಪ್ರಕಾಶನಾಗಿ ಇರುವ (ರಾಜಿಸುವ) ಲಕ್ಷ್ಮೀಪತಿಯಾದ ಶ್ರೀನಾರಾಯಣದೇವರಿಗೆ(ಲಕುಮೀಪತಿಗೆ), ಸರ್ವೇಂದ್ರಿಯ

ವ್ಯಾಪಾರ ಯಾವತ್ತು ಸಮರ್ಪಣ ಮಾಡೋಣ ದಾವದದೆ ಇದೇವೆ (ಸರ್ವಸಮರ್ಪಣೆಯು), ಸಮೀಚೀನವಾದ, ಪ್ರಯಾಸದಿಂದ ರಹಿತವಾದ ಉಪಾಯರೂಪವಾದ (ಸದುಪಾಯ), ಅತ್ಯಂತ ಶ್ರೇಷ್ಠವಾದ ಪೂಜಾ. ಆದ್ದರಿಂದ ಭಗವದನುಗ್ರಹ ಪಡೆಯಬೇಕಾದರೆ ಇಂಥಾ ಪೂಜಾ ಮಾಡಬೇಕೆಂತ ತಾತ್ಪರ್ಯ (ಮಹಪೂಜೆ) ॥೧೭॥

## (೨) "ಭಾವಪ್ರಕಾಶಿಕೆ" ವ್ಯಾಖ್ಯಾನ :—

ಸಕಲ ಸರ್ಮಪಣೆಯಿಂದ ಪರಮಾತ್ಮನನ್ನು ಧ್ಯಾನಿಸುವುದಕ್ಕಿಂತಲೂ ದೊಡ್ಡ ಸಾಧನವು ಮತ್ತಾವುದೂ ಇಲ್ಲವೆಂದು ಹೇಳುತ್ತಾರೆ.

ಧರ್ಮ, ಅರ್ಥ, ಕಾಮ ಮತ್ತು ಮೋಕ್ಷಗಳೆಂಬ ಚತುರ್ವಿಧ ಪುರುಷಾರ್ಥಗಳನ್ನು ಪಡೆಯಬೇಕಾದರೆ, ಈ ಹದಿನಾಲ್ಕು ಲೋಕಗಳಲ್ಲಿ ಯಾವ ಸಚ್ಛಾಸ್ತ್ರಗಳನ್ನು ಹುಡುಕಿದರೂ, ಜ್ಞಾನೇಂದ್ರಿಯ, ಕರ್ಮೇಂದ್ರಿಯ ಗಳಲ್ಲಿ ತದ್ರೂಪಿಯಾಗಿ, ತನ್ನಾಮಗಳಿಂದ ಕೂಡಿ. ಇಂದ್ರಿಯಾದಿಗಳಲ್ಲಿ ವ್ಯಾಪ್ತನಾದ ಶ್ರೀ ಪರಮಾತ್ಮನಿಗೆ ಆಯಾ ಇಂದ್ರಿಗಳಿಂದ ಮಾಡಿದ ಪುಣ್ಯ ಪಾಪಾದಿಗಳನ್ನೆಲ್ಲಾ ಸಮರ್ಪಣೆಮಾಡುವುದು ಒಂದು ಹೊರತು, ಬೇರೆ ಯಾವ ಉಪಾಯವೂ ದೊರಕಲಾರದು ॥೧೭॥

ಪರಮಾತ್ಮನ ಶೀಘ್ರಕಾಣತಕ್ಕ ಉಪಾಯ ಹೇಳುತ್ತಾರೆ- ಚತು ರ್ವಿಧೇತಿ ||

> "ಸಾಧಾರಣಾ ಸಾಧರಣ ಹರಿಗೆ ಒಪ್ಪಿಸಿಕೊಟ್ಟು ।
> ನೋದದಲಿರು ವಿಜಯವಿಠ್ಠಲನ ನೆರೆನಂಬು ।"

–ಎಂದು ದೊಡ್ಡವರ ಸುಳಾದಿ ಉಕ್ತಿ ಇರೋಣದರಿಂದ ಸರ್ವಸಮರ್ಪಣ ಮಾಡತಕ್ಕವರಿಗೆ ಪುರುಷಾರ್ಥಸಿದ್ಧ–ಎಂದರ್ಥ ॥೧೭॥

## (೪) ಶ್ರೀ ವಾದಿರಾಜಾಚಾರ್ಯರ ವ್ಯಾಖ್ಯಾನ :—

"ಚತುರೇತಿ" ॥ ಪುರುಷಾರ್ಥ ಪ್ರಾಪ್ತ್ಯರ್ಥಮ್ ॥ "ಧರ್ಮಾರ್ಥ ಕಾಮ ಮೋಕ್ಷಾಣಾಮ್ "–ಇತಿ ಕೃಷ್ಣಾಮೃತ ಮಹಾರ್ಣವೇ ॥ ॥೧೭॥

## ಕನ್ನಡಾನುವಾದ :—

ಪುರುಷಾರ್ಥಗಳು ನಾಲ್ಕು ಪ್ರಕಾರ:– ಧರ್ಮ, ಅರ್ಥ, ಕಾಮ ಮತ್ತು ಮೋಕ್ಷಗಳೆಂದು. ಈ ಪುರುಷಾರ್ಥ ಚತುಷ್ಟಯಗಳು ಸಿದ್ಧಿಸಬೇಕಾದರೆ ಶ್ರೀಹರಿಯ ಸರ್ವಸಮರ್ಪಣ ರೂಪವಾದ ಪೂಜಾಕ್ರಮದಿಂದ ಮಾತ್ರವೇ. ಶ್ರೀಗುರುಮಧ್ವರು "ಧರ್ಮ, ಅರ್ಥ, ಕಾಮ ಮತ್ತು ಮೋಕ್ಷಗಳೆಂಬ ಚತುರ್ವಿಧ ಪುರುಷಾರ್ಥಗಳ ಪ್ರಾಪ್ತಿಗೆ ಭಗವಂತನ ಅರ್ಚನೆಯೇ ಮುಖ್ಯವಾದ ಉಪಾಯ" ಎಂಬುದಾಗಿ ಶ್ರೀಕೃಷ್ಣಾಮೃತ ಮಹಾರ್ಣವದಲ್ಲಿ ನಿರೂಪಿಸಿರುತ್ತಾರೆ. ॥೧೭॥

## (೫) "ಗುರುಹೃದಯ ಪ್ರಕಾಶಿಕೆ" ವ್ಯಾಖ್ಯಾನ :—

ಧರ್ಮಾರ್ಥ ಕಾಮ ಮೋಕ್ಷವೆಂಬ ನಾಲ್ಕು ವಿಧ ಫಲಗಳನ್ನೂ ಸಂಪಾದಿಸಬೇಕಾದರೆ, ಪಾತಾಳಾದಿ ಸತ್ಯಾಂತ ಲೋಕಗಳ ಮಧ್ಯದಲ್ಲಿ, ಮನಸ್ಸು ಮೊದಲಾದ ಹನ್ನೊಂದು ಇಂದ್ರಿಯಗಳಲ್ಲಿಯೂ, ಶಬ್ದ, ಸ್ಪರ್ಶ, ರೂಪ, ರಸ, ಗಂಧ ಎಂಬ ಐದು ವಿಷಯಗಳಲ್ಲಿಯೂ, ವ್ಯಾಪ್ತನಾಗಿ, ಮನಸ್ಸು ಮೊದಲಾದ್ದಕ್ಕೆ ವಿಷಯಾನುಭವ ತಂದುಕೊಡುವುದರಿಂದ , ಹೃಷಿಕೇಶನೆಂಬ ಪ್ರಸಿದ್ಧನಾಮದಿಂದ ಪ್ರಕಾಶಿಸುವ ಲಕ್ಷ್ಮೀಪತಿಗೆ ಸರ್ವಸಮರ್ಪಣೆ ಎಂದರೆ, ವೈದಿಕ, ಲೌಕಿಕ, ಸರ್ವಕ್ರಿಯೆಗಳು, ದೇವರಧೀನವೆಂದು ಭಾವಿಸಿ ಅರ್ಪಿಸುವುದೇ, ಮಹಾಪೂಜೆ ಎಂಬ ಒಳ್ಳೆಯ ಸಾಧನ, ಸಕಲಶಾಸ್ತ್ರಗಳಲ್ಲಿ ವಿಚಾರಿಸಿದರೂ, ಇದುಬಿಟ್ಟು ಇನ್ನೊಂದು ಮುಖ್ಯೋಪಾಯವಿಲ್ಲೆಂದು ಅರ್ಥ. ॥೧೭॥

# ಸರ್ವವ್ಯಾಖ್ಯಾನಸಾರಸಂಗ್ರಹ

ಭಗವದನುಗ್ರಹ ಪ್ರಾಪ್ತಿಗಾಗಿ ಸತ್ಸಾಧನಾ ಮಾರ್ಗದಲ್ಲಿರುವ ಸಾಧಕರಿಗೆ ಅಪೇಕ್ಷಿತವಾದ ಫಲಗಳು ನಾಲ್ಕು ಪ್ರಕಾರ. ಇವುಗಳಿಗೆ "ಚತುರ್ವಿಧ ಪುರುಷಾರ್ಥ" ಗಳೆಂದು ಹೆಸರು. ಇಂತಹ ಪುರುಷಾರ್ಥ ಚತುಷ್ಟಯಗಳು ಯಾವುವೆಂದರೆ:— (೧) ಧರ್ಮ, (೨) ಅರ್ಥ, (೩) ಕಾಮ ಮತ್ತು (೪) ಮೋಕ್ಷಗಳೆಂದು ನಾಲ್ಕು ಪ್ರಕಾರ.

(೧) ಇವುಗಳಲ್ಲಿ "ಧರ್ಮ"ವು ಪ್ರಥಮ ಹಂತವು. ನಮ್ಮನ್ನು ವರ್ಣಾಶ್ರಮ ಧರ್ಮಗಳಿನ್ನು ಬಿಡದೇ ವಿದ್ಯುಕ್ತವಾಗಿ ವಿಹಿತ ಕರ್ಮಗಳನ್ನು ಆಚರಿಸುತ್ತಾ, ಅವು ಶ್ರೀ ಪರಮಾತ್ಮನ ಆಜ್ಞೆ ಎಂದು ತಿಳಿದು, ಉತ್ತಮಾನುಸಂಧಾನ ದಿಂದ ಅನುಸರಿಸುವ ಸಾಧನಾಮಾರ್ಗವು "ಧರ್ಮ"ವೆನಿಸುವುದು. **"ಧರ್ಮೋ ರಕ್ಷತಿ ರಕ್ಷಿತಃ"** :– ಎಂಬ ಉಕ್ತಿಯಂತೆ ಧರ್ಮವನ್ನು ನಾವು ರಕ್ಷಿಸಿದರೆ, ಅಂದರೆ, ನಾವು ಧರ್ಮಮಾರ್ಗಾವಲಂಬಿಗಳಾದರೆ, ಆ ಧರ್ಮವು ನಮ್ಮನ್ನು ಸಂರಕ್ಷಿಸುವುದು ಎಂತ ತಾತ್ಪರ್ಯ.

(೨) ಈ ಲೋಕದಲ್ಲಿ ಯಾವ ಸತ್ಸಾಧನೆಯನ್ನು ಮಾಡಬೇಕಾದರೂ, ದ್ರವ್ಯ ಅಥವಾ ಸಂಪತ್ತು ಸಹಾಯಕ ವಸ್ತು. ಅದರ ಸಹಾಯವಿಲ್ಲದೆ ದಾನ, ಧರ್ಮ, ಅತಿಥಿ ಸತ್ಕಾರ ಇತ್ಯಾದಿ ಸತ್ಕರ್ಮಗಳನ್ನು ಆಚರಿಸಲು ಸಾಧ್ಯವಿಲ್ಲ. ಆದರೆ ಇಂತಹ ಸಂಪತ್ತು ಭಗವದ್ವಿಷಯದಲ್ಲಿ ಸದ್ವಿನಿಯೋಗವಾಗಬೇಕು. ನಿಷ್ಠೆಯಿಂದ ಪ್ರಾಮಾಣಿಕ ರೀತಿಯಲ್ಲಿ ಸಂಪಾದಿಸಿದ ಹಣವಾಗಿರಬೇಕು, ಇಲ್ಲದಿದ್ದರೆ ದೋಷಯುಕ್ತವಾಗಿ ಫಲಪ್ರದವಾಗುವುದಿಲ್ಲ. ಆಧ್ಯಾತ್ಮಿಕ ಪ್ರಪಂಚದಲ್ಲಿ ಜ್ಞಾನ, ಭಕ್ತಿ, ವೈರಾಗ್ಯಗಳೇ ದೈವೀ ಸಂಪತ್ತುಗಳು.

(೩) ಇನ್ನು ಮುಂದಿನ ಸಾಧನ ಮಾರ್ಗವೆಂದರೆ, "ಕಾಮ"ವು "ಕಾಮ"–ಎಂದರೆ "ಇಚ್ಛೆ" ಅಥವಾ "ಅಪೇಕ್ಷೆ"–ಎಂದರ್ಥ. ಇಂತಹ ಇಚ್ಛೆ ಸದಿಚ್ಛೆಯಾಗಿರಬೇಕು. ದುಷ್ಟವಾಸನಾದಿಗಳ ಸಂಪರ್ಕದಿಂದ ದೂರವಾಗಿರಬೇಕು. ಜಗತ್ತಿನಲ್ಲಿ ಕೀರ್ತಿಕಾಮನೆಯಿಂದ ಪ್ರಲೋಭನೆ ಹೊಂದಿರಬಾರದು. ಅಂತಹ ಆಸೆ ಭಗವತ್ಪ್ರೀತಿಕರವಲ್ಲ. ಶ್ರೀ ಪರಮಾತ್ಮನ ಅನುಗ್ರಹಪ್ರಾಪ್ತಿ ವಿಷಯದಲ್ಲಿ ನಮ್ಮ ಕಾಮನ ಸ್ವಾಭಾವಿಕವಾಗಿರಬೇಕು. ಇಂತಹ ಸಹಜವಾದ ಕಾಮನೆಯು "ನಿಷ್ಕಾಮ" ವೆನಿಸಿಕೊಳ್ಳುವುದು. ಭಗವದನುಗ್ರಹ ಪ್ರಾಪ್ತಿಗೆ ಇಚ್ಛೆ ಇರಬೇಕೇ ಹೊರತು, ಪ್ರಾಪಂಚಿಕ ವಿಷಯಭೋಗಾದಿಗಳಿಗಲ್ಲ.

(೪) ಕೊನೆಯದಾಗಿ ಅತ್ಯಂತ ಪರಮಪುರುಷಾರ್ಥವಾದ ಫಲ ಪ್ರಾಪ್ತಿಯೇ "ಮೋಕ್ಷ"ವು. "ಮೋಕ್ಷ"–ವೆಂದರೆ "ಬಿಡುಗಡೆ" ಎಂದರ್ಥ. ಜನನ ಮರಣಾಖ್ಯವಾದ ಈ ಸಂಸಾರ ಸಾಗರದ ಸುಳಿಯಿಂದ ಬಿಡುಗಡೆ. ಇಂತಹ ಸಂಸಾರಕ್ಕೆ ಕಾರಣವಾದ ಲಿಂಗದೇಹವು, ಆ ಪ್ರಾಕೃತವಾದ ಚಿದಾನಂದಾತ್ಮಕವಾದ ಸ್ವರೂಪದೇಹದಿಂದ ಪ್ರತ್ಯೇಕವಾಗಬೇಕು, ಇದೇ "ಲಿಂಗಭಂಗ"ವು, ಆಗ ಕರ್ಮಪ್ರವಾಹದಿಂದ ನಿವೃತ್ತಿ. ಸ್ವರೂಪಾನಂದ ಅವಿರ್ಭಾವರೂಪವಾದ ಮುಕ್ತಿ. ಇದು ಭಗವದನುಗ್ರಹದಿಂದಲೇ ಸಾಧ್ಯ. ಈ ಕಾರಣದಿಂದಲೇ ಭಕ್ತ್ಯೈಕಲಭ್ಯವಾದ ಶ್ರೀ ಪರಮಾತ್ಮನನ್ನು ಶುದ್ಧ ಭಕ್ತಿ ಮಾರ್ಗದಿಂದ ಒಲಿಸಿಕೊಳ್ಳಬೇಕು.

ಇಂತು, ಧರ್ಮ, ಅರ್ಥ, ಕಾಮ ಮತ್ತು ಮೋಕ್ಷಗಳೆಂಬ ಚತುರ್ವಿಧ ಪುರುಷಾರ್ಥಗಳು ಸಿದ್ಧಿಸಬೇಕಾದರೆ, ಭಗವಂತನ ಪರಮಾನುಗ್ರಹ ಒಂದಲ್ಲದೇ ಬೇರೆ ಮಾರ್ಗವಿಲ್ಲ. ಪಾತಾಳಲೋಕಪರ್ಯಂತ, ಚತುರ್ದಶ ಭುವನಾತ್ಮಕವಾದ ಈ ಬ್ರಹ್ಮಾಂಡದಲ್ಲಿ ಎಲ್ಲಿ ಅರಸಿ ನೋಡಿದರೂ, ಅನ್ಯ ಉಪಾಯವಿಲ್ಲ. ಅನಂತವಾದ ವೇದಾರ್ಥಗಳನ್ನು ನಿರ್ಣಯಿಸುವ ಸಕಲ ಸಚ್ಛಾಸ್ತ್ರಸಮೂಹಗಳಲ್ಲಿ ತಲಸ್ಪರ್ಶಿಯಾಗಿ ಹುಡುಕಿದರೂ ಅನ್ಯಥಾಮಾರ್ಗವಿಲ್ಲ ಪಂಚಜ್ಞಾನೇಂದ್ರಿಯಗಳು, ಪಂಚಕರ್ಮೇಂದ್ರಿಗಳು, ಮನಸ್ಸು ಈ ಹನ್ನೊಂದು

ಇಂದ್ರಿಯಸಮೂಹಗಳಲ್ಲಿ, ಆಯಾಯಾ ಇಂದ್ರಿಯಗಳಿಗೆ ವಿಷಯಗಳೆನಿಸುವ ಶಬ್ದ, ಸ್ಪರ್ಶ, ರೂಪ, ರಸ, ಗಂಧ ವೆಂಬ ತನ್ಮಾತ್ರಾ ಗುಣ ಗಳಲ್ಲಿಯೂ, ನಿರಂತರವೂ ವ್ಯಾಪಿಸಿಕೊಂಡಿರುವ ರಮಾರಮಣನಾದ ಶ್ರೀಪರಮಾತ್ಮನಿಗೆ ತ್ರಿಕರಣಗಳ ದ್ವಾರಾ, ಇಂದ್ರಿಯಗಳು ತತ್ತದ್ವಿಷಯಗಳ ದ್ವಾರಾ ಸರ್ವಕರ್ಮಸಮರ್ಪಣೆಯೊಂದೇ ಇಂದ್ರಿಯನಿಯಾಮಕವಾದ ಹೃಷೀಕೇಶನಾಮಕ ಬಿಂಬಮೂರ್ತಿ ಶ್ರೀಪರಮಾತ್ಮನಿಗೆ ಮಹಾಪೂಜೆ. ಆದೊಂದೇ ಸದುಪಾಯವು ಎಂದು ತಾತ್ಪರ್ಯ ॥೧೭॥

## ಪದ್ಯ (೧೮)

**ಮೂಲ :—**

**ಗೋಳಕವೆ ಕುಂಡಾಗ್ನಿ ಕರಣವು ।**
**ಮೇಲೊದಗಿ ಬಹು ವಿಷಯ ಸಮಿಧೆಯು ।**
**ಗಾಳಿ ಯತ್ನವು ಕಾಮ ಧೂಮವು ಸನ್ನಿಧಾನಾರ್ಚಿ ॥**
**ಮೇಳನವೆ ಪ್ರಜ್ವಾಲೆ ಕಿಡಿಗಳು ।**
**ತೂಳಿದಾನಂದಗಳೆ ತತ್ತ ।**
**ತ್ಕಾಲ ಮಾತುಗಳೆಲ್ಲ ಮಂತ್ರಾಧ್ಯಾತ್ಮಯಜ್ಞವಿದು ॥೧೮॥**

**ಅವತರಣಿಕೆ :—**

ದೇಹಗತ ಕ್ರಿಯಾರೂಪವಾದ ಸಮಸ್ತ ವ್ಯಾಪಾರವಿಶೇಷಗಳೂ ಅಧ್ಯಾತ್ಮ ಯಜ್ಞಸಾಂಕೇತವೆಂದು ಭಾವಿಸಿ. ಭಗವದರ್ಪಣವಮಾಡುವ ಕ್ರಮವನ್ನು ವಿವರಿಸುತ್ತಾರೆ. ಇಂದ್ರಿಯಗೋಳಕಗಳೇ ಯಜ್ಞಕುಂಡ. ಇಂದ್ರಿಯಗಳೇ ಅಗ್ನಿ. ವಿಷಯಗಳೇ ಸಮಿತ್ತು. ಮಾಡತಕ್ಕ ಪ್ರಯತ್ನವೇ ಗಾಳಿಯು. ಇಚ್ಛೆಯೇ ಧೂಮವು. ಇಂದ್ರಿಯಾಸಕ್ತ ಮನಸ್ಸು ಉರಿಯು ವಿಷಯಗಳ ಸಮ್ಮೇಳನವೇ ದೊಡ್ಡ ಉರಿಯು. ವಿಷಯಜನ್ಯವಾದ ಆನಂದಾನುಭವವೇ ಕಿಡಿಗಳು. ಆಗಿನ ಕಾಲದಲ್ಲಿ ಆಡುವ ಮಾತುಗಳೆಲ್ಲ ಮಂತ್ರಗಳು. ಇಂತು ಅನುಸಂಧಾನ ಪೂರ್ವಕ ಕ್ರಿಯೆಯೇ ಅಧ್ಯಾತ್ಮಯಜ್ಞವೆಂದು ತಿಳಿಸುತ್ತಾರೆ- **"ಗೋಳಕವೆ"**-ಎಂಬ ಪ್ರಸಕ್ತ ಸಂಧಿಗತ ಈ ೧೮ನೆಯ ಪದ್ಯದಿಂದ ॥೧೮॥

**ಪ್ರತಿಪದಾರ್ಥ :—**

**ಗೋಳಕವೆ**=ಇಂದ್ರಿಯ ಸ್ಥಾನವಿಶೇಷಗಳೇ **ಕುಂಡ**=ಅಗ್ನಿಕುಂಡವು. **ಕರಣವು**=ಗೋಳಾಂತರ್ಗತ ಇಂದ್ರಿಯಾಗಳು **ಅಗ್ನಿ**=ಯಜ್ಞಾಗ್ನಿಯು

**ಮೇಲೊದಗಿ ಬಹ**=ತರಂಗ ತರಂಗರೂಪದಲ್ಲಿ ಬರತಕ್ಕ **ವಿಷಯ**= ಇಂದ್ರಿಯಗಳಿಗೆ ಸಂಬಂಧಪಟ್ಟ ವಿಷಯಗಳೇ **ಸಮಿಧೆಯು**=ಕಾಷ್ಠವು. **ಯತ್ನವು**=ಆ ವಿಷಯ ಪ್ರಾಪ್ತಿಗಾಗ ಮಾಡುವ ಪ್ರಯತ್ನವೆಂಬ ಕ್ರಿಯಾ ವಿಶೇಷವೇ **ಗಾಳಿ**=ಅಗ್ನಿ ಪ್ರಜ್ವಲಿಸುವುದಕ್ಕೆ ಸಹಕಾರಿಯಾದ ಗಾಳಿಯು. **ಕಾಮ**= ವಿಷಯೇಚ್ಛೆಯೇ **ಧೂಮವು**=ಹೊಗೆಯು **ಸನ್ನಿಧಾನ**= ಇಂದ್ರಿಯಗಳಿಗೂ ಮತ್ತು ತತ್ತದ್ವಿಷಯಗಳ ಸಾಮೀಪ್ಯವೇ **ಅರ್ಚಿ**=ಅಗ್ನಿ ಜ್ವಾಲೆಯು. **ಮೇಳನವೆ**=ವಿಷಯಗಳ ಸನ್ನಿಕರ್ಷವೇ **ಪ್ರಜ್ವಾಲೆ**= ದೊಡ್ಡ ಉರಿಯು. **ತೂಳಿದ**=ಉಕ್ಕಿ ಬರುವ **ಆನಂದಗಳೆ**=ವಿಷಯ ಭೋಗ ಜನ್ಯವಾದ ಸುಖವೇ **ಕಿಡಿಗಳು**=ಜ್ವಾಲೆಯಿಂದ ಹೊರಡುವ ಕಿಡಿ ಗಳು. **ತತ್ತತ್ಕಾಲ ಮಾತುಗಳೆಲ್ಲ**=ಆಯಾಯಾ ಕಾಲದಲ್ಲಿ ಆಡುವ ಮಾತು ಗಳು. **ಮಂತ್ರ**= ಮಂತ್ರಗಳು. **ಇದು**= ಹೀಗೆ ಅನುಸಂಧಾನಪೂರ್ವಕ ವಾದ ಚಿಂತನೆಯೇ **ಅಧ್ಯಾತ್ಮ ಯಜ್ಞ** = ಅಧ್ಯಾತ್ಮರೂಪವಾದ ಭಗವತ್ಪ್ರೀತಿ ಕರವಾದ ಯಜ್ಞವೆನಿಸುವುದು. ॥೧೮॥

## ವ್ಯಾಖ್ಯಾನಗಳು

### (೧) ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ :—

ಇಂದ್ರಿಯ ಗೋಳಕವೇ ಹೋಮಕ್ಕೆ ಯೋಗ್ಯವಾದ ಅಗ್ನಿ ಇರತಕ್ಕ ಕುಂಡ. ಆ ಕುಂಡಗತ ಅಗ್ನಿ ಎಂಬುದೆ ಗೋಳಕಾಂತರ್ಗತ ಇಂದ್ರಿಯಗಳು (ಈ ಯಜ್ಞಕ್ಕೆ ಇಂದ್ರಿಯಗಳೇ ಅಗ್ನಿ ಸದೃಶ, ತದಂತರ್ಗತ ಇಂದ್ರಿಯ ನಿಯಾಮಕ ಶ್ರೀ ಪರಮಾತ್ಮನ ಪ್ರೀತ್ಯರ್ಥವಾಗಿ ಹೋಮ ಎನತಕ್ಕದ್ದು). ಇಂಥಾ ಅಗ್ನಿಗೆ ಆಯಾ ಇಂದ್ರಿಯಗಳಿಗೆ ತರಂಗ ತರಂಗವಾಗಿ ಮ್ಯಾಲೆ ಮ್ಯಾಲೆ ಒಂದರ ಹಿಂದೆ ಒಂದು ಅನುಸರಿಸಿ ಬರತಕ್ಕ ಆಯಾ ಇಂದ್ರಿಯಗಳಿಗೆ ಯೋಗ್ಯ ವಾದ ವಿಷಯಗಳು ದಾವದದೇ ಇದೇವೇ, ಅಗ್ನಿಯಲ್ಲಿ ಹಾಕತಕ್ಕ ಸಮಿತ್ತು

ಗಳು, ಅಗ್ನಿಪ್ರಜ್ವಲಿಸೋದಕ್ಕೆ ಬೀಸತಕ್ಕ ಗಾಳಿ ಎಂಬುದೇ ಆಯಾ ಇಂದ್ರಿಯಗಳಿಂದ ವ್ಯಾಪಾರ ಮಾಡಬೇಕೆಂದು ಕಾಮನಾ ಮಾಡೋಣ, ಆಯಾ ಇಂದ್ರಿಯವ್ಯಾಪಾರಗಳಲ್ಲಿ ಮನಸ್ಸನ್ನು ಅತ್ಯಂತ ಪ್ರೀತವಾಗಿ ಲಿಪ್ತವಾಗಿ ಮಾಡಿ ಇರೋಣ ಎಂಬುದೇ ಕಾಷ್ಠಸಂಯೋಗದಿಂದ ವ್ಯಕ್ತವಾದ ಉರಿಯು (ಒಂದೊಂದು ಇಂದ್ರಿಯಗಳಿಂದ ಆಗತಕ್ಕ) ಮೇಳನವೇ ಪ್ರಜ್ವಾಲೆ, ಅಂದರೆ, ಅನೇಕ ದೊಡ್ಡವಾದ ಉರಿ. ಆಯಾ ಇಂದ್ರಿಯಗಳಲ್ಲಿ ಮೇಳನ ದಾವದೋ ಅದೇವೇ ದೊಡ್ಡದಾದ ಉರಿ. ಆಯಾ ವಿಷಯಗಳಿಂದ ವ್ಯಕ್ತವಾದ ಸಂತೋಷವೇ ಉರಿಯಿಂದ ಹೊರಡತಕ್ಕ ಕಿಡಿಗಳು. (ತೂಳಿದಾ ಎಂದರೆ ವ್ಯಕ್ತವಾದ). ಆಯಾ ಇಂದ್ರಿಯಗಳ ವಿಷಯಗಳ ಕುರಿತು, ಆಯಾ ಕಾಲಗಳಲ್ಲಿ ಆಡತಕ್ಕ ಮಾತುಗಳೆಲ್ಲ ಈ ಯಜ್ಞಕ್ಕೆ ವೇದ ಮಂತ್ರಗಳು. (ವೇದಗಳು ಯಾವತ್ತು ಅಕಾರಾದಿ ವರ್ಣಾತ್ಮಕವಾದದ್ದು. ತದ್ಗತ ವರ್ಣಗಳೇ ಉಚ್ಚಾರ ಮಾಡತಾನಾದ್ಧಕಡಿಯಿಂದ ವೇದಮಂತ್ರಗಳೇ ಆಗೋದಾಯಿತು) ಈ ಯಜ್ಞಕ್ಕೆ ಇಂಥದ್ದೇ ಮಂತ್ರ. ಸಂಪೂರ್ಣವಾಗಿ ಆಯಾ ವಿಷಯಭೋಗ ಮಾಡೋಣ ಪೂರ್ಣಾಹುತಿ, ಈ ಶ್ಲೋಕದಲ್ಲಿ ಹೇಳಿದ್ದು.ಅಧ್ಯಾತ್ಮನಾದ ಶ್ರೀಪರಮಾತ್ಮನ ಪ್ರೀತಿಗೋಸ್ಕರ ಮಾಡತಕ್ಕ ಹೋಮವೆಂದು ತಾತ್ಪರ್ಯ.

(೧) ಅದಿಭೂತ ಇಂದ್ರಿಯಗೋಳಕಗಳು. (೨) ಅದಿದೈವ ಇಂದ್ರಿಯಗಳು. (೩) ಅಧ್ಯಾತ್ಮ ತದಂತರ್ಗತ ಶ್ರೀಪರಮಾತ್ಮ ಈ ಅನು ಸಂಧಾನದಿಂದ ಸರ್ವ ಇಂದ್ರಿಯ ವ್ಯಾಪಾರಗಳು. ಶ್ರೀ ಪರಮಾತ್ಮನ ಸೇವಾನೇನೇ ಆಗಿ ಸಾರ್ಥಕವಾಯಿತು ಇದರಿಂದ.

"ಶಬ್ದಾದೀನ್ ವಿಷಯಾನನ್ಯೇ ಇಂದ್ರಿಯಾಗ್ನಿಷು ಜುಹ್ವತಿ "॥ ಇತ್ಯಾದಿ ಗೀತಾರ್ಥಗಳನ್ನು ಹೇಳಿದಂತಾಯಿತು. ॥೧೮॥

## (೨) "ಭಾವಪ್ರಕಾಶಿಕೆ" ವ್ಯಾಖ್ಯಾನ :—

ದೇಹೇಂದ್ರಿಯ ವ್ಯಾಪಾರಗಳನ್ನು ಅಧ್ಯಾತ್ಮ ಯಜ್ಞವೆಂದು ಚಿಂತಿಸು ವುದು ಒಂದು ಪರಮಾತ್ಮನ ಪೂಜೆ ಎಂದು ಹೇಳುತ್ತಾರೆ.

ಸ್ಥೂಲ ಶರೀರ ಮತ್ತು ಸೂಕ್ಷ್ಮವಾದ ನಮ್ಮ ಶರೀರಗಳೇ ಅಗ್ನಿ ಕುಂಡವು. ಚಕ್ಷು ಶ್ರೋತ್ರಾದಿ ಇಂದ್ರಿಯಗಳೇ ಅಗ್ನಿ. ಚಕ್ಷುರಾದಿಗಳಿಂದ ಆಗಾಗ್ಯೆ ಪ್ರಾಪ್ತವಾಗುವ ನೋಡುವುದು ಕೇಳುವುದು, ಮೊದಲಾದ ವಿಷಯ ಗಳೇ ಕಾಷ್ಟವು. ನೋಡಲಿಕ್ಕೂ ಕೇಳಲಿಕ್ಕೂ ಪ್ರಯತ್ನಿಸುವುದೇ ಗಾಳಿ, ವಿಷಯ ಭೋಗಗಳ ಇಚ್ಛೆಯೇ ಹೊಗೆ. ಕಣ್ಣು ಕಿವಿ ಮೊದಲಾದ ಇಂದ್ರಿಯ ಗಳಿಗೆ ನೋಡಲಿಕ್ಕೂ ಕೇಳಲಿಕ್ಕೂ ಅರ್ಹವಾದ ಪದಾರ್ಥಗಳು, ಅಂದರೆ. ಸುಂದರ ರೂಪವುಳ್ಳ ವಸ್ತು. ಇಂಪಾದ ಗಾನ ಮೊದಲಾದ ವಸ್ತುಗಳ ಸಾಮಿಪ್ಯವೇ ಜ್ವಾಲೆಯು. ಇಂದ್ರಿಯಗಳಿಗೆ ಭೋಗ ವಸ್ತುಗಳ ಸಮ್ಮೇಳ ನವೇ ವಿಶೇಷ ಜ್ವಾಲೆಯು. ಅದರಿಂದ ಉಕ್ಕಿ ಬರುವ ಆನಂದವೇ ಕಿಡಿಗಳು, ಆಯಾ ಕಾಲಾನುಗುಣವಾಗಿ ಆಡುವ ಮಾತುಗಳೆಲ್ಲವೂ ಮಂತ್ರಗಳು. ಹೀಗೆ ನಾವು ಮಾಡುವ ಒಂದೊಂದು ವಿಷಯವನ್ನೂ ಭಗವದುದ್ದಿಶ್ಯವಾಗಿ ಚಿಂತಿಸು ವುವಕ್ಕೆ- "ಅಧ್ಯಾತ್ಮ ಯಜ್ಞ" -ವೆಂದು ಹೆಸರು. ಪ್ರತ್ಯಕ್ಷ ಯಾಗಗಳನ್ನು ಮಾಡುವುದಕ್ಕಾಗಿ ಅಗ್ನಿಯ ಮುಂದೆ ಕೂತು, ಕಷ್ಟಸಾಧ್ಯವಾದ ಯಾಗ ಗಳನ್ನು ಮಾಡಿದರೂ, ಈ ಅಧ್ಯಾತ್ಮ ಯಾಗಕ್ಕೆ ಸಮವಾದ ಫಲವು ಬಾರದು. ಈ ರೀತಿಯಾದ ಅಧ್ಯಾತ್ಮ ಯಜ್ಞಾಚರಣೆಯು ವಿಶೇಷವಾದ ಪರಮಾತ್ಮನ ಪೂಜೆ ಎಂದು ತಿಳಿಯಬೇಕು. ದ್ರವ್ಯಯಜ್ಞಾದಿಗಳು ಕಷ್ಟ ಸಾಧ್ಯ. ಫಲ ಕಡಿಮೆ. ಈ ಯಜ್ಞವು ಸುಲಭಸಾಧ್ಯ.

**"ಶಬ್ದಾದೀನ್ವಿಷಯಾನನ್ಯೇ ಇಂದ್ರಿಯಾಗ್ನಿಷು ಜುಹ್ವತಿ"**— ಎಂಬಂತೆ ಕೆಲವು ಜ್ಞಾನಿಗಳು ಶಬ್ದಾದಿಗಳಿಂದ ಅನುಭವಿಸುವ ವಿಷಯ ಭೋಗ ಗಳನ್ನು ಇಂದ್ರಿಯಾಗ್ನಿಗಳಲ್ಲಿ ಹೋಮ ಮಾಡುವರು—ಎಂಬ ಗೀತಾವಾಕ್ಯ ಸಂಗ್ರಹವನ್ನೇ ಇಲ್ಲಿ ವಿಸ್ತಾರವಾಗಿ ಹೇಳಿರುವರು, ॥೧೮॥

## (೩) "ಭಾವದರ್ಪಣಟೀಕಾ" ವ್ಯಾಖ್ಯಾನ :—

**ಗೋಳಕೇತಿ ॥** ಇಂದ್ರಿಯಾಧಿಷ್ಠಾನಗಳೇ ಕುಂಡಗಳು. ಕರಣಗಳೇ ಅಗ್ನಿ. ವಿಷಯಸಾಮೀಪ್ಯವೇ ಅರ್ಚಿ. ಜ್ವಾಲೆ ಎಂಬುದರಲ್ಲಿ ಇಂದ್ರಿಯ ಗಳಿಂದಾಗುವ **ವ್ಯಾಪಾರವೇ ಅಧ್ಯಾತ್ಮ ಯಜ್ಞವೆಂತರ್ಥ.**

"ಆತ್ಮಾನಮಧಿಕೃತ್ಯ ಕ್ರಿಯಮಾಣೋಯಜ್ಞಃ ಅಧ್ಯಾತ್ಮ ಯಜ್ಞಃ" || ||೧೮||

## (೪) ವಾದಿರಾಜಾಚಾರ್ಯರ ವ್ಯಾಖ್ಯಾನ (ಸಂಸ್ಕೃತಮೂಲ) :—

ಗೋಳಕೇತಿ || ಇಂದ್ರಿಯಾಣಾಂ ಕರಣಾನಿ ಅಗ್ನಯಃ || ಸನ್ನಿಧಾನಂ ಸನ್ನಿಕರ್ಷಃ || ತೂಳಿದಾ = ತೂರಿದ । ಮಾತು = ಹರಿವಾಚಕಾರ್ಣರೂಪತ್ವಾತ್ ||೧೮||

## ಕನ್ನಡಾನುವಾದ :—

ಕರಣಗಳು ಎಂದರೆ ಇಂದ್ರಿಯಗಳು. ಅವೇ ಅಗ್ನಿ ಕುಂಡವು, ಇಂದ್ರಿಯ ಗೋಲಕಗಳು. ಸನ್ನಿಧಾನ–ಎಂದರೆ, ಸನ್ನಿಕರ್ಷ, ಅತಿಶಯ ನಿಕಟಸಂಬಂಧ. ವಿಷಯಗಳನ್ನು ಭೋಗಿಸುವುದರಿಂದ ಉಂಟಾದ ಸುಖಾನುಭವವೇ ಕಿಡಿಗಳು. ಆ ಸಮಯದಲ್ಲಿ, ಅಲ್ಲಿಯೇ ನಡೆಯುವ ಮಾತುಗಳ ಸಮೂಹವೇ ಮಂತ್ರಗಳು. ಅವು ಸರ್ವಶಬ್ದವರ್ಣ ಸ್ವರವಾಚ್ಯನಾದ ಶ್ರೀಹರಿಯನ್ನೇ ಮುಖ್ಯತಃ ಪ್ರತಿಪಾದಿಸುವುದರಿಂದ ಮಂತ್ರಗಳೆಂದೆನಿಸಿಕೊಳ್ಳುವುವು ||೧೮||

## (೫) "ಗುರುಹೃದಯ ಪ್ರಕಾಶಿಕಾ" ವ್ಯಾಖ್ಯಾನ :—

ಈ ಪೂಜೆಯನ್ನೇ ಅಧ್ಯಾತ್ಮಯಜ್ಞವೆಂದು ವರ್ಣಿಸುತ್ತಾರೆ. "ಗೋಳಕ" ವೆಂದು. ಗೋಳಕವೆಂಬ ಕಣ್ಣು ಗುಡ್ಡು ಮೊದಲಾದವಯವಗಳೇ ಕುಂಡವೆಂಬ ಅನ್ನ ಇರುವ ಪಾತ್ರೆ. ಕರಣವೆಂಬ ಕಣ್ಣು ಮೊದಲಾದ ಇಂದ್ರಿಯಗಳೇ ಅಗ್ನಿ. ಆದಕ್ಕೆ ಮೇಲೊದಗಿ ಬಹ ವಿಷಯ ಸಮಿಧೆ, ಎಂದರೆ ಆ ಕಣ್ಣು ಮೊದಲಾದ್ದಕ್ಕೆ ಕಾಣಿಸುವ ರೂಪ ಮೊದಲಾದ ವಿಷಯವೆಂಬ ಭೋಗ ದ್ರವ್ಯವೇ ಸಮಿತ್ತೆಂಬ ಕಾಷ್ಠ. ಆ ಭೋಗದ್ರವ್ಯಪ್ರಾಪ್ತಿಗೆ ಮಾಡುವ ಯತ್ನವೇ ಗಾಳಿ. ಎಂದರೆ ಅಗ್ನಿ ಪ್ರಜ್ವಲಿಸುವುದಕ್ಕೆ ಊದುವ ಕೊಳವಿಯ ಗಾಳಿ ಎಂದು. ವಿಷಯಾಪೇಕ್ಷೆಯೇ ಹೊಗೆಯು. ಭೋಗದ್ರವ್ಯವಾದ ರೂಪಾದಿ

ವಿಷಯಕ್ಕೂ ಚಕ್ಷುರಿಂದ್ರಿಯಕ್ಕೂ ಸಮೀಪ್ಯ ರೂಪ ಸನ್ನಿಧಿಯೇ ಅರ್ಚಿ ಎಂಬ ಅಗ್ನಿಜ್ವಾಲೆಯು. ಆ ಇಂದ್ರಿಯಗಳಿಗೆ ಆಯಾಯಾ ಭೋಗ ಸಂಬಂಧವೇ ವಿಶೇಷಜ್ವಾಲೆಯು. ಆಯಾಯಾ ವಿಷಯಸಂಬಂಧದಿಂದ ತೂಳುವ ಎಂದರೆ ಉಕ್ಕುವ ಆನಂದವೆಂಬ ಸಂತೋಷವೇ ಕಿಡಿಗಳು. ಆಯಾಯಾ ಕಾಲೋಪಯುಕ್ತ ಮಾತುಗಳೇ ಮಂತ್ರಗಳೆಂದು ಭಾವಿಸಿ, ದೇವರಿಗೆ ಅರ್ಪಿಸುವುದು "ಅಧ್ಯಾತ್ಮ ಯಜ್ಞ"- ವೆಂದರ್ಥ.

"ಶಬ್ದಾದೀನ್ವಿಷಯಾನ್ಯನ್ಯೇ ಇಂದ್ರಿಯಾಗ್ನಿಷು ಜುಹ್ವತಿ ||"
–ಎಂಬ **ಗೀತಾರ್ಥ** ಇದರಿಂದ ವಿವರಿಸಿತು. ||೧೮||

# ಸರ್ವವ್ಯಾಖ್ಯಾನಸಾರಸಂಗ್ರಹ

ನಮ್ಮ ಸ್ಥೂಲದೇಹವು ಸಾಧನಶರೀರವು. ಸತ್ಸಾಧನೆಗೆ ಸಹಕಾರಿಯಾದ ಈ ಶರೀರದಲ್ಲಿ ಇರುವ ಇಂದ್ರಿಯಗಳು, ಅವುಗಳಿಗೆ ಸಂಬಂಧಿಸಿದ ವಿಷಯಗಳು, ಆ ವಿಷಯಗಳಿಂದ ಜನ್ಯವಾದ ಆನಂದಾದಿ ಅನುಭವ ವಿಶೇಷಗಳು ಇತ್ಯಾದಿ ವಿವರಗಳನ್ನು ಅಧ್ಯಾತ್ಮ ಯಜ್ಞರೂಪವಾದ ವ್ಯಾಪಾರ ವಿಶೇಷವೆಂದು ಅನುಸಂಧಾನ ಪೂರ್ವಕ ಚಿಂತಿಸಬೇಕೆಂದು ತಿಳಿಸುತ್ತಾರೆ. "ಗೋಳಕವೆ" ಎಂಬ ಪ್ರಸಕ್ತ ಪದ್ಯದಿಂದ.

(೧) ಕಣ್ಣು, ಕಿವಿ, ಇತ್ಯಾದಿ ಇಂದ್ರಿಯಗಳು ದೇಹದಲ್ಲಿ ತಮ್ಮ ತಮ್ಮ ನಿಯತವಾದ ಸ್ಥಾನಗಳಲ್ಲಿವೆ. ಇಂತಹ ಇಂದ್ರಿಯ ಸ್ಥಾನಗಳಿಗೆ "ಗೋಳಕ" ವೆಂದು ಹೆಸರು. ಯಜ್ಞ ಕ್ರಿಯೆಯಲ್ಲಿ ಅಗ್ನಿಯನ್ನು ಸ್ಥಾಪನ ಮಾಡುವ ಸ್ಥಾನಕ್ಕೆ "ಯಜ್ಞಕುಂಡ"ವೆಂದು ಹೆಸು. ಇಂತು ಇಂದ್ರಿಯ ಸ್ಥಾನಗಳಾದ ಗೋಳಕಗಳೇ ಕುಂಡವೆಂದು ಭಾವಿಸಬೇಕು.

(೨) ದಶೇಂದ್ರಿಯಂಗಳು ಅಗ್ನಿ ಎಂದೆನಿಸುವುವು. ಇಂದ್ರಿಯಗಳ ದ್ವಾರವೇ ವಿಷಯಗಳ ಅನುಭವ ಉಂಟಾಗುವುದು. ಈ ಕಾರಣದಿಂದ ಇಂದ್ರಿಯಗಳು ಅಗ್ನಿ ಎಂದು ಭಾವಿಸಬೇಕು.

(೩) ಮೇಲಿಂದ ಮೇಲೆ ಒದಗಿಬರುತ್ತಿರುವ ನಾನಾಪರಿಯ ವಿಷಯ ಗಳೇ ಕಾಷ್ಠವು. ಶಬ್ದ, ಸ್ಪರ್ಶ, ರೂಪ, ರಸ, ಗಂಧ, ಇತ್ಯಾದಿ ತನ್ಮಾತ್ರಾಗುಣಗಳು ಆಯಾಯಾ ಇಂದ್ರಿಯಗಳಿಗೆ ಸಂಬಂಧಪಟ್ಟ ವಿಷಯ ಸಮೂಹಗಳು. ಅಗ್ನಿಯಲ್ಲಿ ಹಾಕಿದ ಕಾಷ್ಠವನ್ನು ಅಗ್ನಿಯು ಸುಡುವಂತೆ. ವಿಷಯಗಳ ಅನುಭವವೇ ಅಗ್ನಿಗೆ ಹಾರುವ ಸಮಿತ್ತುಗಳು (ಕಾಷ್ಠಗಳು)

(೪) ಅಗ್ನಿಯನ್ನು ಪ್ರಜ್ವಲಿಸಗೊಳಿಸುವುದಕ್ಕೆ ಗಾಳಿಯು ಸಹಕಾರಿ ಯಾಗಿದೆ. ಅಂತೆಯೇ ಆ ವಿಷಯಗಳ ಪ್ರಾಪ್ತಿಗೆ ನಾವು ಮಾಡುವ ಪ್ರಯತ್ನ ಗಳೇ ಗಾಳಿಯೆಂದು ಭಾವಿಸಬೇಕು.

(೫) ಅಗ್ನಿ ಸಂಬಂಧದಿಂದ ಹೊಗೆ ಉಂಟಾಗುವುದು, ಅಂತೆಯೇ. ಭೋಗಗಳನ್ನು ಹೊಂದಬೇಕೆಂಬ ಇಚ್ಛಾ ಉಂಟಾಗುವುದು. ಇಂತಹ ಭೋಗಾಪೇಕ್ಷೆಯೇ ಹೊಗೆ ಎಂದು ಭಾವಿಸಬೇಕು.

(೬) ಇಂದ್ರಿಯಗಳಗೂ ಮತ್ತು ತತ್ತದ್ವಿಷಯಗಳಿಗೂ ಏರ್ಪಡುವ ಸಂಬಂಧಕ್ಕೆ— "ವಿಷಯ ಸನ್ನಿಕರ್ಷ" —ಎಂದು ಹೆಸರು. ಇದನ್ನೇ ದಾಸ ರಾಯರು "ಸನ್ನಿಧಾನ" ಎಂದು ಕರೆದಿದ್ದಾರೆ. ಇಂತಹ ವಿಷಯ ಸನ್ನಿ ಕರ್ಷವೇ ಜ್ವಾಲೆ ಎಂದು ಭಾವಿಸಬೇಕು. ಕಾಷ್ಠವು ಅಗ್ನಿಯ ಸಂಬಂಧದಿಂದ ಉರಿಯುವುದು. ಆಗ ಜ್ವಾಲೆಯ ಉತ್ಪತ್ತಿ. ವಿಷಯ ಕಾಷ್ಠ ಸದೃಶ. ಇಂದ್ರಿಯ ಅಗ್ನಿ ಸದೃಶ.

(೭) ಜ್ವಾಲೆಗಳು ಒಟ್ಟುಗೂಡಿದರೆ ದೊಡ್ಡ ಉರಿ ಏಳುವುದು. ಅಂತೆಯೇ ವಿಷಯಗಳ ಸಮ್ಮೇಳನವೇ ಪ್ರಜ್ವಾಲೆ ಎಂದು ಭಾವಿಸಬೇಕು.

(೮) ಇಂದ್ರಿಯಗಳ ದ್ವಾರಾ ವಿಷಯಗಳನ್ನು ಅನುಭೋಗಿಸುತ್ತಿರು ವಾಗ. ಸಂತೋಷವು ಉಕ್ಕುವುದು. ಇದನ್ನೇ "ತೂಳಿದಾನಂದ" ಎಂದಿ

ದ್ವಾರೆ. ಜ್ವಾಲೆ ಉರಿಯುತ್ತಿರುವಾಗ ಅದರಿಂದ ಕಿಡಿಗಳು ಉತ್ಪತ್ತಿಯಾಗಿ ಹಾರುವುವು. ಅಂತೆಯೇ ತೂಳಿದಾನಂದಗಳೇ ಕಿಡಿಗಳೆಂದು ತಾತ್ಪರ್ಯ.

(೯) ಆಯಾಯಾ ವಿಷಯ ಭೋಗಗಳನ್ನು ಅನುಭವಿಸುತ್ತಿರುವಾಗ ಉಂಟಾದ ಆನಂದದ ಉದ್ರೇಕದಿಂದ ತತ್ಕಾಲದಲ್ಲಿ ಕಾಲೋಚಿತವಾದ ಮಾತುಗಳನ್ನು ಆಡುತ್ತೇವೆ. ಇಂತಹ ಮಾತುಗಳೆಲ್ಲಾ ಯಜ್ಞ ಕಾರ್ಯದಲ್ಲಿ ಉಚ್ಚರಿಸುವ ಋಗ್ರೂಪವಾದ ಮಂತ್ರಗಳೆಂದು ಭಾವಿಸಬೇಕು.

ಇಂತು ಇಂದ್ರಿಯ ಗೋಳಕಗಳು, ಇಂದ್ರಿಯಗಳು. ತತ್ತದ್ವಿಷಯಗಳು. ವಿಷಯ ಸನ್ನಿಕರ್ಷ, ಅದರಿಂದ ಉಂಟಾದ ಭೋಗಾಪೇಕ್ಷೆ, ಸುಖಾನುಭವ ಇತ್ಯಾದಿ ಸಾಧನ ಪರಿಕರಗಳೇ "ಅಧ್ಯಾತ್ಮ ಯಜ್ಞ"ವೆಂದು ತಿಳಿದು. ಶ್ರೀ ಪರಮಾತ್ಮನಿಗೆ ಅರ್ಪಿಸಬೇಕೆಂದು ತಾತ್ಪರ್ಯ ||೧೮||

## ಪದ್ಯ (೧೯)

**ಮೂಲ :—**

ಮಧುವಿರೋಧಿಯ ಪಟ್ಟಣಕೆ ಪೂ ।
ರ್ವದ ಕವಾಟಗಳಕ್ಷಿ ನಾಸಿಕ ।
ವದನ ಶ್ರೋತ್ರಗಳೆರಡು ದಕ್ಷಿಣ ಉತ್ತರೆ ದ್ವಾರ ||
ಗುದ ಉಪಸ್ಥಗಳೆರಡು ಪಶ್ಚಿಮ ।
ಕದಗಳೆನಿಪವು ಷಟ್ ಸರೋಜನೆ ।
ಸದನ ಹೃದಯವೆ ಮಂಟಪಂಗಳು ತ್ರಿಗುಣಗಳೆ ಕಲಶ|| ||೧೯||

**ಅವತರಣಿಕೆ :—**

ಇದುವರೆವಿಗೂ ತ್ರಿಕರಣಗಳು ಈ ಸ್ಥೂಲಶರೀರ, ಶರೀರಗತ ಇಂದ್ರಿಯಗಳು ಇಂದ್ರಿಯಗೋಳಕಗಳು, ತತ್ತದ್ವಿಷಯಗಳು, ಇತ್ಯಾದಿವಿವರಗಳನ್ನು

**ಪ್ರತಿಪದಾರ್ಥ :—**

ತಿಳಿಸಿ, ಆಧ್ಯಾತ್ಮಯಜ್ಞರೂಪವಾದ ಭಗವದರ್ಚನಾಕ್ರಮವನ್ನು ವಿವರಿಸಿದರು. ಪ್ರಸಕ್ತಪದ್ಯದಿಂದ-ದೇವಮಂದಿರವೆಂನಿಸುವ ಈ ಸ್ಥೂಲಶರೀರಕ್ಕೆ ಸಂಬಂಧ ಪಟ್ಟ ನಾಸಿಕ, ಮುಖ, ಎರಡು ಕಣ್ಣುಗಳು, ಎರಡು ಕಿವಿಗಳು, ಗುದ ಮತ್ತು ಉಪಸ್ಥಗಳೆಂಬ ಕರ್ಮೇಂದ್ರಿಯಗಳು, ನಾಭಿಗತ ಕಮಲ, ಹೃದಯ ಸ್ಥಾನ ಇತ್ಯಾದಿ ಅವಯವ ವಿಶೇಷಗಳನ್ನು ದೇವಮಂದಿರಕ್ಕೆ ಯಾವ ರೀತಿ ಯಲ್ಲಿ ಸಂಬಂಧ ಹೊಂದಿವೆ ಎಂಬ ವಿವರಗಳನ್ನು ತಿಳಿಸುತ್ತಾರೆ. **"ಮಧು ವಿರೋಧಿಯ"**—ಎಂಬ ಪ್ರಸಕ್ತ ಸಂಧಿಗತ ೧೯ನೆಯ ಈ ಪದ್ಯದಿಂದ ॥೧೯॥

**ಮಧುವಿರೋಧಿಯ** = ಮಧುನಾಮಕ ದೈತನನ್ನು ಸಂಹರಿಸಿದ ಶ್ರೀಮನ್ನಾರಾಯಣನ **ಪಟ್ಟಣಕೆ** = ಶರೀರವೆಂಬ ಈ ನಗರಿಗೆ **ಅಕ್ಷಿ** = ಎರಡು ಕಣ್ಣುಗಳು **ನಾಸಿಕ** = ಮೂಗಿನ ದ್ವಾರಗಳೆರಡು **ವದನ** = ಬಾಯಿ ಒಂದು. ಅಂತು ಈ ಐದೂ **ಪೂರ್ವಕವಾಟಗಳು** = ಪೂರ್ವ ದಿಕ್ಕಿನಲ್ಲಿರುವ ಬಾಗಿಲುಗಳು (ಮಹಾದ್ವಾರಗಳು) **ಶೋತ್ರಗಳೆರಡು** = ಪಾರ್ಶ್ವದಲ್ಲಿರುವ ಎರಡು ಕಿವಿಗಳೂ **ದಕ್ಷಿಣ ಉತ್ತರ ದ್ವಾರಗಳು** = ಬಲಗಿವಿ ದಕ್ಷಿಣ ಬಾಗಿಲು ಮತ್ತು ಎಡಗಿವಿ ಉತ್ತರಬಾಗಿಲುಗಳೆನಿಸುವುವು. **ಗುದ ಉಪಸ್ಥಗಳೆರಡು** = ಮಲವಿಸರ್ಜನಾಂಗ ಮತ್ತು ಮೂತ್ರವಿಸರ್ಜನಾಂಗ ಎಂಬ ಇವೆರಡು ಕರ್ಮೇಂದ್ರಿಗಳು **ಪಶ್ಚಿಮ ಕದಗಳೆನಿಪವು** = ಪಶ್ಚಿಮ ದಿಕ್ಕಿನ ಬಾಗಿಲುಗಳು ಎಂದೆನಿಸುವುವು, **ಷಟ್ ಸರೋಜವೆ** = ನಾಭೀಗತ ಆರು ದಳಗಳ್ಳ ಕಮಲವೇ **ಸದನ** = ಶ್ರೀಪರಮಾತ್ಮನಿಗೆ ಮನೆಯು. ನಾಭೀಪ್ರದೇ ಶವು ಭೂಪ್ರದೇಶ ಇದರಿಂದ ಮಧ್ಯಗತನಾಭೀ ಪ್ರದೇಶದಲ್ಲಿ ವಿರಾಜಮಾನ ವಾಗಿರುವ ಷಟ್ದಳಾತ್ಮಕವಾದ ಕಮಲವು ಷಡ್ಗುಣೈಶ್ವರ್ಯಸಂಪನ್ನನಾದ ಭಗವಂತನ ನಿವಾಸ ಸ್ಥಾನವು. **ಹೃದಯುವೆ** = ಮೇಲಿರುವ ಹೃದಯಸ್ಥಾನವೇ **ಮಂಟಪಗಳು** = ಬಿಂಬ ಮೂರ್ತಿಯಾದ ಶ್ರೀಪರಮಾತ್ಮನನ್ನು ಪ್ರತಿಷ್ಠಿಸಿ ಆರಾಧಿಸುವ ಮಂಟಪವು ಹೃದಯಸ್ಥಾನಗತ ಅಷ್ಟದಳ ಪದ್ಮವೇ ಈ ಮಂಟಪದ ಅಷ್ಟದಿಕ್ಕುಗಳು, **ತ್ರಿಗುಣಗಳೆ** = ಸತ್ತ್ವರಜಸ್ತಮೋಗುಣತ್ರಯ ಗಳೇ **ಕಲಶ** = ಹೃದಯಾಖ್ಯ ಮಂಟಪಕ್ಕೆ ಕಳಸಗಳೆಂದು ಚಿಂತಿಸಬೇಕು ॥೧೯॥

# ವ್ಯಾಖ್ಯಾನಗಳು

## (೧) ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ:—

ಈ ದೇಹಾಂತರ್ಗತನಾದ ಶ್ರೀ ಬಿಂಬಮೂರ್ತಿಗೆ ಈ ದೇಹವು ಪಟ್ಟಣತ್ವೇನ ಅನುಸಂಧಾನಮಾಡಿ, ಅರ್ಪಿಸೋ ಕ್ರಮುವನ್ನ ಹೇಳತಾರೆ. ಈ ವಿಷಯ ೨೩ನೆಯ ಶ್ಲೋಕದವರೆಗೂ ಐದು ಶ್ಲೋಕಗಳಿಂದ ಅನುಸಂಧಾನ ಕ್ರಮುವನ್ನ ಹೇಳತಾರೆ.

ಮಧುನಾಮಕ ದೈತ್ಯನಿಗೆ ವಿರೋಧಿಯಾದ ದೇಹಾಂತರ್ಗತನಾದ ಶ್ರೀ ಬಿಂಬಮೂರ್ತಿಯಾದ ಶ್ರೀ ಪರಮಾತ್ಮನ (ಮಧುವಿರೋಧಿಯ) ವೈಕುಂಠಪಟ್ಟಣಕ್ಕೆ ಸದೃಶತ್ವೇನ ವರ್ಣನ ಮಾಡತಕ್ಕ ಅಧಿಕಾರಿಗಳ ಸ್ಥೂಲ ದೇಹಾಖ್ಯ ಪಟ್ಟಣಕ್ಕೆ ಪೂರ್ವದಲ್ಲಿ ಇರತಕ್ಕ ಬಾಗಿಲುಗಳು (ಪೂರ್ವ ಕವಾಟಗಳು) ನೇತ್ರದ್ವಯುಗಳು (ಅಕ್ಷಿ), ಮೂಗಿನದ್ವಾರಗಳು ಎರಡು (ನಾಸಿಕ), ಮುಖದ್ವಾರ ಒಂದು (ವದನ), ಅಂತು ಐದು ಬಾಗಿಲುಗಳು. ಕಿವಿಗಳು ಎರಡು (ಶ್ರೋತ್ರಗಳೆರಡು) ದಕ್ಷಿಣ ಬಾಗಿಲು ಒಂದು, ಉತ್ತರ ಬಾಗಿಲು ಒಂದು, ಅಂತು ಎರಡು ಬಾಗಿಲುಗಳು (ದಕ್ಷಿಣ ಉತ್ತರ ದ್ವಾರ) ಮಲವಿಸರ್ಜನ ದ್ವಾರ ಒಂದು, ಮೂತ್ರವಿಸರ್ಜನ ದ್ವಾರ ಒಂದು (ಗುದ ಉಪಸ್ಥಗಳೆರಡು) ಅಂತು ಇವೆರಡು ದ್ವಾರಗಳೂ ಪಶ್ಚಿಮ ದ್ವಾರಗಳು ಎಂತ ಎನಿಸೋದಾಗತವೆ (ಪಶ್ಚಿಮ ಕದಗಳೆನಿಪವು). ಅಂತು, ಚತುರ್ದಿಕ್ಕಿನಲ್ಲಿ ಎಂಟು ಬಾಗಿಲುಗಳು ಆಯಿತು, ಊರ್ಧ್ವದ್ವಾರ ಬ್ರಹ್ಮರಂಧ್ರ ಎಂತ ತಾತ್ಪರ್ಯ. ದೇಹಗತ ಸುಷುಮ್ನಾನಾಡಿ ಅಂತರ್ಗತದಾರಭ್ಯ ಶಿರಾಂತದವರೆಗೂ ಇರತಕ್ಕ ಐದು ಕುಮಲಗಳು, ಅಂತು ೨೦ ಕಮಲಗಳು ಒಂದರಮೇಲೆ ಒಂದು ಆರು ಸ್ಥಾನಗಳು ಇವುಗಳು ಶ್ರೀಪರಮಾತ್ಮನಿಗೆ ಮನೆಗಳು (ಸದನ). ಈ ಮನೆಗಳಲ್ಲಿ ಈ ಮನೆಗಳಲ್ಲಿ ಹೃದಯಗೋಳಕಗತ (೧) ಮನಸ್ಸು (೨) ಬುದ್ಧಿ (೩) ಚಿತ್ತ (೪) ಅಹಂಕಾರ (೫) ಅಂತಃಕರಣ ಇದು ಐದು ಎಂಬುದೇ ಶ್ರೀದೇವರು ಕೊಡತಕ್ಕ ಮಂದಿರಗತ ಮಂಟಪಗಳು.

| ಕ್ರಮ ಸಂಖ್ಯೆ | ಕಮಲಗಳು | ಮನೋವೃತ್ತಿಗಳು | ಸ್ಥಾನ |
|---|---|---|---|
| ೧ | ಚತುರ್ದಳದಲ್ಲಿ | ಅಹಂಕಾರ | ಗುದಸ್ಥಾನ |
| ೨ | ಷಟ್‌ದಳದಲ್ಲಿ | ಚಿತ್ತ | ನಾಭಿ |
| ೩ | ಅಷ್ಟದಳದಲ್ಲಿ | ಬುದ್ಧಿ | ಹೃದಯ |
| ೪ | ದ್ವಿದಳದಲ್ಲಿ | ಮನಸ್ಸು | ಕಂಠ |
| ೫ | ಚತುರ್ದಳದಲ್ಲಿ | ಅಂತಃಕರಣ | ಭ್ರೂಮಧ್ಯ |
| ೬ | ದ್ವಾದಶ ದಳದಲ್ಲಿ | ಸರ್ವವೂ ಮೇಳನ | ಶಿರ |

ಏತಾದೃಶಮಂಟಪಗಳಿಗೆ ಸಾತ್ವಿಕಾದಿ ತ್ರಿಗುಣಗಳೇ ಕಲಶ ತ್ರಯಗಳು ಎಂತ ತಾತ್ಪರ್ಯ ॥೧೬॥

(೨) "ಭಾವಪ್ರಕಾಶಿಕೆ" ವ್ಯಾಖ್ಯಾನ :—

೧೯ನೆಯ ಪದ್ಯ ಮೊದಲು ೨೩ನೆಯ ಪದ್ಯದವರೆವಿಗೂ ಈ ಶರೀರವನ್ನು ಶ್ರೀ ಪರಮಾತ್ಮನ ಪಟ್ಟಣವನ್ನಾಗಿ ತಿಳಿದು ಪೂಜಿಸುವ ಪ್ರಕಾರವನ್ನು ಹೇಳುತ್ತಾರೆ.

ಮಧುಸೂದನನಿಗೆ ನಮ್ಮ ಶರೀರವನ್ನೇ ಒಂದು ಪಟ್ಟಣವೆಂದು ಭಾವಿಸಬೇಕು. ಪಟ್ಟಣವೆಂದಮೇಲೆ, ಅದರ ದ್ವಾರ ಮೊದಲಾದ ಲಕ್ಷಣಗಳು ಬೇಕಾಯಿತು. ಅದಾವುವೆಂದರೆ–

ಎರಡು ಕಣ್ಣುಗಳು, ಮೂಗಿನ ರಂಧ್ರಗಳು, ಬಾಯಿ–ಇವು ಈ ಪಟ್ಟಣದ ಪೂರ್ವದ ಬಾಗಿಲುಗಳು. ಬಲದ ಕಿವಿಯು ದಕ್ಷಿಣದ ಕದ. ಎಡದ ಕಿವಿಯು ಉತ್ತರದ ಕದ. ಗುದ ಶಿಶ್ನಗಳೆರಡೂ ಪಶ್ಚಿಮದ ಬಾಗಿಲು ಈ ವಿಷಯದಲ್ಲಿ ಭಾಗವತ ಚತುರ್ಥಸ್ಕಂಧ ೨೯ನೆಯ ಅಧ್ಯಾಯದಲ್ಲಿನ ಪ್ರಮಾಣ :

"ನವದ್ವಾರಂ ದ್ವಿಹಸ್ತಾಂಘ್ರಿಂ ಪುರಂಮನುತ ಸಾಧ್ವಿತಿ ।
ಅಕ್ಷಿಣೀ ನಾಸಿಕೇ ಆಸ್ಯಮಿತಿ ಪಂಚಪುರಸ್ಕೃತಾಃ ॥
ದಕ್ಷಿಣಾ ದಕ್ಷಿಣಃ ಕರ್ಣಃ ಉತ್ತರಾಜೋತ್ತರಃ ಸ್ಮೃತಃ ।
ಪಶ್ಚಿಮೇ ಇತ್ಯಧೌ ದ್ವಾರೌ ಗುದಶಿಶ್ನಾವಿಹೋದಿತಿ ।."

–ಎಂಬೀ ವಾಕ್ಯವೇ ಆಧಾರವಾಗಿರುವುದು. ತಮ್ಮ ಹೃದಯದೊಳಗಿನ ಷಟ್‌ಕಮಲವೇ ಪರಮಾತ್ಮನ ಮನೆ. ಹೃದಯವೇ ಮಂಟಪ. ಸತ್ತ್ವರಜಸ್ತಮೋಗುಣಗಳೇ ಕಳಸಗಳು. ॥೧೯॥

(೩) "ಭಾವದರ್ಪಣಟೀಕಾ" ವ್ಯಾಖ್ಯಾನ :—

ಶ್ರೀಶನ ಅಧಿಷ್ಠಾನವೆನಿಸಿದ ದೇಹಾಖ್ಯ ಪಟ್ಟಣಕ್ಕೆ ನೇತ್ರ ಘ್ರಾಣ ಮುಖವೇ ದ್ವಾರಗಳೆಂದು ವಿವರ ಮಾಡೋದಲ್ಲದೇ, ಕಮಲ ವಿಚಾರವನ್ನು ಹೇಳುತ್ತಾರೆ– "ಮಧುವಿರೋಧೇತಿ"॥. ಶ್ರೀಕೃಷ್ಣನ ಷಟ್‌ಸರೋಜೇತಿ ॥

"ಮೂಲೇಚ ನಾಭೌ ಹೃದಯೇಂದ್ರಯೋರ್ನಿಭ್ರೂರ್ಮಧ್ಯ
ಮೂರ್ಧ್ನಿ ದ್ವಿಷಡಂತಕೇಷು ।
ಚತುಃ ಷಡಷ್ಟ ದ್ವಿಚತುರ್ದ್ವಿಷಟ್‌ದಲೇಷು ಪದ್ಮೇಷು
ಸಿತಾರುಣೋಷ್ಟಿತಿ ॥"
-ಇತಿ ತಂತ್ರಸಾರೋಕ್ತೇಃ ॥ ॥೧೯॥

## (೪) ಶ್ರೀವಾದಿರಾಜಾಚಾರ್ಯರ ವ್ಯಾಖ್ಯಾನ:— (ಸಂಸ್ಕೃತಮೂಲ)

"ಮಧು" ಇತಿ॥ ಏಕೋನ ತ್ರಿಂಶಾಧ್ಯಾಯ ಪುರಂಜನೋಪಾಖ್ಯಾನೇ। "ಅಕ್ಷಿಣೀ ನಾಸಿಕೇ ಆಸ್ಯಂ ಮುಖಂ ಶಿಶ್ನಗುದೌ" ಇತಿ ॥ ಅಕ್ಷಿಣೀ ನಾಸಿಕೇ ಆಸ್ಯಮ್ -ಇತಿ ಪಂಚ ಪುರಸ್ಕೃತಾಃ ॥ ದಕ್ಷಿಣಾ ದಕ್ಷಿಣಃ ಕರ್ಣಃ ಉತ್ತರಾ ಚೋತ್ತರಃ ಸ್ಮೃತಃ ॥ ಪಶ್ಚಿಮೇ ಇತ್ಯಧೋ ದ್ವಾರೋ ಗುದಶಿಶ್ನಾ ವಿಹೋದಿತೇ ॥ ದದರ್ಶ ನವಭಿಃ ದ್ವಾರೈಃ ಪುರೀಂ ಲಕ್ಷಿತ ಲಕ್ಷಣಾಮ್ ॥ ಪ್ರಾಕಾರೋ ಪವನಾಟ್ಟಾಲ ಪಲಿಚೈರಚ್ಚ ತೋರಣ್ಯೈಃ ॥ ತಾತ್ಪರ್ಯೇ- "ಪ್ರತ್ಯೇಕಂ ಏತತ್ತು ಯುಜ್ಯೇತ ತದುನ್ನೇಯಮ್ ॥ ಇತಿ ಚೋಕ್ತಮ್ ॥೧೯॥

**ಕನ್ನಡಾನುವಾದ :—**

ಪ್ರಸಕ್ತ ಪದ್ಯಕ್ಕೆ ಶ್ರೀ ಮದ್ಭಾಗವತದ ಪ್ರಮಾಣವೇ ಆಧಾರವು. ಶ್ರೀ ಭಾಗವತದ ಚತುರ್ಥಸ್ಕಂಧದ ೨೯ನೆಯ ಅಧ್ಯಾಯದಲ್ಲಿ ಪ್ರಾಚೀನ ಬರ್ಹಿಎಂದು ಖ್ಯಾತನಾಮನಾದ "ಬರ್ಹಿಷ್ಮಾನ್" ಎಂಬ ರಾಜನ ಉಪಾಖ್ಯಾನವು ಉಕ್ತವಾಗಿದೆ. ಆ ರಾಜನಿಗೆ ನಾರದರು ಪುರಂಜನನ ಉಪಾಖ್ಯಾನವನ್ನು ತಿಳಿಸುತ್ತಾರೆ, ಪುರಂಜನನು ಮನುಷ್ಯ ಜೀವಾಭಿಮಾನಿ. ಕ್ಷತ್ರಿಯಜಾತಿಗೆ ಸೇರಿದವನು. ಹಾಗೆ ನೋಡಿದರೆ ಜೀವನೇ ಪುರಂಜನನು. ಪುರಂಜನನು ಪರಿಮಳ ಗಂಧ, ಸ್ತ್ರೀಭೋಗಾದಿ ವಿಷಯಗಳನ್ನು ಉಪಭೋಗಿಸಲು ಮಾನವ ಶರೀರವೆಂಬ ಪಟ್ಟಣಕ್ಕೆ ಬರುತ್ತಾನೆ. ಈ ದೇಹಾಖ್ಯ ಪಟ್ಟಣಕ್ಕೆ ನವದ್ವಾರಗಳು. ಕಣ್ಣುಗಳು=೨, ಮೂಗಿನ ರಂಧ್ರಗಳು=೨, ಬಾಯಿ=೧-ಹೀಗೆ ೫ ಪೂರ್ವದ ಕವಾಟಗಳು. ಬಲಗಿವಿಯು ಬಲಬಾಗಿಲು. ಎಡಗಿವಿಯು ಎಡ ಬಾಗಿಲು, ಉಪಸ್ಥ ಮತ್ತು ಗುದಗಳು ಹಿಂದಿನ(ಪಶ್ಚಿಮ)ಬಾಗಿಲುಗಳು. ಇಂತಹ ಲಕ್ಷಣೋಪೇತವಾದ ಪುರವನ್ನು ನೋಡಿದನು. ಅಂತೆಯೇ ಪ್ರಾಕಾರಗಳು, ಉಪವನಗಳು, ಅಟ್ಟಾಲಕಾ, ಪಂಚ, ಉಚ್ಚತೋರಣಗಳಿಂದ ಪರಿಶೋಭಿತವಾದುದು, ಈ ಶರೀರವೆಂಬ ಪುರವು-ಎಂದು ಮೂಲಭಾಗವತದಲ್ಲಿ ಉಲ್ಲೇಖ

ಗಿದೆ. ತಾತ್ಪರ್ಯದಲ್ಲಿಯೂ ಸಹ ಶ್ರೀಮದಾಚಾರ್ಯರು ಈ ಅನ್ವಯ ಕ್ರಮವನ್ನು ಹೇಳಿರುತ್ತಾರೆ ॥೧೯॥

## (೫) "ಗುರುಹೃದಯ ಪ್ರಕಾಶಿಕೆ" ವ್ಯಾಖ್ಯಾನ :—

ಈ ದೇಹವನ್ನು ದೇವರ ಪಟ್ಟಣವನ್ನಾಗಿ ಭಾವಿಸಿ, ದೇವರನ್ನು ಕೆಲವರು ಪೂಜಿಸುತ್ತಾರೆಂದು ನಿರೂಪಿಸುತ್ತಾರೆ- "ಮಧುವಿರೋಧಿ"ಎಂದು ಮೊದಲು ಇಪ್ಪತ್ತುಮೂರನೆಯ ಪದ್ಯದ ತನಕ. ಮಧುವೆಂಬ ಅಸುರನನ್ನು ಕೊಂದ ಮಧುಸೂದನನ ಪಟ್ಟಣವೆಂಬ ಈ ದೇಹಕ್ಕೆ ಪೂರ್ವದ ಬಾಗಿಲುಗಳು, ಕಣ್ಣು ಮೂಗು ಸಹ ಎರಡು. ಎರಡು ಕಿವಿಗಳು ಉತ್ತರ ಮತ್ತು ದಕ್ಷಿಣದ ಬಾಗಿಲುಗಳು. ಜಲ ಮತ್ತು ಮಲವಿಸರ್ಜನೆ ಮಾಡುವ ಅಪಾನ ದ್ವಾರಗಳೆರಡು ಪಶ್ಚಿಮ ದಿಕ್ಕಿನ ಕವಾಟಗಳು. ಷಟ್ ಸರೋಜವೆ ಸದನ ಎಂದರೆ ನಾಭಿ ಕೆಳಗೆ ಇರುವ ಚತುರ್ದಗಳ ಕಮಲ ೧ ಷಟ್ಕೋಣ ನಾಭೀಕಮಲ ೧, ಹೃದಯಗತ ಅಷ್ಟಕಮಲ ೧, ಉರಸ್ಥಿತ ದ್ವಾದಶ ಕಮಲ ೧, ಕಂಠಗತ ದ್ವಿದಳಕಮಲ ೧, ಶಿರಸ್ಸಿನಲ್ಲಿರುವ ಸಹಸ್ರದಳ ಕಮಲ ೧, ಈ ಆರು ಕಮಲಗಳಿರುವ ಶರೀರ ದೇವರ ಸದನವು. ಮನಸ್ಸೇ ಮಂಟಪ. ಸತ್ವರಜಸ್ತಮೋಗುಣಗಳೇ ಮೂರು ಕಮಲಗಳು. ॥೧೯॥

# ಸರ್ವವ್ಯಾಖ್ಯಾನಸಾರಸಂಗ್ರಹ

ಬಿಂಬರೂಪೀ ಶ್ರೀ ಪರಮಾತ್ಮನ ನಿವಾಸಸ್ಥಾನವು ಈ ಶರೀರವು. ಹರಿಮಂದಿರವೆನಿಸಿದ ಈ ಸ್ಥೂಲದೇಹವನ್ನು ಒಂದು ಪಟ್ಟಣಕ್ಕೆ ಹೋಲಿಸಿದ್ದಾರೆ. ದೇಹಾಖ್ಯವಾದ ಈ ಪಟ್ಟಣದ ವಿವರಗಳು ಶ್ರೀಮದ್ಭಾಗವತದಲ್ಲಿ **ಪುರಂಜನೋಪಾಖ್ಯಾನದಲ್ಲಿ ಉಕ್ತವಾಗಿವೆ.**

ಪಟ್ಟಣವೆಂದಮೇಲೆ, ಅದಕ್ಕೆ ನಾಲ್ಕುದಿಕ್ಕುಗಳಲ್ಲಿಯೂ ಮಹಾದ್ವಾರ (ಕವಾಟ) ಗಳಿರಬೇಕು. ಈ ಶರೀರವನ್ನು "ಮಧುವಿರೋಧಿಯು ಪಟ್ಟಣ" –ವೆಂದಿದ್ದಾರೆ ದಾಸರಾಯರು. ಮಧು ಎಂಬುವನು ಪರಾಕ್ರಮಶಾಲಿಯಾದ ದೈತ್ಯ. ಇವನ ತಮ್ಮನೇ ಕೈಟಭನೆಂಬ ಅಸುರನು. ಈ ಮಧುಕೈಟಭರಿಬ್ಬರೂ ವಿಷ್ಣುವಿನ ಕರ್ಣಮಲ (ಕಿವಿಯ ಗುಗ್ಗೆ ಎಂಬುದರಿಂದ) ಸಂಭೂತರು, ಕಲ್ಪಾದಿಯಲ್ಲಿ ಶ್ರೀಮನ್ನಾರಾಯಣನು ವಟಪತ್ರಶಾಯಿಯಾಗಿ ಕ್ಷೀರಸಾಗರದಲ್ಲಿ ಪವಡಿಸಿದ್ದಾಗ, ಆತನ ಕಿವಿಯ ಮಲದಿಂದ ಸಂಭೂತರಾದ ಮಧುಕೈಟಭರಿಬ್ಬರೂ, ನಾಭಿ ಕಮಲದಲ್ಲಿದ್ದ ಚತುರ್ಮುಖ ಬ್ರಹ್ಮದೇವರನ್ನು ಪೀಡಿಸತೊಡಗಿದರು. ಆಗ ಬ್ರಹ್ಮದೇವರ ಪ್ರಾರ್ಥನೆಯಂತೆ, ಶ್ರೀಹರಿಯು ಅವರೊಡನೆ ಕಾಳಗಕ್ಕೆ ನಿಂತನು. "ನಿಮ್ಮಲ್ಲಿ ಯಾರು ಸಮರ್ಥರೋ, ಅವರು ನನ್ನೊಡನೆ ಯುದ್ಧಕ್ಕೆ ಬನ್ನಿ" —ಎಂದು ಅಣ್ಣ-ತಮ್ಮಂದಿರನ್ನು ಸಮರಕ್ಕೆ ಆಹ್ವಾನಿಸಿದನು. ಆಗ ಅವರಿಬ್ಬರೂ ಪರಾಕ್ರಮ ಪರೀಕ್ಷೆಗಾಗಿ ತಮ್ಮಲ್ಲಿಯೇ ದ್ವಂದ್ವಯುದ್ಧ ಆರಂಭಿಸಿದರು, ಆಗ ಅವರಿಗೆ ತಮ್ಮ ತಪ್ಪಿನ ಅರಿವುಂಟಾಗಿ, ವಂಚಕನೆಂದು ವಿಷ್ಣುವಿನ ಮೇಲೆಯೇ ಎರಗಿದರು, ಆಗ ಅವರಿಬ್ಬರನ್ನೂ ತನ್ನ ತೊಡೆಯಮೇಲೆ ಹಾಕಿಕೊಂಡು ಶ್ರೀಹರಿಯು ಸಂಹರಿಸಿದನು. ದೇವಮಂದಿರದಂತೆ, ಅಸುರರ ಆವಾಸಸ್ಥಾನವೂ ಹೌದು ಈ ಶರೀರ, ಆ ದೈತ್ಯರ ಉಪಟಳದಿಂದ ಪಾರಾಗಬೇಕಾದರೆ ಮಧುವಿರೋಧಿಯ ಅನುಗ್ರಹ ಅತ್ಯವಶ್ಯ. ಇದರಿಂದಲೇ "ಮಧುವಿರೋಧಿ" —ಎಂಬ ಶಬ್ದ ಪ್ರಯೋಗದ ಔಚಿತ್ಯ.

(೧) ಅಂತಹ ಮಧುವಿರೋಧಿಯಾದ ಶ್ರೀಹರಿಯ ಮಂದಿರವೆನಿಸಿದ ಈ ಶರೀರವೆಂಬ ಪಟ್ಟಣಕ್ಕೆ ಕಣ್ಣುಗಳು ಎರಡು, ಮೂಗಿನ ಹೊಳ್ಳೆಗಳು ಎರಡು, ಬಾಯಿ ಒಂದು, ಹೀಗೆ ಈ ಐದು ಇಂದ್ರಿಯ ಗೋಳಕಗಳೂ ಪೂರ್ವದಿಕ್ಕಿನ ಬಾಗಿಲುಗಳು.

(೨) ಬಲಗಡೆಯ ಕಿವಿಯು ದಕ್ಷಿಣ ದಿಕ್ಕಿನ ಕವಾಟವೆನಿಸುವುದು.

(೩) ಉತ್ತರ ದಿಕ್ಕಿನ ಬಾಗಿಲು ಎಡಗಿವಿಯು.

(೪) ಮೂತ್ರವಿಸರ್ಜನಾಂಗವಾದ ಉಪಸ್ಥೇಂದ್ರಿಯ ಮತ್ತು ಮ
ಸರ್ಜನಾಂಗವಾದ ಗುದೇಂದ್ರಿಯ ಇವೆರಡೂ ಪಶ್ಚಿಮ ಕವಾಟಗಳು.

(೫) ನಾಭಿಯ ಕೆಳಗೆ ವೃಷಣಗಳ ಮಧ್ಯೆ "ತುಂದಿ" ಎಂಬ ಗೆಡ್ಡೆ
ಇದೆ. ಇದೇ ನಾಡೀ ವ್ಯೂಹಗಳಿಗೆ ಮೂಲಾಧಾರವು. ಇದರಿಂದ ನೇರವಾ
ಬ್ರಹ್ಮರಂದ್ರ ಪರ್ಯಂತ ವ್ಯಾಪಿಸಿರುವುದೇ "ಸುಷುಮ್ನಾ" ಎಂಬ ಬ್ರಹ
ನಾಡಿಯು. ಈ ನಾಡಿಯ ಮೂಲದಿಂದ ತುದಿಯವರೆಗೆ ಆರು ಕಮಲಗಳಿವೆ

ಇವುಗಳ ವಿವರ ಇಂತಿದೆ :—

| ಕ್ರಮ ಸಂಖ್ಯೆ | ಸ್ಥಾನ | ಕಮಲ | ದಳಸಂಖ್ಯೆ | ವ್ಯಾಪಾರ ವಿಶೇಷ |
|---|---|---|---|---|
| ೧ | ತುಂದಿ | ಚತುರ್ದಳ ಕಮಲ | ೪ | ಅಹಂಕಾರ ಮನೋವೃತ್ತಿ |
| ೨ | ನಾಭಿ | ಷಟ್ದಳ ಕಮಲ | ೬ | ಚಿತ್ತವೃತ್ತಿ |
| ೩ | ಹೃದಯ | ಅಷ್ಟದಳ ಕಮಲ | ೮ | ಬುದ್ಧಿ ವ್ಯಾಪಾರ |
| ೪ | ಉರಪ್ರದೇಶ | ದ್ವಾದಶ ದಳ ಕಮಲ | ೧೨ | ಮನಸ್ಸು |
| ೫ | ಭ್ರೂಮಧ್ಯ (ಹುಬ್ಬುಗಳ ನಡುವೆ) | ದ್ವಿದಳ ಕಮಲ | ೨ | ಅಂತಃಕರಣ |
| ೬ | ಶಿರಸ್ಸು | ಸಹಸ್ರದಳ ಕಮಲ | ೧೦೦೦ | ಎಲ್ಲವೂ ಮಿಳನ |

ಮೇಲ್ಕಂಡ ಆರು ಕಮಲ ಸ್ಥಾನಗಳೇ (ಷಟ್ ಸರೋಜವೇ) ಬಿಂಬ ರೂಪೀ ಶ್ರೀ ಪರಮಾತ್ಮನಿಗೆ ಆವಾಸಸ್ಥಾನವಾದ ಮಂದಿರವು (ಸದನ)

(೬) ಅಷ್ಟದಳಾತ್ಮಕ ಪದ್ಮದಿಂದ ವಿರಾಜಮಾನವಾದ ಹೃದಯ ಸ್ಥಾನವೇ ಬಿಂಬನಿಗೆ ಮಂಟಪವು. ಅಷ್ಟದಳಗಳೇ ಈ ಮಂಟಪಕ್ಕೆ (ಸಿಂಹಾಸನ) ಅಷ್ಟದ್ವಾರಗಳು ಈ ಅಷ್ಟದಿಕ್ಕುಗಳಲ್ಲಿ ದಿಕ್ಪಾಲಕರಾದ ಇಂದ್ರ, ಅಗ್ನಿ, ಯಮ. ನಿಋರುತಿ, ವರುಣ, ವಾಯು, ಕುಬೇರ ಮತ್ತು ರುದ್ರದೇವರು ಕ್ರಮವಾಗಿ ಪೂರ್ವ. ಆಗ್ನೇಯ, ದಕ್ಷಿಣ, ನೈರುತ್ಯ, ಪಶ್ಚಿಮ, ವಾಯುವ್ಯ, ಉತ್ತರ ಮತ್ತು ಈಶಾನ್ಯ ದಿಕ್ಪತಿಗಳಾಗಿದ್ದಾರೆ. ಅಷ್ಟಾಕ್ಷರ ಮಂತ್ರ ಪ್ರತಿಪಾದ್ಯನಾದ ಶ್ರೀಮನ್ನಾರಾಯಣನು ಮೂಲೇಶನೆಂದೆನಿಸಿ, ಈ ಅಷ್ಟದಳಗಳಲ್ಲಿ ವಿಶ್ವಾದಿನಾಮಗಳಿಂದ ಸಂಚರಿಸುತ್ತಿರವನು.

(೭) ಸತ್ತ್ವ, ರಜ ಮತ್ತು ತಮ-ಎಂಬ ಈ ಗುಣತ್ರಯಗಳೇ ಈ ಮಂಟಪಕ್ಕೆ ಅಲಂಕಾರಪ್ರಾಯವಾದ ಕಲಶಗಳು. ತ್ರಿಗುಣಗಳು ಮೂಲ ಪ್ರಕೃತಿಯ ಪ್ರಮುಖಾಂಶಗಳು. ಇವುಗಳ ವೈಷಮ್ಯದಿಂಲೇ ಜಗತ್ಸೃಷ್ಟಿಯ ವ್ಯಾಪಾರವು.

ಇಂತು ದೇವಮಂದಿರವೆನಿಸಿದ ಈ ಶರೀರವನ್ನು ಮಧುವಿರೋಧಿಯ ಪಟ್ಟಣವೆಂದು ಭಾವಿಸಿ, ಉತ್ತಮಾನುಸಂಧಾನದಿಂದ ಭಗವದುಪಾಸನೆ ಮಾಡುತ್ತಿದ್ದರೆ, ದೈವದತ್ತವಾದ ಈ ಶರೀರವು ನಿಜವಾಗಿ "ಸಾಧನ ದೇಹ" ವೆಂದೆನಿಸಿ, ಸಾರ್ಥಕ್ಯ ಹೊಂದುವುದು ಎಂದು ತಾತ್ಪರ್ಯ ॥೧೯॥

# ಪದ್ಯ (೨೦)

**ಮೂಲ :—**

**ಧಾತುಗಳು ಸಪ್ತಾವರಣ ಉಪ ।**
**ವೀಥಿಗಳೆ ನಾಡಿಗಳು ಮದಗಳು ।**
**ಯೂಥಪಗಳು ಸುಷುಮ್ನಾನಾಡಿಯೆ ರಾಜಪಂಥಾನ ॥**
**ಈ ತನೂರುಹಗಳೆ ವನಂಗಳು ।**
**ಮಾತರಿಶ್ವನು ಪಂಚರೂಪದಿ ।**
**ಪಾತಕಗಳೆಂಬರಿಗಳನು ಸಂಹರಿಪ ತಳವಾರೆ ॥೨೦॥**

**ಅವತರಣಿಕೆ :—**

ದೇಹಾಖ್ಯವೆಂಬ ಈ ಪಟ್ಟಣದ ವಿವರಗಳನ್ನು ಇನ್ನೂ ತಿಳಿಸುತ್ತಾರೆ. ಧಾತುಗಳೇ ಸಪ್ತಕೋಟೆಗಳು. ನಾಡಿವ್ಯೂಹವೇ ಉಪಮಾರ್ಗಗಳು. ಅಷ್ಟಮದಗಳೇ ದಿಗ್ಗಜಗಳು. ಸುಷುಮ್ನಾನಾಡಿಯೇ ರಾಜಮಾರ್ಗವು. ರೋಮಕೋಟಿಗಳು, ಉಪವನಗಳು. ಪ್ರಾಣಾದಿ ಪಂಚರೂಪಗಳಿಂದ ಈ ದೇಹದಲ್ಲಿ ವಿರಾಜಮಾನನಾಗಿರುವ ಶ್ರೀ ವಾಯುದೇವರೇ ಪಾಪಗಳೆಂಬ ಶತೃಗಳನು ನಾಶಮಾಡುವ ತಳವಾರರು-ಎಂದು ವಿವರಿಸುತ್ತಾರೆ- **"ಧಾತುಗಳು"** –ಎಂಬ ಪ್ರಸಕ್ತ ಸಂಧಿಗತ ೨೦ನೆಯ ಈ ಪದ್ಯದಿಂದ ॥೨೦॥

**ಪ್ರತಿಪದಾರ್ಥ :—**

**ಧಾತುಗಳು**=ದೇಹಕ್ಕೆ ಆವರಣರೂಪದಿಂದ ಇರುವ ತ್ವಗಾದಿ ಸಪ್ತಧಾತುಗಳೇ **ಸಪ್ತಾವರಣ**=ಈ ದೇಹಾಖ್ಯವೆಂಬ ಪಟ್ಟಣಕ್ಕೆ ಏಳು ಪ್ರಾಕಾರಗಳು (ಕೋಟೆಗಳು) **ನಾಡಿಗಳು**=ದೇಹಾದ್ಯಂತ ವ್ಯಾಪಿಸಿರುವ

೭೨,೦೦೦ ನಾಡಿಗಳೇ **ಉಪವೀಥಿಗಳು**=ಉಪಮಾರ್ಗಗಳು (ಅಡ್ಡ ಬೀದಿಗಳು) **ಮದಗಳು**=ಅನ್ನಮದಾದಿ ಅಷ್ಟಮದ ಸಮೂಹಗಳೇ **ಯೂಥಪಗಳು**=ಅಷ್ಟ ಮದಗಜಗಳು. **ಸುಷುಮ್ನಾನಾಡಿಯೇ**=ದೇಹ ಮಧ್ಯಗತ ಸುಷುಮ್ನಾ ಎಂಬ ಬ್ರಹ್ಮನಾಡಿಯು **ರಾಜಪಂಥಾನ**=ರಾಜ ಬೀದಿಯು. **ಈ ತನೂರುಹಗಳೆ**=ದೇಹಗತ ರೋಮಗಳೇ (ತನು=ದೇಹ, ಉರುಹ=ಭೇಧಿಸಿಕೊಂಡು ಬರುವ, ಅಂದರೆ ರೋಮಗಳು ಎಂದರ್ಥ) **ವನಂಗಳು**=ಉಪವನಗಳು. **ಮಾತರಿಶ್ವನು**=ಜೀವೋತ್ತಮರಾದ ಶ್ರೀ ಮುಖ್ಯ ಪ್ರಾಣದೇವರು **ಪಂಚರೂಪದಿ**=ಪ್ರಾಣಾದಿ ಪಂಚರೂಪಗಳಿಂದ **ಪಾತಕಗಳೆಂಬ**=ಪಾಪಗಳೆಂಬ **ಅರಿಗಳನು**=ಶತ್ರುಗಳನ್ನು **ಸಂಹರಿಪ**= ನಾಶಗೊಳಿಸುವ **ತಳವಾರ**=ಪಟ್ಟಣದ ಕಾವಲುಗಾರನಾದ ತಳವಾರ ನೆಂಬುವನು ॥೨೦॥

# ವ್ಯಾಖ್ಯಾನಗಳು

## (೧) ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ :—

ಪೂರ್ವೋಕ್ತ ಸಂಗತಿಯೇ ಹೇಳುತ್ತಾರೆ. ದೇಹಕ್ಕೆ ಆವರಣರೂಪದಿಂದ ಇರತಕ್ಕ ತ್ವಗಾದಿ ಸಪ್ತಧಾತುಗಳೇ ದೇಹಾಖ್ಯಪಟ್ಟಕ್ಕೆ (ಧಾತುಗಳು) ಸಪ್ತಪ್ರಾಕಾರಗಳು (ಸಪ್ತಾವರಣ), ಸುಷುಮ್ನಾನಾಡಿಯೇ ದೇಹದ ಮಧ್ಯಗತ ನಾಡಿಯು. ಇದೇ ದೊಡ್ಡದಾದ, ಶ್ರೇಷ್ಠವಾದ, ಪ್ರಭುವಾದ ಪರಮಾತ್ಮ ಸಂಚಾರಮಾಡತಕ್ಕ ಮಾರ್ಗವು (ರಾಜಪಂಥಾನ) ಈ ಮಾರ್ಗಕ್ಕೆ ಅನುಸರಿಸಿದ ಚಿಲ್ಲರೆ ಮಾರ್ಗಗಳು ಎಂಬುದೇ (ಉಪವೀಥಗಳು) ಎಪ್ಪತ್ತೆರಡು ಸಾವಿರ ನಾಡಿಗಳು. (೧) ಅನ್ನಮದ, (೨) ಅರ್ಥಮದ, (೩) ಪ್ರಾಯಮದ, (೪) ವಿದ್ಯಾಮದ (೫) ರಾಜ್ಯಮದ (೬) ಕುಲಮದ (೭) ಸತ್ಕರ್ಮಮದ ಮತ್ತು (೮) ಶೀಲಮದ-ಎಂಬ ಈ ಎಂಟು ವಿಧವಾದ ಮದಗಳೇ ಸೇನಾ ನಾಯಕರು. (ಯೂಥಪಗಳು) ಈ ದೇಹದಲ್ಲಿ ವಿದ್ಯಮಾನವಾದ ಸ್ಥೂಲ,

ಸೂಕ್ಷ್ಮಾದಿ ರೋಮಗಳೇ (ಈ ತನೂರುಹಗಳೇ) ದೇಹಾಖ್ಯ ಪಟ್ಟಣದ ಸುತ್ತ ಇರತಕ್ಕ ವನಗಳು. ಈ ದೇಹಾಂತರ್ಗತ ಜೀವೋತ್ತಮ ವಾಯುದೇವರು, (ಮಾತರಿಶ್ವನು) ಪ್ರಾಣಾದಿ ಪಂಚರೂಪದಿಂದ ಆವಾಸನಾಗಿ (ಪಂಚರೂಪದಿ) ಈ ಪಟ್ಟಣಕ್ಕೆ ಕಾವಲು ಇರತಕ್ಕವರು. (ತಳವಾರ) ಪಾಪಾಭಿಮಾನಿಯಾದ ಅಸುರರ ಪಾಪಗಳು ಎಂಬ (ಪಾತಕಗಳೆಂಬ), ಪರಲೋಕ ಸಾಧನಿಗೆ ಬಾಧಕ ಮಾಡತಕ್ಕ ಶತ್ರುಗಳೆನ್ನು (ಅರಿಗಳ) ಪ್ರಭುವಾದಪರಮಾತ್ಮನ ಆಜ್ಞಾದಿಂದ ಸಂಹಾರ ಮಾಡುತಾನೆ, ಎಂತ•ತಾತ್ಪರ್ಯ (ಸಂಹರಿಪ) ॥೨೦॥

## (೨) "ಭಾವಪ್ರಕಾಶಿಕೆ" ವ್ಯಾಖ್ಯಾನ :—

ತ್ವಕ್, ಚರ್ಮ, ಮಾಂಸ, ರಕ್ತ, ಮೇದಸ್ಸು, ಮಜ್ಜಾ ಮತ್ತು ಅಸ್ಥಿಗಳೆಂಬ ಸಪ್ತ ಧಾತುಗಳು ಈ ಪಟ್ಟಣದ ಏಳು ಪ್ರಾಕಾರಗಳು. ಇಡಾ ಪಿಂಗಳಾ ಮೊದಲಾದ ನಾಡಿಗಳು ಸಣ್ಣ ಬೀದಿಗಳು. ವಿದ್ಯಾ, ಐಶ್ವರ್ಯಾದಿ ಗಳಿಂದ ಹೊಂದುವ ಎಂಟು ಮದಗಳೇ ಮದಗಜಗಳು. ಮುಖ್ಯಪ್ರಾಣದೇವರು ಪ್ರಾಣ ಅಪಾನಾದಿ ಪಂಚರೂಪಗಳಿಂದ ಕಾಮಕ್ರೋಧಾದಿ ಆರು ಶತ್ರುಗಳನ್ನು ಸಂಹರಿಸುವ ತಳವಾರನು. ॥೨೦॥

## (೩) "ಭಾವದರ್ಪಣ ಟೀಕಾ"-ವ್ಯಾಖ್ಯಾನ :—

ಈಗ ಇನ್ನೊಂದು ರೀತಿಯಿಂದ ಚಿಂತನ ಮಾರ್ಗಪ್ರದರ್ಶನ ಮಾಡುತ್ತಾರೆ-ಧಾತ್ವಿತಿ ॥

"ತ್ವಕ್ - ಚರ್ಮ - ಮಾಂಸ - ರುಧಿರ-ಮೇದೋ -ಮಜ್ಜಾಸ್ಥಿ ನಾಮಕಾಃ ||"

-ಎಂಬ ಮಾನಸ ಸ್ಮೃತ್ಯನುಸಾರ ಸಪ್ತಧಾತುಗಳೇ ಸಣ್ಣ ವೀಥಿಗಳೆಂತಲೂ ದೇಹಸ್ಥ ನಾಡಿಗಳೇ ಮದಿಸಿದ ಆನಿಗಳೆಂತಲೂ ಅರ್ಥ ।

"ಇಭಃ ಸ್ತಂಬೇರಮಃ ಪದ್ಮೀ ಯೂಥನಾಯಸ್ತು ಯೂಥಪ" -ಇತ್ಯಮರಃ ||

ತನೂರುಹ-ರೋಮಗಳೇ ವನಗಳು. ಮಧ್ಯದೇಹಸ್ಥ ಸುಷುಮ್ನಾ ನಾಡಿಯೇ ರಾಜವೀಧಿ ಎಂತಲೂ. ಪಂಚಪ್ರಾಣರೂಪಾದ ವಾಯುದೇವರೇ ದೈತ್ಯಸಂಹಾರಕನಾದ ತಳವಾರ ಎಂತಲೂ ಚಿಂತಿಸಿ, ಉಪಾಸನ ಮಾಡಬೇಕೆಂದು ದಾಸರಾಯರ ತಾತ್ಪರ್ಯ ॥೨೦॥

## (೪) ಜಮಖಂಡಿ ವಾದಿರಾಜಾಚಾರ್ಯರ ವ್ಯಾಖ್ಯಾನ :— (ಸಂಸ್ಕೃತಮೂಲ)

ಪ್ರಾಕಾರೇತ್ಯಾದಿನಾಂ ಅಧ್ಯಾತ್ಮಾಂತ್ಯೈಃ ಶಬ್ದೈಃ ಅಸ್ಥಿನಾಡ್ಯಾದಯಃ ಯಥಾನುಕೂಲಂ ಲಕ್ಷಣೀಯಾಃ ಇತಿ ವಿಜಯಧ್ವಜೋದಿತ ಮಾಹ ॥ ಧಾತ್ವೇತಿ ॥ ಆವರಣಾದಿ ಪ್ರಾಕಾರಾಃ । ಸಭಾ ಚತ್ವರ ರಥ್ಯಾಭಿಃ ಇತ್ಯುಕ್ತೇಃ ಉಪವೀಥಿಃ। ಚತ್ವರಂ ನಾಡೀ ಸಂಧಿಃ । ಯೂಥಪಾಃ ಸೇನಾಪತಯಃ ॥ ರಾಜೇತಿ ॥ ರಥ್ಯಾ ಬ್ರಹ್ಮನಾಡೀ । ಪುರ್ಯಾಸ್ತು। ಬಾಹ್ಯೋಪವನೇ, ಉಪವನಂ ರೋಮಾದಿ । ತಳವಾರಃ ಖಡ್ಗ ಹಸ್ತಃ। ಪಂಚಶೀರ್ಷಾಹಿನಾ ಗುಪ್ತಾಂ ಪ್ರತೀಹಾರೇಣ ಸರ್ವತಃ ಇತಿ ॥ ಗುರುಚರಣಾಸ್ತು ವೈಕುಂಠ ವರ್ಣನೇ ॥ "ಒಪ್ಪುವ ಮನುಷ್ಯ ಎಂಬೋ ಬ್ರಹ್ಮಪುರಕ್ಕೊಂಬತ್ತು ದ್ವಾರ ಗಡ । ಆ ಪ್ರತಿ ಮಧ್ಯೇಕನಾಡೀ ರಾಜಬೀದಿ। ಷಟ್ಪದ್ಮಾ ಅದರೋಳು, ಬಗೆ ಬಗೆಯು ಸರ್ಪಶಾಯಿಗೆ ವಾಲಗ ಸೇವೆ ಗಡಾ । ಅಪ್ರಿಯವಾದ ದುಃಖ ವೆಂಬೋ ಹುಲಿಯಾ ಹೇರು ಅಲ್ಪ ಜೀವರ ಪ್ರಸಾರಾ ಅಂಗಡಿ ಗಡಾ । ಬೀದಿ ಬೀದಿಯಲ್ಲಿ ಇರಳು ಹಗಲು ಕಾದುಕೊಂಡಿಪ್ಪರು ತಳವಾರರೈವರು । ಮಾಧವಗತಿಪ್ರಿಯರು ಎಂದೆಂದೂ ಹಾದಿಯಾಗೊಡರು ದೈತ್ಯಾಚೋರರಿಗೆ ॥ ಅಧಿಕಾರ ಮಂಡಲಾಗ್ರೇಸರರು ಈ ಧರೆಯೊಳು ಹಯವದನನಾಳುಗಳು" ಇತಿ ॥೨೦॥

**ಕನ್ನಡಾರ್ಥ :—**

"ಪ್ರಾಕಾರ" —ಮುಂತಾದ ಶಬ್ದಗಳಿಗೆ ಅಸ್ಥಿ, ನಾಡಿ ಇತ್ಯಾದಿ ಅರ್ಥಗಳನ್ನು ಅನ್ವಯಿಸುವಂತೆ ಲಕ್ಷಣತಯಾ ಹೇಳಬೇಕು" —ಎಂದು

ಶ್ರೀ ವಿಜಯಧ್ವಜತೀರ್ಥರ ಅಭಿಪ್ರಾಯವು. ಅದರಂತೆ, "ಧಾತುಗಳು" –ಎಂದರೆ, ಆವರಣಗಳು ಅಥವಾ ಪ್ರಾಕಾರಗಳೆಂದರ್ಥ. **"ಸಭಾ ಚತರ ಥ್ಯಾಭಿಃ"** ಎಂದು **ಶ್ರೀಮದ್ಭಾಗವತ ವಚನ.** ಅದರಂತೆ, ಉಪವೀಥಿಗಳು-ನಾಡಿಗಳು ಎಂದಾಗುವುದು. ನಾಡಿಗಳ ಸಂಧಿಯೇ "ಚತ್ವರ" ವೆನಿಸುವುದು. ಮದಗಳು ಸೇನಾಪತಿಗಳು, ಸುಷುಮ್ನಾ ನಾಡಿಯು ಬ್ರಹ್ಮನಾಡಿಯು. ಇದೇ ರಾಜಬೀದಿ (ರಥ್ಯಾ). ನಗರದ **ಹೊರವಲಯದಲ್ಲಿ** ಉಪವನಗಳಿರುವುವು. ಅವೇ ರೋಮಗಳು **"ಪಂಚಶೀರ್ಷಾಹಿನಾ ಗುಪ್ತಂ"**–ಎಂದು **ಭಾಗವತ ವಚನ** ಅಂದರೆ, ಪ್ರಾಣಾದಿ ಪಂಚರೂಪಿ ಮುಖ್ಯ ಪ್ರಾಣನು ಖಡ್ಗಧಾರಿ ಯಾಗಿ ನಿಂತಿರುವ ಪ್ರತೀಹಾರನು (ದ್ವಾರ ರಕ್ಷಕನು). ಈ ವಿಷಯವನ್ನು ವಾದಿರಾಜ ಶ್ರೀಮಚ್ಚರಣರು **ವೈಕುಂಠ ವರ್ಣನೆಯಲ್ಲಿ** ವಿವರಿಸಿರುತ್ತಾರೆ ॥೨೦॥

## (ಆ) "ಗುರುಹೃದಯಪ್ರಕಾಶಿಕೆ"–ವ್ಯಾಖ್ಯಾನ :—

ತ್ವಕ್, ಚರ್ಮ, ಮಾಂಸ, ರಕ್ತ, ಅಸ್ಥಿ, ಮೇದಸ್ಸೆಂಬ ಏಳು ಧಾತುಗಳು ಪ್ರಾಕಾರವೆಂಬ ಕೋಟೆಗಳು. ಇಡಾ, ಪಿಂಗಳಾ, ವಜ್ರಿಕಾ, ಆರ್ಯಕವೆಂಬ ನಾಡಿಗಳು ಸಣ್ಣಬೀದಿಗಳು. ಮದಗಳು ಯೂಥಪಗಳೆಂದರೆ, ಅನ್ನಮದ, ಅರ್ಥಮದ, ಪ್ರಾಯಮದ, ವಿದ್ಯಾಮದ, ಕುಲಮದ, ಆಧಿಪತ್ಯಮದ, ಸತ್ಕರ್ಮಮದ ಮತ್ತು ಶೀಲಮದ ಎಂಬ ಎಂಟು ಆನೆಗಳು. ಸುಷುಮ್ನಾ ನಾಡಿಯೇ ರಾಜಬೀದಿಯು. ಈ ತನೂರುಹವೆಂಬ ಮೈಯ್ಯ ರೋಮಗಳೇ ವನಗಳೆಂಬ ಊರಮುಂದಲ ತೋಟ. ಪ್ರಾಣಾಪಾನಾದಿ ಪಂಚ ರೂಪವುಳ್ಳ ಮಾತರಿಶ್ವ ಎಂದರೆ, ವೇದ, ಮೂಲರಾಮಾಯಣ, ಮಹಾ ಭಾರತ, ಮತ್ತು ಪಂಚರಾತ್ರಗಳೆಂಬ ಸಪ್ತಮಾತೃಗತ ಶುದ್ಧಜ್ಞಾನವುಳ್ಳ ಪ್ರಾಣದೇವರೇ ಪಾಪಗಳೆಂಬ ಶತ್ರುಗಳನ್ನು ಸಂಹರಿಸುವ ತಳವಾರನು ॥೨೦॥

# ಸರ್ವವ್ಯಾಖ್ಯಾನಸಾರಸಂಗ್ರಹ

(೧) ನಮ್ಮ ದೇಹದಲ್ಲಿ ಸಪ್ತಧಾತುಗಳಿವೆ. ಇವುಗಳ ವಿವರ ಇಂತಿದೆ :— (೧) ತ್ವಕ್ (೨) ಚರ್ಮ (೩) ಮಾಂಸ (೪) ರುಧಿರ (ರಕ್ತ) (೫) ಮೇದಸ್ಸು (೬) ಮಜ್ಜಾ ಮತ್ತು (೭) ಅಸ್ಥಿ ಎಂಬುದಾಗಿ ಏಳು ಪ್ರಕಾರ. ಈ ಸಪ್ತಧಾತುಗಳು ಶರೀರಕ್ಕೆ ಆವರಣರೂಪವಾಗಿದ್ದು ದೇಹವನ್ನು ಸಂರಕ್ಷಿಸುವುವು. ಅವುಗಳಲ್ಲಿ ತ್ವಕ್ ಎಂಬುದು ಮೇಲು ಹೊದಿಕೆ. ಅಸ್ಥಿ (ಮೂಳೆ)ಯು ಅಂತಃಭಾಗದಲ್ಲಿ ದೇಹಕ್ಕೆ ಆಕಾರವನ್ನು ಕೊಟ್ಟು ಆಧಾರಭೂತವಾಗಿದೆ. ಇದರಂತೆ ದೇಹವೆಂಬ ಈ ಪಟ್ಟಣಕ್ಕೆ ಈ ಸಪ್ತ ಧಾತುಗಳೇ ಏಳು ಪ್ರಾಕಾರಗಳು ಅಥವಾ ಕೋಟೆಗಳು. ಹಿಂದಿನ ಕಾಲದಲ್ಲಿ ರಾಜಮಹಾರಾಜರುಗಳು ನಗರಿಯ ರಕ್ಷಣೆಗಾಗಿ ಸುತ್ತಲೂ ಕೋಟೆ ಕೊತ್ತಲುಗಳನ್ನು ನಿರ್ಮಿಸುತ್ತಿದ್ದರು.

(೨) ನಮ್ಮ ದೇಹದಲ್ಲಿ ೭೨,೦೦೦ ನಾಡಿಗಳು ಓತಪ್ರೋತವಾಗಿ ವ್ಯಾಪಿಸಿಕೊಂಡಿವೆ. ಇವುಗಳಲ್ಲಿ ಸುಷುಮ್ನಾನಾಡಿಯು ಪ್ರಧಾನನಾಡಿಯು. ಇದಕ್ಕೆ ನಾಲ್ಕು ಮುಖ್ಯ ಶಾಖೆಗಳು. (೧) ಇಡಾ (೨) ಪಿಂಗಳಾ (೩) ವಜ್ರಿಕಾ ಮತ್ತು (೪) ಆರ್ಯಕಾ ಎಂಬ ನಾಲ್ಕು ನಾಡಿಗಳು. ಸಾಮಾನ್ಯವಾಗಿ ನಾಲ್ಕು ಬೀದಿಗಳು ಒಂದು ಕೇಂದ್ರದಲ್ಲಿ (ವೃತ್ತ)ಸೇರುವುವು. ಈ ನಾಲ್ಕು ಶಾಖಾನಾಡಿಗಳ ಸಂಧಿಗೆ "ಚತ್ವರ" ಎಂದು ಹೆಸರು. ಇದಕ್ಕೆ ಶಾಖೋಪಶಾಖೆಗಳಾಗಿ ಇತರ ನಾಡಿಗಳು ವ್ಯಾಪಕವಾಗಿವೆ. ಪಟ್ಟಣದಲ್ಲಿ ಸಣ್ಣ ಸಣ್ಣ ಅಡ್ಡರಸ್ತೆಗಳಿರುವುವು. ಇವುಗಳಿಗೆ ಉಪವೀಥಿಗಳೆಂದು ಹೆಸರು. ಶಾಖೋಪಶಾಖಾನಾಡಿಗಳೇ ಇಂತಹ ಉಪವೀಥಿಗಳು.

(೩) ಗರ್ವದಿಂದ ಹುಟ್ಟುವ ಮನೋವೃತ್ತಿಯೇ "ಮದ"ವು. ಈ ಮದವು ಎಂಟುಪ್ರಕಾರ. ಇದಕ್ಕೆ "ಅಷ್ಟಮದ"ಗಳೆಂದು ಹೆಸರು. ಅವುಗಳ ವಿವರ ಇಂತಿದೆ:—

(೧) ಅನ್ನಮದ (೨) ಅರ್ಥಮದ (೩) ಪ್ರಾಯ ಮದ (೪) ವಿದ್ಯಾಮದ (೫) ಕುಲ ಮದ (೬) ಅಧಿಕಾರ ಮದ (೭) ಸತ್ಕರ್ಮ ಮದ ಮತ್ತು (೮) ಶೀಲಮದ —ಎಂದು ಎಂಟು ವಿಧ. ಸಾಮಾನ್ಯವಾಗಿ ಆನೆಗಳು ಮದಿಸಿರುವುದರಿಂದ ಈ ಅಷ್ಟಮದಗಳನ್ನು ಅಷ್ಟ ಗಜಗಳೆಂದು ಹೇಳುತ್ತಾರೆ. ಕೆಲವು ವ್ಯಾಖ್ಯಾನಗಳಲ್ಲಿ "ಯೂಥಪ" ಎಂಬ ಶಬ್ದಕ್ಕೆ ಸೇನಾನಾಯಕರು ಎಂದು ಅರ್ಥಮಾಡಿರುತ್ತಾರೆ. ಮದಗಳನ್ನೇ ಪ್ರತ್ಯೇಕವಾಗಿ ಪರಿಗಣಿಸಿದಾಗ "ಆನೆ" (ಯೂಥಪ) ಎಂದು ಅರ್ಥಮಾಡಬಹುದು. ಕೋಶಾರ್ಥವೂ ಇದೇ ಈ ಆನೆಗಳ ಸಮೂಹವನ್ನು ಒಂದು ಗುಂಪಾಗಿ ಪರಿಗಣಿಸಿದರೆ, ಆದಕ್ಕೆ ನಿರ್ವಾಹಕರಾದ "ಸೇನಾನಾಯಕ" ರೆಂದೂ ಅರ್ಥಮಾಡಬಹುದು.

(೪) ಮೂಲಾಧಾರವಾದ ತುಂದಿಯಿಂದ ಪ್ರಾರಂಭವಾಗಿ, ದೇಹದ ಮಧ್ಯಭಾಗದಲ್ಲಿ ಬ್ರಹ್ಮರಂಧ್ರದವರೆಗೆ ನೇರವಾಗಿ ಹೊರಟಿರುವ ಪ್ರಧಾನ ನಾಡಿಗೆ- "ಸುಷುಮ್ನಾ ನಾಡಿ" ಎಂದು ಹೆಸರು. ಇದೇ ಬ್ರಹ್ಮನಾಡಿಯು. ಇದರಲ್ಲಿ "ಕ್ಷಂ" ವರ್ಣವಾಚ್ಯನಾದ ಶ್ರೀ ಲಕ್ಷ್ಮೀನರಸಿಂಹ ದೇವರು ಸ್ಥಿತರಾಗಿದ್ದು, ಜೀವನಿಗೆ ಆಪತ್ತುಗಳು ಬಾರದಂತೆ ರಕ್ಷಕರಾಗಿದ್ದಾರೆ.

**"ಸುಷುಮ್ನಾನಾಡಿಸ್ಥಿತ ವಿಭುವೆ ನಾರಸಿಂಹ"-**

ಎಂದು **ಶ್ರೀ ಗೋಪಾಲದಾಸರ** ವಚನ.

ಇಂತಹ ಸುಷುಮ್ನಾ ನಾಡಿಯೇ ರಾಜ ಬೀದಿಯು. ಇದರಲ್ಲಿ ಶ್ರೀಹರಿಯು (ಪ್ರಭು). ಆತನ ಪ್ರಥಮಾಂಗರಾದ ಶ್ರೀ ವಾಯುದೇವರೂ (ಮಂತ್ರಿ) ಸಂಚಾರಮಾಡುವರು.

(೫) ಈ ದೇಹದಲ್ಲಿ ಎಂಟುಕೋಟಿ ರೋಮಗಳಿವೆ. ಪಟ್ಟಣದ ಸುತ್ತಲೂ ವನಗಳು ಮತ್ತು ಉಪವನಗಳೂ ಇರುವುವು (ಉದ್ಯಾನ ವನಗಳು). ದೇಹದಿಂದ ಹೊರಗೆ ಬರುವ ಈ ರೋಮಗಳಿಗೆ-"ತನೂರುಹ" ಗಳೆಂದು

ದಾಸರಾಯರು ಹೇಳಿರುತ್ತಾರೆ. ಇಂತಹ ರೋಮಸಮೂಹಗಳೇ ಈ ದೇಹಾಖ್ಯ ಪಟ್ಟಣದ ವನ ಮತ್ತು ಉಪವನಗಳು.

(೬) ಜೀವೋತ್ತಮರಾದ ಮುಖ್ಯಪ್ರಾಣದೇವರಿಗೆ "ಮಾತರಿಶ್ವ" ಎಂದು ಹೆಸರು. ವೇದ, ಮೂಲ ರಾಮಾಯಣ, ಶ್ರೀಮನ್ಮಹಾಭಾರತ ಮತ್ತು ಪಂಚರಾತ್ರಾಗಮಗಳೆಂಬ ಸಚ್ಛಾಸ್ತ್ರಗಳಿಗೆ "ಸಪ್ತಮಾತೃ"ಗಳೆಂದು ಹೆಸರು. ಇಂತಹ ಸಪ್ತಮಾತೃಗಳ ಪರಿಶುದ್ಧ ಜ್ಞಾನವುಳ್ಳವರೇ ಶ್ರೀಮುಖ್ಯ ಪ್ರಾಣರಾದ ವಾಯುದೇವರು. ಇದರಿಂದ ಮುಖ್ಯಪ್ರಾಣರಿಗೆ "ಮಾತರಿಶ್ವ" ಎಂಬ ಅಭಿಧಾನ. ಇಂತಹ ಮುಖ್ಯ ಪ್ರಾಣದೇವರು (೧) ಪ್ರಾಣ (೨) ಅಪಾನ (೩) ವ್ಯಾನ (೪) ಉದಾನ ಮತ್ತು (೫) ಸಮಾನ ಎಂಬ ಪಂಚ ರೂಪ ಗಳಿಂದ ಈ ದೇಹದಲ್ಲಿ ಸ್ಥಿತರಾಗಿದ್ದು. ಶರೀರಸಂರಕ್ಷಣಾಕಾರ್ಯವನ್ನು ಮಾಡುತ್ತಿರುವರು. ಒಂದು ಪಟ್ಟಣಕ್ಕೆ ದ್ವಾರಪಾಲಕರಾದ, "ತಳವಾರ"ರೆಂಬ ಅಧಿಕಾರಿಗಳು ರಾಜನಿಂದ ನೇಮಿಸಲ್ಪಟ್ಟಿರುತ್ತಾರೆ. ಅವರು ಹೊರಗಡೆಯಿಂದ ಬರುವ ಶತ್ರುಗಳನ್ನು, ಎದುರಿಸಿ, ನಾಶಗೈದು, ನಗರವನ್ನು ರಕ್ಷಿಸುವರು. ಅಂತೆಯೇ ಬಿಂಬಮೂರ್ತಿ ಶ್ರೀ ಪರಮಾತ್ಮನು ಅಧಿಪತಿಯಾದ ರಾಜನು. ಅವನಿಂದ ನೇಮಿಸಲ್ಪಟ್ಟ, ಭಗವದಾಜ್ಞಾಧಾರಕರಾದ ಭಗವತ್ಕಾರ್ಯ ಸಾಧಕರಾದ ಮುಖ್ಯಪ್ರಾದೇವರೇ "ತಳವಾರ"ರೆಂದೆನಿಸುವರು. ಅವರು ದೇಹಕ್ಕೆಸದಾರಕ್ಷಕರಾಗಿದ್ದು, ಕಾಮ. ಕ್ರೋಧ, ಲೋಭ. ಮೋಹ, ಮದ, ಮಾತ್ಸರ್ಯಗಳೆಂಬ ಶತ್ರುಗಳನ್ನು (ಅರಿಷಡ್ವರ್ಗಗಳು). ಅವುಗಳಿಗೆ ಪ್ರೇರಕರಾದ ಅಸುರರನ್ನೂ ಸಂಹರಿಸುವ ತಳವಾರರು ಎಂದು ತಾತ್ಪರ್ಯ. ॥೨೦॥

# ಪದ್ಯ (೨೧)

**ಮೂಲ :—**

**ಇನ ಶಶಾಂಕಾದಿಗಳೆ ಲಕ್ಷ್ಮೀ ।**
**ವನಿತೆಯರಸನ ದ್ವಾರಪಾಲಕ ।**
**ರೆನಿಸುತಿಪ್ಪರು ಮನದ ವೃತ್ತಿಗಳೇ ಪದಾತಿಗಳು ।**
**ಅನುಭವಿಪ ವಿಷಯಂಗಳೇ ಪ ।**
**ಟ್ಟಣಕೆ ಬಪ್ಪ ಪಸಾರಗಳು ಜೀ ।**
**ವನು ಸುವರ್ತಕ ಕಪ್ಪಗಳ ಕೈ ಕೊಂಬ ಹರಿ ತಾನು ॥ ॥೨೧॥**

**ಅವತರಣಿಕೆ :—**

ದೇಹಾಖ್ಯ ಪಟ್ಟಣದ ವಿವರಗಳನ್ನು ಇನ್ನೂ ವಿಶದೀಕರಿಸುತ್ತಾರೆ. ನೇತ್ರಾಭಿಮಾನಿಗಳಾದ ಸೂರ್ಯ.ಚಂದ್ರರೇ ರಮಾರಮಣನ ಪಟ್ಟಣವಾದ ಈ ಶರೀರಕ್ಕೆ ದ್ವಾರಪಾಲಕರು. ಮನದ ಪಂಚವೃತ್ತಿಗಳೇ (ಮನೋವ್ಯಾಪಾರ) ಕಾಲಾಳುಗಳು. ಜೀವನ ಅನುಭವಕ್ಕೆ ಬರುವ ವಿಷಯವ್ಯೂಹಗಳೇ ಆ ಪಟ್ಟಣಕ್ಕೆ ಬರುವ ನಾನಾ ಬಗೆಯ ಸರಕುಗಳು. ಜೀವನೇ ವ್ಯಾಪಾರಗಾರ. **ಹರಿ**ಯು ಈ ಕಪ್ಪಕಾಣಿಕೆಗಳನ್ನು ಸ್ವೀಕರಿಸುವ ಯಜಮಾನ ಎಂದು ಹೇಳುತ್ತಾರೆ- **"ಇನಶಶಾಂಕ"** —ಎಂಬ ಪ್ರಸಕ್ತಸಂಧಿಗತ ೨೧ನೆಯ ಈ ಪದ್ಯದಿಂದ ॥೨೧॥

**ಪ್ರತಿಪದಾರ್ಥ :—**

**ಇನ**=ಸೂರ್ಯ **ಶಶಾಂಕಾದಿಗಳೆ**=ಚಂದ್ರ ಇವರೇ ಮೊದಲಾದ ತತ್ವಾಭಿಮಾನಿದೇವತೆಗಳೇ **ಲಕ್ಷ್ಮೀ**=ಮಹಾಲಕ್ಷ್ಮೀ ಎಂಬ **ವನಿತೆ**=ಉತ್ತಮರಾದ ಸ್ತ್ರೀಯ **ಅರಸನ**=ಪತಿಯಾದ ಶ್ರೀ ಮನ್ನಾರಾಯಣನ

**ದ್ವಾರಪಾಲಕರೆನಿಸುತಿಪ್ಪರು** = ದೇಹಾಖ್ಯವಾದ ಈ ಪಟ್ಟಣಕ್ಕೆ ದ್ವಾರ ರಕ್ಷಕರು ಎಂದು ಕರೆಯಿಸಲ್ಪಡುತ್ತಾರೆ. **ಮನದ** = ಮನಸ್ಸಿನ **ವೃತ್ತಿಗಳೇ** = ವ್ಯಾಪಾರಗಳೇ (ಮನಸ್ಸಿನಿಂದ ಹುಟ್ಟಿದ ಕೋರಿಕೆಗಳು) **ಪದಾತಿಗಳು** = ಕಾಲಾಳುಗಳು. **ಅನುಭವಿಪ** = ಏಕಾದಶೇಂದ್ರಿಯಗಳ ದ್ವಾರಾ ನಮ್ಮ ಅನುಭವಕ್ಕೆ ಬರುವ **ವಿಷಯಂಗಳೇ** = ವಿಷಯ ಭೋಗಗಳೇ **ಪಟ್ಟಣಕೆ** = ಈ ಶರೀರವೆಂಬ ಪುರಕ್ಕೆ **ಬಪ್ಪ** = ಹೊರಗಿನಿಂದ ಬರುವ (ಬಾಹ್ಯ ವಿಷಯಗಳು) **ಪಸಾರಗಳು** = ಅಂಗಡಿಯಲ್ಲಿ ದೊರೆಯುವ ವಸ್ತುಗಳು (ಪಸಾರ ಎಂದರೆ ಗ್ರಂದಿಗೆ ಅಂಗಡಿ ಎಂದರ್ಥ) **ಜೀವನು** = ಜೀವನೇ **ಸುವರ್ತಕ** = ಉತ್ತಮ ವ್ಯಾಪಾರಿಯು. **ಹರಿ ತಾನು** = ಬಿಂಬರೂಪಿಯಾದ ಶ್ರೀಹರಿಯು ತಾನು **ಕಪ್ಪಗಳ** = ಕಾಣಿಕೆಗಳನ್ನು **ಕೈ ಕೊಂಬ** = ಸ್ವೀಕರಿಸುವನು. ॥೨೧॥

## ವ್ಯಾಖ್ಯಾನಗಳು

### (೧) ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ :—

ಇನ್ನು ದೇಹಾಖ್ಯಪಟ್ಟಣದ ವಿಚಾರವೇ ಹೇಳತಾರೆ, ಸೂರ್ಯಚಂದ್ರ ಇವರೇ ಮೊದಲಾದವರು (ಇನ ಶಶಾಂಕಾದಿಗಳೇ), ನಿತ್ಯಮುಕ್ತಳಾದ ಲಕ್ಷ್ಮೀದೇವೇರ (ಲಕ್ಷ್ಮೀ) ಹೆಂಡತಿಯಾಗಿ ಉಳ್ಳ (ವನಿತೆ) ಶ್ರೀನಾರಾಯಣ ದೇವರ (ಅರಸನ) ದೇಹಾಖ್ಯ ಪಟ್ಟಣಕ್ಕೆ ಪೂರ್ವೋಕ್ತ ದ್ವಾರಗಳಿಗೆ ದ್ವಾರ ರಕ್ಷಕರು ಎಂತ (ದ್ವಾರಪಾಲಕರು) ಎನಿಸೋವವರಾಗತಾರೆ (ಎನಿಸುತಿಪ್ಪರು) ಹ್ಯಾಂಗೆಂದರೆ, ೫ ಪೂರ್ವದ್ವಾರಗಳಾದ ಐದಕ್ಕೆ ನೇತ್ರಗಳು ಎರಡಕ್ಕೆ, ಬಲನೇತ್ರಕ್ಕೆ ಸೂರ್ಯ, ಎಡನೇತ್ರಕ್ಕೆ ಚಂದ್ರ, ನಾಸಿಕಾ ಎರಡಕ್ಕೆ (೧) ಬಲ ದ್ವಾರಕ್ಕೆ ನಾಸತ್ಯ (೨) ಎಡ ದ್ವಾರಕ್ಕೆ ದಸ್ರ. ಇವರಿಬ್ಬರೂ ಅಶ್ವಿನೀ ದೇವತೆಗಳು. ಮುಖದ್ವಾರಕ್ಕೆ ಅಗ್ನಿ. ಅಂತು ಐದಕ್ಕೆ ಸರಿಯಾಯಿತು, ಉತ್ತರ ದಕ್ಷಿಣ ದ್ವಾರ ಈ ಎರಡು ದ್ವಾರಗಳಿಗೆ ದಿಗ್ದೇವತೆಗಳು. ಈ ದಕ್ಷಿಣ

ಉತ್ತರ ದ್ವಾರಗಳು ದಾವವೆಂದರೆ, ಕರ್ಣದ್ವಯಗಳು ಎಂತ ತಾತ್ಪರ್ಯ. ಪಶ್ಚಿಮ ದ್ವಾರಗಳು ಎರಡು, ಗುದದ್ವಾರಕ್ಕೆ ಮಿತ್ರನಾಮಕ ಸೂರ್ಯ, ಉಪಸ್ಥ ದ್ವಾರಕ್ಕೆ ಸ್ವಾಯಂಭುವ ಮನು. ಊರ್ಧ್ವದ್ವಾರ ಶಿರೋದ್ವಾರ ಇದಕ್ಕೆ ಬ್ರಹ್ಮ ಅಂತು ದಶ ದ್ವಾರಗಳಿಗೆ ದ್ವಾರರಕ್ಷಕರು ಎಂತ ಅರ್ಥ. ಮನೋವೃತ್ತಿಗಳೇ ಪೂರ್ವೋಕ್ತ ಅಷ್ಟಮದಗಳೆಂಬ ಸೇನಾನಾಯಕರ ವಶದಲ್ಲಿ ಇರತಕ್ಕ ಸೈನ್ಯಗಳು. ಮನೋವೃತ್ತಿಗಳೆಂದರೆ ವ್ಯಾಪಾರಗಳು ಅನೇಕ. ಆಯಾ ಒಂದೊಂದು ವ್ಯಾಪಾರಕ್ಕೆ ಒಂದೊಂದು ಮನೋವೃತ್ತಿ ಎಂದರೆ ವಿಭಾಗ ವಿಶೇಷ ಎಂತ ಅರ್ಥ. ಏಕಾದಶೇಂದ್ರಿಗಳಿಂದ ಅನುಭವಮಾಡತಕ್ಕ ಆಯಾ ಇಂದ್ರಿಯಗಳ ವಿಷಯಗಳೇ (ಪಟ್ಟಣಕ್ಕೆ ಬಪ್ಪ) ದೇಹಾಖ್ಯ ಪಟ್ಟಣಕ್ಕೆ ಹೊರಗಿನಿಂದ ಬರತಕ್ಕ ಅನೇಕ ವಿಧವಾದ ಸರಕುಗಳು. (ಪಸಾರಗಳು) ಬಾಹ್ಯ ವಿಷಯಗಳು ಇಂದ್ರಿಯ ಮಾರ್ಗವಾಗಿ ದೇಹಪ್ರವಿಷ್ಟವಾಗತದೆ. ಆದ ಕಡೆಯಿಂದ ವ್ಯಾಪಾರಕ್ಕೆ ಯೋಗ್ಯವಾದ ಸರಕುಗಳು. ಇದನ್ನು ವ್ಯಾಪಾರ ಮಾಡತಕ್ಕವ ಜೀವನು ಪೂರ್ವೋಕ್ತ ಸರಕುಗಳಿಂದ ಛಂದಾಗಿ ವ್ಯಾಪಾರ ಮಾಡತಕ್ಕವನು (ಜೀವನು ಸುವರ್ತಕ). ಇಂಥಾ ಸರಕುಗಳಿಂದ ಪುಣ್ಯವೆಂಬ ಲಾಭವು, ಪಾಪವೆಂಬ ನಷ್ಟವು ಆಯಾ ಸರಕುಗಳಿಂದ ಹೊಂದತಾ ವ್ಯಾಪಾರ ಮಾಡುತಾ ಇದ್ದಾನೆ. ಈ ಪಟ್ಟಣಗತ ಬಿಂಬರೂಪಿಯಾದ ಪರಮಾತ್ಮನಾದ ತಾನು (ಹರಿ ತಾನು) ಕಾಣಿಕೆಗಳನ್ನು (ಕಪ್ಪಗಳ) ಜೀವಾಖ್ಯ ವರ್ತಕನಿಂದ ಸ್ವೀಕಾರಮಾಡತಾನೆ (ಕೈ ಕೊಂಬ). ಕಪ್ಪ ದಾವವೆಂದರೆ, ಜೀವಭುಕ್ತ ಹೋಗತಾ ತದಂತರ್ಗತ ಪರಮಾತ್ಮನಾದ ತನ್ನ ಸ್ವಾಖ್ಯರಸ ವಿಷಯಗಳು ದಾವದದೇ ಅದರನ್ನ ಅನುಸಂಧಾನದಿಂದ ಕೊಟ್ಟದ್ದನ್ನು ಸ್ವಿಕಾರಮಾಡತಾನೆ ಎಂತ ತಾತ್ಪರ್ಯ ॥೨೧॥

## (೨) "ಭಾವಪ್ರಕಾಶಿಕೆ" ವ್ಯಾಖ್ಯಾನ :—

ಲಕ್ಷ್ಮೀದೇವಿಯ ರಮಣನಾದ ಶ್ರೀಪರಮಾತ್ಮನ ದ್ವಾರಪಾಲಕರು ಚಕ್ಷುರಾದ್ಯಭಿಮಾನಿಗಳಾದ ಚಂದ್ರ ಸೂರ್ಯಾದಿಗಳೆಂದು ತಿಳಿಯಬೇಕು. ಮನಸ್ಸಿನಲ್ಲಿ ಆಗಾಗ್ಗೆ ಹುಟ್ಟುವ ವೃತ್ತಿಗಳೆಂದರೆ, ಕೋರಿಕೆಗಳೇ ಕಾಲಾಳ

ಗಳು. ನಾವು ಅನುಭವಿಸುವ ವಿಷಯಭೋಗಗಳೇ ಪಟ್ಟಣಕ್ಕೆ ಬರುವ ವಿಸ್ತಾರವಾದ ಅಂಗಡಿಗಳು. ಜೀವನು ವ್ಯಾರುವ ವರ್ತಕನು. ಕಪ್ಪವನ್ನು ಕೈ ಕೊಳ್ಳುವವನು ಶ್ರೀಪರಮಾತ್ಮನು ॥೨೦॥

## (೩) "ಭಾವದರ್ಪಣಟೀಕಾ" ವ್ಯಾಖ್ಯಾನ :—

ಏವಂ ರೀತಿಯಿಂದ। ನಮನ ಮಾಡಿ ಉಪಾಸನಾ ಮಾಡಬೇಕೆಂದು ಇನ್ನೊಂದು ಬಗೆ ಹೇಳುತ್ತಾರೆ- **"ಇನಶಶಾಂಕೇತಿ"**॥

ಒಪ್ಪ = ಬರತಕ್ಕಂಥ ಪಸಾರ-ಜಿನಸುಗಳು ॥೨೦॥

## (೪) ವಾದಿರಾಜಾಚಾರ್ಯರ ವ್ಯಾಖ್ಯಾನ (ಸಂಸ್ಕೃತಮೂಲ) :—

"ಇನೇತಿ" । ತೇಷಾಂ ದ್ವಾರಪತ್ವಂ ಉದಿತಂ ಪ್ರಾಕ್। ಪದಾತಿ ಇತಿ। **"ಏಕೈಕ ಶತನಾಯಕ್ಯೈಃ"-ಇತಿ ಭಾಗವತ ಟೀಕಾಯಾಂ-** "ಅನಂತಾಃ ಪ್ರತ್ತಯಃ"- ಇತ್ಯುಕ್ತೇಃ ॥ ಪಸಾರ-ಅಂಗಡಿ. ವರ್ತಕ-ವ್ಯವಹಾರಸ್ಥ ತಪ್ಪ-ತರಃ (ತರುವ) ॥೨೦॥

## ಕನ್ನಡಾನುವಾದ :—

ಹಿಂದಿನ ಪದ್ಯದಲ್ಲಿ ತತ್ತ್ವಾಭಿಮಾನಿಗಳು ದ್ವಾರ ಸಂರಕ್ಷಕರು ಎಂದು ಉಕ್ತವಾಗಿದೆ. ಇಲ್ಲಿ ಸೂರ್ಯ, ಚಂದ್ರರೇ ಆದಿಯಾಗಿ ನೇತ್ರ ಮುಂತಾದ ದ್ವಾರಗಳಲ್ಲಿ ದ್ವಾರಪಾಲಕರಾಗಿ ಸಂರಕ್ಷಣ ಕಾರ್ಯ ಮಾಡುತ್ತಿರುವರು. ಮನಸ್ಸಿನಲ್ಲಿ ಮೂಡುವ ನಾನಾ ಪ್ರಕಾರವಾದ ವ್ಯಾಪಾರವಿಶೇಷಗಳು (ಮನೋವೃತ್ತಿಗಳು), ಭಿನ್ನಾವಸ್ಥೆಗಳಲ್ಲಿ ತೋರಿಬರುವ ವಿಕಾರವಿಶೇಷಗಳು ಇವೆಲ್ಲವೂ "ಪದಾತಿ" ಗಳೆನಿಸುವವು. **"ಏಕೈಕ ಶತನಾಯಕ್ಯೈಃ-" ಎಂಬ ಭಾಗವತ ಟೀಕಾದಲ್ಲಿ** ಇಂತಹ ಮನೋವ್ಯಾಪಾರಗಳು ಅನಂತ ಸಂಖ್ಯೆಯಲ್ಲಿವೆ ಎಂದು ಉಕ್ತವಾಗಿದೆ. ಪಸಾರ = ಅಂಗಡಿ ವರ್ತಕ = ವ್ಯಾಪಾರಿ ಕಪ್ಪ = ಕರ ॥೨೦॥

## (ಔ) "ಗುರುಹೃದಯ ಪ್ರಕಾಶಿಕಾ" ವ್ಯಾಖ್ಯಾನ :—

ಕಣ್ಣು ಮೊದಲಾದ ಇಂದ್ರಿಯಾಭಿಮಾನಿಗಳಾದ ಸೂರ್ಯ ಚಂದ್ರಾದಿ ದೇವತೆಗಳೇ, ಲಕ್ಷ್ಮೀಪತಿಯಾದ ದೇವರ ಮನೆಯೆಂಬ ಶರೀರದ ದ್ವಾರ ಪಾಲಕರು. ಮನಸ್ಸಿನ ಕೋರಿಕೆಗಳೇ ಕಾಲಾಳುಗಳು. ಅನುಭವಿಸುವ ವಿಷಯಭೋಗಂಗಳೇ ಶರೀರವೆಂಬ ದೇವರ ಪಟ್ಟಣಕ್ಕೆ ಬರುವ ಪದಾರ್ಥ ವಿಸ್ತಾರ ಇರುವ ಅಂಗಡಿಗಳು. ಈ ದೇಹಗತ ಜೀವನೇ ವರ್ತಕ ಎಂದರೆ ವ್ಯಾಪಾರದವ. ಇಲ್ಲಿ ಕಂದಾಯವೆಂಬ ಸ್ವರಸಾದಿಗಳನ್ನು ಸ್ವೀಕರಿಸುವ ದೇವರೇ ಅರಸು ಎಂದರ್ಥ ॥೨೦॥

ಹಿಂದಿನ ಪದ್ಯಗಳಲ್ಲಿ ಈ ಶರೀರವೆಂಬ ದೇವ ನಗರಿಗೆ ಇರುವ ನವ ದ್ವಾರಗಳು ಮತ್ತು ಅವುಗಳನ್ನು ಸಂರಕ್ಷಿಸುತ್ತಿರುವ ದ್ವಾಪಾಲಕರ ವಿಷಯ ತಿಳಿಸಿರುತ್ತಾರೆ. ಪ್ರಸಕ್ತ ಪದ್ಯದಲ್ಲಿ ಅದನ್ನು ಇನ್ನೂ ವಿಶದೀಕರಿಸುತ್ತಾರೆ. ಶರೀರಗತ ದ್ವಾರಗಳು ಮತ್ತು ತತ್ಸಂಬಂಧವಾದ ತತ್ವಾಭಿಮಾನಿ ದೇವತೆಗಳ ವಿವರಗಳು ಇಂತಿವೆ.

| ಕ್ರಮ ಸಂಖ್ಯೆ | ದ್ವಾರಗಳ ದಿಕ್ಕು | ದ್ವಾರಗಳ ಸ್ಥಾನ | ಅಭಿಮಾನಿ ದೇವತೆಗಳು |
|---|---|---|---|
| ೧ | ಪೂರ್ವ ಕವಾಟಗಳು | ಎರಡು ಕಣ್ಣುಗಳು | ಸೂರ್ಯ ಮತ್ತು ಚಂದ್ರ |
| | | ಎರಡು ಮೂಗಿನ ಹೊಳ್ಳೆಗಳು | ನಾಸತ್ಯ ಮತ್ತು ದಸ್ರ (ಅಶ್ವಿನೀದೇವತೆಗಳು) |
| | | ಮುಖದ್ವಾರ | ಅಗ್ನಿ |
| ೨ | ದಕ್ಷಿಣ ದ್ವಾರ | ಬಲಗಿವಿ | ದಿಗ್ದೇವತೆಗಳು |
| ೩ | ಉತ್ತರ ಕವಾಟ | ಎಡಗಿವಿ | |
| ೪ | ಪಶ್ಚಿಮದ್ವಾರ | ಗುದದ್ವಾರ | ಮಿತ್ರನಾಮಕ ಸೂರ್ಯ |
| | | ಉಪಸ್ಥದ್ವಾರ | ಸ್ವಾಯಂಭುವ ಮನು |

(೧) ಇಂತು ನೇತ್ರಾದಿ ದ್ವಾರಗಳಿಗೆ ಸೂರ್ಯಚಂದ್ರಾದಿ ತತ್ವೇಶರು ದ್ವಾರಸಂರಕ್ಷಕರಾಗಿದ್ದು. ಈ ದೇಹಾಖ್ಯವೆಂಬ ಪಟ್ಟಣವನ್ನು ದ್ವಾರಪಾಲಕರೆನಿಸಿ ಕಾಯುತ್ತಿರುವರು. ಪಾಂಚಭೌತಿಕವಾದ ಈ ಶರೀರವೂ ಪ್ರಕೃತಿಯಿಂದ ನಿರ್ಮಿತವಾದದ್ದು. ಅಂತಹ ಮೂಲಪ್ರಕೃತಿಗೆ ಅಭಿಮಾನಿಗಳಾದ

ಸಾಕ್ಷಾತ್ ಶ್ರೀರಮಾದೇವಿಯರ ಪತಿಯು ಜಗತ್ಪ್ರಭುವಾದ ಶ್ರೀಮನ್ನಾರಾಯಣನು. ಅಂತಹ ಶ್ರೀ ಪರಮಾತ್ಮನು ಆವಾಸವಾಗಿರುವ ಪುರವೇ ಈ ದೇಹವು. ಸೂರ್ಯಾದಿ ದ್ವಾರಪಾಲಕರು ಅವನ ಅಜ್ಞಾಧಾರಕರಾಗಿ ಈ ಶರೀರವೆಂಬ ಪಟ್ಟಣವನ್ನೇ ಕಾವಲು ಕಾಯುತ್ತಿರುವರು.

(೨) ಮನಸ್ಸು ಅತಿ ಚಂಚಲವಾದುದು. ವೈಕಾರಿಕ ತತ್ತ್ವದಿಂದ ಜನ್ಯವಾದದ್ದು ಮನಸ್ಸು. ಇಂತಹ ಮನಸ್ಸಿನಲ್ಲಿ ನಾನಾ ಪ್ರಕಾರವಾದ ವ್ಯಾಪಾರಗಳು ವಿಕಾರಗಳೂ ಪ್ರಕಟವಾಗುತ್ತಿರುವುವು. ಈ ವ್ಯಾಪಾರವಿಶೇಷಗಳಿಗೆ "ಮನೋವೃತ್ತಿ"ಗಳೆಂದು ಹೆಸರು, ಈ ಮನೋವೃತ್ತಿಗಳೇ ಕಾಲಾಳುಗಳು. ಸೈನ್ಯದಲ್ಲಿ ಕಾಲಾಳುಗಳ ಪಾತ್ರ (ಪದಾತಿ) ಮುಖ್ಯ. ರಣರಂಗದಲ್ಲಿ ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಪದಾತಿಗಳ ಚಲನೆ ಸೇನಾನಾಯಕನ ಅಣತಿಗನುಗುಣವಾಗಿ ನಡೆಯುತ್ತದೆ. ಹೀಗೆ ದಶೇಂದ್ರಿಯಗಳಲ್ಲಿ ನಿರಂತರ ಸಂಚಾರ ಮಾಡುತ್ತಿರುವ ಮನಸ್ಸನ್ನು ಪದಾತಿಗಳೆಂದು ಕರೆದಿರುವುದು ಪರಮೋಚಿತವಾಗಿದೆ.

(೩) ಇಂದ್ರಿಯಗಳ ದ್ವಾರಾ, ನಮ್ಮ ಅನುಭವಕ್ಕೆ ಬರುತ್ತಿರುವ ವಿಷಯ ಭೋಗಗಳೇ ಈ ದೇಹಾಖ್ಯ ಪಟ್ಟಣಕ್ಕೆ ಬರುವ ಅಂಗಡಿಗಳು ಮತ್ತು ಅಲ್ಲಿ ಮಾರಲ್ಪಡುವ ಸರಕುಗಳು. ಹೊರಗಿನಿಂದ ಬರತಕ್ಕ ವಿಷಯಗಳು ಇಂದ್ರಿಯಗಳಿಗೆ ಸನ್ನಿಕರ್ಷವಾದಾಗ, ಇಂದ್ರಿಯಗಳು ತಮ ತಮಗೆ ಸಂಬಂಧಪಟ್ಟ ವಿಷಯಗಳನ್ನು ಸ್ವೀಕರಿಸಿ, ಮನಸ್ಸಿನ ದ್ವಾರಾ, ನಮ್ಮ ಅನುಭವಕ್ಕೆ ತರುವುವು. "ಪಸಾರ"- ಎಂದರೆ ರಾಸಾಯನಿಕ ವಸ್ತುಗಳು ಇತ್ಯಾದಿ ಸರಕುಗಳನ್ನ ಮಾರುವ "ಗ್ರಂದಿಗೆ ಅಂಗಡಿ"- ಎಂದರ್ಥ. ಒಂದು ಪಟ್ಟಣದಲ್ಲಿ ಸಂತೆಯಂತಹ ಮಾರುಕಟ್ಟೆಗಳಲ್ಲಿ ಸುತ್ತಮುತ್ತಲೂ ಹೊರಗಿನಿಂದ ವರ್ತಕರು ಬಂದು, ಅಂಗಡಿಗಳನ್ನು ಹೂಡಿ, ತಮ್ಮ ಸರಕುಗಳನ್ನು ವಿಕ್ರಯಿಸುವರು. ಈ ದೃಷ್ಟಿಯಿಂದ ವಿಷಯಗಳು ಹೊರಗಿನಿಂದ ಬರುವ ಸರಕುಗಳು. ಕೆಲವು ವ್ಯಾಖ್ಯಾನಗಳಲ್ಲಿ "ಪಸಾರ"-ಎಂದರೆ, "ಅಂಗಡಿ" ಎಂದು ಅರ್ಥಮಾಡಿರುತ್ತಾರೆ. ಸರಕುಗಳನ್ನು ವಿಕ್ರಯಿಸುವ ಸ್ಥಳವು ಅಂಗಡಿಗಳಾದ್ದರಿಂದ ಈ ಅರ್ಥವೂ ಸಮಂಜಸವಾಗಿದೆ.

(೪) ದೇಹಗತ "ಜೀವನೇ" ಸರಕುಗಳನ್ನು ಕೊಳ್ಳುವ ಮತ್ತು ಮಾರುವ "ವರ್ತಕನು". ಸರಕುಗಳ ಕೊಳ್ಳುವಿಕೆ ಮತ್ತು ಮಾರಾಟ ವರ್ತಕನ ವೃತ್ತಿ. ಹೊರಗಿನಿಂದ ಬರುವ ಬಾಹ್ಯ ವಿಷಯುಗಳನ್ನು ಇಂದ್ರಿಗಳ ದ್ವಾರಾ ಜೀವನು ಸ್ವೀಕರಿಸುವನು. ಮನೋವೃತ್ತಿಗಳ ದ್ವಾರ ಆ ವಿಷಯುಗಳನ್ನು ಅನುಭವಿಸುವನು, ಇಂತು ವಿಷಯು ಸ್ವೀಕಾರ ಮತ್ತು ವಿಷಯಾನುಭವಗಳು ಜೀವನಿಗೆ ಸಂಬಂಧಿಸಿವೆ. ಇದರಿಂದಲೇ ಜೀವನು ವರ್ತಕನೆನಿಸುವನು.

(೫) ಬಿಂಬರೂಪಿಯಾದ ಶ್ರೀಹರಿಯು ಕಪ್ಪ, ಕಾಣಿಕೆಗಳನ್ನು ಕೈಕೊಂಬ ಅಧಿಕಾರಿಯು. ವರ್ತಕರಿಂದ ಸುಂಕದ ಅಧಿಕಾರಿಗಳು ಕಂದಾಯ ಅಥವಾ ಕಪ್ಪವನ್ನು ವಸೂಲುಮಾಡುವರು. ಅಂತೆಯೇ ಸಕಲವಿಷಯ ಭೋಗಗಳನ್ನು ಜೀವನು ಸರ್ವಕರ್ತನಾದ ಬಿಂಬರೂಪೀ ಶ್ರೀಹರಿಗೆ ಅರ್ಪಿಸುವುದರಿಂದ, ಕಪ್ಪವನ್ನು ಕೈಕೊಂಬ ಹರಿ ತಾನು–ಎಂದು ಹೇಳಿದ್ದಾರೆ ಎಂದು ತಾತ್ಪರ್ಯ. ॥೨೦॥

## ಪದ್ಯ (೨೨)

ಮೂಲ :—

ಉರುಪರಾಕ್ರಮನರಮುನಿಗೆ ದಶ ।
ಕರಣಗಳು ಕನ್ನಡಿಯ ಸಾಲುಗ ।
ಳರವಿದೂರನ ತದ್ವಿಹಾರಕೆ ಚಿತ್ತ ಮಂಟಪವು ॥
ಮರಳಿ ಬೀಸುವ ಶ್ವಾಸಗಳು ಚಾ ।
ಮರ ವಿಲಾಸಿನಿ ಬುದ್ಧಿ ದಾಮೋ ।
ದರಗೆ ಸಾಷ್ಟಾಂಗ ಪ್ರಣಾಮಗಳೇ ಸುಶಯನಗಳು॥ ॥೨೨॥

**ಅವತರಣಿಕೆ :—**

ಅಸದೃಶಮಹಾಮಹಿಮಸಂಪನ್ನನಾದ ಶ್ರೀಹರಿಯ ಅರಮನೆಯೇ ಈ ಶರೀರವು, ಅರಮನೆಯ ವೈಭವ ಮತ್ತು ಅಲ್ಲಿ ನಿವಾಸಸ್ಥನಾದ ಪ್ರಭುವಿಗೆ ನಡೆಯುವ ಸತ್ಕಾರ ಮತ್ತು ಉಪಚಾರಗಳನ್ನು ತಿಳಿಸುತ್ತಾರೆ- **ಉರುಪರಾಕ್ರಮ"**- ಎಂಬ ಪ್ರಸಕ್ತ ಸಂಧಿಗತ ೨೨ನೆಯ ಈ ಪದ್ಯದಿಂದ. ಪಂಚ ಜ್ಞಾನೇಂದ್ರಿಯಗಳು ಮತ್ತು ಪಂಚ ಕರ್ಮೇಂದ್ರಿಯಗಳು ಎಂಬ ಈ ದಶೇಂದ್ರಿಯ ಸಮೂಹಗಳೇ ಶ್ರೀಯರಸನ ಅರಮನೆ ಎಂಬ ಈ ಶರೀರಕ್ಕೆ ಕನ್ನಡಿಯ ಸಾಲುಗಳು. ಸರ್ವದೋಷವಿವರ್ಜಿತನಾದ ಶ್ರೀಪರಮಾತ್ಮನಿಗೆ ಚಿತ್ತವೆಂಬುದೇ ವಿಹಾರಮಾಡುವ ಮಂಟಪವು. ಶ್ವಾಸರೂಪವಾದ ಗಾಳಿಯೇ ಬಿಂಬರೂಪೀ ಶ್ರೀಹರಿಗೆ ಬೀಸುವ ಚಾಮರಗಳು. ಬುದ್ಧಿ ಎಂಬುದೇ ನಾನಾ ಭಂಗಿಗಳಲ್ಲಿ ನಾಟ್ಯವಾಡುವ ನರ್ತಕಿಯು. ಮಲಗುವ ಕ್ರಿಯೆಯೇ ದಾಮೋದರ ನಾಮಕ ಶ್ರೀಹರಿಗೆ ಸಾಷ್ಟಾಂಗ ಪೂರ್ವಕ ನಮಸ್ಕಾರಗಳು. ಇಂತು, ಅನುಸಂಧಾನಪೂರ್ವಕ ಈ ಶರೀರಾಖ್ಯ ಅರಮನೆಯಲ್ಲಿ ಬಿಂಬರೂಪದಿಂದ ಇರತಕ್ಕ ಮಹಾಪ್ರಭು ಶ್ರೀಪರಮಾತ್ಮನನ್ನು ಅರ್ಚಿಸಬೇಕೆಂದು ತಾತ್ಪರ್ಯ. ||೨೨||

**ಪ್ರತಿಪದಾರ್ಥ :—**

**ಉರು** = ಉತ್ಕೃಷ್ಟವಾದ (ಸದೃಶರಹಿತನಾದ) **ಪರಾಕ್ರಮ** = ಸಾಮರ್ಥ್ಯಶಾಲಿಯಾದ ಶ್ರೀ ಪರಮಾತ್ಮನ **ಅರಮನಿಗೆ** = ಹೃದಯಾಕಾಶ ಗತ ಅಷ್ಟದಳ ಕಮಲಾಖ್ಯ ಅರಮನೆಗೆ **ದಶ ಕರಣಗಳು** = ಪಂಚ ಜ್ಞಾನೇಂದ್ರಿಯಗಳು ಮತ್ತು ಪಂಚ ಕರ್ಮೇಂದ್ರಿಗಳೆಂಬ ಹತ್ತು ಇಂದ್ರಿಯ ಸಮೂಹಗಳು **ಕನ್ನಡಿಯ ಸಾಲುಗಳು** = ಕನ್ನಡಿಯ ಪಂಕ್ತಿಗಳು **ಅರವಿದೂರನ** = ಸರ್ವ ದೋಷವಿವರ್ಜಿತನಾದ ಶ್ರೀಪರಮಾತ್ಮನ **ಸದ್ವಿಹಾರಕೆ** = ಸದ್ವ್ಯಾಪಾರ ರೂಪವಾದ ವಿಹಾರಕ್ಕೆ **ಚಿತ್ತ** = ನಮ್ಮ ಚಿತ್ತವೆಂಬ **ಮನೋವೃತ್ತಿಯು** **ಮಂಟಪವು** = ಆಸನ ರೂಪವಾದ ದಿವ್ಯ ಮಂಟಪವು. **ಮರಳಿ** = ತೆಗೆದು

ಕೊಳ್ಳುವುದು ಮತ್ತು ಬಿಡುವುದು ಎಂಬ ಉಶ್ವಾಸ ನಿಶ್ವಾಸರೂಪವಾದ **ಶ್ವಾಸಗಳು**=ಶ್ವಾಸರೂಪವಾದ ಗಾಳಿಯೇ **ಬೀಸುವ ಚಾಮರ**=ಶ್ರೀಹರಿಗೆ ಬೀಸುವ ಚಾಮರಗಳೆನಿಸುವುವು. **ಬುದ್ಧಿ**=ಬುದ್ಧಿ ಎಂಬ ಸ್ತ್ರೀಯೇ **ವಿಲಾಸಿನಿ** = ನಾನಾ ಭಂಗಿಗಳಿಂದ ನರ್ತನಮಾಡುವ ನರ್ತಕಿಯು. **ಸುಶಯನಗಳು**=ಮಲಗುವ ಕ್ರಿಯೆಯೇ **ದಾಮೋದರಗೆ**= ದಾಮೋದರ ನಾಮಕನಾದ ಬಿಂಬಮೂರ್ತಿ ಶ್ರೀಪರಮಾತ್ಮನಿಗೆ **ಸಾಷ್ಟಾಂಗ ಪ್ರಣಾಮಗಳು**=ಸಾಷ್ಟಾಂಗ ಪೂರ್ವಕವಾಗಿ ಮಾಡುವ ನಮಸ್ಕಾರಗಳು ಎಂತ ತಾತ್ಪರ್ಯ. ||೨೨||

## ವ್ಯಾಖ್ಯಾನಗಳು

### (೧) ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ:—

ಇನ್ನೂ ದೇಹಾಖ್ಯ ಪಟ್ಟಣದ ವಿಚಾರವನ್ನೇ ಹೇಳತಾರೆ. ಉತ್ಕೃಷ್ಟವಾದ ಸದ್ಗೃಶರಹಿತವಾದ ಸಾಮಾರ್ಥ್ಯ ಉಳ್ಳ ಶ್ರೀಬಿಂಬರೂಪಿ ಪರಮಾತ್ಮನ (ಉರುಪರಾಕ್ರಮ) ಅರಮನಿ ಎಂಬ ಅಷ್ಟದಳ ಕಮಲಾಖ್ಯ ಅರಮನಿಗೆ, ಹಾಂಗೆ ಷಟ್ಸರೋಜವೆಂಬ ಸದನಾಖ್ಯ ಅರಮನಿಗೆ, ದಶೇಂದ್ರಿಯುಗಳು ಕನ್ನಡಿಯುಪಂಕ್ತಿಗಳು (ಕರಣಗಳು ಎಂದರೆ, ಮನೋವೃತ್ತಿಗಳು. ಜ್ಞಾನ ಸಂಯುಕ್ತವಾದಂಥಾ ಅನೇಕ ವೃತ್ತಿಗಳು, ಕನ್ನಡಿಯ ಸಾಲುಗಳು ಎಂತಲೂ ತಾತ್ಪರ್ಯ). ದೋಷಯುಕ್ತರಾದ ದೈತ್ಯರಿಗೆ ದೂರನಾದ ಪರಮಾತ್ಮನ (ಅರ ವಿದೂರನ) ಸಮೀಚೀನವಾದ ಇಚ್ಛಾದಿಗಳು ಹುಟ್ಟಿಸಬೇಕಾದರೆ ಚಿತ್ತವೆಂಬ ವೃತ್ತಿಯಲ್ಲಿ ವಿಹಾರಮಾಡಬೇಕು (ಸದ್ವಿಹಾರಕೆ) ಇಂಥಾ ಸದ್ವಿಹಾರ ಮಾಡೋದಕ್ಕೆ, ಷಟ್‌ದಳ ಕಮಲವೆಂಬ ಸದನದಲ್ಲಿ ವಿದ್ಯಮಾನವಾದ ಚಿತ್ತ ಎನತಕ್ಕದೇ ದಿವ್ಯವಾದ ಮಂಟಪವು (ಚಿತ್ತ ಮಂಟಪವು) ಶ್ರೀಬಿಂಬರೂಪಿ ಪರಮಾತ್ಮಗೆ ಬಾರಿ ಬಾರಿಗೂ ಬೀಸಿ ಗಾಳಿ ಹಾಕೋಣವೇ, ನಾಸಿಕಾದ್ವಾರ

ದಿಂದ ಒಳಗೆ ಹೊರಗೆ ಸಂಚಾರಮಾಡತಕ್ಕ ಶ್ವಾಸರೂಪವಾದ ಗಾಳಿಯೇ ಚಾಮರಗಳು. ಇಂಥಾ ದೇವರ ಎದುರಿಗೆ ನಾನಾವಿಧ ಅಭಿನಯದಿಂದ ನರ್ತನಮಾಡತಕ್ಕ ಸ್ತ್ರೀ ಎಂಬುವಳೇ ಬುದ್ಧಿ ಎಂದರೆ ಸ್ತ್ರೀ (ವಿಲಾಸಿನಿ ಬುದ್ಧಿ) ಗೋಪೀ ದೇವೇರಿಂದ ಉದರಕ್ಕೆ ದಾಮದಿಂದ ಕಟ್ಟಿಸಿಕೊಂಡಂಥಾ ಬಿಂಬ ರೂಪಿಯಾದ ಶ್ರೀ ಪರಮಾತ್ಮಗೆ (ದಾಮೋದರಗೆ), ಅಷ್ಟಾಂಗದಿಂದ ಸಹಿತವಾದ ನಮಸ್ಕಾರಗಳು (ಸಾಷ್ಟಾಂಗ ಪ್ರಣಾಮಗಳೇ) ಸಮೀಚೀನವಾದ ಅನುಸಂಧಾನದಿಂದ ಲಯ ಚಿಂತನಮಾಡಿ ಶಯನಮಾಡತಕ್ಕದ್ದು. (ಸುಶಯನಗಳು). ಏಕಾದಶೇಂದ್ರಿಯಗಳು ಸಮೀಚೀನವಾದ ಭಕ್ತಿಯಿಂದ ಶ್ರೀ ಪರಮಾತ್ಮನ ಪಾದಕ್ಕೆ ಅರ್ಪಿಸಿ, ದೈನ್ಯನಾಗೋಣವೇ ಸಾಷ್ಟಾಂಗ ನಮಸ್ಕಾರಗಳು –ಎಂತ ತಾತ್ಪರ್ಯ. ॥೨೨॥

**ವಿಶೇಷಾರ್ಥ :—**

"ಬುದ್ಧಿಃ ಸ್ತ್ರೀತಿ ಪ್ರಾಣಾಗ್ನಿಹೋತ್ರ ಖಂಡವಾನಾತ್ ।"
"ಬುದ್ಧಿರ್ಮನೀಷಾ ಧಿಷಣೇತ್ಯಮರಃ ॥"

**(೨) "ಭಾವಪ್ರಕಾಶಿಕೆ" ವ್ಯಾಖ್ಯಾನ :—**

ಬಹು ಪರಾಕ್ರಮಶಾಲಿಯಾದ ಪರಮಾತ್ಮನ ಅರಮನೆಯಂತಿರುವುದು ನಮ್ಮ ಹೃತ್ಕಮಲವು. ಇದಕ್ಕೆ ಜ್ಞಾನೇಂದ್ರಿಯ, ಕರ್ಮೇಂದ್ರಿಯಗಳೆಂಬ ಹತ್ತು ಇಂದ್ರಿಯಗಳು, ಕನ್ನಡಿಯ ಸಾಲುಗಳು. ದೋಷದೂರನಾದ ಶ್ರೀ ಹರಿಯು ಚೆನ್ನಾಗಿ ವಿಹರಿಸುವುದಕ್ಕೆ ನಮ್ಮ ಚಿತ್ತವೇ ಮಂಟಪವು, ಪುನಃ ಪುನಃ ನಾವು ಬಿಡುವ ಶ್ವಾಸಗಳೇ ಚಾಮರಗಳು. ಬುದ್ಧಿಯೇ ವೇಶ್ಯೆಯು (ವಿಲಾಸಿನಿ) ದಾಮೋದರನಿಗೆ ಸಾಷ್ಟಾಂಗ ಪ್ರಣಾಮಗಳೆಂಬುದೇ ನಾವು ಮಲಗುವುದೆಂದು ಚಿಂತಿಸಬೇಕು. ॥೨೨॥

**(೩) "ಭಾವದರ್ಪಣಟೀಕಾ" ವ್ಯಾಖ್ಯಾನ :—**

"ಉರುಪಕ್ರಾಮೇತಿ" । ಉತ್ಕೃಷ್ಟವಾದ ಶೌರ್ಯವುಳ್ಳ ಶ್ರೀಹರಿಯು ಬುದ್ಧಿ ವಿಲಾಸಿನೀ ಸ್ತ್ರೀ ಎಂಬರ್ಥ ॥

"ಬುದ್ಧಿ ಸ್ತ್ರೀತಿ ಪ್ರಾಣಾಗ್ನಿಹೋತ್ರ ಖಂಡವಮಾನಾತ್"
"ಬುದ್ಧಿರ್ಮನೀಷಾ ಧಿಷಣೇತ್ಯಮರಃ" ||

– ಎಂದು ಪ್ರಮಾಣಗಳು ಆಧಾರ ||೨೨||

(೫) "ಗುರುಹೃದಯ ಪ್ರಕಾಶಿಕೆ" ವ್ಯಾಖ್ಯಾನ :—

ಬಹು ಸಮರ್ಥನಾದ ದೇವರ ಅರಮನೆ ಎಂಬ ದೇಹಕ್ಕೆ ಜ್ಞಾನೇಂದ್ರಿಯ ೫, ಕರ್ಮೇಂದ್ರಿಯ ೫ ಸಹ ಹತ್ತು ಕರಣಗಳೇ ಕನ್ನಡಿಯ ಸಾಲುಗಳು, ದೋಷ ದೂರನಾದ ದೇವರ ಒಳ್ಳೆ ಕ್ರೀಡೆಗಳಿಗೆ ಚಿತ್ತವೆಂಬ ಮನಸ್ಸಿನ ಭಾಗವೇ ಕ್ರೀಡಾಮಂಟಪವು, ತಿರುಗಿ ತಿರುಗಿ ಬೀಸುವ ಶ್ವಾಸಗಳೇ ದೇವರಿಗೆ ಚಾಮರವು. ವೈಷಯಿಕ ಬುದ್ಧಿ ಎಂಬ ಮನಸ್ಸಿನ ಭಾಗವೇ ವಿಲಾಸಿನಿ ಎಂಬ ವೇಶ್ಯಾಸ್ತ್ರೀಯು. ಮಲಗುವುದೇ ದಾಮೋದರನಾದ ಶ್ರೀಹರಿಗೆ ಸಾಷ್ಟಾಂಗ ನಮಸ್ಕಾರವು. ||೨೨||

## ಸರ್ವವ್ಯಾಖ್ಯಾನಸಾರಸಂಗ್ರಹ

ಸಾಧನ ಶರೀರವಾದ ಈ ದೇಹವನ್ನು ಬಿಂಬರೂಪಿ ಶ್ರೀಪರಮಾತ್ಮನ ಅರಮನೆ ಎಂದು ನಿರೂಪಿಸುತ್ತಾರೆ ಪ್ರಸಕ್ತ ಪದ್ಯದಿಂದ.

ಶ್ರೀ ಹರಿಯು ಅಸದೃಶ ಸಾಮರ್ಥ್ಯಸಂಪನ್ನನು. ಸರ್ವಸಮರ್ಥನೂ ಸರ್ವಶಕ್ತನೂ, ಸರ್ವನಿಯಾಮಕನೂ ಆದ ಶ್ರೀಹರಿಯ ಶಕ್ತಿ ಸಾಮರ್ಥ್ಯಾದಿ ಗುಣಾತಿಶಯಗಳು ಅನುಪಮ ಹಾಗೂ ಅನಂತ. ಇಂತಹ ಉರುಪರಾಕ್ರಮಿಯಾದ ಶ್ರೀಪರಮಾತ್ಮನಿಗ ಈ ಶರೀರಗತ ಅಷ್ಟದಳ ಹೃದಯ ಕಮಲವೇ ಅರಮನೆ ಎಂದೆನಿಸುವುದು. ಇದರಲ್ಲಿ ಜಗತ್ಪ್ರಭುವೆನಿಸಿದ ಶ್ರೀ ಪರಮಾತ್ಮನು ಮೂಲೇಶನಾಮಕನಾದಿ ಆವಾಸವಾಗಿದ್ದಾನೆ. ಅಲ್ಲದೇ ತುಂದಿಯಿಂದ ಪ್ರಾರಂಭಿಸಿ, ಬ್ರಹ್ಮರಂಧ್ರದವರೆಗೂ ಇರುವ ಆರು ಕಮಲಗಳಲ್ಲಿ ಆವಾಸ

ನಾಗಿದ್ದು, ಈ ದೇಹಗತ ಸಮಸ್ತ ವ್ಯಾಪಾರ ವಿಶೇಷಗಳನ್ನೂ ತಾನು ಮಾಡಿ ಮಾಡಿಸುತ್ತಿರುವನು. ಅರಮನೆ ಎಂದಮೇಲೆ ರಾಜನಿಗೆ ಆವಾಸ ಯೋಗ್ಯ ವಾದ ಸ್ಥಾನವು. ಅದು ಸಕಲ ವೈಭವದಿಂದ ಕೂಡಿರುವುದು. ನಾನಾ ಪ್ರಕಾರವಾದ ಭೋಗ ಭಾಗ್ಯಗಳ ಆಗರವು,

(೧) ಇಂತಹ ಶ್ರೀಶನ ಅರಮನೆಗೆ ಪಂಚಜ್ಞಾನೇಂದ್ರಿಯಗಳು ಮತ್ತು ಪಂಚ ಕರ್ಮೇಂದ್ರಿಯಗಳು, ಅಂದರೆ, ದಶೇಂದ್ರಿಯಗಳೇ ಕನ್ನಡಿಯ ಸಾಲು ಗಳು. ಅರಮನೆಯಲ್ಲಿ ಇಂತಹ ಕನ್ನಡಿಯ ಸಾಲುಗಳು ಅಲಂಕಾರ ದ್ಯೋತಕ ವಾಗಿಯೂ ಮತ್ತು ಪ್ರತಿಬಿಂಬವನ್ನು ನೋಡಿಕೊಳ್ಳಲು ಸಹಾಯಕವಾಗಿಯೂ ಇರುವುವು. ಅಂತೆಯೇ ಹೃತ್ಕಮಲಮಧ್ಯನಿವಾಸಿಯಾದ ಬಿಂಬರೂಪೀ ಶ್ರೀಹರಿಯು ದೇಹಗತ ವ್ಯಾಪಾರಗಳನ್ನು ಈ ದಶೇಂದ್ರಿಯಗಳ ದ್ವಾರಾಮಾಡಿ ಮಾಡಿಸುತ್ತಿರುವುದರಿಂದ "ಕನ್ನಡಿಯ ಸಾಲು" ಎಂಬ ಉಪಮಾನವು ಅತ್ಯಂತ ಸಮಂಜಸ,

(೨) ಶ್ರೀ ಪರಮಾತ್ಮನು ಅನಂತ ಕಲ್ಯಾಣ ಗುಣಗಣಪರಿಪೂರ್ಣನು. ಅತ ಏವ ಸಮಸ್ತ ದೋಷವಿದೂರನು. ಇಂತಹ ಅರವಿದೂರನಾದ ಶ್ರೀ ಹರಿಯು ಈ ದೇಹದ ಸರ್ವಾಂಗಗಳಲ್ಲಿಯೂ ವ್ಯಾಪ್ತರೂಪದಿಂದ ಇದ್ದು ವಿಹರಿಸುವನು. ಶ್ರೀ ಪರಮಾತ್ಮನ ಸದ್ವಿಹಾರಕ್ಕೆ ತಮ್ಮ ಚಿತ್ತವೆಂಬುದೇ ದಿವ್ಯಮಂಟಪವು. ಚಿತ್ತವು ಪಂಚ ಮನೋವೃತ್ತಿಗಳಲ್ಲಿ ಒಂದು. ಸಂಕಲ್ಪ ಶಕ್ತಿಯು ಚಿತ್ತದ ಕಾರ್ಯಲಕ್ಷಣವು. ಈ ಕಾರಣದಿಂದಲೇ ಚಿತ್ತವೆಂಬ ಭವ್ಯ ಮಂಟಪದಲ್ಲಿ ತಾನಿದ್ದು ಸತ್ಯಸಂಕಲ್ಪನಾದ ಶ್ರೀಹರಿಯು ಚಿತ್ತಕ್ಕೆ ಸಂಕಲ್ಪಶಕ್ತಿ ಯನ್ನು ಪ್ರೇರಿಸುವನು.

(೩) ಉಸಿರಾಡುತ್ತಿರುವಾಗ, ನಾಸಿಕ ದ್ವಾರಗಳ ಮೂಲಕ ಗಾಳಿ ಯನ್ನು ಒಳಗೆ ಸೇದಿಕೊಂಡು ಹೊರಗೆ ಬಿಡುತ್ತೇವೆ. ಇಂತು ಪುನಃ ಪುನಃ

ಆವರ್ತನವಾಗುತ್ತಿರುವ ಈ ಶ್ವಾಸಕ್ರಿಯೆಯೇ. ಹೃತ್ಕಮಲಸ್ಥನಾದ ಬಿಂಬನಿಗೆ ಬೀಸುವ ಚಾಮರಗಳೆಂದು ಅನುಸಂಧಾನಿಸಬೇಕು.

(೪) ಬುದ್ಧಿಯು ಜ್ಞಾನವನ್ನು ನಿಶ್ಚಯಿಸುವ ಮನೋವೃತ್ತಿಯು. ರಾಜನು ಸಭಾಮಂದಿರಲ್ಲಿ ಸಿಂಹಾಸನಾರೂಢನಾಗಿರುವಾಗ, ಅವನ ಮುಂದೆ ಲಾವಣ್ಯವತಿಯರಾದ ನರ್ತಕಿಯರು ವಿವಿಧ ನಾಟ್ಯ ಭಂಗಿಗಳಲ್ಲಿ ನರ್ತಿಸುವರು. ಅಂತಹ ರಾಜನರ್ತಕಿಯರಿಗೆ- "ವಿಲಾಸಿನಿ"ಗಳೆಂದು ಹೆಸರು. ಹಾವ, ಭಾವ ವಿಲಾಸಗಳಿಂದ ರಾಜನನ್ನು ಮೋದಗೊಳಿಸುವರು. ಅಂತೆಯೇ ಜ್ಞಾನ ನಿರ್ಣಾಯಕ ಶಕ್ತಿವುಳ್ಳ ಬುದ್ಧಿಯು ಶ್ರೀಹರಿಗೆ ವಿಲಾಸಿನಿ ಎಂದೆನಿಸುವುದು.

(೫) ಪ್ರತಿದಿನವೂ ಮಲಗುವ ವ್ಯಾಪಾರ ವಿಶೇಷವೇ ದಾಮೋದರ ನಾಮಕನಾದ ಶ್ರೀಪರಮಾತ್ಮನಿಗೆ ಸಾಷ್ಟಾಂಗ ನಮಸ್ಕಾರಗಳು. ನಂದ ಗೋಕುಲದಲ್ಲಿ ಗೋಪಿದೇನಿಯು ಬಾಲರೂಪೀ ಶ್ರೀಕೃಷ್ಣನ ತುಂಟತನವನ್ನು ತಾಳಲಾರದೆ, ಕರುವನ್ನು ಕಟ್ಟುವ ಹಗ್ಗದಿಂದ (ದಾಮ), ಅವನ ಸೊಂಟವನ್ನು ಕಟ್ಟಿ, ಒರಳಿಗೆ ಕಟ್ಟಿ ಹಾಕಬೇಕೆಂದು ಪ್ರಯತ್ನಿಸಿದಳು, ಆಗ ಅಗಮ್ಯ ಮಹಿಮನಾದ ಕೃಷ್ಣನ ವ್ಯಾಪಾರದಿಂದ ಆ ಹಗ್ಗವು ಒಂದು ಚೋಟುದ್ದ ಸಾಲದೇ ಹೋಯಿತು. ಆ ಗೋಪೀಕಂದನ ಉದರವಾದರೋ ತೆಳ್ಳಗೆ ಮೊದಲಿನಂತೆಯೇ ಇತ್ತು. ಇದರಿಂದ ಆಶ್ಚರ್ಯಚಕಿತಳಾದ ಗೋಪಿಯು ಅಚಿಂತ್ಯಾದ್ಭುತ ಚರಿತನಾದ ಆ ಅಗಮ್ಯಮಹಿಮನಿಗೆ ಶರಣಾಗತಳಾಗಿ ಪ್ರಾರ್ಥಿಸಿದಳು. ಅವನಿಗೆ ಸಾಷ್ಟಾಂಗಪೂರ್ವಕ ನಮಸ್ಕಾರ ಮಾಡಿದಳು. ಅದರಿಂದ ಕೃಷ್ಣನು ಅವಳನ್ನು ಅನುಗ್ರಹಿಸಿದನು. ಇಂತಹ ದಾಮೋದರ ನಾಮಕನಾದ ಶ್ರೀಪರಮಾತ್ಮನಿಗೆ, ಸುಶಯನಗಳೇ ಅಷ್ಟಾಂಗಪೂರ್ವಕವಾದ ನಮಸ್ಕಾರಗಳೆಂದು ಅನುಸಂಧಾನದಿಂದ ಹೃತ್ಕಮಲಮಧ್ಯನಿವಾಸಿಯಾದ ಬಿಂಬನನ್ನು ಅರ್ಚಿಸಬೇಕೆಂದು ತಾತ್ಪರ್ಯ ॥೨೨॥

## ಪದ್ಯ (೨೩)

**ಮೂಲ :-**

**ಮಾರಮಣನರಮನೆಗೆ ಸುಮಹಾ ।**
**ದ್ವಾರವೆನಿಸುವ ವದನಕೊಪ್ಪುವ ।**
**ತೋರಣ ಸ್ಮಶ್ರುಗಳು ಕೇಶಗಳೇ ಪತಾಕೆಗಳು ॥**
**ಊರಿನಡೆವಂಘ್ರಿಗಳು ಜಂಘಗ ।**
**ಳೂರು ಮಧ್ಯೋದರ ಶಿರಗಳಾ ।**
**ಗಾರದುಪ್ಪರಿಗೆಗಳು ಕೋಶಗಳೈದು ಕೋಣೆಗಳು ॥೨೩॥**

**ಅವತರಣಿಕೆ :-**

ಈ ಶರೀರವೆಂಬ ಅರಮನೆಯ ವಿವರಗಳನ್ನು ಇನ್ನೂ ವಿಸ್ತಾರವಾಗಿ ತಿಳಿಸುತ್ತಾರೆ ಪ್ರಸಕ್ತ ಈ ಪದ್ಯದಿಂದ.

ರಮಾಪತಿಯಾದ ಶ್ರೀಹರಿಗೆ ಈ ಶರೀರವೇ ಅರಮನೆಯು. ಅದರ ಮಹಾ ದ್ವಾರವೇ ಬಾಯಿಯು. ಅದರ ಮೇಲೆ ಶೋಭಾಯಮಾನವಾದ ಮೀಸೆಗಳೇ ತೋರಣಗಳು. ಶಿರೋಗತ ಕೂದಲುಗಳೇ ಧ್ವಜಪತಾಕೆಗಳು. ನೆಲದ ಮೇಲೆ ಊರಿ ನಡೆಯುವ ಪಾದದ್ವಯಗಳು, ಅದರ ಮೇಲಿರುವ ಮೊಣಕಾಲುಗಳು, ಅದಕ್ಕೆ ಮೇಲಿರುವ ತೊಡೆಗಳು, ಉದರದ ಮಧ್ಯಭಾಗ ಮತ್ತು ಶಿರಸ್ಸು ಇವುಗಳೇ ಒಂದರಮೇಲೆ ಮತ್ತೊಂದರಂತಿರುವ ಉಪ್ಪರಿಗೆ ಗಳು. ಅನ್ನಮಯಾದಿ ಪಂಚಕೋಶಗಳು ಕೊಠಡಿಗಳು ಎಂದು ಅನುಸಂಧಾನ ಮಾಡಬೇಕೆಂದು ತಾತ್ಪರ್ಯ ॥೨೩॥

**ಪ್ರತಿಪದಾರ್ಥ :—**

**ಮಾರಮಣನ**=ಲಕ್ಷ್ಮೀಪತಿಯಾದ ಶ್ರೀಮನ್ನಾರಾಯನ **ಅರ ಮನೆಗೆ**=ಅರಮನೆಯಂತಿರುವ ಈ ಶರೀರಕ್ಕೆ **ಸುಮಹಾದ್ವಾರವೆನಿ**

**ಸುವ**= ಶ್ರೇಷ್ಠವಾದ ಹೆಬ್ಬಾಗಿಲು ಎಂದೆನಿಸುವ **ವದನಕೆ**= ಮುಖಕ್ಕೆ (ಬಾಯಿಯು) **ಒಪ್ಪುವ**= ಶೋಭಾಯಮಾನವಾದ (ಅಲಂಕೃತವಾಗಿರುವ) **ಸ್ಮಶ್ರುಗಳು**= ಮೀಸೆಗಳು **ತೋರಣ**= ತೋರಣವೆಂದೆನಿಸುವುವು **ಕೇಶಗಳೇ**= ತಲೆಯ ಕೂದಲುಗಳೇ **ಪತಾಕೆಗಳು**= ಧ್ವಜಪಟಗಳು **ಊರಿನಡೆವ**= ನೆಲದಮೇಲೆ ಊರಿಕೊಂಡು ನಡೆಯುವ **ಅಂಘ್ರಿಗಳು**= ಪಾದಗಳು **ಜಂಘೆಗಳು**= ಮೊಣಕಾಲು ಮತ್ತು ಆದರ ಕೆಳಭಾಗಗಳು **ಊರು**= ತೊಡೆಗಳು **ಮಧ್ಯ**= ನಡುವಿನ ಸೊಂಟ ಭಾಗವು **ಉದರ**= ಹೊಟ್ಟೆಯ ಪ್ರದೇಶವು **ಶಿರಗಳು**= ತಲೆ ಇವುಗಳೇ **ಆಗಾರದ**= ಈ ದೇಹವೆಂಬ ಮನೆಯ **ಉಪ್ಪರಿಗೆಗಳು**= ಅಂತಸ್ತಿನಂತಿರುವ ಮಹಡಿಗಳು **ಐದು ಕೋಶಗಳು**= ಅನ್ನಮಯ, ಪ್ರಾಣಮಯ, ಮನೋಮಯ, ವಿಜ್ಞಾನಮಯ ಮತ್ತು ಆನಂದಮಯವೆಂಬ ದೇಹಗತ ಪಂಚಕೋಶಗಳೇ **ಕೋಣೆಗಳು**= ಈ ದೇಹಾಖ್ಯ ಅರಮನೆಯ ಕೊಠಡಿಗಳು ||೨೩||

## ವ್ಯಾಖ್ಯಾನಗಳು

### (೧) ಶ್ರೀಸಂಕರ್ಷಣ ಒಡೆಯರ ವಾಖ್ಯಾನ :-

ಇನ್ನೂ ದೇಹಾಖ್ಯ ಪಟ್ಟಣದ ವಿಚಾರವೇ ಹೇಳುತ್ತಾರೆ.

ಹೃದಯಾಂತರ್ಗತನಾದ ಲಕ್ಷ್ಮೀಪತಿಯಾದ ಶ್ರೀ ನಾರಾಯಣದೇವರಾದ ಬಿಂಬರೂಪಿ ಶ್ರೀಪರಮಾತ್ಮನಿಗೆ (ಮಾರಮಣನರಮನೆಗೆ), ಶ್ರೇಷ್ಠವಾದ ದ್ವಾರವೆನಿಸುವ (ಸುಮಹಾದ್ವಾರವೆನಿಸುವ), ವದನದ ಮೇಲೆ ತುಟಿಯಲ್ಲಿ (ಸ್ಮಶ್ರುಗಳು) ಚೂತಪತ್ರಗಳಿಂದ ಕಟ್ಟಿರುವ ತೋರಣಗಳು(ತೋರಣ) ಶಿರೋಗತ ಊರ್ಧ್ವವಾದ ಕೂದಲುಗಳು ಅರಮನೆಗೆ ಧ್ವಜಪತಾಕೆಗಳು. (ಕೇಶಗಳೇ ಪತಾಕೆಗಳು), ಭೂಮಿಯ ಮೇಲೆ ಊರಿ ನಡೆಯುವ ಪಾದಗಳು (ಊರಿನಡೆವಂಘ್ರಿಗಳು), ಮೊಣಕಾಲುಗಳು (ಜಂಘೆಗಳು), ತೊಡೆಗಳು (ಊರು), ಉದರ ಮಧ್ಯಪ್ರದೇಶ (ಮಧ್ಯೋದರ), ಶಿರಸ್ಸು (ಶಿರ), ಇವುಗಳು ಮನಿಗಳು (ಆಗಾರ). ಈ ಮನಿಗಳು ಒಂದರಮೇಲೆ ಒಂದು ಅಂತಸ್ತು

ಆಗಿ ಇರೋಣ (ಉಪ್ಪರಿಗೆಗಳು). ಇಂಥಾದ್ದು ದಾವುದೆಂದರೆ ಪಾದತಳದಲ್ಲಿ ಪಾತಾಳಲೋಕ, ಶಿರದಲ್ಲಿ ಸತ್ಯಲೋಕ-ಎಂತ, ಈ ಪ್ರಕಾರ ಪುರಾಣಾದಿಗಳಲ್ಲಿ ಇರುವದ್ದರಿಂದ, ಅಂತಸ್ತು ರೂಪದಿಂದ ಉಪ್ಪರಿಗೆಗಳನ್ನಾಗಿ ಮಹಡಿಮನೆ ಎಂತಲೂ ತಾತ್ಪರ್ಯ. ದೇಹದಲ್ಲಿ ಸರ್ವತ್ರ ವ್ಯಾಪಿಸಿ ಇರುವಂಥಾ ಅನ್ನ ಮಯಾದಿ ಪಂಚಕೋಶಗಳು (ಕೋಶಗಳು). ಆಯಾಯಾ ಮಹಡಿಮನೆಗಳಲ್ಲಿ ಚಿಕ್ಕಚಿಕ್ಕ ಮನಿಗಳು ಎಂತ ತಾತ್ಪರ್ಯ (ಐದು ಕೋಣೆಗಳು). ಇದುವರೆಗೂ ದೇಹವನ್ನು ಪಟ್ಟಣತ್ವೇನ ಅರ್ಪಣಕ್ರಮ ಹೇಳಿ, ಇನ್ನು ಮುಂದೆ ರಥತ್ವೇನ ವರ್ಣನ ಮಾಡುತಾರೆ.

ಹೃದಯಸ್ಥ ಬಿಂಬಮೂರ್ತಿ ಪರಮಾತ್ಮನಿಗೆ ಮುಖವೇ ಮಹಾದ್ವಾರ. ತುಟಿಯಲ್ಲಿ ವಿದ್ಯಮಾನವಾದ ಮೀಸೆಗಳೇ ಮಹಾದ್ವಾರಕ್ಕೆ ತೋರಣ. ಶಿರಃ ಕೇಶ ಪತಾಕೆಗಳು. ಪಾದ, ಜಂಘೆ, ಮಧ್ಯ ಶರೀರ, ಶಿರ ಇವುಗಳೇ ಉಪ್ಪರಿಗೆ ಗಳು. ಪಂಚಕೋಶಗಳೇ ಚಿಕ್ಕ ಕೊಠಡಿಗಳು-ಎಂತ ಅನುಸಂಧಾನಮಾಡಿ ಅರ್ಪಣ ಮಾಡಬೇಕು ॥೨೩॥

## (೨) "ಭಾವಪ್ರಕಾಶಿಕೆ"-ವ್ಯಾಖ್ಯಾನ :-

ಶ್ರೀಪತಿಯ ಅರಮನೆ ಎಂಬ ಈ ದೇಹಕ್ಕೆ ಮಹಾದ್ವಾರವಂತಿರುವ ಮುಖದಲ್ಲಿ ಶೋಭಿಸುವ ಮೀಸೆಗಳೇ ತೋರಣಗಳು.

**"ತೋರಣೋಽಸ್ತ್ರೀ ಬಹಿರ್ದ್ವಾರಂ"** ಎಂಬ ಅಮರಕೋಶ ರೀತ್ಯಾ ಊರಿನ ಹೊರಗಿನ ಬಾಗಿಲಿಗೆ ಹೆಸರು. ತಲೆ ಕೂದಲುಗಳೇ ಧ್ವಜಪಟಗಳು. ಭೂಮಿಯಲ್ಲಿ ಊರಿ ನಡೆಯುವ ಪಾದಗಳೂ, ಅದರ ಮೇಲೆ ಮೊಳಕಾಲಿನ ಕೆಳಗಿನ ಖಂಡವೂ (ಜಂಘೆಗಳು), ತೊಡೆಗಳೂ, ಮಧ್ಯ ಅಂದರೆ, ಸೊಂಟ, ಉದರ, ಶಿರಸ್ಸು ಇವುಗಳೇ ಮನೆಯ ಉಪ್ಪರಿಗೆಗಳು. ಅನ್ನ, ಪ್ರಾಣ, ಮನಸ್ಸು, ವಿಜ್ಞಾನ, ಆನಂದ ಎಂಬ ಐದು ಕೋಶಗಳೇ ಐದು ಕೊಠಡಿಗಳು. ಈ ಪ್ರಕಾರ ನಮ್ಮ ದೇಹವನ್ನೇ ಪರಮಾತ್ಮನ ಅರಮನೆ ಎಂದು ಭಾವಿಸಿ, ಪೂಜಿಸುವುದೊಂದು ಸಾಧನವು ॥೨೩॥

(೨) "ಭಾವದರ್ಪಣಟೀಕಾ" ವ್ಯಾಖ್ಯಾನ:—

ಈಗ ಮುಖವೇ ದ್ವಾರವೆಂತಲೂ, ಅದಕ್ಕೆ ಒಪ್ಪುವ ಸ್ಮಶ್ರು ಎಂದರೆ, ಮೀಸೆಗಳೇ ತೋರಣವೆಂತಲೂ, ಶಿರಃಕೇಶವೇ ಪತಾಕಗಳು, ಪಾದ, ಜಂಘ ಮಧ್ಯದೇಹ ಶಿರಗಳೇ ಮನೆ ಉಪ್ಪರಿಗೆಗಳು, ಪಂಚಕೋಶಗಳೇ ಚಿಕ್ಕ ಮನೆಗಳು ಎಂತಲೂ ಹೇಳುತ್ತಾರೆ. "ಮಾರಮಣೇತಿ" ॥೨೩॥

(೪) ಶ್ರೀ ವಾದಿರಾಜಾಚಾರ್ಯರ ವ್ಯಾಖ್ಯಾನ (ಸಂಸ್ಕೃತ ಮೂಲ) :

"ಮಾರಮಣ" ಇತಿ॥ ಚೈತ್ಯ "ಧ್ವಜಪತಾಕಾಭಿಃ" ಇತಿ॥ ಧ್ವಜಃ ಕೇಶ ಪಾಶಃ॥ ಉಪರ್ಯುಪರಿ ಸತ್ವಾತ್॥ "ಕ್ಲುಪ್ತ ಹರ್ಮ್ಯ ಸ್ಥಲೀಮ್- ಇತಿ ಚ ॥೩೩॥

ಕನ್ನಡಾರ್ಥ :—

ತಲೆಯ ಮೇಲ್ಭಾಗದಲ್ಲಿ ಇರುವುದರಿಂದ ಕೇಶಪಾಶಗಳು ಧ್ವಜಗಳೆನಿಸುವುವು, ಈ ವಿವರಗಳು ಶ್ರೀಮದ್ಭಾಗವತದಲ್ಲಿ ಪುರಂಜನೋಪಾಖ್ಯಾನ ಟೀಕಾದಲ್ಲಿ ಕೊಡಲ್ಪಟ್ಟಿವೆ. ಅಲ್ಲಿ ವಿವರಗಳ ಪರಿಶೀಲನಾ ನಡೆಯಿಸಬಹುದು॥೨೩॥

(೫) "ಗುರುಹೃದಯ ಪ್ರಕಾಶಿಕೆ"-ವ್ಯಾಖ್ಯಾನ : —

ರಮಾಪತಿಯ ಪಟ್ಟಣವೆಂಬ ದೇಹಕ್ಕೆ, ಮಹಾದ್ವಾರ ಎಂದರೆ, ದೊಡ್ಡ ಬಾಗಿಲೆಂದು ಕರೆಸುವ, ಮುಖಕ್ಕೆ ಅಲಂಕಾರವಾದ ಮೀಸೆಯೇ ತೋರಣವು. ತಲೆಯ ಮೇಲಿನ ಕೂದಲುಗಳೇ ಪತಾಕೆಗಳೆಂಬ ಧ್ವಜಪಟಗಳು. ಊರಿ ನಡೆಯುವ ಪಾದಗಳು, ಅದರ ಮೇಲಿನ ಮೊಣಕಾಲುಗಳು, ತೊಡೆಗಳು ಮಧ್ಯ ದೇಹ ಹೊಟ್ಟೆ ಎಂಬ ಮೇಲಿನ ಅವಯವಗಳೇ ಮನೆಯ ಉಪ್ಪರಿಗೆಗಳು. ಅನ್ನಮಯ, ಪ್ರಾಣಮಯ, ಮನೋಮಯ, ವಿಜ್ಞಾನಮಯ ಮತ್ತು ಆನಂದಮಯ ಎಂಬ ಚೀಲಗಳೇ ಸಣ್ಣ ಮನೆಗಳು.

"ಭೂತೈರ್ಮಹದ್ಭಿರ್ಯ ಇಮಾಃ ಪುರೋ ವಿಭುಃ ನಿರ್ಮಾಯ
ಶೇತೇಯದಮೂಷು ಪುರುಷಃ ||
ಭುಂಙ್ತೇಗುಣಾನ್ ಷೋಡಷೋಡಶಾತ್ಮಕಃ ||"

ಎಂಬ ಭಾಗವತಾರ್ಥ ಇದರಿಂದ ವಿವರಿಸಿತು. ||೨೩||

## ಸರ್ವವ್ಯಾಖ್ಯಾನಸಾರ ಸಂಗ್ರಹ

ಶರೀರವೆಂಬ ಈ ಅರಮನೆಯ ವಿವರಗಳನ್ನು ಇನ್ನೂ ವಿಶದೀಕರಿಸುತ್ತಾರೆ. ಇಂದಿರಾಪತಿಯಾದ ಶ್ರೀಪರಮಾತ್ಮನಿಗೆ ಈ ಶರೀರವೇ ಅರಮನೆ ಮನೆ ಎನಿಸುವುದು.

(೧) ಇಂತಹ ಅರಮನೆಯ ಮಹಾದ್ವಾರವೇ ಮುಖವು,

(೨) ಅರಮನೆಯ ಹೆಬ್ಬಾಗಿಲಿನಂತಿರುವ ಮುಖಗತ ಬಾಯಿಯ ತುಟಿಗಳ ಮೇಲೆ ಅಲಂಕಾರವಾಗಿ ಪರಿಶೋಭಿಸುತ್ತಿರುವ ಮೀಸೆಗಳೇ ತೋರಣಗಳು.

(೩) ತಲೆಯ ಮೇಲಿನ ಕೇಶರಾಶಿಗಳೇ ಧ್ವಜಪಟಗಳು.

(೪) ನೆಲದ ಮೇಲೆ ಊರಿ ನಡೆಯುವ ಪಾದ ದ್ವಯಗಳು, ಅದರ ಮೇಲ್ಭಾಗದ ಮೊಣಕಾಲುಗಳು, ಮಧ್ಯ ಪ್ರದೇಶವಾದ ಸೊಂಟ, ಹೊಟ್ಟೆ, ಎಲ್ಲದಕ್ಕೂ ಮೇಲಿರುವ ಶಿರಸ್ಸು ಇತ್ಯಾದಿ ಶರೀರದ ಭಾಗಗಳು ಆ ಅರಮನೆಗೆ ಅಂತಸ್ತುಗಳ ರೂಪದಲ್ಲಿರುವ ಮಹಡಿಗಳು (ಉಪ್ಪರಿಗೆಗಳು.)

(೫) ಆಯಾಯಾ ಭಾಗಗಳಲ್ಲಿ ದೇಹಾದ್ಯಂತ ವ್ಯಾಪ್ತವಾಗಿರುವ ಅನ್ನಮಯ. ಪ್ರಾಣಮಯ, ಮನೋಮಯ, ವಿಜ್ಞಾನಮಯ ಮತ್ತು ಆನಂದಮಯವೆಂಬ ಪಂಚಕೋಶಗಳು ಅರಮನೆ ಎಂಬ ಶರೀರಗತ ಚಿಕ್ಕ ಚಿಕ್ಕ ಕೊಠಡಿಗಳೆಂದು ಭಾವಿಸಿ, ಭಗವದಾರಾಧನೆ ಮಾಡಬೇಕೆಂದು ತಾತ್ಪರ್ಯ. ||೨೩||

## ಪದ್ಯ (೨೪)

**ಮೂಲ :**

ಈ ಶರೀರವೆ ರಥ ಪತಾಕ ಸು ।
ವಾಸಗಳೆ ಪುಂಡ್ರಗಳು ಧ್ವಜ ಸಿಂ ।
ಹಾಸನವೆ ಚಿತ್ತವು ಸುಬುದ್ಧಿಯೆ ಕಲಶ ಸನ್ಮನವೆ ॥
ಪಾಶ ಗುಣ ದಂಡತ್ರಯಗಳು ಶು ।
ಭಾಶುಭದ್ವಯ ಕರ್ಮಚಕ್ರ ವು ।
ಹಾ ಸಮರ್ಥಾಶ್ವಗಳು ದಶಕರಣಂಗಳೆನಿಸುವುವು॥ ॥೨೪॥

**ಅವತರಣಿಕೆ :–**

ಇನ್ನು ಪ್ರಸಕ್ತ ಪದ್ಯದಿಂದ ಶರೀರವನ್ನು ರಥತ್ವೇನ ಭಗವದರ್ಪಣ ಮಾಡುವ ಅನುಸಂಧಾನ ಮಾರ್ಗವನ್ನು ತಿಳಿಸುತ್ತಾರೆ. ಈ ಸ್ಥೂಲ ಶರೀರವೇ ರಥವು. ಶ್ರೀ ಪರಮಾತ್ಮನು ರಥಗತ ಯಜಮಾನನು. ಉಡತಕ್ಕ ವಸ್ತ್ರಗಳೇ ಧ್ವಜಪಟಗಳು. ಊರ್ಧ್ವಪುಂಡ್ರಗಳು ಧ್ವಜಗಳು. ಷಟ್ದಳ ಕಮಲಗತ ಚಿತ್ತವೆಂಬುದೇ ಶ್ರೀ ಪರಮಾತ್ಮನ ದಿವ್ಯ ಸಿಂಹಾಸನವು.ಸುದೃಢವಾದ ಬುದ್ಧಿಯು ಸಿಂಹಾಸನದ ಕಲಶ. ಮನಸ್ಸೆಂಬುದೇ ಹಗ್ಗವು. ರಥ ಚಕ್ರದ ಅಚ್ಚುಗಳೇ ಗುಣತ್ರಯಗಳು. ಪುಣ್ಯಪಾಪ ಕರ್ಮದ್ವಯಗಳೇ ರಥದ ಚಕ್ರಗಳು. ದಶೇಂದ್ರಿಯಗಳೇ ಬಲಿಷ್ಠವಾದ ಕುದುರೆಗಳು. ಈ ಪ್ರಕಾರ, ಸಾಧನ ಶರೀರವಾದ ಈ ಸ್ಥೂಲ ದೇಹವನ್ನು ರಥತ್ವೇನ ಬಿಂಬರೂಪಿಯಾದ ಶ್ರೀ ಪರಮಾತ್ಮನಿಗೆ ಅರ್ಪಿಸಬೇಕೆಂದು ಹೇಳುತ್ತಾರೆ. **"ಈ ಶರೀರವೇ"**– ಎಂಬ ಪ್ರಸಕ್ತ ಸಂಧಿಗತ ೨೪ ನೆಯ ಈ ಪದ್ಯದಿಂದ. ॥೨೪॥

**ಪ್ರತಿಪದಾರ್ಥ :–**

**ಈ ಶರೀರವೇ**= ಈ ಸ್ಥೂಲ ದೇಹವೇ **ರಥ**= ತದ್ಗತ ಬಿಂಬ ರೂಪಿ ಶ್ರೀ ಪರಮಾತ್ಮನಿಗೆ ರಥವೆನಿಸುವುದು **ಸುವಾಸಗಳೆ**= ನಾವು

ಧರಿಸುವ ದಿವ್ಯ ವಸ್ತ್ರಗಳೇ **ಪತಾಕ**=ಧ್ವಜ ಪಟಗಳು **ಪುಂಡ್ರಗಳು**=ದೇಹದಲ್ಲಿ ಧರಿಸುವ ದ್ವಾದಶ ನಾಮಗಳೇ **ಧ್ವಜ**=ಧ್ವಜಸ್ತಂಭಗಳು **ಚಿತ್ತವು**=ಷಟ್‌ದಳ ಕಮಲಗತ ಚಿತ್ತವೇ **ಸಿಂಹಾಸನವು** =ಶ್ರೀ ಪರಮಾತ್ಮನು ಉಪಸ್ಥಿತನಾಗಿರುವ ಸಿಂಹಾಸನವೆನಿಸುವುದು **ಸುದ್ಬುದ್ಧಿಯೆ**=ಸದ್ಬುದ್ಧಿಯು **ಕಲಶ**=ರಥದ ಮೇಲಿನ ಕಲಶವು **ಸನ್ಮನವೆ**=ಸಾಧುವಾದ ವಿಷಯಗಳನ್ನು ಆಲೋಚಿಸುವ ಮನಸ್ಸೆಂಬುದು **ಪಾಶ** =ಲಗಾಮುಗಳು (ಕುದುರೆಗಳನ್ನು ಹೂಡಿರುವ ಹಗ್ಗವು) **ಗುಣ**= ಸತ್ವ ರಜಸ್ತಮೋಗುಣತ್ರಯಗಳೇ **ದಂಡತ್ರಯಗಳು**=ಕುದುರೆಗಳನ್ನು ನಿಯಂತ್ರಿಸುವ ಚಾವಟಿ **ಶುಭ**=ಪುಣ್ಯ **ಅಶುಭ**=ಪಾಪ **ದ್ವಯ ಕರ್ಮ**=ಎಂಬ ಕರ್ಮದ್ವಯಗಳು (ದ್ವಂದ್ವ ಕರ್ಮಗಳ.) **ಚಕ್ರ** =ರಥದ ಗಾಲಿಗಳು **ದಶಕರಣಂಗಳು**=ದಶೇಂದ್ರಿಯಗಳು **ಮಹಾಸಮರ್ಥ**=ಅತ್ಯಂತ ಬಲಿಷ್ಠವಾದ **ಅಶ್ವಗಳು**=ರಥಕ್ಕೆ ಕಟ್ಟಿರುವ ಕುದುರೆಗಳು **ಎನಿಸುವುವು**=ಎಂದೆನಿಸುತ್ತವೆ. ||೨೪||

## ವ್ಯಾಖ್ಯಾನಗಳು

### (೧) ಶ್ರೀ ಸಂಕರ್ಷಣ ಒಡೆಯರ ವ್ಯಾಖಾನ :-

ಶರೀರವನ್ನು ರಥತ್ವೇನ ಭಗವದರ್ಪಣ ಮಾಡಬೇಕೆಂದು ಎರಡು ಶ್ಲೋಕಗಳಿಂದ ಹೇಳುತ್ತಾರೆ.

ಶರೀರವೇ ರಥ- ವರ್ತಮಾನ ಶರೀರವೇ (ಸ್ಥೂಲ ಶರೀರವೇ) ರಥ. ತದ್ಗತ ಬಿಂಬರೂಪೀ ಪರಮಾತ್ಮನೇ ರಥಗತ ಯಜಮಾನ. ಸುವಾಸಗಳೇ-ಹೊದಿಯತಕ್ಕ, ಉಡತಕ್ಕ ದಿವ್ಯ ವಸ್ತ್ರಗಳೇ. ಪತಾಕ-ಧ್ವಜಶಿರೋ ಭಾಗದಲ್ಲಿ ಕಟ್ಟಿರತಕ್ಕ ಪತಾಕೆಗಳು. ಪುಂಡ್ರಗಳು-ಊರ್ಧ್ವ ಪುಂಡ್ರ ಅಂದರೆ, ದ್ವಾದಶ ನಾಮಗಳೇ ಧ್ವಜಗಳು. ಸಿಂಹಾಸನವೆ-ರಥದಲ್ಲಿ ದೇವರು ಕೂಡತಕ್ಕ ಸಿಂಹಾಸನಾ ರೂಪವಾದ ದಿವ್ಯ ಆಸನವೇ, ಚಿತ್ತವು-ಷಟ್‌ದಳ ಕಮಲಗತ ಚಿತ್ತವು, ಇದು ಪೂರ್ವ ಸ್ಮರಣ ಶಕ್ತಿಯಾದ ಕಡಿಯಿಂದ ಸಿಂಹಾಸನವೆನಿಸುವುದು, ಸುಬುದ್ಧಿಯೇ ಕಲಶ-ಅಷ್ಟದಳ ಕಮಲಗತ ಸಮೀಚೀನವಾದ ತಾರ

ತಮ್ಮ ಪಂಚಭೇದಯುಕ್ತವಾದ ದೃಢವಾದ ಬುದ್ಧಿಯೇ ಸಿಂಹಾಸವದ ಕಳಸವು. ನಿಶ್ಚಯಾತ್ಮಕವಾದಂಥಾದ್ದು, ಸನ್ಮನವೇ ಪಾಶ–ಸಾಧು ಆಲೋಚನಾತ್ಮಕ ಮನಸ್ಸು ಅಶ್ವಗಳು ಕಟ್ಟತಕ್ಕ ಹಗ್ಗಗಳು. ಗುಣ-ಸತ್ವರಜಸ್ತಮೋ ಗುಣ ತ್ರಯಗಳು. ದಂಡ ತ್ರಯಗಳು-ರಥಚಕ್ರಕ್ಕೆ ಆಧಾರ ಭೂತಗಳಾದ ಮೂರು ಇರುಚುಗಳು (ಕಬ್ಬಿಣದ ಅಚ್ಚುಗಳು) ಶುಭಾಶುಭದ್ವಯ ಕರ್ಮಚಕ್ರ-ಪುಣ್ಯ ಕರ್ಮ ಪಾಪ ಕರ್ಮ ಎನತಕ್ಕದ್ದು ಎರಡೂ ಒಂದೊಂದು ಇರುಚಿಗೆ ಎರೆಡೆರಡು ಚಕ್ರದ ಮ್ಯಾರಿಗೆ ಮೂರು ಇರುಚಿಗೂ ಆರು ಚಕ್ರಗಳು ಮಹಾ ಸಮರ್ಥಾಶ್ವಗಳು-ರಥವನ್ನು ಸೆಳೆಯತಕ್ಕ ರಥಕ್ಕೆ ಕಟ್ಟಲ್ಪಟ್ಟ ಅತ್ಯಂತ ಶ್ರೇಷ್ಠ ಗಳಾದ ಬಲಿಷ್ಠವಾದ ಕುದುರೆಗಳು. ದಶಕರಣಂಗಳೆನಿಸುವುವು-ದಶೇಂದ್ರಿಯ ಗಳಿಂದ ಕಾರ್ಯ ನಡೆತದೆ. ಆದ ಕಡಿಯಿಂದ ಈ ಅನುಸಂಧಾನ ಯಾವತ್ತು ಅಭಿಮಾನಿ ದೇವತಾಪರವೆಂದು ತಿಳಿಯಬೇಕು. ಅಂತು, ಅಧಿಭೂತ, ಅಧ್ಯಾತ್ಮ ಮತ್ತು ಅಧಿದೈವ ಈ ಮೂರರಲ್ಲಿ ಸಮನ್ವಯ ಮಾಡಿ, ಅನು ಸಂಧಾನ ಮಾಡಬೇಕು ಎಂತ ತಾತ್ಪರ್ಯ,

**ವಿಶೇಷಾರ್ಥ :—**

"ಏಷ ಏವ ದೇವರಥಃ"-ಇತಿ ಶ್ರುತೇಃ ||
"ಇದಂ ಶರೀರಂ ಶ್ರೀವಿಷ್ಣು ರಥಮಿತ್ಯನುಚಿಂತಯೇತ್ ||

-ಇತಿ ಪ್ರಕಾಶಸಂಹಿತಾಯಾಂ || ||೨೪||

(೨) "ಭಾವಪ್ರಕಾಶಿಕೆ" ವ್ಯಾಖ್ಯಾನ:-

ನಮ್ಮ ದೇಹವನ್ನು ರಥವೆಂತಲೂ, ಪರಮಾತ್ಮನು ರಥಿಕನೆಂತಲೂ, ಅನುಸಂಧಾನಮಾಡಿ ಪೂಜಿಸುವುದು ಒಂದು ಪ್ರಕಾರ ಸಾಧನವೆಂದು ಎರಡು ಪದ್ಯಗಳಿಂದ ಹೇಳುತ್ತಾರೆ.

ಭಾಗವತ ಚತರ್ಥಸ್ಕಂದ ೨೯ ನೆಯ ಅಧ್ಯಾಯ ೧೮ ನೆಯ ಶ್ಲೋಕದ ಮೊದಲು -

**"ದೇಹೋ ರಥಸ್ತ್ವಿಯಿಂದ್ರಿಯಾಶ್ವಃ ಸಂವತ್ಸರ ವಯೋಗತಿಃ ।**
**ರಶ್ಮಿರ್ಬುದ್ಧಿ ಸೂತೋ ಹೃನ್ನೀಡೋ ದ್ವಂದ್ವ ಕೂಬರಃ ॥"**

ಇತ್ಯಾದಿ ವಾಕ್ಯಗಳ ಅಭಿಪ್ರಾಯವನ್ನೇ ದಾಸರಾಯರು ಹೇಳಿರುವರು. ಈ ಶರೀರವೇ ರಥವು. ನಾವು ಧರಿಸಿರುವ ವಸ್ತ್ರಗಳೇ ಪತಾಕೆಗಳು. ದ್ವಾದಶ ನಾಮಗಳೇ ಗರುಡ ಚಿಹ್ನೆಯಿಂದ ಕೂಡಿದ ಧ್ವಜವು. ನಮ್ಮ ಚಿತ್ತವೇ ಕೂಡುವ ಸಿಂಹಾಸನವು. ಭಗವದ್ವಿಷಯಕ ಬುದ್ಧಿಯೇ ರಥವ ಮೇಲಿನ ಕಲಶವು. ಭಗವತ್ಪಾದಾರವಿಂದದಲ್ಲಿರುವ ಮನಸ್ಸೇ ಕುದುರೆಯ ಲಗಾಮಿನ ಹಗ್ಗಗಳು. **"ಸನ್ಮನವು ಪಾಶ"**-ಎಂದು ಇಲ್ಲಿ ಹೇಳಿರುವರು. "ಪಾಶ"-ವೆಂದರೆ "ಹಗ್ಗ" ವೆಂದರ್ಥ. ಲಗಾಮಿನ ಹಗ್ಗವೆಂದೇಕೆ ಅರ್ಥಮಾಡಬೇಕೆಂದರೆ, ಭಾಗವತ ವಚನಾನುಸಾರ **"ಮನೋ ರಶ್ಮಿಭಿಃ"** ಎಂದು ಹೇಳಿರುವರು. ಆ ಆಧಾರದ ಮೇಲಿನಿಂದಲೂ, ರಥಗಳಿಗೆ ಬರೇ ಹಗ್ಗಗಳು ಸಂಬಂಧವಿಲ್ಲವಾದುದರಿಂದಲೂ ಈ ಅರ್ಥವನ್ನು ಮಾಡಬೇಕಾಯಿತು. ಸತ್ವರಜಸ್ತಮೋ ಗುಣಗಳೇ ದಂಡಗಳು. ಪುಣ್ಯ ಪಾಪಗಳೇ ಚಕ್ರಗಳು. ಜ್ಞಾನೇಂದ್ರಿಯ, ಕರ್ಮೇಂದ್ರಿಯಗಳು ಹತ್ತು. ಇವುಗಳೇ ಮಹಾ ಸಮರ್ಥವಾದ ಕುದುರೆಗಳು ॥೨೪॥

**(೩) "ಭಾವದರ್ಪಣ ಟೀಕಾ"--ವ್ಯಾಖ್ಯಾನ :—**

ಈಗ ಈ ದೇಹ ರಥತ್ವೇನ-ಎಂದು ಹೇಳುತ್ತಾರೆ-"ಈ ಶರೀರೇತಿ" ॥

**"ಏಷ ಏವ ದೇವರಥಃ"– ಇತಿ ಶ್ರುತೇಃ ॥**
**"ಇದಂ ಶರೀರಂ ಶ್ರೀ ವಿಷ್ಣುರಥಮಿಸ್ಯನುಚಿಂತಯೇತ್"**

**ಇತಿ ಪ್ರಕಾಶಸಂಹಿತೋಕ್ತೇಃ ॥**

ತನ್ನ ವಸ್ತ್ರಗಳೇ ಪತಾಕೆ. ಊರ್ಧ್ವ ಪುಂಡ್ರವೇ ಧ್ವಜಗಳು. ಸಿಂಹಾಸನವು. ಬುದ್ಧಿ. ಮನಸ್ಸುಗಳೇ ಕಲಶವು. ಪಾಪಪುಣ್ಯ ಕರ್ಮವೇ ಚಕ್ರವು.

**"ಹೃಷೀಕಾಣಿ ಹಯಾಶ್ಚಿಂತ್ಯಾ"**

-ಎಂಬ **ಪ್ರಕಾಶ ಸಂಹಿತಾನುಸಾರ** ಇಂದ್ರಿಯಗಳೇ ಅಶ್ವ ಎಂದರ್ಥ. ಏವಂ ರೀತ್ಯಾ ಅನುಮೇಯಿಸತಕ್ಕದ್ದು. ॥೨೪॥

## (೪) ಶ್ರೀ ವಾದಿರಾಜಾಚಾರ್ಯರ ವ್ಯಾಖ್ಯಾನ (ಸಂಸ್ಕೃತ ಮೂಲ) :

"ಈ ಶರೀರ"-ಇತಿ ॥ ಅಥ ದೇಹ ರಥಃ ॥ ತದ್ರಥೋ ದೇಹಃ । ದೇಹಾಖ್ಯೋ ರಥ ಉಚ್ಯತೇ ॥ಇತಿ ಚ ॥ ಪಾಶ-ಮನಃ ಪ್ರಗ್ರಹಮೇವ ಚ ಗುಣ ತ್ರಿವೇಣುಂ ॥ ಚಕ್ರ-ಚಕ್ರೇ ದ್ವೇ ಪುಣ್ಯ ದುಷ್ಕೃತೇ ॥ ಇಂದ್ರಿಯಾಣ್ಯತ್ವ ಸಂಜ್ಞಾನಿ ॥ ॥೨೪॥

**ಕನ್ನಡಾನುವಾದ :-**

"ಈ ಶರೀರ" ಇತಿ ॥ "ಅಥ ದೇಹ ರಥಃ" "ತದ್ರಥೋ ದೇಹಃ"-ಎಂಬ ಅನೇಕ ಪ್ರಮಾಣಗಳ ಆಧಾರದಿಂದ ದಾಸರಾಯರು "ಈ ಶರೀರ ವೆಂಬುದೇ ರಥವು"-ಎಂದು ಪ್ರಸಕ್ತ ಪದ್ಯದಲ್ಲಿ ಪ್ರತಿಪಾದಿಸುತ್ತಾರೆ. "ಮನಃ ಪ್ರಗ್ರಹಮೇವ ಚ" ಎಂಬ ಉಕ್ತ್ಯನುಸಾರ ಮನಸ್ಸೆಂಬುದೇ ಪಾಶವು ಎಂಬರ್ಥ ಉಂಟಾಗುವುದು. ಅದನ್ನೇ"ಸನ್ಮನವೇ ಪಾಶ" ವೆಂದು ದಾಸ ರಾಯರ ಅಭಿಪ್ರಾಯವು. ತ್ರಿವೇಣಗಳು, ಅಂದರೆ . ಮೂರು ಬಿದಿರಿನ ಕಡ್ಡಿ ಗಳು ಅಂದರೆ, ದಂಡತ್ರಯಗಳು. ಇವೇ ಸತ್ತ್ವ, ರಜ ಮತ್ತು ತಮ ಎಂಬ ಗುಣತ್ರಯಂಗಳು. ಸುಕೃತ ದುಷ್ಕೃತಗಳು ಚಕ್ರ ದ್ವಯಗಳು. ಇವೇ ಶುಭಾ ಶುಭ ಕರ್ಮಗಳು. "ಇಂದ್ರಿಯಾಣಿ ಅಶ್ವ ಸಂಜ್ಞಾನಿ"-ಎಂಬ ಪ್ರಮಾಣಾ ನುಸಾರ. ಇಂದ್ರಿಯಗಳು ಅಶ್ವಗಳೆನಿಸುವುವು ಎಂದು ನಿರೂಪಿಸಿರುತ್ತಾರೆ. ॥೨೪॥

## (೫) "ಗುರುಹೃದಯ ಪ್ರಕಾಶಿಕೆ"-ವ್ಯಾಖ್ಯಾನ :—

ದೇಹವನ್ನು ದೇವರಿಗೆ ರಥವಾಗಿ ಭಾವಿಸಿ, ಕೆಲವರು ಪೂಜಿಸುವ ರೆಂದು ಹೇಳುತ್ತಾರೆ-" ಶರೀರ" ವೆಂದು. ಮನುಷ್ಯ ಶರೀರವೇ ದೇವರ ರಥ. ಉಡುವ ಮತ್ತು ಹೊದೆಯುವ ವಸ್ತ್ರಗಳೇ ಧ್ವಜ ಪಟವು.

ದ್ವಾದಶ ಪುಂಡ್ರಗಳೇ ದೇವರ ರಥದ ಧ್ವಜಗಳು. ಚಿತ್ತವೆಂಬ ಪೂರ್ವ ಸ್ಮರಣ ಶಕ್ತಿಯೇ ದೇವರಿಗೆ ಸಿಂಹಾಸನ. ನಿಶ್ಚಯಾತ್ಮಕ ಬುದ್ಧಿಯೇ ದೇವರ ರಥಕ್ಕೆ ಕಳಸ. ಸಾಧು ಆಲೋಚನಾತ್ಮಕ ಮನಸ್ಸೇ ರಥದ ಹಗ್ಗಗಳು. ಸತ್ವ ರಜಸ್ತಮೋ ಗುಣಗಳೇ ದಂಡತ್ರಯಗಳೆಂಬ ಮುಂದೆ ಸಾರಥಿ ಕೂಡುವ ತಿಕಡಿ ಕಡ್ಡಿಗಳು. ಪುಣ್ಯ ಪಾಪಗಳೆಂಬ ಎರಡು ಕರ್ಮಗಳೇ ರಥದ ಗಾಲಿಗಳು. ಪಂಚ ಕರ್ಮೇಂದ್ರಿಯ. ಪಂಚ ಜ್ಞಾನೇಂದ್ರಿಯ ಸಹ ಹತ್ತು ಕರಣಗಳೇ ಮಹಾಸಮರ್ಥವಾದ ರಥದ ಕುದುರೆಗಳು. ॥೨೪॥

# ಸರ್ವವ್ಯಾಖ್ಯಾನಸಾರಸಂಗ್ರಹ

ಸಾಧನ ಶರೀರವಾದ ಸ್ಥೂಲ ಶರೀರವನ್ನೇ ರಥತ್ವೇನ ಭಗವ ದರ್ಪಣ ಮಾಡುವ ಅನುಸಂಧಾನ ಕ್ರಮವನ್ನು ವಿವರಿಸುತ್ತಾರೆ ಪ್ರಸಕ್ತ ೨೪ ನೆಯ ಪದ್ಯದಿಂದ. ರಥಕ್ಕಿರುವ ಲಕ್ಷಣಗಳನ್ನು ದೇಹಕ್ಕೆ ಸಮನ್ವಯ ಮಾಡುತ್ತಾರೆ.

(೧) ಸಕಲ ಸಾಧನ ವಿಶೇಷಗಳು ಸ್ಥೂಲ ದೇಹದ ದ್ವಾರವೇ ನಡೆಯುವುವು, ರಥವು ಚಲಿಸುವುದು. ಅಂತೆಯೇ ಗಮನಾಗಮನ ಲಕ್ಷಣ ವುಳ್ಳ ಶರೀರವೇ ದೇವರಿಗೆ ರಥವೆನಿಸುವುದು.

(೨) ನಾವು ದೇಹಕ್ಕೆ ಅಲಂಕಾರ ಪ್ರಾಯವಾಗಿ ಹಾಗೂ ಆಚ್ಛಾದನೆಗಾಗಿ ಉಪಯೋಗಿಸುವ ಉಡುವ ಹಾಗೂ ಹೊದೆಯುವ ದಿವ್ಯ ವಸ್ತ್ರಗಳು ಧ್ವಜ ಪಟಗಳೆನಿಸುವುದ. ರಥದ ಮೇಲೆ ಧ್ವಜಪಟವಿರುವಂತೆ, ದೇಹದ ಮೇಲೆ ವಸ್ತ್ರಗಳು.

(೩) ದೇಹದ ಮೇಲೆ ಧರಿಸುವ ಊರ್ಧ್ವಪುಂಡ್ರಾದಿ ದ್ವಾದಶನಾಮ ಗಳು ಆ ಧ್ವಜದ ದಂಡಗಳು. ಧ್ವಜ ದಂಡವನ್ನೇ ನಾನಾ ಪ್ರಕಾರವಾಗಿ ಅಲಂಕರಿಸಿರುವರು. ಅಂತೆಯೇ ದ್ವಾದಶ ನಾಮಗಳು ದೇಹಕ್ಕೆ ಲಕ್ಷಣ ಪ್ರಾಯವಾಗಿರುವುವು.

(೪) ನಮ್ಮ ಪೂರ್ವ ಸ್ಮರಣ ಶಕ್ತಿಗೆ ನಿಶ್ಚಯಾತ್ಮಕವಾದ ಪ್ರವೃತ್ತಿಯೇ ಚಿತ್ತವು. ಚಿತ್ತದ ಲಕ್ಷಣವು ಸಂಕಲ್ಪ ಶಕ್ತಿಯು. ಅಂತಹ ಚಿತ್ತವು ಬಿಂಬ ರೂಪಿಯಾದ ಶ್ರೀ ಪರಮಾತ್ಮನು ಕೂಡುವ ಭವ್ಯ ಹಾಗೂ ದಿವ್ಯ ಸಿಂಹಾಸನವು.

(೫) ಸಮೀಚೀನವಾದ ಪಂಚಭೇದ ತಾರತಮ್ಯ ಜ್ಞಾನದಿಂದ ಯುಕ್ತವಾದ ವಸ್ತು ನಿಶ್ಚಯ ಮಾಡತಕ್ಕ ಸುಬುದ್ಧಿ ಎಂಬುದೇ ರಥದ ಕಳಸಗಳು. ಕಳಸಗಳು ಒಂದು ರಥಕ್ಕೆ ಮಂಗಳಕರವಾದ ಲಕ್ಷಣ ಸೂಚಕಗಳಾಗಿವೆ. ಹಾಗೂ ಅಲಂಕಾರ ಪ್ರಾಯವಾಗಿವೆ. ಸುಸಂಸ್ಕೃತವಾದ ಬುದ್ಧಿಯೇ ಮಾನವನ ಮುಖ್ಯ ಲಕ್ಷಣವು. ಆದರಿಂದ ಸುವಿವೇಕ ಹಾಗೂ ವಿವೇಚನಾಶಕ್ತಿ ಸ್ಫುರಣವಾಗುವುದಕ್ಕೆ ಮುಖ್ಯ ಕಾರಣವು,

(೬) ಮನಸ್ಸು ಅತ್ಯಂತ ಮಹತ್ವದ ಇಂದ್ರಿಯ. ದಶೇಂದ್ರಿಯಗಳು ಮನಸ್ಸಿನ ನಿಯಂತ್ರಣಕ್ಕೆ ಒಳಪಟ್ಟು ತಮ್ಮ ವ್ಯಾಪಾರಗಳನ್ನು ನಡೆಯಿಸುವುವು. ಸಕಲ ಕರ್ಮಗಳಿಗೂ ಮನಸ್ಸೇ ಮುಖ್ಯ ಕಾರಣವು. ಮನಸ್ಸು ಯಾವಾಗಲೂ ಭಗವತ್ಸಂಬಂಧವಾದ ಆಲೋಚನೆಯಲ್ಲಿಯೇ ಆಸಕ್ತವಾಗಿರಬೇಕು. ಇದಕ್ಕೆ "ಸನ್ಮನ" ವೆಂದು ಹೆಸರು. ಇಂತಹ ಸನ್ಮನವೇ ಕುದುರೆಗಳನ್ನು ನಿಯಂತ್ರಿಸುವ ಹಗ್ಗ ಅಥವಾ ಲಗಾಮು.

(೭) ರಥದ ಸಾರಥಿಯು ಮುಂಭಾಗದಲ್ಲಿ ಕುಳಿತುಕೊಳ್ಳುವ ಪ್ರದೇಶವು ಸಾಮಾನ್ಯವಾಗಿ ಮೂರು ಬಿದಿರಿನ ಅಥವಾ ಮರದ ದಿಂಡುಗಳಿಂದ ನಿರ್ಮಿತವಾಗಿರುವುದು. ಇದಕ್ಕೆ ರಥದ ದಂಡಗಳು ಎಂದು ಹೆಸರು. ಸತ್ವರಜಸ್ತಮೋ ಗುಣಗಳೆಂಬ ಗುಣತ್ರಯಂಗಳೇ ದಂಡತ್ರಯಗಳು. ಜನನ ಮರಣಾಖ್ಯವಾದ ಸಂಸಾರವೆಂಬ ಬಂಧನಕ್ಕೆ ಲಿಂಗದೇಹಗತ ತ್ರಿಗುಣಗಳ ಪ್ರಭಾವವೇ ಕಾರಣವು. ರಥಕ್ಕೂ ಮತ್ತು ಅದಕ್ಕೆ ಹೂಡಿರುವ ಅಶ್ವಗಳಿಗೂ ಸಂಪರ್ಕವೇರ್ಪಡುವುದೇ ಈ ದಂಡತ್ರಯಗಳ ಸಹಾಯದಿಂದ. ಇದರಿಂದ ಈ ರೀತಿಯ ಸಮನ್ವಯ.

(೮) ಪುಣ್ಯ ಪಾಪಗಳೆಂಬ ದ್ವಂದ್ವ ಕರ್ಮಗಳೇ ದೇಹಾಖ್ಯ ರಥದ ಚಕ್ರಗಳು. ಇಂದ್ರಿಯಗಳ ದ್ವಾರಾ ನಡೆಯುವ ದೇಹಗತ ಸಮಸ್ತ ವ್ಯಾಪಾರಗಳೂ (ಶುಭಾಶುಭ ಕರ್ಮಗಳು) ಕರ್ಮಾನುಸಾರವಾಗಿ ನಡೆಯುವುದರಿಂದ, ಅಂತಹ ಕರ್ಮ ದ್ವಂದ್ವಗಳು ರಥವನ್ನು ಚಲಿಸುವ ಚಕ್ರಗಳೆಂದು ಭಾವ.

(೯) ಜ್ಞಾನೇಂದ್ರಿಯಗಳು ಐದು ಮತ್ತು ಕರ್ಮೇಂದ್ರಿಯಗಳು ಐದು ಒಟ್ಟು ಸೇರಿ ದಶೇಂದ್ರಿಯಗಳು ಶರೀರವೆಂಬ ರಥಕ್ಕೆ ಕಟ್ಟಿರುವ ಕುದುರೆಗಳು. ಕುದುರೆಗಳು ಶ್ರೇಷ್ಠವಾಗಿಯೂ ಮತ್ತು ಅತ್ಯಂತ ಸಾಮರ್ಥ್ಯವುಳ್ಳದ್ದಾಗಿಯೂ ಇರಬೇಕು. ಅಂತೆಯೇ ದಶಕರಣಗಳು ಸಮರ್ಥವಾದ ದೇಹಗತ ಇಂದ್ರಿಯಗಳು. ಇಂದ್ರಿಯಗಳೆಂಬ ಸಮರ್ಥಾಶ್ವಗಳನ್ನು ನಿಯಂತ್ರಿಸುವುದು ಮನಸ್ಸು. ಆದುದರಿಂದ ಮನಸ್ಸೇ ಪಾಶವೆಂಬುದು ಅತ್ಯಂತ ಸಾರ್ಥಕವಾಗಿದೆ. ॥೨೪॥

## ಪದ್ಯ (೨೫)

**ಮೂಲ :**

**ಮಾತರಿಶ್ವನು ದೇಹರಥದೊಳು ।**
**ಸೂತನಾಗಿಹ ಸರ್ವಕಾಲದಿ ॥**
**ಶ್ರೀ ತರುಣಿವಲ್ಲಭ ರಥಿಕನೆಂದರಿದು ನಿತ್ಯದಲಿ ॥**
**ಪ್ರೀತಿಯಿಂದಲಿ ಪೋಷಿಸುವ ವಾ ।**
**ತಾತಪಾದಿಗಳಿಂದಲಿ ನಿರತ ।**
**ಈ ತನುವಿನೊಳು ಮಮತೆ ಬಿಟ್ಟವನವನೆ ಮಹಯೋಗಿ ॥ ॥೨೫॥**

**ಅವತರಣಿಕೆ :**

ದೇಹಾಖ್ಯ ರಥದ ವಿವರಗಳನ್ನೇ ಪ್ರಸಕ್ತ ಪದ್ಯದಲ್ಲಿ ವಿಶದೀಕರಿಸುತ್ತಾರೆ.

**ಜೀವೋತ್ತಮರಾದ ಶ್ರೀ ವಾಯುದೇವರೇ ದೇಹವೆಂಬ ರಥಕ್ಕೆ ಸಾರಥಿ**

ಗಳು. ಶ್ರೀ ರಮಾರಮಣನಾದ ಬಿಂಬರೂಪಿ ಶ್ರೀಪರಮಾತ್ಮನೇ ರಥಿಕನು. ಹೀಗೆಂದು ನಿತ್ಯದಲ್ಲಿಯೂ ಶ್ರೀ ಹರಿವಾಯುಗಳ ಸಾನಿಧ್ಯವನ್ನು ಶರೀರವೆಂಬ ರಥದಲ್ಲಿ ಅನುಸಂಧಾನ ಪೂರ್ವಕವಾಗಿ ಚಿಂತಿಸುತ್ತಿರಬೇಕು. ಆಗ ಭನ್ವಂತ್ರೀ ನಾಮಕನಾದ ಶ್ರೀ ಪರಮಾತ್ಮನು ಸಾಧನ ಶರೀರವೆಂಬ ದೇಹವನ್ನು ವಾತ, ಪಿತ್ಥ, ಶ್ಲೇಷ್ಮ, ಉಷ್ಣ ಮುಂತಾದ ಬಾಧಾರೂಪನಾದ ತಾಪಗಳಿಂದ ರಕ್ಷಿಸುವನು. ದೇಹಾಖ್ಯವಾದ ಮೋಹ ಮಮತಾದಿಗಳನ್ನು ಬಿಟ್ಟು ದೇಹಾಖ್ಯ ರಥಗತನಾದ ರಥಚಕ್ರ ಪಾಣಿಯನ್ನು ನಿರಂತರದಲ್ಲಿ ಭಜಿಸುವ ಸಾಧಕನೇ ಮಹಾಯೋಗಿ ಎಂದು ತಿಳಿಸುತ್ತಾರೆ-ಪ್ರಸಕ್ತ ಸಂಧಿಗತ ೨೫ ನೆಯ ಪದ್ಯದಿಂದ ॥೨೫॥

ಪ್ರತಿಪದಾರ್ಥ :-

**ಮಾತರಿಶ್ವನು**= ವೇದಪ್ರತಿಪಾದ್ಯರೂ ಜೀವೋತ್ತಮರೂ ಆದ ಶ್ರೀ ವಾಯುದೇವರು **ದೇಹರಥದೊಳು**= ದೇಹಾಖ್ಯವೆಂಬ ರಥದಲ್ಲಿ **ಸರ್ವಕಾಲದಿ**= ಎಲ್ಲಾ ಕಾಲದಲ್ಲಿಯೂ **ಸೂತನು**= ರಥವನ್ನು ಹೊಡೆಯತಕ್ಕ ಸಾರಥಿಯಾಗಿ **ಆಗಿಹ**= ಆಗಿರುವನು. **ಶ್ರೀ ತರುಣಿ ವಲ್ಲಭ**= ಶ್ರೀ ದೇವಿ ಎಂಬ ನಿತ್ಯಯೌವನಳಾದ ಶ್ರೀಲಕ್ಷ್ಮಿದೇವರಗೆ ಪತಿಯಾದ ಶ್ರೀ ಪರಮಾತ್ಮನು **ರಥಿಕನೆಂದರಿದು**= ರಥದಲ್ಲಿ ವಿರಾಜಮಾನನಾಗಿರುವ ರಥಿಕನು ಎಂದು ತಿಳಿದು (ಭಾವಿಸಿ) **ನಿತ್ಯದಲಿ**= ನಿರಂತರವೂ **ವಾತಾತಪಾದಿಗಳಿಂದಲಿ**= ಗಾಳಿ, ಬಿಸಿಲು ಇತ್ಯಾದಿ ಬಾಧೆಗಳಿಂದ **ಪ್ರೀತಿಯಿಂದಲಿ**= ಭಕ್ತಜನರಲ್ಲಿ ಕರುಣಾರ್ದಹೃದಯನಾಗಿ **ಪೋಷಿಸುವ**= ಸಂರಕ್ಷಣೆ ಮಾಡುವ **ಅವಿರಥ**= ಅವಿಚ್ಛಿನ್ನವಾಗಿ **ಈ ತನುವಿನೊಳಗೆ**= ಈ ದೇಹದಲ್ಲಿ **ಮಮತೆ ಬಿಟ್ಟವನೆ**= ಅಭಿಮಾನವನ್ನು ಬಿಟ್ಟಿರುವವನೇ **ಮಹಾಯೋಗಿ**= ಮಹಾತ್ಮನಾದ ಯೋಗಸಿದ್ಧ ಪುರುಷನೆನಿಸಿಕೊಳ್ಳುವನು ॥೨೫॥

## ವ್ಯಾಖ್ಯಾನಗಳು

### (೧) ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ:-

ಮಾತರಿಶ್ವನು-ಸಮಸ್ತ ವೇದಗಳಲ್ಲಿ ಸಂಚಾರ ಮಾಡತಕ್ಕ ಜೀವೋತ್ತಮರಾದ ಪ್ರಧಾನ ವಾಯುದೇವರು ದೇಹರಥದೊಳು-ದೇಹಾಖ್ಯ ರಥದೊಳಗೆ ಅಶ್ವಗಳ ದ್ವಾರಾ ರಥವನ್ನು ನಡೆಸತಕ್ಕ ಸೂತನಾಗಿಹ- ಸೂತನಾಗಿದ್ದಾನೆ. ಅಶ್ವಸಾಂಕೇತಗಳಾದ ದಶಕರಣಗಳಲ್ಲಿ ದಶರೂಪದಿಂದ ದೇವರ ಆಜ್ಞಾದಿಂದ ನಡೆಸುತ್ತಾನೆ. ಸರ್ವಕಾಲದಿ- ಸಮಸ್ತವಾದ ಕಾಲದಲ್ಲಿ ಬಿಡದೆ ಇದ್ದಾನೆ. ಶ್ರೀ ತರುಣಿವಲ್ಲಭ ನಿತ್ಯ ಯೌವನಳಾದ ಲಕ್ಷ್ಮೀ ದೇವೇರಿಗೆ ಪತಿಯಾದ ಬಿಂಬಮೂರ್ತಿ, ರಥಿಕನೆಂದರಿತು- ರಥಗತ ಪ್ರಭು ಎಂತ ತಿಳಿದು, ನಿತ್ಯದಲಿ- ಪ್ರತಿದಿನದಲ್ಲಿ ವಾತಾತಪಾದಿಗಳಿಂದ-ಗಾಳಿ. ಬಿಸಿಲು ಇವುಗಳಿಂದ, ಅವಿರತ- ಅತ್ಯಂತವಾಗಿ ಹೋಗಲ್ಪಟ್ಟು ಆಸಕ್ತಿ ಉಳ್ಳವನಾಗಿ, ಅಂದರೆ ಸಪನಯುಕ್ತನಾಗಿ, ಪ್ರೀತಿಯಿಂದಲಿ- ಪರಮಾತ್ಮನ ಛಂದಾಗಿ ಭಜಿಸುತ್ತ, ಈ ತನುವಿನೊಳು-ಈ ದೇಹದೊಳು ಮಮತೆ ಬಿಟ್ಟವನೆ-ಅಭಿಮಾನಬಿಟ್ಟು ಇರತಕ್ಕವನು ಪೋಷಿಸುವ-ಇಂಥಾ ಜ್ಞಾನಿಯನ್ನು ವಿಷಯ ಸಂಬಂಧವಾದ ದುಃಖಾತಿಗಳು ಲೇಪವಾಗದಂತೆ ಸಂರಕ್ಷಣೆ ಮಾಡುತ್ತಾನೆ ಎಂತ ತಾತ್ಪರ್ಯ. ॥೨೫॥

### (೨) "ಭಾವಪ್ರಕಾಶಿಕೆ"-ವ್ಯಾಖ್ಯಾನ:—

ದೇಹವೆಂಬ ರಥದಲ್ಲಿ ಸಾರಥ್ಯ ಮಾಡುವವರು ವಾಯುದೇವರು. ಭಾಗವತದಲ್ಲಿ-

"ಮನೋ ರಶ್ಮಿರ್ಬುದ್ಧಿ ಸೂತೋಃ"
"ಬುದ್ಧಿಂತು ಸಾರಥಿಂ ವಿದ್ಧಿ"

-ಎಂತ ಬುದ್ಧಿಯನ್ನು ಸಾರಥಿಯಂತೆ ಹೇಳಿರುವರು.

"ಮೂಲನಾಯು ರಕ್ಷ ಸಂಜ್ಞಶ್ಚಕ್ರೀ ದ್ವೇ ಪುಣ್ಯ ದುಷ್ಕೃತೇ"

ಎಂಬ ಅಧ್ಯಾತ್ಮ ಯೋಗ ವಾಕ್ಯದಿಂದ ಚಕ್ರಗಳನ್ನು ತೂರಿಸುವ ಅಚ್ಚು ಮರವೇ ವಾಯುದೇವರೆಂದು ಹೇಳಿರುವರು. ದಾಸರಾಯರು ವಾಯು ದೇವರನ್ನು ಸಾರಥಿ ಎಂದು ಹೇಳಿರುವರು. ಪರಸ್ಪರ ವಿರೋಧ ಬಂತೆಂದರೆ ಹಾಗಲ್ಲ. ಬುದ್ಧಿಯನ್ನು ಸಾರಥಿಯನ್ನಾಗಿ ಹೇಳಿದವರ ಅಭಿಪ್ರಾಯವು ಬರೀ ಬುದ್ಧಿಯು ಪರವಲ್ಲ. ಅಭಿಮಾನ ದೇವತಾ ಪರವಾಗಿ ಮಾಡಬೇಕು. ಹಾಗಾದರೂ ಬುದ್ಧ್ಯಭಿಮಾನಿ ಉಮಾ, ಬೃಹಸ್ಪತಿ ಮೊದಲಾದವರೇ ಹೊರತು ವಾಯುದೇವರಲ್ಲಿ ಎಂಬ ಪಕ್ಷದಲ್ಲಿ, ಇದರ ಅಭಿಪ್ರಾಯ ಹೀಗೆ- ಬುದ್ಧಿಯಲ್ಲಿ ಚಿತ್ತ, ಬುದ್ಧಿ, ಅಹಂಕಾರ, ಮನಸ್ಸೆಂಬ ನಾಲ್ಕು ಪ್ರಕಾಲ ಭೇದ ಗಳುಂಟು. ಚಂಚಲ ಹುಟ್ಟುವುದು ಮನಸ್ಸು. ನಾನು ನನ್ನದು ಎಂಬು ವುದು ಅಹಂಕಾರ. ಇದು ಇಂತಹದೆಂದು ನಿಶ್ಚಯಿಸುವುದು ಬುದ್ಧಿ. ಕೇವಲ ಭಗವಂತನಡಿಗಳಲ್ಲಿ ಸ್ಥಿರವಾಗಿ ನಿಲ್ಲುವ ಬುದ್ಧಿಯೇ ಚಿತ್ತವೆನಿಸುವುದು. ಸುಬುದ್ಧಿ, ದುರ್ಬುದ್ಧಿ ಎಂಬೆರಡು ವಿಧಗಳುಂಟು. ಪುಣ್ಯ ಕರ್ಮದಲ್ಲಿ ಪ್ರವರ್ತಿಸುವುದು ಸುಬುದ್ಧಿ. ಪಾಪಕರ್ಮ ಪ್ರವೃತ್ತಿಯೇ ದುರ್ಬುದ್ಧಿ. ಇವೆರಡಲ್ಲದೆ ಕೇವರ ಭಗವತ್ಪರವಾದ ಬುದ್ಧಿಯೇ ಚಿತ್ತವು. ಹೀಗೆ ಚಿತ್ತಕ್ಕೂ ಮತ್ತು ಬುದ್ಧಿಗೂ ಕಿಂಚಿದ್ಭೇದವಿದ್ದರೂ, ಕುರು ಪಾಂಡವ ನ್ಯಾಯದಂತೆ ಇರುವುದು. ಹೇಗೆಂದರೆ, ಕೌರವರೂ ಪಾಂಡವರೂ ಒಂದೇ ಕುರುವಂಶದಲ್ಲಿ ಹುಟ್ಟಿದುದರಿಂದ, ಕೌರವ ಶಬ್ದ ಪಾಂಡವರಲ್ಲಿಯೂ ದುರ್ಯೋಧನಾದಿಗಳ ಲ್ಲಿಯೂ ಅನ್ವಯಿಸಬಹುದಾಗಿರುವುದು. ಆದರೂ ಕೌರವ ಶಬ್ದ ದುರ್ಯೋ ನಾದಿಗಳಲ್ಲಿ ಮಾತ್ರ ನಿಂತಿತು. ಪಾಡವರಲ್ಲಿ ವಿಶೇಷ ಮಹಿಮೆ ಇದ್ದರೂ, ಕೌರವ ಶಬ್ದ ಅವರಿಗಿರದೇ ಇರಲಿಲ್ಲ. ಆದರೆ ಪಾಂಡವ ಶಬ್ದ ಮಾತ್ರ ಕೌರವ ರಿಗಿಲ್ಲ, ಪಾಂಡುರಾಜನ ಮಕ್ಕಳಿಗೆ ಮಾತ್ರವೇ ಪಾಂಡವರೆಂದು ಹೆಸರು ಬಂದಿರುವುದು. ಹೆಸರು ದುರ್ಯೋಧನಾದಿಗಳಿಗೆ ಬಾರದು. ಅದರಂತೆ ಬುದ್ಧಿ ಪ್ರಭೇದವೇ ಚಿತ್ತವಾದರೂ, ಕೇವಲ ಭಗವತ್ಪರವಾದ ಬುದ್ಧಿಗೆ ಬರುವಂತಿಲ್ಲ. ಬುದ್ಧಿ ಎಂಬ ಹೆಸರು ಚಿತ್ತಕ್ಕೆ ಹೇಳುವರು. ಬುದ್ಧಿಯನ್ನೇ ಭಗವತ್ಪರ ಮಾಡಿದರೆ ಚಿತ್ತವಾಗುವುದರಿಂದ, ಅದನ್ನೇ ಸುಬುದ್ಧಿ ಎನ್ನ

ಬಹುದು, ಇಂತಹ ಭಗವತ್ಪರವಾದ ಬುದ್ಧಿ ಪ್ರಭೇದವಾದ ಚಿತ್ತಕ್ಕೆ ವಾಯು ದೇವರೇ ಅಭಿಮಾನಿಗಳು. ಆದುದರಿಂದ ಇಲ್ಲಿ ಬುದ್ಧಿ ಶಬ್ದವು ಚಿತ್ತಪರ, ಚಿತ್ತ ಶಬ್ದವು ಅಭಿಮಾನಿ ಪರ. ಹೀಗೆ ಮಾಡಿದರೆ ಚಿತ್ತಾಭಿಮಾನಿಯಾದ ವಾಯುದೇವರೇ ಸಾರಥಿ ಎಂದಾಗುತ್ತದೆ. ಇದರಿಂದ ದಾಸರಾಯರ ವಾಕ್ಯಕ್ಕೂ ಭಾಗವತಾದಿಗಳ ವಾಕ್ಯಕ್ಕೂ ಏಕವಾಕ್ಯತಾ ಬಂದಿತೆಂದು ತಿಳಿಯ ಬೇಕು. ಅಕ್ಷವನ್ನೇ ವಾಯುದೇವರೆಂದು ಹೇಳಿದ ಅಧ್ಯಾತ್ಮಯೋಗದ ವಾಕ್ಯ ರೀತ್ಯಾ, ಅಕ್ಷ ಸ್ಥಾನದಲ್ಲಿಯೂ ಸಾರಥಿ ಸ್ಥಾನದಲ್ಲಿಯೂ ವಾಯು ದೇವರೇ ಉಭಯಾದಿ ಪತಿಗಳಾಗಿರುವರೆಂದು ಹೇಳಿದರೆ ಭಾದಕವೇನೂ ಇರು ವುದಿಲ್ಲ. ಶ್ರೀ ಪರಮಾತ್ಮನೇ ದೇಹ ರಥದಲ್ಲಿ ಕೂತಿರುವ ರಥಿಕನೆಂದು ತಿಳಿದು ನಿತ್ಯದಲ್ಲಿಯೂ ಅನ್ನ ಪಾನಾದಿಗಳಿಂದ ಚೆನ್ನಾಗಿ ಶರೀರವನ್ನು ಪೋಷಿಸು. ಆದರೆ, ಈ ದೇಹವು ನನ್ನದು ಎಂಬ ಅಭಿಮಾನದಿಂದ ಇಂದ್ರಿಯ ಪ್ರೀತಿಗೋಸ್ಕರ ಮಾತ್ರ ಶರೀರ ಪೋಷಣೆ ಮಾಡಬೇಡವೆಂದರ್ಥ. ಈ ಶರೀರವು ಪರಮಾತ್ಮನು ಕೂಡುವ ರಥ. ಆದುದರಿಂದ ಇದನ್ನು ತೊಳೆಯು ವುದು, ವಸ್ತ್ರ ಭೂಷಣಗಳಿಂದ ಅಲಂಕರಿಸುವುದು ಎಂದು ಭಾವಿಸಿ, ಚೆನ್ನಾಗಿ ಪೋಷಿಸು. ನನಗೆ ಬಿಸಿಲು, ನನಗೆ ಗಾಳಿ ತಡೆಯಲಾರನೆಂದು ಇಂದ್ರಿಯ ಪ್ರೀತಿಗೋಸ್ಕರ ಶರೀರಾಭಿಮಾನವನ್ನು ಮಾಡದೆ, ಭಗವತ್ಪ್ರೀತಿಗೋಸ್ಕರ ಶರೀರದ ಪೋಷಣೆ ಮಾಡುತ್ತಾ, ಗಾಳಿ ಬಿಸಿಲುಗಳನ್ನು ಸಹನ ಮಾಡಿಕೊಂಡು, ನಾನು ನನ್ನದೆಂಬ ಅಭಿಮಾನವನ್ನು ಬಿಟ್ಟು ಇರುವವನು ಯಾವನೋ ಅವನೇ ಮಹಾಯೋಗಿ. ॥೨೫॥

(೩) "ಭಾವದರ್ಪಣಟೀಕಾ"ವ್ಯಾಖ್ಯಾನಃ-

ಈಗ "ಯಂತಾರಂ ಸೂತ್ರ ನಾಮುಕಮ್-ಎಂಬ ಪ್ರಕಾಶಸಂಹಿತಾ ನುಸಾರ ವಾಯುದೇವರೇ ಸೂತರು.

"ರಥಿಕಂ ಶ್ರೀ ಹರಿಂ ಧ್ಯಾಯೇತ್"-ಎಂಬ ಪ್ರಕಾಶಸಂಹಿತಾನು ಸಾರ ದೇಹಸ್ಥ ಶ್ರೀಹರಿಯೇ ರಥಿಕನೆಂದು ತಿಳಿದು, ಶೀತೋಷ್ಣ ಸಹನದಿಂದ

ದೇಹಾಭಿಮಾತ ಪರಿತ್ಯಾಗ ಮಾಡತಕ್ಕವನೇ ಮಹಾಯೋಗಿ-ಎಂದು ಹೇಳು ತ್ತಾರೆ "ಮಾತರಿಶ್ವೇತಿ" ॥ ಮಮತಾ ಬಿಟ್ಟು

ಉಕ್ತಂಚ ಶೌಂಡಿಲ್ಯ ತತ್ತ್ವೇ :-

"ನಿತ್ಯಾನಿತ್ಯ ವಿವೇಕಜ್ಞೋ ಮಮತಾಂ ತು ಪರಿತ್ಯಜೇತ್ ।
ಮಮತೇಕಾ ಭವತ್ಯೇಷಾಂ ನಿದಾನಂ ಸುಖ ದುಃಖಯೋಃ ॥
ಮದೀಯಮಿತ್ಯಭಿಮತೇ ಗವಿ ಪುಷ್ಟೇತು ಮೋದತೇ ।
ಹ್ರಾಸೇ ದುಃಖಮವಾಪ್ನೋತಿ ಸ್ವಕೀಯಸ್ಯ ಜನೋಽಹ್ಯಯಮ್ ॥
ಕಾಮಾತ್ಪರವಶಂ ಯಾತಿ ಮದೀಯತ್ವಂ ಚ ಗಚ್ಛತಿ ।
ಸ ತುಷ್ಯತಿಹಿ ಗೋವೃದ್ಧ್ಯಾ ಹ್ರಾಸಾತ್ತಸ್ಯ ನ ದುಃಖತಾ ॥
ಯಥಾ ತಥಾ ಸಮಸ್ತೇಷು ಸಮತಾಂತು ಪರಿತ್ಯಜೇದಿತಿ" ॥೨೫॥

(೪) ಶ್ರೀ ವಾದಿರಾಜಾಚಾರ್ಯರ ವ್ಯಾಖ್ಯಾನ (ಸಂಸ್ಕೃತ ಮೂಲ) :

"ಮಾತರಿಶ್ವನು"-ಇತಿ ॥ ಮಾತರಿವೇದೇಽಶ್ವಯತಿ ಗಚ್ಛತಿ ವಿಚಾರ ಯತಿ ಇತಿ ತಥೋಕ್ತಃ ॥ "ಹೃಷೀಕ ವಾಯುಭಿರುದಾತ್ತ ಮಹತ್ತುರಗೈಃ"- ಇತಿ ಶ್ರುತಿಗೀತಾಯಾಮ್ ॥ ಟೀಕಾಯಾಂ ಚ । "ಪೃಥಕ್ ಪದತ್ವಂ ಛಾಂದ ಸಮ್ ॥ ರಥೋಪರಿ ಸ್ವೀಕರಣಾತ್ "ಉದಾತ್ತಃ ಸಾರಥಿರ್ಮತಃ"-ಇತಿ ವಚನಾತ್ ॥ ಹೃಷೀಕಾಣ್ಯೇವ ವಾಯುಃ ಉದಾತ್ತೋ ಏಷಾಂ ತೇ ॥ ಹೃಷೀಕ ವಾಯುಭಿರುದಾತ್ತಾಃ । ತೇ ಚತೇ ಮಹತ್ತುರಗಾಃ"-ಇತಿ ರಥಿಕಃ । "ಆತ್ಮಾನಂ ರಥಿನಂ ವಿದ್ಧಿ"-ಇತ್ಯುಕ್ತೇಃ । ಅವಿರತ-ಸರ್ವದಾ ॥ ಪ್ರವಚ ನೋಪಯುಕ್ತತಯಾ ರಕ್ಷಣಮ್ ಅಭಿಪ್ರೈತಿ ॥ "ದೇಹೋ ವರ್ತೇತ ಯಾವತಾ"-ಇತ್ಯುಕ್ತೇಃ ॥ "ಯಾವದ್ ಭ್ರಿಯೇತ ಜಠರಮ್"-ಇತಿ ಚ ॥ "ಪ್ರಿಯವದ್ದೇಹ ದೃಷ್ಟಯಃ" ॥ ಇತಿ ಚ ॥ ಪ್ರಿಯವತ್ ಚಿಚ್ಛರೀರವತ್ ॥ಇತಿ॥ ಪ್ರಿಯ ವಚ್ಚರಂತೀತಿ ಚೋಕ್ತೇಃ ॥ ಮಮತೇ । ಶಾಂಡಿಲ್ಯ ಪಂಚಕೇ ಅಷ್ಟಾದಶಾಧ್ಯಾಯೇ-"ನಿತ್ಯಾಽನಿತ್ಯ ವಿವೇಕಜ್ಞೋ ಮಮತಾಂತು ಪರಿತ್ಯಜೇತ್ ॥ ಮಮತೈವ ಭವತ್ಯೇಕಾಂ ನಿದಾನಂ ಸುಖ ದುಃಖಯೋಃ ॥ ಮದೀಯಮಿತ್ಯಭಿಮತೇ ಗವಿ ಪುಷ್ಟೇ ತು ಮೋದತಿ । ಹ್ರಾಸೇ ದುಃಖ

ಮವಾಪ್ನೋತಿ ಸ್ವಕೀಯಸ್ಯ ಜನೋಹ್ಯಯಮ್ ॥ ಕ್ರಮಾತ್ ಪರವಶಂ ಯಾತೇ ಮದೀಯತ್ವೇ ಚ ಗಚ್ಛತಿ ॥ ನ ತುಷ್ಯತಿ ಚ ತದ್ವೃದ್ಧೌ ಹ್ರಾಸಾತ್ತಸ್ಯ ದುಃಖಿತಿ ॥ ತಥಾ ತಥಾ ಸಮಸ್ತಾಸು ಮಮತಾಂ ತು ಪರಿತ್ಯಜೇತ್। ಯೋಗೀ ವಾ ಮಮತಾಯುಕ್ತೋ ಮಹಾನರ್ಥಮವಾಪ್ನುಯಾತ್ ॥ ಮಮೇದಮಿತಿ ಬುದ್ಧ್ಯೈ ತು ಹರಿಣೇ ಭರತೋ ಮುನಿಃ ॥ ಅನುಧ್ಯಾಯಂ ಸ್ತ್ವಮೇವಾಂತೇ ಹರಿಣತ್ವಮವಾಪ್ತವಾನ್ ॥ಇತಿ॥ ॥೨೫॥

ಕನ್ನಡಾರ್ಥ :—

ವೇದಗಳಲ್ಲಿ ಸಂಚರಿಸುವವರಾದ ಕಾರಣದಿಂದ ಶ್ರೀವಾಯುದೇವರಿಗೆ "ಮಾತರಿಶ್ವ" ಎಂದು ಹೆಸರು. "ಹೃಷೀಕ ವಾಯುಭ"-ಎಂದೂ ಶ್ರುತಿಗೀತಾ ಪ್ರಮಾಣ. ಶ್ರುತಿ ಗೀತೆಯ ವಿಜಯಧ್ವಜೀಯ ಟೀಕಾದಲ್ಲಿ ಉತ್=ರಥದ ಮೇಲೆ, ಅತ್ತಃ=ಸ್ವೀಕೃತನಾಗುವವನು ಎಂಬರ್ಥದಲ್ಲಿ "ಉದಾತ್ತ" ನಾಮಕನು-ಸಾರಥಿಯು. "ವಾಯುವೇ ಈ ದೇಹರಥಕ್ಕೆ ಸಾರಥಿಯು. ಇಂದ್ರಿಯಗಳೇ ಸಮರ್ಥ ತುರಗಗಳು" ಎಂಬ ವ್ಯಾಖ್ಯಾನವಿದೆ. ಪರಮಾತ್ಮನು ರಥಿಕನು. ಅಂದರೆ, "ರಥದ ಮೇಲೆ ಕುಳಿತಿರುವವನು"-ಎಂಬ ಪ್ರಮಾಣ ವಾಕ್ಯಗಳಿವೆ. ಇದರಿಂದಲೇ "ಶ್ರೀ ತರುಣಿ ವಲ್ಲಭನು ರಥಿಕ"-ಎಂದಿದ್ದಾರೆ. ಅವಿರತ=ಯಾವಾಗಲೂ ಈ ದೇಹವನ್ನು ಪ್ರೀತಿಯಿಂದ ಪೋಷಿಸಬೇಕು. ಭಗವದ್ಗುಣ ವಿವರಣ ರೂಪವಾದ ಪ್ರವಚನ ಕಾರ್ಯವು ದೇಹ ಪೋಷಣೆಯಿಂದಲೇ ಅಧಿಕವಾಗಿ ನಡೆಯುವುದೆಂದು ದಾಸರಾಯರ ಅಭಿಮತವು. "ದೇಹೋ ವರ್ತೇತ ಯಾವತಾ" ಅಂದರೆ, ಎಷ್ಟರಿಂದ ದೇಹವು ಪೂರ್ತಿಯಾಗುವುದೋ ಎಂತಿರುವುದರಿಂದ, ಸಾಧನವಾದ ಈ ಶರೀರವನ್ನು ಚಿದಾನಂದ ರೂಪವಾದ ಸ್ವರೂಪ ಶರೀರದಂತೆ ಕಾಣುವರು ಎಂದು ವಾಕ್ಯಗಳಿವೆ. ಜ್ಞಾನಭಕ್ತಿ ವೈರಾಗ್ಯ ಪ್ರಸಾದಗಳಿಗೆ ಸಾಧನ ರೂಪವಾಗಿರುವ ಈ ಶರೀರದ ಪೋಷಣೆ ವಿಹಿತವು. "ಮಮತೆಯನ್ನು ಬಿಟ್ಟಿರುವವನೆ ಮಹಾಯೋಗಿ" ಎಂದು ದಾಸರಾಯರ ಅಭಿಪ್ರಾಯವು. ಶಾಂಡಿಲ್ಯ ಪಂಚಕದ ೧೮ ನೆಯ ಅಧ್ಯಾಯದಲ್ಲಿ- "ನಿತ್ಯಾನಿತ್ಯ ವಸ್ತುಗಳ ವಿವೇಕವುಳ್ಳವನು ಶರೀರದ ಮಮತೆಯನ್ನು ಬಿಡ

ಬೇಕು"-ಎಂದಿದೆ. ನಾನು ನನ್ನದು ಎಂಬ ಅಭಿಮಾನವೇ ಮಮತೆಯು. ಇಂತಹ ಮಮಕಾರವು ಸುಖ ದುಃಖಗಳಿಗೆ ಮೂಲಕಾರಣವು. ಹಸುವು ಪುಷ್ಟವಾಗಿರುತ್ತದೆ. ಅದರಲ್ಲಿ ಅಭಿಮಾನ ಹೊಂದಿರುವ ಯಜಮಾನನು ಅದನ್ನು ನೋಡಿ ಆನಂದಿಸುತ್ತಾನೆ. ಅದು ಸೊರಗಿದರೆ ದುಃಖಪಡುತ್ತಾನೆ. ಅದೇ ಆಕಳನ್ನು ಬೇರೆಯವನಿಗೆ ಮಾರಿಬಿಟ್ಟರೆ, "ನನ್ನದು" ಎಂಬ ಮಮತೆಯು (ಅಭಿಮಾನವು) ಕ್ರಮವಾಗಿ ಅಳಿದುಹೋಗುವುದು. ಆಗ ಆ ಹಸುವಿನ ವೃದ್ಧಿ ಹ್ರಾಸಗಳಾವುವೂ ಅವನಿಗೆ ಯಾವ ತರಹದ ವಿಕಾರವನ್ನು ಉಂಟು ಮಾಡುವುದಿಲ್ಲ. ಶರೀರದ ಅಭಿಮಾನ ತ್ಯಾಗವನ್ನು ಮಾಡಿದವನೇ ಮಹಾಯೋಗಿ ಎಂದೆನಿಸಿಕೊಳ್ಳುತ್ತಾನೆ. ಮಮತೆಯಿಂದ ಅವನಿಗೆ ಮಹಾ ಅನರ್ಥ ಉಂಟಾಗುತ್ತನೆ. ಭರತ ಮುನಿಯು ಚಿಗರೆಯ ಮರಿಯಲ್ಲಿ ಮಮತೆ ಹೊಂದಿದ್ದರ ಕಾರಣವಾಗಿ ಚಿಗರೆಯ ಜನ್ಮವನ್ನೇ ಹೊಂದಿದನು. ಇದರಿಂದ ದೇಹಾಭಿಮಾನ ಬಿಡಬೇಕು ಎಂದು ತಾತ್ಪರ್ಯ. ॥೨೫॥

## (೫) "ಗುರುಹೃದಯ ಪ್ರಕಾಶಿಕೆ" ವ್ಯಾಖ್ಯಾನ

ಪ್ರಾಣದೇವರೇ ದೇಹವೆಂಬ ದೇವರ ರಥಕ್ಕೆ ಸಾರಥಿ. ಲಕ್ಷ್ಮೀಪತಿಯೇ ಸರ್ವದಾ ಈ ದೇಹ ರಥಕ್ಕೆ ರಥಿಕನೆಂದು ತಿಳಿದು, ಈ ದೇಹವನ್ನು ದೇವರ ರಥವೆಂದು ನಿರಂತ ಗಾಳಿ, ಬಿಸಿಲು ಮುಂತಾದ್ವರ ಬಾಧೆ ಇಲ್ಲದಂತೆ ಸಂತೋಷದಿಂದ ಪೋಷಿಸುತ್ತಾ, ಈ ಶರೀರ ನನ್ನದೆಂಬ ಮಮತೆ ಬಿಟ್ಟಿರುವವನೇ ಮಹಾಯೋಗಿ ಎಂದರ್ಥ.

"ಏಷವೈ ದೇವರಥಃ"-ಎಂಬ ಶೃತ್ಯರ್ಥ ಇದರಿಂದ ವಿವರಿಸಿತು. ॥೨೫॥

# ಸರ್ವವ್ಯಾಖ್ಯಾನಸಾರ ಸಂಗ್ರಹ

ಸರ್ವರ ಹೃತ್ಕಮಲ ಮಧ್ಯನಿವಾಸಿಯಾದ ಬಿಂಬರೂಪಿ ಶ್ರೀಪರಮಾತ್ಮನಿಗೆ ಈ ಸಾಧನ ಶರೀರವೇ ರಥವೆಂಬ ವಿಷಯದಲ್ಲಿ ಇನ್ನೂ ಹೆಚ್ಚು ವಿವರಗಳನ್ನು ನೀಡುತ್ತಾರೆ, ಜ್ಞಾನಿವರೇಣ್ಯರಾದ ದಾಸರಾಯರು ಪ್ರಸಕ್ತ ಈ ಪದ್ಯದಲ್ಲಿ.

(೧) ವೇದಗಳಲ್ಲಿ ಸಂಚಾರ ಮಾಡುವುದರಿಂದ ಮುಖ್ಯ ಪ್ರಾಣದೇವರಿಗೆ **"ಮಾತರಿಶ್ವ"**-ಎಂದು ಹೆಸರು. ವೇದ ಪ್ರತಿಪಾದ್ಯರಾದ, ಜೀವೋತ್ತಮರಾದ ಶ್ರೀ ಮುಖ್ಯ ಪ್ರಾಣದೇವರೇ ದೇಹವೆಂಬ ಈ ರಥಕ್ಕೆ ಸಾರಥಿಗಳು. ಭಗವದ್ವಿಷಯಗಳಲ್ಲಿ ನಿಶ್ಚಲವಾದ ಜ್ಞಾನಕ್ಕೆ ಸುಬುದ್ಧಿಯೇ ಕಾರಣವು. "ಮಾನವರ ಬುದ್ಧಿಯೇ ಈ ದೇಹಾಖ್ಯವೆಂಬ ರಥಕ್ಕೆ ಸಾರಥಿಯು"-ಎಂದು ಪುರಾಣೋಕ್ತಿ ಇದೆ. ಇಲ್ಲಿ ಸುಬುದ್ಧಿಯೇ ಚಿತ್ತವು. "ಸತ್ಕರ್ಮಗಳ ನಡೆಸಿ. ಸುಜ್ಞಾನಮತಿಯಿತ್ತು ಗತಿಪಾಲಿಸುವ ನಮ್ಮ ಪವಮಾನನು"-ಎಂಬುದಾಗಿ ಶ್ರೀ **ಪುರಂದರದಾಸವರ್ಯರ** ಉಗಾಭೋಗದ ವಚನವಿದೆ. ಅದರಂತೆ ಸತ್ಕರ್ಮಗಳು ನಡೆಯಬೇಕಾದರೆ, ಅದಕ್ಕೆ "ಸುಜ್ಞಾನ" ವೇ ಮುಖ್ಯಕಾರಣ ಸಾಮಗ್ರಿಯು, ಶ್ರೀ ವಾಯುದೇವರು ಇಂತಹ ಸುಜ್ಞಾನಪ್ರದರಾಗಿದ್ದಾರೆ. ಸುಬುದ್ಧಿ ಎಂಬ ಚಿತ್ತವೃತ್ತಿಯಿಂದ ಜನ್ಯವಾದದ್ದೇ ಸುಜ್ಞಾನವು. ಇಂತಹ ಚಿತ್ತಕ್ಕೆ ಮಾತರಿಶ್ವ ನಾಮಕರಾದ ಮುಖ್ಯ ಪ್ರಾಣರು ಅಭಿಮಾನಿಗಳು. ಇದರಿಂದ "ಸಾರಥಿ" ಎಂಬ ಶಬ್ದ ಪ್ರಯೋಗವು ಅತ್ಯಂತ ಸಮಂಜಸ.

(೨) ಸದಾ ಸರ್ವಕಾಲ ಸರ್ವಾವಸ್ಥೆಗಳಲ್ಲಿಯೂ ಹೃತ್ಕಮಲ ನಿವಾಸಿಯಾದ ಶ್ರೀ ಪರಮಾತ್ಮನೇ ದೇಹವೆಂಬ ಈ ರಥದಲ್ಲಿ ಕೂಡುವ "ರಥಿಕ" ನು. ರಥಿಕನಾದವನೇ ರಥದ ಯಜಮಾನನು. ಅವನ ಉಪಯೋಗಕ್ಕಾಗಿಯೇ ವಾಹನ ರೂಪವಾದ ರಥವಿರುವುದು. ಜಗತ್ಪ್ರಭುವಾದ ಶ್ರೀ ಪರಮಾತ್ಮನು ಜೀವರಿಗೆ ಈ ಸಾಧನ ಶರೀರವನ್ನು ಕೊಟ್ಟು, ದೇಹಾಂತರ್ಗತವಾಗಿ ತಾನಿದ್ದು ಸಕಲ ತತ್ತ್ವದೇವತೆಗಳ ದ್ವಾರಾ. ಶ್ರೀ ಮುಖ್ಯಪ್ರಾಣರ ನೇತೃತ್ವದಲ್ಲಿ (ಸಾರಥಿ ಸ್ಥಾನದಲ್ಲಿನ್ದಾರೆ) ಸಮಸ್ತ ಸತ್ಕರ್ಮಗಳನ್ನು ಮಾಡಿ ಮಾಡಿಸುತ್ತಿರುವನು. ದೇಹಗತ ಸಕಲ ವ್ಯಾಪಾರ ವಿಶೇಷಗಳೆಲ್ಲವೂ ಬಿಂಬನಿಂದಲೇ ಪ್ರೇರಿತವಾಗಿ ನಡೆಯುತ್ತಿರುವುದರಿಂದ, ಈ ದೇಹವೆಂಬ ರಥಕ್ಕೆ ಬಿಂಬನಾದ ಶ್ರೀ ಪರಮಾತ್ಮನೇ "ರಥಿಕನು" ಎಂಬ ಸಮನ್ವಯವು ಅತ್ಯಂತ ಅನ್ವರ್ಥವಾಗಿದೆ.

**"ಏಷ ವೈ ದೇವರಥಃ"-ಎಂಬ ಶೃತ್ಯರ್ಥ** ಇದರಿಂದ ವಿಶದೀಕೃತವಾಗಿದೆ.

(೩) ಇಂತಹ ಸಾಧನ ಶರೀರವನ್ನು ಗಾಳಿ. ಬಿಸಿಲು, ವಾತ ಪಿತ್ಥಾದಿ ಸಕಲ ವಿಧವಾದ ಬಾಧೆಗಳಿಂದ ಕರುಣಾಳುವಾದ ಭಗವಂತನು ಸದಾ ಸಂರಕ್ಷಿಸುವನು. ಗಾಳಿ, ಬಿಸಿಲು, ಮಳೆ, ಚಳಿ ಮುಂತಾದವು ಋತು ಧರ್ಮಗಳು. ಶ್ರೀ ಪರಮಾತ್ಮನು ಕಾಲಾಂತರ್ಗತನಾಗಿದ್ದುಕೊಂಡು, ಕಾಲ ನಿಯಾಮಕನಾಗಿ ಋತು ಧರ್ಮಗಳನ್ನು ಆಯಾಯಾ ಕಾಲಕ್ಕೆ ತಕ್ಕಂತೆ ನಡೆಯಿಸುತ್ತಿರುವನು. ಇದು ಭಗವದ್ವ್ಯಾಪಾರವು. ಇವುಗಳ ವೈಷಮ್ಯದಿಂದ ದೇಹಕ್ಕೆ ಬಾಧೆಯಾದರೂ, ಸಹನಾ ಬುದ್ಧಿಯಿಂದ ಸಹಿಸಿಕೊಳ್ಳಬೇಕೆಂದು ದಾಸರಾಯರ ಅಭಿಪ್ರಾಯವು. ಇಂತು ಸಹನಾ ಶೀಲನಾಗಿ, ಸಾಧನ ಶರೀರವಾದ ಈ ದೇಹವನ್ನು ಭಗವಂತನ ರಥವೆಂಬ ಜ್ಞಾನಾನುಸಂಧಾನದಿಂದ ಪೋಷಿಸಿಕೊಳ್ಳಬೇಕು ಇಂತಹ ಪೋಷಣೆ ಕೇವಲ ದೇಹಾಭಿಮಾನದಿಂದ ಮಾತ್ರ ಕೂಡಿರಬಾರದು. ಅದು ದುಸ್ಸಾಧನಕ್ಕೆ ಕಾರಣವಾಗುವುದು. ದೇಹಾಭಿಮಾನವನ್ನು ಬಿಟ್ಟವನೇ ಮಹಾಯೋಗಿ ಎಂದೆನಿಸುವನು-ಎಂದು ಹೇಳುತ್ತಾರೆ. ಯೋಗಸಿದ್ಧನು ಪರಮ ಜ್ಞಾನಿಯು. ಅಂತಹ ಮಹಾಯೋಗಿಯು ಶರೀರಾಭಿಮಾನವನ್ನು ತೊರೆದವನಾಗಿ, ಕೇವಲ ಭಗವತ್ಸಾಧನಾರೂಪವಾದ ಸತ್ಕರ್ಮಾಚರಣೆಗಳಿಗೆ ಶರೀರವು ಕಾರಣ ಸಾಮಾಗ್ರಿ ಎಂದು ಭಾವಿಸಿ, ದೇಹಗತ ರಥಿಕನಾಮಕನಾದ ಬಿಂಬವನ್ನು ಸರ್ವದಾ ಉಪಾಸಿಸುತ್ತಿರುವನು. ಅಂತಹ ಸುಜ್ಞಾನಿಯೇ ಮಹಾಯೋಗಿಯಲ್ಲವೇ? ॥೨೫॥

## ಪದ್ಯ (೨೬)

ಮೂಲ :

ಭವವೆನಿಪ ವನಧಿಯೊಳು ಕರ್ಮ ।
ಪ್ರವಹದೊಳು ಸಂಚರಿಸುತಿಹ ದೇ ।
ಹವ ಸುನಾವೆಯ ಮಾಡಿ ತನ್ನವರಿಂದೊಡಗೂಡಿ ॥
ದಿವಸ ದಿವಸಗಳಲ್ಲಿ ಲಕುಮೀ ।
ಧವನು ಕ್ರೀಡಿಪನೆಂದು ಚಿಂತಿಸಿ ।
ಈವನಯ್ಯ ಭವಾಬ್ಧಿ ದಾಟಿಸಿ ಪರಮಸುಖವನೀವ ॥ ॥೨೬॥

**ಅವತರಣಿಕೆ :–**

ಜನನ ಮರಣಾಖ್ಯವಾದ ಸಂಸಾರವೆಂಬ ಅಕ್ಷಯಸಾಗರದಲ್ಲಿ ಕರ್ಮ ಪ್ರವಾಹದಲ್ಲಿ ಸಂಚರಿಸುತ್ತಿರುವ ನಾವೆಯೇ ನಮ್ಮ ಈ ಶರೀರವು. ರಮಾ ಧವನಾದ ಶ್ರೀ ಪರಮಾತ್ಮನು ತನ್ನವರೇ ಆದ ತತ್ತ್ವಾಭಿಮಾನಿದೇವತೆ ಗಳಿಂದೊಡಗೂಡಿ, ಸಾಧನ ಶರೀರವೆಂಬ ಈ ದೇಹದಲ್ಲಿ ನೆಲಸಿದ್ದು, ವಿಹಾರ ಮಾಡುತ್ತಿರುವನು ಎಂಬ ಜ್ಞಾನಾನುಸಂಧಾನದಿಂದ ಉಪಾಸಿಸುತ್ತಿರುವ ಜೀವರನ್ನು ಪವನಪಿತನಾದ ಪರಮಾತ್ಮನು ಭವವೆಂಬ ಈ ದುಸ್ತರವಾದ ಸಮುದ್ರವನ್ನು ದಾಟಿಸಿ, ಕರ್ಮಬಂಧನದಿಂದ ಮುಕ್ತರನ್ನಾಗಿ ಮಾಡಿ. ಪರಮ ಪುರುಷಾರ್ಥರೂಪವಾದ ಮೋಕ್ಷಸಾಮ್ರಾಜ್ಯವನ್ನು ಅನುಗ್ರಹಿಸುವನು ಎಂದು ವಿವರಿಸುತ್ತಾರೆ. "ಭವವೆನಿಪ" ಎಂಬ ಪ್ರಸಕ್ತ ಸಂಧಿಗತ ೨೬ ನೆಯ ಈ ಪದ್ಯದಿಂದ. ॥೨೬॥

**ಪ್ರತಿಪದಾರ್ಥ :—**

**ಭವವೆನಿಪ** = ಸಂಸಾರವೆಂಬ **ವನಧಿಯೊಳು** = ಸಮುದ್ರದಲ್ಲಿ **ಕರ್ಮ** = ಪುಣ್ಯ ಪಾಪಗಳೆಂಬ ಕರ್ಮ ಸಮೂಹಗಳ **ಪ್ರವಹದೊಳು** = ಪ್ರವಾಹದಲ್ಲಿ (ನದಿಯ ಸಾದೃಶ್ಯ) **ದೇಹವ** = ಈ ಪಾಂಚಭೌತಿಕ ವಾದ ಶರೀರವನ್ನೇ **ಸುನಾವೆಯ ಮಾಡಿ** = ಶ್ರೇಷ್ಠವಾದ ತೆಪ್ಪವನ್ನಾಗಿ ಅನುಸಂಧಾನಮಾಡಿ **ತನ್ನವರಿಂದ** = ಸ್ವಭಕ್ತರಾದ ತತ್ತ್ವಾಭಿಮಾನಿ ದೇವತೆಗಳಿಂದ **ಒಡಗೂಡಿ** = ಕೂಡಿಕೊಂಡು (ಯುಕ್ತನಾಗಿ) **ದಿವಸ ದಿವಸಗಳಲ್ಲಿ** = ಪ್ರತಿ ದಿನದಲ್ಲಿಯೂ **ಲಕುಮೀಧವನು** = ಲಕ್ಷ್ಮೀ ಪತಿಯಾದ ಶ್ರೀಮನ್ನಾರಾಯಣನು **ಕ್ರೀಡಿಪನೆಂದು** = ಆಟವಾಡುತ್ತಿ ರುವನು (ಸಂಚರಿಸುತ್ತಿರುವನು) ಎಂಬುದಾಗಿ **ಚಿಂತಿಸಿ** = ಅನುಸಂಧಾನ ಪೂರ್ವಕ ಉಪಾಸನೆ ಮಾಡಿದರೆ **ಪವನನಯ್ಯ** = ಶ್ರೀ ವಾಯುದೇವರ ತಂದೆಯಾದ ಶ್ರೀ ಪರಮಾತ್ಮನು **ಭವಾಬ್ಧಿ** = ಸಂಸಾರವೆಂಬ ಈ ದುಸ್ತರ ವಾದ ಸಮುದ್ರದಿಂದ **ದಾಟಿಸಿ** = ನಮ್ಮನ್ನು ಪಾರುಮಾಡಿ **ಪರಮ**

**ಸುಖವನು**= ಉತ್ತಮವಾದ ಸ್ವರೂಪಾನಂದಾವಿರ್ಭಾವವೆಂಬ ಮೋಕ್ಷವನ್ನು **ಈವ**= ಕೊಡುತ್ತಾನೆ ॥೨೬॥

## ವ್ಯಾಖ್ಯಾನಗಳು

### (೧) ಶ್ರೀ ಸಂಕರ್ಷಣ ಒಡೆಯರ ವ್ಯಾಖಾನ :-

ಭವವೆನಿಪ -ಅಹಂ ಮಮಾಖ್ಯ ಸಂಸಾರ ಎನತಕ್ಕ, ವನಧಿಯೊಳು- ಸಮುದ್ರದಲ್ಲಿ, ಕರ್ಮ ಪ್ರವಹದೊಳು- ದಶೇಂದ್ರಿಯಗಳಿಂದ ಆಗತಕ್ಕ ಕರ್ಮ ಗಳೆಂಬೋ ಪ್ರವಾಹದಲ್ಲಿ, ಸಂಚರಿಸುತಿಹ-ಸಂಚಾರ ಮಾಡುತಾ ಇರತಕ್ಕ, ದೇಹವ-ಪಾಂಚ ಭೌತಿಕ ಸ್ಥೂಲ ದೇಹವೇ, ಸುನಾವೆಯ ಮಾಡಿ-ಸಮೀಚೀನ ಈ ದೇಹವನ್ನು ಸಮೀಚೀನವಾದ ಬುದ್ಧಿಯಿಂದ ನಾವಿತ್ವೇನ ಅನುಸಂಧಾನ ಮಾಡಿ, ತನ್ನವರಿಂದೊಡಗೂಡಿ-ತನ್ನವರಾದ ಯಾವತ್ತೂ ಬಂಧುಗಳ ಸಂಗಡ ಕೂಡಿಕೊಂಡು, ದಿವಸ ದಿವಸಗಳಲ್ಲಿ-ಪ್ರತಿದಿವಸಗಳಲ್ಲಿಯೂ, ಲಕುಮೀ ಧವನು-ಲಕ್ಷ್ಮೀ ಪತಿಯಾದ ಶ್ರೀಮನ್ನಾರಾಯಣ ದೇವರು ಕ್ರೀಡಿಪನೆಂದು- ಇಂಥಾ ಜಲದಲ್ಲಿ ಇಂಥಾ ನಾವೆಯಲ್ಲಿ ವಿದ್ಯಮಾನನಾಗಿ ಸಂಚಾರ ಮಾಡುವನ ಎಂತ ಚಿಂತಿಸಿ-ಅನುಸಂಧಾನದಿಂದ ಚಿಂತನೆ ಮಾಡಿದರೆ, ಪವನಪಿತ್ರ-ಶ್ರೀ ವಾಯುದೇವರ ತಂದೆಯಾದ ಸಂಕರ್ಷಣದೇವರು, ಭವಾಬ್ಧಿ ದಾಟಿಸಿ- ಪರಮ ಸುಖವೀವ-ಉತ್ತಮವಾದ ಸ್ವರೂಪ ಸುಖ ವ್ಯಕ್ತಮಾಡಿ ಕೊಡುವ. ಸಂಸಾರ ಸಮುದ್ರ ದಾಟಿಸಿ, ಬಾಹ್ಯ ದೃಷ್ಟಾಂತ ಅಧ್ಯಾತ್ಮದಲ್ಲಿ ಸಮನ್ವಯ ಮಾಡಿಕೊಳ್ಳಬೇಕು.: ಎಲ್ಲೆಲ್ಲಿ ಸಂಚಾರ ಮಾಡಿದರೂ ಈ ಅನುಸಂಧಾನದಿಂದ ಇರಬೇಕೆಂದು ತಾತ್ಪರ್ಯ. ॥೨೬॥

### (೨) "ಭಾವಪ್ರಕಾಶಿಕೆ" ವ್ಯಾಖ್ಯಾನ :-

ಪ್ರಕಾರಾಂತರದಿಂದ ಭಗವತ್ಪೂಜಾ ಕ್ರಮವನ್ನು ಹೇಳುತ್ತಾರೆ.

ಸಂಸಾರವೆಂಬ ಸಮುದ್ರದಲ್ಲಿ ಪುಣ್ಯ ಪಾಪಾದಿ ಕರ್ಮಗಳೆಂಬ ನದೀ ಪ್ರವಾಹ ಮೂಲಕದಿಂದ ಬಂದು ಸೇರಿ, ಜನನ ಮರಣ ರೂಪವಾಗಿ ಸಂಚರಿಸು.

ತ್ತಿರುವ ಈ ದೇಹವನ್ನು ಶ್ರೀ ಪರಮಾತ್ಮನು ತೆಪ್ಪವನ್ನಾಗಿ ಮಾಡಿಕೊಂಡು ತನ್ನವರಾದ ತತ್ವಾಭಿಮಾನಿ ದೇವತೆಗಳಿಂದ ಕೂಡಿ ಪ್ರತಿ ದಿವಸದಲ್ಲಿಯೂ ಆ ತೆಪ್ಪದಲ್ಲಿ ಕೂತುಕೊಂಡು ಆಟವಾಡುತ್ತಿರುವನು ಎಂದು ನಾವು ಈ ದೇಹ ವನ್ನು ದೇವರ ವಾಸಸ್ಥಾನವಾಗಿ ಭಾವಿಸಿ, ನಮ್ಮದೆಂಬ ಅಭಿಮಾನವನ್ನು ಬಿಟ್ಟರೆ, ಪ್ರಾಣಪತಿಯಾದ ಶ್ರೀ ಪರಮಾತ್ಮನು ನಮ್ಮನ್ನು ಸಂಸಾರ ಸಮುದ್ರ ದಿಂದ ದಾಟಿಸಿ, ಪರಮಾನಂದವನ್ನು ಕೊಡುವನು. ॥೨೬॥

(೨) "ಭಾವದರ್ಪಣಟೀಕಾ" ವ್ಯಾಖ್ಯಾನ:—

**"ಅತ್ಮಾನಮಧಿಕೃತ್ಯ ವರ್ತಮಾನ ದೇಹೇಂದ್ರಿಯಾದಿ ಪ್ರಕಾಶಕಂ ಅಧ್ಯಾತ್ಮ ಯೋಗಾಧಿಗಮೇನ ದೇವಂಮತ್ವಾ"**

–ಎಂಬ ಟೀಕಾವಾಕ್ಯವನ್ನು ಶ್ರೀ ವಿಜಯಧ್ವಜ ತೀರ್ಥರು ಹೇಳಿ ದ್ದಾರೆ. ತದ್ಭಾವವನ್ನೇ ಶ್ರೀದಾಸಾರ್ಯರು ಈ ಪದ್ಯದಲ್ಲಿ ಹೇಳುತ್ತಾ ಶ್ರೀ ಬಿಂಬನ ಕಾರುಣ್ಯವೆಂಬ ಸಂಸಾರಸಾಗರ ತರಣಕ್ಕೆ ಈ ದೇಹವು ನಾವೆ ಎಂದು ಹೇಳುತ್ತಾರೆ.

ಜನನ ಮರಣರೂಪ ಸಂಸಾರವೆಂಬ ಸಮುದ್ರದಲ್ಲಿ ಅನಾದಿ ಕರ್ಮ ವೆಂಬ ಪ್ರವಾಹದಲ್ಲಿ ಸಂಚಾರಕ್ಕೆ ಕಾರಣವಾಗಿರುವ ಈ ಸ್ಥೂಲ ದೇಹವನ್ನೆ, ಈ ಕರ್ಮ ದೇಹಗಳು ಯಾರದು? ಜೀವನದು, ಆದ್ದರಿಂದ ಸಂಸಾರ ವಾರಿಧಿ ಸಂಚಾರವೂ ಅವನದೇ ಆಗಬೇಕು. ಅಷ್ಟೇ ಶಕ್ತಿಯು ಜೀವನಿಗಿಲ್ಲ. ಪಾರತಂತ್ರ್ಯದ ಅಲ್ಪಶಕ್ತಿಯುಳ್ಳವನಾಗಿದಾನೆ. ಆದ್ದರಿಂದ ಜೀವನ ಸಂಸಾರ ಸಾಗರ ತರಣವೆಂಬ ದುಸ್ತರ ಕರ್ಮದಲ್ಲಿ ಶ್ರೀ ಬಿಂಬನು ಕಾರುಣ್ಯದಿಂದ ಪ್ರತಿ ಬಿಂಬನ ಕರ್ಮಾನುಭೂತವಾದ ಸ್ಥೂಲದೇಹವನ್ನು ಉತ್ತಮವಾದ ದೋಣಿ ಯನ್ನಾಗಿ ಮಾಡಿಕೊಂಡು, ತನ್ನವರಾದ ತತ್ತ್ವ ದೇವತೆಗಳಿಂದಲೂ ಮತ್ತು ಪ್ರತಿಬಿಂಬನ ಪರಿವಾರದಿಂದಲೂ ಸಹಿತನಾಗಿ, ಕರ್ಮ ವಿಮೋಚನೆಯವರೆಗೆ ಪ್ರತಿನಿತ್ಯದಲ್ಲಿ ಲಕ್ಷ್ಮೀ ಪತಿಯಾದ ಬಿಂಬರೂಪಿ ಶ್ರೀ ಹರಿಯು ಕ್ರೀಡೆಮಾಡು ತ್ತಾನೆ-ಎಂಬುದಾಗಿ ನಿಯಾಮಕ ಕರ್ತೃತ್ವ ಸಹಾಯವು ಪ್ರಬಲ, ಪ್ರೇರಕ

ತೃರ್ತ್ವವು ಅಬಲ. ಅಬಲವಾದ ಪ್ರೇರಕ ಕರ್ತೃರ್ತ್ವದ "**ಪ್ರಯತ್ನ ಮಗ್ರತೋ ನಿಧಾಯ**"-ಎಂಬಂತೆ ಸಾಧಕನ ಸಾಧನ ಪ್ರಯತ್ನವನ್ನು ಅನುಸರಿಸಿ, ನಿಯಮಕ ಕರ್ತೃರ್ತ್ವ ಸಹಾಯವೆಂದು ಸ್ಮರಣೆ ಮಾಡಿದರೆ, ವಾಯುದೇವರ ತಂದೆಯಾದ ಬಿಂಬಮೂರ್ತಿ ಶ್ರೀಹರಿಯು, ಸಮುದ್ರವನ್ನು ಪಾರಹೊಂದಿಸಿ, ಸ್ವರೂಪಾನಂದವನ್ನು ಹೊಂದಿಸುತ್ತಾನೆ. ಅಂದರೆ ಇದೇ ಮೋಕ್ಷವೆಂದಲ್ಲ. ಒಂದು ಪದ್ಯ ಕೇಳಿದರೆ, ಅಲ್ಪ ಗ್ರಂಥಶ್ರವಣ ಮಾಡಿದರೆ, ಮೋಕ್ಷವೆಂದಲ್ಲ. ಶ್ರವಣವು ಮನನವಾಗಬೇಕು. ಮನನವು ಧ್ಯಾನವಾಗಬೇಕು. ಧ್ಯಾನವು ಭಕ್ತಿಯಾಗಬೇಕು. ಪ್ರತಿಯೊಂದು ಸಂದರ್ಭದಲ್ಲಿ ಸಾಧನೋತ್ಸಾಹ ಸ್ವಾನುಭವಗಳು ಬೇಕು. ಕೊನೆಗೆ "**ಯಮೈವೇಷ ವೃಣುತೇ ತೇನ ಲಭ್ಯಃ**"-ಎಂಬ ಶ್ರೀಬಿಂಬನ ಪರಮ ಪ್ರಸಾದ ಬೇಕು. ॥೨೬॥

(೪) ಶ್ರೀ ವಾದಿರಾಜಾಚಾರ್ಯರ ವ್ಯಾಖ್ಯಾನ (ಸಂಸ್ಕೃತ ಮೂಲ) :

"ಭವ"-ಇತಿ । "ನೃದೇಹಮಾಸಾದ್ಯ ಸುದುರ್ಲಭಂ ಯಃ ಪ್ಲವಮ್" ॥ ಇತ್ಯುಕ್ತೇಃ । ದುರ್ಲಭೋ ಮಾನುಷೋ ದೇಹಃ ಸಂಸಾರೇ ಭ್ರಮತಾಂ ನೃಣಾಮ್ ॥ ಜ್ಞೇಯೋಽಯಂ ಪರಮಃ ಪೋತಃ ಸಂಸಾರಾರ್ಣವ ತಾರಣೇ ಯದಿ ವಿಂದೇತ್ ಇಹ ಜ್ಞಾನಮ್ ತರ್ಹ್ಯೇವಾಮೃತ ತಾಂ ವ್ರಜೇತ್ ॥ ಇತಿ **ವಿಷ್ಣು ರಹಸ್ಯೇ** ॥೨೬॥

**ಕನ್ನಡಾರ್ಥ** :—

ಸಂಸಾರವೆಂಬುದು ಸಮುದ್ರ. ಇದನ್ನು ದಾಟಲು ಒಂದು ಸಾಧನ ಅಗತ್ಯ. ದೇಹವು ಒಳ್ಳೆಯ ನಾವೆ. ಮಾನವಜನ್ಮ ಅತ್ಯಂತ ದುರ್ಲಭವು. ಈ ಜನ್ಮದಲ್ಲಿ ಮಾನವ ದೇಹವು ಒಂದು ಅಪೂರ್ವ ನಾವೆ ಇದ್ದಂತೆ. ಸಂಸಾರದಲ್ಲಿ ಅನೇಕ ಯೋನಿಗಳಲ್ಲಿ ಜನ್ಮ ತಾಳಿ, ಬಳಲುತ್ತಿರುವವರಿಗೆ ಮಾನವ ದೇಹವು ದುರ್ಲಭವಾದುದು. ಸಂಸಾರವೆಂಬ ಅಕ್ಷಯ ಸಾಗರವನ್ನು ದಾಟಲು ಮಾನವ ದೇಹವು ಒಂದು ಉತ್ತಮ ನಾವೆಯು. ಈ ಅಲಭ್ಯ ಲಭ್ಯವಾದ ಮಾನವ ಜನ್ಮ ಬಂದಾಗ, ಶ್ರೀಮನ್ನಾರಾಯಣನ ಜ್ಞಾನವನ್ನು ಪಡೆಯಬೇಕು.

ಆದರಿಂದ ಆವನು ಮುಕ್ತನಾಗುವನು- ಈ ವಿಷಯವು ವಿಷ್ಣುರಹಸ್ಯದಲ್ಲಿ ನಿರೂಪಿಸಲ್ಪಟ್ಟಿದೆ ॥೨೬॥

(ಆ) "ಗುರುಹೃದಂಪು ಪ್ರಕಾಶಿಕೆ"-ವ್ಯಾಖ್ಯಾನ : —

ಈ ದೇಹವನ್ನು ದೇವರಿಗೆ ತಪ್ಪೋತ್ಸವವೆಂದು ಭಾವಿಸಿ, ಕೆಲವರು ಪೂಜಿಸುವರೆಂದು ಹೇಳುತ್ತಾರೆ- "ಭವವೆಂದು" ಜನನ, ಮರಣ, ಸುಖ, ದುಃಖಾತ್ಮಕವೆಂಬ ಸಂಸಾರ ಸಮುದ್ರದಲ್ಲಿ, ಮನುಷ್ಯನ ಶರೀರವನ್ನೇ ಪುಣ್ಯ ಪಾಪವೆಂಬ ಎರಡು ವಿಧವಾದ ಕರ್ಮಗಳಾದ ನದೀ ವೇಗದಲ್ಲಿ ಸಂಚಾರ ಮಾಡುವ ತೆಪ್ಪವನ್ನಾಗಿ ರಚಿಸಿ, ತತ್ತ್ವಾಭಿಮಾನಿಗಳೆಂಬ ಸ್ವಜನ ದೇವತೆಗಳಿಂದ ಕೂಡಿಕೊಂಡು ಲಕ್ಷ್ಮೀಪತಿಯು, ನಿರಂತರ ತಪ್ಪೋತ್ಸವ ಆಡುವನೆಂದು ಚಿಂತಿಸಿದರೆ, ಪ್ರಾಣಪತಿಯಾದ ದೇವರು ಸಂಸಾರ ಸಮುದ್ರ ದಾಟಿಸಿ, ಉತ್ತಮ ಸ್ಥಾನವಾದ ವೈಕುಂಠಾದಿಲೋಕ ಸುಖವನ್ನು ಕೊಡುವನು. ॥೨೬॥

## ಸರ್ವವ್ಯಾಖ್ಯಾನಸಾರಸಂಗ್ರಹ

ಜನನ ಮರಣಾಖ್ಯ ರೂಪವಾದ ಈ ಸಂಸಾರವು ದುಸ್ತರವಾದ ಒಂದು ಮಹಾಸಾಗರ. ಲಿಂಗದೇಹಗತ ಅನಾದಿಕರ್ಮ ಪ್ರವಾಹದ ಫಲವಾಗಿ ಜೀವನು ನಾನಾ ಜನ್ಮಗಳಲ್ಲಿ ಬಂದು, ಪಾರುಗಾಣದೆ ತೊಳಲಾಡುತ್ತಿರುವನು. ಕರ್ಮಪ್ರವಾಹ ರೂಪವಾದ ನದಿಯೇ ಭವಾಬ್ಧಿಯನ್ನು ಸೇರುವುದು.ಅಂದರೆ, ಸುಕೃತ ಮತ್ತು ದುಷ್ಕೃತ ಕರ್ಮಗಳ ಫಲವಾಗಿ ಸಂಸಾರವೆಂಬ ಬಂಧನವು. ಇಂತಹ ಭವಾಬ್ಧಿಯಲ್ಲಿ ತೊಳಲಾಟಕ್ಕೆ ಕರ್ಮಪ್ರವಾಹಗಳೇ ಮೂಲಕಾರಣವು. ಅಚಿಂತ್ಯಾದ್ಭುತ ಶಕ್ತನಾದ ಶ್ರೀ ಪರಮಾತ್ಮನು ಅಪ್ರಾಕೃತ ಸ್ವರೂಪಿಯಾದ ಚೇತನನಿಗೆ ಪ್ರಾಕೃತ ಗುಣಗಳ ಸಂಬಂಧಗೈಸಿ, ತನ್ಮೂಲಕ ಅಹಂಕಾರ ಮಮಕಾರಾದಿಗಳನ್ನು ಕೊಟ್ಟು ಸಂಸಾರವೆಂಬ ಮಹಾರ್ಣವದಲ್ಲಿ ಬಿಡುವನು. ಇಂತಹ ಅಕ್ಷಯ ಸಾಗರವಾದ ಸಂಸಾರದಲ್ಲಿ ಈಜಿ ಪಾರಾಗಲು ಇರುವ ಏಕೈಕ ಮಾರ್ಗವೆಂದರೆ, ಶ್ರೀ ಪರಮಾತ್ಮನ ಕಾರುಣ್ಯ ವಿಶೇಷ. ಸಾಧನ ಶರೀರವಾದ ಈ ಪಾಂಚಭೌತಿಕ ದೇಹವೇ ಒಂದು ಶ್ರೇಷ್ಠವಾದ ನಾವೆಯು. ಇಂತಹ ಸುನಾವೆ

ಯಲ್ಲಿ ಬಿಂಬರೂಪಿಯಾದ ಶ್ರೀ ಪರಮಾತ್ಮನು ಅಂಬಿಗನಂತಿದ್ದು, ಜೀವನನ್ನು ಈ ಸಂಸಾರ ಸಾಗರದಿಂದ ದಾಟಿಸುವನು ಎಂದು ಅನುಸಂಧಾನ ಮಾಡಬೇಕು. ಪಿಂಡಾಂಡ ರೂಪವಾದ ಈ ಶರೀರವು ೨೪ ತತ್ತ್ವಗಳಿಂದ ನಿರ್ಮಿತವಾದದ್ದು. ಪ್ರತಿ ತತ್ತ್ವಕ್ಕೂ ಆಯಾಯಾ ಅಭಿಮಾನಿ ದೇವತೆಗಳಿದ್ದು, ಶ್ರೀ ವಾಯು ದೇವರ ನಿಯಂತ್ರಣದಲ್ಲಿ ಬಿಂಬನ ಅಣತಿಯಂತೆ ತತ್ತ್ವ ಕಾರ್ಯಗಳನ್ನು ಮಾಡು ತ್ತಿರುವರು. ಇಂತು, ಚೇತನರ ಬಿಂಬನಾದ ಶ್ರೀ ಪರಮಾತ್ಮನು ದೇಹವೆಂಬ ಈ ಸುನಾವೆಯಲ್ಲಿ ಕೂತು, ತನ್ನವರಾದ ತತ್ತ್ವಾಭಿಮಾನಿ ದೇವತೆಗಳಿಂದ ಕೂಡಿಕೊಂಡವನಾಗಿ, ಈ ದೇಹದಲ್ಲಿ ಕ್ರೀಡಿಸುತ್ತಾ, ದೇಹಗತ ಕಾರ್ಯಗಳನ್ನು ಮಾಡಿ ಮಾಡಿಸುತ್ತಿರುವನು. ಪ್ರತಿನಿತ್ಯದಲ್ಲಿಯೂ ಲಕ್ಷ್ಮೀರಮಣನಾದ ಶ್ರೀ ಪರಮಾತ್ಮನು ಸುನಾವೆ ಎಂಬ ಈ ದೇಹದಲ್ಲಿ ವಿಹರಿಸುತ್ತಿರುವನು ಎಂದು ಚಿಂತಿಸಿ, ಧ್ಯಾನಿಸುತ್ತಿರಬೇಕು. ಸೂಕ್ಷ್ಮ ದೃಷ್ಟಿಯಲ್ಲಿ ಜಯಾಪತಿ ಸಂಕರ್ಷಣ ನಾಮಕ ಪರಮಾತ್ಮನ ದೆಸೆಯಿಂದ ಉತ್ಪನ್ನರಾದವರೇ **ಸೂತ್ರನಾಮಕ ವಾಯುದೇವರು.** ಪೂರ್ವೋಕ್ತ ಪ್ರಕಾರ ಧ್ಯಾನಮಾಡುವ ಭಗವದ್ಭಕ್ತ ರನ್ನು ಪವನಯ್ಯನಾದ ಶ್ರೀ ಸಂಕರ್ಷಣರೂಪೀ ಶ್ರೀ ಪರಮಾತ್ಮನು ದುಸ್ತರ ವಾದ ಸಂಸಾರವೆಂಬ ಈ ಮಹಾಸಾಗರವನ್ನು ಲೀಲಾ ಮಾತ್ರದಿಂದ ದಾಟಿಸಿ, ಕರ್ಮ ವಿಮೋಚನೆ ಗೈಸುವನು. ಕರ್ಮವಿಮೋಚನಾ ದ್ವಾರಾ ಸ್ವರೂಪಾ ನಂದವನ್ನು ಅಭಿವ್ಯಕ್ತಿಮಾಡಿ, ಪರಮ ಪುರುಷಾರ್ಥರೂಪವಾದ ಮುಕ್ತಿ ಸುಖವನ್ನು ಕರುಣಿಸುವನು ಎಂದು ತಾತ್ಪರ್ಯ. ||೨೬||

## ಪದ್ಯ (೨೭)

ಮೂಲ :–

ಆಪಣಾಲಯಗತ ಪದಾರ್ಥವು ।
ಸ್ತ್ರೀ ಪುರುಷರುಗಳಿಂದ್ರಿಯಗಳಲಿ ।
ದೀಪ ಪಾವಕರೊಳಿಡುತಿಹ ತೈಲಾಗಿ ದ್ರವ್ಯಗಳ ॥
ಆ ಪರಮವದಾನವೆಂದು ಪ ।
ದೇಪದೇ ಮರೆಯದಲೆ ಸ್ಮರಿಸುತ ।
ಭೂಪನಂದದಿ ಸಂಚರಿಸು ನಿರ್ಭಯದಿ ಸರ್ವತ್ರ ॥ ||೨೭||

**ಅವತರಣಿಕೆ :-**

ಸರ್ವತ್ರ ನಾವು ಕಾಣತಕ್ಕ ಪದಾರ್ಥಗಳಲ್ಲಿ ಭಗವಚ್ಚಿಂತನಾ ಕ್ರಮದಿಂದ ಭಗವದರ್ಪಣ ಮಾಡುವ ಅನುಸಂಧಾನವನ್ನು ತಿಳಿಸುತ್ತಾರೆ–"ಆಪಣಾಲಯುಗತ" ಎಂಬ ಪ್ರಸಕ್ತ ಸಂಧಿಗತ ೨೭ ನೆಯ ಈ ಪದ್ಯದಿಂದ.

ಅಂಗಡಿಯಲ್ಲಿ ಮಾರಾಟಕ್ಕಾಗಿ ಇಟ್ಟಿರುವ ವಸ್ತುಗಳು ಸ್ತ್ರೀ ಮತ್ತು ಪುರುಷರು ದೇಹಗತ ಅವಯುವಗಳಲ್ಲಿ ಧರಿಸುವ ಆಭರಣ ವಿಶೇಷಗಳು, ಹಚ್ಚುವ ದೀಪಗಳು, ಉರಿಯುತ್ತಿರುವ ಅಗ್ನಿಗೆ ಹಾಕುವ ಎಣ್ಣೆ ಮುಂತಾದ ವಸ್ತುಗಳು. ಇತ್ಯಾದಿ ಆ ಸರ್ವೋತ್ತಮನಾದ ಶ್ರೀ ಪರಮಾತ್ಮಗೆ ಅರ್ಪಣೆ ಎಂಬ ಭಾವನೆಯಿಂದ, ಪುನಃ ಪುನಃ ಭಗವಂತನನ್ನು ಮರೆಯದೆ, ಸಕಲ ಕಾವಿನಲ್ಲಿ ಸ್ಮರಿಸಿಕೊಳ್ಳುತ್ತಾ, ಯಾವ ಭಯವೂ ಇಲ್ಲದೆ ನಿರ್ಭೀತನಾಗಿ ರಾಜನಂತೆ ಸಂಚರಿಸುತ್ತಿರು ಎಂದು ಹೇಳುತ್ತಾರೆ ಪ್ರಸಕ್ತ ಪದ್ಯದಿಂದ ॥೨೭॥

**ಪ್ರತಿಪದಾರ್ಥ :-**

**ಆಪಣಾಲಯುಗತ**= ಸರಕುಗಳನ್ನು ವ್ಯಾಪಾರ ಮಾಡತಕ್ಕ ಅಂಗಡಿಯಲ್ಲಿರುವ **ಪದಾರ್ಥವು**= ಸರಕುಗಳು (ಮಾರಾಟ ಮಾಡುವ ವಸ್ತುಗಳು) **ಸ್ತ್ರಿ ಪುರುಷಗಳ**= ಸ್ತ್ರೀ ಹಾಗೂ ಪುರುಷರುಗಳ **ಇಂದ್ರಿಯಗಳಲಿ**= ನಾಸಿಕಾದಿ ಇಂದ್ರಿಯಗಳಲ್ಲಿ ಧರಿಸತಕ್ಕ ಆಭರಣಾದಿಗಳು **ದೀಪ**= ದೀಪ ಅಗ್ನಿ ಮುಂತಾದುವುಗಳಿಗೆ ಹಾಕುವ **ತೈಲಾದಿ ದ್ರವ್ಯಗಳ**= ಎಣ್ಣೆ, ತುಪ್ಪ, ಕಾಷ್ಠ ಮುಂತಾದ ವಸ್ತುಗಳು **ಆ ಪರಮಗೆ**= ಪೂರ್ವೋಕ್ತ ಪದಾರ್ಥಗಳೆಲ್ಲವನ್ನೂ, ಸರ್ವೋತ್ಕೃಷ್ಟನಾದ ಆ ಪರಮಾತ್ಮನಿಗೆ **ಅವದಾನವೆಂದು**= ಅರ್ಪಿತ (ಆಹುತಿ) ವೆಂಬುದಾಗಿ **ಪದೇ ಪದೇ**= ಕ್ಷಣ ಕ್ಷಣಕ್ಕೂ (ಅಡಿಗಡಿಗೂ) **ಮರೆಯದಲೆ**= ಮರೆಯದೆ **ಸ್ಮರಿಸುತ**= ಧ್ಯಾನಕ್ಕೆ ತಂದುಕೊಳ್ಳುತ್ತಾ **ಭೂಪನಂದದಿ**= ರಾಜನಂತೆ (ಮಹಾಸಮರ್ಥನೋಪಾದಿಯಲ್ಲಿ) **ಸರ್ವತ್ರ**= ಎಲ್ಲಾ ಸ್ಥಳಗಳಲ್ಲಿಯೂ **ನಿರ್ಭಯದಿ**= ಭಯರಹಿತನಾಗಿ, ಅಂದರೆ, ಅಹಂ ಮಮತಾದಿಗಳನ್ನು ಬಿಟ್ಟು

ವಿಷಯ ಸಂಬಂಧವಾದ ಭಯದಿಂದ ರಹಿತನಾಗಿ **ಸಂಚರಿಸು** = ಸಂಚಾರ ಮಾಡು ||೨೭||

## ವ್ಯಾಖ್ಯಾನಗಳು

### (೧) ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ :-

ಇನ್ನು ಸರ್ವಪದಾರ್ಥಗಳ ಅರ್ಪಣೆ ಕ್ರಮವನ್ನು ಹೇಳುತ್ತಾರೆ.-

ಆಪಣಾಲಯಗತ -ವ್ಯಾಪಾರಮಾಡತಕ್ಕ ಅಂಗಡಿಯಲ್ಲಿ, ಪದಾರ್ಥವ- ನಾನಾ ವಿಧವಾದ ಮಾರತಕ್ಕ ಪದಾರ್ಥ ಸಮೂಹವು, ಸ್ತ್ರೀ ಪುರುಷರುಗಳ- ಯಾತ್ತ್ರಿ ಸ್ತ್ರೀಯರು ಪುರುಷರುಗಳ, ಇಂದ್ರಿಯಗಳಲಿ-ನಾಸಿಕಾದಿ ಇಂದ್ರಿಯ ಗಳಲ್ಲಿ ಧರಿಸತಕ್ಕ ಆಭರಣಾದಿ ಸಮೂಹವು, ದೀಪ-ದೀಪಗಳಿಗೆ ಹಾಕತಕ್ಕ, ತೈಲಾದಿ-ಎಣ್ಣೆ, ತುಪ್ಪ ಮೊದಲಾದವುಗಳು. ಪಾವಕರೊಳು-ಹಾಂಗೆ ಅಗ್ನಿ ಮೊದಲಾದವರಲ್ಲಿ, ಇಡುತಿಹ ದ್ರವ್ಯಗಳ-ಇಡತಕ್ಕ ಅಲ್ಲದೆ ಹಾಕತಕ್ಕ ಕಾಷ್ಠಾದಿ ಪದಾರ್ಥಗಳ ಏತಾದೃಶವಾಗಿ, ನಾನಾ ವಿಧವಾದ ದ್ರವ್ಯಗಳ, ಆ ಪರಮಗೆ- ಆಯಾ ಅಂತರ್ಗತನಾದ ಶ್ರೀ ಪರಮಾತ್ಮನಿಗೆ, ಅವದಾನವೆಂದು, ಅಂದರೆ, ಅಂಗಡಿಯಲ್ಲಿ ನೋಡಿದ ಪದಾರ್ಥಗಳು ಶ್ರೀ ಪರಮಾತ್ಮನಿಗೆ ಅರ್ಪಿತವೆಂತಲೂ ಸ್ತ್ರೀ ಪುರುಷರು ಧರಿಸಿರುವ ಆಭರಣಗಳು ಆಯಾ ಇಂದ್ರಿಯಸ್ಥ ಪರಮಾತ್ಮಗೆ ಅರ್ಪಿತವೆಂತಲೂ, ದೀಪಾಂತರ್ಗತರೂಪ ಪರಮಾತ್ಮಗೆ ತೈಲಾದಿಗಳು ಹಾಕಿ ಪರಮಾತ್ಮಗೆ ಅರ್ಪಿತವೆಂತಲೂ, ಅಗ್ನಿಯಲ್ಲಿ ನಾನಾವಿಧ ಕಾಷ್ಠಗಳು ಹವಿಸ್ಸು ಹಾಕಿ ಅಗ್ನ್ಯಂತರ್ಗತ ಶ್ರೀ ಪರಶರಾಮ ದೇವರಿಗೆ ಅರ್ಪಿತವೆಂತಲೂ, ಈ ಪ್ರಕಾರ ಭಗವದ್ರೂಪಗಳಿಂದ ಭಗವದ್ರೂಪಗಳಿಗೆ ಅರ್ಪಿಸುತ್ತಾ, ಪದೇಪದೇ- ಬಾರಿಬಾರಿಗೂ ವಿಸ್ಮೃತನಾಗದೆ, ಸ್ಮರಿಸುತ-ಅನುಸಂಧಾನದಿಂದ ಸ್ಮರಣೆ ಮಾಡುತ, ಭೂಪನಂದದಿ-ಮಹಾಸಮರ್ಥನೋಪಾದಿಯಲ್ಲಿ, ನಿರ್ಭಯದಿ- ಅಹಂ ಮಮತಾದಿಗಳು ಬಿಟ್ಟು ವಿಷಯ ಸಂಬಂಧವಾದ ಭಯದಿಂದ ರಹಿತನಾಗಿ ಸರ್ವತ್ರ ಸಂಚರಿಸು-ಸರ್ವ ಪ್ರದೇಶಗಳಲ್ಲಿ ಸಂಚಾರಮಾಡು, ಈ ದಿಕ್ಪ್ರದರ್ಶನ ದಿಂದ ಸರ್ವವೂ ಈ ಪ್ರಕಾರ ಅರ್ಪಿಸೋವನಾಗಬೇಕು ಎಂತ ತಾತ್ಪರ್ಯ.||೨೭||

(೨) "ಭಾವಪ್ರಕಾಶಿಕೆ"-ವ್ಯಾಖ್ಯಾನ ;-

ಪರಮಾತ್ಮನಲ್ಲಿ ನಿರ್ವ್ಯಾಜ ಭಕ್ತಿಯನ್ನು ಮಾಡಿ, ಎಲ್ಲವೂ ಭಗವಂತನ ಸೇವೆ ಎಂದು ತಿಳಿದು ಪೂಜಿಸುವವರಿಗೆ, ತಾವು ಉಣ್ಣುವುದು, ಉಡುವುದು, ತೊಡುವುದು ಎಲ್ಲವೂ ಭಗವತ್ಸೇವೆಯೇ ಆಗುವುದು. ಪ್ರತ್ಯೇಕ ಸಾಧನೆ ಬೇಕಾಗಿಲ್ಲವೆಂದು ಹೇಳುತ್ತಾರೆ.

ಭಾಗವತ ಪ್ರಥಮ ಸ್ಕಂಧದಲ್ಲಿ-

"ಆಮಯೋಯಂಚ ಭೂತಾನಾಂ ಜಾಯತೇ ಯೇನ ಸುವ್ರತ |
ತದೇವಹ್ಯಾಮಯಯು ದ್ರವ್ಯಂ ತತ್ಪುನಾತಿ ಚಿಕಿತ್ಸಕಂ ಏವಂ
ನೃಣಾಂ ಕ್ರಿಯಾ ಯೋಗಃ ಸರ್ವೇ ಸಂಸೃತಿ ಹೇತವಃ ||
ತ ಯೇವಾತ್ಮ ವಿನಾಶಾಯ ಕಲ್ಪಂತೇ ಕಲ್ಪಿತಾಪರೆ ||"

-ಎಂಬಂತೆ, ಯಾವ ಪದಾರ್ಥವು ರೋಗಕ್ಕೆ ಕಾರಣಭೂತವೋ, ಅಂದರೆ, ಪಾಷಾಣ, ವತ್ಸನಾಭಿ ಮೊದಲಾದ ಪದಾರ್ಥಗಳನ್ನು ತಿಂದರೆ, ಮನುಷ್ಯನನ್ನು ಕೊಲ್ಲುವುದು. ಆ ಪದಾರ್ಥಗಳನ್ನೇ ಶುದ್ಧಿ ಮಾಡಿ ವೈದ್ಯರು ರೋಗಿಗಳಿಗೆ ಕೊಡಲು ರೋಗವನ್ನು ನಾಶಮಾಡುವುದು, ಅದರಂತೆ ನಾವು ಮಾಡುವ ಸ್ನಾನ. ಅಲಂಕಾರ, ಭೋಜನಾದಿಗಳನ್ನು ಆತ್ಮಸೌಖ್ಯಕ್ಕೋಸ್ಕರ ವೆಂಬ ಭಾವನೆಯಿಂದ ಮಾಡಿದರೆ, ಸಂಸಾರಕ್ಕೆ ಕಾರಣವಾಗುವುವು. ಅವು ಗಳನ್ನೇ ಪರಮಾತ್ಮನ ವಾಸಸ್ಥಾನವಾದ ಶರೀರವನ್ನು ಪರಮಾತ್ಮನ ಪ್ರೀತಿ ಗಾಗಿ ತೊಳೆಯುತ್ತೇನೆ, ಅಲಂಕರಿಸುತ್ತೇನೆ, ಪೋಷಿಸುತ್ತೇನೆ-ಎಂದು ಪರ ಮಾತ್ಮನ ಪೂಜಾತ್ವೇನ ಭಾವಿಸಿದರೆ. ಮುಕ್ತಿಗೆ ಸಾಧನವೆಂದು ಹೇಳಿರುವರು. ಅದೇ ಅರ್ಥವನ್ನು ಇಲ್ಲಿ ಹೇಳುತ್ತಾರೆ :-

ಅಂಗಡಿಯೊಳಗಿರುವ ಪದಾರ್ಥಗಳು, ಮನೆಯಲ್ಲಿರುವ ಅಕ್ಕಿ, ಬೇಳೆ ಪದಾರ್ಥಗಳು. ಸ್ತ್ರೀಯರು ಪುರುಷರು ಇಡುವ ಉಡಿಗೆ ತೊಡಿಗೆಗಳು, ದೀಪಕ್ಕೆ ಹಾಕುವ ಎಣ್ಣೆ, ಬೆಂಕಿಗೆ ಹಾಕುವ ಸೌದೆ-ಇವೆಲ್ಲವೂ ಪರಮಾತ್ಮನ ಪೂಜಾತ್ಮಕ

ಯಾಗದಲ್ಲಿ ಆಹುತಿಯೆಂದು ಭಾವಿಸಿ, ಕ್ಷಣವಾದರೂ ಮರೆಯದೆ, ಸರ್ವದಾ ಸ್ಮರಿಸುತ್ತ, ಮಹಾರಾಜನು ಹೇಗೆ ಯಾರಿಗೂ ಹೆದರದೆ, ನಿರ್ಭೀತನಾಗಿ ಸಂಚರಿಸುವನೋ, ಅದೇ ರೀತಿಯಿಂದ ಕ್ಷುದ್ರ ದೈವಗಳಿಗಾಗಲೀ 'ಕ್ಷುದ್ರ ಜನರಿಗಾಗಲೀ ಹೆದರದೆ, ನಿರ್ಭೀತನಾಗಿ ಸಂಚರಿಸು ಎಂದು ತಾತ್ಪರ್ಯ. ॥೨೭॥

## (೩) "ಭಾವದರ್ಪಣ ಟೀಕಾ"--ವ್ಯಾಖ್ಯಾನ :—

"ಆಪಣೇತಿ" ॥ ಅಂಗಡಿ ಎಂದರ್ಥ. ಆಲಯ-ಮನೆ ಇವುಗಳಲ್ಲಿದ್ದ ಪದಾರ್ಥಗಳು, ಸ್ತ್ರೀಗತ ನಾನಾವಿಧ ಒಡವೆಗಳು, ಪುರುಷಗತ ವಸ್ತ್ರಾದಿ ಭೂಷಣಗಳು, ಅಗ್ನಿಯಲ್ಲಿ ಹಾಕುವಂಥ ಆಹುತಿಗಳು, ದೀಪದಲ್ಲಿದ್ದ ತೈಲಾದಿ ದ್ರವ್ಯಗಳು, ಇವುಗಳಲ್ಲಿದ್ದಂಥ ಭಗವದ್ರೂಪಕ್ಕೂ ಸ್ವಹೃದಯಸ್ಥ ಬಿಂಬಕ್ಕೂ ಅಭೇದ ಚಿಂತನ ಪೂರ್ವಕ, ಅವದಾನ-ಎಂದರೆ, ಆಹುತಿ ಕೊಡು ಎಂದು ದಾಸಾರ್ಯರ ತಾತ್ಪರ್ಯ. ॥೨೭॥

## (೪) ಶ್ರೀ ವಾದಿರಾಜಾಚಾರ್ಯರ ವ್ಯಾಖ್ಯಾನ (ಸಂಸ್ಕೃತ ಮೂಲ) :-

"ಆಪಣಾಲಯ"–ಇತಿ ॥ ಅವದಾನಂ ಆಹುತಿಃ ॥ ಪದೇ ಪದೇ-ಪ್ರತಿಕ್ಷಣಂ । "ಶ್ರೀಪತೇ ಕಶಿಪುಸ್ತ್ವವಾಸ್ತ್ವನು ದೇವತೇ ಹ್ಯುಪಬರ್ಹಣಮ್ ॥ ಮಂಚ ಪೂರ್ವಕ ಭೋಗಸಾಧನಮಸ್ತು ಸರ್ವಮಹೀಶತೇ ॥ ಕಂಕಣಾದಿ ವಿಭೂಷಣಂ ನವವಸ್ತ್ರಮಸ್ತು ಚ ಕಿಂ ಪುನಃ ॥ ಜಾಗರಸ್ಥ ಸಮಸ್ತ ವಸ್ತು ತವಾಸ್ತು ನಿಸ್ತುಲ ವಸ್ತು ಭೋಃ" ॥ ಇತಿ ರಸರಂಜನ್ಯಾಂ ಸಮಸಮಪ್ರಣ ಪ್ರಕರಣೇ ॥ ॥೨೭॥

## ಕನ್ನಡಾರ್ಥ :-

"ಆಪಣಾಲಯಗತ ಪದಾರ್ಥವು"-ಎಂಬ ಈ ಪದ್ಯದಿಂದ ಇಂದ್ರಿಯಗಳಿಗೆ ಸನ್ನಿಕರ್ಷವಾಗುವ ವಿಷಯಗಳು. ಅಗ್ನಿ ದೀಪ ಮುಂತಾದುವುಗಳಿಗೆ ಹಾಕುವ ತೈಲಾದಿ ಪದಾರ್ಥಗಳು. ಶ್ರೀ ಪರಮಾತ್ಮಗೆ "ಅವದಾನ" ಅಂದರೆ ಅರ್ಪಣೆ ಎಂಬ ಅನುಸಂಧಾನದಿಂದ ಬಾರಿ ಬಾರಿಗೆ ಸ್ಮರಿಸುತ್ತ, ಅರ್ಪಿಸುತ್ತಿರಬೇಕು-ಎಂದು ದಾಸರಾಯರ ಬೋಧನೆ. "ಅವಧಾನ" ಎಂದರೆ "ಯಜ್ಞ"

ಎಂಬರ್ಥ. ಪದೇ ಪದೇ=ಪ್ರತಿ ಕ್ಷಣದಲ್ಲಿಯೂ. ಶ್ರೀ ವಿಷ್ಣುತೀರ್ಥರು **ಅಧ್ಯಾತ್ಮ ರಸರಂಜನಿಯ** ಸರ್ವ ಸಮರ್ಪಣ ಪ್ರಕರಣದಲ್ಲಿ-ಶ್ರೀ ಪತಿಯೇ, ನಿನಗ ಮಂಚ ಮುಂತಾದ ಭೋಗ ಸಾಧನವಾದ ಸಕಲವಸ್ತುಗಳೂ ಸಲ್ಲಲಿ. ಹಾಸಿಗೆ ದಿಂಬು ಇತ್ಯಾದಿ ನಿನಗೇ ಇರಲಿ. ಜಾಗ್ರತಾವಸ್ಥೆಯಲ್ಲಿ ಕಂಡುಬರುವ ಸಮಸ್ತ ವಸ್ತುಗಳೂ ನಿನ್ನವೇ. ನೀನು ನಿರುಪಮನು. ಶಾಶ್ವತನು, ಅಮಿತಶಕ್ತಿ ಸಂಪನ್ನನು. ಪೂರ್ಣನಂದಾದಿ ಗುಣಪೂರ್ಣನು"-ಎಂದು ಸ್ತೋತ್ರ ಮಾಡಿರುತ್ತಾರೆ. ॥೨೭॥

## (೫) "ಗುರುಹೃದಯ ಪ್ರಕಾಶಿಕೆ"-ವ್ಯಾಖ್ಯಾನ :-

ದೇಹ ಪೋಷಣೆಗೆ ಉಪಯೋಗವಾದ ಲೌಕಿಕ ವ್ಯಾಪಾರವನ್ನೂ ಸಹ, ದೇವರ ಆರಾಧನಾರೂಪ ಯಜ್ಞವನ್ನಾಗಿ ಭಾವಿಸಿ, ಪೂಜಿಸುವರೆಂದು ನಿರೂಪಿಸುತ್ತಾರೆ-"ಆಪಣಾಲಯ" ವೆಂದು. ಆಪಣವೆಂಬ ಅಂಗಡಿಯಲ್ಲೂ ಇಡುವ ಅಕ್ಕಿ ಮೊದಲಾದ ವಸ್ತುಗಳನ್ನೂ ಸ್ತ್ರೀ ಪುರುಷರುಗಳ ಇಂದ್ರಿಯವೆಂಬ ನಾಲಿಗೆ ಮೊದಲಾದ ಕರಣಗಳಲ್ಲಿಡುವ ಎಣ್ಣೆ ಪಾವಕನೆಂಬ ಬೆಂಕಿಯಲ್ಲಿಡುವ ಕಟ್ಟಿಗೆ ಮೊದಲಾದ್ದನ್ನೂ ಆ ಪರಮಾತ್ಮನಿಗೆ ಅವದಾನವೆಂಬ ಆಹುತಿಯೆಂದು, ಪದೇ ಪದೇ ಎಂದರೆ ಆಯಾಯಾ ಕಾಲದಲ್ಲಿ ಭಾವಿಸುತ್ತಾ, ಭೂಪನಂದದಿ-ಸರ್ವತ್ರ ನಿರ್ಭಯದಿ ಸಂಚರಿಸು, ಎಂದರೆ, ದೊರೆ ಹೇಗೆ ರಾಜ್ಯಾಧಿಪತ್ಯ, ಸಂತೋಷ ಅಥವಾ ಅನ್ಯಕಾರ್ಯಾಸಕ್ತಿಯಿಂದ ಇತರ ಭಯ ಚಿಂತನೆಗಳನ್ನು ಹಚ್ಚಿಕೊಳ್ಳುವುದಿಲ್ಲವೋ, ಹಾಗೆ ದೇವರ ಸ್ಮರಣೆಯ ಸಂತೋಷದಿಂದ ದೇಹ ಸಂಬಂಧಿ ವ್ಯಸನ ಭಯಗಳನ್ನು ಲಕ್ಷ್ಯ ಮಾಡದೆ ಇರಬೇಕೆಂದರ್ಥ. ॥೨೭॥

# ಸರ್ವವ್ಯಾಖ್ಯಾನಸಾರಸಂಗ್ರಹ

"ಆಪಣ"-ಎಂದರೆ ಸರಕುಗಳನ್ನು ಮಾರುವ "ಅಂಗಡಿ" ಎಂದರ್ಥ. ಅಂಗಡಿಯಲ್ಲಿ ಮಾರುವುದಕ್ಕಾಗಿ ನಾನಾ ಬಗೆಯ ಸರಕುಗಳಿರುವುವು. "ಆಲಯ" ಎಂದರೆ ನಾವು ವಾಸಿಸುವ "ಮನೆ" ಎಂದರ್ಥ. ಮನೆಯಲ್ಲಿ ಅಕ್ಕಿ, ಬೇಳೆ ಇತ್ಯಾದಿ ಆಹಾರ ವಸ್ತುಗಳೂ, ಹಾಸಿಗೆ ಮಂಚ ಮುಂತಾದ ಭೋಗ ಪದಾರ್ಥ

ಗಳೂ ಇರುವುವು. ಸ್ತ್ರೀಯರು ಮೂಗು ಕಿವಿ ಮುಂತಾದ ಇಂದ್ರಿಯಗಳಲ್ಲಿ ತೊಡುವ ಆಭರಣ ವಿಶೇಷಗಳು, ಪುರುಷರು ಉಡುವ ನಾನಾ ಬಗೆಯ ಉಡುಪುಗಳು, ದೀಪವು ಉರಿಯುವುದಕ್ಕೆ ಹಾಕುವ ಎಣ್ಣೆ, ತುಪ್ಪ ಇತ್ಯಾದಿ ವಸ್ತುಗಳು, ಬೆಂಕಿ ಜಾಜ್ವಲ್ಯಮಾನವಾಗಿ ಉರಿಯುವಂತೆ ಮಾಡುಲು ಉಪ ಯೋಗಿಸುವ ಕಾಷ್ಠಾದಿ ದ್ರವ್ಯಗಳು. ಪೂರ್ವೋಕ್ತ ಪದಾರ್ಥಗಳೆಲ್ಲವೂ ಸರ್ವೋಚ್ಚನಾದ ಶ್ರೀ ಪರಮಾತ್ಮನಿಗೆ ಕೊಡುವ ಹವಿಸ್ಸೆಂದು (ಅವದಾನ) ಭಾವಿಸಬೇಕು. ಸರ್ವ ವಸ್ತುಗಳನ್ನು ಭಗವದರ್ಪಣ ಮಾಡುವುದೇ ಅವ ದಾನವು. ಈ ರೀತಿಯಲ್ಲಿ ಬಾರಿ ಬಾರಿಗೂ ಮರೆಯದೇ, ಮನಸ್ಸಿನಲ್ಲಿ ಅನು ಸಂಧಾನ ಪೂರ್ವಕ ಧ್ಯಾನಿಸಿಕೊಳ್ಳುತ್ತಿರುವವನು ನಿರ್ಭೀತನು. ರಾಜನಾದ ವನು ಯಾವ ರೀತಿ ಭಯರಹಿತನಾಗಿ ಸಂಚರಿಸುತ್ತಾನೆಯೋ,ಅಂತೆಯೇ ಕ್ಷುದ್ರ ದೇವತೆಗಳಿಂದಾಗಲೀ ಅಥವಾ ದುಷ್ಟ ಜನರಿಂದಾಗಲೀ ಉಂಟಾಗುವ ಭಯ ದಿಂದ ರಹಿತನಾಗಿ, ಮಹಾಸಮರ್ಥದೋಪಾದಿಯಲ್ಲಿ ಎಲ್ಲಾ ಕಡೆಗಳಲ್ಲಿಯೂ ಸಂಚರಿಸುತ್ತಿರು ಎಂದು ಆಶ್ವಾಸನೆ ಕೊಡುತ್ತಾರೆ. ಭಗವದನುಗ್ರಹವನ್ನು ಪಡೆದವನು ಯಾರಿಗೂ ಹೆದರಿ ನಡೆಯಬೇಕಾಗಿಲ್ಲ. ಭಗವದ್ವಿಭೂತಿ ಸಂಪನ್ನ ರಾದ ಅಂತಹವರು ಭಗವತ್ಸನ್ನಿಧಾನ ವಿಶೇಷದಿಂದ ಮಹಾಸಮರ್ಥರಾಗಿಯೇ ಇರುತ್ತಾರೆ. ಸರ್ವತ್ರ ವ್ಯಾಪ್ತನಾದ ಭಗವಂತನನ್ನು ಅವರು ಪದೇ ಪದೇ ಮರೆಯದೆ ಸ್ಮರಿಸುತ್ತಿರುವುದರಿಂದ ಯಾವಾಗಲೂ ನಿರ್ಭೀತರು. ॥೨೭॥

## ಪದ್ಯ (೨೮)

ಮೂಲ :

ವಾರಿಜಭವಾಂಡವೆ ಸುಮಂಟಪ ।
ಮೇರುಗಿರಿ ಸಿಂಹಾಸನವು ಭಾ ।
ಗೀರಥಿಯೆ ಮಜ್ಜನವು ದಿಗ್ವಸ್ತ್ರಗಳು ಸುಡಿಮಂತ್ರ ॥
ಭೂರುಹಜ ಫಲಪುಷ್ಪ ಗಂಧ ಸ ।
ಮೀರ ಶಶಿ ರವಿ ದೀಪ ಭೂಷಣ ।
ತಾರಕಗಳೆಂದರ್ಪಿಸಲು ಕೈಕೊಂಡು ಮನ್ನಿಸುವ ॥ ॥೨೮॥

**ಅವತರಣಿಕೆ :**

ವಿಶ್ವೋಪಾಸನಾ ಕ್ರಮದಿಂದ ಅಖಂಡ ಬ್ರಹ್ಮಾಂಡಾಂತರ್ಗತ ಸಮಸ್ತ ಪದಾರ್ಥಗಳನ್ನೂ ಭಗವದರ್ಪಣ ಮಾಡಬೇಕೆಂದು ಹೇಳುತ್ತಾರೆ. "ವಾರಿಜ ಭವಾಂಡವೆ"-ಎಂಬ ಪ್ರಸಕ್ತ ಸಂಧಿಗತ ೨೮ ನೆಯ ಈ ಪದ್ಯದಿಂದ.

ಈ ಬ್ರಹ್ಮಾಂಡವೇ ಶ್ರೀ ಪರಮಾತ್ಮನಿಗೆ ದಿವ್ಯ ಮಂಟಪವು. ಸುವರ್ಣಾತ್ಮಕ ಮೇರು ಪರ್ವತವೇ ಸಿಂಹಾಸನವು. ಲೋಕಪಾವನೆಯಾದ ಗಂಗಾ ನದಿಯ ಜಲವೇ ಗಂಗಾ ಜನಕಗೆ ಅಭಿಷೇಕವು. ಅಷ್ಟ ದಿಕ್ಕುಗಳೇ ಶ್ರೀಹರಿಗೆ ಉಡುವ ದಿವ್ಯ ವಸ್ತ್ರಗಳು. ಆಡತಕ್ಕ ಮಾತುಗಳೇ ವೇದ ಮಂತ್ರಗಳು, ವೃಕ್ಷಗಳಲ್ಲಿ ಬಿಡುವ ಸುರಸೋಪೇತ ಫಲಗಳೇ ಆತನಿಗ ಪುಷ್ಪಗಳು. ಬೀಸುವ ಗಾಳಿಯೇ ಸುಗಂಧವು. ಸೂರ್ಯ ಚಂದ್ರರೇ ಆಕಾಶಗತ ಎರಡು ದೀಪಗಳು. ನಕ್ಷತ್ರ ಮಾಲೆಗಳೇ ಭಗವಂತನಿಗೆ ಆಭರಣ ವಿಶೇಷಗಳು. ಈ ಪ್ರಕಾರ ಜ್ಞಾನಾನುಸಂಧಾನಕ್ರಮದಿಂದ ಶ್ರೀ ಪರಮಾತ್ಮನಿಗೆ ಭಕ್ತಿಯಿಂದ ಅರ್ಪಿಸಲು, ಅಂತಹ ಪೂಜೆಯನ್ನು ತಾನು ಸ್ವೀಕರಿಸಿ, ತಪ್ಪುಗಳನ್ನು ಮನ್ನಿಸಿ, ಸಂರಕ್ಷಿಸುವನು ಎಂದು ತಾತ್ಪರ್ಯ. ॥೨೮॥

**ಪ್ರತಿಪದಾರ್ಥ :**

**ವಾರಿಜಭವಾಂಡವ**=ಕಮಲದಲ್ಲಿ ಉತ್ಪನ್ನರಾದ ಬ್ರಹ್ಮದೇವರ ದೇಹ ಸಾಂಕೇತವಾದ ಬ್ರಹ್ಮಾಂಡವೆ **ಸುಮಂಟಪ**=ಶ್ರೀ ಪರಮಾತ್ಮನ ಆವಾಸಕ್ಕೆ ಯೋಗ್ಯವಾದ ಉತ್ಕೃಷ್ಟವಾದ ಮಂಟಪವು **ಮೇರುಗಿರಿ**= ಸುವರ್ಣಾತ್ಮಕವಾದ ಮೇರುಪರ್ವತವೇ **ಸಿಂಹಾಸನವು**=ಬಿಂಬರೂಪಿ ಶ್ರೀ ಹರಿಯು ಕೂಡುವ ಸಿಂಹಾಸನವು. **ಭಾಗೀರಥಿಯೆ**=ಗಂಗಾ ನದಿಯ ನೀರು **ಮಜ್ಜನವು**=ಅಭಿಷೇಕಕ್ಕೆ ಯೋಗ್ಯವಾದ ದಿವ್ಯ ಉದರವು **ದಿಗ್ವಸ್ತ್ರಗಳು**=ಅಷ್ಟ ದಿಕ್ಕುಗಳು- ಉರ್ಧ್ವ ಮತ್ತು ಅಧೋ ದಿಕ್ಕುಗಳೆಂಬ ದಶದಿಕ್ಕುಗಳೇ ಶ್ರೀ ಪರಮಾತ್ಮನಿಗೆ ದಿವ್ಯವಸ್ತ್ರಗಳು. **ನುಡಿ** =ಆಡತಕ್ಕ ಮಾತುಗಳು **ಮಂತ್ರ**=ವೇದೋಕ್ತ ಮಂತ್ರಗಳು **ಭೂರು**

**ಹಜ**=ಭೂಮಿಯನ್ನು ಬೇಧಿಸಿಕೊಂಡು ಬರುವ ವೃಕ್ಷಗಳಲ್ಲಿ ಉತ್ಪನ್ನವಾದ **ಫಲಪುಷ್ಪ**=ಸುರಸೋಪೇತವಾದ ಹಣ್ಣು ಹೂವುಗಳೇ ಫಲ ಪುಷ್ಪಗಳು. **ಸಮೀರ**=ಬೀಸುತ್ತಿರುವ ಗಾಳಿಯೇ **ಗಂಧ**=ಸುವಾಸನಾಯುಕ್ತವಾದ ಗಂಧವು (ಗಂಧವಾಹಕ) **ರವಿ ಶಶಿ**=ಸೂರ್ಯಚಂದ್ರರೇ **ದೀಪ**= ಎರಡು ದೀಪಗಳು **ತಾರಕಗಳೆ**=ನಕ್ಷತ್ರ ಸಮೂಹಗಳೇ **ಭೂಷಣ**= ದಿವ್ಯಾಭರಣಗಳು **ಎಂದರ್ಪಿಸಲು**= ಪ್ರಕಾರ ಅನುಸಂಧಾನ ಕ್ರಮ ದಿಂದ ಭಗವಂತನಿಗೆ ಅರ್ಪಿಸಿದರೆ **ಕೈ ಕೊಂಡು**=ಆ ಪೂಜಾರೂಪವಾದ ಅರ್ಪಣೆಯನ್ನು ಸ್ವೀಕರಿಸಿ **ಮನ್ನಿಸುವ**=ನಮ್ಮ ಅಪರಾಧಗಳನ್ನು ಕ್ಷಮಿಸಿ' ಸಂರಕ್ಷಿಸುವನು ॥೨೮॥

## ವ್ಯಾಖ್ಯಾನಗಳು-

### (೧) ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ :-

ಈ ಬ್ರಹ್ಮಾಂಡವನ್ನೇ ಪೂಜಾತ್ವೇನ ಅರ್ಪಿಸೋಕ್ರಮ ಹೇಳುತ್ತಾರೆ.- ವಾರಿಜಭವಾಂಡವೆ-ಕಮಲದಲ್ಲಿ ಉತ್ಪನ್ನರಾದ ಬ್ರಹ್ಮದೇವರ ದೇಹ ಸಾಂಕೇತ ವಾದ ಬ್ರಹ್ಮಾಂಡವೆ, ಸುಮಂಟಪ-ಶ್ರೀ ಪರಮಾತ್ಮಗೆ ಆವಾಸಕ್ಕೆ ಯೋಗ್ಯವಾದ ಮಂಟಪವು, ಮೇರುಗಿರಿ-ಸುವರ್ಣಾತ್ಮಕವಾದ ಮೇರುಪರ್ವತ ಸಿಂಹಾಸನವು-ಕೂಡತಕ್ಕ ಸಿಂಹಾಸನವು, (ಮೇರು ಮಧ್ಯಗತ ಶತಕೋಟಿ ಎಂಬ ಬ್ರಹ್ಮನ ಮನೆಯಲ್ಲಿ ಶ್ರೀ ವಾಸುದೇವನಾಮಕ ಪರಮಾತ್ಮ ಇದ್ದಾನೆ. ಆದಕಡೆಯಿಂದ ಸಿಂಹಾಸನ) ಪರಮಾತ್ಮಗೆ ಭಾಗೀರಥಿಯೆ ಮಜ್ಜನವು- ಈ ಬ್ರಹ್ಮಾಂಡಾಂತರ್ಗತ ಗಂಗಾದಿ ಸರ್ವ ನದಿಗಳು, ಇನ್ನು ದಿವ್ಯ ಪುಷ್ಕ ರಣಿಗಳು ಅಭಿಷೇಕಕ್ಕೆ ಯೋಗ್ಯವಾದ ದಿವ್ಯತೀರ್ಥಗಳು, ದಿಗ್ವಸ್ತ್ರಗಳು- ಅಷ್ಟ ದಿಕ್ಕುಗಳು. ಊರ್ಧ್ವ, ಅಧೋ ಇವುಗಳೇ ವಸ್ತ್ರಗಳು ನುಡಿಮಂತ್ರ-ಆಡ ತಕ್ಕ ಮಾತುಗಳೇ ಮಂತ್ರಗಳು, ಭೂರುಹಜ-ಭೂಮಿ ಭೇದಿಸಿಕೊಂಡು ಉತ್ಪನ್ನಗಳಾದ ವೃಕ್ಷಗತ, ಫಲಗತ, ಫಲಸುರಸೋಪೇತವಾದ ನಾರಿಕೇಳಾದಿ ಫಲಗಳೇನು. ಪುಷ್ಪ-ಸುಗಂಧೋಪೇತಗಳಾದ ಪುಷ್ಪಗಳು, ಶ್ರೀ ತುಳಸಿ, ಗಂಧ-ಚಂದನವೃಕ್ಷಗತ ದಿವ್ಯ ಸುವಾಸಿತ ಗಂಧಗಳು. ಸಮೀರ- ಈ

ಬ್ರಹ್ಮಾಂಡದಲ್ಲಿ ಬೀಸತಕ್ಕ ಗಾಳಿಯೇ ಛತ್ರ ಚಾಮರ ಸೇವಾ. ಶಶಿ ರವಿ ದೀಪ-ಚಂದ್ರ ಸೂರ್ಯ ಎರಡೂ ಎರಡು ದೀಪಗಳು. ಭೂಷಣ ಅಲಂಕಾರಕ್ಕೆ ಯೋಗ್ಯವಾದ ಆಭರಣಗಳು ತಾರಕೆಗಳೆಂದು-ನಕ್ಷತ್ರಗಳು, ಎಂತ ಈ ಪ್ರಕಾರ, ಅರ್ಪಿಸಲು-ಅನುಸಂಧಾನದಿಂದ ಪೂಜಾ ಮಾಡಿದರೆ, ಕೈಕೊಂಡು ಮನ್ನಿಸುವ-ಇಂಥಾ ಪೂಜಾವನ್ನು ಸ್ವೀಕಾರಮಾಡಿ ಸಂರಕ್ಷಣೆ ಮಾಡುತ್ತಾನೆ.

ಇಂಥಾ ಪದಾರ್ಥಗಳ ಮೇರುಗತ ಶ್ರೀ ವಾಸುದೇವರಿಗೆ ಅರ್ಪಿತವಾಡಿ, ಇನ್ನು ಈ ಚತುರ್ದಶಲೋಕಗಳು, ಪರಮಾತ್ಮಗೆ ಆಲಯತ್ವೇನ ಅನುಸಂಧಾನ ದಿಂದ ಅರ್ಪಿಸೋವನಾಗಬೇಕು. ಇದರಿಂದ ಮಹಾಪೂಜಾ ಮಾಡಿದವನಾಗು ತ್ತಾನೆ. ॥೨೮॥

## (೨) "ಭಾವಪ್ರಕಾಶಿಕೆ"–ವ್ಯಾಖ್ಯಾನ :–

ಪ್ರಾಕಾರಾಂತರದಿಂದ ನಮ್ಮ ಕಂಗಳಿಗೆ ಕಾಣುವ ವಸ್ತುಗಳನ್ನು ಪರ ಮಾತ್ಮನಿಗೆ ಸಮರ್ಪಿಸುವುದೇ ಪೂಜೆ ಎಂದು ಹೇಳುತ್ತಾರೆ.

ಬ್ರಹ್ಮಾಂಡವೇ ಶ್ರೀ ಪರಮಾತ್ಮನ ಮಂಟಪವು. ಮೇರು ಪರ್ವತವೇ ಸಿಂಹಾಸನವವು. ಭಾಗೀರಥಿಯೇ ಸ್ನಾನಕ್ಕೆ ಉದಕವು. ದಿಕ್ಕುಗಳೇ ವಸ್ತ್ರ ಗಳು. ಮಾತುಗಳೇ ಮಂತ್ರಗಳು. ಗಿಡಗಳಲ್ಲಿ ಬಿಡುವ ಪುಷ್ಪಗಳೇ ದೇವ ರಿಗೆ ಫಲಪುಷ್ಪಗಳು. ಬೀಸುವ ಗಾಳಿಯೇ ಸುಗಂಧವು. ಚಂದ್ರ ಸೂರ್ಯರೇ ದೀಪಗಳು. ನಕ್ಷತ್ರಗಳೇ ಆಭರಣಗಳೆಂದು ಭಾವಿಸಿ, ಪರಮಾತ್ಮನನ್ನು ಮಾನಸ ಪೂಜೆ ಮಾಡಿ, ಸಮರ್ಪಿಸಲು, ಪರಮಾತ್ಮನು ಸ್ವೀಕರಿಸಿ, ನಮ್ಮ ಅಪ ರಾಧಗಳನ್ನು ಕ್ಷಮಿಸಿ, ಉದ್ಧರಿಸುವನು. ॥೨೮॥

## (೩) "ಭಾವದರ್ಪಣಟೀಕಾ"ವ್ಯಾಖ್ಯಾನ :-

ಮತ್ತೊಂದು ವಿಧ ಪೂಜೆ ಹೇಳುತ್ತಾರೆ–"ವಾರಿಜಭವೇತಿ"

**ಸುಳಾದಿ :-**

**"ವಿರಿಂಚಾಂಡ ಮಂಟಪವು ಮೇರು ಸಿಂಹಾಸನ ।**
**ಸುರನದೀಯಭಿಷೇಕ ದಿಗ್ವಸ್ತ್ರ ನುಡಿಮಂತ್ರ ।**
**ತರುಫಲ ಕುಸುಮವು ಆರೋಗಣೆಯನ್ನಿಸು ।**
**ರವಿ ಶಶಿಯೆ ದೀಪ ಉಡಗಣದಲಂಕಾರ ।**
**ನಿನಗೆಂದು ಚಿಂತಿಸಲು ಕರುಣಾದಿ ಸ್ವೀಕರಿಸಿ ।**
**ವಿಜಯವಿಠ್ಠಲರೇಯ ನೆರೆಬಿಡದೆ ಸಲಹುವ" ॥**

ಎಂದು ಶ್ರೀ ವಿಜಯದಾಸರು ಹೇಳಿದ ಮಾತೇ ಇಲ್ಲಿ ಪದ್ಯ ರೂಪದಿಂದ ಉಕ್ತವಾಗಿರುತ್ತದೆ. ॥೨೮॥

**(೫) "ಗುರುಹೃದಯ ಪ್ರಕಾಶಿಕೆ"-ವ್ಯಾಖ್ಯಾನ :—**

ಬ್ರಹ್ಮಾಂಡಾದಿ ಪದಾರ್ಥಗಳನ್ನೆಲ್ಲ ದೇವರ ಪೂಜಾಪದಾರ್ಥಗಳನ್ನಾಗಿ ಚಿಂತಿಸಿ, ದೇವರನ್ನು ಕೆಲವರು ಪೂಜಿಸುವರೆಂನು ಹೇಳುತ್ತಾರೆ-"ವಾರಿಜ ವೆಂದು." ವಾರಿಜಭವಾಂಡವೆಂಬ ಬ್ರಹ್ಮಾಂಡವೇ ದೇವರಿಗೆ ಮಂಟಪ ವೆಂದು, ಮೇರುಪರ್ವತವೇ ದೇವರಿಗೆ ಸಿಂಹಾಸನವೆಂದು, ಆ ಮೇರುವಿನ ಮೇಲೆ ಧುಮುಕುವ ಗಂಗಾನದಿಯೇ ದೇವರಿಗೆ ಅಭಿಷೇಕವೆಂದು, ಪೂರ್ವ ಮೊದಲಾದ ದಿಕ್ಕುಗಳೇ ದೇವರಿಗೆ ವಸ್ತ್ರವೆಂದು, ಆಡುವ ಮಾತುಗಳೆಲ್ಲ ಮಂತ್ರಗಳೆಂದು, ಮರಗಳಲ್ಲಿ ಬಿಡುವ ಪುಷ್ಪ ಫಲಗಳೇ ದೇವರಿಗೆ ಪುಷ್ಪಫಲ ಸಮರ್ಪಣೆಯೆಂದು ಪುಷ್ಪಾದಿ ವಸ್ತುವಿನ ಮೇಲೆ ಬೀಸುವ ಗಾಳಿಯೇ ದೇವ ರಿಗೆ ಗಂಧ, ದೂಪ ಸಮರ್ಪಣೆ ಎಂದು, ಸೂರ್ಯ ಚಂದ್ರ ಮಂಡಲಗಳೆರಡು ದೇವರಿಗೆ ದೀಪದ್ವಯಗಳೆಂದು, ನಕ್ಷತ್ರಗಳೇ ದೇವರಿಗೆ ಆಭರಣವೆಂದು ಚಿಂತಿಸಿ ಸಮರ್ಪಿಸುವ ಮಹಾತ್ಮರನ್ನು ದೇವರು ಬಹುಮಾನಿಸಿ, ಅಂಗೀ ಕರಿಸುವನು.

**ಪ್ರಮಾಣ :-**
**"ಬ್ರಹ್ಮಾಂಡವೆ ಮಂಟಪ ಜ್ಯೋತಿಶ್ಚಕ್ರ ದೀಪವೆಂದು"**

ಶ್ರೀ ಪುರಂದರದಾಸರು ಸುಳಾದಿ ಅರ್ಥ ಇದರಿಂದ ವಿವರಿಸಿತು ॥೨೮॥

# ಸರ್ವವ್ಯಾಖ್ಯಾನಸಾರಸಂಗ್ರಹ

ಈ ಬ್ರಹ್ಮಾಂಡಾಂತರ್ಗತ ಸಕಲ ಪದಾರ್ಥಗಳೂ ಭಗವದರ್ಪಿತವೆಂದು ವಿಶ್ವೋಪಾಸನಾ ಪೂಜಾವಿಧಾನವನ್ನು ವಿವರಿಸುತ್ತಾರೆ–"ವಾರಿಜಭವಾಂಡವೆ" ಎಂಬ ಪ್ರಸಕ್ತ ಪದ್ಯದಿಂದ.

(೧) "ವಾರಿ" ಎಂದರೆ ನೀರು. "ಜ" ಅಂದರೆ, ನೀರಿನಲ್ಲಿ ಉತ್ಪನ್ನ ವಾದದ್ದು ಕಮಲ. ಶ್ರೀ ಪರಮಾತ್ಮನು ಪದ್ಮನಾಭರೂಪಿಯಾಗಿ ಕ್ಷೀರ ಸಮುದ್ರದಲ್ಲಿ ಪವಡಿಸಿದಾಗ, ನಾಭಿ ಎಂಬ ಸರೋವರದಲ್ಲಿ ಉತ್ಪನ್ನವಾದದ್ದೇ ಚತುರ್ದಶದಳಾತ್ಮಕವಾದ ಸುವರ್ಣ ಕಮಲವು. ಈ ಕಮಲದಲ್ಲಿ ಉತ್ಪನ್ನ ರಾದವರು ಚತುರ್ಮುಖ ಬ್ರಹ್ಮದೇವರು. ಹಿರಣ್ಯಗರ್ಭ ನಾಮಾಂಕಿತರಾದ ಆ ಬ್ರಹ್ಮದೇವರೇ "ವಾರಿಜಭವರು" ಅವರ ಶರೀರವೇ ಮಹತತ್ತ್ವಾತ್ಮಕ ವಾದ ಬ್ರಹ್ಮಾಂಡವು. ಅಂತಹ ವಾರಿಜಭವಾಂಡವೆಂಬ ಈ ಬ್ರಹ್ಮಾಂಡವೇ ಸೃಷ್ಟಿ ವ್ಯಾಪಾರಕ್ಕೆ ಮೂಲಕರ್ತೃವಾದ ಶ್ರೀಪರಮಾತ್ಮನಿಗೆ ದಿವ್ಯ ಮಟಪವು. ಈ ವಾರಿಜಭವಾಂಡೋದಯಕ್ಕೆ ಕಾರಣನಾದ ಶ್ರೀ ಹರಿಗೆ ಬ್ರಹ್ಮಾಂಡವು ಆ ವಾಸಕ್ಕೆ ಯೋಗ್ಯಸ್ಥಾನವೆನಿಸುವುದು. ಇಂತಹ ವಾರಿಜಭವಾಂಡವಂಬ ಸುಮಂಟಪದಲ್ಲಿ ವಿರಾಜಮಾನನಾಗಿದ್ದಾನೆ ಆ ವಾರಿಜಭವಾಂಡದ ಕಾರಣ ನಾದ ಜಗತ್ಪ್ರಭುವು.

(೨) ಮೇರುಪರ್ವತವು ಸುವರ್ಣಾತ್ಮಕವಾದದ್ದು. ಇಂಥ ಬಂಗಾ ರದ ಗಿರಿಯಾದ ಮೇರುಪರ್ವತದ ಮಧ್ಯದಲ್ಲಿ "ಶತಕೋಟಿ" ಎಂಬ ಹೆಸರಿನ ಬ್ರಹ್ಮದೇವರ ಆಲಯವಿದೆ. ಈ ಬ್ರಹ್ಮ ಮಂದಿರದಲ್ಲಿ ಶ್ರೀ ವಾಸುದೇವ ನಾಮಕನಾದ ಪುರುಷನಾಮಕ ಶ್ರೀ ಪರಮಾತ್ಮನು ಇದ್ದಾನೆ. ಇದರಿಂದಲೇ ಶ್ರೀ ದಾಸರು ಮೇರುಗಿರಿಯೋ, ಶ್ರೀಹರಿಯು ಕೂಡುವ ಸಿಂಹಾಸನವು ಎಂದಿ ದ್ದಾರೆ.

(೩) ಬ್ರಹ್ಮಾಂಡವೆಂಬ ಸುಮಂಟಪದಲ್ಲಿ ಮೇರುಗಿರಿ ಎಂಬ ಸಿಂಹಾ

ಸನದಲ್ಲಿ ವಿರಾಜಮಾನನಾಗಿರುವ ಆ ಏಕಮೇವಾದ್ವಿತೀಯನಿಗೆ ಭಾಗೀರಥಿಯ ಮಜ್ಜನವು. ಆ ಮೇರುಪರ್ವತದ ಶಿಖರಗಳ ಮೇಲೆ ಧುಮುಕುತ್ತಿರುವ ಲೋಕಪಾವನೆಯಾದ ಗಂಗಾನದಿಯ ಜಲವೇ, ಆ ಗಂಗಾಜನಕನಿಗೆ ಅಭಿಷೇಕ ವೆಂದೆನಿಸುವುದು.

(೪) ಸುತ್ತಲೂ ಇರುವ ಅಷ್ಟ ದಿಕ್ಕುಗಳು, ಊರ್ಧ್ವ ಹಾಗೂ ಅಧೋ ದಿಕ್ಕುಗಳು, ಇಂತು, ಹತ್ತು ದಿಕ್ಕುಗಳೂ ಅಲಂಕಾರ ಪ್ರಿಯನಾದ ಆ ಪರಮಾತ್ಮನಿಗೆ ಉಡುವ ಮತ್ತು ಹೊದೆಯುವ ದಿವ್ಯ ವಸ್ತ್ರಗಳಾಗಿವೆ.

(೫) ನುಡಿವ ಮಾತುಗಳೆಲ್ಲ ಆತನ ಸ್ತೋತ್ರರೂಪವಾದ ವೇದ ಮಂತ್ರಗಳು. ವೇದಪ್ರತಿಪಾದ್ಯನಾದ ಶ್ರೀ ಪರಮಾತ್ಮನು ಸರ್ವವರ್ಣ, ಶಬ್ದವಾಚ್ಯನಾಗಿರುವುದರಿಂದ ಸಕಲ ವರ್ಣಗಳೂ, ಶಬ್ದವೂ ಅವನಲ್ಲಿಯೇ ತಾತ್ಪರ್ಯವನ್ನು ಹೊಂದುವವು. ಅ ಶಬ್ದಪ್ರಪಂಚವು ಆತನನ್ನೇ ಮುಖ್ಯ ತ್ವೇನ ಪ್ರತಿಪಾದಿಸುವುದು. ಇದರಿಂದ ನುಡಿಗಳೇ ಮಂತ್ರಗಳು.

(೬) ಭೂಮಿಯನ್ನು ಬೇಧಿಸಿಕೊಂಡು ಮೇಲೆ ಬರುವುದರಿಂದ ವೃಕ್ಷ ಗಳಿಗೆ "ಭೂರುಹ" ಎಂದು ಹೆಸರು. ಅಂತಹ ಭೂರುಹಗಳಲ್ಲಿ ಉತ್ಪನ್ನವಾದ ರಸಭರಿತವಾದ ಫಲಗಳೇ ಪ್ರಕೃತಿಗೆ ನಿಯಾಮಕನಾದ ಭಗವಂತನಿಗೆ ಪುಷ್ಪಾ ರ್ಪಣೆ ಎಂದು ಅನುಸಂಧಾನಿಸಬೇಕು.

(೭) ಸುತ್ತಲೂ ಬೀಸುತ್ತಿರುವ ಗಾಳಿಯೇ ಪರಮಾತ್ಮನಿಗೆ ಪರಿಮಳ ಯುಕ್ತವಾದ ಸುಗಂಧವೆನಿಸುವುದು. ವಾಯು ಗಂಧವಾಹನವಾದ್ದರಿಂದ ಈ ರೀತಿಯ ಉಪಾಸನೆ.

(೮) ಆಕಾಶವೆಂಬ ವಿಶಾಲ ಪ್ರದೇಶದಲ್ಲಿ ಲೋಕವನ್ನೇ ಬೆಳಗುತ್ತಿರುವ ಸೂರ್ಯ ಮತ್ತು ಚಂದ್ರರೇ ಸೂರ್ಯಕೋಟಿ ಪ್ರಭಾಮಯನಾದ ಶ್ರೀ ಪರ ಮಾತ್ಮನಿಗೆ ಎರಡು ದೀಪಗಳು.

(೯) ಆಕಾಶ ಪಥದಲ್ಲಿ ದೇದೀಪ್ಯಮಾನವಾಗಿ ಬೆಳಗುತ್ತಿರುವ ನಕ್ಷತ್ರ

ಮಾಲೆಗಳೇ ಭುವನ ಭೂಷಣನಾದ ಶ್ರೀ ಹರಿಗೆ ನಾನಾ ವಿಧವಾದ ಆಭರಣ ವಿಶೇಷಗಳು.

ಹೀಗೆ, ಆ ಜಗನ್ನಿಯಾಮಕನ ವಾಸಸ್ಥಳ ಈ ಬ್ರಹ್ಮಾಂಡವು. ಕೂಡಲು ಸಿಂಹಾಸನವು ಮೇರುಪರ್ವತವು. ಇವೇ ಸ್ಥಾಪನ, ಆಸನ ರೂಪವಾದ ಅಧಿಷ್ಠಾನಗಳು. ನಂತರ ಗಂಗಾನದಿಯ ಜಲವೇ ಮಜ್ಜನರೂಪವಾದ ಸ್ನಾನವು. ಸ್ನಾನಾನಂತರ ಉಡಲು ಮತ್ತು ಹೊದೆಯಲು ಕೊಡುವ ವಸ್ತ್ರಗಳೇ ಈ ದಶ ದಿಕ್ಕುಗಳು. ವಸ್ತ್ರಾರ್ಪಣೆ ನಂತರ, ಆಡುವ ಮಾತುಗಳೆಲ್ಲಿವೂ ಆತನ ಸ್ತೋತ್ರ ರೂಪವಾದ ಮಂತ್ರಗಳು. ಬೀಸುವ ಗಾಳಿಯೇ ಧೂಪಾರ್ಪಣೆಯು, ಸುಗಂಧಾರ್ಪಣೆಯು. ರವಿ ಶಶಿಗಳೇ ಆತನಿಗೆ ಹಚ್ಚಿಡುವ ದೀಪಗಳು. ಹೀಗೆ ಧೂಪ ದೀಪವಾದ ನಂತರ, ವೃಕ್ಷಗತ ಸುರಸೋಪೇತವಾದ ಫಲಗಳೇ ಅವನಿಗೆ ಪುಷ್ಪಾಲಂಕಾರವು ಹಾಗೂ ಆರೋಗಣೆಗೆ ನೈವೇದ್ಯ ರೂಪವಾದ ವಸ್ತುಗಳು. ನಕ್ಷತ್ರ ಮಾಲೆಗಳೇ ಆತನಿಗೆ ತೊಡಿಸುವ ಆಭರಣ ರೂಪವಾದ ಅಲಂಕಾರಗಳು. ಹೀಗೆಂದು ಷೋಡಶೋಪಚಾರ ರೂಪವಾದ ಪೂಜಾಕ್ರಮದಿಂದ ಅರ್ಚಿಸಿದರೆ. ಕರುಣಾಳುವಾದ ಆ ಜಗತ್ಸ್ವಾಮಿಯು ಅಂತಹ ಪೂಜೆಯನ್ನು ಸ್ವೀಕರಿಸುವನು. ಅಲ್ಲದೆ ನಮ್ಮ ಸರ್ವಾಪರಾಧಗಳನ್ನು ಕ್ಷಮಿಸಿ, ಉದ್ಧರಿಸುವನು ಎಂದು ತಾತ್ಪರ್ಯ. ॥೨೮॥

## ಪದ್ಯ (೨೯)

ಮೂಲ :–

ಭೂಸುರರೊಳಿಪ್ಪಬ್ಜ ಭವನೊಳು ।
ವಾಸುದೇವನು ವಾಯು ಖಗಪ ಸ ।
ದಾಶಿವಹಿಪೇಂದ್ರನು ವಿವಸ್ವನ್ನಾಮಕ ಸೂರ್ಯ ॥
ಭೇಶ ಕಾಮುಮರಾಸ್ಯ ವರುಣಾ ।
ದಿ ಸುರರು ಕ್ಷತ್ರಿಯರೊಳಿಪ್ಪರು ।
ವಾಸವಾಗಿಹ ಸಂಕರುಷನ ನೋಡಿ ಮೋದಿಪರು ॥ ॥೨೯॥

**ಅವತರಣಿಕೆ :—**

ಮುಂದಿನ ಪದ್ಯಗಳಿಂದ ಬ್ರಾಹ್ಮಣ ಕ್ಷತ್ರಿಯ ಇತ್ಯಾದಿ ಚಾತುರ್ವರ್ಣಗತ ಭಗವದುಪಾಸನಕ್ರಮ ಹೇಳುತ್ತಾರೆ. ಚತುರ್ಮುಖ ಬ್ರಹ್ಮದೇವರು ಬ್ರಾಹ್ಮಣ ವರ್ಣಕ್ಕೆ ಅಭಿಮಾನಿಗಳು. ಅಂತಹ ಬ್ರಹ್ಮದೇವರಲ್ಲಿ ವಾಸುದೇವ ನಾಮಕ ಶ್ರೀ ಪರಮಾತ್ಮನು ಅಧಿಷ್ಠತನಾಗಿದ್ದಾನೆ. ವಾಯುದೇವರು, ಗರುಡ, ರುದ್ರದೇವರು,ಶೇಷದೇವರು, ಇಂದ್ರ ವಿವಸ್ವಾನ್‌ನಾಮಕ ಸೂರ್ಯ, ಚಂದ್ರ ಮನ್ಮಥ, ಅಗ್ನಿ, ವರುಣ ಇತ್ಯಾದಿ ದೇವತೆಗಳು ಕ್ಷತ್ರಿಯ ಜಾತಿಗೆ ಅಭಿಮಾನಿಗಳು. ಆ ದೇವತೆಗಳಲ್ಲಿ ಸಂಕರ್ಷಣರೂಪಿ ಶ್ರೀ ಪರಮಾತ್ಮನನ್ನು ಅವರು ನೋಡಿ ಆನಂದಿಸುವರು ಎಂದು ಹೇಳುತ್ತಾರೆ, "ಭೂಸುರರೊಳಿಪ್ಪ"-ಎಂಬ ಪ್ರಸಕ್ತ ಸಂಧಿಗತ ಈ ೨೯ ನೆಯ ಪದ್ಯದಿಂದ ||೨೯||

**ಪ್ರತಿಪದಾರ್ಥ :-**

**ಭೂಸುರರೊಳು**= ಭೂಮಿಯಲ್ಲಿ ದೇವತೆಗಳೆಂದು ಕರೆಸುವ ಬ್ರಾಹ್ಮಣ ವರ್ಣದವರಲ್ಲಿ **ಇಪ್ಪ**= ಅಭಿಮಾನಿಯಾಗಿ ಇರುವ **ಅಬ್ಜಭವನೊಳು**= ಚತುರ್ಮುಖ ಬ್ರಹ್ಮದೇವರಲ್ಲಿ **ವಾಸುದೇವನು**= ವಾಸುದೇವ ನಾಮಕ ಶ್ರೀ ಪರಮಾತ್ಮನು ಇದ್ದಾನೆ **ವಾಯು**= ಶ್ರೀವಾಯುದೇವರು **ಖಗಪ**= ಪಕ್ಷಿ ಶ್ರೇಷ್ಠರಾದ ಗರುಡದೇವರು **ಸದಾಶಿವ**= ಶ್ರೀ ರುದ್ರದೇವರು **ಅಹಿಪ**= ಸರ್ಪಶ್ರೇಷ್ಠರಾದ ಶೇಷದೇವರು **ಇಂದ್ರನು**= ಇಂದ್ರದೇವರು **ವಿವಸ್ವನ್ನಾಮಕ ಸೂರ್ಯ**= ವಿವಸ್ವಾನ್ ಎಂಬ ಹೆಸರಿನ ಸೂರ್ಯ **ಭೇಶ**= ನಕ್ಷತ್ರಪತಿಯಾದ ಚಂದ್ರದೇವರು **ಕಾಮ**= ಮನ್ಮಥ **ಅಮರಾಸ್ಯ**= ದೇವಮುಖನೆಂದು ಹೆಸರಾದ ಅಗ್ನಿದೇವರು **ವರುಣ**= ಜಲಾಭಿಮಾನಿ ವರುಣದೇವರು **ಆದಿ ಸುರರು**= ಪೂರ್ವೋಕ್ತ ದೇವತೆಗಳು **ಕ್ಷತ್ರಿಯರೊಳು**= ಕ್ಷತ್ರಿಯ ಜಾತಿಗೆ **ಇಪ್ಪರು**= ಅಭಿಮಾನಿಗಳೆದ್ದಾರೆ **ವಾಸವಾಗಿಹ**= ಈ ದೇವತೆಗಳು ತಮ್ಮಲ್ಲಿ ವಾಸವಾಗಿರುವ **ಸಂಕರುಷಣನ**= ಸಂಕರ್ಷಣ

ನಾಮಕ ಪರಮಾತ್ಮನನ್ನು **ನೋಡಿ**=ದರ್ಶನ ಭಾಗ್ಯವನ್ನು ಹೊಂದಿದವರಾಗಿ **ಮೋದಿಪರು**=ಸಂತೋಷಪಡುತ್ತಾರೆ ॥೨೯॥

## ವ್ಯಾಖ್ಯಾನಗಳು

### (೧) ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ :-

ಬ್ರಾಹ್ಮಣ, ಕ್ಷತ್ರಿಯ ವರ್ಣಗತ ಭಗವದುಪಾಸನ ಕ್ರಮ ಹೇಳುತ್ತಾರೆ. ಭೂಸುರರೊಳು-ಬ್ರಾಹ್ಮಣ ಜಾತಿಯಲ್ಲಿ ಬ್ರಾಹ್ಮಣ ಜಾತಿಗೆ, ಅಬ್ಜಭವಯಿಪ್ಪ -ಬ್ರಹ್ಮದೇವರು ಅಭಿಮಾನಿಗಳಾಗಿದ್ದಾರೆ. ಅಬ್ಜಭವದೊಳು ವಾಸುದೇವನು ಈ ಬ್ರಹ್ಮನಲ್ಲಿ ವಾಸುದೇವನು ಇದ್ದಾನೆ. ವಾಯು ಖಗಪ ಸದಾಶಿವ-ವಾಯು ದೇವರು, ಗರುಡ, ರುದ್ರದೇವರು, ಅಹಿಪ ಇಂದ್ರನು-ಶೇಷದೇವರು, ಇಂದ್ರ ದೇವರು, ವಿವಸ್ವಾನ್ನಾಮಕ ಸೂರ್ಯ-ವಿವಸ್ವಾನ್ನಾಮಕ ಸೂರ್ಯದೇವರು, ಭೇಶ ಕಾಮ-ಚಂದ್ರದೇವರು, ಕಾಮ ಅಂದರೆ, ಮನ್ಮಥ. ಅಮರಾಸ್ಯ ವರುಣ-ಅಗ್ನಿ ದೇವರು, ವರುಣ ದೇವರು, ಆದಿ ಸುರರು-ಇವರೇ ಮೊದಲಾದ ದೇವತೆಗಳು, ಕ್ಷತ್ರಿಯೊಳಿಪ್ಪರು-ಕ್ಷತ್ರಿಯ ಜಾತಿಗೆ ಅಭಿಮಾನಿಗಳು ಎಂತೆನಿಸಿ, ವಾಸವಾಗಿಹ-ಈ ದೇವತೆಗಳಲ್ಲಿರುವ, ಸಂಕರುಷಣನ-ಸಂಕರ್ಷಣ ರೂಪಿ ಪರಮಾತ್ಮನನ್ನು, ನೋಡಿ-ಈ ದೇವತೆಗಳು ನೋಡಿ, ಮೋದಿಪರು-ಶ್ರೀಪರಮಾತ್ಮನ ಮಹಾಮಹಿಮೆ ಕೊಂಡಾಡುತ್ತಾ ಸಂತೋಷಪಡುವವರಾಗಿದ್ದಾರೆ.

ಆದ ಕಡಿಯಿಂದ ಈ ಜಾತಿಗಳ ಒಳಗೆ ಇರುವ ಅಧಿಕಾರಿಗಳನ್ನು ಅವರು ಮಾಡುವ ಆಚಾರ ವ್ಯವಹಾರವನ್ನು ನೋಡಿದಂಥಾವರಾಗಿ ಭಗವದ್ರೂಪಗಳ ಸಂಗಡ ಐಕ್ಯ ಚಿಂತನಿ ಮಾಡಿ ಪೂಜಿಸಬೇಕು. ॥೨೯॥

### (೨) "ಭಾವಪ್ರಕಾಶಿಕೆ" ವ್ಯಾಖ್ಯಾನ :

ಬ್ರಾಹ್ಮಣಾದಿ ವರ್ಣಾಭಿಮಾನಿ ದೇವತೆಗಳನ್ನೂ ತಜ್ಜಾತಿ ನಿಯಾಮಕನಾದ ವಾಸುದೇವಾದಿ ಭಗವದ್ರೂಪಗಳನ್ನೂ "ಭೂಸುರರೊಳಿಪ್ಪ"-ಎಂಬ ಪದ್ಯ ಮೊದಲು ೩೨ ನೆಯ ಪದ್ಯದವರೆವಿಗೂ ಹೇಳುತ್ತಾರೆ.

ಬ್ರಾಹ್ಮಣ ಜಾತಿಗೆ ಅಭಿಮಾನಿ ಬ್ರಹ್ಮದೇವರು. ಇವರು ಬ್ರಾಹ್ಮಣರಲ್ಲಿರುವವರು. ಅವರಲ್ಲಿ ವಾಸುದೇವ ಮೂರ್ತಿಯನ್ನು ಚಿಂತಿಸಬೇಕು. ವಾಯುದೇವರು, ಗರುಡ, ರುದ್ರ, ಶೇಷ,ಇಂದ್ರ, ವಿವಸ್ವಾನ್ ಎಂಬ ಸೂರ್ಯ, ಚಂದ್ರ ಮನ್ಮಥ, ಅಗ್ನಿ, ವರುಣಾದಿ ದೇವತೆಗಳು ಕ್ಷತ್ರಿಯಜಾತ್ಯಭಿಮಾನಿಗಳು ಕ್ಷತ್ರಿಯರಲ್ಲಿರುವವರು. ಇವರಲ್ಲಿ ಸಂಕರ್ಷಣರೂಪಿ ಶ್ರೀ ಪರಮಾತ್ಮನು ಇರುವನೆಂದು ಚಿಂತಿಸಬೇಕು. ॥೨೮॥

(೩) "ಭಾವದರ್ಪಣ ಟೀಕಾ" ವ್ಯಾಖ್ಯಾನ :-

ಈಗ "ಭೂಸುರ"-ಎಂಬೋ ಪದ್ಯದಿಂದಾರಂಭಿಸಿ, "ವೀತಭಯ" ಎಂಬೋ ಪದ್ಯದವರಿಗೂ ಬ್ರಹ್ಮಾದಿ ದೇವತೆಗಳಲ್ಲಿ ಜಾತಿ ವಿವರಿಸುತ್ತಾರೆ.

ಉಕ್ತಂಚ ಬೃಹದಾರಣ್ಯಕ ಭಾಷ್ಯೇ :—

"ಬ್ರಹ್ಮಾ ಬ್ರಾಹ್ಮಣಜಾತಿಃ ಸನ್ ಬ್ರಹ್ಮಾ ಚತುರ್ಮುಖಃ ।
ಇತೋಽಗ್ರ ಜಗತಸ್ತಸ್ಮಾತ್ಕ್ಷತ್ರಜಾತಿರಜಾಯತ ॥
ವಾಯುಃ ಸದಾಶಿವೋ ಅನಂತೋ ಗರುಡಃ ಶಕ್ರ ಏವಚ ।
ಕಾಮಶ್ಚ ವರುಣಶ್ಚೈವ ಸೋಮಃ ಸೂರ್ಯಸ್ತಥೈವಚ ॥
ಏವಮಾದ್ಯಾ ಕ್ಷತ್ರಿಯಾಸ್ತು ದೇವಾ ಬ್ರಹ್ಮ ವಿನಿರ್ಮಿತಾಃ ।
ವಿವಸ್ವಾನಿಂದ್ರವರುಣ ವಿಷ್ಣುಭ್ಯೋ ಅನ್ಯೇ ದಿತೇಃ ಸುತಾಃ ॥
ರುದ್ರಾದನ್ಯೇ ತಥಾರುದ್ರಾ ವಾಯೋರನ್ಯೇಚ ವಾಯವಃ ।
ಅಗ್ನೇ ರನ್ಯೇಚ ವಸವೋ ವೈಶ್ಯಾ ಇತ್ಯೇವ ಕೀರ್ತಿತಾಃ ॥
ಅಶ್ವಿನ್ಯಾ ಪೃಥಿವೀಶ್ಚೈವ ಕಾಲೋ ಮತ್ಯುಸ್ತ ಥೈವ ।
ಶೂದ್ರದೇವಾಃ ಸಮುದಿಷ್ಟಾ ದೇವವರ್ಣಾ ಇತೀರಿತಾ ಇತ್ಯಾದಿ॥"

ವಾಸುದೇವ ಸಂಕರ್ಷಣ ಪ್ರದ್ಯುಮ್ನಾನಿರುದ್ಧ ರೂಪಚತುಷ್ಟಯಗಳು ಬ್ರಹ್ಮಾದಿ ಚತುರ್ವರ್ಣಗಳಲ್ಲಿದ್ದು, ಹೋಗಲ್ಪಟ್ಟ ಭಯವುಳ್ಳಂಥಾ ನಾರಾಯಣ ಎಂದರೆ,

**"ನಾರಾಃ ಮುಕ್ತಾಃ ತೇಷಾಂ ಆಶ್ರಯಃ ನಾರಾಯಣಃ||"**
ಮುಕ್ತರುಗಳಿಗೆ ಆಶ್ರಯವೆಂಬರ್ಥ.

ಅಥವಾ **"ನಾರಾಃ ನರಸಮೂಹಾಃ ತೇಷಾಮಯನಃ"||**
ಜನರಿಗೆ ಆಶ್ರಯ ಎಂದರ್ಥ.

**"ನಾರಾಃ ಅಪಃ ತಾ ಏವ ಆಯನಂ ಯಸ್ಯ ||"**
ಉದಕವೇ ಆಶ್ರಯ ಯಾವಾತಗೋ ಅವನೇ ಎಂಬರ್ಥ.

**"ನಾರಾಃ ಸದ್ಗುಣಾಃ ತೇಷಾಂ ಆಯನಃ ನಾರಾಯಣಃ ||"**

ಆನಂದಾದಿಗುಣಗಳಿಗೆ ಅಶ್ರಯ ಎಂಬರ್ಥ. ಏವಂ ರೀತ್ಯಾ ನಿರ್ವಚನ ಪೂರ್ವಕ ನಾಮೋಚ್ಚಾರಣ ಮಾಡುವುದರಿಂದ, ಬಹು ಪುಣ್ಯ ಲಾಭವಾಗುತ್ತದೆಂದು **ಗರುಡ ಪುರಾಣದಲ್ಲಿ** ಉಕ್ತವಾಗಿರೋಣದರಿಂದ ಯಥಾಮತಿ ಭಗವನ್ನಾಮಗಳಿಗೆ ಅರ್ಥಮಾಡಿಕೊಳ್ಳಬೇಕೆಂದು ಸೂಚಿಸಿದೆ. ಏತಾದೃಶ ನಾರಾಯಣನೇ ಅಂತರ್ಬಹಿಯಲ್ಲಿ ವ್ಯಾಪ್ತನಾಗಿ ತತ್ತಜ್ಞಾತಿ ಕರ್ಮ ಮಾಡಿ ಮಾಡಿಸಿ ಸದ್ಗತಿಪ್ರದನಾಗುತ್ತಾನೆಂಬರ್ಥ.

**(೪) ಶ್ರೀ ವಾದಿರಾಜಾಚಾರ್ಯರ ವ್ಯಾಖ್ಯಾನ (ಸಂಸ್ಕೃತ ಮೂಲ) :**

"ಭೂಸುರೇತಿ" ಬೃಹದ್ ಭಾಷ್ಯೇ ತತ್ತ್ವನಿರ್ಣಯ ಗೀತಾಯಾಂ ಚ ॥ ವಿಷ್ಣೋಃ ಬ್ರಾಹ್ಮಣ ಜಾತಿಃ ಸನ್ ಜಜ್ಞೇ ಬ್ರಹ್ಮಾ ಚತುರ್ಮುಖಃ ॥ ಇತೋಗ್ರೇ ಜಗತಃ ತನ್ಮಾತ ಕ್ಷತ್ರಜಾತಿಃ ಅಜಾಯತ ॥ ವಾಯುಃ ಸದಾಶಿವೋ ಅನಂತೋ ಗರುಡಃ ಶಕ್ರ ಏವ ಚ॥ ಕಾಮಶ್ಚ ವರುಣಶ್ಚೈವ ಸೋಮಸೂರ್ಯೌ ಯಮಸ್ತಥಾ ॥ ಏವಮಾದ್ಯಾಃ ಕ್ಷತ್ರಿಯಾಸ್ತು ದೇವಾನಾಂ ಬ್ರಹ್ಮ ನಿರ್ಮಿತಾಃ ॥ ಸೂರ್ಯೋ ವಿವಸ್ವಾನೇವ ಗ್ರಾಹ್ಯಃ || ವಿವಸ್ವದಿಂದ್ರ ವರುಣ ವಿಷ್ಣುಭ್ಯೋನ್ಯೇsದಿತೇಃ ಸುತಾಃ ॥ ರುತ್ರಾದನ್ಯೇ ತಥಾ ರುದ್ರಾಃ ವಾಯೋರನ್ಯೇ ಚ ವಾಯವಃ ॥ ಅಗ್ನೇರನ್ನೇ ಚ ವಸವಃ ವೈಶ್ಯಾ ಇತ್ಯೇವ ಕೀರ್ತಿತಾಃ ॥ ಇತ್ಯುತ್ತರ ವಚನಾತ್॥ ॥೨೯॥

ಪ್ರಸಕ್ತ ಪದ್ಯದಲ್ಲಿ ವಿವರಿಸುವ ವರ್ಣಗಳ ವಿಷಯವಾಗಿ, ಬೃಹದಾರಣ್ಯ ಭಾಷ್ಯದಲ್ಲಿ "ತತ್ತ್ವ ನಿರ್ಣಯ ಗೀತಾ"-ಎಂಬ ಪ್ರಮಾಣದ ವಚನಗಳನ್ನು ಉದಹರಿಸುತ್ತಾರೆ.

ಅವ್ಯಾಕೃತ ಬಾಹ್ಮಣದಲ್ಲಿ"ಬ್ರಹ್ಮಾವಾ ಇದಮಗ್ರ ಆಸೀತ್"-ಎಂದು ಪ್ರಾರಂಭಮಾಡಿ ವರ್ಣಸೃಷ್ಟಿಯನ್ನು ನಿರೂಪಿಸಲಾಗಿದೆ. ಚತುರ್ಮುಖ ಬ್ರಹ್ಮದೇವರು ಎಲ್ಲರಿಗಿಂತಲೂ ಮೊದಲು ಉತ್ಪನ್ನರಾದರು, ಬ್ರಾಹ್ಮಣ ಜಾತಿಯಿಂದ ಯುಕ್ತರಾಗಿ ಶ್ರೀಮನ್ನಾರಾಯಣನ ದೆಸೆಯಿಂದ ಎಲ್ಲಕ್ಕೂ ಪೂರ್ವದಲ್ಲಿಯೇ ಜನ್ಮತಾಳಿದವರು. ಈ ಚತುರ್ಮುಖ ಬ್ರಹ್ಮನಿಂದ ಕ್ಷತ್ರ ವರ್ಣವು ಉತ್ಪತ್ತಿಯಾಯಿತು. ವಾಯು, ಗರುಡ, ಶೇಷ, ರುದ್ರ, ಇಂದ್ರ, ಕಾಮ, ವರುಣ, ಸೋಮ, ಸೂರ್ಯ, ಯಮ ಇತ್ಯಾದಿ ದೇವತೆಗಳೆಲ್ಲಾ ಕ್ಷತ್ರಿಯರು. ವಿವಸ್ವಾನ್ ಸೂರ್ಯನು, ಇಂದ್ರ, ವರುಣ, ವಿಷ್ಣು ಇವರುಗಳಿಗಿಂತ ಭಿನ್ನರಾದ ದೇವತೆಗಳು. ಮುಖ್ಯ ರುದ್ರನನ್ನು ಬಿಟ್ಟು ಮಿಕ್ಕ ರುದ್ರ ವರ್ಗ, ಮುಖ್ಯ ವಾಯುವನ್ನು ಬಿಟ್ಟು ಉಳಿದ ಮರುದ್ಗಣ, ಅಗ್ನಿಯನ್ನು ಉಳಿದು ಇತರ ವಸುಗಳು "ವೈಶ್ಯರು" ಎಂದು ಪ್ರಸಿದ್ಧರಾಗಿದ್ದಾರೆ. ॥೨೯॥

## (ಆ) "ಗುರುಹೃದಯಪ್ರಕಾಶಿಕೆ"-ವ್ಯಾಖ್ಯಾನ :-

ಬ್ರಾಹ್ಮಣಾದಿ ನಾಲ್ಕು ವರ್ಣಗಳಿಗೆ ಅಭಿಮಾನಿ ದೇವತೆಗಳನ್ನೂ, ತತ್ತನ್ನಿಯಾಮಕ ವಾಸುದೇವಾದಿ ರೂಪಗಳನ್ನು ಉಪಾಸನಾರ್ಥ ಹೇಳುತ್ತಾರೆ.

ಬ್ರಾಹ್ಮಣ ಜಾತಿ ಅಭಿಮಾನಿ ಬ್ರಹ್ಮದೇವರಲ್ಲಿ ವಾಸುದೇವರೂಪನು. ವಾಯುದೇವರು, ಗರುಡ' ಸದಾಶಿವ, ಶೇಷ, ಇಂದ್ರ, ವಿವಸ್ವಾನ್ ಎಂಬ ಸೂರ್ಯ, ಭೇಶನೆಂಬ ನಕ್ಷತ್ರಾಧಿಪತಿ ಚಂದ್ರನು, ಮನ್ಮಥನು, ಅಮರಾಸ್ಯನೆಂಬ ದೇವಮುಖನಾದ ಅಗ್ನಿ, ವರುಣಾದಿ ಈ ದೇವತೆಗಳು ಕ್ಷತ್ರಿಯರೊಳಿದ್ದು, ಸಂಕರ್ಷಣ ರೂಪವನ್ನು ಧ್ಯಾನಿಸುತ್ತಾ, ಸಂತೋಷಿಸುವರು.॥೨೯॥

# ಸರ್ವವ್ಯಾಖ್ಯಾನಸಾರ ಸಂಗ್ರಹ

ಪ್ರಸಕ್ತ ಪದ್ಯದಿಂದ ಪ್ರಾರಂಭಿಸಿ, ಮುಂದಿನ ೩೨ ನೆಯ ಪದ್ಯದ ವರೆವಿಗೂ ಬ್ರಹ್ಮ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರ ಎಂಬ ನಾಲ್ಕು ವರ್ಣಗಳು. ಆ ವರ್ಣಗಳಿಗೆ ಅಭಿಮಾನಿಗಳಾದ ದೇವತಾವರ್ಗ ಮತ್ತು ಆ ದೇವತೆಗಳಲ್ಲಿ ಅಂತಸ್ಥಿತನಾಗಿದ್ದು, ತತ್ತ್ವರ್ಣನಿಯಾಮಕವಾದ ಭಗವದ್ರೂಪಗಳ ವಿವರಗಳನ್ನು ನಿರೂಪಿಸುತ್ತಾರೆ.

(೧) ಬ್ರಾಹ್ಮಣ ವರ್ಣಕ್ಕೆ ಅಭಿಮಾನಿಗಳು ಚತುರ್ಮುಖ ಬ್ರಹ್ಮದೇವರು. ಸೂಕ್ಷ್ಮ ಸೃಷ್ಟಿಯಲ್ಲಿ ವಾಸುದೇವರೂಪಿ ಶ್ರೀಪರಮಾತ್ಮನ ದೆಸೆಯಿಂದ ಶ್ರೀಲಕ್ಷ್ಮೀದೇವಿಯರ ಅವತಾರ ಭೂತರಾದ ಮಾಯಾ ದೇವಿಯಲ್ಲಿ ಮೊಟ್ಟಮೊದಲು ಉತ್ಪನ್ನರಾದವರು ಪುರುಷನಾಮಕ ವಿರಿಂಚಿಯು. ಈ ವಿರಿಂಚಿನಾಮಕರಾದ ಚತುರ್ಮುಖ ಬ್ರಹ್ಮದೇವರೇ ಮುಂದೆ ಪದ್ಮಸೃಷ್ಟಿಯಲ್ಲಿ ಪದ್ಮನಾಭ ರೂಪಿಯಾದ ಶ್ರೀಪರಮಾತ್ಮನ ನಾಭಿಪ್ರದೇಶದಿಂದ ಉತ್ಪನ್ನವಾದ ಸುವರ್ಣಾತ್ಮಕ ಕಮಲದಲ್ಲಿ ಎಲ್ಲರಿಗಿಂತಲೂ ಮೊದಲು ಸೃಷ್ಟಿಯಾದರು. ಅಂತಹ ಕಮಲೋದ್ಭವರಾದ ಚತುರ್ಮುಖ ಬ್ರಹ್ಮದೇವರು ವಿರಾಡ್ರೂಪಿ ಪುರುಷನಾಮಕನಾದ ಪರಮಾತ್ಮನ ಮುಖದಿಂದ ಉತ್ಪನ್ನರಾದ ವಿಪ್ರಕುಲಕ್ಕೆ ಅಭಿಮಾನಿಗಗು. ಇಂತಹ ಬ್ರಹ್ಮ ದೇವರಲ್ಲಿ ಶ್ರೀ ವಾಸುದೇವನಾಮಕ ಪರಮಾತ್ಮನು ಬ್ರಾಹ್ಮಣ ವರ್ಣಕ್ಕೆ ನಿಯಾಮಕನಾಗಿದ್ದಾನೆ.

(೨) ಜೀವೋತ್ತಮರಾದ ಶ್ರೀ ವಾಯುದೇವರು, ಪಕ್ಷಿ ಶ್ರೇಷ್ಠರಾದ ಗರುಡದೇವರು, ಸರ್ಪಶ್ರೇಷ್ಠರಾದ ಶೇಷದೇವರು, ಮನೋಭಿಮಾನಿಗಳಾದ ರುದ್ರದೇವರು, ಉಪಮನಸ್ಸಿಗೆ ಅಭಿಮಾನಿಗಳಾದ ಸುರಪತಿ ಇಂದ್ರದೇವರು, ದ್ವಾದಶಾದಿತ್ಯರಲ್ಲಿ ವಿವಸ್ವಾನ್ ಎಂಬ ಹೆಸರುಳ್ಳ ಸೂರ್ಯನು, "ಭ" ಅಂದರೆ ನಕ್ಷತ್ರಗಳು. ಅವುಗಳಿಗೆ "ಈಶ" ಎಂದರೆ ಅಧಿಪತಿಯಾದ, ಭೇಶನಾಮಕ ನಕ್ಷತ್ರಾಧಿಪತಿ ಚಂದ್ರನು, ಮನೋಭಿಮಾನಿಯಾದ ಮನ್ಮಥ, ದೇವತೆಗಳು

ಅಗ್ನಿದ್ವಾರಾ ಹವಿಸ್ಸುಗಳನ್ನು ಸ್ವೀಕರಿಸವರು. ಇದರಿಂದ ಅಗ್ನಿಗೆ "ದೇವಮುಖ" ಅಥವಾ "ಅಮರಾಸ್ಯ" ದೆಂದು ಹೆಸರು. ಅಂತಹ ಅನುರಾಸ್ಯನೆನಿಸಿರುವ ಅಗ್ನಿ, ಜಲಾಭಿಮಾನಿಯಾದ ವರುಣನು ಇವರೇ ಮುಂತಾದ ದೇವತೆಗಳು ಕ್ಷತ್ರಿಯವರ್ಣಕ್ಕೆ ಅಭಿಮಾನಿಗಳಾಗಿದ್ದಾರೆ. ಅಂತಹ ಕ್ಷತ್ರಿಯ ವರ್ಣಾಭಿಮಾನಿಗಳಾದ ದೇವತೆಗಳಲ್ಲಿ ಸಂಕರ್ಷಣನಾಮಕ ಶ್ರೀ ಪರಮಾತ್ಮನು ಕ್ಷತ್ರಿಯ ವರ್ಣಕ್ಕೆ ನಿಯಾಮಕನಾಗಿದ್ದಾನೆ. ಆ ದೇವತೆಗಳು ತಮ್ಮಲ್ಲಿ ಅಂತಸ್ಥಿತನಾದ ಸಂಕರ್ಷಣನನ್ನು ಸಾಕ್ಷಾತ್ಕರಿಸಿಕೊಂಡು, ತದ್ವಾರಾ ಅವನ ದರ್ಶನಭಾಗ್ಯದಿಂದ ಸಂತೋಷಪಡುವರು ಎಂದು ತಾತ್ಪರ್ಯ. ॥೨೯॥

## ಪದ್ಯ (೩೦)

**ಮೂಲ :**

ಮೀನಕೇತನತನಯ ಪ್ರಾಣಾ ।
ಪಾನ ವ್ಯಾನೋದಾನ ಮುಖ್ಯೈ ।
ಕೋನ ಪಂಚಾಶನ್ಮರುದ್ಗಣ ರುದ್ರ ವಸುಗಣರು ॥
ಮೇನಕಾತ್ಮಜೆ ಕುವರ ವಿಷ್ವ ।
ಕ್ಸೇನ ಧನಪಾದ್ಯನಿಮಿಷರು ಸ ।
ದಾನುರಾಗದಿ ಧೇನಿಪುದು ವೈಶ್ಯರೊಳು ಪ್ರದ್ಯುಮ್ನ ॥ ॥೩೦॥

**ಅವತರಣಿಕೆ :**

ಪ್ರಸಕ್ತ ಪದ್ಯದಿಂದ ವೈಶ್ಯವರ್ಣ, ಆ ವರ್ಣಾಭಿಮಾನಿ ದೇವತೆಗಳು, ಆ ದೇವಾಂತರ್ಗತ ಭಗವದ್ರೂಪ ಇವುಗಳ ವಿವರಗಳನ್ನು ತಿಳಿಸುತ್ತಾರೆ.

ಕಾಮನಮಗನಾದ ಅನಿರುದ್ಧ, ಪ್ರಾಣಾದಿ ೪೯ ಮರುದ್ಗಣಗಳು, ಪ್ರಧಾನರುದ್ರ ದೇವರನ್ನುಳಿದು ಶೇಷಸ್ಥ ೧೦ ಮಂದಿ ರುದ್ರಗಣ, ವಸುಗಳು, ಪಾರ್ವತೀ ಪುತ್ರನಾದ ವಿಘ್ನೇಶ್ವರ, ವಿಷ್ವಕ್ಸೇನ, ಕುಬೇರ ಇವರೇ ಆದಿಯಾಗಿ ದೇವತಾವರ್ಗ ವೈಶ್ಯಜಾತಿಗೆ ಅಭಿಮಾನಿಗಳು. ಈ ಅಭಿಮಾನಿ ದೇವತಾಗಣ

ದಲ್ಲಿ ಪ್ರದ್ಯುಮ್ನ ನಾಮಕ ಶ್ರೀ ಪರಮಾತ್ಮನನ್ನು ಅತ್ಯಂತ ಭಕ್ತಿಭಾವದಿಂದ ಧ್ಯಾನಿಸಬೇಕೆಂದು ಹೇಳುತ್ತಾರೆ.—"ಮೀನಕೇತನ ತನಯ" -ಎಂಬ ಪ್ರಸಕ್ತ ಸಂಧಿಗತ ೩೦ ನೆಯ ಈ ಪದ್ಯದಿಂದ. ॥೩೦॥

**ಪ್ರತಿಪದಾರ್ಥ** :—

**ಮೀನಕೇತನ**=ಮತ್ಸ್ಯವನ್ನು ತನ್ನ ಧ್ವಜದಲ್ಲಿ ಲಾಂಛನವಾಗಿ ಉಳ್ಳ ಮನ್ಮಥನ **ತನಯ**=ಮಗನಾದ ಅನಿರುದ್ಧನು **ಪ್ರಾಣ ಅಪಾನ ವ್ಯಾನೋದಾನ**=ಪ್ರಧಾನ ವಾಯುದೇವರು ವ್ಯತಿರಿಕ್ತ ಮರುದ್ಗಣದೊಳಗೆ ಮುಖ್ಯರಾದ ದಾಸಪ್ರಾಣರೆನಿಸಿದ ಪ್ರಾಣ, ಅಪಾನ, ವ್ಯಾನ, ಉದಾನ ಮತ್ತು ಸಮಾನರೆಂಬ ಈ ಪಂಚಪ್ರಾಣರು **ಮುಖ್ಯ**=ಆದಿಯಾಗಿ **ಏಕೋನ ಪಂಚಾಶತ್**=ನಲವತ್ತೊಂಭತ್ತು ಎಂಬ ಸಂಖ್ಯಾಕವಾದ (ಪಂಚಾಶತ್= ೫೦. ಇದಕ್ಕೆ ಏಕೋನ ಒಂದು ಕಡಿಮೆ. ಅಂದರೆ ೪೯ ಎಂದರ್ಥ) **ಮರುದ್ಗಣ**=ಮರುತ್ತುಗಳು **ರುದ್ರ**=ಪಾರ್ವತೀಪತಿ ರುದ್ರದೇವರು ವ್ಯತಿರಿಕ್ತ ಉಳಿದ ದಶ ರುದ್ರಗಣ **ವಸು ಗಣರು**=ಅಗ್ನಿ ವ್ಯತಿರಿಕ್ತ ಉಳಿದ ಏಳು ಮಂದಿ ವಸುಗಳು **ಮೇನಕಾ**=ಹಿಮಾಚಲನ ಪತ್ನಿ ಮೇನಕೆಯ **ಆತ್ಮಜೆ**=ಮಗಳಾದ ಪಾರ್ವತೀದೇವಿಯರ **ಕುವರ**=ಮಗನಾದ ಗಣಪತಿ **ವಿಷ್ವಕ್ಸೇನ**=ವಾಯುಪುತ್ರನಾದ ವಿಷ್ವಕ್ಸೇನ **ಧನಪ**= ಧನಾಧಿಪತಿಯಾದ ಕುಬೇರ **ಆದಿ**=ಇವರೇ ಮುಂತಾದ **ಅನಿಮಿಷರನು**=ದೇವತೆಗಳನ್ನು **ಸದಾ**=ನಿರಂತರವೂ **ಅನುರಾಗದಿ**= ಭಕ್ತಿಯಿಂದ **ವೈಶ್ಯರೊಳು**=ವೈಶ್ಯವರ್ಣದ ಅಭಿಮಾನಿಗಳನ್ನಾಗಿ **ಪ್ರದ್ಯುಮ್ನ**=ಇಂತಹ ಅಭಿಮಾನಿ ದೇವತಾವರ್ಗದಲ್ಲಿ ಪ್ರದ್ಯುಮ್ನನಾಮಕ ಶ್ರೀ ಪರಮಾತ್ಮನನ್ನು **ಧೇನಿಪುದು**=ತಿಳಿದು ಜ್ಞಾನಾನುಸಂಧಾನದಿಂದ ಧ್ಯಾನಿಸಬೇಕು. ॥೩೦॥

## ವ್ಯಾಖ್ಯಾನಗಳು

### (೧) ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ :-

ವೈಶ್ಯರ ಅಂತರ್ಗತ ಭಗವದ್ರೂಪೋಪಾಸನಕ್ರಮ ಹೇಳುತ್ತಾರೆ. ವೈಶ್ಯರೊಳು-ವೈಶ್ಯಜಾತಿಯಲ್ಲಿ (ಈ ಜಾತಿಗೆ ಅಭಿಮಾನಿಗಳು), ಮೀನಕೇತನ-ಮಚ್ಛವೇ ಧ್ವಜಪತಾಕದಲ್ಲಿ ಉಳ್ಳ ಮನ್ಮಥನ ಮಗನಾದ ಅನಿರುದ್ಧನು, ಮುಖ್ಯ-ವಾಯುದೇವರು ವ್ಯತಿರಿಕ್ತ ಮರುದ್ಗಣರೊಳಗೆ ಮುಖ್ಯರಾದ ಶ್ರೇಷ್ಠರಾದ ದಾಸಪ್ರಾಣರಾದ, ಪ್ರಾಣಾಪಾನವ್ಯಾನೋದಾನ-ಪ್ರಾಣ, ಅಪಾನ. ವ್ಯಾನ, ಉದಾನ, ಸಮಾನ ಇವರೇ ಮೊದಲಾದ, ಏಕೋನಪಂಚಾಶತ್-ನಲವತ್ತೊಂಭತ್ತು, ಮರುದ್ಗಣ-ಮರುತ್ ಸಮೂಹರು, ರುದ್ರ-ಪಾರ್ವತೀಪತಿ ರುದ್ರದೇವರು ವ್ಯತಿರಿಕ್ತ ದಶ ರುದ್ರರು, ವಸುಗಣರು-ಅಗ್ನಿ ವ್ಯತಿರಿಕ್ತ ಏಳು ವಸುಗಳು, ಮೇನಕಾತ್ಮಜೆ-ಹಿಮಾಚಲನ ಪತ್ನಿ ಮೇನಕಾ ಈಕೆ ಮಗಳು ಪಾರ್ವತೀದೇವೇರು ( ಪಾರ್ವತಿಗೆ), ಕುವರ-ಮಗನಾದ ಗಣೇಶ, ವಿಷ್ವಕ್ಸೇನ-ವಾಯುಪುತ್ರ ವಿಷ್ವಕ್ಸೇನ, ಧನಪ-ಕುಬೇರ. ಆದಿ ಅನಿಮಿಷರು-ಮೊದಲಾದ ದೇವತೆಗಳನ್ನು, ಸದಾನುರಾಗದಿ-ನಿರಂತರ ಅತ್ಯಂತ ಆಸಕ್ತಿಯಿಂದ (ವೈಶ್ಯರೊಳು) ತಿಳಿದು ದೇವತೆಗಳ ಅಂತರ್ಗತನಾದ, ಪ್ರದ್ಯುಮ್ನ-ಶ್ರೀ ಪ್ರದ್ಯುಮ್ನನಾಮಕ ಪರಮಾತ್ಮನ್ನ, ಧೇನಿಪುದು-ಅನುಸಂಧಾನದಿಂದ ಧ್ಯಾನಮಾಡಬೇಕು. ॥೩೦॥

### (೨) "ಭಾವಪ್ರಕಾಶಿಕೆ" ವ್ಯಾಖ್ಯಾನ :-

ಮನ್ಮಥನ ಅವತಾರನಾದ ಪ್ರದ್ಯುಮ್ನನ ಮಗ ಅನಿರುದ್ಧ, ಪ್ರಾಣ, ಅಪಾನ, ವ್ಯಾನ, ಉದಾನ ಮೊದಲಾದ ೪೯ ಮರುತ್ತುಗಳು, ೧೦ ರುದ್ರರು, ಪಾರ್ವತೀ ಕುಮಾರನಾದ ವಿಘ್ನೇಶ್ವರ. ವಿಷ್ವಕ್ಸೇನ. ಕುಬೇರಾದಿ ದೇವತೆಗಳು, ವೈಶ್ಯಾಭಿಮಾನಿಗಳು ವೈಶ್ಯರಲ್ಲಿರುವವರು. ಈ ದೇವತೆಗಳಲ್ಲಿ ಇರುವವನು ಪ್ರದ್ಯುಮ್ನನಾಮಕ ಶ್ರೀಪರಮಾತ್ಮನೆಂದು ಪರಮ ಪ್ರೀತಿಯಿಂದ ಸರ್ವಕಾಲದಲ್ಲಿಯೂ ಭಜಿಸಬೇಕು, ॥೩೦॥

## (೩) "ಭಾವದರ್ಪಣಟೀಕಾ"ವ್ಯಾಖ್ಯಾನ:-

ಈ ವ್ಯಾಖ್ಯಾನದಲ್ಲಿ ಹಿಂದಿನ ೨೯ ನೆಯ ಪದ್ಯದಿಂದ ಪ್ರಾರಂಭಿಸಿ ೩೨ ನೆಯ ಪದ್ಯದವರೆಗೂ ಪದ್ಯಗತ ಅರ್ಥಗಳನ್ನು ಸಮಗ್ರವಾಗಿ ನಿರೂಪಿಸಿದೆ. ||೩೦||

## (೪) ಶ್ರೀ ವಾದಿರಾಜಾಚಾರ್ಯರ ವ್ಯಾಖ್ಯಾನ (ಸಂಸ್ಕೃತ ಮೂಲ) :

"ಮೀನ"-ಇತಿ || ಇಚ್ಛನ್ ಬಹು ಪರೀವಾರಮ್ ವೈಶ್ಯಾನ್ ದೇವಾನ್ ಸಸರ್ಗ ಹ || ಇತ್ಯುಕ್ತೇಃ ಅನಿರುದ್ಧಃ || "ಏಕೋನ"-ಇತಿ || ರುದ್ರ ವಸುಷ್ವಪಿ ಅನ್ವೇತಿ || ಕುವರಃ ಗಣೇಶಃ ||೩೦||

**ಕನ್ನಡಾರ್ಥ :—**

ಸೃಷ್ಟಿಯಲ್ಲಿ ಬಹು ಪರಿವಾರವನ್ನು ಇಚ್ಛಿಸಿದವರಾಗಿ ಚತುರ್ಮುಖ ಬ್ರಹ್ಮದೇವರು ವೈಶ್ಯದೇವತೆಗಳನ್ನು ಸೃಷ್ಟಿಸಿದರು. ಈ ವಿಷಯವನ್ನು **ಶ್ರೀಮಧ್ವಾಚಾರ್ಯರು ಶ್ರೀಬೃಹದ್ಭಾಷ್ಯ**ದಲ್ಲಿ ನಿರೂಪಿಸಿರುತ್ತಾರೆ. ಇದರಿಂದ ವೈಶ್ಯರಲ್ಲಿ ನಿಯಾಮಕರಾಗಿರುವ ದೇವತಾವರ್ಗವನ್ನು ಚಿಂತಿಸಬೇಕು. ಮೀನಕೇತನ=ಪ್ರದ್ಯುಮ್ನ (ಕಾಮ) ಅವನ ತನಯ=ಅನಿರುದ್ಧನು. ಮೇನಕಾತ್ಮಜೆ ಕುವರ=ಗಣೇಶ. ಮೇನಕಾತ್ಮಜೆ=ಮೇನಕಾ (ಪರ್ವತ ರಾಜನ ಮಗಳು) ದೇವಿಯ ಮಗಳು ಪಾರ್ವತಿ. ಅವಳ ಮಗ= ಗಣೇಶ. ||೩೦||

## (೫) "ಗುರುಹೃದಯ ಪ್ರಕಾಶಿಕೆ" ವ್ಯಾಖ್ಯಾನ

ಮೀನಕೇತನ ತನಯನೆಂಬ ಕಾಮಪುತ್ರನಾದ ಅನಿರುದ್ಧ, ಪ್ರಾಣ, ಅಪಾನ, ವ್ಯಾನ, ಉದಾನಾದಿ ನಲವತ್ತೊಂಭತ್ತು ವಾಯುಗಣವು, ರುದ್ರಗಣ, ಅಷ್ಟವಸುಗಣ, ಮೇನಕಾತ್ಮಜೆ ಕುವರನೆಂಬ ಪಾರ್ವತೀಪುತ್ರ ವಿಘ್ನೇಶನು, ವಿಷ್ವಕ್ಸೇನನು, ಕುಬೇರ ಮುಂತಾದ ದೇವತೆಗಳನ್ನು, ತನ್ನಿಯಾಮಕ ಪ್ರದ್ಯುಮ್ನ ರೂಪವನ್ನೂ ಸಹ ವೈಶ್ಯರಲ್ಲಿ ಧ್ಯಾನಿಸುವುದು. ||೩೦||

# ಸರ್ವವ್ಯಾಖ್ಯಾನಸಾರ ಸಂಗ್ರಹ

ಪ್ರಸಕ್ತ ಪದ್ಯದಲ್ಲಿ ತೃತೀಯ ವರ್ಣವಾದ ವೈಶ್ಯಜಾತಿ, ಅದರ ಅಭಿಮಾನಿ ದೇವತಾವರ್ಗ ಮತ್ತು ಆ ವರ್ಣನಿಯಾಮಕ ಭಗವದ್ರೂಪ. ಇವುಗಳ ವಿವರಗಳನ್ನು ತಿಳಿಸುತ್ತಾರೆ.

ವೈಶ್ಯವರ್ಣಕ್ಕೆ ಅಭಿಮಾನಿಗಳಾಗಿರುವ ದೇವತಾ ವರ್ಗ -:

(೧) ತನ್ನ ಧ್ವಜದಲ್ಲಿ "ಮೀನ"ನ್ನು ಲಾಂಛನವಾಗಿ ಹೊಂದಿರುವ ಮನ್ಮಥನಿಗೆ "ಮೀನಕೇತನ"ನೆಂದು ಹೆಸರು. ಮನಸ್ಸು ಮೀನಿನಂತೆ ಬಹು ಚಂಚಲ ಸ್ವಭಾವವುಳ್ಳದ್ದು. ಯಾವಾಗಲೂ ವಿಷಯಾಸಕ್ತವಾಗಿರಲು ಪ್ರಯತ್ನಿಸುತ್ತಿರುವುದು. ಇದರಿಂದ ಮತ್ಸ್ಯದ ಲಾಂಛನ ಸಾಂಕೇತ. ಇಂತಹ ಮನ್ಮಥನು ಶ್ರೀ ಕೃಷ್ಣನ ಪುತ್ರನಾಗಿ ಶ್ರೀ ರುಕ್ಮಿಣಿದೇವಿಯಲ್ಲಿ ಅವತಾರ ಮಾಡಿದನು, ಕೃಷ್ಣ ಪುತ್ರನಾದ ಅವನಿಗೆ "ಪ್ರದ್ಯುಮ್ನ" ಎಂದು ಹೆಸರು. ಪ್ರದ್ಯುಮ್ನನು ರುಕ್ಮಿಣಿಯ ಅಣ್ಣನಾದ ರುಕ್ಮಿಯ ಪುತ್ರಿ ರುಕ್ಮವತಿಯನ್ನು (ರತಿ ದೇವಿಯ ಅವತಾರ) ವಿವಾಹವಾಗಿ "ಅನಿರುದ್ಧ"ನೆಂಬ ಪುತ್ರನನ್ನು ಪಡೆದನು. ಇಂತಹ ಮೀನಕೇತನನ ತನಯನೇ ಅನಿರುದ್ಧನು.

(೨) ಮುಖ್ಯ ಪ್ರಾಣದೇವರನ್ನು ಬಿಟ್ಟರೆ, ಮರುದ್ಗಣಗಳು ನಲವತ್ತೊಂಭತ್ತು ಮಂದಿ ಇದ್ದಾರೆ. ಇವರಲ್ಲಿ ಪ್ರಾಣ, ಅಪಾನ, ವ್ಯಾನ, ಉದಾನ ಮತ್ತು ಸಮಾನ ಎಂಬ ಪಂಚ ಪ್ರಾಣರು ಶ್ರೇಷ್ಠರು. ಇವರಿಗೆ "ದಾಸ ಪ್ರಾಣ"ರೆಂದೂ ಹೆಸರು. ಇವರಲ್ಲಿ ಮುಖ್ಯ ಪ್ರಾಣದೇವರು ನಿತ್ಯ ಸನ್ನಿಹಿತರಾಗಿದ್ದು, ಪಂಚಕೋಶಗತ ವ್ಯಾಪಾರಗಳನ್ನು ಮತ್ತು ಭೂತ ಪಂಚಕಗಳ ಗುಣಗಳಾದ ಶಬ್ದ, ಸ್ಪರ್ಶ, ರೂಪ, ರಸ ಮತ್ತು ಗಂಧ ಇವುಗಳ ಗುಣಗಳನ್ನು ಪ್ರವರ್ತಿಸುವರು. ಮರುದ್ಗಣಗಳ ಸಂಖ್ಯೆಯಾದ ೪೯ನ್ನು ದಾಸರಾಯರು "ಏಕೋನಪಂಚಾಶತ" -ಎಂದು ಹೇಳಿದ್ದಾರೆ. "ಪಂಚಾಶತ್" ಎಂದರೆ ಐವತ್ತು ಎಂದರ್ಥ. ಇದಕ್ಕೆ "ಏಕ ಊನ" ಅಂದರೆ ಒಂದು ಕಡಿಮೆ.

ಎಂದರೆ ೪೯ ಎಂಬ ಸಂಖ್ಯೆಯಾಗುವುದು. ಇಂತು ಏಕೋನಪಂಚಾಶತ್ ಮರುದ್ಗಣಗಳು.

(೩) ಏಕಾದಶ ರುದ್ರರು ಎಂದು ರುದ್ರಗಣದ ಸಂಖ್ಯೆ ಹನ್ನೊಂದು. ಇವರಲ್ಲಿ ಪಾರ್ವತೀ ಪತಿಯಾದ ಮಹರುದ್ರ ದೇವರನ್ನು ಬಿಟ್ಟು ಉಳಿದ ದಶ ರುದ್ರಗಣ.

(೪) ಅಷ್ಟವಸುಗಳು ಎಂದು ವಸುಗಳ ಸಮೂಹ ಎಂಟು. ಈ ಗಣದಲ್ಲಿ ಕ್ಷತ್ರಿಯ ಜಾತಿಗೆ ಅಭಿಮಾನಿಯಾದ ಅಗ್ನಿಯನ್ನು ಬಿಟ್ಟು, ಉಳಿದ ಏಳು ಮಂದಿ ವಸುಗಣ.

(೫) ಮೇನಕೆಯು ಪಿತೃ ದೇವತೆಗಳ ಮಾನಸ ಪುತ್ರಿ. ಹಿಮವಂತನ ಪತ್ನಿ. ಪರ್ವತರಾಜನಿಂದ ಮೈನಾಕನೆಂಬ ಪುತ್ರನನ್ನೂ ಮತ್ತು ಪಾರ್ವತಿ ಯೆಂಬ ಪುತ್ರಿಯನ್ನೂ ಪಡೆದಳು. ಆದರಿಂದ "ಮೇನಕಾತ್ಮಜೆ" ಎಂದರೆ ಹಿಮವತ್ಪರ್ವತ ರಾಜನ ಪತ್ನಿ ಮೇನಕೆಯಲ್ಲಿ. ಉತ್ಪನ್ನಳಾದ ಪಾರ್ವತೀ ದೇವಿ. ಇವಳ ಮಗನೇ ಸಿದ್ಧಿದಾಯಕನೂ, ಸರ್ವ ವಿಘ್ನ ಪರಿಹಾರಕನೂ ಪ್ರಥಮ ಪೂಜಾರ್ಹನೂ ಆದ ಗಣಪತಿಯು. ಅಂದರೆ, ಮೇನಕಾತ್ಮಜೆಯ ಕುವರನೆಂದರೆ ವಿಘ್ನೇಶ್ವರ ಎಂದರ್ಥ.

(೬) ವಾಯುಪುತ್ರನಾದ ವಿಷ್ವಕ್ಸೇನ ಎಂಬ ದೇವತೆ.

(೭) ಧನಾಧಿಪತಿಯಾದ ಕುಬೇರನು ಯಕ್ಷಾಧಿಪತಿ. ಉತ್ತರದಿಕ್ಕಿನ ದಿಕ್ಪಾಲಕ.

ಇಂತು, ಮನ್ಮಥಪುತ್ರ ಅನಿರುದ್ಧ, ಪ್ರಾಣಾದಿ ೪೯ ಮರುದ್ಗಣಗಳು, ಮಹರುದ್ರ ದೇವರ ವ್ಯತಿರಿಕ್ತ ದಶ ರುದ್ರಗಣ, ಅಗ್ನಿಯನ್ನು ಬಿಟ್ಟು ಏಳು ಮಂದಿ ವಸುಗಣ, ಪಾರ್ವತೀ ಪುತ್ರನಾದ ಗಣಪತಿ. ವಾಯುಪುತ್ರನಾದ ವಿಷ್ವಕ್ಸೇನ ಮತ್ತು ಧನಾಧಿಪತಿಯಾದ ಕುಬೇರ-ಇತ್ಯಾದಿ ದೇವತಾವರ್ಗ ವೈಶ್ಯ ಜಾತಿಗೆ ಅಭಿಮಾನಿಗಳು.

ಈ ದೇವತಾ ವರ್ಗದಲ್ಲಿ ಪ್ರದ್ಯುಮ್ನ ನಾಮಕ ಶ್ರೀ ಪರಮಾತ್ಮನನ್ನು ಅತ್ಯಂತ ಶ್ರದ್ಧಾ ಭಕ್ತಿಗಳಿಂದ ಚಿಂತಿಸಿ, ಧ್ಯಾನಿಸಬೇಕೆಂದು ದಾಸರಾಯರ ಅಭಿಪ್ರಾಯ. ||೩೦||

## ಪದ್ಯ (೩೧)

**ಮೂಲ :**

ಇರುತಿಹರು ನಾಸತ್ಯದಸ್ರರು ।
ನಿರುಋುತಿಯು ಯಮಧರ್ಮ ಯಮ ಕಿಂ ।
ಕರರು ಮೇದಿನಿ ಕಾಲಮೃತ್ಯು ಶನೈಶ್ಚರಾದಿಗಳು ॥
ಕರೆಸಿಕೊಂಬರು ಶೂದ್ರರೆಂದನ ।
ವರತ ಶೂದ್ರರೊಳಿಪ್ಪರಿವರೊಳ ।
ಗರವಿದೂರನಿರುದ್ಧನಿಹನೆಂದರಿತು ಮನ್ನಿಪುದು ॥ ||೩೧||

**ಅವತರಣಿಕೆ :–**

ಪ್ರಸಕ್ತ ಪದ್ಯದಿಂದ ಚತುರ್ಥ ವರ್ಣದವರಾದ ಶೂದ್ರರು. ಆ ಜಾತಿಗೆ ಅಭಿಮಾನಿಗಳಾದ ದೇವತಾವರ್ಗ ಮತ್ತು ಆ ದೇವತೆಗಳಲ್ಲಿ ನಿಯಮನ ಮಾಡುವ ಭಗವದ್ರೂಪ ಈ ವಿವರಗಳನ್ನು ತಿಳಿಸುತ್ತಾರೆ.

ನಾಸಿಕೇಂದ್ರಿಯಾಭಿಮಾನಿಗಳಾದ ಅಶ್ವಿನೀ ದೇವತೆಗಳು, ನಿರಋುತಿ ಎಂಬ ದಿಗ್ದೇವತೆ, ಯಮಧರ್ಮರಾಜ, ಯಮಕಿಂಕರರು, ಪೃಥ್ವ್ಯಭಿಮಾನಿ ದೇವತಾ, ಕಾಲಮೃತ್ಯು ದೇವತೆ ಮತ್ತು ಶನೈಶ್ಚರ–ಇವರೇ ಮೊದಲಾದ ದೇವತಾವರ್ಗ ಶೂದ್ರ ವರ್ಣಕ್ಕೆ ಅಭಿಮಾನಿಗಳೆಂದೆನಿಸಿದ್ದಾರೆ. ಈ ದೇವತೆಗಳಲ್ಲಿ ಅಂತರ್ಯಾಮಿಯಾಗಿದ್ದು, ಶೂದ್ರವರ್ಣದ ಧರ್ಮಗಳನ್ನು ನಿಯಮನ ಮಾಡುತ್ತಿರುವ ಭಗವದ್ರೂಪವು ಅನಿರುದ್ಧನು. ಸರ್ವದೋಷವಿವರ್ಜಿತನಾದ ಅನಿರುದ್ಧ ರೂಪವನ್ನು ಚಿಂತಿಸುವವರಿಗೆ ಶ್ರೀ ಪರಮಾತ್ಮನು ಸಂರಕ್ಷಿಸಿ

ಉದ್ಧರಿಸುವನು ಎಂದು ಹೇಳುತ್ತಾರೆ. "ಇರುತಿಹರು"-ಎಂಬ ಪ್ರಸಕ್ತ ಸಂಧಿಗತ ಈ ೩೧ನೆಯ ಪದ್ಯದಿಂದ. ॥೩೧॥

**ಪ್ರತಿಪದಾರ್ಥ :-**

**ನಾಸತ್ಯದಸ್ರರು**=ನಾಸತ್ಯ ಮತ್ತು ದಸ್ರ ಎಂಬ ಹೆಸರಿನ ಅಶ್ವಿನೀ ದೇವತೆಗಳು **ನಿರಋುತಿಯು**=ನೈರುತ್ಯದಿಕ್ಪಾಲಕನಾದ ನಿರಋುತಿಯು **ಯಮಧರ್ಮ**=ಯಮಧರ್ಮರಾಯ **ಯಮ ಕಿಂಕರರು**=ಯಮನ ದೂತರು **ಮೇದಿನಿ**=ಭೂಮಿಯ ಅಭಿಮಾನಿ ದೇವತೆ **ಕಾಲಮೃತ್ಯು**=ಕಾಲವನ್ನನುಸರಿಸಿ ಮರಣ ವಿಧಿಸತಕ್ಕ ಮೃತ್ಯುದೇವತೆ **ಶನೈಶ್ವರಾದಿಗಳು**=ಶನೈಶ್ಚರ ಎಂಬ ದೇವತೆ ಇವರೇ ಮೊದಲಾದವರು **ಅನವರತ**=ನಿರಂತರದಲ್ಲಿಯೂ **ಶೂದ್ರರೆಂದು**=ಶೂದ್ರಜಾತಿಗೆ ಅಭಿಮಾನಿ ದೇವತೆಕೆಂದು **ಶೂದ್ರರೊಳಿಪ್ಪರು**=ಶೂದ್ರವರ್ಣಕ್ಕೆ ಸೇರಿದವರಲ್ಲಿ ಇರುತ್ತಾರೆ. **ಇವರೊಳು**=ಈ ದೇವತೆಗಳಲ್ಲಿ ಅಂತಸ್ಥನಾಗಿ **ಅರವಿದೂರ**=ದೋಷ ವಿದೂರನಾದ **ಅನಿರುದ್ಧನು**=ಅನಿರುದ್ಧನಾಮಕ ಶ್ರೀ ಪರಮಾತ್ಮನು **ಇಹನೆಂದರಿತು**=ಇದ್ದಾನೆ ಎಂದು ತಿಳಿದು **ಮನ್ನಿಪುದು**=ಗೌರವದಿಂದ ಪೂಜಾದಿಗಳನ್ನು ಮಾಡಬೇಕು. ॥೩೧॥

## ವ್ಯಾಖ್ಯಾನಗಳು

### (೧) ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ :-

ಶೂದ್ರಜಾತಿಗತ ಭಗವದ್ರೂಪೋಪಾಸನ ವಿಚಾರಕ್ರಮ ಹೇಳುತ್ತಾರೆ.- ಶೂದ್ರರೊಳಿಪ್ಪ-ಶೂದ್ರಜಾತಿ ಒಳಗೆ ಇರುವ (ಈ ಜಾತಿಗೆ ಅಭಿಮಾನಿಗಳಾದವರು), ನಾಸತ್ಯ ದಸ್ರರು-ನಾಸತ್ಯ ದಸ್ರ ಈ ಎರಡು ಅಶ್ವಿನೀ ದೇವತೆಗಳ ಹೆಸರು (ಇವರಿಬ್ಬರು), ನಿರಋುತಿಯು-ನೈರುತ್ಯ ದಿಕ್ಕಿನ ಅಭಿಮಾನಿ ನಿರಋುತಿ, ಯಮಧರ್ಮ-ಯಮಧರ್ಮರಾಯ, ಯಮ ಕಿಂಕರರು-ಯಮದೂತರು, ಮೇದಿನಿ-ಭೂ ಅಭಿಮಾನಿಯಾದ ಮೇದಿನಿ ಎಂಬ ದೇವತೆ ಕಾಲಮೃತ್ಯು-ಕಾಲ

ವನ್ನು ಅನುಸರಿಸಿ ಮೃತಿವಿಧಿಸಕ್ಕ ಮೃತ್ಯುದೇವತೆ, ಶನೈಶ್ಚರ-ಮಂದಗಮನನಾದ ಶನಿರಾಯ, ಆದಿಗಳು-ಇವರೇ ಮೊದಲಾದವರು, ಅನವರತ-ನಿರಂತರದಲ್ಲಿಯೂ, ಶೂದ್ರರೆಂದು-ಶೂದ್ರಜಾತಿ ದೇವತೆಗಳೆಂದು, ಕರೆಸಿಕೊಂಬರು-ಕರೆಸಿಕೊಳ್ಳುತ್ತಾರೆ. ದೇವತೆಗಳ ಒಳಗೆ ಇವರು ಶೂದ್ರ ದೇವತೆಗಳು. ಶೂದ್ರಜಾತಿ ಅಂತರ್ಗತರಾಗಿ, ಇರುತಿಹರು-ಇರೋವರಾಗಿದ್ದಾರೆ. ಇವರ ಅಂತರ್ಗತದಲ್ಲಿ (ಇವರೊಳು) ಅರವಿದೂರನಿರುದ್ಧ-ದೋಷದೂರನಾದ ಶ್ರೀಅನಿರುದ್ಧನು ಇಹನೆಂದು ಪುನ್ನಿಪುದು- ಇದ್ದಾನೆ ಎಂತ ತಿಳಿದು. ಅನುಸಂಧಾನದಿಂದ ಪೂಜಾದಿಗಳು ಮಾಡಬೇಕು. ಆಯಾ ಜಾತಿ ಅಭಿಮಾನಿಗಳಾದ ದೇವತೆಗಳು ಆಯಾ ಜಾತಿ ದೇವತೆಗಳೆಂದು ಕರೆಸುತ್ತಾರೆ ಎಂತ ತಾತ್ಪರ್ಯ. ॥೩೦॥

(೨) "ಭಾವಪ್ರಕಾಶಿಕೆ"-ವ್ಯಾಖ್ಯಾನ :—

ನಾಸತ್ಯ ಮತ್ತು ದಸ್ರರೆಂಬ ಅಶ್ವಿನೀ ದೇವತೆಗಳು, ಶನೈಶ್ಚರಾದಿಗಳು, ಯಮಧರ್ಮ, ಯಮದೂತರು, ಭೂಮಿ, ಕಾಲಮೃತ್ಯು, ನಿರಋತಿ ಇವರೆಲ್ಲರೂ ಜಾತಿಯಲ್ಲಿ ಶೂದ್ರರೆನಿಸಿಕೊಂಡು, ಶೂದ್ರಜಾತಿಗಳಿಗಭಿಮಾನಿಗಳಾಗಿ ಶೂದ್ರರಲ್ಲಿರುತ್ತಿರುವರು. ಇವರಲ್ಲಿ ದೋಷದೂರನಾದ ಅನಿರುದ್ಧರೂಪಿ ಶ್ರೀ ಪರಮಾತ್ಮನಿರುವನೆಂದು ಆದರದಿಂದ ಚಿಂತಿಸಬೇಕು. ॥೩೦॥

(೩) "ಭಾವದರ್ಪಣಟೀಕಾ" ವ್ಯಾಖ್ಯಾನ:—

ಹಿಂದಿನ ೨೯ ನೆಯ ಪದ್ಯದಲ್ಲಿ ಶೂದ್ರಜಾತಿ, ಆ ಜಾತಿಯ ಅಭಿಮಾನಿ ದೇವತೆಗಳು. ಆ ದೇವತಾವರ್ಗದಲ್ಲಿ ಅಂತಸ್ಥ ನಿಯಾಮಕ ಭಗವದ್ರೂಪಗಳ ವಿವರಗಳನ್ನು ಸಮಗ್ರವಾಗಿ ನಿರೂಪಿಸುತ್ತಾರೆ.

(೪) ಶ್ರೀ ವಾದಿರಾಜಾಚಾರ್ಯರ ವ್ಯಾಖ್ಯಾನ (ಸಂಸ್ಕೃತ ಮೂಲ) :

"ಇರುತಿಹರು" ಇತಿ ॥ ತತೋ ಬಹುತರಾನ್ ಇಚ್ಛನ್ ಶೂದ್ರಾನ್ ದೇವಾನ್ ಸಸರ್ಜ ಹ ॥ ಅಶ್ವಿನೌ ಪೃಥಿವೀ ಚೈವ ಕಾಲಮೃತ್ಯು ಏವ ಚ ॥

ಶೂದ್ರವರ್ಣಾಃ ಸಮುದ್ದಿಷ್ಟಾಃ ದೇವವರ್ಣಾಃ ಇತಿ ಸ್ಮೃತಾಃ ॥ಇತಿ॥ ಧನದಸ್ಯ ವೈಶ್ಯತ್ವೇ ತತ್ಸಮಾನಾಶ್ವಿನೋರಪಿ ತತ್ವಂ ನ್ಯಾಯಮ್ ॥ ಕಥಂ ಶೂದ್ರತಾ? ಇತಿ ಚೇತ್ ಉಚ್ಯತೇ ॥ ಉಭಯ ಜಾತಿತ್ವಮಪಿ ತೇಷಾಂ ಅಸ್ತಿ ॥ ನನು ಕುತ ಏತತ್ ॥ ಮೂಲೇ ಆಶ್ವಿನೋಃ ಸಾಮತೋ ಗ್ರಹಣಾತ್ ॥ ಸಾಮ್ಯೇಪಿ ಬೃಹದ್ಭಾಷ್ಯ ಬಲಾತ್ ಶೂದ್ರತ್ವೈವ (ಏ) ಇಷ್ಟವ್ಯಾ॥ ನ ಉಭಯ ನಿವೇಶಃ ಇತಿ ಚೇತ್ ನ ॥ ಅನ್ಯತ್ರ ನಿರ್ದಿಶ್ಯ ವೈಶ್ಯತೋಕ್ತ್ಯಾ ಉಭಯ ವಿಧಿವಾಕ್ಯ ಶಾಬಲ್ಯಾನ್ಯಥಾನುಪಪತ್ತ್ಯೈವ ಇತ್ಥಮಿತಿ ನಿರ್ಣಯೋಪಪತ್ತೇಃ ॥ ಪಂಚವಿಂಶಾಧ್ಯಾಯ ವಿಷ್ಣು ರಹಸ್ಯೇ ಚ ಜಾತಿ ಭೇದಶ್ಚ ದೇವೇಷು ಈಶ್ವರೇಚ್ಛಾ ನಿಬಂಧನಃ ॥ ಬ್ರಹ್ಮವರ್ಣಪತಿಃ ಬ್ರಹ್ಮಾ ನಾರದೋ ದೇವಲೋಸಿತಃ ॥ ಬೃಹಸ್ಪತಿ ರ್ಭೃಗುರ್ವಹ್ನಿಃ ಮರೀಚಾದ್ಯಾಃ ಸನಾದಯಾಃ ॥ ಋಷಯಃ ಪಿತರಃ ಸರ್ವೇ ಬ್ರಾಹ್ಮಣಾಃ ಪರೀಕೀರ್ತಿತಾಃ ॥ಇತಿ ॥ ಕ್ಷತ್ರವರ್ಣಪತಿಃ ವಾಯುಃ ಪ್ರಾಣಃ ಸೂತ್ರಂ ಯ ಈರಿತಃ ॥ ರುದ್ರಾದ್ಯಾಃ ಪ್ರಾಯಶೋ ದೇವಾಃ ಕ್ಷತ್ರವರ್ಣಾ ಉದೀರಿತಾಃ ॥ ಅಶ್ವಿನೌ ಧನದೋ ವಿಶ್ವಕರ್ಮಾ ವಿದ್ಯಾಧರಾದಯಃ ॥ ವೈಶ್ಯವರ್ಣಾಃ ಪತಿಂ ತೇಷಾಂ ಧನದಂ ವ್ಯದಧಾತ್ ಹರಿಃ ॥ ಏವಮೇವ ಯಮೋ ದೇವೋ ಧರ್ಮಃ ಕಾಲಃ ಇತಿ ದ್ವಿಧಾ ॥ ಧರ್ಮೋ ವಿಪ್ರಃ ಕಾಲಃ ಶೂದ್ರಃ ಶೂದ್ರವರ್ಣಾಃ ದ್ಯಕ್ಷಕೋಽಥ ದೂತಕಾಃ ॥ ಯಕ್ಷಾಶ್ಚ ಗುಹ್ಯಕಾಶ್ಚಾಪಿ ಶೂದ್ರವರ್ಣಾಃ ಪ್ರಕೀರ್ತಿತಾಃ॥ ವಿಶ್ವಾವಸುಃ ಚಿತ್ರರಥಃ ತಥಾ ಚಿತ್ರಾಂಗದಾದಯಃ ॥ ಅಷ್ಟಾ ಗಂಧರ್ವಪತಯಃ ಪ್ರೋಕ್ತಾ ಮೂರ್ಧಾನಸಿಕ್ತಕಾಃ॥ ॥೩೦॥

**ಕನ್ನಡಾರ್ಥ :—**

"ಅತ್ಯಧಿಕ ಸಂಖ್ಯೆಯ ಪ್ರಜಾಸೃಷ್ಟಿಗಾಗಿ ಚತುರ್ಮುಖ ಬ್ರಹ್ಮದೇವರು ಶೂದ್ರವರ್ಣದ ದೇವತೆಗಳನ್ನು ಸೃಜಿಸಿದರು. ಅಶ್ವಿನೀ ದೇವತೆಗಳು, ಧರಾ (ಭೂಮಿ), ಕಾಲಮೃತ್ಯು ಇವರು ಶೂದ್ರ ದೇವತೆಗಳು." -ಈ ವಿಷಯವು ಬೃಹದಾರಣ್ಯ ಭಾಷ್ಯದಲ್ಲಿ ಉಕ್ತವಾಗಿದೆ. ಕುಬೇರನು ವೈಶ್ಯನು. ಅಶ್ವಿನೀ ದೇವತೆಗಳು ಕುಬೇರನಿಗೆ ಸಮರು. ಇದರಿಂದ ಅಶ್ವಿನೀ ದೇವತೆಗಳೂ

ವೈಶ್ಯರೇ ಆಗಿರಬೇಕು. ಆದರೆ ಶೂದ್ರವರ್ಣಕ್ಕೆ ಅಭಿಮಾನಿಗಳು ಹೇಗೆ? ಎಂಬ ಶಂಕಾ ಬಂದರೆ, ಅಶ್ವಿನೀ ದೇವತೆಗಳಿಗೆ ಎರಡು ವರ್ಣಗಳು ಇವೆ. ಶ್ರೀಮದ್ಭಾಷ್ಯದಲ್ಲಿ ಇದಕ್ಕೆ ಸ್ಪಷ್ಟೋಕ್ತಿ ಇದೆ. ಆಗ ಅವರಿಗೆ "ವೈಶ್ಯ-ಶೂದ್ರ"-ಎಂಬ ಉಭಯ ಜಾತಿಗಳನ್ನು ಹೇಳಿದಂತೆ ಆಗುತ್ತದೆಯಲ್ಲಾ. ಅಂದರೆ, ಅದಕ್ಕೆ ಸಮಾಧಾನ : -ವಿಷ್ಣುರಹಸ್ಯ ೨೫ ನೆಯ ಅಧ್ಯಾಯದಲ್ಲಿ- "ದೇವತೆಗಳಲ್ಲಿ ವರ್ಣಭೇದವು ಭಗವದಿಚ್ಛೆಯಿಂದ ಉಂಟಾಗಿರುವುದು. ಹೇಗೆಂದರೆ, ಬ್ರಾಹ್ಮಣ ವರ್ಣಕ್ಕೆ ಅಭಿಮಾನಿಯು ಚತುರ್ಮುಖ ಬ್ರಹ್ಮ ದೇವರು. ಆದರೆ ಬ್ರಹ್ಮ, ನಾರದ, ದೇವಲ, ಅಸಿತ. ಬೃಹಸ್ಪತಿ, ಭೃಗು, ಅಗ್ನಿ, ಮರೀಚಿ, ಸನಕಾದಿ ಋಷಿಗಳು, ಪಿತೃಗಳು ಇತ್ಯಾದಿ "ಬ್ರಾಹ್ಮಣರು" ಎಂದು ಪ್ರಸಿದ್ಧರಾಗಿದ್ದಾರೆ. ಕ್ಷತ್ರವರ್ಣ ನಿಯಾಮಕ ವಾಯುವು ಪ್ರಾಣ ಸೂತ್ರ ಎಂದೆನಿಸುವನು. ರುದ್ರ ಇತ್ಯಾದಿ ದೇವತೆಗಳು ಪ್ರಾಯಶಃ ಕ್ಷತ್ರಿಯ ವರ್ಣದವರು. ಅಶ್ವಿನೀ ದೇವತೆಗಳು ಕುಬೇರ, ವಿಶ್ವಕರ್ಮ, ವಿದ್ಯಾಧರ ಇತ್ಯಾದಿ ವೈಶ್ಯ ವರ್ಣದವರು. ಇವರಿಗೆ ಕುಬೇರನನ್ನು ಅಧಿಪತಿಯನ್ನಾಗಿ ಶ್ರೀ ಪರಮಾತ್ಮನು ನಿಯೋಜಿಸಿದನು. ಹೀಗೆಯೇ ಯಮಧರ್ಮರಾಯನಿಗೆ ಧರ್ಮ ಮತ್ತು ಕಾಲ ಎಂದು ಎರಡು ರೂಪಗಳುಂಟು. ಧರ್ಮನು ವಿಪ್ರನು ಕಾಲನು ಶೂದ್ರನು. ಕಾಲನು ಶೂದ್ರವರ್ಣಕ್ಕೆ ಅಧಿಪತಿಯು. ಯಮ ದೂತರೂ, ಯಕ್ಷರೂ, ಗುಹ್ಯರೂ, ಶೂದ್ರವರ್ಣಕ್ಕೆ ಸೇರಿದವರು. ವಿಶ್ವಾವಸು, ಚಿತ್ರರಥ, ಚಿತ್ರಾಂಗದ ಮುಂತಾದ ಎಂಟು ಮಂದಿ ಗಂಧರ್ವರು "ಕ್ಷತ್ರಿಯರು" -ಎಂದು ಪ್ರಸಿದ್ಧರಾಗಿದ್ದಾರೆ. ಇಂತಹ ವಿಭಜನೆ ಭಗವದಿಚ್ಛೆಗೆ ಅಧೀನವಾದುದು. ॥೩೧॥

(೫) "ಗುರುಹೃದಯ ಪ್ರಕಾಶಿಕೆ"-ವ್ಯಾಖ್ಯಾನ : —

ನಾಸತ್ಯ ದಸ್ರರೆಂಬ ಅಶ್ವಿನೀ ದೇವತೆಗಳು, ನಿರ‍ುತಿ ಎಂಬ ದಿಕ್ಪಾಲಕನು, ಯಮಧರ್ಮನು, ಯಮಕಿಂಕರರು, ಭೂದೇವಿ, ಕಾಲಮೃತ್ಯುದೇವತೆ, ಶನೈಶ್ಚರಾದಿಗಳು ಶೂದ್ರರಲ್ಲಿದ್ದು, ಶೂದ್ರರೆಂದು ಕರೆಸುವರು. ಇವರಲ್ಲಿ ದೋಷದೂರ ಅನಿರುದ್ಧಸ್ವಾಮಿ ಇರುವನೆಂದು ಬಹುಮಾನಿಸುವುದು. ॥೩೧॥

# ಸರ್ವವ್ಯಾಖ್ಯಾನಸಾರಸಂಗ್ರಹ

ಪ್ರಸಕ್ತ ಪದ್ಯದಲ್ಲಿ ನಾಲ್ಕನೆಯ ವರ್ಣವಾದ ಶೂದ್ರವರ್ಣ. ಈ ವರ್ಣಕ್ಕೆ ಅಭಿಮಾನಿಗಳಾದ ದೇವತಾವರ್ಗ. ಆ ದೇವತೆಗಳಲ್ಲಿ ನಿಯಾಮಕ ಭಗವದ್ರೂಪ ಈ ವಿವರಗಳನ್ನು ತಿಳಿಸುತ್ತಾರೆ.

ಶೂದ್ರವರ್ಣಕ್ಕೆ ಅಭಿಮಾನಿ ದೇವತೆಗಳು ಯಾರ್ಯಾರೆಂದರೆ ;-

(೧) ನಾಸತ್ಯ ಮತ್ತು ದಸ್ರ ಎಂಬ ಹೆಸರಿನ ಅಶ್ವನೀದೇವತೆಗಳು. ಇವರು ಅವಳಿಜವಳಿಗಳು. ದೇವವೈದ್ಯರು. ನಾಸಿಕೇಂದ್ರಿಯಕ್ಕೆ ತತ್ವಾಭಿ ಮಾನಿಗಳು. ಭೂತತ್ತ್ವ ತನ್ಮಾತ್ರವಾದ ಗಂಧಗ್ರಾಹಕರು. ಅಶ್ವಿನೀ ದೇವತೆಗಳೂ ಮತ್ತು ಧನಾಧಿಪತಿಯಾದ ಕುಬೇರ ಇವರು ಸಮರಾದರೂ. ಕುಬೇರನು ವೈಶ್ಯವರ್ಣಕ್ಕೆ ಅಭಿಮಾನಿಯು. ಅಶ್ವಿನೀ ದೇವತೆಗಳು ಶೂದ್ರ ವರ್ಣಕ್ಕೆ ಅಭಿಮಾನಿಗಳು. ಈ ಭೇದವು ಭಗವದಿಚ್ಛೆಯಿಂದ ಉಂಟಾದುದು ಎಂದು **ಶ್ರೀಮದ್ಭಾಷ್ಯದ** ವಚನವಿದೆ.

(೨) ನೈರುತ್ಯ ದಿಕ್ಕಿನ ದಿಕ್ಪಾಲಕನಾದ **ನಿರಋತಿಯು** ಶೂದ್ರವರ್ಣಕ್ಕೆ ಅಭಿಮಾನಿಯಾಗಿದ್ದಾನೆ. ಈತನು ದೈತ್ಯಯೋನಿಯಲ್ಲಿ ಹುಟ್ಟಿದರೂ ದೇವತಾ ವರ್ಗಕ್ಕೆ ಸೇರಿದವನು. (ಪ್ರಹ್ಲಾದ, ವಿಭೀಷಣ, ಬಲಿಚಕ್ರವರ್ತಿಗಳಿದ್ದಂತೆ)

(೩) ನ್ಯಾಯದೇವತೆಯಾದ ಯಮಧರ್ಮರಾಯ. ಯಮನು ಶೂದ್ರಯೋನಿಗೆ ಅಭಿಮಾನಿಯು.

(೪) ಯಮನ ದೂತರು ಶೂದ್ರವರ್ಣಾಭಿಮಾನಿ ದೇವತೆಗಳು.

(೫) ಭೂ ತತ್ವಕ್ಕೆ ಅಭಿಮಾನಿಯಾದ ಭೂದೇವಿಯು (ಮೇದಿನಿ) ಈ ವರ್ಣಾಭಿಮಾನಿಯು. ವಿರಾಡ್ರೂಪಿಯಾದ ಪುರುಷನಾಮಕ ಪರ ಮಾತ್ಮನ ಚರಣಯುಗ್ಮಗಳಿಂದ ಸೃಷ್ಟರಾದವರು ಶೂದ್ರಗಣ. ವ್ಯವಸಾಯಾದಿ

ಗಳನ್ನು ವೃತ್ತಿಯನ್ನಾಗಿ ಉಳ್ಳ ಶೂದ್ರವರ್ಣದವರಿಗೆ ಭೂತಾಯಿಯೇ ಅಧಿದೇವತೆ.

(೬) ಪ್ರಾಣಿಗಳಿಗೆ ಆಯುಸ್ಸು ಪೂರ್ತಿಯಾದ ನಂತರ, ಮೃತ್ಯುವನ್ನೈದಿಸುವ ಮೃತ್ಯುದೇವತೆಯು ಶೂದ್ರವರ್ಣಾಭಿಮಾನಿಯು. ಇದಕ್ಕೆ "ಕಾಲಮೃತ್ಯು" ಎಂದು ಹೆಸರು.

(೭) ಮಂದಗಮನನಾದ ಶನೈಶ್ಚರನೆಂಬ ಭೂತತ್ತ್ವಕ್ಕೆ ಅಭಿಮಾನಿಯಾದ ದೇವತೆ ಈ ವರ್ಣಾಭಿಮಾನಿಯು.

ಪೂರ್ವೋಕ್ತ ದೇವತಾವರ್ಗ "ಶೂದ್ರ" ರೆಂದೆನಿಸಿಕೊಳ್ಳುತ್ತಾರೆ. ಶೂದ್ರವರ್ಣಕ್ಕೆ ಅಭಿಮಾನಿಗಳಾಗಿದ್ದು, ಆವರ್ಣ ಧರ್ಮಗಳನ್ನು ಆ ಜಾತಿಯ ಮೂಲಕ ನಡೆಯಿಸುವರು.

ಇಂತಹ ಶೂದ್ರವರ್ಣಕ್ಕೆ ಅಭಿಮಾನಿಗಳಾದ ದೇವತೆಗಳಲ್ಲಿ ಅಂತರ್ಯಾಮಿತ್ವೇನ ನಿಯಮನ ಮಾಡುವ ಭಗವದ್ರೂಪವು "ಅನಿರುದ್ಧನು." ಸಮಸ್ತದೋಷವಿದೂರನಾದ ಅನಿರುದ್ಧನಾಮಕ ಪರಮಾತ್ಮನನ್ನು ಶೂದ್ರವರ್ಣದವರಲ್ಲಿಯೂ ಮತ್ತು ಆ ವರ್ಣಾಭಿಮಾನಿ ದೇವತೆಗಳಲ್ಲಿಯೂ ಇರುತ್ತಾನೆಂದು ಭಕ್ತಿ ಶ್ರದ್ಧಾದಿಗಳಿಂದ ಚಿಂತಿಸಬೇಕೆಂದು ಈ ಪದ್ಯದ ತಾತ್ಪರ್ಯವು. ||೩೧||

## ಪದ್ಯ (೩೨)

ಮೂಲ :–

ವೀತಭಯ ನಾರಾಯಣ ಚತು ।
ಷ್ಟಾತು ತಾನೆಂದೆನಿಸಿ ತತ್ತ ।
ಜ್ಞಾತಿ ಧರ್ಮ ಸುಕರ್ಮಗಳ ತಾ ಮಾಡಿ ಮಾಡಿಸುವ ||
ಚೇತನರ ಒಳ ಹೊರಗೆ ಓತ ।
ಪ್ರೋತನಾಗಿದ್ದೆಲ್ಲರಿಗೆ ಸಂ ।
ಪ್ರೀತಿಯಲಿ ಧರ್ಮಾರ್ಥ ಕಾಮಾದಿಗಳ ಕೊಡುತಿಹನು ||೩೨||

**ಅವತರಣಿಕೆ :**

ನಿರ್ಭೀತನಾದ ನಾರಾಯಣನಾಮಕ ಶ್ರೀ ಪರಮಾತ್ಮನು ಬ್ರಾಹ್ಮಣಾದಿ ನಾಲ್ಕು ಜಾತಿಗಳಿಗೆ ನಿಯಾಮಕನಾಗಿ, ಚತುಷ್ಪಾತು ಎಂದೆನಿಸಿ, ಆಯಾಯಾ ವರ್ಣಗಳ ಧರ್ಮ ಮತ್ತು ಸತ್ಕರ್ಮಗಳನ್ನು ಆಯಾಯಾ ಜಾತಿಯ ಅಭಿಮಾನಿಗಳಾದ ದೇವತಾವರ್ಗದಲ್ಲಿ ತಾನು ಅಂತಸ್ಥಿತನಾಗಿದ್ದುಕೊಂಡು, ಬಿಂಬ ಕ್ರಿಯಾದ್ವಾರಾ ಮಾಡಿ, ಅವರ ಮೂಲಕ ಮಾಡಿಸಿ, ಜೀವರ ಒಳಹೊರಗೆ ವಸ್ತ್ರದಲ್ಲಿರುವ ದಾರಗಳಂತೆ ಓತಪ್ರೋತನಾಗಿ ಸರ್ವತ್ರ ವ್ಯಾಪ್ತನಾಗಿದ್ದು, ತನ್ನನ್ನು ಭಕ್ತಿಯಿಂದ ಧ್ಯಾನಿಸುವ ಆಯಾಯಾ ವರ್ಣಗತ ಸಚ್ಚೇತನರಿಗೆ ಧರ್ಮ,ಅರ್ಥ. ಕಾಮಾದಿ ಚತುರ್ವಿಧ ಪುರುಷಾರ್ಥಗಳನ್ನು ಅನುಗ್ರಹಿಸುತ್ತಾ, ಸಂರಕ್ಷಿಸುವನು –ಎಂದು ಹೇಳುತ್ತಾರೆ, "ವೀತಭಯ"–ಎಂಬ ಪ್ರಸಕ್ತ ಸಂಧಿಗತ ೩೨ ನೆಯ ಈ ಪದ್ಯದಿಂದ. ॥೩೨॥

**ಪ್ರತಿಪದಾರ್ಥ :**

**ವೀತಭಯ**=ಹೋಗಲಾಡಿಸಲ್ಪಟ್ಟ ಭಯವುಳ್ಳ, ಅಂವರೆ ಭಯರಹಿತನಾದ (ನಿರ್ಭೀತನಾದ) **ನಾರಾಯಣ**=ನಾರಾಯಣನಾಮಕ ಶ್ರೀ ಪರಮಾತ್ಮನು **ಚತುಷ್ಪಾತು**=ನಾಲ್ಕು ಪಾದಗಳಂತಿರುವ ಬ್ರಾಹ್ಮಣಾದಿ ನಾಲ್ಕು ವರ್ಣಗಳಿಗೆ ತಾನೇ ನಿಯಾಮಕನು **ತಾ ಎಂದೆನಿಸಿ**=ತಾನು ಕರೆಸಿಕೊಂಡವನಾಗಿ **ತತ್ತಜ್ಜಾತಿ**=ಆಯಾಯಾ ವರ್ಣಗಳಿಗೆ ಸಂಬಂಧಪಟ್ಟ (ವರ್ಣೋಚಿತವಾದ) **ಧರ್ಮ**=ಆಯಾಯಾ ವರ್ಣಗಳ ಶಾಸ್ತ್ರೋಕ್ತ ಧರ್ಮಗಳೇನು **ಸುಕರ್ಮಗಳ**=ಯೋಗ್ಯ ಅಂದರೆ ವರ್ಣಕ್ಕೆ ಉಚಿತವಾದ ಕರ್ಮಗಳೇನು **ತಾ ಮಾಡಿ**=ಆ ನಾಲ್ಕು ಜಾತಿ ಜೀವರುಗಳ ಅಂತರ್ಗತನಾಗಿದ್ದು, ಆಯಾಯಾ ವರ್ಣಾಭಿಮಾನಿಗಳಾದ ದೇವತೆಗಳ ದ್ವಾರಾ. ಬಿಂಬನಾದ ತಾನು ಪ್ರಥಮತಃ ಮಾಡಿ **ಮಾಡಿಸಿ**=ತನ್ಮೂಲಕ ಮಾಡಿಸಿ (ಬಿಂಬಕ್ರಿಯಾ ದ್ವಾರ ವ್ಯಾಪಾರಾಭಿವ್ಯಕ್ತಿ) **ಚೇತನರ**=ಆಯಾ ಜೀವವರ್ಗದಲ್ಲಿ **ಒಳ ಹೊರಗೆ**=ಜೀವಾಂತರ್ಗತನಾಗಿ ಅಂತಸ್ಥನಾಗಿದ್ದು ಹೊರಗಡೆ ಬಾಹ್ಯಸ್ಥೂಲ ದೇಹಗಳ ದ್ವಾರಾ **ಓತ**

**ಪ್ರೋತನಾಗಿದ್ದು**=ವಸ್ತ್ರದಲ್ಲಿ ದಾರಗಳು ಹೇಗೆ ಅಡ್ಡವಾಗಿ ಮತ್ತು ಉದ್ದವಾಗಿ ಸೇಸಿಕೊಂಡಿರುತ್ತವೆಯೋ ಹಾಗೆ ಸರ್ವತ್ರ ವ್ಯಾಪ್ತನಾಗಿದ್ದು **ಎಲ್ಲರಿಗೆ**=ನಾಲ್ಕು ವರ್ಣಗತ ಜೀವರಿಗೆ **ಸಂಪ್ರೀತಿಯಲಿ**=ಅವರವರ ಸ್ವರೂಪ ಯೋಗ್ಯಾತಾನುಸಾರ ಅತ್ಯಂತ ವಾತ್ಸಲ್ಯದಿಂದ **ಧರ್ಮ**=ಧರ್ಮಬುದ್ಧಿ **ಅರ್ಥ**=ಆ ಧರ್ಮಬುದ್ಧಿಯಿಂದ ಆಗುವ ದ್ರವ್ಯರೂಪವಾದ ಪ್ರಯೋಜನ **ಕಾಮ**=ಯೋಗ್ಯತಾನುಸಾರ ಇಚ್ಛಾ **ಆದಿಗಳ**=ಧರ್ಮಾದಿ ಚತುರ್ವಿಧ ಪುರುಷಾರ್ಥಗಳನ್ನು **ಕೊಡುತಿಹನು**=ಅವರಿಗೆ ಕೊಡುತ್ತಾ, ಅನುಗ್ರಹಿಸುತ್ತಿರುವನು. ॥೩೨॥

## ವ್ಯಾಖ್ಯಾನಗಳು

### (೧) ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ:-

ಪೂರ್ವೋಕ್ತ ನಾಲ್ಕು ಜಾತಿಗಳಿಗೆ ಕರ್ಮಗಳ ಮಾಡಿ ಮಾಡಿಸತಕ್ಕ ಭಗವದ್ರೂಪಗಳನ್ನು ಹೇಳುತ್ತಾರೆ.

ವೀತಭಯ-ನಿರ್ಭೀತ ಎಂದರೆ, ನಿರ್ಭಯನಾದ, ಸರ್ವೋತ್ತಮನಾದ, ನಾರಾಯಣನು-ದೋಷದೂರನಾದ ನಾರಾಯಣನು.

> "ನಾರಾಯಣೇತಿ ಪ್ರವದಂತೋ ಹಿ ಜಗ್ಮುಃ ಅರಾ ದೋಷಾಸ್ತದ್ವಿರುದ್ಧಾ ಗುಣಾಶ್ಚ ।
> ನಾರಾಶ್ಚ ತೇಷಾಮಾಶ್ರಯತ್ವಾತ್ ಮುರಾರಿಃ ನಾರಾಯಣೋ ಪ್ರವದಂತಿ ಲೋಕೇ ॥೧॥
>
> ನರಾನುಬಂಧಾತ್ಸರ್ವ ಮುಕ್ತಾಃ ಖಗೇಂದ್ರ ನಾರಾ ಪ್ರೋಕ್ತಾ ಆಶ್ರಯತ್ವಾಚ್ಚ ತೇಷಾಂ ।
> ಅತೋಽಪಿ ನಾರಾಯಣ ಏವ ವೀಂದ್ರ ಮುಕ್ತಾಶ್ರಯಃ ಪ್ರವದಂತೋಪಿ ಜಗ್ಮುಃ ॥೨॥
>
> -ಇತಿ ಗಾರುಡೇ ಬ್ರಹ್ಮಕಾಂಡೇ ॥

ಹೀಗೆಂದು ಗರುಡ ಪುರಾಣದಲ್ಲಿ ನಾರಾಯಣ ಶಬ್ದ ನಿರ್ವಚನ ಮಾಡಲ್ಪಟ್ಟಿದೆ. ಚತುಷ್ಪಾತು-ಬ್ರಾಹ್ಮಣಾದಿ ನಾಲ್ಕು ಜಾತಿ ಜೀವರ ಸಂರಕ್ಷಣ ಮಾಡುವನೆಂದು, ತಾನೆಂದೆನಿಸಿ-ಕರೆಸಿದವನಾಗಿ, ತತ್ತಜ್ಜಾತಿ-ಆಯಾಯಾ ಬ್ರಾಹ್ಮಣಾದಿ ಶೂದ್ರಾಂತ ನಾಲ್ಕು ಜಾತಿ, ಧರ್ಮ-ಆಯಾ ಜಾತಿಗೆ ವಿರ್ಪಟ್ಟ ಶಾಸ್ತ್ರಾನುಸಾರ ಧರ್ಮವೇನು, ಸುಕರ್ಮಗಳ- ಆಯಾ ಜಾತಿ ಧರ್ಮಕ್ಕೆ ಅನುಸರಿಸಿದ ಯೋಗ್ಯಗಳಾದ ಕರ್ಮಗಳೇನು, ತಾ ಮಾಡಿ-ನಾಲ್ಕು ಜಾತಿ ಜೀವರುಗಳ ಅಂತರ್ಗತನಾಗಿ ಇದ್ದು, ಬಿಂಬನಾದ ತಾನು ಪ್ರಥಮತಃ ಮಾಡಿ, ಮಾಡಿಸುವ-ಸಕಾಲದಲ್ಲೀ ದೇವತೆಗಳ ದ್ವಾರಾ ಜೀವರ ದ್ವಾರಾ ದೇಹದಿಂದ ಕರ್ಮಗಳನ್ನು ಮಾಡಿಸುತ್ತಾ, ಚೇತನದ ಒಳಹೊರಗೆ-ಜೀವರ ಅಂತರ್ಗತದಲ್ಲಿ, ಬಹಿಃ ಸ್ಥೂಲದೇಹದಲ್ಲಿ ಬಾಹ್ಯವಾದ ಅನೇಕ ಸ್ಥಳಗಳಲ್ಲಿ ಓತಪ್ರೋತನಾಗಿದ್ದು-ಅಚ್ಛಿದ್ರವಾಗಿ ವಸ್ತ್ರ ದೃಷ್ಟಾಂತವತ್ ಇದ್ದು, ಎಲ್ಲರಿಗೆ-ನಾಲ್ಕುಜಾತಿ ಸಮಸ್ತ ಜೀವರಿಗೆ, ಸಂಪ್ರೀತಿಯಲಿ-ಅವರವರ ಸ್ವರೂಪ ಯೋಗ್ಯತಾ ಅನುಸರಿಸಿ ಸಂಪ್ರೀತಿಯಲಿ-ಅತಿಪ್ರೀತಿಯಿಂದ, ಧರ್ಮಾರ್ಥ ಕಾಮಾದಿಗಳ-ಧರ್ಮ-ಧರ್ಮಬುದ್ಧಿ, ಅರ್ಥ-ಧರ್ಮಬುದ್ಧಿಯಿಂದ ಆಗೋ ಪ್ರಯೋಜನ, ಕಾಮ-ಯೋಗ್ಯತಾನುಸಾರ ಇಚ್ಛಾ, ಇವುಗಳನ್ನು, ಕೊಡುತಿಹನು-ಕೊಡುತ್ತಾ ಅವರಂತರ್ಗತದಲ್ಲಿ ಇರೋವನಾಗಿನ್ದಾನೆ- ಎಂತ ತಾತ್ಪರ್ಯ. ॥೩೨॥

(೨) "ಭಾವಪ್ರಕಾಶಿಕೆ" ವ್ಯಾಖ್ಯಾನ :-

ಭಯಾದಿ ದೋಷರಹಿತನಾದ ಶ್ರೀಮನ್ನಾರಾಯಣ ಮೂರ್ತಿಯು, ಚತುಷ್ಪಾದಗಳಂತಿರುವ ಬ್ರಾಹ್ಮಣಾದಿ ಜಾತಿಯುವರಲ್ಲಿ ವಾಸುದೇವಾದಿ ನಾಲ್ಕು ರೂಪಗಳಿಂದ ಇದ್ದು, ಆಯಾಯಾ ಜಾತಿಗಳನ್ನನುಸರಿಸಿದ ಧರ್ಮಗಳನ್ನು ತಾನು ಮಾಡಿ, ಅವರಿಂದಲೂ ಮಾಡಿಸುತ್ತಾ, ಪ್ರಾಣಿಗಳ ಒಳಗೂ ಹೊರಗೂ ವಸ್ತ್ರದಲ್ಲಿ ದಾರಗಳು ಅಡಗಿರುವಂತೆ, ಪರಮಾತ್ಮನು ಜಗತ್ತೆಲ್ಲವನ್ನೂ ವ್ಯಾಪಿಸಿಕೊಂಡು, ಪ್ರೀತಿಯಿಂದ, ಧರ್ಮಾದಿ ಪುರುಷಾರ್ಥಗಳನ್ನು ಕೊಡುತ್ತಿರುವನು. ೩೯ ನೆಯ "ಭೂಸುರರೊಳಗೆ"-ಎಂಬ ಪದ್ಯ ಮೊದಲು

ಈ ೩೨ ನೆಯ ಪದ್ಯದವರೆವಿಗೂ ಹೇಳಿದ ಬ್ರಹ್ಮ ಕ್ಷತ್ರಾದಿ ವರ್ಣದೇವತೆಗಳ ವಿಷಯದಲ್ಲಿ ವಿಷ್ಣುರಹಸ್ಯದ ೩೫ ನೆಯ ಅಧ್ಯಾಯ ೪ ನೆಯ ಶ್ಲೋಕ ಮೊದಲು-

"ಜಾತಿ ಭೇದಸ್ತು ದೇವೇಷು ಈಶ್ವರೇ ಜ್ಞಾನಿ ಬಂಧನಃ ।
ಬ್ರಹ್ಮವರ್ಣಪತಿರ್ಬ್ರಹ್ಮಾ ನಾರದೋ ದೇವಲೋಸಿತಃ ॥೪॥

ಬೃಹಸ್ಪತಿ ಭೃಗುರ್ವಹ್ನಿರ್ಮರೀಚ್ಯಾದ್ಯಾಃ ಸನಾದಯಃ ।
ಋಷಯಃ ಪಿತರಃಸ್ಸರ್ವೇ ಬ್ರಹ್ಮವರ್ಣಾಃ ಪ್ರಕೀರ್ತಿತಾಃ ॥೫॥

ಕ್ಷತ್ರವರ್ಣಪರ್ತಿರ್ವಾಯುಃ ಪ್ರಾಣಃ ಸೂತ್ರಂ ಯ ಈರಿತಃ ।
ರುದ್ರಾದ್ಯಾಃ ಪ್ರಾಯತೋದೇವಾಃ ಕ್ಷತ್ರವರ್ಣ ಉದೀರಿತಾಃ ॥೬॥

ಅಶ್ವಿನೌ ಧನಪೌ ವಿಶ್ವಕರ್ಮ ವಿದ್ಯಾಧರಾದಯಃ ।
ವೈಶ್ಯ ವರ್ಣಪತಿಂ ತೇಷಾಂ ಧನದಂ ವೃದದ್ಧಾದ್ಧರಿಃ ॥೭॥

ಏವಮೇವ ಯಮೋದೇವೋ ಧರ್ಮಃ ಕಾಲ ಇತಿದ್ವಿಧಾ ।
ಧರ್ಮೋ ವಿಪ್ರಃ ಕಾಲಶೂದ್ರವರ್ಣಾಧ್ಯಕ್ಷೋಥದೂತಕಾಃ ।
ಯಕ್ಷಾಶ್ಚ ಗುಹ್ಯ ಕಾಶ್ಚಾಪಿ ಶೂದ್ರವರ್ಣಾಃ ಪ್ರಕೀರ್ತಿತಾಃ ॥೮॥

ಇತ್ಯಾದಿ ಉಕ್ತವಾಗಿದೆ. ಅದರ ಅರ್ಥವು ಪ್ರಾಯಶಃ ಈ ಮೇಲಿನ ನಾಲ್ಕು ಪದ್ಯಗಳಿಗೂ ಸರಿಹೋಗುವುದು. ಗ್ರಂಥವಿಸ್ತಾರ ಭಯದಿಂದ ಈ ಶ್ಲೋಕಾರ್ಥಗಳನ್ನು ಇಲ್ಲಿ ಹೇಳಿಲ್ಲ. ॥೩೨॥

(೩) "ಭಾವದರ್ಪಣ ಟೀಕಾ"-ವ್ಯಾಖ್ಯಾನ :—

ವಾಸುದೇವ ಸಂಕರ್ಷಣ ಪ್ರದ್ಯುಮ್ನಾನಿರುದ್ಧ ರೂಪ ಚತುಷ್ಟಯಗಳು ಬ್ರಹ್ಮಾದಿ ಚತುರ್ವರ್ಣಗಳಲ್ಲಿದ್ದು, ಹೋಗಲ್ಪಟ್ಟ ಭಯವುಳ್ಳಂಥ ನಾರಾಯಣ ಎಂದರೆ–

**"ನಾರಾಃ ಮುಕ್ತಾಃ ತೇಷಾಂ ಆಶ್ರಯಃ ನಾರಾಯಣಃ"** ||೧||
ಅಂದರೆ, ಮುಕ್ತರುಗಳಿಗೆ ಆಶ್ರಯನೆಂದರ್ಥ. ಅಥವಾ

**"ನಾರಾಃ ನರಸಮೂಹಾಃ ತೇಷಾಮಯನಃ ||"** ||೨||
ಅಂದರೆ ಜನರಿಗೆ ಆಶ್ರಯ ಎಂದರ್ಥ. ಅಥವಾ

**"ನಾರಾಃ ಆಪಃ ತಾ ಏವ ಅಯನಂ ಯಸ್ಮ ||"** ||೩||
ಅಂದರೆ- ಉದಕವೇ ಆಶ್ರಯ ಯಾವಾತಗೋ ಅವನೆಂಬರ್ಥ. ಆಥವಾ

**"ನಾರಾಃ ಸದ್ಗುಣಾಃ ತೇಷಾಂ ಅಯನಃ ನಾರಾಯಣಃ ||** ||೪||
ಅಂದರೆ. ಆನಂದಾದಿಗುಣಗಳಿಗೆ ಆಶ್ರಯವೆಂಬರ್ಥ.

ಏವಂ ರೀತ್ಯಾ ನಿರ್ವಚನ ಪೂರ್ವಕ ನಾಮೋಚ್ಚಾರಣ ಮಾಡೋದರಿಂದ, ಬಹು ಪುಣ್ಯಲಾಭವಾಗುತ್ತದೆಂದು **ಗರುಡಪುರಾಣದಲ್ಲಿ** ಉಕ್ತವಾಗಿರೋಣದರಿಂದ ಯಥಾಮತಿ ಭಗವನ್ನಾಮಗಳಿಗೆ ಅರ್ಥಮಾಡಿಕೊಳ್ಳಬೇಕೆಂದು ಸೂಚಿಸಿದೆ. ಏತಾದೃಶ ನಾರಾಯಣನೇ ಅಂತರ್ಬಹಿಯಲ್ಲಿ ವ್ಯಾಪ್ತನಾಗಿ ತತ್ತಜ್ಞಾತಿ ಕರ್ಮ ಮಾಡಿ, ಮಾಡಿಸಿ, ಸದ್ಗತಿಪ್ರದಾನಾಗುವನೆಂದರ್ಥ. ||೩೨||

**(೪) ಶ್ರೀ ವಾದಿರಾಜಾಚಾರ್ಯರ ವ್ಯಾಖ್ಯಾನ (ಸಂಸ್ಕೃತ ಮೂಲ) :-**

ವಿತೇತಿ || "ವಿದ್ವತ್ತಮೋ ವೀತಭಯಃ"-ಇತ್ಯುಕ್ತೇಃ । ಓಂ ||ಜನಾ ಇಮೇ ವಿಹ್ವಯಂತೇ ತನಾಗಿರಾ || ಅಸ್ಮಾಕೇಭಿರ್ನೃಭಿರ್ವಯಂಸಾಸಹ್ಯಾಮ ಪೃತನ್ಯತೋ ವನುಯಾಮ ವನುಷ್ಯತಃ ||ಓಂ|| ಭಕ್ತೇಭ್ಯಃ ವೀತಂ ವಿಗತಂ ಭಯಂ ಯಸ್ಮಾತ್ ಸಃ ತಥೋಕ್ತಃ || ಚತುಷ್ಪಾತ್ "ಪಾದೋಸ್ಯ"-ಇತಿ ಶ್ರುತೇಃ ||೩೨||

**ಕನ್ನಡಾರ್ಥ :-**

"ವೀತಭಯ." ಇದು **ವಿಷ್ಣುಸಹಸ್ರನಾಮ** ದೊಳಗಿನ ಒಂದುನಾಮ. ಬೃಹತೀ ಸಹಸ್ರ ಋಕ್ಕು ಇದರ ಅರ್ಥವನ್ನು ವಿವರಿಸುತ್ತದೆ.

ಭಕ್ತರಿಗೆ ಬರುವ ಭಯಗಳು ಯಾವಾತನ ದೆಸೆಯಿಂದ ಅಳಿದು ಹೋಗುವುವೋ ಅಂತಹವನೇ "ವೀತಭಯ" ನು. ಅವನೇ ಶ್ರೀ ಮನ್ನಾರಾಯಣನು. ಚತುಷ್ಪಾತ್-"ಪಾದೋಸ್ಯ ವಿಶ್ವಾಭೂತಾನಿ"-ಎಂದು ಪುರುಷಸೂಕ್ತ ವಚನದಂತೆ ಶ್ರೀಮನ್ನಾರಾಯಣನು ಚತುಷ್ಪಾತ್-ಒಂದು ಪಾದ ಪರಿಮಿತವಾದ ಅಂಶದಿಂದ ವಿಶ್ವವು ತುಂಬಿಹೋಗಿದೆ. ಮಿಕ್ಕ ಮೂರು ಪಾದಗಳು ಅವನ "ಸ್ವರೂಪಾಂಶಗಳು." ಇದೇ ಶ್ರುತಿಯ ಅರ್ಥವು. ॥೩೨॥

## (ಆ) "ಗುರುಹೃದಯ ಪ್ರಕಾಶಿಕೆ"-ವ್ಯಾಖ್ಯಾನ :-

ಹೀಗೆ ಭಯಾದಿ ದೋಷದೂರ ನಾರಾಯಣನು ಚತುಷ್ಪಾತು ತಾನೆಂದೆನಿಸಿ, ಎಂದರೆ ಭಿನ್ನಾಂಶರಾಗಿ ನಾಲ್ಕು ಜಾತಿಯಾದ ಜೀವರಲ್ಲಿ ಸ್ವರೂಪಾನಂಶವಾದ ವಾಸುದೇವಾದಿ ವ್ಯೂಹರೂಪನಾದ ಮೂಲರೂಪ ಸ್ವಾಮಿಯು ಚತುಷ್ಪಾದ ನಾಮಕನಾಗಿ, ಆಯಾಯಾ ಜಾತಿ ಧರ್ಮ ರೂಪ ಅಧ್ಯಯನ,ರಾಜ್ಯಪಾಲನ, ವ್ಯಾಪಾರ, ಸೇವಕಾವೃತ್ತಿಗಳನ್ನು, ಸುಕರ್ಮಗಳಾದ ಸಂಧ್ಯಾ, ಗುರುಶುಶ್ರೂಷಾದಿಗಳನ್ನು ಸಹ ತಾನೇ ಪ್ರೇರಣೆಮಾಡಿ, ಮಾಡಿಸುವನು. ಜೀವರ ಒಳಗೆ ಹೊರಗೆ ಸಹ ಓತಪ್ರೋತವೆಂಬ ನೂಲುಗಳು ಅಡ್ಡ ಉದ್ದವಾಗಿ,ಒಂದೇ ಬಟ್ಟೆರೂಪವಾಗಿದ್ದಂತೆ. ಅನೇಕ ರೂಪನಾದರೂ, ಸಕಲರಿಗೂ ಸಂತೋಷದಿಂದ ಧರ್ಮಾದಿ ಪುರುಷಾರ್ಥಗಳನ್ನು ಕೊಡುವನು.

**ಪ್ರಮಾಣ :**

**"ಬ್ರಹ್ಮವರ್ಣಪತಿರ್ಬ್ರಹ್ಮ ನಾರದೋ ದೇವಲೋಸಿತಃ ।**

......................................................................

......................................................................

**ಯಕ್ಷಾಶ್ಚ ಗುಹ್ಯಕಾಶ್ಚಾಪಿ ಶೂದ್ರವರ್ಣಾಃ ಪ್ರಕೀರ್ತಿತಾಃ ॥"**

ಇತ್ಯಾದಿ ವಿಷ್ಣುರಹಸ್ಯಾರ್ಥ ಇದರಿಂದ ವಿವರಿಸಿತು.
(ಮೇಲಿನ ಪ್ರಮಾಣದ ಪೂರ್ಣವಾಕ್ಯರೂಪವನ್ನು ಹಿಂದಿನ ವ್ಯಾಖ್ಯಾನಗಳಲ್ಲಿ ಕೊಟ್ಟಿದೆ.) ॥೩೨॥

# ಸರ್ವವ್ಯಾಖ್ಯಾನಸಾರಸಂಗ್ರಹ

ಪ್ರಸಕ್ತ ಪದ್ಯದಿಂದ ನಾಲ್ಕು ವರ್ಣನಿಯಾಮಕ ಭಗವದ್ರೂಪಗಳ ವಿಷಯವನ್ನು ಸರ್ವತ್ರ ವ್ಯಾಪ್ತನಾದ ಶ್ರೀಮನ್ನಾರಾಯಣನ "ಚತುಷ್ಪಾತು" ಎಂಬ ರೂಪದಿಂದ ವಿವರಿಸುತ್ತಾ ಪರಿಸಮಾಪ್ತಿಗೊಳಿಸುತ್ತಾರೆ.

ಶ್ರೀಪರಮಾತ್ಮನು ಭಯರಹಿತನು. ಸರ್ವೋತ್ತಮನಾದ್ದರಿಂದ ಯಾರ ಭಯವೂ ಆವನಿಗಿಲ್ಲ, ಇಂತು ನಿರ್ಭೀತನಾದ ಭಗವಂತನು ವೀತಭಯನು. ಯಾವಾತನ ದೆಸೆಯಿಂದ ಜೀವರಿಗೆ ಭಯಾದಿಗಳು ಹೋಗಲಾಡಿಸಲ್ಪಡುತ್ತವೆಯೋ, ಅಂತಹ ಪರಮಪುರುಷನೇ "ವೀತಭಯನು"-ಎಂದು ಇನ್ನೊಂದು ರೀತಿಯಲ್ಲಿ ಈ ಶಬ್ದವನ್ನು ನಿರ್ವಚನ ಮಾಡಬಹುದು. ಅಂತಹ ವೀತಭಯನಾದ ನಾರಾಯಣನಾಮಕ ಪರಮಾತ್ಮನು ನಾಲ್ಕು ವರ್ಣದವರಲ್ಲಿಯೂ ನೆಲೆಸಿದ್ದು ನಿಯಾಮಕನಾಗಿರುವನು. "ನಾರಾಯಣ" ಎಂಬ ಶಬ್ದಕ್ಕೆ ನಾನಾ ಅರ್ಥಗಳಿವೆ. ಅದು ಬಹ್ವರ್ಥಗರ್ಭಿತವಾದದ್ದು. "ಅರಾಃ"-ಎಂದರೆ "ದೋಷಗಳು"-ಎಂದರ್ಥ. ನಿಷೇಧಾರ್ಥದಲ್ಲಿ "ನಾರಾಃ" ಎಂದರೆ ದೋಷಗಳು ಯಾರಲ್ಲಿ ಇಲ್ಲವೋ, ಅಂದರೆ, ಯಾರು ಸಮಸ್ತ ದೋಷವಿದೂರನೋ-ಎಂದರ್ಥವಾಗುವುದು. ಅಂದರೆ ಆನಂದಾದಿ ಅನಂತಕಲ್ಯಾಣಗುಣಗಣಪರಿಪೂರ್ಣನೆಂದರ್ಥ. "ಅಯನ"ಎಂದರೆ ಆಶ್ರಯವು. ಅಂದರೆ ಆನಂದಾದಿ ಸದ್ಗುಣಗಳು ಯಾರಲ್ಲಿ ಆಶ್ರಯವನ್ನು ಹೊಂದಿವೆಯೋ, ಅಂದರೆ ಯಾರು ಅನಂತ ಕಲ್ಯಾಣಗುಣಗಣಪರಿಪೂರ್ಣನೋ, ಆತ ಏವ ಸಮಸ್ತ ದೋಷವಿದೂರನೋ ಅಂತಹ ಪರಮಪುರುಷನೇ "ಶ್ರೀಮನ್ನಾರಾಯಣನು." ಇಂತಹ ವೀತಭಯನಾದ ಸಮಸ್ತದೋಷವಿದೂರನಾದ ಮೂಲರೂಪೀ ಶ್ರೀಮನ್ನಾರಾಯಣನು "ಚತುಷ್ಪಾತ್" ಎಂದು ಶ್ರುತಿಯಲ್ಲಿ ಸುಪ್ರಸಿದ್ಧನಾಗಿದ್ದಾನೆ. "ಚತುಷ್ಪಾತ್" ಎಂದರೆ ನಾಲ್ಕು ಕಾಲುಗಳು ಎಂದರ್ಥ. ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರರೆಂಬ ಚತುರ್ವರ್ಣದವರಲ್ಲಿ ಕ್ರಮವಾಗಿ ವಾಸುದೇವ, ಸಂಕರ್ಷಣ, ಪ್ರದ್ಯುಮ್ನ ಮತ್ತು ಅನಿರುದ್ಧ ಎಂಬ ರೂಪ ಚತುಷ್ಟಯಗಳಿಂದ ಮೂಲರೂಪೀ ಶ್ರೀಮನ್ನಾರಾಯಣನು ವಿರಾಜಮಾನನಾಗಿದ್ದು, ಆಯಾಯಾ

ಜಾತಿಗನುಗುಣವಾದ ಧರ್ಮಗಳಿಗೆ ಪ್ರೇರಕನೂ ನಿಯಾಮಕನೂ ಆಗಿರುವುದರಿಂದ "ಚತುಷ್ಪಾತ್" ಎಂದೆನಿಸಿರುವನು.

"ಪಾದೋಸ್ಯ ವಿಶ್ವಾಭೂತಾನಿ"-ಎಂಬುದು ಪುರುಷಸೂಕ್ತದ ವಚನವು. ಅಂದರೆ ಪುರುಷನಾಮಕನಾದ ವಿರಾಡ್ರೂಪೀ ಶ್ರೀ ಪರಮಾತ್ಮನ ಒಂದು ಪಾದ ಪರಿಮಿತವಾದ ಅಂಶದಿಂದ ಈ ಜಗತ್ತು ವ್ಯಾಪಕವಾಗಿದೆ-ಎಂಬುದೇ ಶ್ರುತ್ಯರ್ಥವು. ಉಳಿದ ಮೂರು ಪಾದಗಳು ಅವನ "ಸ್ವರೂಪಾಂಶಗಳು." ಇಂತು ವೀತಭಯನಾದ ಸಮಸ್ತ ದೋಷದೂರನಾದ ಮೂಲರೂಪಿ ಶ್ರೀಮನ್ನಾರಾಯಣನು "ಚತುಷ್ಪಾದ" ನೆಂದೆನಿಸಿ, ಆಯಾಯಾ ಜಾತಿಯ ಧರ್ಮ ಮತ್ತು ಸುಕರ್ಮಗಳನ್ನು ತಾನೇ ಮಾಡಿ ಮಾಡಿಸುತ್ತಿರುವನು. ಅಧ್ಯಯನವು ಬ್ರಾಹ್ಮಣವರ್ಣದ ಮುಖ್ಯ ಧರ್ಮವು. ಅಂತೆಯೇ ರಾಜ್ಯಪರಿಪಾಲನೆ, ವ್ಯಾಪಾರ, ಸೇವಾವೃತ್ತಿ ಇವು ಉಳಿದ ಮೂರು ವರ್ಣಗಳಾದ ಕ್ಷತ್ರಿಯ,ವೈಶ್ಯ ಮತ್ತು ಶೂದ್ರರ ಮುಖ್ಯ ಧರ್ಮಗಳು. ಈ ಧರ್ಮಗಳಿಗೆ ತಾನು ಪ್ರೇರಕನಾಗಿದ್ದು, ತಾನೇ ಆಯಾಯಾ ವರ್ಣಗತ ಭಗವದ್ರೂಪಗಳಿಂದ ಬಿಂಬಕ್ರಿಯಾ ದ್ವಾರಾ ಧರ್ಮಪ್ರವರ್ತನಮಾಡಿ, ತತ್ತ್ವಜ್ಞಾತಿ ಅಭಿಮಾನಿಗಳಾದ ದೇವತೆಗಳ ಮೂಲಕ ಹಾಗೂ ಜೀವರ ಮೂಲಕ ಮಾಡಿಸುತ್ತಿರುವನು. ಅಂತೆಯೇ ಆಯಾಯಾ ವರ್ಣಗಳಿಗೆ ಶಾಸ್ತ್ರದಲ್ಲಿ ವಿಧಿಸಿರುವ ಉಚಿತ ಕರ್ಮಗಳನ್ನು ಮಾಡಿ ಮಾಡಿಸುತ್ತಿರುವನು. ಅಂತಹ ಮೂಲರೂಪೀ ಶ್ರೀಮನ್ನಾರಾಯಣನು ಜೀವವರ್ಗದವರಲ್ಲಿ ಅಂತಸ್ಥಿತನಾಗಿ ಒಳಗಿದ್ದು, ಬಾಹ್ಯದಲ್ಲಿ ಸ್ಥೂಲ ದೇಹಗಳಲ್ಲಿ ವ್ಯಾಪ್ತನಾಗಿದ್ದು, ಧರ್ಮ ಮತ್ತು ಸುಕರ್ಮಗಳನ್ನು ಮಾಡಿ ಮಾಡಿಸುತ್ತಿರುವನು. ಇದಕ್ಕೆ ವಸ್ತ್ರದ ದೃಷ್ಟಾಂತವನ್ನು ದಾಸರಾಯರು ಕೊಟ್ಟಿರುತ್ತಾರೆ. ಒಂದು ವಸ್ತ್ರದಲ್ಲಿ (ಪಟ) ನೂಲುಗಳು ಅಡ್ಡವಾಗಿಯೂ ಮತ್ತು ಉದ್ದವಾಗಿಯೂ ಒಂದಕ್ಕೊಂದು ಹೊಂದಿಕೊಂಡು ಒಂದೇ ಬಟ್ಟೆಯ ರೂಪದಲ್ಲಿ ಕಾಣಿಸುವುವು. ಹೀಗೆ ಓತಪ್ರೋತನಾಗಿ ಶ್ರೀಪರಮಾತ್ಮನು ವಾಸುದೇವಾದಿ ರೂಪಗಳಿಂದ ಬ್ರಾಹ್ಮಣಾರಭ್ಯ ಶೂದ್ರವರ್ಣಾಂತ ವ್ಯಾಪ್ತನಾಗಿ ವರ್ಣೋಚಿತವಾದ ಧರ್ಮಕರ್ಮಗಳನ್ನು ಮಾಡಿ ಮಾಡಿಸುತ್ತಿರುವನು. "ಅಂತರ್ಬಹಿಶ್ಚ ವ್ಯಾಪ್ಯ ನಾರಾಯಣ ಸ್ಥಿತಃ"-ಎಂಬ ಶ್ರುತ್ಯರ್ಥ ಇದರಿಂದ

ವಿದಿತವಾಗುವುದು. ಇಂತು ಪರಮವಾತ್ಸಲ್ಯದಿಂದ ಕರುಣಾಮಯನಾದ ಬಿಂಬರೂಪಿ ಶ್ರೀಪರಮಾತ್ಮನು ಆಯಾಯಾ ವರ್ಣದವರಿಗೆ ಉಚಿತವಾದ ಧರ್ಮ, ಅರ್ಥ, ಕಾಮಾದಿ ಚತುರ್ವಿಧ ಪುರುಷಾರ್ಥಗಳನ್ನು ಕೊಟ್ಟು ಉದ್ಧರಿಸುವನು. ಧರ್ಮವೆಂದರೆ ಆಯಾಯಾ ವರ್ಣೋಚಿತವಾದ ಧರ್ಮಬುದ್ಧಿ. ಅರ್ಥವೆಂದರೆ ಆ ಧರ್ಮಬುದ್ಧಿಯಿಂದ ಉಂಟಾಗುವ ಪ್ರಯೋಜನ (ದ್ರವ್ಯರೂಪವಾದ ಪ್ರಾಪ್ತಿ.) ಕಾಮ-ಎಂದರೆ ಧರ್ಮಬುದ್ಧಿಯಿಂದ ಜನ್ಯವಾಗುವ ಸದಿಚ್ಛೆಗಳು. ಇವುಗಳನ್ನು ಅನುಗ್ರಹಿಸಿ,ಸಕಲ ವರ್ಣದವರನ್ನು ಸಂರಕ್ಷಿಸುವನು ಎಂದು ತಾತ್ಪರ್ಯ. ॥೩೨॥

## ಪದ್ಯ (೩೩)

**ಮೂಲ :**

**ನಿಧನ ಧನದ ವಿಧಾತ ವಿಗತಾ ।**
**ಭ್ಯಧಿಕ ಸಮಾಸಮವರ್ತಿ ಸಾಮಗ ।**
**ತ್ರಿದಶಗಣ ಸಂಪೂಜ್ಯ ತ್ರಿಕಕುದ್ಧಾಮ ಶುಭನಾಮ ॥**
**ಮಧುಮಥನ ಭೃಗುರಾಮ ಘೋಟಕ ।**
**ವದನ ಸರ್ವಪದಾರ್ಥದೊಳು ತುದಿ ।**
**ಮೊದಲೂ ತುಂಬಿಹನೆಂದು ಚಿಂತಿಸು ಬಿಂಬರೂಪದಲಿ ॥ ॥೩೩॥**

**ಅವತರಣಿಕೆ :**

ವಿಶ್ವವ್ಯಾಪಿಯಾಗಿ ಅಣುರೇಣುತೃಣಕಾಷ್ಟಗಳಲ್ಲಿ ಪರಿಪೂರ್ಣನಾಗಿರುವ ಮಂಗಳ ನಾಮಧೇಯನಾದ ಶ್ರೀ ಪರಮಾತ್ಮನ ಚಿಂತನಾಕ್ರಮವನ್ನು ಹೇಳುತ್ತಾರೆ. "ನಿಧನ"–ಎಂಬ ಪ್ರಸಕ್ತ ಸಂಧಿಗತ ಈ ೩೩ ನೆಯ ಪದ್ಯದಿಂದ.

ಮಹಾಪ್ರಳಯಕಾರಕನಾದ್ದರಿಂದ ನಿಧನನಾಮಕನಾಗಿಯೂ. ಐಶ್ವರ್ಯಾದಿ ಸಕಲ ಸಂಪತ್ತುಗಳನ್ನು ಕೊಟ್ಟು, ಪರಿಪಾಲನ ಮಾಡುವುದರಿಂದ ಧನದ ನಾಮಕನಾಗಿಯೂ ಸೃಷ್ಟಿಕರ್ತನಾದ್ದರಿಂದ ವಿಧಾತ ನಾಮಕನಾಗಿಯೂ

ಇರುವ ಶ್ರೀಪರಮಾತ್ಮನು ಸಮಾಭ್ಯಧಿಕ ಶೂನ್ಯನು. ಅಂದರೆ, ಅವನಿಗೆ ಸಮರಾಗಲೀ, ಅಧಿಕರಾಗಲೀಯಾರು ಇಲ್ಲವೆಂದರ್ಥ. ಸಮಾಧಿಕರಹಿತನಾದ ಶ್ರೀ ಪರಮಾತ್ಮನು ಎಲ್ಲರಲ್ಲಿಯೂ ಸಮನಾಗಿ ವರ್ತಿಸುವುದರಿಂದ ಸಮವರ್ತಿಯು. ಸಮವರ್ತಿಯಾದ ಭಗವಂತನು ಸಾಮವೇದ ಪ್ರತಿಪಾದ್ಯನು ಮತ್ತು ಬ್ರಹ್ಮಾದಿ ಸಮಸ್ತ ದೇವತಾಗಣದಿಂದ ಸಂಪೂಜ್ಯನು. ಶ್ವೇತದ್ವೀಪ, ಅನಂತಾಸನ ಮತ್ತು ವೈಕುಂಠಗಳೆಂಬ ತ್ರಿಧಾಮಗಳಲ್ಲಿ ಆವಾಸನು. ಮಂಗಳನಾಮಧೇಯನು. ಮಧುವೈರಿಯು. ಪರಶುರಾಮ, ಹಯವದನ ರೂಪನಾಗಿ ಸಮಸ್ತ ಸುಭೋಜ್ಯ ಪದಾರ್ಥಗಳಲ್ಲಿ ತನ್ನಾಮಕನಾಗಿ, ತದ್ರೂಪನಾಗಿ, ರಸಪದವಾಚ್ಯನಾಗಿ ಬಿಂಬರೂಪದಿಂದ ಪರಿಪೂರ್ಣನಾಗಿ ವ್ಯಾಪ್ತನಾಗಿದ್ದಾನೆಂದು ಧ್ಯಾನಿಸಬೇಕೆಂದು ಈ ಪದ್ಯದ ಅಂತರಾರ್ಥ. ॥೩೩॥

**ಪ್ರತಿಪದಾರ್ಥ :**

**ನಿಧನ**=ಶ್ರೀ ಸಂಕರ್ಷಣ ರೂಪದಿಂದ ಜಗತ್ಸಂಹಾರರೂಪವಾದ ಪ್ರಳಯವನ್ನು ಮಾಡುವನಾದ್ದರಿಂದ ನಿಧನ ನಾಮಕನು **ಧನದ**=ಸೃಷ್ಟಿ ಮಾಡಿದ ಜಗತ್ತನ್ನು ಪಾಲನೆಮಾಡಿ, ಜೀವರಿಗೆ ಸಾಧನ ಮಾಡುವುದಕ್ಕೆ ದ್ರವ್ಯ ರೂಪದ ಸಂಪತ್ತನ್ನು ಕೊಡುವವನಾದ್ದರಿಂದ ಧನದ ನಾಮಕನು **ವಿಧಾತ** =ಬ್ರಹ್ಮದೇವರಲ್ಲಿ ಸ್ಥಿತನಾಗಿದ್ದು ಸೃಷ್ಟಿಕರ್ತನಾದ್ದರಿಂದ ವಿಧಾತ ನಾಮಕನು. **ವಿಗತ ಅಭ್ಯಧಿಕ ಸಮ**=ಹೋಗಲಾಡಿಸಲ್ಪಟ್ಟ(ರಹಿತನಾದ) ಅತಿಶಯವಾದ ಆಧಿಕ್ಯವಾಗಲೀ ಸಮತ್ವವಾಗಲೀ ಉಳ್ಳವನು,ಅಂದರೆ ಸಮಾಧಿಕ ರಹಿತನು ಶ್ರೀ ಪರಮಾತ್ಮನಿಗ ಸಮರೂ ಇಲ್ಲ; ಅವನಿಗಿಂತ ಉತ್ತಮರೂ ಇಲ್ಲ. ಅತ ಏವ ಸರ್ವೋತ್ತಮನು. **ಸಮವರ್ತಿ**=ಎಲ್ಲಾ ಚೇತನರಲ್ಲಿಯೂ ಸಮಾನವಾಗಿ ವರ್ತಿಸುವವನು, ಅಂದರೆ, ಅವರವರ ಸ್ವರೂಪ ಯೋಗ್ಯತಾನುಸಾರ ಪ್ರವರ್ತಿಸುವವನು **ಸಾಮಗ**=ಸಾಮವೇದ ಪ್ರತಿಪಾದ್ಯನು **ತ್ರಿದಶ**= ಬ್ರಹ್ಮಾದಿ ದೇವತೆಗಳ **ಗಣ**=ಸಮೂಹದಿಂದ **ಸಂಪೂಜ್ಯ**= ಚನ್ನಾಗಿ ಪೂಜ್ಯನಾದವನು (ಸಂಸೇವ್ಯಮಾನನು) **ತ್ರಿಕಕುದ್ಧಾಮ**= ಅತ್ಯಂತ ಶ್ರೇಷ್ಠವಾಗ ವೈಕುಂಠ, ಶ್ವೇತದ್ವೀಪ ಮತ್ತು ಅನಂತಾಸನವೆಂಬ

ತ್ರಿಧಾಮಗಳುಳ್ಳವನು. **ಶುಭನಾಮ**=ಮಂಗಳನಾಮಧೇಯನು **ಮಧು ಮಥನ**=ಮಧುನಾಮಕ ದೈತ್ಯನನ್ನು ಸಂಹಾರ ಮಾಡಿದವನು **ಭೃಗು ರಾಮ**=ಭೃಗುಕುಲೋತ್ಪನ್ನನಾದ ಶ್ರೀಪರಶುರಾಮದೇವರು **ಘೋಟಕ ವದನ**=ಕುದುರೆಯ ಮುಖವುಳ್ಳ ಶ್ರೀ ಹಯಗ್ರೀವದೇವರು. **ಸರ್ವ ಪದಾರ್ಥದೊಳು**=ಸಮಸ್ತ ಪದಾರ್ಥಗಳಲ್ಲಿಯೂ **ತುದಿಮೊದಲು**= ಆದ್ಯಂತವಾಗಿ **ತುಂಬಿಹನೆಂದು**=ಪರಿಪೂರ್ಣನಾಗಿ ವ್ಯಾಪ್ತನಾಗಿದ್ದಾನೆಂದು **ಬಿಂಬರೂಪದಲಿ**=ಸರ್ವಾಂತರ್ಯಾಮಿಯಾಗಿ ಬಿಂಬನಾಗಿದ್ದಾನೆಂದು ತಿಳಿದು **ಚಿಂತಿಪುದು**=ಧ್ಯಾನಿಸುವವನಾಗು. ॥೩೩॥

## ವ್ಯಾಖ್ಯಾನಗಳು

### (೧) ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ :-

ಪೂರ್ವೋಕ್ತ ಶ್ರೀ ನಾರಾಯಣದೇವರು ಸರ್ವತ್ರ ವ್ಯಾಪ್ತನೆಂದು ಚಿಂತಿಸಬೇಕು.

ನಿಧನ-ಮೂಲರೂಪ ಶ್ರೀ ನಾರಾಯಣ ದೇವರಿಂದ ಅಂಶವಿಶೇಷದಿಂದ ಹೊರಟ ಸಂಕರ್ಷಣ ರೂಪದಿಂದ ಜಗತ್ಸಂಹಾರ ಮಾಡುತ್ತಾನೆ, ಧನದ-ಸೃಷ್ಟಿ ಮಾಡಿದ ಜಗತ್ತನ್ನು ಪಾಲನೆಮಾಡಿ ಜೀವರಿಗೆ ಸಾಧನ ಮಾಡೋದಕ್ಕೆ ಸಾಧನದ್ರವ್ಯಗಳ ಕೊಡತಕ್ಕವ, ವಿಧಾತ-ವಾಸುದೇವಾಂಶದಿಂದ ಬ್ರಹ್ಮನ ಹಾಂಗೆ ತದಸ್ಯರ ಅಡದ ಹೊರಗೆ ಸೂಕ್ಷ್ಮ ಸೃಷ್ಟಿ ಮಾಡಿದವ, ವಿಗತಾಭ್ಯಧಿಕ-ವಿಗತ-ಹೋಗಲ್ಪಟ್ಟ ಅಭ್ಯಧಿಕ-ಅತಿಶಯವಾದ ಅಧಿಕತ್ವ ಉಳ್ಳವನು ಎಂದರ್ಥ. ಸಮಾ ಸಮವರ್ತಿ-ಸಮ-ವೇದಕ್ಕೆ ಸಮನಾಗಿ ವಿರುದ್ಧವಲ್ಲದೆ ತಾರತಮ್ಯ ಪಂಚಭೇದ ಜ್ಞಾನಯುಕ್ತರಾದ ಪ್ರಾಣಿಗಳಲ್ಲಿ, ಅಸಮ-ತದ್ವಿಪರೀತ ಜ್ಞಾನಯುಕ್ತರಾದ ಪ್ರಾಣಿಗಳಲ್ಲಿ, ವರ್ತಿ-ಅವರವರ ಸ್ವರೂಪಯೋಗ್ಯತಾನುಸಾರ ಪ್ರವರ್ತಿಸತಕ್ಕವ, ಇನ್ನು ದೇಶತಃ ಕಾಲತಃ ಸಮಳಾಗಿನ್ನು ಗುಣತಃ ಅಸಮಳಾಗಿ ಇರತಕ್ಕ ರಮಾದೇವೇರ ಯೋಗ್ಯತಾನುಸಾರ ಪ್ರವರ್ತಿಸತಕ್ಕವನೆಂತಲೂ ಅರ್ಥವೇ, ಸಾಮಗ-ಮುಕ್ತರಿಂದ ಸಾಮವೇದದಿಂದ ಸ್ತುತ್ಯ

ನಾದ, ಸಾಮವೇದದಲ್ಲಿ ವಿಭೂತಿ ವಿಶೇಷದಿಂದ .ಇರತಕ್ಕವ. ತ್ರಿದಶಗಣ ಸಂಪೂಜ್ಯ-ಬ್ರಹ್ಮಾದಿ ದೇವತಾಸಮೂಹದಿಂದ ಛಂದಾಗಿ ಪೂಜಿತನಾದಂಥಾವ, ತ್ರಿಕಕುಧಾಮ-ಕಕುತ-ವೃಷಭಸ್ಕಂದ. ಇದರಿಂದ ಉನ್ನತ ಸಾಂಕೇತವೂ ಅಂದರೆ ಉನ್ನತವಾದ, ಉತ್ಕೃಷ್ಟವಾದ, ತ್ರಿ-ಮೂರಾದಂಥಾ ಧಾಮ-ಮನಿಗಳು ಉಳ್ಳಂಥಾವ ಅಂದರೆ, ನಾಶರಹಿತವಾದ ವೈಕುಂಠ, ಶ್ವೇತದ್ವೀಪ, ಅನಂತಾಸನವೇ ಮನಿಯಾಗಿ ಉಳ್ಳವ. ಶುಭನಾಮ-ಇವನ ಹೆಸರು ಜೀವರಿಗೆ ಅತ್ಯಂತ ಮಂಗಳವನ್ನು ಕೊಡತಕ್ಕದ್ದು. ಆದಕಡಿಯಿಂದ ಮಂಗಳಕರವಾದ ನಾಮ ಉಳ್ಳವನು. ಮಧುಮಥನ-ಮಧುನಾಮಕ ದೈತ್ಯನ ಸಂಹಾರ ಮಾಡಿದವ. ಭೃಗುರಾಮ-ಭೃಗು -ಮರ್ಮವಾಗಿ ಇರತಕ್ಕ ಸ್ವರೂಪವನ್ನು ವ್ಯಕ್ತಮಾಡಿ ಮೋಕ್ಷದಲ್ಲಿ ರಾಮ-ಮುಕ್ತರ ಸಂಗಡ ವಿಹಾರಮಾಡುತ್ತಾ ಇರತಕ್ಕವನಾದ ಕಡಿಯಿಂದಲೂ, ಭೃಗುಕುಲದಲ್ಲಿ ಅವತಾರಮಾಡಿದ ಪರುಶರಾಮದೇವರೆಂತಲೂ ಅರ್ಥ, ಘೋಟಕವದನ-ಹಯಗ್ರೀವದೇವರು ಇತ್ಯಾದಿ ಅನೇಕ ರೂಪಗಳಿಂದ, ಸರ್ವಪದಾರ್ಥಗಳೊಳು-ಎಲ್ಲಾ ಪದಾರ್ಥಗಳಲ್ಲಿ, ತುದಿ ಮೊದಲು-ಬ್ರಹ್ಮಾಂಡದ ಒಳಗೆ ಆರಂಭಮಾಡಿ ಅಂತವಾದ ನವಾವರಣ ಪರಿಯಂತವಾಗಿ, ತುಂಬಿ-ಅವಿಚ್ಛಿನ್ನವಾಗಿ ತುಂಬಿದವನಾಗಿ ಇದ್ದಾನೆ. ಬಿಂಬ ರೂಪದಲಿ-ಈ ಪರಮಾತ್ಮನೇ, ಹೃದಯಾಂತರ್ಗತದಲ್ಲಿ ಬಿಂಬನಾಗಿ, ಇಹನೆಂದು-ಇದ್ದಾನೆಂದು, ಚಿಂತಿಸು-ಅನುಸಂಧಾನದಿಂದ ತಿಳಿಯೋವನಾಗಬೇಕು. ||೩೩||

(೨) "ಭಾವಪ್ರಕಾಶಿಕೆ"-ವ್ಯಾಖ್ಯಾನ :-

ಸರ್ವತ್ರ ವ್ಯಾಪ್ತನಾದ ಶ್ರೀಪರಮಾತ್ಮನನ್ನು ಸ್ವದೇಹಗತ ಬಿಂಬರೂಪದಲ್ಲಿ ಐಕ್ಯಚಿಂತನೆ ಮಾಡಬೇಕೆಂದು ಹೇಳುತ್ತಾರೆ.

ಯಾವ ಪರಮಾತ್ಮನು ನಿಧನ ನಾಮಕನಾಗಿ ಪ್ರಳಯವನ್ನು ಮಾಡುವನೋ, ಎಲ್ಲರಿಗೂ ಐಶ್ವರ್ಯಪ್ರದನಾದುದರಿಂದ ಧನದನೆಂದು ಪ್ರಖ್ಯಾತನಾಗಿರುವನೋ, ಯಾವಾತನು ಸೃಷ್ಟಿಕರ್ತನೋ, ಯಾವ ಪರಮಾತ್ಮನಿಗೆ ಸಮರಾಗಲೀ ಉತ್ತಮರಾಗಲೀ ಇಲ್ಲವೋ, ಯಾವನು ಎಲ್ಲರಲ್ಲಿಯೂ ಸಮನಾಗಿ

ವರ್ತಿಸುವನೋ, ಅಂದರೆ ಪರಮಾತ್ಮನಿಗೆ ಒಬ್ಬರಲ್ಲಿ ಸ್ನೇಹ, ಮತ್ತೊಬ್ಬರಲ್ಲಿ ದ್ವೇಷವಿಲ್ಲ. ಅವರವರು ಮಾಡಿದ ಪುಣ್ಯಪಾಪಗಳನ್ನನುಸರಿಸಿ, ಅವರವರಿಗೆ ಫಲವನ್ನು ಕೊಡುವುದರಿಂದ "ಸಮವರ್ತಿ" ಎಂದು ಹೆಸರುಳ್ಳವನೆಂದರ್ಥ. ಸಾಮಗಾನಪ್ರಿಯನು. ಬ್ರಹ್ಮಾದಿ ದೇವತಾಗಣ ಪೂಜ್ಯನು. ಶ್ವೇತದ್ವೀಪ, ಅನಂತಾಸನ, ವೈಕುಂಠವೆಂಬ ಮೂರು ಲೋಕಗಳಲ್ಲಿ ಮನೆಯುಳ್ಳವನು. ಅಂತಹ ಮಂಗಳನಾಮವುಳ್ಳ ಶ್ರೀಪರಮಾತ್ಮನು, ಮಧುಸೂದನ, ಪರಶುರಾಮ, ಹಯಗ್ರೀವ ಎಂಬ ಅವತಾರ ರೂಪಗಳಿಂದ ಸರ್ವಪದಾರ್ಥಗಳ ತುದಿ ಮೊದಲುಗಳಲ್ಲಿ ಅಂದರೆ, ಕಾಲು ಮೊದಲು ತಲೆಯವರೆವಿಗೂ ಅಥವಾ ತುದಿ ಮೊದಲು ಕೆಳಗಿನವರೆವಿಗೂ ವ್ಯಾಪ್ತನಾಗಿರುವನು. ಅಂಥಹಾ ಶ್ರೀಹರಿಯೇ ಅದೇ ರೂಪದಿಂದ ನನ್ನ ಬಿಂಬರೂಪನಾಗಿರುವನೆಂದು ಚಿಂತಿಸಬೇಕು. ॥೩೩॥

**(೩) "ಭಾವದರ್ಪಣ ಟೀಕಾ" ವ್ಯಾಖ್ಯಾನ :-**

"ನಿಧನೇತಿ"- **"ನಿಧನಕರ್ತೃತ್ವಾನ್ನಿಧನಃ ॥"** ಎನ್ನುವುದರಿಂದ, ಸಂಹಾರ ಕರ್ತೃತ್ವ ಇರೋಣನದರಿಂದ "ನಿಧನಂ"-ಎಂತ ನಾಮ.

"ಧನದೇತಿ"- **"ಸ್ವಸ್ಯ ರೂಪಧನಂ ಜ್ಞಾನಿನಾಂ ದದಾತೀತಿ ಧನದಃ "॥**

-ಎಂಬಂತೆ, **"ತಸ್ಯೈಷ ಆತ್ಮಾ ವಿವೃಣುತೇ ತನೂಸ್ವಾಮಿತಿ ಶ್ರುತೇಃ" ॥** ಎಂಬಂತೆ.

ಪ್ರತ್ಯಕ್ಷನಾಗುವನೆಂಬ ಭಾವ.

"ವಿಧಾತೇತಿ"- **"ಧಾರುಣ ಪೋಷಣ ಕರ್ತೃತ್ವಾ ದ್ಧಾತಾ ವಿಧಾತ ಧಾರಣ ಪೋಷಣ ಯೋರಿತಿ ಧಾತೋಃ ವಿಶೇಷೇಣ ಧಾತಾ ವಿಧಾತಾ"॥**

-ಎಂಬಂತೆ, ವಿಶೇಷ ಕಾರಣಂದಿದ ಧರಿಸಿ ಭಕ್ತರನ್ನ ಪೋಷಣ ಮಾಡತಕ್ಕವನೆಂಬರ್ಥ.

"ವಿಗತಾಭ್ಯಾಧಿಕ ಸಮವರ್ತಿನೀ ಇತಿ"
ಅಂದರೆ ಸಮಾಧಿಕಶೂನ್ಯ ಎಂದರ್ಥ.

"ಸಾಮಗೇತಿ"-ಸಾಮವೇದದಲ್ಲಿ ಇರತಕ್ಕವನೆಂದರ್ಥ.

ತ್ರಿದಶಗಣಸಂಪೂಜ್ಯ- ದೇವತಾಗಣಗಳಿಂದ ಪೂಜ್ಯನೆಂದು ಅನಿಸಿಕೊಳ್ಳುವ ಎಂಬರ್ಥ.

"ತ್ರಿಕಕುದ್ಧಾಮೇತಿ"-

"ತ್ರಿಸ್ರಃ ಕಕುಭಃ ವೈಕುಂಠಾದಯಃ ಲೋಕಾಃ ಧಾಮಾನಿ ಮಂದಿರಾಣಿ ಯಸ್ಯಸಃ = ತ್ರಿಕಕುದ್ಧಾಮಾ ||

ತದುಕ್ತಂ ಬ್ರಹ್ಮಾಂಡೇ-

"ತ್ರೀಣಿ ಧಾಮಾನಿ ವೈ ವಿಷ್ಣೋಃ ಸ್ತ್ರಿಲೋಕದ್ಧಹಿ ಏವ ಹಿ"

-ವೈಕುಂಠಾದಿ ಲೋಕವೇ ಧಾಮವಾಗಿ ಉಳ್ಳವ ಎಂಬರ್ಥ. ಏತಾದೃಶಹರಿ ಸರ್ವತ್ರದಲ್ಲಿಯೂ ವ್ಯಾಪ್ತನೆಂಬರ್ಥ. ||೩೩||

(೪) ಶ್ರೀ ವಾದಿರಾಜಾಚಾರ್ಯರ ವ್ಯಾಖ್ಯಾನ (ಸಂಸ್ಕೃತ ಮೂಲ) :

ನಿಧನೇತಿ || "ಅನಾದಿ ನಿಧನೋ ಧಾತಾ ವಿಧಾತಾ ಧಾತುರುತ್ತಮಃ" ಇತ್ಯುಕ್ತೇಃ || "||ಓಂ|| ನೃಣಾಮುತ್ವಾ ನೃತಮಂ ಗೀರ್ಭಿರುಕ್ಥೈರ್ನದಂವ ಜದತೀನಾಮ್ || ಅಭಿಪ್ರವರ ವೀರಮರ್ಚತಾ ಸಬಾಧೋ ಯೋ ಯುವತೀನಾಮ್ ||ಓಂ|| (ಬೃ. ಸ. ಖು.) ವಿ, ವಿಶಿಷ್ಟ ಉತ್ಥಾದಿಸ್ತೋತ್ರ ಗಣಾನ್ ಸ್ವಪ್ರತಿಪಾದಕತ್ವೇನ ಧತ್ತೇ ಇತಿ ನಿರುಕ್ತೇಃ ಸತಥಾ || ಸಾಮಗೇತಿ || ಸಹಸ್ರಗಮ್ ||ಓಂ|| ಯಂ ತೇ ಸ್ವಧಾವನ್ ಸ್ವದಯಂತಿ ಗೂರ್ತಯಃ ಪೌರೈಕ್ಷಂ ದಯಸೇ ಹವಮ್ || ಪ್ರವೀರಮುಗ್ರಂ ವಿರಿಂಚಿ ಧನಸ್ಮೃತಂ ವಿಭೂತಿರರಾಧನೋ ಮಹಃ ||ಓಂ|| ಅನೇನ ಸ್ಯತೀತಿ ಸಾಮಸ್ತುತಿಃ || ತದ್‌ಗಚ್ಛತಿ ಅಂಗೀಕರೋತಿ ಇತಿ ||ಚ|| ||ಓಂ|| ಗೃಣದ್ಧೈಲ ಸಸಾಹತ್ಪುರ್ವತ್ರ ಹತ್ಯೇಷು (ಶತ್ರೂನ್) ಭುವಿಗಾಹ ವಿಷಃ (ನೃಭಿರ್ಗಾಹ ಏಷಃ) || ಸನೋನೇತಾರಂ

ಮಹಯಾಮ ಇಂದ್ರಂ ಇನೋವಸು ॥ಓಂ॥ (ಬೃ. ಸ. ಋ.) ಅನೇನತ್ರೀನ್ ಆಧ್ಯಾತ್ಮಿಕಾದಿ ಶತ್ರೂನ್. ಕಕುತ್–ಕಶಬ್ದಃ ಕುತ್ಸನೇ । ಕಕುತ್ಸಿತಾನ್ ಕೃತ್ ಧಾಮ ಸ್ವರೂಪಂ ಯಸ್ಯಸ ತಥೋಕ್ತಃ ॥ ಘೋಟಕಃ ಹಯಃ ॥ ಇಹ= ಇರುವ ॥೩೩॥

**ಕನ್ನಡಾರ್ಥ :–**

**"ಅನಾದಿ ನಿಧನೋ ಧಾತಾ ವಿಧಾತಾ ಧಾತುರುತ್ತಮಃ॥" ಎಂದು ಶ್ರೀ ವಿಷ್ಣುಸಹಸ್ರನಾಮದಲ್ಲಿ** "ಅನಾದಿ ನಿಧನ", "ವಿಧಾತ" ನಾಮಗಳನ್ನು ಉಲ್ಲೇಖಿಸಲಾಗಿದೆ. "ಓಂ ನೃಣಾಮು" ಎಂಬ ಆರಂಭವಾಗಿರುವ ಮಂತ್ರವು "ವಿಧಾತ" ಶಬ್ದಾರ್ಥ ವಿವರಣವಾಗಿರುತ್ತದೆ. ವಿ=ಶ್ರೇಷ್ಠವಾದ "ಉಕ್ಥ" ಮುಂತಾದ ಸ್ತೋತ್ರ ಸಮುದಾಯವನ್ನು ತನ್ನನ್ನೇ ಹೊಗಳುವಂತೆ ಮಾಡುವನು. (ಧರಿಸುವನು) ಆದ ಕಾರಣದಿಂದ "ವಿಧಾತ" ಎಂಬ ನಾಮವು. "ಸಾಮಗ". ಇದೂ ಸಹ ಶ್ರೀವಿಷ್ಣುಸಹಸ್ರನಾಮದಲ್ಲಿಯೇ ಬಂದಿರುವ ನಾಮ. ಬೃಹತೀ ಋಕ್ಕು ಈ ನಾಮವನ್ನು ವಿವರಿಸುತ್ತದೆ. ಸಾಮ= ಸ್ತುತಿ. ಅವನ್ನು ಹೊಂದುವವನು (ಗ)=ಸ್ವೀಕರಿಸುವವನು-ಸಾಮಗ. "ಛಂದಸೀಹವಮ್" –ಎಂಬ ಚರಣದಿಂದ ಈ ಅರ್ಥವು ಸೂಚಿತವಾಗಿದೆ. "ತ್ರಿಕಕುದ್ಧಾಮ" ಇದೂ ಸಹ ವಿಷ್ಣುಸಹಸ್ರನಾಮಗತವೇ. "ಗೃಣದ್ಧ ಕಿಲ" -ಎಂಬ ಮಂತ್ರವು ಈ ನಾಮ ಸೂಚಕವಾಗಿದೆ, ತ್ರಿ=ಆಧ್ಯಾತ್ಮಿಕ, ಆಧಿಭೌತಿಕ ಮತ್ತು ಅಧಿದೈವಿಕ ಎಂಬ ಮೂರು ವಿಧವಾದ ಶತ್ರುಗಳನ್ನು (ತಾಪಗಳನ್ನು) ಕಕುತ್=ಕುತ್ಸಿತಗೊಳಿಸುವ, ಅಂದರೆ, ನಿವಾರಿಸಿ ಉಪಮರ್ದನ ಮಾಡುವ ಧಾಮ-ಸ್ವರೂಪವುಳ್ಳವನು. ಘೋಟಕ=ಹಯ (ಕುದುರೆ) (ಹಯಗ್ರೀವ) ಇಹ=ಇರುವ. ॥೩೩॥

**(ಶ) "ಗುರುಹೃದಯಪ್ರಕಾಶಿಕೆ"–ವ್ಯಾಖ್ಯಾನ :-**

ಸರ್ವಪದಾರ್ಥಗಳಲ್ಲಿಯೂ. ಸ್ವದೇಹದಲ್ಲೂ ಸಹ ಸರ್ವಾವತಾರಾತ್ಮಕ ಸ್ವಬಿಂಬ ಸ್ಮರಣೋಪಾಸನೆ ನಿರೂಪಿಸುತ್ತಾರೆ-"ನಿಧನ" ನೆಂದು.

ಸರ್ವವೂ ತನ್ನಲ್ಲಿಟ್ಟುಕೊಂಡಿರುವುದರಿಂದ "ನಿಧನ" ನೆಂದು ಹೆಸರುಳ್ಳ, ಈ ಜ್ಞಾನ, ಧನಾದಿಗಳನ್ನು ಕೊಡುವುದರಿಂದ "ಧನದ" ನಾಮಕನಾದ. "ಡು ಧಾ ಞ ಧಾರಣ ಪೋಷಣ ಯೋಃ"–ಎಂಬ ಧಾತುವಿನಿಂದ ಸರ್ವಾಧಾರಕ, ಸರ್ವಪೋಷಕನಾದ್ದರಿಂದ "ವಿಧಾತಾ" –ಎಂಬ ಹೆಸರುಳ್ಳ, ಸರ್ವೋತ್ತಮನಾದ್ದರಿಂದ, "ವಿಗತಾಭ್ಯಧಿಕ" ನೆಂದು ಹೆಸರುಳ್ಳ, ರಮಾ ಸಮೇತನಾದ್ದರಿಂದ "ಸಮ" ನೆಂಬ ಹೆಸರುಳ್ಳ, ದೀಪವು ಬತ್ತಿಗೆ ತಕ್ಕ ಹಾಗೆ ಇರುವಂತೆ, ಜೀವರ ಯೋಗ್ಯತೆ ಮತ್ತು ಕರ್ಮಗಳಿಗೆ ಸಮನಾಗಿ ನಡೆಯಿಸುವುದರಿಂದ "ಸಮವರ್ತಿ"- ಎಂದೆನಿಸುವ, ಸರ್ವದೇವತೆಗಳಿಂದ ಪೂಜ್ಯನಾದ್ದರಿಂದ "ತ್ರಿದಶಗಣಸಂಪೂಜ್ಯ" ನೆಂಬ, ಮಧುವೆಂಬ ದೈತ್ಯಸಂಹಾರಿಯಾದ್ದರಿಂದ "ಮಧುಮಥನ" ನಾದ. ಅನಂತಾಸನ, ಶ್ವೇತದ್ವೀಪ ಮತ್ತು ವೈಕುಂಠ ವೆಂಬ ಮೂರು ಉತ್ಕೃಷ್ಟ ಮನೆಗಳುಳ್ಳ ಹಯಗ್ರೀವ, ಪರಶುರಾಮ, ಮಧುಸೂದನ-ಎಂಬ ಮಂಗಳಕರ ನಾಮಗಳುಳ್ಳ ಸ್ವಬಿಂಬರೂಪನೂ, ಸರ್ವ ಪದಾರ್ಥಗಳಲ್ಲೂ ಸರ್ವತ್ರ ತುಂಬಿರುವನೆಂದು ಚಿಂತಿಸುವುದು.

**"ಸರ್ವದೇಹಮಭಿವ್ಯಾಪ್ಯ ವಸತಿ ಶ್ರೀಧರೋ ಹರಿಃ ।**
**ಕುರ್ವೀತ ಸತತಂ ತಸ್ಮಾದ್ಧರಿ ಭಾವನಮತ್ರ ಚ ॥**

–ಎಂಬ **ವಿಷ್ಣುರಹಸ್ಯಾರ್ಥ** ವಿವರಿಸಿತು. ॥೩೩॥

## ಸರ್ವವ್ಯಾಖ್ಯಾನಸಾರಸಂಗ್ರಹ

ಸರ್ವತ್ರವ್ಯಾಪ್ತನಾದ ಸರ್ವೋತ್ಕೃಷ್ಟನಾದ ಶ್ರೀ ಪರಮಾತ್ಮನನ್ನು ನಿರಂತರದಲ್ಲೂ ಸ್ಮರಣಪೂರ್ವಕ ಸರ್ವಥಾವಿನಲ್ಲಿ ಚಿಂತಿಸುವ ಉಪಾಸನಾಕ್ರಮವನ್ನು ವಿವರಿಸುತ್ತಾರೆ ಪ್ರಸಕ್ತ ಪದ್ಯದಿಂದ.

(೧) ಮಹಾಪ್ರಳಯಕಾಲದಲ್ಲಿ ಸಮಸ್ತ ಬ್ರಹ್ಮಾಂಡವನ್ನು ಜಯಾಪತಿ ಸಂಕರ್ಷಣ ರೂಪದಿಂದ ಲಯಗೊಳಿಸಿ, ಜಗತ್ಸಂಹಾರ ರೂಪವಾದ ವ್ಯಾಪಾರವನ್ನು ಮಾಡುವುದರಿಂದ ಶ್ರೀಪರಮಾತ್ಮನಿಗೆ **ನಿಧನ** ನೆಂದು ಹೆಸರು.

ಸರ್ವವನ್ನೂ ತನ್ನ ಉದರದಲ್ಲಿ ಧರಿಸುವನಾದ್ದರಿಂದ, "ನಿಧನ" ನೆಂತಲೂ ಹೆಸರು.

(೨) ಹಾಗೆ ಸೃಷ್ಟಿಮಾಡಿದ ಜಗತ್ತನ್ನು ಸ್ವಯಮೇವ ವಿಷ್ಣುರೂಪ ದಿಂದ ಪರಿಪಾಲನೆ ಮಾಡುವನು. ಜೀವರಿಗೆ ಸಾಧನ ಯೋಗ್ಯವಾದ ದ್ರವ್ಯಾದಿ ಸಂಪತ್ತುಗಳನ್ನು ಕೊಡುವವನು. ಜ್ಞಾನ, ಭಕ್ತಿ, ವೈರಾಗ್ಯಗಳೆಂಬ ದೈವೀ ಸಂಪತ್ತನ್ನು ಸಜ್ಜನರಿಗೆ ಅನುಗ್ರಹಿಸುವನು. ಇದರಿಂದ **ಧನದ** ನಾಮಕನು.

(೩) ಚತುರ್ಮುಖ ಬ್ರಹ್ಮದೇವರಲ್ಲಿ ಸ್ಥಿತನಾಗಿದ್ದು, ಅಜನಾಮಕ ನಾಗಿ ತನ್ನ ಇಚ್ಛಾಮಾತ್ರದಿಂದಲೇ ಜಗತ್ತನ್ನು ಸೃಷ್ಟಿಸುವನು. ಇದರಿಂದ ಜಗತ್ಸೃಷ್ಟಿಕರ್ತನಾದ ಶ್ರೀಪರಮಾತ್ಮನಿಗೆ ವಿಧಾತ ಎಂದು ಹೆಸರು. ಸರ್ವಾ ಧಾರಕನೂ, ಸರ್ವರ ಪೋಷಕನೂ ಆದ್ದರಿಂದ "ವಿಧಾತ" ನಾಮಕನು.

(೪) ಏತಾದೃಶ ಮಹಿಮೋಪೇತನಾದ ಶ್ರೀ ಪರಮಾತ್ಮನಿಗೆ ಸಮ ರ್‍ಯಾರೂ ಇಲ್ಲ. ಅಧಿಕರಂತೂ ಇಲ್ಲವೇ ಇಲ್ಲ. ಅತ ಏವ ಸರ್ವೋತ್ತಮನಾದ್ದ ರಿಂದ, ಸರ್ವಶ್ರೇಷ್ಠವಾದ ಈ ಭಗವದ್ವಸ್ತುವು **ವಿಗತಾಭ್ಯಧಿಕಸಮ** ನೆನಿಸಿ ಪ್ರಸಿದ್ಧನಾಗಿದ್ದಾನೆ. ಅಂದರೆ ಸಮಾಭ್ಯಧಿಕಶೂನ್ಯನೆಂದರ್ಥ.

(೫) ಇಂತ ಸಮಾಭ್ಯಧಿಕರಹಿತನಾದ ಸರ್ವೋತ್ತಮನು ಸರ್ವಜೀವರು ಗಳಲ್ಲಿ ನಿಷ್ಪಕ್ಷಪಾತನಾಗಿದ್ದುಕೊಂಡು, ಅವರಲ್ಲಿ ಸ್ನೇಹವಾಗಲೀ, ಉದಾಸೀನ ವಾಗಲೀ, ದ್ವೇಷವಾಗಲೀ ಇಟ್ಟುಕೊಳ್ಳದೆ, ತಾನು ನಿರ್ಲಿಪ್ತನಾಗಿದ್ದುಕೊಂಡು, ಆಯಾಯಾ ಜೀವರ ಯೋಗ್ಯತೆ ಮತ್ತು ಕರ್ಮಗಳಿಗನುಸಾರವಾಗಿ ವ್ಯಾಪಾರ ಮಾಡುವುದರಿಂದ **ಸಮವರ್ತಿ** ಎಂದೆನಿಸಿದ್ದಾನೆ. ಅಂದರೆ ಸಮಸ್ತ ಜೀವರಲ್ಲಿ "ಸಮ" ನೆನಿಸಿದ್ದಾನೆ. "ವರ್ತಿ" ಎಂದರೆ ವರ್ತಿಸುವವನು ಅಥವಾ ಕ್ರೀಡಾದಿ ಗಳನ್ನು ನಡೆಯಿಸುವವನು ಎಂದು ಒಂದು ಅರ್ಥ. ಇನ್ನೊಂದು "ದೀಪದ ಬತ್ತಿ" ಎಂದಾಗುವುದು. ಬತ್ತಿಯ ಜ್ವಾಲೆಯು ತೈಲವನ್ನು ಅನುಸರಿಸಿ ಹೇಗೆ ಇರುವುದೋ, ಜೀವರ ಯೋಗ್ಯತೆ ಮತ್ತು ಕರ್ಮಗಳು ತೈಲವಿದ್ದಂತೆ. ತೇಜೋಮಯನಾದ ಸ್ವಾಮಿ ವರ್ತಿ ಇದ್ದಂತೆ. ಇದರಿಂದ "ಸಮವರ್ತಿ"ಯು,

(೬) ಸಾಮವೇದದಿಂದ ಪ್ರತಿಪಾದ್ಯನು, ಸಾಮವೇದದಲ್ಲಿ ಶ್ರೀಪರಮಾತ್ಮನು ವಿಶೇಷ ಸನ್ನಿಧಾನಯುಕ್ತನಾಗಿ ವಿಭೂತಿರೂಪದಿಂದಿರುವನು. ಇದರಿಂದ **ಸಾಮಗ** ನೆಂದು ಕರೆಸುವನು. ಸಂಗೀತಪ್ರಿಯನಾದ್ದರಿಂದ ಸಾಮವೇದದಿಂದ ಗಮ್ಯನೆಂದರ್ಥ.

(೭) ಬ್ರಹ್ಮಾದಿ ಸಮಸ್ತ ದೇವತಾವರ್ಗದಿಂದ ಸಂಪೂಜ್ಯನು. ತ್ರಿದಶರು ಎಂದರೆ ದೇವತೆಗಳು. ಗಣ-ಎಂದರೆ ಅವರ ಸಮೂಹ. ಅಂತಹ ದೇವತಾಗಣದಿಂದ ಸಂಸೇವ್ಯಮಾನನಾಗಿರುವುದರಿಂದ **ತ್ರಿದಶಗಣಸಂಪೂಜ್ಯನು.**

(೮) ವೈಕುಂಠ, ಅನಂತಾಸನ ಮತ್ತು ಶ್ವೇತದ್ವೀಪಗಳೆಂಬ ಮೂರು ಮುಕ್ತಧಾಮುಗಳಲ್ಲಿರುವವನು, "ಕಕುತ್"-ಎಂದರೆ ಗೂಳಿಯ ಹೆಗಲು. (ವೃಷಭಸ್ಕಂಧ) ಅದು ಗೂಳಿಯ ಶರೀರಕದಲ್ಲಿ ಉನ್ನತವಾದ ಭಾಗವು. ಅಂತೆಯೇ ಪೂರ್ವೋಕ್ತ ಮುಕ್ತಧಾಮುಗಳು ಅತ್ಯುನ್ನತ ಅಂದರೆ ಶ್ರೇಷ್ಠವಾದ ಸ್ಥಾನಗಳಾಗಿರುವುದರಿಂದ, **ತ್ರಿಕಕುದ್ಧಾಮನು.** ಲೌಕಿಕ ದೃಷ್ಟಿಯಿಂದ ಪರಿಗಣಿಸಿದರೆ, ಆಧ್ಯಾತ್ಮಿಕ, ಆಧಿಭೌತಿಕ ಮತ್ತು ಆದಿದೈವಿಕ ಎಂಬ ತಾಪತ್ರಯಗಳನ್ನು ಪರಿಹರಿಸುವನಾದ್ದರಿಂದ (ಕಕುತ್ = ಕುತ್ಸಿತಗೊಳಿಸು-ಪರಿಹರಿಸು) ತ್ರಿಕಕುದ್ಧಾಮ ಎಂದು ಶ್ರೀವಾದಿರಾಜಾಚಾರ್ಯರ ವ್ಯಾಖ್ಯಾನದ ಅರ್ಥವಿದೆ.

(೯) ಶ್ರೀಪರಮಾತ್ಮನ ನಾಮುಗಳೇ ಪರಮಮಂಗಳಕರ. ಸಮಸ್ತ ಪಾಪಪರಿಹಾರಕ ಶಕ್ತಿಉಳ್ಳದ್ದು. ಮಂಗಳನಾಮಧೇಯನಾದ್ದರಿಂದ **ಶುಭನಾಮ** ನೆನಿಸಿದ್ದಾನೆ.

(೧೦) ಮಧು ಎಂಬ ದೈತ್ಯನನ್ನು ಸಂಹಾರಮಾಡಿದ್ದರಿಂದ **ಮಧುಮಥನನು.**

(೧೧) ಭೃಗು ಕುಲೋದ್ಭವನಾದ ಪರಶುರಾಮಾವತಾರಿಯಾದ ಶ್ರೀಪರಮಾತ್ಮನು **ಭೃಗುರಾಮ** ನಾಮಕನು.

ಭೃಗು ಎಂದರೆ ಮರ್ಮವಾಗಿ ಇರತಕ್ಕ ಸ್ವರೂಪವನ್ನು ಜೀವರಿಗೆ ಅಭಿವ್ಯಕ್ತಿಗೊಳಿಸಿ, ಮೋಕ್ಷದಲ್ಲಿ ಮುಕ್ತರ ಸಂಗಡ ವಿಹರಿಸುವುದರಿಂದ (ರಾಮ) "ಭೃಗುರಾಮ" ನೆಂದು ಹೆಸರು. (ಸಂಕರ್ಷಣ ಒಡೆಯರ ವ್ಯಾಖ್ಯಾನದ ಪ್ರಕಾರ)

(೧೨) ಶ್ರೀಪರಮಾತ್ಮನು ಹಯಗ್ರೀವ ರೂಪವನ್ನು ಧರಿಸುವನು. ಇದು ಜ್ಞಾನಪ್ರದರೂಪವು. ಕುದುರೆಯಂತೆ (ಘೋಟಕ) ಮುಖವುಳ್ಳವನು. (ವದನ) ಇದರಿಂದ ಹಯಗ್ರೀವ ನಾಮಕನಾದ **ಘೋಟಕವದನನು.**

(೧೩) ಇಂತು, ಮಧುಸೂದನ, ಪರಶುರಾಮ, ಹಯಗ್ರೀವ ಮುಂತಾದ ಮಂಗಳನಾಮಧೇಯನಾದ ಶ್ರೀಪರಮಾತ್ಮನು ಬ್ರಹ್ಮಾಂಡದ ಒಳಗೆ ಮತ್ತು ಹೊರಗೆ ಸರ್ವತ್ರ, ಅಣುರೇಣುತೃಣಕಾಷ್ಠಾದಿ ವಸ್ತುಗಳಲ್ಲಿ ಪರಿಪೂರ್ಣನಾಗಿ ವ್ಯಾಪಿಸಿದ್ದಾನೆ. (ತುದಿಮೊದಲು ತುಂಬಿಹನು). ಈ ರೀತಿ ಸರ್ವತ್ರ ಖಂಡಾಖಂಡ ರೂಪಗಳಿಂದ ಜಗದ್ಭರಿತನಾದ ಶ್ರೀಪರಮಾತ್ಮನೇ ನಿನ್ನ ಬಿಂಬನೆಂದು ತಿಳಿದು, ಸರ್ವಗತ ಭಗವದ್ರೂಪಗಳನ್ನು ಚಿಂತಿಸುತ್ತಾ ಅವುಗಳನ್ನು ಸ್ವಬಿಂಬನಲ್ಲಿ ಐಕ್ಯ ಚಿಂತನೆಯಿಂದ ಧ್ಯಾನಿಸಬೇಕೆಂದು ಈ ಪದ್ಯದ ತಾತ್ಪರ್ಯ. ॥೩೩॥

## ಪದ್ಯ (೩೪)

**ಮೂಲ :–**

**ಕನ್ನಡಿಯ ಕೈವಿಡಿದು ನೋಡಲು ।**
**ತನ್ನಿರವ ಸವ್ಯಾಪಸವ್ಯದಿ ।**
**ಕಣ್ಣಿಗೊಪ್ಪುವ ತೆರದಿ ಅನಿರುದ್ಧಗೆ ಈ ಜಗವು ॥**
**ಭಿನ್ನ ಭಿನ್ನವ ತೋರುತಿಪ್ಪುದು ।**
**ಜನ್ಯವಾದುದರಿಂದ ಪ್ರತಿ ಬಿಂ ।**
**ಬನ್ನಮಯಗಾನೆಂದರಿದು ಪೂಜಿಸಲು ಕೈಕೊಂಬ ॥೩೪॥**

**ಅವತರಣಿಕೆ :-**

ಕನ್ನಡಿಯಲ್ಲಿ ಉಂಟಾಗುವ ನಮ್ಮ ಪ್ರತಿಬಿಂಬವು ಪಾರ್ಶ್ವಪಲ್ಲಟದ ದೆಸೆಯಿಂದ ಎಡಭಾಗವು ಬಲಭಾಗವಾಗಿಯೂ. ಬಲವು ಎಡವಾಗಿಯೂ ಕಾಣಿಸುವುದು. ಅಂತೆಯೇ, ಈ ಜಗತ್ತು ಅನಿರುದ್ಧ ನಾಮಕನಾದ ಶ್ರೀಪರಮಾತ್ಮನಿಗೆ ಪ್ರತೀಕವೆನಿಸುವುದು. ಶ್ರೀಹರಿಯು ಈ ಜಗತ್ತಿಗೆ ಸೃಷ್ಟಿಕರ್ತನಾದ್ದರಿಂದ ಜನಕನು. ಜಗತ್ತು ಜನ್ಯವೆಂದೆನಿಸುವುದು. ಚೇತನವರ್ಗ ಮತ್ತು ಜಡವರ್ಗಗಳಿಂದ ಅತ್ಯಂತ ಭಿನ್ನನಾದ, ಅಂತಹ ಬಿಂಬರೂಪಿಯೂ ಜಗದ್ವಿಲಕ್ಷಣ ಶ್ರೀಪರಮಾತ್ಮಗೆ ನಾನು ಪ್ರತಿಬಿಂಬನು ಎಂದು ತಿಳಿದು, ಪೂಜಾದಿಗಳನ್ನು ಸಲ್ಲಿಸಲು,ಅದನ್ನು ಸ್ವೀಕರಿಸಿ, ಅನುಗ್ರಹಿಸುವನು ಎಂದು ತಿಳಿಸುತ್ತಾರೆ. **"ಕನ್ನಡಿ"**-ಎಂಬ ಪ್ರಸಕ್ತ ಸಂಧಿಗತ ೩೪ ನೆಯ ಈ ಪದ್ಯದಿಂದ. ||೩೪||

**ಪ್ರತಿಪದಾರ್ಥ :-**

**ಕನ್ನಡಿಯ**=ದರ್ಪಣವನ್ನು **ಕೈವಿಡಿದು**=ಕೈಯಲ್ಲಿ ಹಿಡಿದುಕೊಂಡು **ನೋಡಲು**=ನೋಡಿದಾಗ **ತನ್ನಿರವು**=ತನ್ನ ರೂಪವು (ಪ್ರತಿಬಿಂಬವು) **ಸವ್ಯಾಪಸವ್ಯದಿ**=ಎಡ ಬಲ ವ್ಯತ್ಯಾಸವಾಗಿ (ಪಾರ್ಶ್ವಪಲ್ಲಟವಾಗಿ) **ಕಣ್ಣಿಗೊಪ್ಪುವ ತೆರದಿ**=ಕಣ್ಣಿಗೆ ಕಾಣಿಸುವಂತ **ಅನಿರುದ್ಧಗೆ**=ಅನಿರುದ್ಧನಾಮಕ ಶ್ರೀಪರಮಾತ್ಮನಿಗೆ (ಸೂಕ್ಷ್ಮ ಸೃಷ್ಟಿಗೆ ಕಾರಣರೂಪ) **ಈ ಜಗವು**=ಈ ಜಗತ್ತಿನಲ್ಲಿರುವ ಜೀವರು (ಜಗಚ್ಛಬ್ದ ಜೀವಪರ) **ಭಿನ್ನಭಿನ್ನವೆ**=ಪರಸ್ಪರ ಬೇರೆಬೇರೆಯಾಗಿ **ತೋರುತಿಪ್ಪುದು**=ಕಾಣಿಸುತ್ತಾರೆಯೇ ಹೊರತು ಏಕರಾಗಿ ತೋರುವುದಿಲ್ಲ. **ಜನ್ಯನಾದುದರಿಂದ**=ಬಿಂಬರೂಪನಾದ ಶ್ರೀಪರಮಾತ್ಮನ ದೆಸೆಯಿಂದ ಪ್ರಳಯಕಾಲದಲ್ಲಿ ಉದರ ಪ್ರವೇಶಮಾಡಿ, ಸೃಷ್ಟಿಕಾಲದಲ್ಲಿ ಉದರದಿಂದ ಹೊರಗೆ ಬಂದ (ಸ್ಕೃಷ್ಟರಾದ) ಭಿನ್ನಾಂಶರಾದ ಜೀವರು **ಪ್ರತಿಬಿಂಬನ್ನ**=ಪ್ರತಿಬಿಂಬಭೂತನಾದ ಜೀವನು **ಅನ್ನಮಯಗೆ**=ಅನ್ನಮಯನಾದ ಶ್ರೀಪರಮಾತ್ಮನಿಗೆ **ಆನೆಂದು**=ನಾನು ಎಂಬುದಾಗಿ **ಅರಿದು**=

ತಿಳಿದು ಪೂಜಿಸಲು=ಜ್ಞಾನಾನುಸಂಧಾನದಿಂದ ಪೂಜೆಮಾಡಲು ಕೈಕೊಂಬ=ಅಂಥಾ ಪೂಜೆಯನ್ನು ಸ್ವೀಕಾರ ಮಾಡುವನು. ॥೩೪॥

## ವ್ಯಾಖ್ಯಾನಗಳು

### (೧) ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ:-

ಜೀವಗೆ ಜೀವಗತ ಪರಮಾತ್ಮಗೆ ಭೇದ ಎಂದು ಹೇಳುತ್ತಾರೆ. ಕನ್ನಡಿಯ-ದರ್ಪಣವನ್ನು, ಕೈಪಿಡಿದು ನೋಡಲು-ಕರದಲ್ಲಿ ಹಿಡಕೊಂಡು ನೋಡಿದರೆ. ತನ್ನರೂಪ-ತನ್ನ ರೂಪವು ತನಗೆ ಎದುರಾಗಿ, ಸವ್ಯ-ಸವ್ಯವಾಗಿ ಪ್ರತಿಫಲಿಸದೆ, ಅಪಸವ್ಯದಿ-ಅಪಸವ್ಯವಾಗಿ, ಕಣ್ಣಿಗೊಪ್ಪುವ ತೆರದಿ-ಕಣ್ಣಿಗೆ ದೃಷ್ಟಿವಾಗೋಪಾದಿಯಲ್ಲಿ, ಅನಿರುದ್ಧಗೆ ಈ ಜಗವು-ಶ್ರೀಅನಿರುದ್ಧರೂಪಿ ಪರಮಾತ್ಮನಿಗೆ (ಜಗಚ್ಛಬ್ದ ಜೀವಪರ) ಈ ಜೀವರು ಭಿನ್ನಾಂಶರು ಆಗಿ, ಭಿನ್ನ ಭಿನ್ನವೆ-ಶ್ರೀಪರಮಾತ್ಮನಿಂದ ಭಿನ್ನರಾಗಿ ಹಾಂಗೆ ಜೀವರು ಪರಸ್ಪರ ಸಮಾನರಲ್ಲ. ಭಿನ್ನರಾಗೇವೇ ತೋರುತಿಪ್ಪದು-ತೋರತ್ತಾರೇ ಹೊರ್ತು ಏಕರಾಗಿನೂ ಪರಮಾತ್ಮನಂತೆ ತೋರೋದಿಲ್ಲ. (ದರ್ಪಣ ನೋಡತಕ್ಕ ಪುರುಷನ ದೃಷ್ಟಾಂತ) ಜನ್ಯವಾದುದರಿಂದ-ಪ್ರಳಯ ಕಾಲದಲ್ಲಿ ಪರಮಾತ್ಮನ ಉದರ ಪ್ರವೇಶರಾಗಿ,ಸೃಷ್ಟಿಕಾಲದಲ್ಲಿ ಮೂಲರೂಪದಿಂದ ಅವತಾರಗಳು ಹೊರಟಂತೆ, ಮೂಲರೂಪನಾದ ಶ್ರೀಪರಮಾತ್ಮನ ಉದರದಿಂದ ಜೀವರು ಹೊರಗೆ ಹೊರಡುತ್ತಾರೆ. ಆದ್ದರಿಂದಲೇ ಮೂಲರೂಪದಿಂದ ಹೊರಟ ರಾಮಕೃಷ್ಣಾದ್ಯವತಾರಗಳು ಅಭಿನ್ನಾಂಶರು ಎಂತಲೂ, ಅದೇ ಪ್ರಕಾರ ಮೂಲರೂಪ ಉದರಗತರಾಗಿ ಹೊರಟ ಜೀವರು ಭಿನ್ನಾಂಶರೆಂತಲೂ ಕರೆಸುತ್ತಾರೆ. ಬಿಂಬನ್ನ- ಜೀವಗೆ, ಬಿಂಬನಾದ ಶ್ರೀಪರಮಾತ್ಮನ್ನ, ಪ್ರತಿಬಿಂಬನ್ನ-ಪ್ರತಿಬಿಂಬನಾದ ಜೀವನ್ನ. ಮಯಟ್-ಮಯಚ್ಛಬ್ದ ಪ್ರಾಚುಯಾರ್ಥ (ಪ್ರಾಚುರ್ಯಾರ್ಥೆ ಮಯಟ್ ಪ್ರತ್ಯಯಃ) ಜೀವಾಂತರ್ಗತನಾಗಿ ಜೀವಾಕಾರದಂತೆ ಪ್ರಾಚುರ್ಯವಾಗಿ,ಅನಾದಿಯಿಂದ ಇರತಕ್ಕವನು, ಶ್ರೀಬಿಂಬರೂಪಿ ಪರಮಾತ್ಮನು. ಸ್ಥೂಲ ಶರೀರದಲ್ಲಿ ಜೀವಗೆ ಎದುರಾಗಿನ್ನೂ, ದೇಹಾಕಾರ ವ್ಯಾಪ್ತಿಯಲ್ಲಿ ತತ್ಪ್ರತಿಯಾಗಿನ್ನೂ ಜೀವನ ಸ್ವರೂಪದಲ್ಲಿ ಜೀವಾಕಾರದಂತೆ

ಹೃದಯ ಅಷ್ಟದಳ ಕಮಲ ಕರ್ಣಿಕಾದ ಮ್ಯಾಲೆ ಇರತಕ್ಕ ಅಗ್ರೇಶನಾಮಕನು, ಪೂಜಿಸಲು-ಅನುಸಂಧಾನದಿಂದ ಪೂಜಾಮಾಡಲು, ಕೈಕೊಂಬ-ಇಂಥಾ ಪೂಜೆಯನ್ನು ಸ್ವೀಕಾರ ಮಾಡುವ, ದರ್ಪಣ ದೃಷ್ಟಾಂತದಿಂದ ಪ್ರತಿಬಿಂಬನಾದ ಜೀವಗೂ, ಬಿಂಬನಾದ ಪರಮಾತ್ಮಗೂ ಭೇದ ಇದು ಎಂತ ತಾತ್ಪರ್ಯ.॥೩೪॥

(೨) "ಭಾವಪ್ರಕಾಶಿಕೆ"-ವ್ಯಾಖ್ಯಾನ :—

ಅನಿರುದ್ಧನಾಮಕ ಶ್ರೀಪರಮಾತ್ಮಗೆ ಈ ಜಗತ್ತು ಪ್ರತಿಬಿಂಬರೂಪವೆಂದು ಹೇಳುತ್ತಾ, ಮೇಲಿನ ಪದ್ಯಗಳಲ್ಲಿ ಹೇಳಿದ ವ್ಯಾಪ್ತ್ಯುಪಾಸನೆಯಿಂದ ಪ್ರಾಪ್ತವಾಗುವ ಜೀವ ಪರಮಾತ್ಮರ ಅಭೇದ ಸಂಶಯವನ್ನು ಪರಿಹರಿಸುತ್ತಾರೆ. ಹೇಗೆಂದರೆ :— ದೇಹವೇ ರಥವು. ಪರಮಾತ್ಮನೇ ರಥಿಕನು. ಇತ್ಯಾದಿ ವಾಕ್ಯಗಳಿಂದ ಪರಮಾತ್ಮನ ವ್ಯತಿರಿಕ್ತ ಜೀವನಿಲ್ಲವೋ ಏನೋ ಎಂಬ ಸಂಶಯ ಬಂದೀತೆಂದು ಶಂಕಿಸಿ, "ಕನ್ನಡಿಯ ಕೈವಿಡಿದು"-ಎಂಬ ಪದ್ಯದಿಂದ ಪರಿಹರಿಸುತ್ತಾರೆ.

ಕನ್ನಡಿಯನ್ನು ಕೈಯಲ್ಲಿ ಹಿಡಿದು, ತನ್ನ ಮುಖದ ಪ್ರತಿಬಿಂಬವನ್ನು ನೋಡಿದರೆ, ಎಡ ಬಲವಾಗಿಯೂ, ಬಲ ಎಡವಾಗಿಯೂ ಕಾಣಿಸುವಂತೆ ಶ್ರೀ ಅನಿರುದ್ಧನಾಮಕ ಶ್ರೀಪರಮಾತ್ಮನಿಗೆ ಈ ಜಗತ್ತಿನಲ್ಲಿರುವ ಸಕಲ ಪ್ರಾಣಿಗಳೂ ಕನ್ನಡಿಯಲ್ಲಿ ಕಾಣಿಸುವ ಪ್ರತಿಬಿಂಬದಂತೆಯೇ ಬೇರೆ ಬೇರೆ ಪ್ರತಿಬಿಂಬಗಳಾಗಿ ಕಾಣಿಸುವುವು. ಇದರಿಂದ ಬಿಂಬರೂಪಿಗಳಾದ ಮನುಷ್ಯಾದಿಗಳಿಗೂ, ಕನ್ನಡಿಯಲ್ಲಿ ಕಾಣುವ ಪ್ರತಿಬಿಂಬಗಳಿಗೂ ಹೇಗೆ ಭೇದಗಳೋ ಹಾಗೆ, ಪರಮಾತ್ಮನಿಗೂ ಪ್ರತಿಬಿಂಬರೂಪಿಗಳಾದ ಜೀವರಿಗೂ ಭೇದ ಉಂಟೆಂದು ಹೇಳಿದಂತಾಯಿತು. ಬಿಂಬರೂಪಿಯಾದ ಅನಿರುದ್ಧದೇವರಿಂದ ಈ ಜಗತ್ತು ಹುಟ್ಟಿದುದರಿಂದ ಜೀವರಿಗೆ ಪ್ರತಿಬಿಂಬರೆಂದು ಹೇಳಬೇಕಾಯಿತು. ಅನ್ನಮಯನಾದ ಪರಮಾತ್ಮನು ಒಳಗಿದ್ದು ಅನ್ನಾದಿಗಳನ್ನು ಸ್ವೀಕರಿಸಿ, ಜೀವರನ್ನು ತೃಪ್ತಿಪಡಿಸುವುದರಿಂದ ಅನ್ನಮಯನೆಂದು ತಿಳಿದು, "ಬಿಂಬೋಸಿ ಪ್ರತಿಬಿಂಬೋಸ್ಮಿ" "ನೀನು ಬಿಂಬನು. ನಾನು ಪ್ರತಿಬಿಂಬನು" ಎಂದು ತಿಳಿದು, ಭಕ್ತಿಯಿಂದ ಪರಮಾತ್ಮನನ್ನು ಪೂಜಿಸಲು ಪರಮಾತ್ಮನು ಸ್ವೀಕರಿಸಿ ನಮ್ಮನ್ನು ರಕ್ಷಿಸುವನು. ॥೩೪॥

(೩) "ಭಾವದರ್ಪಣಟೀಕಾ" ವ್ಯಾಖ್ಯಾನ:—

ಕನ್ನಡಿ ಹಿಡಿದು ನೋಡಿದ ಪುರುಷಗೆ ತನ್ನ ಇರವು, ಅಂದರೆ, ಇರುವಿಕೆಯು ತನ್ನ ಆಕಾರವೆಂತಲೇ ತಿಳಿಯುತ್ತದೆ, ಇದು ಸವ್ಯಾಪಸವ್ಯದಿಂದ ಹ್ಯಾಂಗೆ ತೋರುತ್ತದೋ, ತದ್ವತ್ ಶ್ರೀಹರಿಗೆ ಈ ಜಗತ್ತು ಹಾಗೆ ತೋರುತ್ತದೆಂದು ಹೇಳುತ್ತಾರೆ–"ಕನ್ನಡಿ"-ಎಂಬ ಪದ್ಯದಿಂದ.

ಅನ್ನಮಯಗೆ ಆನೇ ನಾನೇ ಪ್ರತಿಬಿಂಬ ಎಂತ ಭಕ್ತಿಯಲಿ ಪೂಜಿಸಿದರೆ, ಕೈಕೊಂಬ-ಸ್ವೀಕರಿಪ ಎಂಬರ್ಥ. ಜಗ ಎಂದರೆ, ಜೀವರು ಎಂಬರ್ಥ. ॥೩೪॥

(೪) ಶ್ರೀ ವಾದಿರಾಜಾಚಾರ್ಯರ ವ್ಯಾಖ್ಯಾನ :

"ಕನ್ನಡಿಯ" ಇತಿ ॥ ಇರುವ ಆಕಾರ. ಅನ್ನಮಯಗ ಅನು-ನಾನು॥ "ಕನ್ನಡಿಯ ಕೈವಿಡಿದು"-ಎಂಬ ಪ್ರಸಕ್ತ ಪದ್ಯದಲ್ಲಿ ಇರವ, ಎಂದರೆ ತನ್ನ ಆಕಾರವೆಂದರ್ಥ. ಅನ್ನಮಯದ=ಅನ್ನಮಯ ಶಬ್ದವಾಚ್ಯನಾಗಿ ಕೋಶಗತನಾದ ಶ್ರೀ ಅನಿರುದ್ಧನಾಮಕ ಶ್ರೀಹರಿಗೆ ಆನು=ನಾನು ಪ್ರತಿಬಿಂಬ ಎಂದು ಪೂಜಿಸಲು ಆದನ್ನು ಶ್ರೀ ಅನಿರುದ್ಧರೂಪೀ ಹರಿಯು ಸ್ವೀಕರಿಸುವನು ಎಂದು ಪದ್ಯದ ಭಾವಾರ್ಥವು. ॥೩೪॥

(೫) "ಗುರುಹೃದಯ ಪ್ರಕಾಶಿಕೆ" ವ್ಯಾಖ್ಯಾನ :–

ಜೀವ ಜಡಾತ್ಮಕ ಪ್ರಪಂಚ ದೇವರಿಗೆ ಪ್ರತಿಬಿಂಬವಾದ್ದರಿಂದ ಭೇದ ಸಿದ್ಧವೆಂದು ನಿರೂಪಿಸುತ್ತಾರೆ-"ಕನ್ನಡಿ" ಎಂದು.

ಬಣ್ಣಗಳಿಂದ ಭಾವಚಿತ್ರ ನಿರ್ಮಾಣದಂತೆ, ಕನ್ನಡಿಯನ್ನು ನೋಡಲು, ಆ ಕನ್ನಡಿ ರಸದ ಶಕ್ತಿಯಿಂದ ಕನ್ನಡಿ ನೋಡುವವನ ಆಕಾರ ಸವ್ಯಾಪಸವ್ಯವೆಂಬ ಎಡಬಲಭಾಗ ವ್ಯತ್ಯಾಸದಿಂದ ನಿರ್ಮಿತವಾಗಿ, ತನಗೆ ಪ್ರತ್ಯೇಕ ಕಾಣಿಸುವಂತೆ, ಜಗನ್ನಿರ್ಮಾಣ ಮಾಡಿದ ಅನಿರುದ್ಧ ದೇವರಿಗೆ, ಹುಟ್ಟಿದ ಈ ಜಗತ್ತು ಅಸ್ವಂತಾತ್ರ್ಯಾದಿ ವ್ಯತ್ಯಾಸ ರೂಪವಾದ್ದರಿಂದ, ಭಗವಂತನಿಗೆ ಬೇರೆಬೇರೆ ಪ್ರತ್ಯೇಕ

ವಾಗಿಯೇ ಇರುವುದು. ಜೀವನು ದೇವರ ಪ್ರತಿಬಿಂಬ ತಾನೆಂದರಿತು ಪೂಜಿಸಲು ಪೂಜೆಯನ್ನಂಗೀಕರಿಸುವನು.

"ಬಿಂಬೋಸಿ ಪ್ರತಿಬಿಂಬೋಸ್ಮಿ"
–ಇತ್ಯಾದ್ಯರ್ಥ ಇದರಿಂದ ವಿವರಿಸಿತು. ||೩೪||

## ಸರ್ವವ್ಯಾಖ್ಯಾನಸಾರ ಸಂಗ್ರಹ

ಜಗದ್ವಿಲಕ್ಷಣನಾದ ಬಿಂಬರೂಪಿ ಶ್ರೀ ಪರಮಾತ್ಮನಿಗೆ ಸಕಲ ಚೇತನರೂ ಪ್ರತಿಬಿಂಬರೆಂದು ಕನ್ನಡಿಯ ದೃಷ್ಟಾಂತದಿಂದ ವಿವರಿಸುತ್ತಾರೆ ಪ್ರಸಕ್ತ ಪದ್ಯದಿಂದ.

ದರ್ಪಣವು ಬೆಳಕನ್ನು ಪ್ರತಿಫಲಿಸುವ ವಸ್ತು. ಕನ್ನಡಿಯ ಮುಂದೆ ನಾವು ನಿಂತಾಗ ನಮ್ಮ ಪ್ರತಿಬಿಂಬವು ಆ ಕನ್ನಡಿಯಲ್ಲಿ ಮೂಡುವುದು. ನಮ್ಮ ಇರವು ಅಥವಾ ಇರುವಿಕೆಯ ಆಕಾರವೇ ಪ್ರತಿಬಿಂಬವೆನಿಸುವುದು. ಈ ಪ್ರತಿಬಿಂಬ ವಸ್ತುವಿನಂತೆಯೇ ತದಾಕಾರದಾಗಿರುವುದು. ಆದರೆ ಬಿಂಬದ ಬಲಭಾಗವು ಪ್ರತಿಬಿಂಬದ ಎಡವಾಗಿಯೂ, ಬಿಂಬದ ಎಡವು ಪ್ರತಿಬಿಂಬದ ಬಲವಾಗಿಯೂ ಕಾಣಿಸುವುದು. ಈ ಎಡಬಲ ವ್ಯತ್ಯಾಸಕ್ಕೆ ಪಾರ್ಶ್ವಪಲ್ಲಟವೆನ್ನುವರು. ಈ ಪಾರ್ಶ್ವಪಲ್ಲಟದ ಕಾರಣದಿಂದಲೇ, ಪ್ರತಿಬಿಂಬವು ಸವ್ಯಾಪಸ್ಯವಾಗಿ ಕಾಣಿಸುವುದು. ಅಂತೆಯೇ ಸರ್ವತ್ರವ್ಯಾಪಕನಾಗಿ, ಸರ್ವಚೇತನರ ಅಂತರ್ಯಾಮಿಯಾಗಿರುವ ಶ್ರೀ ಪರಮಾತ್ಮನು **ಬಿಂಬನು**. ಚೇತನರು ಅವನ **ಪ್ರತಿಬಿಂಬರು**. ಸ್ವರೂಪ ದೇಹವೆಂಬ ಉಪಾಧಿಯೇ ದರ್ಪಣವು. ಕನ್ನಡಿಯಲ್ಲಿ ವಸ್ತುವಿನ ಪ್ರತಿಬಿಂಬವು, ವಸ್ತುವು ಕನ್ನಡಿಯ ಎದುರಿಗಿದ್ದಾಗ ಮಾತ್ರ ಮೂಡುವುದು. ಆದರೆ ಬಿಂಬನಾದ ಶ್ರೀ ಪರಮಾತ್ಮ, ಪ್ರತಿಬಿಂಬರಾದ ಚೇತನರು ಮತ್ತು ಉಪಾಧಿರೂಪವಾದ ಸ್ವರೂಪದೇಹ ಇವು ಮೂರೂ ಅನಾದಿನಿತ್ಯವಾದವು. ಈ ಮುಖ್ಯಾಂಶದಿಂದ ಪರಿಶೀಲಿಸಿದರೆ, ಅನಾದಿನಿತ್ಯನಾದ ಪ್ರತಿಬಿಂಬರೂಪನಾದ ಜೀವನು ಯಾವ ಆಕಾರ ರೂಪದಿಂದ ವಿಶಿಷ್ಟನಾಗಿದ್ದಾನೆಯೋ, ತದಾಕಾರ, ತದ್ರೂಪನಾಗಿ ಬಿಂಬನಾದ ಶ್ರೀ ಪರಮಾತ್ಮನಿ

ರುವನು, ಈ ಬಿಂಬ-ಪ್ರತಿಬಿಂಬ ಸಂಬಂಧವು ಅನಾದಿ ನಿತ್ಯವಾದದ್ದು. ಅನಿರುದ್ಧ ನಾಮಕ ಶ್ರೀ ಪರಮಾತ್ಮನು ಸೂಕ್ಷ್ಮಸೃಷ್ಟಿಗೆ ಮುಖ್ಯ ಕಾರಣನು. ಅಂತಹ ಶ್ರೀ ಪರಮಾತ್ಮನಿಂದ ಈ ಜಗತ್ತು ಸೃಷ್ಟಿಯಾಗಿರುವುದರಿಂದ, ಈ ಪ್ರಪಂಚವು ಅವನಿಂದ ಜನ್ಯವಾದುದು. ಸಮಸ್ತ ಚೇತನರಲ್ಲಿ ಅಂತರ್ಯಾಮಿತ್ವೇನ ತಾನು ಸ್ಥಿತನಾಗಿದ್ದುಕೊಂಡು, ಆ ಚೇತನನ ತದಾಕಾರ ತದ್ರೂಪವಾದ ತನ್ನ ಬಿಂಬರೂಪವನ್ನು ಅಲ್ಲಿ ಇಟ್ಟಿರುವುದರಿಂದ ಚೇತನರ ದ್ವಾರಾ ಸಕಲ ವ್ಯಾಪಾರಗಳೂ ಬಿಂಬಕ್ರಿಯಾದ್ವಾರಾ ನಡೆಯುತ್ತಿರುವುವು. ಶ್ರೀ ಪರಮಾತ್ಮನು ನಿಯಾಮಕನು. ಜೀವರು ನಿಯಮ್ಯರು. ಭಗವಂತನು ಸರ್ವತಂತ್ರ ಸ್ವತಂತ್ರನು. ಪ್ರತಿಬಿಂಬರಾದ ಜೀವರು ಭಗವದಧೀನರು. ಜೀವರದು ಪರಾಧೀನ ಕರ್ತೃತ್ವ, ಇದರಿಂದ ಸಮಸ್ತ ಜಡವರ್ಗ ಹಾಗೂ ಚೇತನ ವರ್ಗದಿಂದ ಬಿಂಬನಾದ ಶ್ರೀ ಪರಮಾತ್ಮನು ಅತ್ಯಂತ ಭಿನ್ನನಾಗಿದ್ದಾನೆ. ಇಂತಹ ಜೀವೇಶ ಮತ್ತು ಜಡೇಶ ಭೇದವೂ ಸಹ ಅನಾದಿನಿತ್ಯನಾಗಿರುವುದರಿಂದಲೇ ಅನಿರುದ್ಧನಾಮಕ ಶ್ರೀ ಪರಮಾತ್ಮನಿಗೆ ಜಗತ್ತು ಜನ್ಯವಾದುದರಿಂದ, ಸವ್ಯಾಪಸವ್ಯ ಲಕ್ಷಣದಿಂದ ಭೇದವಾಗಿಯೇ ಇದೆ. ಅನಿರುದ್ಧನು ಅನ್ನಮಯ ಕೋಶಾಧಿಮಾನಿಯು. ಅನ್ನನಾಮಕನಾಗಿ ಜಗದ್ವ್ಯಾಪ್ತನಾಗಿದ್ದಾನೆ. ಅಂತಹ ಅನ್ನಶಬ್ದವಾಚ್ಯನೂ, ಅನ್ನಮಯನೂ ಆದ ಅನಿರುದ್ಧನಾಮಕ ಶ್ರೀ ಪರಮಾತ್ಮನಿಗೆ "ನಾನು ಪ್ರತಿಬಿಂಬನಾಗಿದ್ದೇನೆ. ಬಿಂಬನಾದ ಶ್ರೀ ಪರಮಾತ್ಮನು ನನ್ನಿಂದ ಅತ್ಯಂತ ವಿಲಕ್ಷಣನು. ಈ ಭೇದ ಅನಾದಿನಿತ್ಯವಾದದ್ದು"-ಎಂಬ ಈಶ-ದಾಸ ಭಾವದಿಂದ, ಬಿಂಬ ಪ್ರತಿಬಿಂಬ ನ್ಯಾಯದಿಂದ ಬಿಂಬನಾದ ಆ ಪರಮಾತ್ಮನನ್ನು ಪೂಜಿಸಲು, ಅಂತಹ ಸೇವಾದಿಗಳನ್ನು ತಾನು ಸಂತೋಷದಿಂದ ಸ್ವೀಕರಿಸಿ, ನಮ್ಮನ್ನು ಉದ್ಧರಿಸುವನು. ಹಾಗಲ್ಲದೆ ಐಕ್ಯಭಾವನೆಯಿಂದಾಗಲೀ, ಸಮತ್ವ ಭಾವನೆಯಿಂದಾಗಲೀ ಅವನನ್ನು ಆರಾಧಿಸಿದರೆ,ನಿತ್ಯ ದುಃಖರೂಪನಾದ ಅಂಧಃತಮಸ್ಸು ಪ್ರಾಪ್ತಿಯಾಗುವುದು. ಇಲ್ಲಿ ಜಗವು ಎಂದರೆ ಜೀವಪರ ಎಂದರ್ಥ. ಜಡಾತ್ಮಕವಾದ ಈ ಜಗತ್ತು ಬಿಂಬನಿಗೆ ಆವಾಸಸ್ಥಾನವು. ಚೇತನರು ಪ್ರತಿಬಿಂಬರು. ॥೩೪॥

## ಪದ್ಯ (೩೫)

**ಮೂಲ :**

**ಬಿಂಬರೆನಿಪರು ಸ್ವೋತ್ತಮರು ಪ್ರತಿ ।**
**ಬಿಂಬರೆನಿಪರು ಸ್ವಾವರರು ಪ್ರತಿ ।**
**ಬಿಂಬ ಬಿಂಬಗಳೊಳಗೆ ಕೇವಲ ಬಿಂಬ ಹರಿಯೆಂದು ॥**
**ಸಂಭ್ರಮದಿ ಪಾಡುತಲಿ ನೋಡುತ ।**
**ಉಂಬುಡುವು ದಿಡುವುದು ಕೊಡುವುದೆ ।**
**ಲ್ಲಂಬುಜಾಂಬಕನಂಘ್ರಿ ಪೂಜೆಗಳೆಂದು ನಲಿದಾಡು ॥ ॥೩೫॥**

**ಅವತರಣಿಕೆ :-**

ಗುಣತಾರತಮ್ಯದಲ್ಲಿ ಉಚ್ಚರಾಗಿರುವವರು ಬಿಂಬರೆನಿಸುತ್ತಾರೆ. ಅವರಿಗಿಂತ ತಾರತಮ್ಯ ಕ್ರಮದಲ್ಲಿ ಕಡಿಮೆ ಇರುವ ಸ್ವಾವರರು. ಸ್ವೋತ್ತಮರಿಗೆ ಪ್ರತಿಬಿಂಬರೆನಸುತ್ತಾರೆ. ಆದರೆ ಪರಸ್ಪರ ಭೇದವಿರುವ ಪ್ರತಿಬಿಂಬರೂಪರಾದ ಈ ಚೇತನ ವರ್ಗಕ್ಕೆಲ್ಲಾ ಮುಖ್ಯ ಬಿಂಬನು ಶ್ರೀಪರಮಾತ್ಮನೊಬ್ಬನೇ. ಅವನೇ ಸಕಲರ ಬಿಂಬನೆಂದು ತಿಳಿದು, ಮನಸ್ಸಿನ ಉಲ್ಲಾಸದಿಂದ, ಆ ಬಿಂಬ ರೂಪವನ್ನು ಚಿಂತಿಸುತ್ತಾ, ಸ್ತೋತ್ರಮಾಡುತ್ತಾ ಸಂತೋಷದಿಂದಿರು. ನಾವು ಊಟ ಮಾಡುವುದು, ವಸ್ತ್ರ ಉಟ್ಟುಕೊಳ್ಳುವುದು, ಆಭರಣಗಳ ತೊಡಿಸಿ, ದಾನ ಮತ್ತು ಸ್ವೀಕಾರ ಇತ್ಯಾದಿ ಕ್ರಿಯಾವಿಶೇಷಗಳೆಲ್ಲವೂ ಬಿಂಬರೂಪಿಯಾದ ಶ್ರೀ ಪರಮಾತ್ಮನೇ ನಮ್ಮಲ್ಲಿ ನಿಂತು ಮಾಡಿ ಮಾಡಿಸುತ್ತಿರುವನು ಎಂಬ ಉತ್ತಮಾನುಸಂಧಾನಜ್ಞಾನದಿಂದ, ಆ ವ್ಯಾಪಾರಾದಿ ಕ್ರಿಯಾವಿಶೇಷಗಳೆಲ್ಲವೂ ಕಮಲದಳಾಯತಾಕ್ಷವಾದ ಆ ಸ್ವಬಿಂಬನ ಪೂಜೆಗಳೆಂದು ತಿಳಿದು, ಸಂಭ್ರಮದಿಂದ ನಲಿದಾಡುತ್ತಿರು ಎಂದು ಹೇಳುತ್ತಾರೆ- **"ಬಿಂಬರೆನಿಪರು"**- ಎಂಬ ಪ್ರಸಕ್ತ ಸಂಧಿಗತ ೩೫ ನೆಯ ಈ ಪದ್ಯದಿಂದ. ॥೩೫॥

**ಪ್ರತಿಪದಾರ್ಥ :-**

**ಸ್ವೋತ್ತಮರು**= ತಾರತಮ್ಯದಲ್ಲಿ ಉತ್ತಮರಾದ ಚೇತನರು **ಬಿಂಬ**

**ರೆನಿಪನು**=ತಮಗಿಂತಲೂ ತಾರತಮ್ಯದಲ್ಲಿ ಕಡಿಮೆ ಇರುವ ಚೇತನರಿಗೆ ಬಿಂಬ ರೆಂದು ಕರೆಯಿಸುತ್ತಾರೆ. **ಸ್ವಾವರರು**=ತಮಗಿಂತಲೂ ತಾರತಮ್ಯದಲ್ಲಿ ಅವರರಾದ ಚೇತನರು **ಪ್ರತಿಬಿಂಬರೆನಿಪರು**=ಸ್ವೋತ್ತಮರಿಗೆ ಪ್ರತಿ ಬಿಂಬರೆಂದು ಕರೆಯಿಸುತ್ತಾರೆ **ಪ್ರತಿಬಿಂಬ ಬಿಂಬಗಳೊಳಗೆ**=ಇಂತು ಸ್ವೋತ್ತಮರಾದ ಬಿಂಬರು ಮತ್ತು ಸ್ವಾವರರಾದ ಪ್ರತಿಬಿಂಬ ವರ್ಗಗಳಲ್ಲಿ **ಕೇವಲ ಬಿಂಬ**=ಪರಮ ಮುಖ್ಯ ವೃತ್ತಿಯಿಂದ ಸಕಲ ಚೇತನ ವರ್ಗಕ್ಕೂ ಮುಖ್ಯ ಬಿಂಬನು **ಹರಿ ಎಂದು**=ಶ್ರೀ ಪರಮಾತ್ಮನೇ ಆಗಿರುವನು ಎಂದು ತಿಳಿದು **ಸಂಭ್ರಮದಿ**=ಅತ್ಯಂತ ಸಂತೋಷದಿಂದ **ಪಾಡು ತಲಿ**=ಆ ಬಿಂಬನ ಮಹಾಮಹಿಮೆಗಳನ್ನು ಕೊಂಡಾಡುತ್ತಾ **ನೋಡುತ** =ದರ್ಶನ ಮಾಡುತ್ತಾ (ಅನಪರೋಕ್ಷಿಗಳಿಗೆ ಭಗವದ್ರೂಪಗಳ ಚಿಂತನೆಯೇ ಮನಸ್ಸಿನಲ್ಲಿ ಶ್ರೀಹರಿಯ ದರ್ಶನ**ವೆಂ**ದು ಭಾವ) **ಉಂಬುವ್ರದು**= ಭೋಜನಕ್ರಿಯೆ **ಉಡುವುದು**=ವಸ್ತ್ರಾದಿಗಳನ್ನು ಧರಿಸುವುದು **ಇಡು ವುದು**=ಆಭರಣಾದಿಗಳನ್ನು ಇಟ್ಟು ದೇಹಾಲಂಕಾರ ಮಾಡಿಕೊಳ್ಳುವುದು **ಕೊಡುವುದು**=ಪರರಿಗೆ ದಾನರೂಪವಾಗಿ ಕೊಡುವುದು **ಎಲ್ಲ**=ಈ ಯಾವತ್ತು ಕ್ರಿಯಾ ವಿಶೇಷಗಳೆಲ್ಲವೂ **ಅಂಬುಜಾಂಬಕನ**=ಕಮಲ ದಳಾಯತ ನೇತ್ರನಾದ ಬಿಂಬರೂಪೀ ಶ್ರೀಪರಮಾತ್ಮನ **ಅಂಘ್ರಿಪೂಜೆ ಗಳೆಂದು**=ಪಾದಾರವಿಂದಗಳಿಗೆ ಸಮರ್ಪಿಸುವ **ಪೂಜಾ** ವಿಶೇಷಗಳೆಂದು ಜ್ಞಾನಾನುಸಂಧಾನಪೂರ್ವಕ ತಿಳಿದು **ನಲಿದಾಡು**=ಆನಂದಪರವಶ ವಾಗಿ ಕುಣಿದಾಡುತ್ತಿರು. ॥೩೫॥

## ವ್ಯಾಖ್ಯಾನಗಳು

### (೧) ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ :-

ಜೀವರ ಸಮುದಾಯದಲ್ಲಿ ಅವರೊಳಗ, ಅವರಿಗೆ ಬಿಂಬ, ಪ್ರತಿಬಿಂಬ ವಿಚಾರ ಹೇಳುತ್ತಾರೆ.

ಬಿಂಬರೆನಿಪರು-ಸ್ಥೂಲ ದೇಹದಲ್ಲಿ ವ್ಯಾಪ್ತನಾದ ಪ್ರತಿಬಿಂಬನಾದ

ಜೀವಗೆ ದೇವತೆಗಳು ಸರ್ವರೂ ಬಿಂಬರೂಪರು ಎಂತ ಎನಿಸುತ್ತಾರೆ. ಆದ ರಲ್ಲಿ ತಾರತಮ್ಯದಿಂದ ದೇಹದಲ್ಲಿ ಸ್ವೋತ್ತಮ ಮತ್ತು ಸ್ವಾವರ ದೇವತೆಗಳು ದೇಹಾಕಾರದಿಂದ ಇದ್ದಾರೆ. ಅದರಲ್ಲಿ ದೇಹಗತ ಸ್ವೋತ್ತಮರು-ಸ್ವೋತ್ತಮ ದೇವತೆಗಳು ದೇಹಗತ ಸ್ವಾವರ ದೇವತೆಗಳಿಗೆ ಬಿಂಬರು ಎಂತ ಕರೆಸುತ್ತಾರೆ. ಸ್ವಾವರರು-ಸ್ವೋತ್ತಮರಿಗಿಂತ ಅವರರಾದ ದೇಹಗತ ದೇವತೆಗಳು ಪ್ರತಿಬಿಂಬ ರೆನಿಪರು-ಪ್ರತಿಬಿಂಬರು ಎಂತ ಕರೆಸುತ್ತಾರೆ. ದಾವ ಕಾರಣದಿಂದ ಎಂದರೆ, ದೃಷ್ಟಾಂತ :—ದೇಹವೇ ಬಿಂಬ. ದೇಹದ ನೆರಳು ಪ್ರತಿಬಿಂಬ. ದೇಹ ಆಡಿ ದರೆ ನೆರಳು ಆಡುತ್ತದೆ. ಹಿಂದೆ ಈ ವಿಷಯ ವಿವರವಾಗಿ ಹೇಳಿದೆ. ಈ ರೀತ್ಯಾ ದೇಹಗತ ದೇವತೆಗಳು ಜೀವ ಮೂಲಕವಾಗಿ ದೇಹದ್ವಾರಾ ಕರ್ಮ ಮಾಡಿಸಬೇಕಾದರೆ, ಬಿಂಬರಾದ ಸ್ವೋತ್ತಮರ ಕ್ರಿಯಾದ್ವಾರಾ ಅವರರಾದ ತಾವು ಕ್ರಿಯಾದಿಗಳು ಮಾಡುತ್ತಾರೆ. ಆದ್ದರಿಂದ ಸ್ವೋತ್ತಮ ದೇವತೆಗಳು ಬಿಂಬರೆಂತಲೂ, ಅವರರು ಪ್ರತಿಬಿಂಬರೆಂತಲೂ, ಕರೆಸೋವರಾದರು. ಈ ರೀತ್ಯಾ ಪ್ರತಿಬಿಂಬ ಬಿಂಬರೊಳಗೆ ಕೇವಲಬಿಂಬ ಮುಖ್ಯವಾಗಿ ಅಸದೃಶ ಬಿಂಬನು ಹರಿಯೆಂದು-ಶ್ರೀ ಪರಮಾತ್ಮನು ಎಂತಲೂ, ಇವಗೆ ನಿಯಾಮಕ ನಾದವ ಮತ್ತೊಬ್ಬ ಇಲ್ಲವೆಂತಲೂ ತಿಳಿದು, ಸಂಭ್ರಮದಿ -ಕೇವಲ ಸಂತೋಷ ದಿಂದ, ನೋಡುತ ಪಾಡುತಲಿ- ಜ್ಞಾನದೃಷ್ಟಿಯಿಂದ ಅನುಸಂಧಾನ ಮಾರ್ಗ ದಿಂದ ನೋಡುತ್ತಾ, ಅವರ ಮಹಾಮಹಿಮೆಗಳ ಕೊಂಡಾಡುತ್ತಾ, ಉಂಡು-ಭೋಜನ ಮಾಡತಕ್ಕ ದ್ರವ್ಯಗಳು, ಉಡುವುದು-ಧಾರಣ ಮಾಡತಕ್ಕ ವಸ್ತು ಗಳು, ಇಡುವುದು-ಧರಿಸತಕ್ಕ ಆಭರಣಾದಿಗಳು, ಕೊಡುವುದು-ಕರದಿಂದ ಅನ್ಯರಿಗೆ ಕೊಡುವ ಪದಾರ್ಥಗಳು, ಎಲ್ಲ-ಇದು ಯಾವತ್ತು ಪೂರ್ವೋಕ್ತ ಪ್ರಕಾರ ಬಿಂಬಕ್ರಿಯಾ, ಪ್ರತಿಬಿಂಬ ಕ್ರಿಯಾದಿಗಳು, ಅಂಬುಜಾಂಬಕನಂಘ್ರಿ-ಕಮಲದಳದೋಪಾದಿಯಲ್ಲಿ ನೇತ್ರಗಳು ಉಳ್ಳ, ದೇಹಾಂತರ್ಗತನಾದ ಶ್ರೀ ಪರಮಾತ್ಮನ ಪಾದಗಳಿಗೆ, ಪೂಜೆಗಳೆಂದು-ಪೂಜೆಗಳೆಂದು ಅರ್ಪಿಸುತ, ನಲಿ ದಾಡು-ಭೂಮಿಯಲ್ಲಿ ಸಂಚಾರ ಮಾಡುವನಾಗು. ಇದು ಯಾವತ್ತು ಶ್ರೀ ಪರಮಾತ್ಮನ ವ್ಯಾಪಾರ ಎಂತ ತಿಳಿದು ಸಂತೋಷಿತನಾಗು. ॥೩೫॥

## (೨) "ಭಾವಪ್ರಕಾಶಿಕೆ" ವ್ಯಾಖ್ಯಾನ:-

ಬಿಂಬ ಪ್ರತಿಬಿಂಬ ರೂಪಗಳನ್ನು ಎಲ್ಲೆಲ್ಲಿ ಚಿಂತಿಸಬೇಕೆಂಬುದನ್ನು ವಿವರಿಸುತ್ತಾರೆ.

**ಮಹಾಭಾರತ ತಾತ್ಪರ್ಯ ನಿರ್ಣಯ-ಅಧ್ಯಾಯ (೧)**

**"ಆಭಾಸ ಕೋಽಸ್ಯಪವನಃ ಪವನಸ್ಯ ರುದ್ರಃ ಶೇಷಾತ್ಮಕೋ ಗರುಡ ಏವ ಚ ಶಕ್ರ ಕಾವೌ ॥**
**ವೀಂದ್ರೇಶಯೋಸ್ತದಪರೇತ್ವನಯೋಶ್ಚತೇಷಾವ್ಯಷಾವ್ಯಷ್ಯಾದಯಃ ಕ್ರಮಶ ಊನಗುಣಾಃ ಶತಾಂಶಾತ್ ॥**

-ಎಂದರೆ, ಪರಮಾತ್ಮನ ಸಾಕ್ಷಾತ್ಪ್ರತಿಬಿಂಬರು ವಾಯುದೇವರು. ವಾಯುದೇವರ ಪ್ರತಿಬಿಂಬ ಭೂತರು ರುದ್ರದೇವರು. ಆ ರುದ್ರದೇವರೇ ಶೇಷಪಟ್ಟಕ್ಕೆ ಬರುವವರು. ಗರುಡನೂ ಸಹ ವಾಯುದೇವರ ಪ್ರತಿಬಿಂಬನು. ಗರುಡ ಶೇಷಾದಿಗಳ ಪ್ರತಿಬಿಂಬರು ಇಂದ್ರ ಮನ್ಮಥರು. ಇವರ ಕೆಳಗಿನವರು ಅವರ ಪ್ರತಿಬಿಂಬರೆಂತಲೂ, ಹೀಗೆ ಕ್ರಮವಾಗಿ ೧೦೦ ಗುಣಗಳು ಕಡಿಮೆಯಾದವರು ಋಷ್ಯಾದಿಗಳು. ಇವರೆಲ್ಲರೂ ಸ್ವೋತ್ತಮರ ಪ್ರತಿಬಿಂಬಗಳೆಂದು ಹೇಳಿರುವರು. ಇದೇ ಅಭಿಪ್ರಾಯವನ್ನೇ ದಾಸರಾಯರು ಇಲ್ಲಿ ಹೇಳುತ್ತಾರೆ. ನಮಗಿಂತಲೂ ಉತ್ತಮರನ್ನು ನಮಗೆ ಬಿಂಬರೂಪರೆಂತಲೂ, ನಮಗಿಂತಲೂ ನೀಚರು ನಮಗೆ ಪ್ರತಿಬಿಂಬರೆಂತಲೂ, ನಾವು ಸ್ವೋತ್ತಮರಿಗೆ ಪ್ರತಿಬಿಂಬರು. ಸ್ವಾವರರಿಗೆ ಬಿಂಬರೂಪಿಗಳಾಗಿರುವೆವು. ಈ ಬಿಂಬ ಜೀವರಿಗೂ ಪ್ರತಿಬಿಂಬ ಜೀವರಿಗೂ ಸಹ ಮುಖ್ಯವಾದ ಬಿಂಬರೂಪಿಯು ಪರಮಾತ್ಮನೆಂದು ತಿಳಿದು, ನಾವು ತಿನ್ನುವುದು, ಉಡುವುದು ಇಡುವುದು, ಕೊಡುವುದು-ಮೊದಲಾದ ಎಲ್ಲವೂ ನಮ್ಮಂತರ್ಯಾಮಿಯಾದ ಬಿಂಬರೂಪಿಯಾದ ಶ್ರೀಕಮಲಾಕ್ಷನ ಪೂಜೆ ಎಂದು ಭಾವಿಸಿ, ಸಂತೋಷ ಪಡಬೇಕೆಂದು ತಾತ್ಪರ್ಯ. ॥೩೫॥

## (೩) "ಭಾವದರ್ಪಣಟೀಕಾ" ವ್ಯಾಖ್ಯಾನ:-

ತನಗೆ ಉತ್ತಮರಾದವರೆಲ್ಲರೂ ಬಿಂಬರೆಂತಲೂ, ತನಗೆ ಅವರರಾದವರು

ಪ್ರತಿಬಿಂಬರೆಂತಲೂ, ಈ ಉಭಯ ಅಧಿಷ್ಠಾನಗತ ಹರಿಯೇ ಮುಖ್ಯ ಬಿಂಬನೆಂತಲೂ, ತಿಳಿದು ನೀನು ಮಾಡುವ ಸಕಲ ಕರ್ಮವೂ ಶ್ರೀಹರಿಯ ಪೂಜಾ ಎಂತ ತಿಳಿದು, ನರ್ತನ ಮಾಡೆಂದು ಹೇಳುತ್ತಾರೆ.-"ಬಿಂಬೇತಿ"-ಎಂಬ ಪದ್ಯ ದಿಂದ.

ಅಂಬುಜಾಂಬಕ-ಕಮಲನೇತ್ರ ಎಂಬರ್ಥ. ||೩೫||

## (೪) ಶ್ರೀ ವಾದಿರಾಜಾಚಾರ್ಯರ ವ್ಯಾಖ್ಯಾನ :

"ಬಿಂಬ"ಇತಿ ॥ ಛಾಯಾ ವಿಷ್ಣೋಃ ರಮಾ ತಸ್ಯಾಃ ಛಾಯಾ ಧಾತಾ ವಿಶೇಷತಾ ಇತ್ಯುಕ್ತೇಃ ॥ ಅಂಬಕ=ನೇತ್ರ. ||೩೫||

ಉತ್ತಮರು ತಮಗಿಂತ ಅವರರಿಗೆ ಬಿಂಬರು. ಅವರರು ಸ್ವೋತ್ತಮ ರಿಗೆ ಪ್ರತಿಬಿಂಬರು ಎಂತ ತಿಳಿಯಬೇಕು. ಶ್ರೀವಿಷ್ಣುವಿಗೆ ಮುಖ್ಯವಾಗಿ ಛಾಯಾರೂಪಳು ಅಂದರೆ ಪ್ರತಿಬಿಂಬಳು ರಮಾದೇವಿಯು. ರಮಾದೇವಿ ಯರಿಗೆ ಚತುರ್ಮುಖ ಬ್ರಹ್ಮದೇವರು. ಈ ಕ್ರಮಾನುಸಾರವಾಗಿ ಬಿಂಬ ಪ್ರತಿಬಿಂಬ ಭಾವವನ್ನು ತಿಳಿಯಬೇಕು. ||೩೫||

## (೫) "ಗುರುಹೃದಯ ಪ್ರಕಾಶಿಕೆ"-ವ್ಯಾಖ್ಯಾನ : —

ತನಗಿಂತ ಉತ್ತಮರು ಬಿಂಬರೆಂದು ಅಮುಖ್ಯವಾಗಿ ಕರೆಸಿಕೊಳ್ಳುವ ರೆಂದು ತಿಳಿಸುತ್ತಾರೆ-"ಬಿಂಬನೆಂದು."

ಸ್ವೋತ್ತಮರು ಬಿಂಬರೆಂದು ಕರೆಸುವರು. ತಮಗಿಂತ ಚಿಕ್ಕವರು ಪ್ರತಿ ಬಿಂಬರೆಂದು ಕರೆಸುವರು. ಈ ಅಮುಖ್ಯ ಬಿಂಬ ಪ್ರತಿಬಿಂಬಗಳಲ್ಲಿ ಮುಖ್ಯ ಬಿಂಬ ಶ್ರೀಹರಿಯೆಂದು ತಿಳಿದು ಸಂತೋಷದಿಂದ ಸ್ತುತಿಸುತ್ತಾ, ಚಿಂತಿಸುತ್ತಾ, ಭೋಜನ, ವಸ್ತ್ರ ಧಾರಣಾದಿ ಸಕಲ ಲೌಕೀಕ ಕ್ರಿಯೆಗಳನ್ನು ಸಹ, ದೇಹಾಂತ ರ್ಯಾಮಿ ಕಮಲನಾಭನ ಪಾದಸೇವೆಯೆಂದರ್ಪಿಸಿ ಸುಖಿಸುವುದು.

**"ಯಥಾಜಲಸ್ಥ ಆಭಾಸಃ ಸ್ಥಲಸ್ಥೇನಾವ ದೃಶ್ಯತೇ ।**
**ಸ್ವಾಭಾಸೇನ ಯಥಾಸೂರ್ಯೋ ಜಲಸ್ಥೇನ ದಿವಿಸ್ಥಿತಃ ॥**

**ಏವಂ ತ್ರಿವೃದಂಕಾರೋ ಭೂತೇಂದ್ರಿಯ ಮನೋಗುಣೈಃ ।**
**ಸ್ವಾಭಾಸೈರ್ಲಕ್ಷಿತೋನೇನ ಸದಾಭಾಸೇನ ಸತ್ಯದೃಕ್ ॥"**
**-ಎಂಬ ಭಾಗವತಾರ್ಥವೂ**

**"ಆಭಾಸಕಾ ಭಾಸಪರಾವಭಾಸ ರೂಪಾಣ್ಯಜಸ್ರಾಣಿ ಚ ಚೇತನಾನಾಂ ॥ "**
**-ಎಂಬ ನಿರ್ಣಯಾರ್ಥ** ಸಹ ವಿವರಿಸಿತು. ॥೩೫॥

# ಸರ್ವವ್ಯಾಖ್ಯಾನಸಾರಸಂಗ್ರಹ

ತಾರತಮ್ಯ ಕ್ರಮದಲ್ಲಿ ಚೇತನವರ್ಗದಲ್ಲಿ ನೀಚೋಚ್ಚ ಭಾವವಿದೆ. ತಮಗಿಂತ ಉತ್ತಮರಾದವರಿಗೆ "ಸ್ವೋತ್ತಮ"ರೆಂದು ಹೆಸರು. ತಮಗಿಂತ ಕಡಿಮೆ ಗುಣದವರಿಗೆ "ಅವರರು" ಎಂದು ಹೆಸರು. ಸ್ವೋತ್ತಮ ಚೇತನರು ತಮಗಿಂತ ಅವರರಾದ ಚೇತನರಿಗೆ ಬಿಂಬರೆನಿಸುತ್ತಾರೆ. ದೃಷ್ಟಾಂತವಾಗಿ ಶ್ರೀ ವಾಯುದೇವರು ಗರುಡ, ಶೇಷ, ರುದ್ರಾದಿ ದೇವತೆಗಳಿಗೆ ಬಿಂಬರು. ಅಂತೆಯೇ ಅವರರಾದ ಜೀವರು ಸ್ವೋತ್ತಮ ಜೀವರಿಗೆ ಪ್ರತಿಬಿಂಬರೆನಿಸುತ್ತಾರೆ. ದೃಷ್ಟಾಂತ :—ಇಂದ್ರ, ಕಾಮರು ಶ್ರೀರುದ್ರದೇವರಿಗೆ ಪ್ರತಿಬಿಂಬರೆನಿಸುವರು. ಇಂತಹ ಬಿಂಬ ಮತ್ತು ಪ್ರತಿಬಿಂಬಗಳು ಅಮುಖ್ಯರು, ಸಮಸ್ತ ಚೇತನವರ್ಗಕ್ಕೂ ಸರ್ವೋತ್ತಮನಾದ ಶ್ರೀ ಪರಮಾತ್ಮನು ಮುಖ್ಯ ಬಿಂಬನಾಗಿದ್ದಾನೆ. ಪ್ರತಿಬಿಂಬಾಂಶರಾದ ಚೇತನರಲ್ಲಿ ಪರಸ್ಪರ ಭೇದವಿದೆ. ಆದರೆ ಸಕಲರ ಬಿಂಬನು ಒಬ್ಬನೇ ಆದ ಶ್ರೀಹರಿಯು. ಈ ರೀತಿಯಲ್ಲಿ ಜ್ಞಾನಾನುಸಂಧಾನದಿಂದ ತಿಳಿದು, ಸಕಲರ ಬಿಂಬರೂಪನಾದ ಆ ಪರಮಾತ್ಮನ ಮಹಾಮಹಿಮೆಗಳನ್ನು ಕೊಂಡಾಡುತ್ತಿರಬೇಕು. ಜ್ಞಾನಯೋಗದಿಂದ ಮಹಿಮಾಸಂಪನ್ನನಾದ ಶ್ರೀಹರಿಯನ್ನು ನೋಡುತ್ತಾ, ನಾವು ದಿನನಿತ್ಯದಲ್ಲಿಯೂ ಮಾಡುವ ಭೋಜನಕ್ರಿಯೆ, ಉಡುವ, ಹೊದೆಯುವ ವಸ್ತ್ರಾದಿಗಳು, ಅಲಂಕಾರವಾಗಿ ಆಭರಣಗಳನ್ನು ಧರಿಸುವುದು, ಅನ್ಯರಿಗೆ ದಾನಕೊಡುವುದು ಇತ್ಯಾದಿ ಸಕಲ ವ್ಯಾಪಾರ ವಿಶೇಷಗಳೆಲ್ಲವೂ ಆ ಬಿಂಬರೂಪಿಯಾದ, ಕಮಲದಳಾಯತಾಕ್ಷನಾದ ಆ ಶ್ರೀಹರಿಯ ಪೂಜೆಗಳೆಂದು ಜ್ಞಾನಾನುಸಂಧಾನ

ದಿಂದ ಅರಿತು, ಅತ್ಯಂತ ಸಂತೋಷದಿಂದ ನಲಿದಾಡುತ್ತಿರಬೇಕೆಂದು ಪ್ರಸಕ್ತ ಪದ್ಯದ ಮುಖ್ಯ ತಾತ್ಪರ್ಯವು. ||೩೫||

## ಪದ್ಯ (೩೬)

ಮೂಲ :-

ನದಿಯು ಜಲ ನದಿಗೆರೆವ ತೆರದಂ ।
ದದಲಿ ಭಗವದ್ದತ್ತ ಕರ್ಮಗ ।
ಳುದಧಿಶಯುನನಿಗರ್ಪಿಸುತ ವ್ಯಾವರ್ತನೀಸಾಗಿ ॥
ವಿಧಿನಿಷೇಧಾದಿಗಳಿಗೊಳಗಾ ।
ಗದಲೆ ಮಾಡುತ ದರ್ವಿಯಂದದಿ ।
ಪದುಮನಾಭನ ಸಕಲ ಕರ್ಮಗಳಲ್ಲಿ ನೆನೆವುತಿರು ॥ ||೩೬||

ಅವತರಣಿಕೆ :

ಹರಿಯುತ್ತಿರುವ ನದಿಯು ನೀರನ್ನು ನದಿಗೇ ಚೆಲ್ಲಿ, ಆಹ್ನೀಕಾದಿಕರ್ಮಗಳನ್ನು ಮಾಡುವ ರೀತಿಯಲ್ಲಿ ಶ್ರೀಪರಮಾತ್ಮನಿಂದ ದತ್ತವಾದ ಈ ಸಾಧನ ಶರೀರಗತ ಇಂದ್ರಿಯಗಳ ದ್ವಾರಾ ಯಾವ ಯಾವ ಕರ್ಮಗಳು ಅವನ ಪ್ರೇರಣಾನುಸಾರ ನಡೆಯುತ್ತಿವೆಯೋ, ಆ ಸಕಲ ಕರ್ಮಗಳನ್ನು ಕ್ಷೀರಸಮುದ್ರಶಾಯಿಯಾದ ಆ ಶ್ರೀಪರಮಾತ್ಮನಿಗೆ ಅರ್ಪಿಸು. ಅಹಂಕಾರ ಮಮಕಾರಗಳಿಂದ ರಹಿತನಾಗಿ ನೀನಿರು. ಯಜ್ಞಯಾಗಾದಿಗಳಲ್ಲಿ ಹವಿಸ್ಸನ್ನು ಕೊಡಲು ಸೌಟನ್ನು ಉಪಯೋಗಿಸುವರು. ಅದು ಹವಿಸ್ಸನ್ನು ಕೊಡುವ ಯಜಮಾನನ ಕೈ ಹೇಗೆ ಆಡುವುದೋ ಅದರಂತೆ ಆಡುವುದು. ಹಾಗೆ ಆ ದರ್ವಿಯಂತೆ ನೀನು ಇರು, ಸರ್ವತಂತ್ರಸ್ವತಂತ್ರನಾದ ಬಿಂಬರೂಪೀ ಪದ್ಮನಾಭನಾಮಕ ಶ್ರೀ ಪರಮಾತ್ಮನನ್ನು ಸಮಸ್ತ ಕರ್ಮಗಳಲ್ಲಿಯೂ ಅವನೇ ಮುಖ್ಯ ಕರ್ತೃ, ನಾನು ಅವನ ಅಧೀನನು ಎಂದು ತಿಳಿದು, ಆ ಸರ್ವ ಕರ್ತೃಕನಾದ ಪದ್ಮನಾಭನನ್ನು ಸದಾ ಸರ್ವತ್ರ ಚಿಂತಿಸುತ್ತಿರು- ಎಂದು ಹೇಳುತ್ತಾರೆ-"**ನದಿಯು ಜಲ**" -ಎಂಬ ಪ್ರಸಕ್ತ ಸಂಧಿಗತ ಈ ೩೬ ನೆಯ ಪದ್ಯದಿಂದ. ||೩೬||

**ಪ್ರತಿಪದಾರ್ಥ :—**

**ನದಿಯ ಜಲ**=ನದಿಯ ನೀರನ್ನು **ನದಿಗೆರೆವ ತೆರದಂದದಲಿ**= ಆ ನದಿಗೇ ಅರ್ಘ್ಯ ಕೊಡುವೋಪಾದಿಯಲ್ಲಿ **ಭಗವದ್ದತ್ತ**=ಶ್ರೀ ಪರಮಾತ್ಮನಿಂದ ಕೊಡಲ್ಪಟ್ಟ **ಕರ್ಮಗಳು**=ದೇಹಗತ ಇಂದ್ರಿಯಗಳ ದ್ವಾರಾ ಮಾಡಿಸಲ್ಪಟ್ಟ ಕರ್ಮಗಳನ್ನು **ಉದಧಿಶಯುನನಿಗೆ**=ಕ್ಷೀರ ಸಮುದ್ರಶಾಯಿಯಾದ ಶ್ರೀಹರಿಗೆ **ಅರ್ಪಿಸುತ**=ಅರ್ಪಣೆ ಮಾಡುತ್ತಾ **ನೀ**=ನೀನು **ವ್ಯಾವರ್ತನಾಗಿ**=ನಾನೇ ಮಾಡಿದೆನೆಂಬುವ ಅಹಂ ಮಮಕಾರಗಳು ಬಿಟ್ಟವನಾಗಿ ಅಂದರೆ, ಸ್ವತಂತ್ರ ಕರ್ತೃತ್ವಾಭಿಮಾನವನ್ನು ಬಿಟ್ಟು **ವಿಧಿ**=ಶಾಸ್ತ್ರೋಕ್ತಪ್ರಕಾರ ಮಾಡಲೇಬೇಕಾದ ಕರ್ಮಗಳು **ನಿಷೇಧ** =ಬಿಡಲೇಬೇಕಾದ ಕರ್ಮಗಳು **ಆದಿಗಳಿಗೆ**=ಇತ್ಯಾದಿ ವಿಧಿ ನಿಷೇಧ ಕರ್ಮಗಳ ಜಾಲಕ್ಕೆ **ಒಳಗಾಗದಲೆ**=ಸಿಲುಕದೆ **ದರ್ವಿಯಂದದಿ** =ಸೌಟಿನೋಪಾದಿಯಲ್ಲಿ ನಿರ್ಲಿಪ್ತನಾಗಿದ್ದು **ಮಾಡುತ್ತಾ**=ಕರ್ಮಗಳನ್ನು ಎಸಗುತ್ತಾ (ಪರಾಧೀನ ಕರ್ತೃತ್ವ ಭಾವದಿಂದ) **ಪದುಮನಾಭನ** =ಪದ್ಮನಾಭನಾಮಕನಾದ ಶ್ರೀ ಹರಿಯೇ **ಸಕಲ ಕರ್ಮಗಳಲ್ಲಿ**= ಜೀವರು ಮಾಡುವ ಸಕಲ ಕರ್ಮಗಳನ್ನೂ ಸರ್ವತಂತ್ರಸ್ವತಂತ್ರನಾಗಿ ತಾನೇ ಮಾಡಿ ಮಾಡಿಸುತ್ತಾನೆಂದು **ನೆನೆವುತಿರು**=ಅನುಸಂಧಾನ ಪೂರ್ವಕವಾಗಿ ಚಿಂತಿಸುತ್ತಿರು. ॥೩೬॥

## ವ್ಯಾಖ್ಯಾನಗಳು-

### (೧) ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ :-

ನಿಸ್ಸಂಗನಾಗಿ ಸಕಲ ಕರ್ಮಗಳು ಮಾಡು-ಎಂತ ಹೇಳುತ್ತಾರೆ.
ನದಿಯ ಜಲ ನದಿಗೆರೆವ-ಜನರು ನದಿಗಳಲ್ಲಿ ಸ್ನಾನಮಾಡಬೇಕಾದರೆ, ಆ ನದಿಯಲ್ಲಿರುವ ಜಲವನ್ನೇ ಆ ನದಿಗೆ ಅರ್ಘ್ಯ ಕೊಡುವೋಪಾದಿಯಲ್ಲಿ, ಭಗವದ್ದತ್ತ-ಶ್ರೀ ಪರಮಾತ್ಮನಿಂದ ಕೊಡಲ್ಪಟ್ಟ ದ್ರವ್ಯಗಳೇನು, ಕರ್ಮಗಳ- ದೇಹೇಂದ್ರಿಯಾದಿಗಳಿಂದ ಆಗತಕ್ಕ ಅನೇಕ ವಿಧ ಕರ್ಮಗಳ (ಇವುಗಳಲ್ಲಿ ತದಾ

ಕಾರನಾಗಿ ಅಂತರ್ಗತನಾಗಿ ಶ್ರೀಭಾರತೀರಮಣ ಮುಖ್ಯ ಪ್ರಾಣಾಂತರ್ಗತನಾಗಿ ಇರತಕ್ಕ ಶ್ರೀ ಪರಮಾತ್ಮನ ಅನುಸಂಧಾನ ತಿಳಿದು ಚಿಂತಿಸಿ) ಉದಧಿಶಯನನಿಗೆ -ಪ್ರಳಯೋದಕವಾದ ಸಮುದ್ರದಲ್ಲಿ ಶಯನಮಾಡಿದ ನಾರಾಯಣಾಂಶವಾದ ಬಿಂಬಮೂರ್ತಿಯಾದ ಹರಿಗೆ. ಅರ್ಪಿಸುತ-ನದಿಯು ಜಲದಿಂದ ನದಿಗೆ ಅರ್ಘ್ಯ ಕೊಟ್ಟಂತೆ ಹೃದಯಗತ ಪರಮಾತ್ಮಗೂ ದ್ರವ್ಯಾಂತರ್ಗತ ಶ್ರೀ ಪರಮಾತ್ಮಗೂ ಐಕ್ಯ ಚಿಂತಿಸಿ, ಭಗವದ್ರೂಪಗಳಿಂದ ಭಗವದ್ರೂಪಗಳಿಗೆ ಅರ್ಪಿಸುತ್ತಾ, ವ್ಯಾವರ್ತ ನೀನಾಗಿ-ಅಹಂ ಮಮತಾ ರಹಿತನಾಗಿ,ವಿಧಿ ಶಾಸ್ತ್ರೋಕ್ತ ಪ್ರಕಾರ ಮಾಡತಕ್ಕದ್ದು ವಿಧಿ ಎಂತಲೂ, ನಿಷೇಧ-ತದ್ವ್ಯತಿರಿಕ್ತವಾದದ್ದು ನಿಷೇಧ ಎಂತಲೂ (ತಿಳಿದು) ಆದಿಗಳಿಗೆ-ಪಾಪಕಾರ್ಯಗಳಿಗೆ, ಒಳಗಾಗದಲೆ— ಇನ್ನೂ ವಿಷಯಗಳಿಗೆ ಸಂಬಂಧಪಡದೆ, ಮಾಡುತ್ತಾ-ಕರ್ಮಾಕರ್ಮಗಳು ಶ್ರೀ ಪರಮಾತ್ಮನ ಆಜ್ಞಾದಿಂದ ನಡಿತದೆ ಎಂತ ಅನುಸಂಧಾನದಿಂದ ಕರ್ಮಗಳು ಮಾಡುತ್ತಾ, ದರ್ವಿಯಂದದಿ-ಸೌಟು ಸರ್ವ ಪಕ್ವಾಪಕ್ವ ಪದಾರ್ಥಗಳಲ್ಲಿ ಜನರಿಂದ ಸಂಚಾರ ಮಾಡುತ್ತದೆ. ಆಯಾ ಪದಾರ್ಥದ ಸಾರಗಳು ದರ್ವಿಗೆ ಸ್ವೀಕಾರವಿಲ್ಲದೆ ನಿರ್ಲಿಪ್ತನಾಗಿ ಇದ್ದಂತೆ, ಸಕಲ ಕರ್ಮಗಳೂನೂ ಶ್ರೀ ಪರಮಾತ್ಮನಿಂದ ನಡಿತದೆ ಎಂತ ತಿಳಿದು, ನಿಸ್ಸಂಗನಾಗಿ, ನಿರ್ಲಿಪ್ತನಾಗಿ, ಪದುಮನಾಭನ-ಶ್ರೀ ಬಿಂಬರೂಪಿ ಪರಮಾತ್ಮನೆ, ಸಕಲ ಕರ್ಮಗಳಲ್ಲಿ-ದೇಹೇಂದ್ರಿಯಗಳಲ್ಲಿ ತಜ್ಜನಿತ ಕರ್ಮಾಕರ್ಮಗಳಲ್ಲಿ ಬಿಂಬನಾಗಿ ಇದ್ದಾನೆ ಎಂತ, ನೆನವುತಿರು-ಅನುಸಂಧಾನದಿಂದ ತಿಳಿದವನಾಗಿ ಸದಾ ಶ್ರೀ ಪರಮಾತ್ಮನ ಸ್ಮರಣೆ ಮಾಡುತ್ತಾ ಮಹಿಮಾ ಕೊಂಡಾಡುತ್ತಾ ಇರೋವನಾಗಿರಬೇಕು. ॥೩೬॥

(೨) "ಭಾವಪ್ರಕಾಶಿಕೆ"–ವ್ಯಾಖ್ಯಾನ :–

ನದಿಯ ಉದಕವನ್ನು ಅರ್ಘ್ಯಾದಿಗಳನ್ನು ಕೊಡುವಂತೆ, ಪರಮಾತ್ಮನು ಕೊಟ್ಟ ದ್ರವ್ಯಗಳು ಮತ್ತು ಆತನಿಂದ ಮಾಡಿಸಲ್ಪಟ್ಟ ಕರ್ಮಗಳನ್ನು ಕ್ಷೀರ ಸಮುದ್ರಶಾಯಿಯಾದ ಅ ಪರಮಾತ್ಮನಿಗೇ ನೀನು, ನಾನೇ ಆ ಕರ್ಮ ಧರ್ಮಗಳನ್ನು ಮಾಡಿದೆನೆಂಬ ಭಾವವನ್ನು ಬಿಟ್ಟು. ಅಂದರೆ, ಸ್ವತಂತ್ರ ಕರ್ತೃತ್ವಾಭಿ

ದೂನವನ್ನು ಬಿಟ್ಟು, ಮಾಡಬೇಕಾದ ಕರ್ಮಗಳನ್ನೂ (ವಿಧಿ) ಮತ್ತು ಬಿಡಬೇಕಾದ ಕರ್ಮಗಳನ್ನು (ನಿಷೇಧ). ನಾನೇ ಮಾಡಿದೆನು. ನಾನೇ ಬಿಟ್ಟೆನು ಎಂಬ ಬುದ್ಧಿಗೆ (ಅಹಂಕಾರಕ್ಕೆ), ಅಸ್ವತಂತ್ರನಾದ ನಾನು ಪರಮಾತ್ಮನು ಮಾಡಿಸಿದಂತೆ ಮಾಡುವೆನು- ಎಂಬ ಭಾವನೆಯಿಂದ ಕರ್ಮಗಳನ್ನು ಮಾಡುತ್ತಾ ಸೌಟಿನಂತೆ (ದರ್ವಿಯಂದದಿ), ಅಂದರೆ, ಸೌಟು ಹೇಗೆ ಸಾರು ಮೊದಲಾದ ಪದಾರ್ಥಗಳಲ್ಲಿ ಮುಣುಗುವುದೋ(ಅಸ್ವತಂತ್ರನಿಂದ ಒಬ್ಬರು ಮುಣುಸಿಗಿದಂತೆ ಮುಣುಗುವುದೋ, ಹಾಗೆ ಜೀವನು ಅಸ್ವತಂತ್ರ ಕರ್ತನೆಂಬ ವಿಷಯದಲ್ಲಿ ದರ್ವಿಯ ಉಪಮಾನ ಎಂದು ಭಾವಿಸಬೇಕು). ಕೆಲವರು ಜೀವರಿಗೆ ಕರ್ತೃತ್ವವೇ ಇಲ್ಲವೆಂಬ ವಿಷಯದಲ್ಲಿ ದರ್ವೀ ಉಪಮಾನವೆಂದು ಹೇಳುವರು. ಹಾಗೆ ಹೇಳಿದರೆ, ಸಿದ್ಧಾಂತಕ್ಕೂ ಲೌಕಿಕೋಪಮಾನಕ್ಕೂ ಸಹ ವಿರೋಧವಾಗುವುದು. ಸಾರು, ಹುಳಿ ಮುಂತಾದ ಪದಾರ್ಥಗಳ ಒಳಗೆ ಮುಣುಗುವ ಸೌಟಿಗೆ ಹೇಗೆ ಉಪ್ಪು ಖಾರಗಳ ದುಃಖವಿಲ್ಲವೋ, ಪಾಯಸಾದಿಗಳಲ್ಲಿ ಮುಣುಗುವಾಗ ಅದರ ಸಿಹಿ ಮೊದಲಾದ ರುಚಿಗಳಿಂದ ಅದಕ್ಕೆ ಸುಖವೂ ಇಲ್ಲವೋ, ಹಾಗೆ ಜೀವನಿಗೂ ನರಕ ಸ್ವರ್ಗಾದಿಗಳಿಂದಾಗುವ ಸುಖ ದುಃಖಾದಿಗಳು ಇಲ್ಲದಂತಾಗುವುವು. ಸುಖ ದುಃಖಾದಿಗಳನ್ನೂ ನಮ್ಮೊಳಗಿರುವ ಪರಮಾತ್ಮನೇ ಅನುಭವಿಸಬೇಕಾಗಿ ಬಂದೀತು.

"ಜೀವೋऽಪಿ ಕರ್ತಾ"-ಮೊದಲಾದ ವಾಕ್ಯಗಳು ನಿಷ್ಪ್ರಯೋಜನವಾದೀತು. ಆದ್ದರಿಂದ ದರ್ವೀ ಉಪಮಾನವನ್ನು ಅಸ್ವತಂತ್ರ ಕರ್ತೃತ್ವ ವಿಷಯದಲ್ಲಿ ಮಾತ್ರ ಉಪಮಾನವೆಂದು ಭಾವಿಸಬೇಕು. ನಾವು ಮಾಡುವ ಎಲ್ಲಾ ಕರ್ಮಗಳನ್ನೂ ಶ್ರೀ ಪದ್ಮನಾಭನೇ ಸ್ವತಂತ್ರನಾಗಿ ಮಾಡಿಸುವನೆಂದು ಚಿಂತಿಸುತ್ತಿರು ಎಂದು ತಾತ್ಪರ್ಯ. ||೩೬||

(೩) "ಭಾವದರ್ಪಣಟೀಕಾ" ವ್ಯಾಖ್ಯಾನಃ-

"ಕೆರೆಯ ನೀರನು ಕೆರೆಗೆ ಚೆಲ್ಲಿ । ವರಪ ಪಡೆದವರಂತೆ ಕಾಣಿರೋ"

-ಎಂಬ ಶ್ರೀ ಪುರಂದರದಾಸರಾಯರ ಉಕ್ತಿ ರೀತ್ಯಾ ಶ್ರೀ ಭಗವಂತನಿಂದ ಪ್ರಾಪ್ತವಾದದ್ದೆಲ್ಲ ಶ್ರೀಪರಮಾತ್ಮನ ಪಾದಕ್ಕೇನೇ ಅರ್ಪಣೆ ಮಾಡುತ್ತಾ,

"ದರ್ವಿಯಂದದಿ ಸರ್ವವಿಷಯಗಳಲ್ಲಿರು."

-ಎಂಬ ಶ್ರೀ ವಿಜಯದಾಸರ ಉಕ್ತಿ ರೀತ್ಯಾ, ವಿಧಿ ನಿಷೇಧಗಳಿಗೆ ಒಳಗಾಗ ದಲೆ ಇರು-ಎಂತ ಹೇಳುತ್ತಾರೆ-"ನದೀತಿ" ||

ದರ್ವಿಯಂದದಿ, ಇದರ ಹಾಗೆ ನಿರ್ಲಿಪ್ತನಾನೆಂದು ಹೇಳೋದೇ ಕರ್ತಾ ಬೇರೆ ಇದ್ದಾನೆಂಬ ತಾತ್ಪರ್ಯ. ||೩೬||

(೪) ಶ್ರೀ ವಾದಿರಾಜಾಚಾರ್ಯರ ವ್ಯಾಖ್ಯಾನ (ಸಂಸ್ಕೃತ ಮೂಲ) :-

"ಮೇಘೇನ ಪೂರ್ಣಯತಿ" ಇತ್ಯುಕ್ತ ಮಾಹ "ನದೀತಿ" ॥ ಸಿದ್ಧಮೇವಾನ್ನ ವಸ್ತ್ರಾದ್ಯಂ ವಿಷ್ಣೋಃ ಸ್ವಾತಂತ್ರ್ಯತಃ ಸದಾ || ಸ್ವಾರ್ಥಂ ಸಮರ್ಪಯೇತ್ ವಿಷ್ಣೌ ಯಥಾ ಪ್ರಾಣೇ ಸುರಾಃ ಪುರಾ ॥ ಇತಿ ಕರ್ಮಾನುಪೂರ್ವ್ಯಾಮ್ ॥ ದರ್ವೀ-ಸೌಟು. "ಸ್ವಭಾವತೋ ಧರ್ಮಪರೋ ನವಿಧೇಷ್ಟಕಿತಃ ಚರೇತ್ ॥ ಅಲ್ಪಂ ಫಲಂ ಚಕಿತೇ ಸ್ವಭಾವೇ ಫಲಮುತ್ತಮಮ್॥ ಇತಿ ಚ ವಿನಿರ್ಣಯೇ ಏಕಾದಶ ಭಾಗವತ ತಾತ್ಪರ್ಯೇ ॥೩೬॥

ಕನ್ನಡಾರ್ಥ :—

ವಿಷ್ಣುವು ಸರ್ವತಂತ್ರ ಸ್ವತಂತ್ರನು. ಅವನಿಗೆ ಅನ್ನ, ವಸ್ತ್ರ ಇತ್ಯಾದಿ ಪದಾರ್ಥಗಳು ಎಲ್ಲವೂ ಅವನದೇ ಆಗಿರುತ್ತವೆ. ಅವನ ಅಧೀನವಾದ್ದರಿಂದ ಸಮಸ್ತವೂ ಸದಾ ಅವನಿಗೆ ಸಿದ್ಧವೇ ಆಗಿದೆ. ಸರ್ವಸ್ವವನ್ನೂ ಶ್ರೀ ಹರಿಗೆ ಅರ್ಪಣೆ ಮಾಡುವುದರಿಂದ ಅವನಿಗೆ ಅದರಿಂದೇನೂ ಪ್ರಯೋಜನವಿಲ್ಲ. ಆದರೆ ನಮ್ಮ ಇಷ್ಟ ಪ್ರಾಪ್ತಿಗಾಗಿ ಸಮರ್ಪಣೆ ಮಾಡಬೇಕು. ಶ್ರೀ ಹರಿಗೆ ಮಾಡುವ ಪೂಜಾ ಸಮರ್ಪಣಾ ಕ್ರಿಯೆಯು ಸ್ವಾರ್ಥಕ್ಕಾಗಿ. ಹಿಂದೆ ದೇವತೆಗಳು ಪ್ರಾಣನಲ್ಲಿ ಸಮರ್ಪಣ ಮಾಡಿದಂತೆ, ಶ್ರೀ ಹರಿಗೆ ಪ್ರಾಣ ಮುಖಾಂತರ ಸರ್ವವನ್ನೂ ಸಮರ್ಪಿಸಬೇಕು. ಈ ವಿಷಯವು "ಕರ್ಮಾನುಪೂರ್ವೀ"

ಎಂಬ ಗ್ರಂಥದಲ್ಲಿ ಉಕ್ತವಾಗಿದೆ. ದರ್ವೀ ಎಂದರೆ ಸೌಟು. ಧರ್ಮದ ಆಚರಣೆ ಸ್ವಾಭಾವಿಕವಾಗಿರಬೇಕು. ವಿಧಿಯಿಂದ ಹೆದರಿ ಧರ್ಮಾಚರಣೆ ಆಚರಿಸುವುದು ಅಧಮರ ಲಕ್ಷಣ. ಸಹಜ ರೀತಿಯಲ್ಲಿ ಆಚರಿಸುವ ಧರ್ಮದ ಫಲವು ಉತ್ತಮ. ವಿಧಿಗಂಜಿ ಮಾಡುವ ಧರ್ಮವು ಅತ್ಯಲ್ಪ ಫಲದಾಯಿ. ಇದರಿಂದ ಸ್ವಾಭಾವಿಕವಾಗಿ ಪರಮಾದರದಿಂದ ಧರ್ಮವನ್ನು ಆಚರಿಸಬೇಕು. -ಹೀಗೆಂದು ಏಕಾದಶ ಸ್ಕಂಧ ಭಾಗವತ ತಾತ್ಪರ್ಯದಲ್ಲಿ ಶ್ರೀ ಮಧ್ವಾಚಾರ್ಯರು ನಿರ್ಣಯಿಸುತ್ತಾರೆ. ||೩೬||

(೫) **"ಗುರುಹೃದಯ ಪ್ರಕಾಶಿಕೆ"-ವ್ಯಾಖ್ಯಾನ :—**

ಸದೃಷ್ಟಾಂತವಾಗಿ ಸರ್ವ ಸಮರ್ಪಣೆ ಬಗೆಯನ್ನು, "ನದಿಯ ಜಲ"-ವೆಂದು ೩೬ ನೆಯ ಪದ್ಯದಿಂದ ೩೮ ನೆಯ ಪದ್ಯದವರೆಗೂ ನಿರೂಪಿಸುತ್ತಾರೆ. ನದಿಯ ಜಲವನ್ನೇ ನದೀ ಅಭಿಮಾನಿ ದೇವತೆಗೆ ಅರ್ಘ್ಯಕೊಡುವಂತೆ, ದೇವರು ಪ್ರೇರಿಸಿ, ಮಾಡಿಸಿದ ಅಖಿಲ ಕರ್ಮಗಳನ್ನು ಸಮುದ್ರ ಶಯನನಾದ ದೇವರ ಅಧೀನವೆಂದರ್ಪಿಸಿ,ದರ್ವಿ ಎಂಬ ಸೌಟಿನ ಹಾಗೆ ಜೀವನು ಚೇತನನಾದಾಗ್ಯೂ, ಅಮುಖ್ಯ ಕರ್ತನೆಂದು ತಿಳಿದು, ಸ್ವತಂತ್ರ ಕರ್ತೃತ್ವ ಭ್ರಮೆಯನ್ನು ಬಿಟ್ಟು ಮಾಡುತ್ತಾ, ಸಕಲ ಕರ್ಮಗಳಲ್ಲೂ ಪದ್ಮನಾಭನೇ ಸ್ವತಂತ್ರನೆಂದರಿತು, ವಿಧಿ ನಿಷೇಧ ಕರ್ಮ ಫಲಗಳಿಗೆ ಒಳಪಡದೆ ಇರಬೇಕೆಂದರ್ಥ. ||೩೬||

# ಸರ್ವವ್ಯಾಖ್ಯಾನಸಾರಸಂಗ್ರಹ

ಸರ್ವಕರ್ಮ ಸಮರ್ಪಣಾ ಕ್ರಮವನ್ನು ಎರಡು ಸುಂದರ ಉಪಮಾನಗಳಿಂದ ದಾಸರಾಯರು ವಿವರಿಸುತ್ತಾರೆ. **"ನದಿಯ ಜಲ"** ಎಂಬ ಪ್ರಸಕ್ತ ೩೬ ನೆಯ ಪದ್ಯದಿಂದ.

(೧) ನದೀ ತೀರಕ್ಕೆ ಹೋಗುವ ಪ್ರಸಂಗ ವಿಶೇಷಗಳಲ್ಲಿ ನಾವು ಆಹ್ನೀಕಾದಿಗಳನ್ನು ಮಾಡುವಾಗ, ಹರಿಯುತ್ತಿರುವ ನದಿಯ ನೀರನ್ನೇ ಬೊಗಸೆ

ಯಲ್ಲಿ ತೆಗೆದುಕೊಂಡು ಸೂರ್ಯಾಂತರ್ಯಾಮಿಯಾದ ಆ ತೇಜೋರೂಪೀ ಪರಮಾತ್ಮನಿಗೆ ಅರ್ಘ್ಯ ಕೊಡುವಾಗ, ಅದೇ ನೀರನ್ನೇ ನದಿಗೆ ಚೆಲ್ಲುತ್ತೇವೆ.

**"ಕೆರೆಯ ನೀರನ್ನು ಕೆರೆಗೆ ಚೆಲ್ಲಿ ವರವ ಪಡೆದವಂತೆ ಕಾಣಿರೋ ।**
**ಹರಿಯ ಕರುಣದೊಳಾದ ಭಾಗ್ಯವ ಹರಿ ಸಮರ್ಪಣೆಮಾಡಿ**
**ಬದುಕಿರೋ ॥"**

–ಎಂಬ **ಶ್ರೀ ಪುರಂದರದಾಸರಾಯರ ಪ್ರಾಸಾದಿಕ ವಾಣಿಯಂತೆ**, ಕೆರೆಯ ನೀರನ್ನು ಕೆರೆಗೇ ಚೆಲ್ಲಿ, ಆಹ್ನೀಕಾದಿ ಕರ್ಮಗಳಿಂದ ಜನ್ಯವಾದ ಪುಣ್ಯಫಲ ವನ್ನು ಪಡೆಯುತ್ತೇವೆ. ಅದರಂತೆಯೇ ಈ ಸಮಸ್ತ ಭೋಗ ಭಾಗ್ಯಗಳೂ ಶ್ರೀ ಪರಮಾತ್ಮನ ಅಧೀನವಾದದ್ದು. ಅವನಿಂದ ನಮಗೆ ದತ್ತವಾದದ್ದು. **"ತೇನ ತಕ್ತೇನ ಭುಂಜೀತಾ"**–ಎಂಬ **ಈಶಾವಾಸ್ಯೋಪನಿಷತ್ತಿನ** ಅಮೃತ ವಾಣಿಯಂತೆ, ಭಗವದ್ದತ್ತವಾದ ಸರ್ವವನ್ನೂ ಶ್ರೀ ಹರಿಗೇ ಅರ್ಪಿಸಿ, ತದ್ವಾರ ಅವನ ಪರಮ ಪ್ರಸಾದವನ್ನು ಪಡೆಯಿರಿ.-ಎಂದು ಶ್ರೀಪುರಂದರದಾಸ ವರೇಣ್ಯರ ಅಮೃತೋಕ್ತಿ. ಇದೇ ಅಭಿಪ್ರಾಯವನ್ನೇ ಶ್ರೀಜಗನ್ನಾಥದಾಸ ವರ್ಯರು, ಆ ಉಪನಿಷದ್ರಹಸ್ಯವನ್ನು ಈ ಪದ್ಯದಿಂದ ತಿಳಿಸುತ್ತಾರೆ.

ನಾವು ನಿತ್ಯ ದಿನಚರಿಯ ಜೀವನದಲ್ಲಿ ಆಚರಿಸುವ ವರ್ಣೋಚಿತ ಹಾಗೂ ಆಶ್ರಮೋಚಿತ ಧರ್ಮಗಳೆಲ್ಲವೂ ಆ ಧರ್ಮಸ್ವರೂಪನಾದ, ಧರ್ಮೋ ದ್ಧಾರಕನಾದ ಶ್ರೀ ಪರಮಾತ್ಮನಿಂದಲೇ ಪ್ರೇರಿತವಾಗಿ ನಡೆಯುವುವು. ಅಂತೆಯೇ ಸಾಧನಶರೀರವಾದ ಈ ಸ್ಥೂಲ ಶರೀರಗತ ಇಂದ್ರಿಯಗಳ ದ್ವಾರಾ. ನಡೆಯತಕ್ಕ ಸಕಲ ಕರ್ಮಗಳೂ(ಸುಕರ್ಮ ಹಾಗೂ ದುಷ್ಕರ್ಮ) ಅವನಿಂದಲೇ ನಮ್ಮ ಅನಾದಿಕರ್ಮಕ್ಕನುಸಾರವಾಗಿ, ಚೇತನರ ಯೋಗ್ಯತೆಗನುಗುಣವಾಗಿ ಪ್ರೇರಿತವಾಗಿ ನಡೆಯುವುವು. ಸಕಲ ಧರ್ಮ ಹಾಗೂ ಕರ್ಮಗಳ ಆಚರಣೆಗೆ ಶ್ರೀ ಪರಮಾತ್ಮನೇ ಮುಖ್ಯ ಕಾರಣನು. ಪ್ರವರ್ತಕನೂ ಹಾಗೂ ಪ್ರೇರಕನು. ಇಲ್ಲಿ ನದಿಯ ಜಲವು ಶ್ರೀಹರಿಯ ಕರುಣೆಗೆ ಸದೃಶವು. ಅವನ ಕರುಣ ದೊಳಾದ ಭಾಗ್ಯವನು ಅವನ ಪಾದ ಪದ್ಮಂಗಳಿಗೇ ಅರ್ಪಿಸುವುದೇ ಅಂದರೆ ಸರ್ವಕರ್ಮ ಸಮರ್ಪಣೆಯೇ-"ನದಿಯ ಜಲವನ್ನು ನದಿಗೆ ಎರದಂತೆ."

ಪುಣ್ಯಕರ್ಮಗಳನ್ನು ತತ್ತ್ವನಿಯಾಮಕರಾದ ದೇವತೆಗಳ ದ್ವಾರವೂ, ದುಷ್ಕರ್ಮಗಳನ್ನು ದೈತ್ಯರ ದ್ವಾರವೂ, ಬಿಂಬರೂಪಿಯಾದ ಶ್ರೀಪರಮಾತ್ಮನೇ ಜೀವನಲ್ಲಿ ಅಂತಸ್ಥನಾಗಿದ್ದು, ಬಿಂಬಕ್ರಿಯಾ ದ್ವಾರಾ ತಾನೇ ಮಾಡಿ, ದೇವದಾನವರ ಮೂಲಕ ಶ್ರೀವಾಯುಗೋಳಕದ್ವಾರಾ, ದೇಹಗತ ಇಂದ್ರಿಯ ಗಳ ದ್ವಾರಾ ಮಾಡಿಸಿ, ತಜ್ಜನ್ಯವಾದ ಪುಣ್ಯ ಪಾಪ ಫಲಗಳನ್ನು ಜೀವನಿಗೆ ಕೊಡುವನು.

(೨) ಯಜ್ಞಯಾಗಾದಿಗಳಲ್ಲಿ ಹವಿಸ್ಸನ್ನು ಕೊಡುವುದಕ್ಕೆ ಮರದಿಂದ ಮಾಡಿದ ಸೌಟನ್ನು ಉಪಯೋಗಿಸುವರು. ಇದಕ್ಕೆ "ದರ್ವಿ" ಎಂದು ಹೆಸರು ಹಾಗೆಯೇ ಅಡಿಗೆ ಮಾಡುವಾಗ, ಬಡಿಸುವಾಗ ಸೌಟನ್ನು ಉಪಯೋಗಿಸು ತ್ತೇವೆ. ಇದು ಕೇವಲ ನಿಮಿತ್ತವಾದುದು. ಅದು ಉಪಯೋಗಿಸುವವನ ಕೈಯಲ್ಲಿದ್ದು ಅವನು ಆಡಿಸಿದಂತೆ ಕಾರ್ಯ ಮಾಡುತ್ತದೆ. ಆದರೆ ಕಾರ್ಯ ನಡೆ ಯುವುದು ಸೌಟಿನಿಂದಲೇ. ಅದು ನಿಮಿತ್ತ ಮಾಧ್ಯಮ. ಕಾರ್ಯ ನಡೆಯಿಸುವ ಕರ್ತೃ ಬೇರೆ. ದರ್ವಿಗೆ ಆಹಾರ ಪದಾರ್ಥಗಳ ರುಚಿ ತಿಳಿಯದು. ಅದ ರಿಂದ ನಿರ್ಲಿಪ್ತವಾಗಿರುವುದು. ಅಂತೆಯೇ ಜೀವನ ಕರ್ತೃತ್ವ ವಿಚಾರದಲ್ಲಿ "ದರ್ವಿ" ಯ ಉಪಮಾನವನ್ನು ಕೊಟ್ಟಿರುತ್ತಾರೆ. ಜೀವನಿಗೆ (೧) ಇಚ್ಛಾ, (೨) ಜ್ಞಾನ ಮತ್ತು (೩) ಕ್ರಿಯಾ ಎಂಬ ಶಕ್ತಿಗಳಿವೆ. ಈ ಶಕ್ತಿತ್ರಯ ಗಳು ಅವನ ಸ್ವರೂಪಗತ ಲಕ್ಷಣಗಳು. ಆದರೆ ಜೀವನು ಅಸ್ವತಂತ್ರನು. ತಾನೇ ಸ್ವೇಚ್ಛೆಯಾಗಿ ಇಚ್ಛಾ, ಜ್ಞಾನ ಮತ್ತು ಕ್ರಿಯಾ ಪ್ರವರ್ತನ ಶಕ್ತಿಗಳನ್ನು ಹೊಂದಿಲ್ಲ. ಅವು ಬಿಂಬರೂಪೀ ಶ್ರೀಹರಿಯಿಂದ ಪ್ರೇರಿತವಾದರೇ ಅವು ಕಾರ್ಯಗತವಾಗುವುವು. ಆದರೆ ಜೀವನು ಜಡದಿಂದ ಭಿನ್ನನು. ಜಡವಸ್ತು ಗಳಿಗೆ ಸ್ವತಃ ಏವ ಪ್ರವೃತ್ತಿ ಇಲ್ಲ. ಆದರೆ ಚೇತನರಿಗೆ ಇಚ್ಛಾ, ಜ್ಞಾನ ಮತ್ತು ಕ್ರಿಯಾಶಕ್ತಿಗಳಿವೆ. ಆದರೆ ಚೇತನನು ಪರಾಧೀನ ಕರ್ತನು. ಈ ಪರಾಧೀನ ಕರ್ತೃತ್ವವು ಜೀವನಿಗೆ। **"ಜೀವೋऽಪಿಕರ್ತಾ"**–ಎಂಬ ಶಾಸ್ತ್ರದ ಮಾತಿಗೆ ಇದೇ ಅರ್ಥವು. "ಬಿಂಬನು ಪ್ರೇರಿಸಿದಂತೆ ಪ್ರತಿಬಿಂಬನಾದ ನಾನು ಮಾಡು ವೆನು" ಎಂದು ಸ್ವತಂತ್ರ ಕರ್ತೃತ್ವಾಭಿಮಾನವನ್ನು ಬಿಟ್ಟು, ಸಕಲಕ್ಕೂ ಅವನೇ ಪ್ರವರ್ತಕನೆಂದು ತಿಳಿದರೆ, ಆ ಕರ್ಮಗಳಿಂದ ಜನ್ಯವಾದ ಪಾಪ ಮತ್ತು ಪುಣ್ಯ

ಫಲಗಳ ಸಂಬಂಧ ಜೀವನಿಗೆ ಇರದೆ, ನಿಸ್ಸಂಗವಾಗಿ ನಿರ್ಲಿಪ್ತನಾಗುವನು. "ವಿಧಿ" ಎಂದರೆ ಶಾಸ್ತ್ರೋಕ್ತ ಪ್ರಕಾರ ಇಂತಹ ಕರ್ಮಗಳನ್ನು ಮಾಡಲೇ ಬೇಕು ಎಂದು ನಿಯಮ. "ನಿಷೇಧ" ಎಂದರೆ ಅಹಿತ ಕರ್ಮಗಳ ತ್ಯಾಗ. "ವಿಧಿ" ಯ ಆಚರಣೆಯಿಂದ "ಪುಣ್ಯ" ಫಲವೂ ನಿಷೇಧವನ್ನು ಆದರಿಸುವುದ ರಿಂದ "ಪಾಪ" ಫಲವು ಉಂಟಾಗುವುವು. ಆದರೆ ಈ ಸಮಸ್ತ ಕರ್ಮ ಗಳಿಗೂ ಆವನೇ ಮುಖ್ಯ ಪ್ರೇರಕನು, ಕಾರಣನು ಎಂದು ತಿಳಿಯುವ ಜ್ಞಾನಾನುಸಂಧಾನದಿಂದ. ಜೀವನು ವಿಧಿ ನೀಷೆಧಗಳಿಗೊಳಗಾಗದೆ ಪುಣ್ಯಪಾಪ ಫಲಗಳಿಂದ ನಿರ್ಲಿಪ್ತನಾಗುವನು. ಸಕಲ ಧರ್ಮ ಕರ್ಮಗಳಲ್ಲಿಯೂ ಆ ಕ್ಷೀರಸಮುದ್ರಶಾಯಿಯಾದ ಪದ್ಮನಾಭರೂಪಿ ಪರಮಾತ್ಮನೇ ಮುಖ್ಯ ಪ್ರೇರಕ ನೆಂದು ಸದಾಸರ್ವಕಾಲ, ಸರ್ವಾವಸ್ಥೆಗಳಲ್ಲಿಯೂ ಚಿಂತಿಸುತ್ತಿರುವುದೇ - "ದರ್ವಿಯಂತಿರು"-ಎಂಬುದರ ಭಾವಾರ್ಥ. ॥೩೬॥

## ಪದ್ಯ (೩೭)

**ಮೂಲ :**

**ಅರಿಯದಿರ್ದರು ಎಮ್ಮೊಳಿದ್ದನ ।**
**ವರತ ವಿಷಯಗಳುಂಬ ಜ್ಞಾನೋಃ ।**
**ತ್ತರದಿ ತನಗರ್ಪಿಸಲು ಚಿತ್ಸುಖವಿತ್ತು ಸಂತೈಪ ॥**
**ಸರಿತು ಕಾಲಪ್ರವಹಗಳು ಕಂ ।**
**ಡರೆಯು ಸರಿ ಕಾಣದಿರೆ ಪರಿವುವು ।**
**ಮರಳಿ ಮಜ್ಜನ ಪಾನ ಕರ್ಮಗಳಿಂದ ಸುಖವಿಹವು ॥ ॥೩೭॥**

**ಅವತರಣಿಕೆ :**

ಬಿಂಬರೂಪಿಯಾದ ಶ್ರೀಪರಮಾತ್ಮನು ಸರ್ವ ಚೇತನರೊಳಿದ್ದು, ನಮಗೆ ಗೋಚರವಾಗದಿದ್ದರೂ, ಸಮಸ್ತ ಕ್ರಿಯಾವಿಶೇಷಗಳನ್ನು ಬಿಂಬಕ್ರಿಯಾ ದ್ವಾರಾ ತಾನೇ ಮಾಡಿ, ಆಯಾಯಾ ಇಂದ್ರಿಯ ನಿಯಾಮಕರಾದ ದೈತ್ಯ ದೇವತೆಗಳ ದ್ವಾರಾ ಮಾಡಿಸಿ, ಜೀವರ ಅನುಭವಕ್ಕೆ ತಂದುಕೊಡುತ್ತಾನೆ.

ಅಜ್ಞಾನವಶನಾಗಿ ಸ್ವಯಂ ಕರ್ತೃತ್ವಾಭಿಮಾನದಿಂದ ಜೀವರು ತಿಳಿಯುವುದಿಲ್ಲ. ಸತ್ಯಸಂಗತಿ ತಿಳಿದನಂತರವಾದರೂ, ಜ್ಞಾನಾನುಸಂಧಾನದಿಂದ ಜೀವರು ಶ್ರೀ ಪರಮಾತ್ಮನಿಗೆ ಸರ್ವಕರ್ಮ ಸಮರ್ಪಣೆ ಮಾಡಿದರೆ, ಅದನ್ನು ಕರುಣಾ ಸಾಗರನು ಸ್ವೀಕರಿಸಿ, ಉತ್ತಮವಾದ ಜ್ಞಾನ ಮತ್ತು ಆನಂದಗಳನ್ನು ಇತ್ತು, ಸಂರಕ್ಷಿಸುವನು. ವರ್ಷಕಾಲದಲ್ಲಿ ಮಳೆಯ ದೆಸೆಯಿಂದ ನದಿಗಳು ಉದಕದಿಂದ ತುಂಬಿ ಹರಿಯುವುವು, ಈ ಜಲಪ್ರವಾಹದ ಮೂಲ ಮತ್ತು ಉತ್ಪತ್ತಿ ನಮಗೆ ಕಾಣಿಸಲಿ, ಕಾಣಿಸದಿರಲಿ, ನದಿಯು ಪ್ರವಾಹದಿಂದ ತುಂಬಿ ಸ್ವಾಭಾವಿಕವಾಗಿಯೇ ಹರಿಯುತ್ತಿರುವುದು. ಅದರಲ್ಲಿ ಸ್ನಾನಮಾಡುವ ಮತ್ತು ಪಾನಮಾಡುವ ಜನರಿಗೆ ಶಾಂತಿ ಸುಖಗಳನ್ನು ಕೊಡುವುದು. ಅಂತೆಯೇ ಚೇತನರು ಅರಿಯಲಿ ಬಿಡಲಿ, ಬಿಂಬರೂಪನಾದ ಶ್ರೀಹರಿಯು ಜೀವಕೃತಕರ್ಮಗಳನ್ನು ತಾನೇ ಬಿಂಬಕ್ರಿಯಾದ್ವಾರ ಮಾಡಿ ಮಾಡಿಸುತ್ತಾ ಪ್ರವಾಹತೋನಿತ್ಯದಾದ ಚೇತನರ ಕಾಲಮಾನವನ್ನು ಅಳೆಯುತ್ತಿರುವನು – ಎಂದು ಹೇಳುತ್ತಾರೆ. "ಅರಿಯದಿರ್ದರು"ಎಂಬ ಪ್ರಸಕ್ತ ಸಂಧಿಗತ ಈ ೩೭ ನೆಯ ಪದ್ಯದಿಂದ.॥೩೭॥

**ಪ್ರತಿಪದಾರ್ಥ :**

**ಅರಿಯದಿರ್ದರು**= ನಾವು ತಿಳಿಯದೇ ಇದ್ದರೂ ಸಹ **ಎಮ್ಮೊಳಿದ್ದು**= ನಮ್ಮಲ್ಲಿ ಸ್ಥಿತನಾಗಿದ್ದುಕೊಂಡು **ಅನವರತ**= ಕ್ಷಣಕಾಲವಾದರೂ ಬಿಡದೆ **ವಿಷಯಗಳ**= ವಿಷಯಾಂತರ್ಗತವಾದ ಸ್ವಾಖ್ಯಸ್ವರೂಪಗಳನ್ನು **ಉಂಬ**= ಮೂಲರೂಪದಿಂದ ಸ್ವೀಕರಿಸುವನು. **ಜ್ಞಾನೋತ್ತರದಿ**= ಜ್ಞಾನೋದಯವಾದ ನಂತರ (ನಮಗೆ ಆ ತಿಳಿವಳಿಕೆ ಬಂದಮೇಲೆ) **ತನಗೆ**= ಬಿಂಬರೂಪಿಯಾದ ಶ್ರೀಪರಮಾತ್ಮನಿಗೆ **ಅರ್ಪಿಸಲು**= ಕೃಷ್ಣಾರ್ಪಣ ಪೂರ್ವಕ ಸಮರ್ಪಣೆಗೈಯಲು **ಚಿತ್ಸುಖವಿತ್ತು**= ಸ್ವರೂಪಸುಖ ವ್ಯಕ್ತಮಾಡಿಕೊಟ್ಟು, ಅಂದರೆ ಶಾಶ್ವತಸುಖ (ಮುಕ್ತಿ) ವನ್ನು ಕೊಟ್ಟು **ಸಂತೈಪ**= ಸಂರಕ್ಷಿಸುತ್ತಾನೆ **ಸರಿತು ಕಾಲ**= ಮಳೆಗಾಲದ **ಪ್ರವಹಗಳು**= ನದಿ ಪ್ರವಾಹಗಳು **ಕಂಡರೆಯು ಸರಿ**= ಜನರು ನೋಡಿದರೂ ಸರಿ **ಕಾಣದಿರೆ**= ನೋಡದಿದ್ದರೂ ಸರಿ **ಪರಿವುವು**= ತಮ್ಮಷ್ಟಕ್ಕೆ

ತಾವೇ ಸ್ವಾಭಾವಿಕವಾಗಿ ಹರಿಯುತ್ತಲೇ ಇರುವುವು. **ಮರಳಿ**=ಆ ಪ್ರವಾಹವನ್ನು ಕಂಡನಂತರ **ಮಜ್ಜನ**=ಶರೀರ ಶುದ್ಧಿಗಾಗಿ ಸ್ನಾನ ಮಾಡುವುದು **ಪಾನ**=ದಾಹ ಶಾಂತಿಗಾಗಿ ಕುಡಿಯುವುದು **ಕರ್ಮ ಗಳಿಂದ**=ಇತ್ಯಾದಿ ಕ್ರಿಯೆಗಳಿಂದ (ಮಜ್ಜನ ಪಾನಾದಿಗಳಿಂದ) **ಸುಖ ವಿಹವು**=ಸಂತೋಷವನ್ನು ಕೊಡುತ್ತವೆ.॥೩೭॥

## ವ್ಯಾಖ್ಯಾನಗಳು

### (೧) ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ :

ದೇಹದಲ್ಲಿ ಬಿಂಬಕ್ರಿಯಾ ಎಂಬುದು ಅಧಿಕಾರಿ ತಿಳಿದರೂ, ತಿಳಿಯ ದಿದ್ದರೂ ಸದಾ ಆಗುತ್ತಾ ಇರುತ್ತದೆ ಎಂತ ಹೇಳುತ್ತಾರೆ.

ಅರಿಯದಿದ್ದರು – ಬಿಂಬಕ್ರಿಯಾದ್ವಾರಾ ಪ್ರತಿಬಿಂಬಕ್ರಿಯಾ ಅನು ಸಂಧಾನ ಅಧಿಕಾರಿಯಾದವ ಅರಿಯದೇ ಇದ್ದ ಕಾಲಕ್ಕೂ, ಎಮ್ಮೊಳಿದ್ದು – ನಮ್ಮ ಹೃದಯಾಂತರ್ಗತನಾಗಿದ್ದು, ದೇಹಾಕಾರನಾದ ಬಿಂಬರೂಪಿ ಪರಮಾತ್ಮ ದೇಹೇಂದ್ರಿಯಗಳಲ್ಲಿ ಇದ್ದವನಾಗಿ ಅನವರತ– ನಿರಂತರ ಕ್ಷಣಲವಾದಿಗಳ ಬಿಡದೆ ವಿಷಯಗಳ– ಆಯಾ ಇಂದ್ರಿಯ ಕರ್ಮಗಳ ಬಿಂಬಕ್ರಿಯಾದ್ವಾರಾ ಮಾಡಿಸಿ, ಉಂಬ – ಕರ್ಮಾಂತರ್ಗತ ತದಾಕಾರ ರೂಪಗಳಿಂದ ಉಂಬೋವ ನಾಗುತ್ತಾನೆ, ತನ್ನ ಸ್ವಾಖ್ಯಗಳು ತಾನು ಸ್ವೀಕಾರಮಾಡುತ್ತಾನೆ, ಜ್ಞಾನೋ ತ್ತರದಿ – ಅಜ್ಞಾನದಶಾದಲ್ಲಿ, ಅನುಸಂಧಾನಮಾರ್ಗ ತಿಳಿದು, ಶ್ರೀಭಗವತ್ಪ್ರೀತಿ ಯಾಗಲಿ ಎಂತ, ತನಗರ್ಪಿಸಲು– ಕೃಷ್ಣಾರ್ಪಣ ಪೂರ್ವಕವಾಗಿ ತನಗೆ ಅರ್ಪಿಸಲು, ಚಿತ್ಸುಖವಿತ್ತು – ಸ್ವರೂಪಸುಖ ವ್ಯಕ್ತಮಾಡಿಕೊಟ್ಟು, ಸಂತೈಪ – ಪುನಃ ಜನ್ಮವಿಲ್ಲದಂತೆ ರಕ್ಷಿಸುತ್ತಾನೆ, ಸರಿತು ಕಾಲಪ್ರವಹಗಳು– ನದಿ ಗಳಲ್ಲಿ ವರ್ಷಕಾಲವನ್ನು ಅನುಸರಿಸಿ ಬರತಕ್ಕ ಉದಕಪ್ರವಾಹಗಳು ಆಯಾ ನದಿ ಗಳಲ್ಲಿ, ಕಂಡರೆಯು ಸರಿ –ಜನರಾದವರು ಕಂಡರೂ ಸರಿಯೆ, ಕಾಣದಿರೆ – ಕಾಣದಿದ್ದರೂ ಸರಿಯೆ, ಹರಿವುವು– ಪ್ರವಹಿಸತಕ್ಕವೇ ಇರುತ್ತವೆ. ತದ್ವತ್ ದೇಹಾಂತರ್ಗತ ಇಂದ್ರಿಯಗತನಾದ ಬಿಂಬರೂಪಿ ಪರಮಾತ್ಮ ತನ್ನ

ಕಾರ್ಯಗಳು ನದೀ ಪ್ರವಾಹದಂತೆ, ಸದಾ ನಡೆಸುತ್ತಲೇ ಇರುತ್ತಾನೆ. ಅಧಿ ಕಾರ ತಿಳಿಯಲಿ ತಿಳಿಯದೇ ಹೋಗಲಿ, ನದೀಪ್ರವಾಹವತ್ ಭಗವಂತ ತನ್ನ ಕಾರ್ಯ ಮಾಡುತ್ತಾನೇ ಇರುತ್ತಾನೆ, ಮರಳಿ– ಅದೇ ಉದಕವನ್ನೇ ದಾರ ದರೂ ಕಾಣುತ್ತಾರೋ ಅವರಿಗೆ, ಮಜ್ಜನ =ಸ್ನಾನದಿಂದ ಕಶ್ಮಲ ನಿವಾರಣ ವಾಗಿ ಶುದ್ಧರಾಗಿ ಇನ್ನೂ, ಪಾನ– ದೇಹಾಯುಕ್ತನಾಗಿ ಇದ್ದರೆ ಪಾನ ರೂಪದಿಂದ ದಾಹಶಾಂತಿಯೂ ಮಾಡುತ್ತದೆ, ಕರ್ಮಗಳಿಂದ – ಇಂಥ ಸ್ನಾನ ಪಾನಾದಿ ಕರ್ಮಗಳಿಂದ, ಸುಖವಿಹವು– ಸುಖ ಕೊಡೋದಾಗುತ್ತದೆ, ಇದು ದೃಷ್ಟಾಂತ ತದ್ವತ್ ಬಿಂಬಕ್ರಿಯಾ ಪ್ರತಿಬಿಂಬಕ್ರಿಯಾಖ್ಯ ನದಿಯಲ್ಲಿ ಸ್ನಾನಮಾಡಿದವರಿಗೆ ದೇಹಗತ ಅಜ್ಞಾನವೆಂಬ ಕಶ್ಮಲವನ್ನು ತೊಳೆದು, ಆ ಪರಮಾತ್ಮನ ಮಹಾತ್ಮೆ ಎಂಬ ಜಲಪಾನ ಮಾಡೋಣದರಿಂದ, ದಾಹರೂಪ ವಾದ ಅಹಂ ಮಮತಾದಿಗಳು, ಅಜ್ಞಾನವು ಪರಿಹಾರವಾಗಿ ಸುಖಪಡುತ್ತಾನೆ. ॥೩೭॥

(೨) "ಭಾವಪ್ರಕಾಶಿಕೆ" ವ್ಯಾಖ್ಯಾನ :–

ಅಜ್ಞಾನದಿಂದ ಕೆಲವು ಕಾಲ ಮಾಡಿದ ಕರ್ಮಗಳನ್ನು ಪರಮಾತ್ಮನಿಗೆ ಸಮರ್ಪಿಸದಿದ್ದರೂ, ಜ್ಞಾನೋದಯವಾದ ಮೇಲೆ ಸಮರ್ಪಿಸಿದರೂ, ಸ್ವೀಕರಿಸಿ ಮುಕ್ತಿಯನ್ನು ಕೊಡುತ್ತಾನೆಂದು ಹೇಳುತ್ತಾರೆ.

ಹೇಗೆ ನದೀಪ್ರವಾಹಗಳು, ಒಬ್ಬರು ಕಂಡರೂ, ಕಾಣದಿದ್ದರೂ, ಕಾಲ ಗಳಲ್ಲಿ ತಪ್ಪದೆ ಪ್ರವಾಹವು ಬಂದೇ ಬರುವುದೋ ಮತ್ತು ಪ್ರವಾಹವು ಬಂದಿ ತೆಂದು ಜನರಿಗೆ ತಿಳಿವಳಿಕೆ ಬಂದನಂತರ ಸ್ನಾನ ಪಾನಾದಿಗಳನ್ನು ಮಾಡಿದರೆ, ಸುಖವನ್ನು ಕೊಡುವುದೋ, ಹಾಗೆಯೇ ಪರಮಾತ್ಮನು ನಮ್ಮೊಳಗಿದ್ದು ಕರ್ಮಗಳನ್ನು ಮಾಡಿಸುವನು. ವಿಷವನ್ನನುಭವಿಸುವನು ಎಂದು ನಾವು ತಿಳಿಯದಿದ್ದರೂ, ತಾನು ವಿಷಯಸುಖವನ್ನು ಸ್ವೀಕರಿಸದೆ ಇರನು. ನಮಗೆ ತಿಳಿವಳಿಕೆ ಬಂದಮೇಲೆ, ಪರಮಾತ್ಮನಿಗೆ ಸಮರ್ಪಿಸಿದರೆ, ಶಾಶ್ವತ ಸುಖ ಮಯವಾದ ಮುಕ್ತಿಯನ್ನು ಕೊಟ್ಟು ಉದ್ಧರಿಸುವನು. ಆದ್ದರಿಂದ ಮಾಡಿದ

ಸಕಲ ಕರ್ಮಗಳನ್ನೂ ಪರಮಾತ್ಮನೇ ಮಾಡಿ, ಮಾಡಿಸಿದನೆಂದು ಭಾವಿಸಿ, ಅವನಿಗೆ ಅರ್ಪಣೆ ಮಾಡಬೇಕೆಂದು ಭಾವನೆ. ॥೩೭॥

(೩) "ಭಾವದರ್ಪಣಟೀಕಾ" ವ್ಯಾಖ್ಯಾನ:—

ಕಂಡರೂ, ಕಾಣದೇ ಇದ್ದರೂ, ನದೀಪ್ರವಾಹ ತಾನೇ ಹೇಗೆ ಹರಿಯುತ್ತದೋ ತದ್ವತ್ –

"ವಿಷ್ಣುರ್ವಾಯುಂ ಪುರಸ್ಕೃತ್ಯ ಸರ್ವೇಷ್ವೇತೇಷು ಸಂಚರನ್ ।
ಕರೋತಿ ಕಾರಯತ್ಯದ್ಧಾ ಜಗತ್ಕಾರ್ಯಮತಂದ್ರಿತಃ ॥"

ಎಂಬ ಶೌಂಡಿಲ್ಯತತ್ತ್ವರೀತ್ಯಾ ಸಕಲ ಚೇತನಗಳೂ ಕಾರ್ಯಮಾಡಿ,ಮಾಡಿಸುತ್ತಾನೆಂದು ಅನುಸಂಧಾನಕ್ಕೆ ಬಂದನಂತರ ಸ್ವರೂಪಸುಖವ್ಯಕ್ತಿ ಮಾಡುತ್ತಾನೆಂದು ಹೇಳುತ್ತಾರೆ. "ಅರಿಯದಿರ್ದರು"— ಎಂಬ ಈ ಪದ್ಯದಿಂದ ॥೩೭॥

(೪) "ಗುರುಹೃದಯ ಪ್ರಕಾಶಿಕೆ"-ವ್ಯಾಖ್ಯಾನ : —

ಶರತ್ಕಾಲದ ನದೀಜಲವು ಸ್ನಾನಪಾನಮಾಡಿದವರಿಗೆ ಸುಖಕೊಡುವಂತೆ, ಶ್ರೀಹರಿಯು ಸ್ವತಂತ್ರ ಕರ್ತೃತ್ವವನ್ನು ತಿಳಿದು ಸರ್ವವೂ ತಧೀನವೆಂದು ಅರ್ಪಿಸೆದವರಿಗೆ ಜ್ಞಾನಾನಂದಾದಿ ಸ್ವರೂಪವ್ಯಕ್ತಿ ಎಂಬ ಮುಕ್ತಿಯನ್ನು ದೇವರು ಕೊಡುವನು. ಜೀವನು ಹೀಗೆ ತಿಳಿಯದಿದ್ದಾಗ್ಯೂ, ದೇವರು ಸದಾ ನಮ್ಮಲ್ಲಿ ಸರ್ವವಿಷಯಗತ ರಸ ಸ್ವೀಕರಿಸುವನು. ಶರತ್ಕಾಲದ ನದೀಜಲ ಪ್ರವಹಿಸುವಂತೆ, ಆ ಜಲವನ್ನು ಸೇವಿಸದವರಿಗೆ ಸುಖವಿಲ್ಲದಂತೆ ಸರ್ವಸಮರ್ಪಣೆ ಜ್ಞಾನಪೂರ್ವಕ ಮಾಡಿದವರಿಗೆ ಮುಕ್ತಿಇಲ್ಲವೆಂದರ್ಥ. ॥೩೭॥

## ಸರ್ವವ್ಯಾಖ್ಯಾನಸಾರಸಂಗ್ರಹ

ಹಿಂದಿನ ಪದ್ಯದಲ್ಲಿ ನದಿಯ ನೀರಿನ ದೃಷ್ಟಾಂತದಿಂದ, ನದಿಯ ನೀರನ್ನು ನದಿಗೇ ಚೆಲ್ಲಿ, ಹರಿಯ ಕರುಣವ ಪಡೆವಂತೆ, ಭಗವದ್ದತ್ತವಾದ ಸಮಸ್ತ ಧರ್ಮ ಕರ್ಮಗಳನ್ನೂ ಆ ಮೂಲ ಪ್ರಧಾನ ಕರ್ತೃವಿನ ಪಾದಕಮಲಗಳಿಗೆ ಅರ್ಪಿಸಿ,

ಧನ್ಯನಾಗೆಂದು ದಿವ್ಯ ಸಂದೇಶವನ್ನು ಕೊಟ್ಟಂಥ ದಾಸರಾಯರು, ಪ್ರಸಕ್ತ ಪದ್ಯದಲ್ಲಿ ಅಂತಹ ನದಿಯ ಪ್ರವಾಹಗಳ ದೃಷ್ಟಾಂತವನ್ನೇ ತೆಗೆದುಕೊಂಡು, ಸಮಸ್ತ ವ್ಯಾಪಾರ ವಿಶೇಷಗಳನ್ನು ತಾನೇ ಬಿಂಬಕ್ರಿಯಾದ್ವಾರಾ ಮಾಡಿ ಮಾಡಿಸುತ್ತಿರುವ ಆ ಅಪಾರ ಮಹಿಮಾಸಂಪನ್ನನಾದ ಶ್ರೀ ಪರಮಾತ್ಮನ ವಿಶೇಷಾನುಗ್ರಹವನ್ನು ತಿಳಿಸುತ್ತಾರೆ.

ವರ್ಷಕಾಲದಲ್ಲಿ ಸುರಿಯುತ್ತಿರುವ ಮಳೆಯ ಧಾರೆಯಿಂದಾಗಿ, ನದಿಗಳಲ್ಲಿ ಮಹಾಪೂರ ಬರುವುದು. ನದಿಯ ಈ ಪ್ರವಾಹವು ಯಾರು ಬರಲಿ, ಬಿಡಲಿ, ಯಾರು ನೋಡಲಿ, ನೋಡದಿರಲಿ, ತನ್ನ ಮಟ್ಟಿಗೆ ತಾನು ಸ್ವಾಭಾವಿಕ ಸ್ಥಿತಿಯಲ್ಲಿ ಹರಿಯುತ್ತಲೇ ಇರುವುದು. ಆದರೆ ಅಂತಹ ನದಿಯ ಪ್ರವಾಹ ಬಂದಿದೆ ಎಂದು ತಿಳಿದ ನಂತರ, ಜನರು ಆ ನದಿಯಲ್ಲಿ ಸ್ನಾನಪಾನಾದಿಗಳನ್ನು ಮಾಡಿದಾಗ ಅವರು ಶುದ್ಧರಾಗಿ ಮನಶ್ಶಾಂತಿಯನ್ನು ಹೊಂದುವರು. ದೇವ ಮಂದಿರವೆನಿಸಿದ ಈ ಸಾಧನ ಶರೀರದ ಶುದ್ಧೀಕರಣಕ್ಕಾಗಿ ಸ್ನಾನಮಾಡಬೇಕು, ದಾಹಶಾಂತಿಗಾಗಿ ನೀರನ್ನು ಪಾನಮಾಡಬೇಕು. ಇದರಿಂದ ದೇಹಶುದ್ಧಿ ಮತ್ತು ದಾಹಶಾಂತಿಯ ಮೂಲಕ ಮನಸ್ಸಿಗೆ ತೃಪ್ತಿ ಉಂಟಾಗುವುದು.

ಮೇಲ್ಕಂಡ ನದೀಪ್ರವಾಹಗಳಂತೆ, ಸರ್ವತ್ರ ವ್ಯಾಪ್ತನಾದ ಶ್ರೀ ಪರಮಾತ್ಮನು ನಮ್ಮ ಸ್ಥೂಲಶರೀರದಲ್ಲಿಯೂ, ದೇಹಗತ ಇಂದ್ರಿಯಗಳಲ್ಲಿಯೂ, ಆ ಇಂದ್ರಿಯಾಭಿಮಾನಿ ದೇವತೆಗಳಲ್ಲಿಯೂ, ಅವರಿಗೆ ನಿಯಾಮಕರಾದ ಪ್ರಥಮಾಂಗರಾದ ಮುಖ್ಯ ಪ್ರಾಣದೇವರಲ್ಲಿಯೂ ತಾನು ಅಂತರ್ಯಾಮಿ ರೂಪದಿಂದ ಸ್ಥಿತನಾಗಿದ್ದು ಜೀವಕೃತ ಸಮಸ್ತ ಕರ್ಮಗಳನ್ನೂ ತಾನೇ ಮಾಡಿ, ಮಾಡಿಸಿ,ಆ ಕರ್ಮಜನ್ಯವಾದ ಪುಣ್ಯಪಾಪ ಫಲಗಳನ್ನು ಜೀವನಿಗೆ ಅವನ ಅನಾದಿ ಕರ್ಮಾನುಸಾರ ಕೊಡುತ್ತಿರುವನು. ಜ್ಞಾನೇಂದ್ರಿಯಗಳಿಗೆ ವಿಷಯಗಳಾದ ಗಂಧ, ರಸ, ರೂಪ, ಸ್ಪರ್ಶ ಮತ್ತು ಶಬ್ದಾದಿಗಳಲ್ಲಿ ತಾನೇ ಸ್ಥಿತನಾಗಿದ್ದು, ರಸಪದವಾಚ್ಯನಾಗಿ, ಆ ವಿಷಯಾಂತರ್ಗತ ತನ್ನ ಭಗವದ್ರೂಪಗಳೇ ಆದ ಸ್ವಾಖ್ಯರಸವನ್ನು ಸ್ವೀಕರಿಸಿ, ಪ್ರತಿಬಿಂಬರಾದ ಜೀವರ ಅನುಭವಕ್ಕೆ ಅವರ ಜ್ಞಾನ, ಇಚ್ಛಾ ಮತ್ತು ಕ್ರಿಯಾಶಕ್ತಿಗಳ ಪ್ರೇರಕನಾಗಿ ತಂದೀಯುವನು. ಈ ಸರ್ವಕರ್ತೃತ್ವ ವಿಷಯವು ಜೀವರಿಗೆ ತಿಳಿದಿರಲಿ, ತಿಳಿಯದಿರಲಿ, ಬಿಂಬ

ರೂಪಿಯಾದ ಶ್ರೀ ಪರಮಾತ್ಮನು ಜೀವರ ದೇಹಸ್ಥಿತನಾಗಿದ್ದು, ಮಾಡಿ, ಮಾಡಿಸುತ್ತಲೇ ಇರುವನು (ನದೀ ಪ್ರವಾಹದಂತೆ.) ಜ್ಞಾನೋದಯವಾದ ನಂತರ, ಜೀವನು ಎಚ್ಚರದಿಂದ ಇದ್ದು, ಸ್ವಕರ್ತೃತ್ವಾಭಿಮಾನವನ್ನು ಬಿಟ್ಟು, ಸಕಲ ಧರ್ಮ ಕರ್ಮಗಳನ್ನು ಭಗವದರ್ಪಣವೆಂದು, ಅವನಿಗೆ ಅರ್ಪಿಸಿದರೆ, ಜೀವರಿಗೆ ಸ್ವರೂಪಾನಂದ ರೂಪವಾದ ಮುಕ್ತಿಸುಖವನ್ನು ಕೊಟ್ಟು, ಅವರನ್ನು ಭವಸಾಗರವೆಂಬ ಈ ದುಸ್ತರವಾದ ಬಂಧನದಿಂದ ಪಾರುಗೊಳಿಸಿ, ಕರ್ಮವಿಮೋಚನೆ ಗೈದು, ಸಂರಕ್ಷಿಸುವನು. ನದೀಪ್ರವಾಹ ವಿಷಯ ತಿಳಿದು ಜನರು ನದಿಯಲ್ಲಿ ಸ್ನಾನಪಾನಾದಿಗಳನ್ನು ಮಾಡಿದರೆ,ಹೇಗೆ ದೇಹಶುದ್ಧಿ ಮತ್ತು ಮನಸ್ಸಿನ ತೃಪ್ತಿಶಾಂತಿಗಳನ್ನು ಹೊಂದುವರೋ ಅಂತೆಯೇ ಅಪಾರ ಕರುಣಾ ಸಂಪನ್ನನಾದ ಶ್ರೀಪರಮಾತ್ಮನ ವಾತ್ಸಲ್ಯರೂಪವಾದ ಅನುಗ್ರಹವೇ ನದೀ ಪ್ರವಾಹದ ಸದೃಶ. ನದಿಯಲ್ಲಿ ಮಿಂದಂತೆ, ಅವನ ಅನುಗ್ರಹವೆಂಬ ತುಂಗ ತರಂಗಗಳಲ್ಲಿ ಸ್ನಾನಮಾಡುವುದು. ನದೀ ಜಲದಿಂದ ದೇಹಶುದ್ಧಿಯಾಗುವಂತೆ, ಸರ್ವಕರ್ಮ ಧರ್ಮಗಳನ್ನೂ ಭಗವದರ್ಪಣ ಮಾಡುವುದರಿಂದ ಜೀವನಿಗೆ ಆ ಕರ್ಮಬಂಧನ ತಪ್ಪಿ, ನಿರ್ಲಿಪ್ತನಾಗಿ ಶುದ್ಧನಾಗುವನು. ಉದಕ ಪಾನದಿಂದ ದಾಹ ಉಪಶಮನ ಮತ್ತು ಮನಸ್ಸಿಗೆ ತೃಪ್ತಿ ಮತ್ತು ಶಾಂತಿ. ಅಂತೆಯೇ ಭಗವದನುಗ್ರಹವೆಂಬ ಫಲಪ್ರಾಪ್ತಿಗಾಗಿ ಮಾಡುವ ಭಕ್ತಿರಸಪಾನದಿಂದ ಕರ್ಮಕ್ಷಯ. ತದ್ವಾರಾ ಸ್ವರೂಪಾನಂದ ಅಭಿವ್ಯಕ್ತಿರೂಪನಾದ ಚಿತ್ಸುಖವನ್ನು ಅನುಗ್ರಹಿಸುವ ಭಕ್ತವತ್ಸಲನಾದ ಕರುಣಾಮಯಿ ಶ್ರೀ ಪರಮಾತ್ಮನು! ಇಂತು ಈ ಸಮೀಚೀನವಾದ ಅನುಸಂಧಾನ ಮಾರ್ಗದಿಂದ ಪುನೀತರಾಗಿರೆಂದು ದಾಸರಾಯರ ದಿವ್ಯಸಂದೇಶ. ॥೩೭॥

# ಪದ್ಯ (೩೮)

**ಮೂಲ :–**

**ಏನು ಮಾಡುವ ಕರ್ಮಗಳು ಲಕು ।**
**ಮೀ ನಿವಾಸನಿಕರ್ಪಿಸನುಸಂ ।**
**ಧಾನ ಪೂರ್ವಕದಿಂದ ಸಂದೇಹಿಸದೆ ದಿನದಿನದಿ ॥**
**ಮಾನನಿಧಿ ಕೈಕೊಂಡು ಸುಖವಿ ।**
**ತ್ರಾನತರ ಸಂತೈಪ ತೃಣಜಲ ।**
**ಧೇನು ತಾನುಂಡನವರತ ಪಾಲ್ಗರೆವ ತೆರದಂತೆ ॥೩೮॥**

**ಅವತರಣಿಕೆ :–**

ಹಿಂದಿನ ಎರಡು ಪದ್ಯಗಳಲ್ಲಿ ನದಿಯ ಜಲ ಮತ್ತು ನದಿಯಲ್ಲಿ ಕಾಲಕ್ಕನು ಗುಣವಾಗಿ ಬರುವ ಪ್ರವಾಹಗಳ ಸುಂದರ ಉಪಮಾನಗಳಿಂದ ಸರ್ವಕರ್ಮ ಮತ್ತು ಧರ್ಮಗಳನ್ನು ತಾನೇ ಬಿಂಬಕ್ರಿಯಾದ್ವಾರಾ ಮಾಡಿ, ಮಾಡಿಸುತ್ತಿರುವ ಸರ್ವಸ್ವತಂತ್ರ ಕರ್ತೃವಾದ ಆ ಶ್ರೀ ಪರಮಾತ್ಮನಿಗೇ ಸರ್ವಕರ್ಮಧರ್ಮ ಸಮರ್ಪಣೆ ಮಾಡುವ ಕ್ರಮವನ್ನು ವಿವರಿಸಿ, ಪ್ರಸಕ್ತ ಪದ್ಯದಿಂದ ಮಾನನಿಧಿಯಾದ ಶ್ರೀಹರಿಯು ಅವುಗಳನ್ನು ಸ್ವೀಕರಿಸಿ, ಜೀವರನ್ನು ಸಂರಕ್ಷಿಸುತ್ತಾನೆ ಎಂದು ಹುಲ್ಲು, ನೀರನ್ನು ತೆಗೆದುಕೊಂಡು, ಅಮೃತಸದೃಶವಾದ ಹಾಲನ್ನು ಕರೆವ ಆಕಳಿನ ದೃಷ್ಟಾಂತವನ್ನು ಕೊಡುತ್ತಾರೆ ಪ್ರಸಕ್ತ ಈ ೩೮ ನೆಯ ಪದ್ಯದಿಂದ. ॥೩೮॥

**ಪ್ರತಿಪದಾರ್ಥ :–**

**ಏನು ಮಾಡುವ**=ಯಾವ ಪ್ರಕಾರದಿಂದಲಾದರೂ ಏನೇನು ಮಾಡುತ್ತಿರುವ **ಕರ್ಮಗಳು**=ದೇಹಗತ ಇಂದ್ರಿಯಗಳ ದ್ವಾರಾ ಜ್ಞಾನರೂಪವಾದ ಹಾಗೂ ಕರ್ಮರೂಪವಾದ ಸಮಸ್ತ ಕ್ರಿಯೆಗಳನ್ನೂ **ಲಕುಮೀ ನಿವಾಸಗೆ**=ಲಕ್ಷ್ಮೀಪತಿಯಾದ ಬಿಂಬರೂಪಿ ಶ್ರೀ ಪರಮಾತ್ಮನಿಗೆ **ಅನು**

**ಸಂಧಾನಪೂರ್ವಕದಿಂದ**=ಆ ಸಮಸ್ತ ಕರ್ಮಗಳಿಗೂ ಮುಖ್ಯ ಪ್ರೇರಕನೂ ಹಾಗೂ ಕರ್ತೃವೂ ಆ ಪರಮಾತ್ಮನೇ ಎಂದು ಜ್ಞಾನಪೂರ್ವಕವಾಗಿ ಅಂತು **ಸಂದೇಹಿಸದೆ**=ಸ್ವಲ್ಪವೂ ಮನಸ್ಸಿನಲ್ಲಿ ಸಂಶಯಪಡದೆ **ದಿನದಿನದಿ**= ಪ್ರತಿದಿನವೂ ಕ್ಷಣಲವಾದಿ ಕಾಲಗಳಲ್ಲಿ **ಅರ್ಪಿಸು**=ಸರ್ವಕರ್ತೃಕನಾದ ಬಿಂಬನಿಗೆ ಸಮರ್ಪಣೆ ಮಾಡುತ್ತಿರು **ಮಾನನಿಧಿ**=ಅಪಾರ ಮಹಿಮಾ ಸಂಪನ್ನನಾದ (ಮಾನ-ಬಹುಮಾನಕ್ಕೆ ಯೋಗ್ಯವಾದ, ನಿಧಿ-ದ್ರವ್ಯಗಳೆಂಬ ಕರ್ಮಗಳು) (ಮಾನ -ಕಲ್ಯಾಣ ಗುಣಗಳಿಗೆ ನಿಧಿ-ಆಗರನಾಗಿರುವ) ಶ್ರೀ ಹರಿಯು **ಕೈಕೊಂಡು**=ಭಗವದರ್ಪಿತವಾದ ಸರ್ವ ಕರ್ಮಗಳನ್ನು ತಾನು ಸ್ವೀಕರಿಸಿ **ಸುಖವಿತ್ತು**=ಇಹದಲ್ಲಿ ಭೋಗ ಭಾಗ್ಯಗಳಿಂದಾಗುವ ಆನಂದ ಮತ್ತು ಪರದಲ್ಲಿ ನಿತ್ಯವಾದ ಮೋಕ್ಷಸ್ವರೂಪವಾದ ಆನಂದವನ್ನು ಕೊಟ್ಟು **ಅನತರ**=ತನ್ನನ್ನು ಶರಣುಹೊಂದಿದ ಭಕ್ತ ಜನರನ್ನು **ಸಂತೈಪ**= ಸಂತೋಷಪಡಿಸಿ ಸಂರಕ್ಷಿಸುವನು. ಹೇಗೆಂದರೆ ಇದಕ್ಕೆ ಗೋವಿನ ದೃಷ್ಟಾಂತ ವನ್ನು ಕೊಡುತ್ತಾರೆ. **ಧೇನು**=ಆಕಳು **ತೃಣ**=ತನಗೆ ನೀಡಿದ ಹುಲ್ಲನ್ನೂ **ಜಲ**=ಕುಡಿಯಲು ಕೊಟ್ಟ ನೀರನ್ನೂ **ತಾನುಂಡು** =ತಾನು ಸ್ವೀಕಾರಮಾಡಿ (ತಿಂದು, ಕುಡಿದು) **ಅನವರತ**=ನಿತ್ಯ ದಲ್ಲಿಯೂ **ಪಾಲ್ಗರೆವ**=ಅಮೃತ ಸದೃಶವಾದ ಹಾಲನ್ನು ಕರೆವ **ತೆರ ದಂತೆ**=ರೀತಿಯಲ್ಲಿ **ಸಂತೈಪ**=ಆನಂದವನ್ನಿತ್ತು ಸಂರಕ್ಷಿಸುವನು. ॥೩೮॥

## ವ್ಯಾಖ್ಯಾನಗಳು

### (೧) ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ :-

ಶ್ರೀ ಪರಮಾತ್ಮ ಅಧಿಕಾರಿಗಳು ಕೇವಲ ಪ್ರೀತಿಪೂರ್ವಕ ಅನುಸಂಧಾನ ದಿಂದ ಕೊಟ್ಟ ಪ್ರಾಕೃತ ಕರ್ಮಕ್ಕೆ ಅಪ್ರಾಕೃತಫಲ ಕೊಡುತ್ತಾನೆ.

ಲಕುಮೀ ನಿವಾಸಗೆ-ರಮಾಭಿಮನ್ಯಮಾನವಾದ ಹೃದಯ ಅಷ್ಟದಳ ಕಮಲದಲ್ಲಿ ಆವಾಸನಾದ ಬಿಂಬರೂಪಿ ಪರಮಾತ್ಮನಿಗೆ, ಏನು ಮಾಡುವ

ಕರ್ಮಗಳು-ಬಿಂಬಕ್ರಿಯಾದ್ವಾರಾ, ದೇಹೇಂದ್ರಿಯಾದಿಗಳಿಂದ ಏನೇನು ಕರ್ಮ ಗಳನ್ನು, ಅನುಸಂಧಾನ ಪೂರ್ವಕದಿಂದ-ಅನುಸಂಧಾನ ಪೂರ್ವಕವಾಗಿ ಕೇವಲ ಭಕ್ತಿಯಿಂದ ಅಂತಃಕರಣದಿಂದಲೇವೆ, ಅರ್ಪಿಸು-ಭಾರತೀರಮಣ ಮುಖ್ಯ ಪ್ರಾಣಾಂತರ್ಗತ ಶ್ರೀಕೃಷ್ಣಾರ್ಪಣಮಸ್ತು ಎಂದು ಅರ್ಪಿತವಾಡು, ಸಂದೇಹಿಸದೆ-ಶುಭಾಶುಭ ಕರ್ಮಗಳು ಅರ್ಪಿಸೋದರಲ್ಲಿ ಏನೇನೂ ಸಂದೇಹ ಮಾಡದೆ, ದಿನದಿನದಿ–ಪ್ರತಿದಿನ ಕ್ಷಣಲವಾದಿಕಾಲಗಳಲ್ಲಿ ಅರ್ಪಿತಮಾಡಬೇಕು ಎಂತ ತಾತ್ಪರ್ಯ. ಮಾನನಿಧಿ–ಮಾನ–ಬಹುಮಾನಕ್ಕೆ ಯೋಗ್ಯವಾದ, ನಿಧಿ -ದ್ರವ್ಯ ಎಂಬ ಕರ್ಮಗಳು, ಕೈಕೊಂಡು ಸ್ವೀಕಾರಮಾಡಿದಂಥಾವನಾಗಿ (ಶ್ರೀದೇವರು), ಅನತರ-ಸಮೀಚೀನವಾದ, ತಾರತಮ್ಯ ಪಂಚಭೇದ ಜ್ಞಾನ ಯುಕ್ತರಾದ, ತನಗೆ ಛಂದಾಗಿ ವಂದನ ಮಾಡಿದ ಈ ಪೂರ್ವೋಕ್ತ ಅಧಿಕಾರಿ ಗಳನ್ನು, ಸಂತೈಪ-ಜ್ಞಾನ, ಭಕ್ತ್ಯಾದಿಗಳು, ಇನ್ನೂ ಐಶ್ವರ್ಯಾದಿಗಳು ಇವುಗಳು ಕೊಟ್ಟು ಸಂರಕ್ಷಣೆ ಮಾಡುತ್ತಾನೆ(ದೃಷ್ಟಾಂತ)ಧೇನು-ಆಕಳು ತನ್ನ ಯಜಮಾನ ನಿಂದ ಕೊಡಲ್ಪಟ್ಟ, ತೃಣ ಜಲ-ಹುಲ್ಲು-ನೀರು, ಅನವರತ ತಾನುಂಡ-ನಿರಂತರ ಭೋಜನಮಾಡಿ, ಪಾಲ್ಗರೆವ-ಹಾಲು ಕೊಡೋದಾಗುತ್ತದೆ, ತೆರದಂತೆ-ಆ ಗೋವಿನೋಪಾದಿಯಲ್ಲಿ ಗೋಸದೃಶನಾದ ಶ್ರೀ ಪರಮಾತ್ಮ, ತೃಣಜಲಕ್ಕೆ ಸದೃಶವಾದ ಶುಭಾಶುಭಕರ್ಮಗಳನ್ನು ಅಧಿಕಾರಿಗಳಿಂದ ಸ್ವೀಕಾರಮಾಡಿ, ಕ್ಷೀರಕ್ಕೆ ಸದೃಶವಾದ ನಿರಂತರ ದಿವ್ಯ ಸ್ವರೂಪಾನಂದವನ್ನು ಭೋಜನ ಮಾಡಿಸುತ್ತಾನೆ. ಆದ್ದರಿಂದ ಅಧಿಕಾರಿಗಳು ದ್ವಂದ್ವ ಕರ್ಮಗಳ ಅರ್ಪಿಸ ಬೇಕು. ॥೩೮॥

(೨) "ಭಾವಪ್ರಕಾಶಿಕೆ"-ವ್ಯಾಖ್ಯಾನ :—

ಪಾಪಪುಣ್ಯ ಕರ್ಮಗಳೆಲ್ಲವನ್ನೂ ನಿಃಸ್ಸಂಶಯವಾಗಿ ಪರಮಾತ್ಮನಿಗೇ ಸಮರ್ಪಿಸಬೇಕೆಂದು ಹೇಳುತ್ತಾರೆ. ತಾವು ಪ್ರತಿದಿವಸದಲ್ಲಿಯೂ ಯಾವ ಪುಣ್ಯವನ್ನು ಮಾಡಲಿ, ಪಾಪವನ್ನು ಮಾಡಲಿ–"ನಾಹಂ ಕರ್ತಾ ಹರಿಃ ಕರ್ತಾ"-ಎಂಬ ಅನುಸಂಧಾನ ಪೂರ್ವಕವಾಗಿ ಸ್ವತಂತ್ರಕರ್ತನು ನಾನಲ್ಲ. ಪರಮಾತ್ಮನು ಮಾಡಿಸಿದುದನ್ನು ನಾನು ಮಾಡುವೆನೆಂದು ಭಾವಿಸಿ,

ಪಾಪವನ್ನು ಪರಮಾತ್ಮನಿಗೆ ಅರ್ಪಿಸಿದರೆ, ನಮಗೆ ಪಾಪವು ಹೆಚ್ಚಾಗುವುದೋ ಏನೋ ಎಂಬ ಸಂದೇಹವನ್ನು ಬಿಟ್ಟು ಶ್ರೀನಿವಾಸನಿಗೆ ಪುಣ್ಯಪಾಪಗಳನ್ನು ಅರ್ಪಿಸಿದರೆ, ಶ್ರೀ ಪರಮಾತ್ಮನು ಅವನ್ನು ಸ್ವೀಕರಿಸಿ, ಪಾಪಗಳನ್ನು ಸುಟ್ಟು ಪುಣ್ಯಕರ್ಮಗಳ ಫಲವನ್ನು ಹೆಚ್ಚುಮಾಡಿ, ನಮಗೆ ಸುಖವನ್ನು ಕೊಟ್ಟು, ಹಸುವು ಹೇಗೆ ಹುಲ್ಲು ತಿಂದು. ನೀರು ಕುಡಿದು, ಹಾಲನ್ನು ಕೊಡುವುದೋ, ಹಾಗೆ ನಮಗೆ ಸುಖವನ್ನು ಕೊಟ್ಟು ಉದ್ಧರಿಸುವನು. ॥೩೮॥

## (೩) "ಭಾವದರ್ಪಣ ಟೀಕಾ" ವ್ಯಾಖ್ಯಾನ :-

ಧಾರ್ಢ್ಯಾರ್ಥ ಪುನಃ ಅದೇ ಮಾತೇ ಹೇಳುತ್ತಾರೆ-"ಏನು ಮಾಡುವ" ಎಂಬ ಪದ್ಯದಿಂದ. ತೃಣ (ಹುಲ್ಲು) ತಿಂದು ಧೇನು (ಗೋವು) ಹಾಲ ಕೊಡುವಂತೆ-ಎಂಬ ದೃಷ್ಟಾಂತ. ಅನವರತ-ಸರ್ವಕಾಲದಲ್ಲಿ. ॥೩೮॥

## (೪) "ಗುರುಹೃದಯ ಪ್ರಕಾಶಿಕೆ" ವ್ಯಾಖ್ಯಾನ :-

ಜೀವ ಸ್ವತಂತ್ರ ಕರ್ತೃತ್ವಾಭಿಮಾನ ಬಿಟ್ಟು, ದೇವರೇ ನೀನೊಬ್ಬ ಸರ್ವಕ್ರಿಯಕ್ಕೂ ಸ್ವತಂತ್ರ ಪ್ರವರ್ತಕನೆಂದು ತಿಳಿದು, ತದಧೀನವೆಂದು ಸರ್ವ ಕರ್ಮಫಲಗಳನ್ನೂ ಸಮರ್ಪಣೆ ಮಾಡಿದರೆ, ಶುಭ ಫಲವನ್ನೇ ಕೊಡುವುದಲ್ಲದೇ, ಅಶುಭಫಲ ಕೊಡುವುದಿಲ್ಲವೆಂದು ಸದೃಷ್ಟಾಂತವಾಗಿ ಬೋಧಿಸುತ್ತಾರೆ-"ಏನು ಮಾಡುವ"-ಎಂದು.

ಏನು ಮಾಡುವ ಪುಣ್ಯಪಾಪರೂಪ ಸಕಲ ಕ್ರಿಯೆಗಳನ್ನೂ, ಅನುಸಂಧಾನ ಪೂರ್ವಕದಿಂದ ಎಂದರೆ, ಜೀವನು ಅಸ್ವತಂತ್ರನಾದ್ದರಿಂದ, ದೇವರಿಗೆ ಕರ್ಮ ಫಲ ಸರ್ವಥಾ ಇಲ್ಲವೆಂತಲೂ, ಕರ್ತೃತ್ವಾಭಿಮಾನಿಗಳಿಗೆ ಕರ್ಮಫಲ ಉಂಟಾಗುವುದೆಂತ ಸಹಾ ತಿಳಿದು, ಶುಭಕರ್ಮಗಳನ್ನು ದೇವರಿಗೆ ಸುಗಂಧ ಸಮರ್ಪಿಸಿದಂತೆ, ಪಾಪಕರ್ಮಗಳನ್ನು ಮೆಟ್ಟಿ, ಪರಿಹರಿಸೆಂದು ಪಾದುಕೆಗಳನ್ನು ಅರ್ಪಿಸಿದಂತೆ ತಿಳಿದು, ಒಪ್ಪಿಸಿದರೆ. ದೋಷ ಬಂದೀತೆಂಬ ಸಂಶಯವನ್ನು ಬಿಟ್ಟು ಲಕ್ಷ್ಮೀನಿವಾಸನಿಗೆ ಸರ್ವಕರ್ಮಗಳನ್ನು ನಿನ್ನ ಅಧೀನವೆಂದರ್ಪಿಸು. ಜ್ಞಾನ ನಿಧಿಯಾದ ದೇವರು, ಸರ್ವಕರ್ಮಗಳನ್ನು ಅಂಗೀಕರಿಸಿ, ಹುಲ್ಲು ನೀರು

ಸ್ವೀಕರಿಸಿದ ಗೋವು ಕ್ಷೀರವನ್ನು ಕೊಡುವಂತೆ, ನಿರಂತರ ಶರಣಾಗತರಿಗೆ ಅಶುಭಫಲ ಪರಿಹರಿಸಿ, ಶುಭಫಲಗಳನ್ನೇ ಕೊಡುವನು.

(೧) ನಮೋ ದೋಷೋ ನ ಚ ಗುಣಃ ಕರ್ತೃತ್ವಾಭಾವತಸ್ಫುಟಂ ।
ಸ್ವತಂತ್ರತ್ವಾನ್ನಚೇಶಸ್ಸಯೋ ಜ್ಞಾತೇಷು ಭವೇದಪಿ ॥"

-ಎಂಬ ಏಕಾದಶ ತಾತ್ಪರ್ಯಾರ್ಥವೂ.

(೨) "ನಾಹಂ ಕರ್ತಾ ಹರಿಃ ಕರ್ತಾ ತತ್ಪೂಜಾ ಕರ್ಮ ಚಾಖಿಲಂ ।
ತಥಾಪಿ ಮತ್ಕೃತಾಪೂಜಾ ತತ್ಪ್ರಸಾದೇವ ನಾನ್ಯಥಾ ॥
ತದ್ಭಕ್ತಿಃ ತತ್ಫಲಂ ಮಹ್ಯಂ ತತ್ಪ್ರಸಾದಃ ಪುನಃ ಪುನಃ ।
ಕರ್ಮನ್ಯಾನೋ ಹರಾವೇವಂ ವಿಷ್ಣೋಸ್ತೃಪ್ತಿಕರಂ ಮಹತ್ ॥"

–ಎಂಬ ಗೀತಾ ತಾತ್ಪರ್ಯ ಸಹ ವಿವರಿಸಿತು. ॥೩೮॥

## ಸರ್ವವ್ಯಾಖ್ಯಾನಸಾರ ಸಂಗ್ರಹ

ಸರ್ವಕರ್ಮಸಮರ್ಪಣೆಯ ಕ್ರಮವನ್ನು ಈ ಪದ್ಯದಿಂದಲೂ ಸಹ, ಸುಂದರವಾದ ಗೋವಿನ ದೃಷ್ಟಾಂತದಿಂದ ನಿರೂಪಿಸುತ್ತಾರೆ.

ಜೀವರಿಗೆ ಜ್ಞಾನಶಕ್ತಿ, ಇಚ್ಛಾಶಕ್ತಿ ಮತ್ತು ಕ್ರಿಯಾಶಕ್ತಿಗಳು ಇವೆ. ಇವು ಸ್ವರೂಪಗತ ಧರ್ಮಗಳು. ಇವಿಲ್ಲದಿದ್ದರೆ ಜೀವನು ಜಡನೇ ಆಗುತ್ತಾನೆ. ಜೀವ ಜಡಗಳಿಗೆ ಪರಸ್ಪರ ಭೇದವಿರುವುದರಿಂದ, ಜಡಗಳಿಗೆ ಸ್ವತಏವ ಪ್ರವೃತ್ತಿ ಇಲ್ಲ. ಚೇತನರಿಗೆ ಜ್ಞಾನ, ಇಚ್ಛಾ ಮತ್ತು ಕ್ರಿಯಾಶಕ್ತಿಗಳುಂಟು. ಆದರೆ ಜೀವನು ತಾನೇ ಸ್ವತಂತ್ರನಾಗಿ, ಸ್ವೇಚ್ಛೆಯಿಂದ ಈ ಶಕ್ತಿತ್ರಯಗಳನ್ನು ಪ್ರವರ್ತನ ಮಾಡಲಾರ. ಈ ಕಾರಣದಿಂದ ಅಸ್ವತಂತ್ರನು. ಅಸ್ವಾತಂತ್ರ್ಯ ಎಂಬುದು ಸಕಲ ಚೇತನರ ಸ್ವರೂಪಗತ ಗುಣಧರ್ಮವು.

ಈ ಪ್ರವರ್ತನ ಕ್ರಿಯೆಯು ಬಿಂಬನಾದ ಶ್ರೀ ಪರಮಾತ್ಮನ ಅಧೀನವಾಗಿದೆ. ಇದನ್ನೇ ಪರಾಧಿನ ಕರ್ತೃತ್ವ ಎಂದು ಕರೆಯುತ್ತೇವೆ.

ಇಲ್ಲಿ "ಪರ" ಎಂಬ ಶಬ್ದಕ್ಕೆ ಸರ್ವೋತ್ತಮನಾದ ಶ್ರೀಪರಮಾತ್ಮನ ಎಂದರ್ಥ. ಅಂತಹ ಪರಮಾತ್ಮನು ಸಕಲ ಚೇತನರ ಬಿಂಬನಾಗಿದ್ದಾನೆ. ಆ ಮುಖ್ಯಬಿಂಬನಾದ ಸರ್ವೋತ್ತಮನಾದ ಶ್ರೀಪರಮಾತ್ಮನ ಅಧೀನದಲ್ಲಿದೆ ಸಕಲ ಜೀವರ ಕರ್ತೃತ್ವಶಕ್ತಿ. ಸರ್ವತಂತ್ರ ಸ್ವತಂತ್ರನಾದ ಬಿಂಬರೂಪಿ ಶ್ರೀ ಪರಮಾತ್ಮನು ಮಾಡಿಸಿದಂತೆ, ಆಡಿಸಿದಂತೆ ಪ್ರತಿಬಿಂಬನಾದ ಜೀವನು ಮಾಡುವನು, ಆಡುವನು. ಅಂದರೆ, ಜೀವನ ಅಧಿಷ್ಠಾನದಲ್ಲಿ ನಡೆಯುತ್ತಿರುವ ಸಕಲ ಕರ್ಮಗಳೂ (ಪಾಪಗಳಾಗಲೀ ಪುಣ್ಯಗಳಾಗಲೀ) ಭಗವದಧೀನವು. ಈ ಅನುಸಂಧಾನವನ್ನು ಚೆನ್ನಾಗಿ ತಿಳಿದವನಾಗಿ, ಜೀವನು ತನ್ನ ದೇಹಗತ ಇಂದ್ರಿಯಗಳ ದ್ವಾರಾ ನಡೆಯುತ್ತಿರುವ ಕಾಯಕ, ವಾಚನಿಕ ಮತ್ತು ಮಾನಸಿಕವಾದ ಸಮಸ್ತ ಪುಣ್ಯಕಾರ್ಯವೇ ಆಗಲೀ ಪಾಪಕರ್ಮಗಳೇ ಆಗಲೀ, ಅವೆಲ್ಲವೂ ಜೀವನ ಯೋಗ್ಯತೆ ಮತ್ತು ಅನಾದಿಕರ್ಮಗಳಿಗನುಸಾರವಾಗಿ ಬಿಂಬಕ್ರಿಯಾದ್ವಾರ ನಡೆಯುತ್ತದೆ ಎಂದು ತಿಳಿದು, ಆ ಪರಮಾತ್ಮನಿಗೆ ಅರ್ಪಿಸಬೇಕೆಂದು ಹೇಳುತ್ತಾರೆ. ಬಿಂಬನು ಸಕಲ ಚೇತನರ ಹೃದಯಗತ ಅಷ್ಟದಳ ಕಮಲದಲ್ಲಿ ಆವಾಸವಾಗಿದ್ದಾನೆ. ಈ ಕಮಲವು ಶ್ರೀರಮಾಭಿಮನ್ಯಮಾನವಾದದ್ದು. ಇದರಿಂದ "ಲಕುಮೀ ನಿವಾಸನ"-ಎಂಬ ಶಬ್ದಪ್ರಯೋಗ ಮಾಡಿರುತ್ತಾರೆ. ಅಂತಹ ಲಕುಮೀ ನಿವಾಸನಿಗೆ ಸಮರ್ಪಿಸುವ ಸರ್ವಕರ್ಮ ಸಮರ್ಪಣ ಕ್ರಿಯೆಯನ್ನು ಜೀವರು ನಿಸ್ಸಂದೇಹದಿಂದ ಮಾಡಬೇಕೆಂದು ತಿಳಿಸುತ್ತಾರೆ. ಪುಣ್ಯ ಮತ್ತು ಪಾಪ ಕರ್ಮಗಳಿಗೆಲ್ಲಾ ಬಿಂಬನೇ ಪ್ರೇರಕನು. ದ್ವಂದ್ವ ಕರ್ಮಗಳೂ ಅವನಿಗೇ ಸಮರ್ಪಿತವು. ಆಗ ಪಾಪಕರ್ಮಗಳನ್ನು ಸುಟ್ಟು ಭಸ್ಮಮಾಡಿ, ಜೀವರಿಗೆ ಪಾಪ ಕ್ಷಾಳನ ಗೈಯ್ಯುವನು. ಶುಭಫಲಗಳನ್ನು ಮಾತ್ರ ತಾನು ಸ್ವೀಕರಿಸಿ, ಅವುಗಳ ಫಲವನ್ನು ಅನಂತಮಡಿಮಾಡಿ ಜೀವರಿಗೇ ಕೊಡುವನು. ಇಂತು ಏನೇನು ಮಾಡುವ ಸಮಸ್ತ ಕರ್ಮಗಳನ್ನೂ ಲಕುಮೀ ನಿವಾಸನಿಗೆ ಪ್ರತಿನಿತ್ಯ, ಕ್ಷಣಕಾಲಗಳಲ್ಲಿಯೂ ಅರ್ಪಿಸುತ್ತಿರಬೇಕು, "ಮಾನ" ಎಂಬ ಶಬ್ದಕ್ಕೆ "ಅಳತೆ" ಮತ್ತು "ಜ್ಞಾನ" ಎಂಬ

ಎರಡು ಅರ್ಥಗಳುಂಟು. ಅಂದರೆ, ಅಪಾರ ಮಹಿಮಾ ಸಂಪನ್ನನೂ ಜ್ಞಾನಾನಂದ ನಿಧಿಯೂ ಆದ ಶ್ರೀ ಪರಮಾತ್ಮನಿಗೆ "ಮಾನನಿಧಿ"-ಎಂದು ಅಭಿಧಾನ. ಅಂತಹ ಮಾನನಿಧಿಯು ಆ ಸರ್ವಕರ್ಮಗಳನ್ನೂ ತಾನು ಸ್ವೀಕರಿಸಿ, ಶುಭ ಕರ್ಮಗಳ ಫಲವನ್ನು ವರ್ಧಿಸಿ, ಜೀವರಿಗೆ ಕೊಟ್ಟು ಅವರಿಗೆ ಇಹದಲ್ಲಿ ಪ್ರಾಪಂಚಿಕ ಸುಖವನ್ನೂ ಮತ್ತು ಪರದಲ್ಲಿ ಸ್ವರೂಪಾನಂದ ರೂಪವಾದ ಮೋಕ್ಷ ಸುಖವನ್ನೂ ಕೊಡುವನು. ಇದಕ್ಕೆ ದಾಸರಾಯರು ಒಂದು ಹೃದಯಂಗಮವಾದ ದೃಷ್ಟಾಂತವನ್ನು ಕೊಡುತ್ತಾರೆ. ನಾವು ಗೋವಿಗೆ ಹುಲ್ಲು, ನೀರು ಮುಂತಾದ ಆಹಾರ ವಸ್ತುಗಳನ್ನು ತಿನ್ನಲು ಮತ್ತು ಕುಡಿಯಲು ಕೊಡುತ್ತೇವೆ. ಅವು ಕೇವಲ ಕ್ಷುದ್ರ ವಸ್ತುಗಳು. ಅಂತಹ ಹುಲ್ಲನ್ನು ತಿಂದು, ಜಲವನ್ನು ಕುಡಿದು, ಆ ಗೋವು ಪ್ರತಿರೂಪವಾಗಿ ನಮಗೆ ಅಮೃತಸದೃಶವಾದ ಕ್ಷೀರವನ್ನು ಕೊಡುವುದು. ಈ ಉಪಮಾನದಲ್ಲಿ ಗೋವಿನ ಸದೃಶ ಬಿಂಬನಾದ ಶ್ರೀ ಪರಮಾತ್ಮನು. ತೃಣ, ಜಲ ಇತ್ಯಾದಿ ನಾವು ಸಮರ್ಪಿಸುವ ದ್ವಂದ್ವ ಕರ್ಮಗಳು. ಪ್ರತಿರೂಪವಾಗಿ ಶ್ರೀ ಪರಮಾತ್ಮನು ಕೊಡುವ ಸುಖರೂಪವಾದ ಫಲವು ಅಮೃತಸದೃಶವಾದ ಕ್ಷೀರವು. ಇಂತಹ ಸುಂದರವಾದ ದೃಷ್ಟಾಂತದಿಂದ ಸರ್ವಕರ್ಮ ಫಲಪ್ರದನಾದ ಶ್ರೀ ಪರಮಾತ್ಮನ ಕಾರುಣ್ಯ ವಿಶೇಷವನ್ನು ನಿರೂಪಿಸಿದ್ದಾರೆ. ॥೩೮॥

## ಪದ್ಯ (೩೯)

ಮೂಲ :

ಪೂರ್ವ ದಕ್ಷಿಣ ಪಶ್ಚಿಮೋತ್ತರ ।
ಪಾರ್ವತೀ ಪತಿಯಗ್ನಿ ವಾಯು ಸು ।
ಶಾರ್ವರೀಕರ (ಚರ) ದಿಗ್ವಿಲಯದೊಳು ಹಂಸನಾಮಕನು ॥
ಸರ್ವಕಾಲದಿ ಸರ್ವರೊಳು ಸುರ ।
ಸಾರ್ವಭೌಮನು ಸ್ವೇಚ್ಛೆಯಲಿ ಮ ।
ತ್ತ್ರೋರ್ವರಿಗೆ ಗೋಚರಿಸದವ್ಯಕ್ತಾತ್ಮನೆಂದೆನಿಸಿ ॥ ॥೩೯॥

**ಅವತರಣಿಕೆ :—**

ಚೇತನರ ಹೃದಯಗತ ಅಷ್ಟದಳಾತ್ಮಕವಾದ ಕಮಲದಲ್ಲಿ ಅಷ್ಟದಿಕ್ಕುಗಳಲ್ಲಿರತಕ್ಕ ದೇವತೆಗಳು, ಅವರವರ ಉಪಾಸ್ಯಮೂರ್ತಿಯಾದ ಶ್ರೀ ಪರಮಾತ್ಮನ ಭಗವದ್ರೂಪಗಳು. ಬಿಂಬನಾದ ಶ್ರೀ ಪರಮಾತ್ಮನು ಆ ಅಷ್ಟದಳಗಳಲ್ಲಿ ಸಂಚಾರ ಮಾಡುತ್ತಿರುವಾಗ ಆಯಾಯ ದಿಕ್ಪಾಲಕರಾದ ದೇವತೆಗಳ ದ್ವಾರಾ, ವಿವಿಧ ಪ್ರವೃತ್ತಿಗಳನ್ನು ಪ್ರೇರಿಸಿ, ಜೀವರಿಂದ ವ್ಯಾಪಾರ ವಿಶೇಷಗಳನ್ನು ಮಾಡಿ,ಮಾಡಿಸುವ ವಿಧಾನ ಈ ವಿವರಗಳನ್ನು ಪ್ರಸಕ್ತ ಸಂಧಿಗತ ೩೯ನೆಯ ಈ ಪದ್ಯದಿಂದ ನಿರೂಪಿಸುತ್ತಾರೆ. ‖೩೯‖

**ಪ್ರತಿಪದಾರ್ಥ :–**

**ಪೂರ್ವ ದಕ್ಷಿಣ ಪಶ್ಚಿಮೋತ್ತರ**=ಪೂರ್ವ, ದಕ್ಷಿಣ, ಪಶ್ಚಿಮ ಮತ್ತು ಉತ್ತರ ದಿಕ್ಕುಗಳಲ್ಲಿ (ಹೃದಯಗತ ಅಷ್ಟದಳಯುಕ್ತ ಕಮಲದ ಈ ದಿಕ್ಕುಗಳ ದಳಗಳಲ್ಲಿ) ಕ್ರಮವಾಗಿ, ಪೂರ್ವಕ್ಕೆ ಇಂದ್ರದೇವರು- ಉಪಾಸ್ಯಮೂರ್ತಿ ಉಪೇಂದ್ರನಾಮಕ ಪರಮಾತ್ಮ; ದಕ್ಷಿಣಕ್ಕೆ ಯಮದೇವರು–ಶ್ರೀ ರಾಮ ಉಪಾಸ್ಯಮೂರ್ತಿ; ಪಶ್ಚಿಮಕ್ಕೆ ವರುಣದೇವರು-ಉಪಾಸ್ಯಮೂರ್ತಿ ಮತ್ಸ್ಯ; ಉತ್ತರಕ್ಕೆ ಕುಬೇರ-ಕಪಿಲ ಉಪಾಸ್ಯಮೂರ್ತಿ. ಈ ನಾಲ್ಕು ಮಂದಿ ದಿಕ್ಪತಿಗಳೂ ಮತ್ತು ಅವರ ಉಪಾಸ್ಯಮೂರ್ತ್ಯಾತ್ಮಕ ಭಗವದ್ರೂಪಗಳಿವೆ. ಇನ್ನು **ಅಗ್ನಿ**=ಆಗ್ನೇಯ ದಿಕ್ಕಿನಲ್ಲಿ ಅಗ್ನಿದೇವರು–ಉಪಾಸ್ಯಮೂರ್ತಿ ಪರಶುರಾಮ ದೇವರು. **ಶುಶಾರ್ವರೀಚರ**=ರಾತ್ರಿಯಲ್ಲಿ ಸಂಚಾರಮಾಡುವ ರಾಕ್ಷಸರು. (ಶಾರ್ವರೀ=ರಾತ್ರಿ; ಚರ=ಸಂಚರಿಸುವವರು) ಅಂತಹ ರಾಕ್ಷಸಯೋನಿಜನಾದ ನಿಋುತಿ ಎಂಬ ದೇವತೆ ನೈರುತ್ಯ ದಿಕ್ಕಿಗೆ ದಿಕ್ಪಾಲಕನು. ಜನಾರ್ದನನು ನಿಋುತಿಯ ಉಪಾಸ್ಯಮೂರ್ತಿ. **ವಾಯು**=ವಾಯುವ್ಯ ದಿಕ್ಕಿಗೆ ಪ್ರವಹವಾಯುದೇವರು–ಉಪಾಸ್ಯಮೂರ್ತಿ ಹಯವದನ. **ಪಾರ್ವತಿಪತಿ**=ಈಶಾನ್ಯ ದಿಕ್ಕಿನಲ್ಲಿ ಪಾರ್ವತೀದೇವಿಯರ ಪತಿಯಾದ ಮಹರುದ್ರದೇವರು-ನರಸಿಂಹದೇವರು. (ಈಶಾನ್ಯ ದಿಕ್ಕಿಗೆ ಚಂದ್ರನೂ ದಿಕ್ಪಾಲಕ; ಉಪಾಸ್ಯಮೂರ್ತಿ ದಧಿವಾಮನ) **ದಿಗ್ವಿಲಯದೊಳು**=ಈ ಅಷ್ಟದಿಕ್ಕು

ಗಳ ವಲಯಾಕಾರದಲ್ಲಿ **ಹಂಸನಾಮಕನು**=ಹಂಸನಾಮಕ ಪರಮಾತ್ಮನು ಚಕ್ರಾಕಾರವಾಗಿ :ಸುತ್ತುತ್ತಿರುವನು **ಸರ್ವಕಾಲದಿ**=ಎಲ್ಲಾ ಕಾಲಗಳಲ್ಲಿಯೂ (ನಿರಂತರವಾಗಿ) **ಸರ್ವರೊಳು**=ಸರ್ವ ಪ್ರಾಣಿಗಳ ಹೃದಯಗತ ಕಮಲದ ದಳಗಳಲ್ಲಿ **ಸುರ ಸಾರ್ವಭೌಮನು**=ದೇವತೆಗಳಿಗೆ ಚಕ್ರವರ್ತಿಯೂ ಸರ್ವೋತ್ತಮನಾದ ಹಂಸನಾಮಕನಾದ ಮೂಲೇಶನು **ಸ್ವೇಚ್ಛೆಯಲಿ**=ತನಗೆ ಇಷ್ಟಬಂದಂತೆ, ಅಂದರೆ, ತನ್ನ ಸತ್ಯಸಂಕಲ್ಪಾನುಸಾರ **ಮರ್ತ್ಯೋರ್ವರಿಗೆ**=ಮರ್ತ್ಯರಿಗೂ **ಗೋಚರಿಸದ**=ಕಣ್ಣಿಗೆ ಕಾಣಿಸದ **ಅವ್ಯಕ್ತಾತ್ಮನೆಂದೆನಿಸಿ**=ಅವ್ಯಕ್ತ ರೂಪದಿಂದಿದ್ದು(ಅಥವಾ ಅವ್ಯಕ್ತ=ಅವ್ಯಕ್ತ ತತ್ತ್ವಕ್ಕೆ ಅಭಿಮಾನಿಯಾದ ಶ್ರೀ ಲಕ್ಷ್ಮೀದೇವಿಗೆ ಆತ್ಮನೆಂದೆನಿಸಿ ಸ್ವಾಮಿಯಾದವನೆಂದು ಕರೆಯಿಸಿಕೊಂಡವನಾಗಿ) ಸಂಚರಿಸುತ್ತಿರುವನು. ॥೩೯॥

## ವ್ಯಾಖ್ಯಾನಗಳು

### (೧) ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ :-

ದೇಹಗತ ಅಷ್ಟದಳಕಮಲ ವಿಚಾರ ಹೇಳುತ್ತಾರೆ.

ಪ್ರಾಣಿಗಳ ಹೃದಯಕಮಲಗತ ಎಂಟು ದಳಗಳಲ್ಲಿರತಕ್ಕ ದೇವತೆಗಳು, ಅವರ ಉಪಾಸ್ಯ ಭಗವನ್ಮೂರ್ತಿಗಳನ್ನು ತಿಳಿಸುತ್ತಾರೆ.

| ಕ್ರಮ ಸಂಖ್ಯೆ | ದಿಕ್ಕು | ದಿಕ್ಪಾಲಕರು | ಉಪಾಸ್ಯಮೂರ್ತಿ |
|---|---|---|---|
| ೧. | ಪೂರ್ವ | ಇಂದ್ರ | ಉಪೇಂದ್ರ |
| ೨. | ಆಗ್ನೇಯ | ಅಗ್ನಿ | ಪರಶುರಾಮ |
| ೩. | ದಕ್ಷಿಣ | ಯಮ | ಶ್ರೀರಾಮ |
| ೪. | ನೈರುತ್ಯ | ನಿರಋತಿ | ಜನಾರ್ದನ |
| ೫. | ಪಶ್ಚಿಮ | ವರುಣ | ಮತ್ಸ್ಯ |
| ೬. | ವಾಯುವ್ಯ | ಪ್ರವಹವಾಯು | ಹಯವದನ |

| | | | |
|---|---|---|---|
| ೭. | ಉತ್ತರ | ಕುಬೇರ | ಕಪಿಲ |
| ೮. | ಈಶಾನ್ಯ | ರುದ್ರ-ಚಂದ್ರ | ನರಸಿಂಹ-ದಧಿವಾಮನ |

---

ಪೂರ್ವ-ಹೃದಯಗತ ಅಷ್ಟದಳಕಮಲವು ಅಷ್ಟದಿಕ್ಕುಗಳ ವ್ಯಾಪಿಸಿ ಅದೆ. ಇದರಲ್ಲಿ ಪೂರ್ವದಿಕ್ಕಿನಲ್ಲಿ ವ್ಯಾಪಿಸಿದ ದಳದಲ್ಲಿ ಇಂದ್ರದೇವರು. ಇವರ ಉಪಾಸ್ಯಮೂರ್ತಿ ಉಪೇಂದ್ರನಾಮಕ ಶ್ರೀ ಪರಮಾತ್ಮ. ದಕ್ಷಿಣ–ದಕ್ಷಿಣ ದಿಕ್ಕಿನಲ್ಲಿ ವ್ಯಾಪಿಸಿದ ದಳದಲ್ಲಿ ಯಮದೇವರು. ಇವರ ಉಪಾಸ್ಯಮೂರ್ತಿ ಶ್ರೀ ರಾಮದೇವರು. ಪಶ್ಚಿಮ-ಪಶ್ಚಿಮ ದಿಕ್ಕಿನಲ್ಲಿ ವ್ಯಾಪಿಸಿರುವ ದಳದಲ್ಲಿ ವರುಣ ದೇವರು. ಇವರ ಉಪಾಸ್ಯಮೂರ್ತಿ ಮತ್ಸ್ಯ. ಉತ್ತರ-ಉತ್ತರ ದಿಕ್ಕಿನಲ್ಲಿ ವ್ಯಾಪಿಸಿದ ದಳದಲ್ಲಿ ಕುಬೇರ. ಇವನ ಉಪಾಸ್ಯಮೂರ್ತಿ ಕಪಿಲನಾಮಕ ಪರಮಾತ್ಮ. ಪಾರ್ವತೀಪತಿ-ಪಾರ್ವತೀ ದೇವಿಯ ಪತಿಯಾದ ರುದ್ರದೇವರು. ಇವರ ದಿಕ್ಕು ಈಶಾನ್ಯ. ಈ ದಿಕ್ಕಿನಲ್ಲಿ ರುದ್ರದೇವರೂನೂ, ಸುಶಾರ್ವರೀಕರ-ಚಂದ್ರದೇವರೂನೂ ಇದ್ದಾರೆ. ಇವರ ಉಪಾಸ್ಯಮೂರ್ತಿ ನರಸಿಂಹ, ದಧಿವಾಮನ ರೂಪಗಳು. ಅಗ್ನಿ-ಆಗ್ನೇಯ ದಿಕ್ಕಿಗೆ ವ್ಯಾಪಿಸಿದ ದಳದಲ್ಲಿ ಅಗ್ನಿದೇವರು. ಇವರ ಉಪಾಸನಾಮೂರುತಿ ಪರಶುರಾಮದೇವರು. ಉಪಲಕ್ಷಣಯಾ ನೈರುತ್ಯದಿಕ್ಕಿಗೂ ಗ್ರಾಹ್ಯ. ಈ ದಿಕ್ಕಿನ ದಳದಲ್ಲಿ ನಿರಋತಿ ನಾಮಕನು. ಇವನ ಉಪಾಸನಾಮೂರ್ತಿ ಜನಾರ್ದನ. ವಾಯು-ವಾಯುವ್ಯ ದಿಕ್ಕಿಗೆ ವ್ಯಾಪಿಸಿದ ದಳದಲ್ಲಿ ಪ್ರವಹವಾಯುದೇವರು. ದಿಗ್ವಲಯದೊಳು–ಈ ದಿಕ್ಕುಗಳ ವಲಯಾಕಾರದಲ್ಲಿ, ಹಂಸನಾಮಕನು–ಹಂಸನಾಮಕ ಪರಮಾತ್ಮ ಗುಂಡಕ್ಕೆ ಸುತ್ತುತ್ತಾ ಇರುತ್ತಾನೆ. ಈ ಹಂಸನಾಮಕನು-ಈ ಹಂಸನಾಮಕ ಪರಮಾತ್ಮನೇ ಮೂಲೇಶ ಎಂಬ ನಾಮಾಂತರದಿಂದ ಕಮಲಕರ್ಣಿಕಾ ಮೂಲದಲ್ಲಿ ಇದ್ದಾನೆ. ಸರ್ವಕಾಲದಿ-ನಿರಂತರದಲ್ಲೂ, ಸರ್ವರೊಳು-ಪೂರ್ವೋಕ್ತ ಪ್ರಕಾರ ಸರ್ವಪ್ರಾಣಿಗಳ ಹೃದಯ ಕಮಲಗತ ದಳಗಳಲ್ಲಿ, ಸರ್ವರ ಹೃದಯದೊಳು -ದಿಕ್ಪಾಲಕರಿಂದ ಸಹಿತನಾಗಿ ದಳಗಳಲ್ಲಿ, ಸುರ ಸಾರ್ವಭೌಮನು–ಸರ್ವದೇವತೆಗಳಿಗೂನೂ, ಸರ್ವ ಲೋಕಗಳಿಗೂನೂ ಪ್ರಭುವಾದ ಸರ್ವೋತ್ತಮನಾದ ಹಂಸನಾಮಕ ಪರಮಾತ್ಮನು ಸ್ವೇಚ್ಛೆಯಲಿ-ತನ್ನ ಸಂಕಲ್ಪಾನುಸಾರ ತನಗೆ ಇಷ್ಟ ಬಂದಂತೆ ಸಂಚಾರ ಮಾಡುತ್ತಾ ಬುದ್ಧಿಗಳ ಪ್ರೇರಿಸುತ್ತಾನೆ. ಮತ್ತೋ

ರ್ವರಿಗೆ ಗೋಚರಿಸದೆ-ರಮಾಬ್ರಹ್ಮಾದಿಗಳ ಒಳಗೆ ಒಬ್ಬರಿಗಾದರೂ ಸಾಕಲ್ಯೇನ ತಿಳಿಸದೆ ಇದ್ದಾನೆ. ಅವ್ಯಕ್ತ-ಅವ್ಯಕ್ತ ತತ್ವಾಭಿಮಾನಿಯಾದ ರಮಾದೇವೇರಿಗೆ ಆತ್ಮನು-ಸ್ವಾಮಿಯಾದವನು, ಎಂದೆನಿಸಿ-ಎಂತ ಕರಿಸೋವನಾಗುತ್ತಾನೆ.

ಹಂಸರೂಪಿ ಪರಮಾತ್ಮ ಅಷ್ಟದಳಗಳಲ್ಲಿ ವ್ಯಾಪ್ತನಾದವ. ಬಾಹ್ಯ ಅಷ್ಟ ದಿಕ್ಕುಗಳಲ್ಲಿ ಅಷ್ಟ ದಿಕ್ಪಾಲಕರಿಂದ ಉಪಾಸ್ಯನಾಗಿ ಅನ್ಯರಿಗೆ ತಿಳಿಯದೇ ಇದ್ದು ಜೀವರನ್ನು ರಕ್ಷಿಸುತ್ತಾ ಇರುತ್ತಾನೆ ಎಂತ ತಾತ್ಪರ್ಯ.

ಪ್ರಮಾಣ :

"ನ ಚ ಗೌಣ ಆತ್ಮಾ ದೃಶ್ಯೋ ವಾಚ್ಯಶ್ಚ ನ ನಿರ್ಗುಣ ಇತಿ ಯುಕ್ತಂ ।
ಆತ್ಮಶಬ್ದಾತ್ ॥ ಯೋ ಗುಣೈಃ ಸರ್ವತೋ ಹೀನೋ ಯಶ್ಚ ದೋಷವಿವರ್ಜಿತಃ ।
ಹೇಯೋಪಾದೇಯರಹಿತಃ ಸ ಆತ್ಮೇತ್ಯಭಿಧೀಯತೇ ॥

–ಇತಿ ಬ್ರಹ್ಮಸೂತ್ರೆ ಭಾಷ್ಯೇ ॥

(೨) "ಭಾವಪ್ರಕಾಶಿಕೆ"-ವ್ಯಾಖ್ಯಾನ :-

ದಿಕ್ಕು ವಿದಿಕ್ಕುಗಳಲ್ಲಿ ಭಗವಂತನ ವಿಭೂತಿಚಿಂತನಾ ಪ್ರಕಾರವನ್ನು ಹೇಳುತ್ತಾರೆ.

ಪೂರ್ವ, ದಕ್ಷಿಣ, ಪಶ್ಚಿಮ, ಉತ್ತರವೆಂಬ ನಾಲ್ಕು ದಿಕ್ಕುಗಳು, ವಿದಿಕ್ಕುಗಳು, ಪಾರ್ವತೀಪತಿ ವಾಸಮಾಡುವ ಈಶಾನ್ಯ, ಅಗ್ನಿಯ ದಿಕ್ಕು ಆಗ್ನೇಯ, ವಾಯುವಿನ ದಿಕ್ಕು ವಾಯುವ್ಯ, ರಾಕ್ಷಸನಾದ ನಿರಋತಿಯು ವಾಸಮಾಡುವ ನೈರುತ್ಯ. ಹೀಗೆ ದಿಕ್ಕು ವಿದಿಕ್ಕುಗಳಲ್ಲಿ ಹಂಸನಾಮಕ ಪರಮಾತ್ಮನು ನಿಯಾಮಕನಾಗಿರುವನು. ಹೀಗೆ ದೇವತಾ ಸಾರ್ವಭೌಮನಾದ ಶ್ರೀಹರಿಯು ಸರ್ವಕಾಲದಲ್ಲಿಯೂ ಸರ್ವಪ್ರಾಣಿಗಳಲ್ಲಿಯೂ ಸ್ವೇಚ್ಛೆಯಿಂದಲೇ ಇರುತ್ತಾ,

ಮತ್ತೊಬ್ಬರಿಗೆ ಗೋಚರವಾಗದೆ "ಅವ್ಯಕ್ತಾತ್ಮ" ಎಂಬ ಹೆಸರನ್ನು ಪಡೆದಿರವನು.

"ಇಂದ್ರೋನಲೋ ದಂಡಧರಶ್ಚ ರಕ್ಷೋ ಪಾಶಾಯುಧೋ
ವಾಯು ಧನೇಶ ರುದ್ರಃ ॥"

-ಎಂಬ ಶ್ಲೋಕದಲ್ಲಿ ನಿರಋತಿಗೆ ರಾಕ್ಷಸನೆಂದು ಹೆಸರಿರುವ ಆಧಾರದ ಮೇಲೆ ದಾಸರಾಯರು ಪ್ರಯೋಗಿಸಿರುವರು. ॥೩೯॥

(೩) "ಭಾವದರ್ಪಣ ಟೀಕಾ"-ವ್ಯಾಖ್ಯಾನ :—

ಪೂರ್ವಕ್ಕೆ ರುದ್ರ, ದಕ್ಷಿಣಕ್ಕೆ ಅಗ್ನಿ, ಪಶ್ಚಿಮಕ್ಕೆ ವಾಯು, ಉತ್ತರಕ್ಕೆ ಚಂದ್ರ, ಅಷ್ಟದಿಕ್ಕಿನಲ್ಲಿ ಹಂಸನಾಮಕ ಭಗವದ್ರೂಪವು ಈ ಪ್ರಕಾರ ಇದ್ದು, ದೇವತೆಗಳಿಗೆ ರಾಜನಾದ ಶ್ರೀಹರಿಯು ಅವ್ಯಕ್ತ ಎಂತ ಅನಿಸುತ್ತಾನೆಂದು ಹೇಳುತ್ತಾರೆ । ಪೂರ್ವೇತಿ ॥೩೯॥

(೪) ಶ್ರೀ ವಾದಿರಾಜಾಚಾರ್ಯರ ವ್ಯಾಖ್ಯಾನ (ಸಂಸ್ಕೃತ ಮೂಲ) :

ಪೂರ್ವೇತಿ ॥ ಶಾರ್ವರೀಕರ ಚಂದ್ರಃ । ಹಂಸಃ ॥ಓಂ॥ ವೃತ್ರತೂರ್ಯೇ ಸಶೋಕಸಾತಾ ತನಯೇ ಸ ವಜ್ರೀ ವಿತಂತ ಸಾಯ್ಯೋ ಅಭವತ್ ಸಮತ್ಸು ॥ ಸಮಜ್ಞನಾ ಜನಿಮ ಮಾನುಷಾಣಾಮ್ ॥ಓಂ॥ (ಬೃ.ಸ.ಋ) ಅನೇನ ಶತ್ರುಹನನಂ ಸಾರಯತಿ ಪ್ರಾಪಯತಿ ಇತ್ಯುಕ್ತೇಃ ॥ ಸ ತಥೋಕ್ತಃ ॥ ಅವ್ಯಕ್ತ-ಓಂ ॥ ನ ಯಂ ವಿವಿತ್ತೋ ರೋದಸೀ ನಾಂತರಿಕ್ಷಾಣಿ ವಜ್ರಿಣಂ ॥ ಅಮಾದಿದಸ್ಯ ತಿತ್ವಿನೇ ಸಮೋಜಸಃ ಯದಿಂದ್ರ ಪೃತನಾಜ್ಯೇ ದೇವಾಃ ॥ಓಂ॥ (ಬೃ. ಸ. ಋ.) ನ ಅತ್ತೋಽವ್ಯಕ್ತಃ ಸನಭವತೀತಿ ಅವ್ಯಕ್ತಃ ॥ ಸರ್ವೇಷಾಂ ಅಪಿ ಸಂಬದ್ಧ ಏವ ॥ ನ ಪೃಥಕ್ ಕರ್ತುಂ ಅರ್ಹತೀತಿ । ಸ ತಥೋಕ್ತಃ ॥೩೯॥

**ಕನ್ನಡಾರ್ಥ :-**

ಶಾರ್ವರೀಕರ=ಚಂದ್ರ. "ಹಂಸ". ಇದು ವಿಷ್ಣುಸಹಸ್ರನಾಮಗಳಲ್ಲಿ

ಒಂದು. "ವೃತ್ರತೂರ್ಯೇ"-ಎಂಬ ಬೃಹತೀ ಛಂದಸ್ಸಿನ ಋಙ್ಮಂತ್ರವು ಇದರ ಅರ್ಥ ಸೂಚಕ. "ಶತ್ರುಗಳನ್ನು ನಾಶ ಮಾಡುವುದರಿಂದ (ಸಂಹರಿಸುವುದರಿಂದ), ಶ್ರೀ ಪರಮಾತ್ಮನಿಗೆ "ಹಂಸಿ" ಎಂದು ಹೆಸರು. ಇದು ಶಬ್ದ ನಿರ್ವಚನ. "ಅವ್ಯಕ್ತ"-ಇದೂ ಸಹ ಸಹಸ್ರನಾಮಗಳಲ್ಲಿ ಒಂದು. "ನಯಂ" ಎಂಬ ಬೃಹತೀ ಋಙ್ಮಂತ್ರವು ಈ ನಾಮಾರ್ಥ ಸೂಚಕ. ನ+ವಿ+ಅಕ್ತ =ಅವ್ಯಕ್ತ ಎಂದು ಪದಚ್ಛೇದದಿಂದ ಅರ್ಥನಿರೂಪಣೆ. ಎಂದರೆ, ಸರ್ವರಿಗೂ ಸಂಬಂಧನಾಗಿಯೇ ಇರುತ್ತಾನೆ. ಯಾವ ವಸ್ತುವಿನಿಂದಲೂ, ಯಾವ ಚೇತನರಿಂದಲೂ ಶ್ರೀಪರಮಾತ್ಮನನ್ನು ಬಿಡಿಸಲಿಕ್ಕೆ (ವಿಯೋಗ) ಯಾವ ಕಾಲಕ್ಕೂ ಸಾಧ್ಯವೇ ಇಲ್ಲ. ಇದು ಈಶ–ಜಡ–ಜೀವಗಳಿರುವ ಅನ್ಯೋನ್ಯ ಅವಿಯೋಗ ಸಂಬಂಧ. ಈ ಅರ್ಥವನ್ನೇ "ಅವ್ಯಕ್ತ" ಎಂಬ ಶಬ್ದವು ಪ್ರತಿಪಾದಿಸುವುದು. ॥೩೯॥

(೫) "ಗುರುಹೃದಯ ಪ್ರಕಾಶಿಕೆ"- ವ್ಯಾಖ್ಯಾನ :

ದಿಗಂತರ್ಗತರೂಪ ಚಿಂತನಾ ಪ್ರಕಾರ ನಿರೂಪಿಸುತ್ತಾರೆ.-"ಪೂರ್ವ" ವೆಂದು.

ಪೂರ್ವ, ದಕ್ಷಿಣ ದಿಕ್ಕುಗಳಲ್ಲಿ ಇಂದ್ರಾಗ್ನ್ಯಾದಿ ದೇವತೆಗಳು, ಪಶ್ಚಿಮ ದಿಕ್ಕಿನಲ್ಲಿ ವಾಯುದೇವರು, ಉತ್ತರ ದಿಕ್ಕಿನಲ್ಲಿ ಶಾರ್ವರೀಕರನೆಂಬ ಚಂದ್ರನು, ಪಾರ್ವತೀಪತಿ ರುದ್ರದೇವರು ಸಹ ಇರುವರು. ಹಂಸನಾಮಕ ಸ್ವಾಮಿಯು ದಿಕ್ಕುಗಳ ಮಂಡಲದಲ್ಲಿ, ಸ್ವೇಚ್ಛೆಯಿಂದ ಮತ್ತೊಬ್ಬರಿಗೆ ಕಾಣಿಸದೆ, ಅವ್ಯಕ್ತಾತ್ಮನೆಂದೆನಿಸಿ ಇರುವನೆಂದರ್ಥ.

"ಹಯಗ್ರೀವಶ್ಚ ಸಂವೇದ್ಯೋ ದಿಗ್ವ್ಯಾಪ್ತೋ ದಿಙ್ನಾಮಕಃ ।
ವಿದಿಙ್ನಾಮಕಶ್ಚೈವ ತದ್ವ್ಯಾಪ್ತೋ ಹಂಸನಾಮಕಃ ॥"

-ಎಂಬ ಮಾನಸಸ್ಮೃತ್ಯರ್ಥ ವಿವರಿಸಿತು. ॥೩೯॥

# ಸರ್ವವ್ಯಾಖ್ಯಾನಸಾರ ಸಂಗ್ರಹ

ಪ್ರಸಕ್ತ ಪದ್ಯದಲ್ಲಿ ಅಷ್ಟದಿಕ್ಕುಗಳು, ದಿಕ್ಪಾಲಕರು, ಅವರ ಉಪಾಸ್ಯ ಮೂರ್ತಿ, ಈ ಅಷ್ಟದಿಕ್ಕಿನ ಮಂಡಲದಲ್ಲಿ ವಲಯಾಕಾರದಲ್ಲಿ ಹಂಸನಾಮಕ ಪರಮಾತ್ಮನ ಸಂಚಾರ-ಇತ್ಯಾದಿ ವಿವರಗಳನ್ನು ತಿಳಿಸುತ್ತಾರೆ.

ಸರ್ವಜೀವರ ಹೃದಯದಲ್ಲಿ ಹೃತ್ಪದ್ಮವಿದೆ, ಹೃದಯಗತ ಈ ಕಮಲವು ಅಷ್ಟದಳದಿಂದ ಯುಕ್ತವಾಗಿದೆ. ಈ ಹೃತ್ಪದ್ಮಗತ ಅಷ್ಟದಳಗಳಲ್ಲಿ ಬಿಂಬ ರೂಪಿ ಮೂಲೇಶನಾಮಕ ಪರಮಾತ್ಮನು ಸಂಚರಿಸುತ್ತಿರುವನು. ಈ ಅಷ್ಟ ದಳಗಳಲ್ಲಿ ಅಷ್ಟದಿಕ್ಪಾಲಕರಾದ ದೇವತೆಗಳಿದ್ದಾರೆ. ಆ ದಿಕ್ಪತಿಗಳು ಆಯಾಯಾ ದಳಗತ ತಮ್ಮ ಉಪಾಸ್ಯಮೂರ್ತಿಯನ್ನು ಸೇವಿಸುತ್ತಿರುತ್ತಾರೆ. ಬಿಂಬನು ಈ ಅಷ್ಟದಳಗಳಲ್ಲಿ ಸಂಚರಿಸುತ್ತಿರುವಾಗ, ವಿವಿಧ ಮನೋ ಪ್ರವೃತ್ತಿಗಳನ್ನು ಆಯಾಯಾ ದಿಕ್ಪಾಲಕರ ಮೂಲಕ ಪ್ರೇರಿಸಿ, ಜೀವರ ಅನು ಭವಕ್ಕೆ ಬಿಂಬಕ್ರಿಯಾದ್ವಾರಾ ತಂದೀಯುತ್ತಿರುವನು. ಪ್ರಸಕ್ತ ಪದ್ಯದಲ್ಲಿ ದಾಸರಾಯರು ಮೊದಲು ಪೂರ್ವ, ದಕ್ಷಿಣ, ಪಶ್ಚಿಮ ಮತ್ತು ಉತ್ತರ ಎಂಬ ನಾಲ್ಕು ಪ್ರಧಾನ ದಿಕ್ಕುಗಳನ್ನು ಪ್ರದಕ್ಷಿಣಾಕಾರದಲ್ಲಿ ಹೇಳಿ ನಂತರ ಆಗ್ನೇಯ, ನೈರುತ್ಯ, ವಾಯುವ್ಯ ಮತ್ತು ಈಶಾನ್ಯ ಎಂಬ ನಾಲ್ಕು ವಿದಿಕ್ಕುಗಳನ್ನು ತಿಳಿಸುತ್ತಾರೆ. ಈ ವಿದಿಕ್ಕುಗಳ ಕ್ರಮವನ್ನು ಹೇಳುವಲ್ಲಿ ಈಶಾನ್ಯ, ಆಗ್ನೇಯ, ವಾಯುವ್ಯ ಮತ್ತು ನೈರುತ್ಯ ಈ ರೀತಿಯಲ್ಲಿ ವ್ಯತ್ಯಾಸವಾಗಿದೆ. ಉಪಾಸನಾ ಕ್ರಮದಲ್ಲಿ ಮಂಡಲಾಕಾರವಾಗಿಯೇ (ಪ್ರದಕ್ಷಿಣಗತಿಯಲ್ಲಿ) ತೆಗೆದುಕೊಳ್ಳಬೇಕು. ಇದರ ವಿವರಗಳನ್ನು ಈ ಕೆಳಗಿನ ಪಟ್ಟಿಯಂತೆ ತಿಳಿಯ ಬಹುದು.

| ಕ್ರಮ ಸಂಖ್ಯೆ | ದಿಕ್ಕು-ವಿದಿಕ್ಕುಗಳು | ದಿಕ್ಪಾಲಕರು | ಉಪಾಸ್ಯಮೂರ್ತಿ |
|---|---|---|---|
| ೧. | ಪೂರ್ವ | ಇಂದ್ರ | ಉಪೇಂದ್ರ |
| ೨. | ಆಗ್ನೇಯ | ಅಗ್ನಿ | ಪರಶುರಾಮ |
| ೩. | ದಕ್ಷಿಣ | ಯಮ | ಶ್ರೀರಾಮ |

| | | | |
|---|---|---|---|
| ೪. | ನೈರುತ್ಯ | ನಿರಋತಿ | ಜನಾರ್ದನ |
| ೫. | ಪಶ್ಚಿಮ | ವರುಣ | ಮತ್ಸ್ಯ |
| ೬. | ವಾಯುವ್ಯ | ಪ್ರವಹವಾಯು | ಹಯವದನ |
| ೭. | ಉತ್ತರ | ಕುಬೇರ | ಕಪಿಲ |
| ೮. | ಈಶಾನ್ಯ | ರುದ್ರ | ನರಸಿಂಹ |
| | | ಚಂದ್ರ | ದಧಿವಾಮನ |

ಇಂತು ಆಯಾಯಾ ದಳಗಳಲ್ಲಿ ವಿದ್ಯಮಾನವಾಗಿರುವ ದಿಕ್ಕು, ವಿದಿಕ್ಕುಗಳು, ಅವುಗಳ ದಿಕ್ಪಾಲಕರು, ಅವರವರ ಉಪಾಸ್ಯಮೂರ್ತಿಗಳು ಈ ವಿವರಗಳಿಂದ, ಹೃದಯಗತ ಕಮಲದ ಅಷ್ಟದಳಗಳಲ್ಲಿ ಬಿಂಬರೂಪಿ ಪೂಲೇಶನ ಸಂಚಾರ ಕ್ರಮವನ್ನು ಮೇಲಿನ ಪಟ್ಟಿಯ ಅವಲೋಕನದಿಂದ ತಿಳಿಯಬಹುದು. ಕೆಲವು ವ್ಯಾಖ್ಯಾನ ಗ್ರಂಥಗಳ ಮೂಲ ಪದ್ಯದಲ್ಲಿ "ಶಾರ್ವರೀಕರ" ಎಂದೂ, ಇನ್ನೂ ಕೆಲವದರಲ್ಲಿ "ಶಾರ್ವರೀಚರ" ಎಂತಲೂ ಇದೆ. ಈ ಕಾರಣದಿಂದ ಮೂಲಪದ್ಯದಲ್ಲಿ ಎರಡನ್ನೂ ಮುದ್ರಿಸಲಾಗಿದೆ. "ಶಾರ್ವರೀ" ಎಂದರೆ "ಕತ್ತಲೆ" ಎಂದರ್ಥ. ಅದನ್ನುಂಟುಮಾಡುವವನು ಶಾರ್ವರೀಕರನು. ಅಂದರೆ ಚಂದ್ರನೆಂದರ್ಥ. "ಶಾರ್ವರೀ" ಎಂದರೆ ಕತ್ತಲೆಯಲ್ಲ, "ಚರ" ಎಂದಲೆ ಚರಿಸುವವರು, "ರಾಕ್ಷಸರು" (ನಿಶಾಚರರು) ಎಂದರ್ಥವಾಗುವುದು. ಇದಕ್ಕೆ "ನಿರಋತಿ" ಎಂದು ತೆಗೆದುಕೊಳ್ಳಬೇಕು. ನಿರಋತಿಯು ರಾಕ್ಷಸಯೋನಿಯಲ್ಲಿ ಹುಟ್ಟಿದವನು. ಆದರೆ ಸ್ವರೂಪದಲ್ಲಿ ದೇವತೆಯು. ಇವನು ನೈರುತ್ಯದಿಕ್ಕಿಗೆ ದಿಕ್ಪಾಲಕನು. ಆಯಾಯಾ ದಿಕ್ಪಾಲಕರ ದೇವತಗಳ ಹೆಸರಿನಿಂದಲೇ ವಿದಿಕ್ಕುಗಳಿಗೆ ಆಯಾಯಾ ಹೆಸರು ಬಂದಿರುವುದು. ಈಗ ಪ್ರದಕ್ಷಿಣಗತಿಯಲ್ಲಿ ತೆಗೆದುಕೊಂಡರೆ ಆಗ್ನೇಯ ದಿಕ್ಕಿನಲ್ಲಿ ಅಗ್ನಿ, ನೈರುತ್ಯದಿಕ್ಕಿನಲ್ಲಿ ನಿರಋತಿ, ವಾಯುವ್ಯದಲ್ಲಿ ಪ್ರವಹವಾಯು ಮತ್ತು ಈಶಾನ್ಯದಲ್ಲಿ ರುದ್ರದೇವರು ಎಂದು ಕ್ರಮ ಸರಿಹೊಂದುವುದು. ಶಾರ್ವರೀಕರನೆಂದು ಪರಿಗಣಿಸಿದರೆ ಚಂದ್ರನು ಈಶಾನ್ಯದಳಾಭಿಮಾನಿಯಾಗಿದ್ದಾನೆ ಎಂದು ತೆಗೆದುಕೊಳ್ಳಬೇಕು. ಇದರಿಂದ ಶಾರ್ವರೀಚರ (ನಿರಋತಿ) ಎಂಬ ಕ್ರಮವು ಹೆಚ್ಚು ಸಮಂಜಸವೆಂದು ಯುಕ್ತಿಯಿಂದ ಸಿದ್ಧವಾಗುವುದು.

ಇಂತು ಅಷ್ಟ ದಿಕ್ಕು ವಿದಿಕ್ಕುಗಳ ಮಂಡಲದಲ್ಲಿ "ಹಂಸ" ನಾಮಕ ಪರಮಾತ್ಮನು ಪ್ರದಕ್ಷಿಣಗತಿಯಲ್ಲಿ ಚಕ್ರಾಕಾರದಲ್ಲಿ ಸುತ್ತುತ್ತಿರುವನು. ಹಂಸ ಎಂಬ ಪದವು ಬಹುರ್ಥಗರ್ಭಿತವಾದದ್ದು.-

(೧) ಸರ್ವದೋಷ ವಿವರ್ಜಿತನಾದ (ಪರಿಶುದ್ಧಾತ್ಮನಾದ) ಜ್ಞಾನಾಸಂದಾದಿಗುಣ ವಿಶಿಷ್ಟವಾದ ರೂಪಕ್ಕೆ "ಹಂಸ" ಎಂದು ಹೆಸರು.

(೨) ಬೃಹತೀ ಸಹಸ್ರದ ಋಜ್ಮಂತ್ರದ ಅರ್ಥವಂತೆ "ಶತ್ರುಗಳನ್ನೆಲ್ಲ ನಾಶಮಾಡುವವನು" ಎಂಬ ಅರ್ಥದಲ್ಲಿ "ಹಂಸ" ಶಬ್ದದ ಅರ್ಥವಿವರಣೆ.

ಇಂತಹ ಹಂಸನಾಮಕನಾದ ಬಿಂಬರೂಪೀ ಮೂಲೇಶನೇ ದಿಕ್ಪಾಲಕಗಳಲ್ಲಿ ಸಮಸ್ತ ಕಾಲದಲ್ಲಿಯೂ (ಜಾಗೃತಿ, ಸ್ವಪ್ನ ಮತ್ತು ಸುಷುಪ್ತ್ಯವಸ್ಥಾತ್ರಯ ಕಾಲಗಳಲ್ಲಿ) ಮತ್ತು ಸರ್ವಪ್ರಾಣಿಗಳ ಹೃದಯ ಕಮಲದಲ್ಲಿ ಆವಾಸನಾಗಿದ್ದಾನೆ. ಆ ಹಂಸನಾಮಕ ಪರಮಾತ್ಮನು ರಮಾ ಬ್ರಹ್ಮಾದಿ ಸಮಸ್ತ ದೇವತಾಗಣಕ್ಕೆ ಚಕ್ರವರ್ತಿಯು. ಅಂತಹ ಸುರಸಾರ್ವಭೌಮನಾದ ಹಂಸನಾಮಕನು ಸರ್ವತಂತ್ರ ಸ್ವತಂತ್ರನಾಗಿ, ತನ್ನ ಸಂಕಲ್ಪಾನುಸಾರ ಈ ಅಷ್ಟದಳಗಳಲ್ಲಿ ಸಂಚರಿಸುತ್ತಿರುವನು. ಹೀಗೆ ದಳಸಂಚಾರ ಮಾಡುತ್ತಿರುವ ಬಿಂಬನು ಸ್ವೇಚ್ಛೆಯಿಂದ ಯಾರಿಗೂ ಸಾಕಲ್ಯನ ಗೋಚರಿಸದೆ ಅವ್ಯಕ್ತನಾಗಿದ್ದಾನೆ. ಇದರಿಂದಲೇ ಬಿಂಬರೂಪೀ ಹಂಸನಾಮಕನನ್ನು "ಅವ್ಯಕ್ತಾತ್ಮ" ಎಂದು ಕರೆದಿದ್ದಾರೆ ಶ್ರೀದಾಸರಾಯರು. "ಅವ್ಯಕ್ತ" ಎಂಬ ಪದವೂ ಸಹ ಬಹ್ವರ್ಥಗರ್ಭಿತವು. ವಿಷ್ಣುಸಹಸ್ರನಾಮದಲ್ಲಿ ಇದೊಂದು ಹೆಸರು.

(೧) ಅವ್ಯಕ್ತ ಎಂದರೆ ಯಾರಿಗೂ ಗೋಚರಿಸದವನು ಎಂದು ಒಂದು ಅರ್ಥ.

(೨) ಬೃಹತೀ ಋಜ್ಮಂತ್ರದ ಅರ್ಥನಿರ್ವಚನದಂತೆ, ನ+ವಿ+ಅಕ್ತ =ಅವ್ಯಕ್ತ ಎಂದಾಗುವುದು. (ಪದಪರಿಚ್ಛೇದದಿಂದ) ಅಂದರೆ ಸರ್ವರಿಗೂ ಯಾವಾಗಲೂ ಸಂಬಂಧವನ್ನು ಹೊಂದಿಯೇ ಇರುವವನು ಎಂದರ್ಥ. ಜೀವ

ರಿಗೂ ಈಶನಿಗೂ ಇರುವ ಈ ಬಿಂಬ ಪ್ರತಿಬಿಂಬ ಸಂಬಂಧವು ಅನಾದಿನಿತ್ಯ ವಾದದ್ದು.

(೩) ಅವ್ಯಕ್ತ ಎಂದರೆ ಅವ್ಯಕ್ತತತ್ತ್ವ ಎಂದರ್ಥ. ಈ ತತ್ತ್ವಾಭಿಮಾನಿ ಶ್ರೀರಮಾದೇವಿಯರು. "ಆತ್ಮ" ಶಬ್ದಕ್ಕೆ ಪ್ರಭು ಅಥವಾ ಸ್ವಾಮಿ ಎಂಬ ಅರ್ಥವಿರುವುದರಿಂದ, ಅವ್ಯಕ್ತ ತತ್ತ್ವಾಭಿಮಾನಿಯಾದ ರಮಾದೇವಿಯರಿಗೆ ಸ್ವಾಮಿಯು (ರಮಾಪತಿ) ಎಂದು "ಅವ್ಯಕ್ತಾತ್ಮ" ಎಂಬ ಶಬ್ದಕ್ಕೆ ಅರ್ಥವಾಗುವುದು. ಇಂತು ಅವ್ಯಕ್ತಾತ್ಮನೆಂಬ ಅಭಿಧಾನದಿಂದ ಬಿಂಬರೂಪಿ ಹಂಸನಾಮಕ ಪರಮಾತ್ಮನು ಹೃದಯಗತ ಕಮಲದ ಅಷ್ಟದಳಗಳಲ್ಲಿ ಸ್ವೇಚ್ಛೆಯಿಂದ ಯಾರಿಗೂ ಗೋಚರವಾಗದೇ ಸಂಚರಿಸುತ್ತ, ಆಯಾಯಾ ದಿಕ್ಪಾಲಕರಿಂದ ಸಂಸೇವ್ಯಮಾನನಾಗಿದ್ದು, ಸುರಸಾರ್ವಭೌಮನೆಂದೆನಿಸಿ, ಅಷ್ಟದಳಗತ ವ್ಯಾಪಾರಗಳನ್ನು ಬಿಂಬಕ್ರಿಯಾ ದ್ವಾರಾ ಮಾಡಿ, ಮಾಡಿಸುತ್ತಿರುವನೆಂದು ಪ್ರಸಕ್ತ ಪದ್ಯದ ತಾತ್ಪರ್ಯ. ॥೩೯॥

## ಪದ್ಯ (೪೦)

ಮೂಲ :–

ಪರಿ ಇಡಾವತ್ಸರನು ಸಂವ
ತ್ಸರದೊಳನಿರುದ್ಧಾದಿ ರೂಪವ ।
ಧರಿಸಿ ಬಾರ್ಹಸ್ಪತ್ಯ ಸೌರಭ ಚಾಂದ್ರಮನು ಎನಿಸಿ ॥
ಇರುತಿಹ ಜಗನ್ನಾಥವಿಠ್ಠಲ ।
ಸ್ಮರಿಸುವವರನು ಸಂತಯಿಪನಂ ।
ದುರುಪರಾಕ್ರಮನುಚಿತ ಸಾಧನ ಯೋಗ್ಯತೆಯನರಿತು ॥ ॥೪೦॥

ಅವತರಣಿಕೆ : –

ಇಡಾವತ್ಸರ, ಸಂವತ್ಸರ, ಬಾರ್ಹಸ್ಪತ್ಯ, ಸೌರಭ ಮತ್ತು ಚಾಂದ್ರಮ ಎಂಬ ಒಂದು ವರ್ಷದ ಅವಧಿಯಲ್ಲಿ ಘಟಕವಾಗಿರುವ ಐದು ಪ್ರಕಾರವಾದ

ಸಂವತ್ಸರವೆಂಬ ಕಾಲವಿಭಾಗಗಳಲ್ಲಿ ಶ್ರೀಪರಮಾತ್ಮನು ಕ್ರಮವಾಗಿ ಅನಿರುದ್ಧ, ಪ್ರದ್ಯುಮ್ನ, ಸಂಕರ್ಷಣ, ವಾಸುದೇವ ಮತ್ತು ನಾರಾಯಣ ಎಂಬ ಪಂಚ ರೂಪಗಳಿಂದ ಮುಖ್ಯಾಭಿಮಾನಿಯಾಗಿದ್ದು, ಕಾಲಾಂತರ್ಗತ, ಕಾಲನಿಯಾಮಕ ನಾಗಿದ್ದು, ಉತ್ಕೃಷ್ಟ ಮಹಿಮಾಸಂಪನ್ನನಾದ ಶ್ರೀ ಜಗನ್ನಾಥವಿಠ್ಠಲ ಸ್ವಾಮಿಯು ಜೀವರ ಯೋಗ್ಯತೆ ಮತ್ತು ಸಾಧನೆಗಳಿಗನುಗುಣವಾಗಿ ಫಲಪ್ರದ ನಾಗಿ ಸಂರಕ್ಷಿಸುತ್ತಾನೆ ಎಂದು ಹೇಳುತ್ತಾರೆ -"**ಪರಿ ಇಡಾವತ್ಸರನು**" ಎಂಬ ಪ್ರಸಕ್ತ ಸಂಧಿಗತ ೪೦ ನೆಯ ಕೊನೆಯ ಈ ಪದ್ಯದಿಂದ, ॥೪೦॥

**ಪ್ರತಿಪದಾರ್ಥ :-**

**ಪರಿ**=ಪರಿವತ್ಸರ **ಇಡಾ**=ಇಡಾವತ್ಸರ **ವತ್ಸರನು**= ವತ್ಸರನಾಮಕನು **ಸಂವತ್ಸರದೊಳು**=ಅನುವತ್ಸರ ಮತ್ತು ಸಂವತ್ಸರ ಗಳೆಂಬ ಐದು ಪ್ರಕಾರವಾದ ಸಂವತ್ಸರಗಳಲ್ಲಿ (ವರ್ಷಾವಧಿಯ ಐದು ಕಾಲ ವಿಭಾಗಗಳು) **ಅನಿರುದ್ಧಾದಿ**=ಅನಿರುದ್ಧ, ಪ್ರದ್ಯುಮ್ನ, ಸಂಕರ್ಷಣ, ವಾಸುದೇವ ಮತ್ತು ನಾರಾಯಣ ಎಂಬ ಪಂಚರೂಪಗಳನ್ನು **ಧರಿಸಿ**= ಧಾರಣ ಮಾಡಿದವನಾಗಿ (ವಿದ್ಯಮಾನನಾಗಿದ್ದುಕೊಂಡು) **ಬಾರ್ಹ ಸ್ಪತ್ಯ**=ಬಾರ್ಹಸ್ಪತ್ಯಮಾನವೆಂತಲೂ, **ಸೌರ**=ಸೌರಮಾನವೆಂತಲೂ, **ಭ**=ನಕ್ಷತ್ರಮಾನವೆಂತಲೂ, **ಚಾಂದ್ರಮನು**=ಚಾಂದ್ರಮಾನವೆಂತಲೂ **ಎನಿಸಿ**=ತನ್ನಾಮಗಳಿಂದ ಕರೆಯಿಸಿಕೊಳ್ಳುವವನಾಗಿ **ಇರುತಿಹ**= ಪೂರ್ವೋಕ್ತ ಪಂಚಕಾಲಮಾನಗಳಲ್ಲಿ ವಿರಾಜಮಾನನಾಗಿರುವ **ಜಗ ನ್ನಾಥವಿಠ್ಠಲ**=ಜಗತ್ತಿಗೆ ಪ್ರಭುವಾದ ದಾಸರಾಯರ ಅಂಕಿತನಾಮರೂಪಿ ಶ್ರೀ ಪರಮಾತ್ಮನು **ಉರುಪರಾಕ್ರಮನು**=ಉತ್ಕೃಷ್ಟ ಪರಾಕ್ರಮಿಯಾದ ಶ್ರೀ ಪರಮಾತ್ಮನು **ಸ್ಮರಿಸುವವರನು**=ತನ್ನನ್ನು ಪೂರ್ವೋಕ್ತ ಪ್ರಕಾರ ದಿಂದ ಸ್ಮರಣೆಮಾಡುತ್ತಿರುವ ಭಕ್ತಜನರನ್ನು **ಉಚಿತ ಸಾಧನ ಯೋಗ್ಯತೆ** =ಅವರವರ ಯೋಗ್ಯತೆಗನುಗುಣವಾದ ಸಾಧನೆಗಳನ್ನು **ಅರಿತು**= ತಿಳಿದವನಾಗಿ **ಸಂತೈಪ**=ಸಂರಕ್ಷಿಸುವವನು. ॥೪೦॥

## ವ್ಯಾಖ್ಯಾನಗಳು-

### (೧) ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ :-

ಶ್ರೀ ಪರಮಾತ್ಮ ಸಂವತ್ಸರಾದಿಗಳಲ್ಲಿ ವ್ಯಾಪ್ತನಾಗಿರುವ ವಿಚಾರವೂ ಆ ವರ್ಷದ ವಿಚಾರವೂ ಹೇಳುತ್ತಾರೆ.

ಪರಿ-ಈ ಕೆಳಗೆ ಹೇಳತಕ್ಕ ಪ್ರಕಾರ ಸಂವತ್ಸರಗಳು ಐದು. ಈ ಐದು ವರ್ಷಗಳುದಾವುದೆಂದರೆ, ಇಡಾವತ್ಸರನು-ಮಾಘಮಾಸ ಕೃಷ್ಣಪಕ್ಷದಶಮೀ ಧನಿಷ್ಠಾನಕ್ಷತ್ರ ಪ್ರಥಮಪಾದ ಇಂಥಾದು ಪ್ರಾಪ್ತವಾಗಿ, ಇಂಥಾ ನಕ್ಷತ್ರ ಪ್ರಥಮ ಪಾದದಲ್ಲಿ ಸೂರ್ಯನು ದಾವಾಗ ಇರುತ್ತಾನೋ,ತದಾರಭ್ಯ ವರ್ಷದ ವರೆವಿಗೂ **ಇಡಾವತ್ಸರ** ಎಂತ ನಾಮ. ಇದಕ್ಕೆ ಅನಿರುದ್ಧರೂಪಿ ಪರಮಾತ್ಮ ಅಭಿಮಾನಿ. ಸಂವತ್ಸರದೊಳು-ಮಾಘಮಾಸ ಶುಕ್ಲಪಕ್ಷ ಪ್ರತಿಪದ, ಉತ್ತರಾಯಣ, ಶತಾಭಿಷಾದಿ ರೇವತ್ಯಂತ ನಕ್ಷತ್ರಗಳ ಒಳಗೆ ದಾವದಾದರೂ ಒಂದು ನಕ್ಷತ್ರ ಸಂಬಂಧಿಸಿ, ಸೂರ್ಯ ಚಂದ್ರಾದಿಗಳು ಸಹ ಉದಯದಿಂದ ಕೂಡಿಕೊಂಡು ಇದ್ದಂಥಾ ಕಾಲದಲ್ಲಿ ಪೂರ್ವೋಕ್ತ ನಕ್ಷತ್ರಗಳ ಒಳಗೆ ದಾವದಾದರೂ ಒಂದು ನಕ್ಷತ್ರದಲ್ಲಿ ಸೂರ್ಯ ಇರಬೇಕು. ಇಂಥಾ ವರ್ಷಕ್ಕೆ **ಸಂವತ್ಸರ** ಎಂತ ನಾಮ. ಇದಕ್ಕೆ ಪ್ರದ್ಯುಮ್ನನಾಮಕ ಪರಮಾತ್ಮ ಅಭಿಮಾನಿಯಾಗಿ ಇರೋವನಾಗಿ ಇದ್ದಾನೆ. ಬಾರ್ಹಸ್ಪತ್ಯ-ಬೃಹಸ್ಪತಿ ದಾವವರ್ಷದಲ್ಲಿ, ದಾವ ನಕ್ಷತ್ರದಲ್ಲಿ ಉದಯಿರುತ್ತಾನೋ ಅದಕ್ಕೆ **ಬಾರ್ಹಸ್ಪತ್ಯವರ್ಷ** ಎಂತ ನಾಮ. ಉದಯವಾದ ರಾಶಿ ಒಳಗೆ ಒಂದು ವರ್ಷ ಇರುತ್ತಾನೆ. ಆ ವರ್ಷಕ್ಕೆ ದಾವ ನಕ್ಷತ್ರದಲ್ಲಿ ಉದಯಿಸುತ್ತಾನೋ ಆ ನಕ್ಷತ್ರನಾಮವು ಉಂಟು. ಇದೇ ಬಾರ್ಹಸ್ಪತ್ಯ ವರ್ಷ ಎಂತ ನಾಮ. ಇದಕ್ಕೆ ಸಂಕರ್ಷಣನಾಮಕ ಪರಮಾತ್ಮ ಅಭಿಮಾನಿಯಾಗಿದ್ದಾನೆ. ಸೌರಭ-ಸೂರ್ಯನು ಒಂದೊಂದು ತಿಂಗಳು ಒಂದೊಂದು ರಾಶಿಸಂಚಾರ ಮ್ಯಾರಿಗೆ ೧೨ ರಾಶಿಗೆ ೧೨ ತಿಂಗಳು ಸಂಚಾರ ಮಾಡೋಣದರಿಂದ ಆಗತಕ್ಕ ವರ್ಷಕ್ಕೆ **ಸೌರಭ** ಎಂತ ನಾಮ. ಆ ವರ್ಷಕ್ಕೆ ವಾಸುದೇವ ನಾಮಕ ಪರಮಾತ್ಮ ಅಭಿಮಾನಿಯಾಗಿ ಇರೋವವನಾಗಿದ್ದಾನೆ. ಚಾಂದ್ರಮನು-ಈ ಅಮಾವಾಸ್ಯೆಯಿಂದ ಬರುವ ಅಮಾವಾಸ್ಯೆಗೆ ಒಂದು ತಿಂಗಳು

ಮ್ಯಾರಿಗೆ ಆಗತಕ್ಕ ವರ್ಷಕ್ಕೆ **ಚಾಂದ್ರಮವರ್ಷ** ಎಂತ ನಾಮ. ಇದಕ್ಕೆ ಶ್ರೀ ನಾರಾಯಣದೇವರೇ ಅಭಿಮಾನಿಯಾಗಿದ್ದಾನೆ. ಅನಿರುದ್ಧಾದಿ ರೂಪವ ಧರಿಸಿ- ಈ ಪ್ರಕಾರ ಐದು ವಿಧವಾದ ವರ್ಷಗಳಲ್ಲಿ, ಅನಿರುದ್ಧಾದಿ ಐದು ರೂಪಗಳ ಧರಿಸಿ, ಒಂದೊಂದು ವರ್ಷದಲ್ಲಿ ಒಂದೊಂದು ರೂಪದಿಂದ, ಎನಿಸಿ ಇರುತಿಹ-ಆಯಾಯಾ ಸಂವತ್ಸರ ನಾಮಕನಾಗಿ ಇರೋವನಾಗಿದ್ದಾನೆ. ಜಗನ್ನಾಥವಿಠ್ಠಲನು-ಜಗತ್ತಿಗೆ ಸ್ವಾಮಿಯಾದ ವಿಠ್ಠಲನಾಮಕ ಶ್ರೀ ಪರಮಾತ್ಮ. ಸ್ಮರಿಸುವವರನು-ಈ ಪ್ರಕಾರ ಅನುಸಂಧಾನದಿಂದ ಸ್ಮರಣೆ ಮಾಡತಕ್ಕವರನ್ನು ಸಂತಯಿಪನೆಂದು-ಸಂರಕ್ಷಣೆ ಮಾಡುತ್ತಾನೆಂದು ಧಾರಢ್ಯ್ರಮನಸ್ಕರಾದವರನ್ನು ಉರುಪರಾಕ್ರಮನು-ಉತ್ಕೃಷ್ಟ ಪರಾಕ್ರಮಿಯಾದ ಶ್ರೀ ಪರಮಾತ್ಮ, ಉಚಿತ ಸಾಧನ-ಆವರವರು ಮಾಡಿದ ಯೋಗ್ಯವಾದ ಸಾಧನೆಗಳ, ಯೋಗ್ಯತೆಯ-ಸ್ವರೂಪ ಯೋಗ್ಯತಾವನ್ನು, ಅರಿತು-ಅರಿತವನಾಗಿ ಸಂರಕ್ಷಿಸುತ್ತಾನೆ ಎಂತ ತಾತ್ಪರ್ಯ.

**ಪ್ರಮಾಣ :**

ಭಾಗವತ ತೃತೀಯ ಸ್ಕಂಧದಲ್ಲಿ ಹನ್ನೆರಡನೆಯ ಅಧ್ಯಾಯದಲ್ಲಿ ಈ ಸಂವತ್ಸರಗಳ ವಿಚಾರ ವಿಸ್ತಾರವಾಗಿ ನಿರೂಪಿಸಲ್ಪಟ್ಟಿದೆ.

॥ಶ್ರೀ ಮತ್ಸತ್ಯಪರಾಯಣ ತೀರ್ಥ ಕರಕಮಲಸಂಜಾತ
ಶ್ರೀ ಮತ್ಸಂಕರ್ಷಣ ತೀರ್ಥ ವಿರಚಿತಯಾಂ
ಶ್ರೀ ಮದ್ಧರಿಕಥಾಮೃತಸಾರ ಕನ್ನಡ ಭಾಷಾ
ಟೀಕಾಯಾಂ ವಿಭೂತಿಸಂಧಿ ವ್ಯಾಖ್ಯಾನಂ ಸಂಪೂರ್ಣಂ ॥

॥ಶ್ರೀ ಕೃಷ್ಣಾರ್ಪಣಮಸ್ತು॥

## (೨) "ಭಾವಪ್ರಕಾಶಿಕೆ"-ವ್ಯಾಖ್ಯಾನ :-

ಸಂಧಿಯನ್ನು ಮುಗಿಸುವಲ್ಲಿ ಕಾಲರೂಪಿಯಾದ ಶ್ರೀ ಪರಮಾತ್ಮನ ವಿಭೂತಿಯನ್ನು ಹೇಳುತ್ತಾರೆ.

**ಭಾಗವತ ತೃತೀಯ ಸ್ಕಂಧ, ೧೨ ನೆಯ ಅಧ್ಯಾಯ ೧೪ ನೆಯ ಶ್ಲೋಕ :—**

**"ಸಂವತ್ಸರಃಪರಿವತ್ಸರ ಇಡಾವತ್ಸರ ಏವ ಚ ।**
**ಅನುವತ್ಸರೋ ವತ್ಸರಶ್ಚ ವಿದ್ಯುರ್ಕೈವಂ ಪ್ರಭಾಷತೇ ॥"**

ಹೀಗೆ ಐದು ವಿಧವಾದ ಸಂವತ್ಸರಗಳು ಉಕ್ತವಾಗಿವೆ.

**ಈ ಶ್ಲೋಕದ ಭಾಗವತ ತಾತ್ಪರ್ಯ ವ್ಯಾಕ :—**

**"ಇಡಾವತ್ಸರ ನಾಮಾ ಸೌ ನಕ್ಷತ್ರ ದ್ವಾದಶೀ ಸ್ಥಿತಃ ।**
**ತಿಥೀನಾಂ ದ್ವಾದಶಾವರ್ತೇಯೋ ಹರಿಃ ನೋನುವತ್ಸರಃ ॥**
**ವತ್ಸರೋಯಃ ಸ್ಥಿತಸ್ತ್ವನ್ಯಾಂಷಷ್ಟ್ಯುತ್ತರ ತತ್ಪಯೇ ॥**
**ಗುರ್ವಾವರ್ತದ್ವಾದಶಾಂಶೋಯಃ ಸ್ಥಿತಃ ಪರಿವತ್ಸರಃ ॥**
**ಸಾರ ದ್ವಾದಶಮಾಸೇಷು ಯಃ ಸ್ಥಿತಃ ಸಂವತ್ಸರೋ ಹರಿಃ ॥**
**ಏವಂ ಸಕಾಲ ನಾಮಾಪಿ ಕಾಲಸ್ಥ ಪರಮೇಶ್ವರ ಇತಿ ॥"**

ಅಶ್ವಿನ್ಯಾದಿ ನಕ್ಷತ್ರಗಳಲ್ಲಿ ಅಶ್ವಿನೀ ನಕ್ಷತ್ರವಾಗಲಿ ಮತ್ತಾವ ನಕ್ಷತ್ರವಾಗಲಿ ೧೨ ಆವರ್ತಿ ಆದರೆ ಒಂದು ವರ್ಷವಾಗುವುದು. ಆ ವರ್ಷಕ್ಕೆ "ಇಡಾವತ್ಸರ" ವೆಂದು ಹೆಸರು. ೧೨ ಅಮಾವಾಸ್ಯೆಗಳಾದರೆ ಒಂದು ವರ್ಷವಾಗುವುದು. ಆ ವರ್ಷಕ್ಕೆ ನಿಯಾಮಕನಾದ ಪರಮಾತ್ಮನಿಗೆ "ಅನುವತ್ಸರ" ನೆಂದು ಹೆಸರು. ೩೬೦ ದಿವಸಗಳಾದರೆ, ಆಗುವ ವರ್ಷ ನಿಯಾಮಕನಿಗೆ "ವತ್ಸರ" ನೆಂದು ಹೆಸರು. (ಗುರು) ಬೃಹಸ್ಪತಿಯು ಒಂದು ರಾಶಿಯನ್ನು

ಬಿಟ್ಟು ಮತ್ತೊಂದು ರಾಶಿಗೆ ಬರುವಾಗ ಆಗುವ ವರ್ಷ ನಿಯಾಮಕನಿಗೆ "ಪರಿವತ್ಸರ" ನೆಂದು ಹೆಸರು. ಸೂರ್ಯನು ೧೨ ರಾಶಿಗಳಲ್ಲಿ ಸಂಚಾರ ಮಾಡುವ ಕಾಲ ನಿಯಾಮಕನಿಗೆ "ಸಂವತ್ಸರ" ನೆಂದು ಹೆಸರು. ಹೀಗೆ ಕಾಲ ನಿಯಾಮಕನಾದ ಪರಮಾತ್ಮನಿಗೆ "ಕಾಲ" ನೆಂದು ಹೆಸರು. ಶ್ರೀ ಪರಮಾತ್ಮನು ಮೇಲೆ ಹೇಳಿದ ಪ್ರಕಾರ, ಬಾರ್ಹಸ್ಪತ್ಯ, ಸೌರ, ಅನುಸೌರ, ನಕ್ಷತ್ರ ಮತ್ತು ಚಾಂದ್ರಮಾನಗಳೆಂಬ ಐದು ಬಗೆಯಾಗಿ ಗಣಿಸುವ ಪರಿವತ್ಸರಾದಿ ೫ ಹೆಸರುಗಳನ್ನು ಧರಿಸಿರುವನು. ಈ ಐದು ರೂಪಗಳಲ್ಲಿ ಅನಿರುದ್ಧ, ಪ್ರದ್ಯುಮ್ನ, ಸಂಕರ್ಷಣ, ವಾಸುದೇವ ಮತ್ತು ನಾರಾಯಣನೆಂಬ ಪಂಚರೂಪಗಳಿಂದ ವಾಸಮಾಡುತ್ತಿರುವನು. ಇದರಲ್ಲಿ ಅನುಸೌರವೆಂದರೆ ೩೬೦ ಹಗಲುಗಳು ಆಗುವ ವತ್ಸರನಾಮಕವಾದ ವರ್ಷಕ್ಕೆ ಹೆಸರು. ಹೀಗೆ ಉತ್ಕೃಷ್ಟ ಪರಾಕ್ರಮಿಯಾದ ಅಸ್ಮದಂತರ್ಯಾಮಿಯಾದ ಬಿಂಬರೂಪಿ ಶ್ರೀ ಮಜ್ಜಗನ್ನಾಥವಿಠ್ಠಲನನ್ನು ಸ್ಮರಿಸುವವರ ಯೋಗ್ಯತಾನುಸಾರವಾಗಿ, ಅವರಿಂದ ಸಾಧನವನ್ನು ಮಾಡಿಸಿ, ಸುಖವನ್ನು ಕೊಟ್ಟು ಉದ್ಧರಿಸುವನು. || ||೪೦||

**||ಇಂತು ಶ್ರೀ ಪದ್ಮನಾಭದಾಸವಿರಚಿತ "ಭಾವಪ್ರಕಾಶಿಕೆ" ಎಂಬ ವ್ಯಾಖ್ಯಾನದಲ್ಲಿ ೫ ನೆಯ "ವಿಭೂತಿಸಂಧಿ" ಯ ವ್ಯಾಖ್ಯಾನವು ಮುಗಿಯಿತು.||"**

**||ಶ್ರೀ ಮಧ್ವೇಶಾರ್ಪಣಮಸ್ತು||**

**(೩) "ಭಾವದರ್ಪಣಟೀಕಾ" ವ್ಯಾಖ್ಯಾನ:–**

ತತ್ತತ್ಸಂಜ್ಞ ಕಾಲಸ್ಯತ್ವೇನ ತನ್ನಿಯಂತೃತ್ವೇನ ತತ್ತನ್ನಾಮ ಉಳ್ಳ ಅನಿರುದ್ಧಾದಿರೂಪಿ ಶ್ರೀಹರಿಯು ಇದ್ದಾನಂತ ಹೇಳುತ್ತಾರೆ. –"ಪರಿ" ಇತಿ ||

ದ್ವಾದಶರಾಶಿಗಳಲ್ಲಿ ಬೃಹಸ್ಪತಿಯಾವರ್ತನದಿಂದ ಯಾವ ಕಾಲವೋ ಅದಕ್ಕೆ ೧೩ ನೆಯ ಭಾಗದಲ್ಲಿ ಇರತಕ್ಕ ಹರಿಗೆ–"ಪರಿವತ್ಸರ"-ಎಂತ ನಾಮ. ಸಪ್ತವಿಂಶನ್ನಕ್ಷತ್ರಗಳು ದ್ವಾದಶ ಮಾಸಗಳಲ್ಲಿ ಆವರ್ತನ ಮಾಡಿದಂಥ ಯಾವ ಕಾಲವೋ ಆ ಕಾಲದಲ್ಲಿ ವಿದ್ಯಮಾನನಾದಂಥ ಶ್ರೀಹರಿಗೆ-"ಇಡಾವತ್ಸರ"

ಎಂತ ನಾಮ. ಮುನ್ನೂರು ಅರವತ್ತು ದಿವಸಾತ್ಮಕ ದ್ವಾದಶ ಮಾಸಗಳಲ್ಲಿ ಇರತಕ್ಕ ಶ್ರೀಹರಿಗೆ-"ವತ್ಸರ"-ಎಂತ ನಾಮ. ಸೌರ ದ್ವಾದಶ ಮಾಸಗಳ ಸಂಕ್ರಮಣಾವಸಾನ ಕಾಲದಲ್ಲಿದ್ದಂಥ ಶ್ರೀಹರಿಗೆ-"ಸಂವತ್ಸರ"-ಎಂತ ನಾಮ. "ಸಂ" ಮತ್ತು "ಸು" ಎರಡೂ ಉಪಸರ್ಗವಾದ್ದರಿಂದ, ಏಕಾರ್ಥವೇ ಆಗೋಣದರಿಂದ, "ಸುವತ್ಸರ"-ಎಂದು ಪದ್ಯದಲ್ಲಿ ಪ್ರಯೋಗಮಾಡಿದ್ದಾರೆ.

ಉಕ್ತಂಚ ತೃತೀಯ ತಾತ್ಪರ್ಯೆ :—

"ಇಡಾವತ್ಸರ ನಾಮಾಸೌ ನಕ್ಷತ್ರ ದ್ವಾದಶೇ ಸ್ಥಿತಃ ।
ತಿಥೀನಾಂ ದ್ವಾದಶಾವರ್ತೇ ಯೋ ಹರಿಃ ಸೋನುವತ್ಸರಃ ॥
ವತ್ಸರೇಯುಃ ಸ್ಥಿತಸ್ತ್ವನ್ನಾಂ ಷಷ್ಟ ಚ್ಯುತ್ತರಶತತ್ರಯೇ ।
ಗುರ್ವಾವರ್ತ ದ್ವಾದಶಾಂಶೇ ಯಃ ಸ್ಥಿತಃ ಪರಿವತ್ಸರಃ ॥
ಸೌರ ದ್ವಾದಶ ಮಾಸೇಷು ಯಃ ಸ್ಥಿತಃ ಸಂವತ್ಸರೋ ।
ಹರಿಃ ಏವಂ ಸಕಾಲನಾಮಾಮಿ ಕಾಲಸ್ಥಃ ಪರಮೇಶ್ವರಃ ॥"

ಎಂಬ ಸ್ಮೃತಿ ಇರೋಣದರಿಂದ ಗ್ರಹಣ ಮಾಡತಕ್ಕದ್ದು.

(೧) ಬಾರ್ಹಸ್ಪತ್ಯ–ಬೃಹಸ್ಪತಿ ಸಂಬಂಧವಾನವೆಂಬರ್ಥ.
(೨) ಸೌರ-ಸೂರ್ಯ ಸಂಬಂಧವಾನವೆಂಬರ್ಥ.
(೩) ಭ-ನಕ್ಷತ್ರ ಸಂಬಂಧವಾನವೆಂಬರ್ಥ.
(೪) ಚಾಂದ್ರಮ-ಚಂದ್ರ ಸಂಬಂಧವಾನವೆಂಬರ್ಥ.

ಉತ್ಕೃಷ್ಟ ಪರಾಕ್ರಮಿಯಾದ ಶ್ರೀಹರಿಯು ಸಾಧನ ಯೋಗ್ಯತೆ ಎರಡೂ ತಿಳಿದು ಸಂತೈಪ–ಸಂರಕ್ಷಿಸುವನೆಂದು ಅನ್ವಯ. ॥೪೦॥

॥ಇತಿ ಶ್ರೀಮತ್ಕವಿಕುಲತಿಲಕ ಶ್ರೀಮಜ್ಜಗನ್ನಾಥದಾಸರಾಜ ವಿರಚಿತ ಶ್ರೀ ಮದ್ಧರಿಕಥಾಮೃತಸಾರಸ್ಯ "ಭಾವದರ್ಪಣ ಟೀಕಾಯಾಂ" ಕಮಲಾಪತಿದಾಸಹೃದ್ಗತೇನ ಶ್ರೀಹರಿಣಾಂ ಕೃತಾಯಾಂ "ವಿಭೂತಿ ಸಂಧಿಃ" ಪರ್ಯಾತಸಿತಃ ॥

॥ಶ್ರೀ ಕೃಷ್ಣಾರ್ಪಣಮಸ್ತು॥

## (೪) ಶ್ರೀ ವಾದಿರಾಜಾಚಾರ್ಯರ ವ್ಯಾಖ್ಯಾನ (ಸಂಸ್ಕೃತ ಮೂಲ):-

ಉಪಸಂಹರತಿ-"ಪರೀತಿ" ॥ "ತತ್ತತ್ಸಂಜ್ಞ ಕಾಲಸ್ಥಿತತ್ವೇನ ತನ್ನಿಯಂ ಕೃತ್ವೇನ ತನ್ನಾಮವಾನ್"-ಇತ್ಯಾಹ "ಸಂವತ್ಸರ"-ಇತಿ ॥ ತೃತೀಯ ಭಾಗವತೇ ಚ ॥ "ಸಂವತ್ಸರಃ ಪರಿವತ್ಸರ ಇಡಾವತ್ಸರ ಏವ ಚ ॥ ಅನುವತ್ಸರೋ ವತ್ಸರಶ್ಚ ವಿದುರೈವಂ ಪ್ರಭಾಷ್ಯತೇ" ॥ಇತಿ॥ ಸೌರ ದ್ವಾದಶ ಮಾಸಾಃ ಸಂಕ್ರಮಣಾವಸಾನಾಃ । ದ್ವಾದಶ ಮಾಸೇ ಸ್ಥಿತಃ ಸಂವತ್ಸರಃ ॥೧॥ ದ್ವಾದಶರಾಶಿಷು ಬೃಹಸ್ಪತೇಃ ಆವೃತ್ಯಾ ಯಃ ತಿಷ್ಠತಿ ಸಃ ಪರಿವತ್ಸರಾಖ್ಯಃ ॥೨॥ ಸಪ್ತವಿಂಶತಿ ನಕ್ಷತ್ರಾಣಿ ತದ್ದ್ವಾದಶ ಮಾಸೇಷು ಸ್ಥಿತಃ ಇಡಾವತ್ಸರ. ನಾಮಾ ॥೩॥ ತಿಥೀನಾಂ ದ್ವಾದಶಾವರ್ತೇ ದ್ವಾದಶಮಾಸರೂಪಃ । ತತ್ರ ಸ್ಥಿತೋ ಹರಿಃ ಅನುವತ್ಸರಃ ॥೪॥ ಅಹ್ನಾಂ ಷಷ್ಟ್ಯುತ್ತರ ಶತತ್ರಯಾತ್ಮ ದ್ವಾದಶ ಮಾಸೇಷು ಸ್ಥಿತೋ ಹರಿಃ ವತ್ಸರನಾಮಾ ॥೫॥ ಕಾಲಾಂತರ್ಯಾಮೀ ಹರಿಃ ಏವಂ ಸ್ವರೂಪೋ ಭಾವ್ಯತೇ ॥ ಇತ್ಯನ್ವಯಃ ॥ ಭಗವತ್ಪಾದಾಸ್ತು "ಇಡಾವತ್ಸರ ನಾಮಾ ಸೌ ನಕ್ಷತ್ರ ದ್ವಾದಶಸ್ಥಿತಃ ॥ ತಿಥೀನಾಂ ದ್ವಾದಶಾವರ್ತೇಯೋ ಹರಿಃ ಸೋಽನುವತ್ಸರಃ ॥ ವತ್ಸರೋ ಯ ಸ್ಥಿತಃ ಸ ಪರಿವತ್ಸರಃ ॥ ಸೌರ ದ್ವಾದಶಮಾಸೇಷು ಯಕಃ ಸ್ಥಿತಃ ಸಂವತ್ಸರೋ ಹರಿಃ ॥ ಏವಂ ಸಕಾಲ ನಾಮಾಪಿ ಕಾಲಸ್ಥಃ ಪರಮೇಶ್ವರಃ ॥ ಇತಿ ಬ್ರಹ್ಮತರ್ಕೇ ॥ ಗುರು ಸೂರ್ಯ ನಕ್ಷತ್ರ ಚಂದ್ರಗಃ ॥

**॥ಇತಿ ಶ್ರೀ ಮದ್ಧರಿಕಥಾಮೃತಸಾರ ಟೀಕಾಯಾಂ "ವ್ಯಾಸದಾಸ ಸಿದ್ಧಾಂತ ಕೌಮುದೀ" ನಾಮ್ನ್ಯಾಂ ಕಾಲೀಯಮರ್ಧನಾರಾಧಕ ಶ್ರೀ ಮದ್ವಿದ್ಯಾಧೀಶ ದಿನೇಯ ವಾದಿರಾಜ ರಚಿತಾಯಾಂ "ವಿಭೂತಿಸಂಧಿಃ" ಸಮಾಪ್ತಃ ॥**

॥ಶ್ರೀ ಮಧ್ವೇಶಾರ್ಪಣಮಸ್ತು॥

**ಕನ್ನಡಾರ್ಥ :–**

"ಪರಿ ಇಡಾವತ್ಸರ"-ಎಂಬ ಪ್ರಸಕ್ತ ಪದ್ಯದಿಂದ ಈ ಸಂಧಿಯನ್ನು ಉಪಸಂಹಾರ ಮಾಡುತ್ತಾರೆ. ಶ್ರೀಹರಿಯು ಪರಿವತ್ಸರ ಎಂಬ ಕಾಲಸೂಚಕ ವಾದ ಹೆಸರಿನಿಂದ ಕರೆಯಿಸಲ್ಪಡುವನು. ಆಯಾಯಾ ಕಾಲಗಳನ್ನು ನಿಯಂತ್ರಿಸುತ್ತಿರುವನು. ಇದರಿಂದ "ಪರಿವತ್ಸರ" ನಾಮಕನು. **ಭಾಗವತ ತೃತೀಯ ಸ್ಕಂಧದಲ್ಲಿ** "ಸಂವತ್ಸರ, ಪರಿವತ್ಸರ, ಇಡಾವತ್ಸರ. ಅನುವತ್ಸರ ಮತ್ತು ವತ್ಸರ" ಎಂದು ಐದು ಪ್ರಕಾರ ಕಾಲಮಾನಗಳಿವೆ. ಈ ಐದು ರೂಪಗಳಿಂದ ಶ್ರೀಹರಿಯು ವಾಚ್ಯನಾಗಿದ್ದಾನೆ.

ಈ ವಿಷಯವನ್ನು ಮೈತ್ರೇಯರು ವಿದುರನಿಗೆ ಹೇಳಿರುತ್ತಾರೆ,

(೧) ಸಂಕ್ರಮಣದಿಂದ ಸಂಕ್ರಮಣದವರೆಗೆ ಸೂರ್ಯನ ಮಾಸ. ಈ ಹನ್ನೆರಡು ಸೌರಮಾನಗಳಲ್ಲಿ ನಿಯಾಮಕ ಶ್ರೀಹರಿಯ ರೂಪವು "ಸಂವತ್ಸರ" ಎನಿಸಿಕೊಳ್ಳುವುದು.

(೨) ಬೃಹಸ್ಪತಿಯು (ಗುರುವು) ಹನ್ನೆರಡು ರಾಶಿಗಳಲ್ಲಿ ತಿರುಗಿ ಕೊನೆಯ ರಾಶಿಯಲ್ಲಿರುವಾಗ, ಶ್ರೀಹರಿಯು "ಪರಿವತ್ಸರ" ಎನಿಸಿಕೊಳ್ಳುತ್ತಾನೆ.

(೩) ಇಪ್ಪತ್ತೇಳು ನಕ್ಷತ್ರಗಳ ತಿಂಗಳುಗಳು ಹನ್ನೆರಡು ಗತಿಸಲು ಆಗುವ ವರ್ಷಮಾನಕ್ಕೆ "ಇಡಾವತ್ಸರ" ಎಂದು ಹೆಸರು.

(೪) ಪ್ರತಿಪದದಿಂದ ಆರಂಭಿಸಿ ಅಮಾವಾಸ್ಯೆಯ ದಿನದವರೆಗಿನ ಮೂವತ್ತು ತಿಥಿಗಳಿಗೆ ಒಂದರಂತೆ ಆಗುವ ಹನ್ನೆರಡು ಮಾಸಗಳ ಒಂದು ವರ್ಷಕ್ಕೆ "ಅನುವತ್ಸರ" ವೆಂದು ಹೆಸರು.

(೫) ೩೬೦ ದಿವಸಗಳ ಹನ್ನೆರಡು ಮಾಸದ ವರ್ಷಕ್ಕೆ "ವತ್ಸರ" ಎಂತ ನಾಮ. ಅಲ್ಲಿ ನಿಯಾಮಕ ಭಗವದ್ರೂಪಕ್ಕೆ "ವತ್ಸರ" ಎಂದು ಕರೆಯುವರು.

ಇಂತು ಶ್ರೀ ಹರಿಯು ಕಾಲಾಂತರ್ಯಾಮಿಯಾಗಿದ್ದುಕೊಂಡು, "ಪರಿವತ್ಸರ" ಇತ್ಯಾದಿ ಕಾಲಪ್ರವರ್ತಕನಾಗಿ, ಆಯಾಯಾ ನಾಮಗಳಿಂದ ಕರೆಯಿಸಿಕೊಳ್ಳುವನು. ಶ್ರೀಮದಾನಂದತೀರ್ಥ ಭಗವತ್ಪಾದರೂ ಸಹ "ತಾತ್ಪರ್ಯ"ದಲ್ಲಿ ಇದೇ ವಿಷಯವನ್ನು "ಇಡಾವತ್ಸರ ನಾಮಾಸೌ"-ಎಂದು ಆರಂಭಿಸಿ, "ಕಾಲಸ್ಥಃ ಪರಮೇಶ್ವರಃ" ಎಂದು ಉಪಸಂಹಾರ ಮಾಡಿರುತ್ತಾರೆ. "ಬ್ರಹ್ಮತರ್ಕ" ವೆಂಬ ಗ್ರಂಥದಲ್ಲಿ ಈ ವಿವರವು ಉಲ್ಲೇಖಿತವಾಗಿದೆ.

ಕಾಲವಾಚಕ ಶಬ್ದಗಳಿಂದ ವಾಚ್ಯನಾದ ಶ್ರೀ ಪರಮಾತ್ಮನು-"ಬಾರ್ಹಸ್ಪತ್ಯ, ಸೌರ, ಚಾಂದ್ರ, ನಕ್ಷತ್ರ" ಮಾಸಗಳಿಂದ ಮುಖ್ಯತಃ ಪ್ರತಿಪಾದ್ಯನಾಗಿದ್ದಾನೆ.

**॥ಇಂತು ಶ್ರೀ ಮದ್ಧರಿಕಥಾಮೃತಸಾರ ಟೀಕಾ-"ವ್ಯಾಸದಾಸ ಸಿದ್ಧಾಂತ ಕೌಮುದೀ" ಯಲ್ಲಿ "ವಿಭೂತಿಸಂಧಿ" ಯ ಕನ್ನಡಾರ್ಥಾನುವಾದ ಪರಿಸಮಾಪ್ತಿಯಾಯಿತು॥**

॥ಶ್ರೀ ಮಧ್ವೇಶಾರ್ಪಣಮಸ್ತು॥

**(೫) "ಗುರುಹೃದಯಪ್ರಕಾಶಿಕೆ"-ವ್ಯಾಖ್ಯಾನ :-**

ಕಾಲಾಂತರ್ಗತರೂಪ ಚಿಂತನಾ ಪ್ರಕಾರ ನಿರೂಪಿಸುತ್ತಾರೆ-"ಪರಿಇಡಾ" ಎಂದು.

ಪರಿವತ್ಸರವೆಂಬ ಬೃಹಸ್ಪತಿ ಒಂದು ರಾಶಿಯಲ್ಲಿ ಸಂಚಾರಮಾಡುವ ಕಾಲವು ಬಾರ್ಹಸ್ಪತ್ಯಮಾನ ವರ್ಷವು. ಇಪ್ಪತ್ತೇಳು ನಕ್ಷತ್ರಗಳು ದಿನ ಒಂದಕ್ಕೆ ಒಂದರ ಪ್ರಕಾರ ಮುಗಿದರೆ ತಿಂಗಳು ಒಂದು. ಈ ಮೇರೆ ಹನ್ನೆರಡು ತಿಂಗಳಿಗೆ ಆಗುವ ಇಡಾವತ್ಸರವು. ಅನುವತ್ಸರವೆಂಬ ಸೌರಮಾನ ವತ್ಸರವು. ೩೬೫ ದಿನ ಸಂವತ್ಸರವೆಂದು ಕರೆಸುವ ಚಾಂದ್ರಮಾನ ವರ್ಷವು. ವತ್ಸರವೆಂದು ಕರೆಸುವ ಮುನ್ನೂರ ಅರವತ್ತು ದಿವಸಕ್ಕೆ ಸರಿಯಾಗಿ ಆಗುವ ಸಾವನಮಾನವರ್ಷವು. ಈ ಐದುವಿಧ ವರ್ಷಗಳಲ್ಲಿಯೂ. ಅನಿರುದ್ಧ, ಪ್ರದ್ಯುಮ್ನ, ಸಂಕರ್ಷಣ, ವಾಸುದೇವ, ನಾರಾಯಣ ಎಂಬ ಐದು ರೂಪ

ದಿಂದ ಇರುವ ಜಗನ್ನಾಥವಿಠ್ಠಲನು, ಉತ್ಕೃಷ್ಟ ಚರಿತ್ರಸ್ವಾಮಿಯು, ಯಾವಾಗಲೂ ತನ್ನನ್ನು ಸ್ಮರಿಸುತ್ತಿರುವ ಸುಜನರನ್ನು ಅವರವರ ಉಚಿತ ಸಾಧನೆ, ಯೋಗ್ಯತೆ ಕ್ರಮ ತಪ್ಪದಂತೆ ತಿಳಿದು ಸಂತೋಷಪಡಿಸುವನು.

"ಸಂವತ್ಸರಃ ಪರಿವತ್ಸರ ಇಡಾವತ್ಸರ ಏವ ಚ ।
ಅನುವತ್ಸರೋ ವತ್ಸರಶ್ಚ ಮನ್ಯೈವಂ ಪ್ರಭಾಷತೇ" ॥

**"ಪಂಚ ಸಂವತ್ಸರ ಮಯಂ".** ಎಂಬ ಜ್ಯೋತಿಶ್ಶಾಸ್ತ್ರವು

"ಯಸ್ಸೃಜ್ಯಶಕ್ತಿಮುರುಧೋಚ್ಛ್ವಸಯನ್ ಸ್ವಶಕ್ತ್ಯಾ ಪುಂಸೋ
ಭ್ರಮಾಯದಿ ವಿಭಾವತಿ ಭೂತ ಬೇಧಃ ॥
ಕಾಲಾಖ್ಯಯಾ ಗುಣಮಯೀಂ ಕ್ರತುಭಿರ್ವಿತನ್ವನ್
ತಸ್ಮೈ ಬಲಿಂ ಹರತ ವತ್ಸರ ಪಂಚಕಾಯ ॥"

**-ಎಂಬ ಭಾಗವತಾರ್ಥ** ಸಹ ಇದರಿಂದ ವಿವರಿಸಿತು. ॥೪೮॥

**॥ಇಂತು, "ಗುರು ಹೃದಯ ಪ್ರಕಾಶಿಕಾ"-ಎಂಬ ವ್ಯಾಖ್ಯಾನ ಸಹಿತ ಶ್ರೀ ಮದ್ಧರಿಕಥಾಮೃತಸಾರದಲ್ಲಿ "ವಿಭೂತಿಸಂಧಿ" ಎಂಬ ಐದನೆಯ ಸಂಧಿಗೆ ಮಂಗಳಂ ॥**

॥ಶ್ರೀ ಕೃಷ್ಣಾರ್ಪಣಮಸ್ತು॥

## ಸರ್ವವ್ಯಾಖ್ಯಾನಸಾರಸಂಗ್ರಹ

ಕಾಲಾಂತರ್ಗತನೂ, ಕಾಲಪ್ರವರ್ತಕನೂ ಆದ ಕಾಲನಾಮಕ ಶ್ರೀ ಪರಮಾತ್ಮನ ಐದು ಪ್ರಕಾರವಾದ ಅಂತರ್ಗತ ಭಗವದ್ರೂಪಗಳನ್ನೂ, ಆ ಕಾಲ ಪ್ರಭೇದಗಳ ನಾಮ ವೈಶಿಷ್ಟ್ಯವನ್ನೂ ತಿಳಿಸುತ್ತಾ, ಪ್ರಸಕ್ತ ಈ ೪೦ ನೆಯ ಕೊನೆಯ ಪದ್ಯದಿಂದ "ವಿಭೂತಿಸಂಧಿ"-ಎಂಬ ಪಂಚಮ ಸಂಧಿಯನ್ನು ಉಪಸಂಹಾರ ಮಾಡುತ್ತಾರೆ.

ಕಾಲಗಣನೆಯಲ್ಲಿ ವರ್ಷಮಾನವು ಐದು ಪ್ರಕಾರವಾಗಿದೆ :—

(೧) ಪರಿವತ್ಸರ. (೨) ಇಡಾವತ್ಸರ. (೩) ವತ್ಸರ. (೪) ಅನುವತ್ಸರ ಮತ್ತು (೫) ಸಂವತ್ಸರ ಎಂಬುದಾಗಿ ಐದು ಪ್ರಕಾರ.

(೧) ಪರಿವತ್ಸರ :—

ಬೃಹಸ್ಪತಿಯು (ಗುರುವು) ಮೇಷಾದಿ ಹನ್ನೆರಡು ರಾಶಿಗಳಲ್ಲಿ ಸಂಚರಿಸುತ್ತಾ, ದ್ವಾದಶ ರಾಶಿಗಳಲ್ಲಿ ಇರುವ ಒಂದು ವರ್ಷದ ಕಾಲಮಾನಕ್ಕೆ ಪರಿವತ್ಸರ ಎಂದು ಹೆಸರು.

ಈ ಕಾಲಮಾನವು ಬೃಹಸ್ಪತಿಗೆ ಸಂಬಂಧಿಸಿರುವುದರಿಂದ ಈ ವರ್ಷಕ್ಕೆ ಬಾರ್ಹಸ್ಪತ್ಯ ಎಂದು ಕರೆಯುತ್ತಾರೆ.

ಈ ಕಾಲಮಾನಕ್ಕೆ ಅನಿರುದ್ಧರೂಪೀ ಪರಮಾತ್ಮನು ಅಭಿಮಾನಿಯು. ಅನಿರುದ್ಧನು ಬಾರ್ಹಸ್ಪತ್ಯ ವಾಚ್ಯನಾಗಿ, ಅದೇ ಹೆಸರಿನಿಂದ ಕರೆಯಿಸಿಕೊಳ್ಳುತ್ತಾ, ಪರಿವತ್ಸರವೆಂಬ ಕಾಲಕ್ಕೆ ಕಾಲಾಭಿಮಾನಿಯಾಗಿದ್ದಾನೆ.

ಪ್ರಮಾಣ :

"ಗುರೋರ್ಬೃಹಸ್ಪತೇ ಮೇಷಾದಿರಾಶಿಷ್ವಾತರ್ತ ಆವೃತ್ತಿರ್ಯನ್ಮಿನ್ನ ದ್ವಾದಶ ವತ್ಸರಾತ್ಮಕೇ ಕಾಲೇ ತನುವರ್ತಾವೃತ್ತಾ ಯಸ್ಮಾತ್ ದ್ವಾದಶೇ ದ್ವಾದಶಮೇಂಽಶೇ ಭಾಗಸ್ಥಸ್ಥಿತಃ ಸಪರಿವತ್ಸರ ತನ್ನಾಮಾ ||

-ಭಾಗವತ-ತೃತೀಯ ಸ್ಕಂಧ-೧೨ ನೆಯ ಅಧ್ಯಾಯ-ಶ್ಲೋಕ ೧೪

(೨) ಇಡಾವತ್ಸರ :—

ಸೂರ್ಯನು ಅಶ್ವಿನ್ಯಾದಿ ರೇವತಿ ಅಂತವಾಗಿ ಇಪ್ಪತ್ತೇಳು ನಕ್ಷತ್ರಗಳನ್ನು ಹನ್ನೆರಡು ಸಾರಿ, ಈ ೨೭ ನಕ್ಷತ್ರಗಳಲ್ಲಿ ಸಂಚರಿಸುವ ಕಾಲಮಾನವನ್ನು

ಇಡಾವತ್ಸರ ವೆಂದು ಕರೆಯುವರು. ಈ ಕಾಲನಾಮಕ ಹರಿಗೆ ಇಡಾ ಎಂತ ನಾಮ.

ಈ ಕಾಲಕ್ಕೆ ಅಭಿಮಾನಿಯಾಗಿ ಪ್ರದ್ಯುಮ್ನ ನಾಮಕ ಪರಮಾತ್ಮನು. ಭ ಅಂದರೆ ನಕ್ಷತ್ರನಾಮಕನಾಗಿ ಕಾಲಪ್ರವರ್ತನ ಮಾಡುತ್ತಿರುವನು.

**ಪ್ರಮಾಣ :**

**"ಅಸೌ ಹರಿರಶ್ವಿನ್ಯಾದಿ ಸಪ್ತವಿಂಶಂತಿ ನಕ್ಷತ್ರಾಣಾಂ ದ್ವಾದಶವಾರ ಮಾವೃತ್ತ್ಯಾ ಯಾವತ್ಕಾಲ ತಸ್ಮಿನ್ ಕಾಲೇ ನಿಯಾಮಕತ್ವೇನ ಸ್ಥಿತಃ ಇತ್ಯರ್ಥಃ" ||** (ಯಾದುಪತ್ಯ)

(೩) **ವತ್ಸರ :—**

ಮುನ್ನೂರಾಅರವತ್ತು ದಿನಗಳಲ್ಲಿ ಸೂರ್ಯನು ಚರಿಸುವ ಒಂದು ವರ್ಷದ ಕಾಲಮಾನಕ್ಕೆ ವತ್ಸರ ಎಂದು ಹೆಸರು.

ಈ ಕಾಲಮಾನಕ್ಕೆ ಸೌರಮಾನ ವಾಚ್ಯನಾಗಿ, ತನ್ನಾಮಕನಾಗಿ ಸಂಕರ್ಷಣರೂಪಿ ಶ್ರೀಪರಮಾತ್ಮನು ಕಾಲಾಭಿಮಾನಿಯಾಗಿದ್ದಾನೆ.

**ಪ್ರಮಾಣ :**

**"ವತ್ಸರೋಽಯಸ್ಥಿತಸ್ತ್ವನ್ಹಾಂ ಷಷ್ಟ್ಯುತ್ತರ ಶತತ್ರಯೋಽಯಂ ಕಿಂಚಿನ ದಿವಸಮಾರಭ್ಯ ಗಣನಾಯಾಂ ಯಾವತಾ ಕಾಲೇನಾನ್ಹಾಂ ಷಷ್ಟ್ಯುತ್ತತ್ರಯಂ ಭವತಿ ತಾವತಿಕಾಲೇ ಸ್ಥಿತಿ ಇತ್ಯರ್ಥಃ" ||**

**(ಶ್ರೀ ಮದ್ಭಾಗವತವಾಕ್ಯ)**

(೪) **ಅನುವತ್ಸರ :—**

ಪ್ರತಿ ತಿಂಗಳೂ ಶುದ್ಧ ಪ್ರತಿಪದ (ಪಾಡ್ಯ) ಆರಂಭಿಸಿ ಅಮಾವಾಸ್ಯೆ ಪೂರ್ಣವಾದ ಮೂವತ್ತು ಸಂಖ್ಯೆಯುಳ್ಳ ತಿಥಿಗಳನ್ನು ಹನ್ನೆರಡು ಆವರ್ತಿ

ಸೂರ್ಯನು ಸಂಚಾರ ಮಾಡುವ ಕಾಲಮಾನವು ಅನುವತ್ಸರವೆಂದು ಕರೆಯಿಸಲ್ಪಡುವುದು. ಈ ಕಾಲಮಾನಕ್ಕೆ ವಾಸುದೇವ ನಾಮಕ ಶ್ರೀ ಪರಮಾತ್ಮನು ಕಾಲಾಭಿಮಾನಿಯು.

**ಪ್ರಮಾಣ :**

"ತಿಥೀನಾಂ ಶುಕ್ಲ ಪ್ರತಿಪದಾಮಾರಭ್ಯಾಮಾವಾಸ್ಯಾದಿ ಪರ್ಯಂತಾನಾಂ ತ್ರಿಂಶ ಸಂಖ್ಯಾನಾಂ ದ್ವಾದಶವಾರಮಾವೃತ್ತಿ ಯಸ್ಮಿನ್ ಸ್ತ ದ್ವಾದಶಾವೃತ್ತಸ್ತಸ್ಮಿನ್ ಕಾಲೇಸ್ಥಿತ ಇತ್ಯನುವರ್ತತೇ ಅನುವತ್ಸರ ಅನುವತ್ಸರೋ ನಾಮಾ" ॥

(೫) ಸಂವತ್ಸರ :—

ಸೂರ್ಯನು ಮೇಷಾದಿ ದ್ವಾದಶ ರಾಶಿಗಳಲ್ಲಿ ಸಂಕ್ರಮಣದಿಂದ ಸಂಕ್ರಮಣಕ್ಕೆ ಸಂಚರಿಸುವ ಹನ್ನೆರಡು ಸಂಖ್ಯಾವುಳ್ಳ ಮಾಸ ಸಮುದಾಯಕ್ಕೆ (೧೨ ತಿಂಗಳು) ಸಂವತ್ಸರ ಎಂದು ಹೆಸರು.

ಈ ಕಾಲಕ್ಕೆ ನಾರಾಯಣ ನಾಮಕ ಶ್ರೀ ಪರಮಾತ್ಮನೇ ಕಾಲನಿಯಾಮಕನು.

**ಪ್ರಮಾಣ :**

"ಸೌರೇಃ ಸೂರ್ಯಸಂಬಂಧೀನಿ ದ್ವಾದಶಕೇ ಸಂಕ್ರಮಣ ಭೇದೇನ ದ್ವಾದಶ ಸಂಖ್ಯಾಕೆ ಮಾಸೇ-ಮಾಸ ಸಮುದಾಯೇ ಸಂವತ್ಸರಸ್ತ ನ್ನಾಮಾ" ॥

ಇಂತು ಪರಿವತ್ಸರ, ಇಡಾವತ್ಸರ, ವತ್ಸರ, ಅನುವತ್ಸರ ಮತ್ತು ಸಂವತ್ಸರಗಳೆಂದು ಐದು ಪ್ರಕಾರವಾದ ವರ್ಷಮಾನಗಳಲ್ಲಿ ಶ್ರೀ ಪರಮಾತ್ಮನು ಕಾಲಾಂತರ್ಗತನಾಗಿ, ಕ್ರಮವಾಗಿ ಅನಿರುದ್ಧ, ಪ್ರದ್ಯುಮ್ನ, ಸಂಕರ್ಷಣ, ವಾಸುದೇವ ಮತ್ತು ನಾರಾಯಣ ಎಂಬ ಪಂಚರೂಪಗಳಿಂದ ಕಾಲಾಭಿಮಾನಿಯಾಗಿ

ಕಾಲಪ್ರವರ್ತಕನಾಗಿ ಕಾಲಚಕ್ರವನ್ನು ತಿರುಗಿಸುತ್ತಿರುವನು. ಆಯಾಯಾ ಕಾಲ ಮಾನಗಳಿಗೆ ಸಂಬಂಧಿಸಿದಂತೆ ಬಾರ್ಹಸ್ಪತ್ಯ, ಸೌರ, ಭ, ಚಾಂದ್ರಮ ಎಂದು ವಾಚ್ಯನಾಗಿ ತತ್ತನ್ನಾಮಕನಾಗಿ ವಿರಾಜಮಾನನಾಗಿದ್ದಾನೆ. ಹೀಗೆಂದು ಅನು ಸಂಧಾನಪೂರ್ವಕವಾಗಿ ಆ ಕಾಲಾಂತರ್ಗತ ಭಗವದ್ರೂಪಗಳನ್ನೂ, ತನ್ನಾ ಮಕ, ಕ್ರಿಯಾವಿಶೇಷಗಳನ್ನೂ ಸದಾ ಧ್ಯಾನಿಸುತ್ತಿರುವ ಸ್ವಭಕ್ತರನ್ನು ಜಗತ್ಪ್ರ ಭುವಾದ ಸ್ವಾಮಿಯು ಸಂರಕ್ಷಿಸುತ್ತಿರುವನು. ಶ್ರೀ ದಾಸರಾಯರ ಬಿಂಬ ಮೂರ್ತಿ ಜಗನ್ನಾಥವಿಠ್ಠಲಾಂಕಿತ ಜಗತ್ಸ್ವಾಮಿಯಾದ ಆ ಶ್ರೀ ಪರಮಾತ್ಮನು ಶ್ರೇಷ್ಠನು ಮತ್ತು ಪರಾಕ್ರಮ ಸಂಪನ್ನನು. ಅಂತಹ ಉರುಪರಾಕ್ರಮಿಯಾದ ಜಗನ್ನಾಥವಿಠ್ಠಲನು ಆಯಾಯಾ ಜೀವರ ಯೋಗ್ಯತೆ ಮತ್ತು ಸಾಧನೆಗಳನ್ನು ತಾನು ಅರಿತವನಾಗಿ, ಆ ಕಾಲಾಂತರ್ಗತ ಭಗವದ್ರೂಪಗಳನ್ನು ಸರ್ವಕಾಲ ದಲ್ಲಿಯೂ ಸ್ಮರಿಸುವವರನ್ನು ಸಂತೈಪನು.

ಇಂತು, ಪಂಚಪ್ರಕಾರವಾದ ಕಾಲಪ್ರಬೇಧಗಳು, ತದಂತರ್ಗತ ಭಗವ ದ್ರೂಪಗಳು. ಕಾಲನಿಯಾಮಕ ರೂಪಗಳ ವಿವರಗಳನ್ನು ವಾಚಕರ ವಿಷಯ ಗ್ರಹಣಕ್ಕೆ ಅನುಕೂಲವಾಗುವಂತೆ ಈ ಕೆಳಗಿನ ಪಟ್ಟಿಯಲ್ಲಿ ಕೊಟ್ಟಿದೆ.

| ಕ್ರಮ ಸಂ. | ಕಾಲ ಪ್ರಬೇಧಗಳು | ವಿವರ | ಸಂಬಂಧ | ಕಾಲ ನಿಯಾಮಕ ರೂಪ |
|---|---|---|---|---|
| ೧. | ಪರಿವತ್ಸರ | ಮೇಷಾದಿ ೧೨ ರಾಶಿಗಳಲ್ಲಿ ಬೃಹಸ್ಪತಿಯ ಸಂಚಾರ | ಬೃಹಸ್ಪತಿ (ಗುರು) ಬಾರ್ಹಸ್ಪತ್ಯ | ಅನಿರುದ್ಧ |
| ೨. | ಇಡಾವತ್ಸರ | ಅಶ್ವಿನ್ಯಾದಿ ೧೨ ನಕ್ಷತ್ರಗಳ ಸೂರ್ಯನ ದ್ವಾದಶಾವರ್ತಿ ಸಂಚಾರ | ನಕ್ಷತ್ರಗಳು "ಭ" | ಪ್ರದ್ಯುಮ್ನ |

| | | | | |
|---|---|---|---|---|
| ೩. | ವತ್ಸರ | ಮುನ್ನೂರ ಅರವತ್ತು ದಿನಗಳು ಸಂಖ್ಯಾಕವಾದ ವರ್ಷದ ಕಾಲ "ಸೌರ" ಮಾನದಲ್ಲಿ ಸೂರ್ಯನ ಸಂಚಾರ | ದಿವಸಗಳು | ಸಂಕರ್ಷಣ |
| ೪. | ಅನುವತ್ಸರ | ಪ್ರತಿತಿಂಗಳೂ ಪ್ರತಿಪದದಿಂದ ಅಮಾವಾಸ್ಯೆಯವರೆಗೆ ಇರುವ ೩೦ ತಿಥಿಗಳಲ್ಲಿಹನ್ನೆರಡಾವರ್ತಿ ಸೂರ್ಯನ ಸಂಚಾರ | ತಿಥಿಗಳು | ವಾಸುದೇವ |
| ೫. | ಸಂವತ್ಸರ | ಮೇಷಾದಿ ದ್ವಾದಶ ರಾಶಿಗಳಲ್ಲಿ ಸೂರ್ಯನ ಸಂಚಾರ | ದ್ವಾದಶ ರಾಶಿಗಳು | ನಾರಾಯಣ |

॥ಇಂತು, "ಸರ್ವವ್ಯಾಖ್ಯಾನಸಾರಸಂಗ್ರಹ" ವೆಂಬ ಮಾಲಿಕೆಯಲ್ಲಿ ಪ್ರಸಕ್ತ ಸಂಧಿಗತ ಈ ೪೦ ನೆಯ ಪದ್ಯದಿಂದ "ವಿಭೂತಿಸಂಧಿ"ಯ ವ್ಯಾಖ್ಯಾನವು ಪರಿಸಮಾಪ್ತಿಯಾಯಿತು ॥

॥ ಶ್ರೀ ಲಕ್ಷ್ಮೀನರಸಿಂಹಾರ್ಪಣಮಸ್ತು ॥

ಪ್ರಚಾರಮಾಲೆ

## ... ವ ಪುಸ್ತಕಗಳು

... ಶ್ರೀ ಕನಕದಾಸರು(ದಾಸವರ್ಯ...
... ವಾದ ಕೀರ್ತನೆಗಳ ಸಂಗ್ರಹ)
(ಕೆಲವು ... ಉಳಿದಿವೆ)..........ಬೆಲೆ ರೂ. ೭...

... ವಾದೇಂದ್ರತೀರ್ಥರು (ಶ್ರೀ ಗುರು...
...ದ ... ಕೀರ್ತನೆಗಳ ಅಪೂರ್ವ ಸಂಗ್ರಹ)
... ಉಳಿದಿವೆ)........... ಬೆಲೆ ...

... ಗ್ರಂಥರತ್ನಗಳ ಆದ...
...........ಬೆಲೆ ರೂ. ...

... ಸಂಗ್ರಹ" ಮಾಲಿಕೆಯಲ್ಲಿ

(೧) ಶ್ರೀಮದ್ಧರಿ... ಸಂಪುಟ (೧). ಮಂಗಳಾ...
(ದ್ವಿತೀಯ ಮುದ್ರಣ) ........ ಬೆಲೆ ರೂ. ೧೦-೦೦

(೨) ಶ್ರೀಮದ್ಧರಿಕಥಾಮೃತಸಾರ-ಸಂಪುಟ (೨)
(ಕೇವಲ ಕೆಲವು ಪ್ರತಿಗಳು ಮಾತ್ರ ಉಳಿದಿವೆ)........ ಬೆಲೆ ...

(೩) ಶ್ರೀಮದ್ಧರಿಕಥಾಮೃತಸಾರ-ಸಂಪುಟ (೩)
............ಬೆಲೆ ರೂ...

(೪) ಶ್ರೀಮದ್ಧರಿಕಥಾಮೃತಸಾರ-ಸಂಪುಟ (೪) ಭೋಜನರಸ...
........ಬೆಲೆ ರೂ...

(೫) ಶ್ರೀಮದ್ಧರಿಕಥಾಮೃತಸಾರ-ಸಂಪುಟ (೫)
(... ಯಾಗಿರುವ ಸಂಪುಟ) ........ ಬೆಲೆ ...

ಸೂಚನೆ: ...

ಶ್ರೀಮದ್ಧರಿಕಥಾಮೃತಸಾರದ ಮೇಲಿನ ಐದು ಸಂಪುಟ...
... ೦೦ ರೂ. ಗಳಿಗೆ ಕೊಡಲಾಗುವುದು. (...

